ಕುವೆಂಪು ಮತ್ತು ಥಾಮಸ್ ಹಾರ್ಡಿಯವರ ಆಯ್ದ ಕಾದಂಬರಿಗಳಲ್ಲಿ ದೇಸಿ ಹಾಗೂ ಜಾಗತಿಕತೆ- ತೌಲನಿಕ ಅಧ್ಯಯನ

(ಹಂಪಿ ವಿಶ್ವವಿದ್ಯಾಲಯಕ್ಕೆ ಪಿಹೆಚ್.ಡಿ. ಪದವಿಗಾಗಿ
ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಎಂ. ಸ್ವಾಮಿ

ಮಾರ್ಗದರ್ಶಕರು

ಡಾ॥ ಡಿ.ಜಿ. ರಮೇಶ್

ಅಧ್ಯಯನಾಂಗ
ಭಾಷಾನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಕುವೆಂಪು ಅಧ್ಯಯನ ಕೇಂದ್ರ, ಕುಪ್ಪಳಿ.
ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

2012

ಕುವೆಂಪು ಮತ್ತು ಥಾಮಸ್ ಹಾರ್ಡಿಯವರ ಆಯ್ದ ಕಾದಂಬರಿಗಳಲ್ಲಿ ದೇಸಿ ಹಾಗೂ ಜಾಗತಿಕತೆ- ತೌಲನಿಕ ಅಧ್ಯಯನ

(ಹಂಪಿ ವಿಶ್ವವಿದ್ಯಾಲಯಕ್ಕೆ ಪಿಹೆಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

<u>ಸಂಶೋಧಕರು</u>

ಎಂ. ಸ್ವಾಮಿ

<u>ಮಾರ್ಗದರ್ಶಕರು</u>

ಡಾ॥ ಡಿ.ಜಿ. ರಮೇಶ್

ಅಧ್ಯಯನಾಂಗ

ಭಾಷಾನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕುವೆಂಪು ಅಧ್ಯಯನ ಕೇಂದ್ರ, ಕುಪ್ಪಳಿ.

ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

2012

ಪ್ರಮಾಣ ಪತ್ರ

ಕುವೆಂಪು ಮತ್ತು ಥಾಮಸ್ ಹಾರ್ಡಿಯವರ ಆಯ್ದ ಕಾದಂಬರಿಗಳಲ್ಲಿ ದೇಸಿ ಹಾಗೂ ಜಾಗತಿಕತೆ–ತೌಲನಿಕ ಅಧ್ಯಯನ ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ನಾನು ಪಿ.ಹೆಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಒಪ್ಪಿಸಲು ಡಾ॥ ಡಿ.ಜಿ. ರಮೇಶ್, ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಪ್ರಸ್ತುತ ಮಹಾಪ್ರಬಂಧ ಅಥವಾ ಅದರ ಯಾವುದೇ ಭಾಗವನ್ನು ಹಿಂದೆ ಯಾವುದೇ ಪದವಿಗಾಗಲಿ ಅಥವಾ ಇತರೆ ಉದ್ದೇಶಗಳಿಗಾಗಲಿ ಬಳಸಿಕೊಂಡಿಲ್ಲ ಎಂದು ಈ ಮೂಲಕ ಘೋಷಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ: 2012

ಸ್ವಾಮಿ ಎಂ.
ಪಿಹೆಚ್.ಡಿ ವಿದ್ಯಾರ್ಥಿ
ಶ್ರೀ ಜೆ.ಸಿ.ಬಿ.ಎಂ.ಕಾಲೇಜು, ಶೃಂಗೇರಿ.

ದೃಢೀಕರಣ ಪತ್ರ

ಸ್ವಾಮಿ ಎಂ. ಇವರು ಕುವೆಂಪು ಮತ್ತು ಥಾಮಸ್ ಹಾರ್ಡಿಯವರ ಆಯ್ದ ಕಾದಂಬರಿಗಳಲ್ಲಿ ದೇಸಿ ಹಾಗೂ ಜಾಗತಿಕತೆ–ತೌಲನಿಕ ಅಧ್ಯಯನ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧ ಪಡಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯ ಹಂಪಿ, ಭಾಷಾ ವಿಭಾಗಕ್ಕೆ ಪಿಹೆಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಈ ಮಹಾಪ್ರಬಂಧವನ್ನು ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ: 01/8/2012

ಡಾ|| ಡಿ.ಜಿ. ರಮೇಶ್, 01/8/12
ಮುಖ್ಯಸ್ಥರು, ಕನ್ನಡ ವಿಭಾಗ,
ಎ.ಟಿ.ಎನ್.ಸಿ. ಕಾಲೇಜು,
ಶಿವಮೊಗ್ಗ.

ಡಾ|| ಡಿ.ಜಿ. ರಮೇಶ್
ಮುಖ್ಯಸ್ಥರು. ಕನ್ನಡ ವಿಭಾಗ
ಎ.ಟಿ.ಎನ್.ಸಿ. ಕಾಲೇಜು
ಶಿವಮೊಗ್ಗ.

ಕುವೆಂಪು ಮತ್ತು ಥಾಮಸ್ ಹಾರ್ಡಿಯವರ ಆಯ್ದ ಕಾದಂಬರಿಗಳಲ್ಲಿ ದೇಸಿ ಹಾಗೂ ಜಾಗತಿಕತೆ – ತೌಲನಿಕ ಅಧ್ಯಯನ

ಪರಿವಿಡಿ

ಅಧ್ಯಾಯ – 3

ಕುವೆಂಪು ಮತ್ತು ಹಾರ್ಡಿಯವರ ಕಾದಂಬರಿಗಳಲ್ಲಿ ಚಿತ್ರಿತವಾಗಿರುವ ಭೌಗೋಳಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸರ

ಅಧ್ಯಾಯ – 4

ದೇಸಿ ಭಾಷೆ

ಅಧ್ಯಾಯ – 5

ಧಾರ್ಮಿಕ ಆಚರಣೆ, ರೂಢಿ–ಸಂಪ್ರದಾಯ ಮತ್ತು ನಂಬಿಕೆಗಳು

ಅಧ್ಯಾಯ – 6

ಅನುಬಂಧ

ಸಂಕೇತಾಕ್ಷರ ಮತ್ತು ಸಂಕ್ಷಿಪ್ತ ಪದಗಳ ವಿವರ

ಕಾ.ಹೆ.	ಕಾನೂರು ಹೆಗ್ಗಡತಿ
ಮ. ಮ.	ಮಲೆಗಳಲ್ಲಿ ಮದುಮಗಳು
ನೆ. ದೊ.	ನೆನಪಿನ ದೋಣಿಯಲ್ಲಿ
ಟೆಸ್ ಕಾದಂಬರಿ	ಟೆಸ್ ಆಫ್ ದಿ ಡಿ ಅರ್ಬರ್‌ವಿಲ್ಲೆ
ಸಂ.	ಸಂಪಾದಕರು
ಪು.	ಪುಟ
ಪ್ರ	ಪ್ರಕಾಶನ
ಕ್ಲಿಮ್	ಕ್ಲಿಮ್ ಯೋಬೈಟ್
ಟೆಸ್	ಟೆಸ್ ಆಫ್ ದಿ ಡಿ' ಅರ್ಬರ್‌ವಿಲ್ಲೆ ಕಾದಂಬರಿಯ ಪಾತ್ರದಾರಿ

ಕುವೆಂಪು ಮತ್ತು ಥಾಮಸ್ ಹಾರ್ಡಿಯವರ ಆಯ್ದ ಕಾದಂಬರಿಗಳಲ್ಲಿ ದೇಸಿ ಹಾಗೂ ಜಾಗತಿಕತೆ – ತೌಲನಿಕ ಅಧ್ಯಯನ

ಪೀಠಿಕೆ :

ಯಾವುದೇ ಕಾಲದ ಒಂದು ಶ್ರೇಷ್ಠಮಟ್ಟದ, ಸೃಜನಶೀಲ ಸಾಹಿತ್ಯ ಪ್ರಕಾರವು ಮೂಲದಲ್ಲಿ ದೇಸಿಯ ಪರಿಕಲ್ಪನೆಯಿಂದ ರೂಪುಗೊಂಡಿರುತ್ತದೆ. ದೇಸಿಯ ಸಮಾಜ, ಸಂಸ್ಕೃತಿ ಮತ್ತು ಪರಂಪರೆಗಳನ್ನು ಲೇಖಕ ತನ್ನ ಕೃತಿಗಳಲ್ಲಿ ಪ್ರತಿಸೃಷ್ಟಿಸುತ್ತಾನೆ. ಲೇಖಕ ತಾನು ಬೆಳೆದು ಬಂದ ಸಮಾಜ, ಸುತ್ತಮುತ್ತಲಿನ ಭೌಗೋಳಿಕ ಪರಿಸರ, ಆ ಪರಿಸರದಲ್ಲಿ ಜೀವತಳೆದ ಜನ ಸಮುದಾಯದ ತುಡಿತಗಳನ್ನು ತನ್ನದಾಗಿಸಿಕೊಂಡು ತನ್ನ ಕೃತಿಯಲ್ಲಿ ಅಭಿವ್ಯಕ್ತಿಪಡಿಸುತ್ತಾನೆ. ತನ್ನ ಕೃತಿಯಲ್ಲಿ ವ್ಯಕ್ತವಾಗುವ ಸಾಮಾಜಿಕ, ಭೌಗೋಳಿಕ ಪರಿಸರ ಆ ಪ್ರದೇಶದ ಜನರ ಪರಿಸರವೇ ಆಗಿರುತ್ತದೆ. ಇಂತಹ ಕೃತಿಯಲ್ಲಿ ಅಂದಿನ ಜನಾಂಗದ ಜೀವನ ವಿಧಾನ, ನಂಬಿಕೆ, ಆಚರಣೆ, ಮೌಲ್ಯ, ವಿಧಿಕ್ರಿಯೆ ಮುಂತಾದ ಜೀವನ ಸಂಬಂಧಿ ವಿವರಗಳು ಎಷ್ಟರಮಟ್ಟಿಗೆ ಆ ಕೃತಿಯಲ್ಲಿ ಸೇರಿಕೊಂಡು ಅದರ ಮೌಲಿಕತೆಯನ್ನು ಮತ್ತು ಪ್ರಸ್ತುತತೆಯನ್ನು ಒಳಗೊಂಡಿವೆ ಎಂಬ ಆಧಾರದ ಮೇಲೆ ದೇಸಿಯತೆಯ ಪ್ರತಿಸೃಷ್ಟಿಯಾಗುತ್ತದೆ. ಗಿರಡ್ಡಿ ಗೋವಿಂದರಾಜರ ಪ್ರಕಾರ ದೇಸೀವಾದವೆಂದರೆ; ಲೇಖಕ ತನ್ನ ಸಂಸ್ಕೃತಿ ಪರಂಪರೆಗಳನ್ನು ಆಳವಾಗಿ ಅಭ್ಯಾಸ ಮಾಡಿ. ಅವುಗಳ ಗುಣ, ದೋಷಗಳನ್ನು ಗುರುತಿಸಿ, ಅಲ್ಲಿಯ ಉಪಯುಕ್ತವಾದ ಅಂಶಗಳೊಂದಿಗೆ ಅಗತ್ಯವಾದ ಹೊರಗಿನ ಹೊಸ ಅಂಶಗಳನ್ನು ಒಳಗೊಳ್ಳುವುದು; ನಮ್ಮ ಪರಂಪರೆಯಲ್ಲಿನ ಜೀವಂತವೂ ಅರ್ಥಪೂರ್ಣವೂ ಅದ ನೆಲೆಗಳನ್ನು ಉಳಿಸಿಕೊಂಡು, ಅವುಗಳನ್ನು ಇಂದಿನ ಅಗತ್ಯಗಳಿಗೆ ತಕ್ಕಂತೆ ಹೊಸ ರೀತಿಯಲ್ಲಿ ಹೊಸ ಅರ್ಥಕ್ಕಾಗಿ ಬಳಸಿ, ಬೆಳೆಸಿ ಭಾರತೀಯವಾಗಿ ವಿಶಿಷ್ಟವಾದ ಸಾಹಿತ್ಯ ಪರಂಪರೆಯೊಂದನ್ನು ನಿರ್ಮಿಸುವುದು.

ಕಾದಂಬರಿಯೆಂಬ ಸಾಹಿತ್ಯ ಪ್ರಕಾರವು ದೇಸಿಯತೆಯ ಪ್ರತಿಸೃಷ್ಟಿಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಕಥೆಯ ನಿರೂಪಣೆ, ಪಾತ್ರಗಳ ಮತ್ತು ಸಾಮಾಜಿಕ ಸನ್ನಿವೇಶಗಳನ್ನು ಕಾದಂಬರಿಯಲ್ಲಿ ಲೇಖಕ ವಿಶಿಷ್ಟವಾಗಿ ಚಿತ್ರಿಸುತ್ತಾನೆ. ಅದರಲ್ಲೂ ದೇಸಿಯ ಬದುಕನ್ನು ನಿರೂಪಿಸುವಲ್ಲಿ ಲೇಖಕನ ಸಾಮಾಜಿಕ ಕಳಕಳಿ, ಭಾಷೆ, ಅಲ್ಲಿಯ ಪರಿಸರ, ವಸ್ತು, ತಂತ್ರ ಮುಂತಾದ ಅಂಶಗಳು ಹೆಚ್ಚಿನ ಮಹತ್ವ ಪಡೆದುಕೊಳ್ಳುತ್ತವೆ. ಇಂತಹ ಸಾಮಾಜಿಕ ಕಳಕಳಿಯನ್ನು, ಜನಪದರ ತುಡಿತಗಳನ್ನು ಮತ್ತು ಆ ನೆಲದ ಸಂಸ್ಕೃತಿಯ ಸಂವೇದನೆಗಳನ್ನು ವಿಶ್ಲೇಷಣಾತ್ಮಕವಾಗಿ ಅಭಿವ್ಯಕ್ತಿಗೊಳಿಸುವುದರಲ್ಲಿ ನವೋದಯದ ಕಾದಂಬರಿಕಾರರು ಮಹತ್ವದ ಪಾತ್ರವಹಿಸಿದ್ದಾರೆ. ಈ

ನಿಟ್ಟಿನಲ್ಲಿ ಕುವೆಂಪುರವರ ಎರಡೂ ಕಾದಂಬರಿಗಳೂ ಮಲೆನಾಡಿನ ದೇಸಿಯ ಜೀವಂತ ಬದುಕನ್ನು, ಸಾಂಸ್ಕೃತಿಕ ವಿವರಗಳನ್ನು ಮತ್ತು ಸಂವೇದನೆಗಳ ಸ್ಥಿತ್ಯಂತರಗಳನ್ನು ಪ್ರತಿಸೃಷ್ಟಿಸುವಲ್ಲಿ ತುಂಬ ಮಹತ್ವ ಪಡೆದಿವೆ. ಹಾಗೆಯೇ ಥಾಮಸ್ ಹಾರ್ಡಿ ಇಂಗ್ಲೆಂಡಿನ ಹತ್ತೊಂಬತ್ತನೆಯ ಶತಮಾನದ ದಕ್ಷಿಣದ ಒಳನಾಡಿನ ಹಳ್ಳಿಗಳಲ್ಲಿ ಇನ್ನು ಜೀವಂತವಿದ್ದ ದೇಸಿಯ ಭಾಷೆ ಮತ್ತು ಸಾಂಸ್ಕೃತಿಕ ವಿವರಗಳನ್ನು ಅತ್ಯಂತ ಸ್ವಾಭಾವಿಕವಾಗಿ ನಿರೂಪಿಸಿದ್ದಾರೆ. ಈ ಇಬ್ಬರೂ ಕಾದಂಬರಿಕಾರರು ಜಾಗತೀಕರಣದ ಸುಳಿಗೆ ಸಿಲುಕಿ ಕಣ್ಮರೆಯಾಗುತ್ತಿರುವ ನೆಲಪರ ಸಂಸ್ಕೃತಿಯ ದೇಸಿಯ ಬದುಕನ್ನು, ಸಾಮಾಜಿಕ ಪ್ರಜ್ಞೆಯನ್ನು ಮತ್ತು ಆ ಬದುಕಿನ ಅಂತಃಸತ್ವವನ್ನು ತಮ್ಮ ಕಾದಂಬರಿಗಳಲ್ಲಿ ಅಭಿವ್ಯಕ್ತಗೊಳಿಸಿರುವುದು ಪ್ರಸ್ತುತ ಪರಿಸ್ಥಿತಿಗೆ ಅವಶ್ಯಕವೆನಿಸುತ್ತದೆ.

ಕುವೆಂಪುರವರು ತಮ್ಮ ಕಾದಂಬರಿಗಳಲ್ಲಿ ಚಿತ್ರಿಸಿರುವ ಮಲೆನಾಡಿನ ಪ್ರಾದೇಶಿಕ ಬದುಕು ಕೇವಲ ಅಲ್ಲಿಗೆ ಮಾತ್ರವೇ ಸೀಮಿತವಾಗುವುದಿಲ್ಲ, ಅಲ್ಲಿಯ ಜನರ ಜೀವನವಿಧಾನವನ್ನು ಬೇರೆ ಬೇರೆ ಭೌಗೋಳಿಕ ಪ್ರದೇಶಗಳಲ್ಲೂ ಕಾಣುವಂತಹುದು. ಪ್ರಕೃತಿದತ್ತವಾದ ಮಲೆನಾಡಿನ ಪರಿಸರ ಅವರ ಕಾದಂಬರಿಗಳಲ್ಲಿ ಅತ್ಯಂತ ವಾಸ್ತವದ ನೆಲೆಯಲ್ಲಿ ಅನನ್ಯವಾಗಿ ಅಭಿವ್ಯಕ್ತಗೊಂಡಿರುವುದನ್ನು ಗಮನಿಸಬಹುದು. ಈ ಕಾದಂಬರಿಗಳ ಕಥಾ ಹಂದರದಲ್ಲಿ ಮೂಡಿಬಂದಿರುವ ವಿವಿಧ ಜಾತಿ, ವರ್ಗ, ವರ್ಣಗಳ ಪಾತ್ರಗಳು ದೇಸಿ ಸಂಸ್ಕೃತಿಯ ವಕ್ತಾರರಾಗಿದ್ದಾರೆ. ಅನಕ್ಷರಸ್ಥ, ನಿಷ್ಕಲ್ಮಶ, ಮುಗ್ಧ, ಸಂಪ್ರದಾಯನಿಷ್ಠ ಹಳ್ಳಿಗರು ದೇಸಿ ಭಾಷೆ, ಸಂಸ್ಕೃತಿಯ ಪೋಷಕರೂ ಹೌದು. ತಮ್ಮ ಆಡುನುಡಿಗಳ ಮತ್ತು ಸಂಭಾಷಣೆಯ ಮೂಲಕ ದೇಸಿ ಭಾಷೆ ಮತ್ತು ಸಂಸ್ಕೃತಿಗೆ ಕನ್ನಡಿ ಹಿಡಿದಿದ್ದಾರೆ. ಕೈಗಾರಿಕೀಕರಣದಿಂದ ಉಂಟಾದ ಆಧುನಿಕ ಸಂಪರ್ಕ ಸಾಧನಗಳ ಪ್ರವೇಶ, ನಗರೀಕರಣ, ರಾಷ್ಟ್ರೀಯ ಶಿಕ್ಷಣದ ರೂಪುರೇಷೆಗಳು ಇಂಗ್ಲೆಂಡಿನ ಗ್ರಾಮೀಣ ಪ್ರದೇಶದಲ್ಲಿ ಇನ್ನೂ ಜೀವಂತವಿದ್ದ ದೇಸಿ ಸಂಸ್ಕೃತಿ, ಭಾಷೆ, ಸಂಪ್ರದಾಯ ಮುಂತಾದ ಜೀವನ ಸಂಬಂಧಿ ವಿಷಯಗಳನ್ನು ಪಲ್ಲಟಗೊಳಿಸ ತೊಡಗಿದ್ದವು. ಹೀಗೆ ಕಳೆದು ಹೋಗುತ್ತಿರುವ ದೇಸಿ ಸಂಸ್ಕೃತಿಯನ್ನು ಸಾಹಿತ್ಯದ ಮೂಲಕ ಹಾರ್ಡಿಯವರು ಪುನರ್‌ಸೃಷ್ಟಿಗೊಳಿಸಿದ್ದಾರೆ. ಕುವೆಂಪು ಕಾದಂಬರಿಗಳಲ್ಲಿ ವಸಾಹತುಶಾಹಿ ಅನುಭವ ಮತ್ತು ದೇಸಿ ವಿಚಾರಗಳು ಮುಖಾಮುಖಿಯಾಗುವುದನ್ನು, ಹಾರ್ಡಿಯವರ ಕಾದಂಬರಿಗಳಲ್ಲಿ ಆಧುನಿಕ ಪರಿಕರಗಳು ದೇಸಿ ಬದುಕಿನ ಮೇಲೆ ಮಾಡಿದ ದಾಳಿಯನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ವಸಾಹತುಶಾಹಿ ಅನುಭವ ಮತ್ತು ಆಧುನಿಕ ಪರಿಕರಗಳು, ಸಾರಿಗೆ-ಸಂಪರ್ಕ ಸಾಧನಗಳು ಜಾಗತೀಕರಣದ ಅಂಶಗಳೇ ಆಗಿವೆ. ಬಹುತ್ವ ಗುಣಗಳನ್ನು ಹೊಂದಿದ್ದ ಸ್ಥಳೀಯ ಸಂಸ್ಕೃತಿ ಅಥವಾ ದೇಸಿ ಸಂಸ್ಕೃತಿ ಜಾಗತೀಕರಣದ ಪ್ರಭಾವಕ್ಕೆ ಸಿಲುಕಿ ಮಣ್ಣಿನ ಸಂಪರ್ಕವನ್ನು ಕಳೆದುಕೊಳ್ಳುವುದನ್ನು ಕುವೆಂಪು ಮತ್ತು ಹಾರ್ಡಿಯವರ

ಕಾದಂಬರಿಗಳ ಮೂಲಕ ಅರಿಯಬಹುದಾಗಿದೆ. ಆಳವಾಗಿ ಬೇರೂರಿದ್ದ ದೇಸಿ ಪರಂಪರೆಯ ಬೇರುಗಳು ಕಾಲಾನಂತರದಲ್ಲಿ ಜಾಗತೀಕರಣದ ಪ್ರಭಾವಕ್ಕೆ ಸಿಲುಕಿ ಮಣ್ಣಿನ ಸಂಪರ್ಕ ಕಳೆದುಕೊಳ್ಳುವುದನ್ನು ಮತ್ತು ಅಧುನಿಕೋತ್ತರ ಸಂಬಂಧಗಳಲ್ಲಿ ಅವುಗಳ ಹುಡುಕಾಟವನ್ನು ಕುವೆಂಪು ಮತ್ತು ಹಾರ್ಡಿಯವರ ಕಾದಂಬರಿಗಳಲ್ಲಿ ಕಾಣಬಹುದಾಗಿದೆ.

ಅಧ್ಯಾಯ – 1

1.1 ಅಧ್ಯಯನದ ಸ್ವರೂಪ, ಉದ್ದೇಶ ಮತ್ತು ವ್ಯಾಪ್ತಿ

1.2 ದೇಸಿ ಅಥವಾ ದೇಸಿಯತೆ ಪದದ ಅರ್ಥ ಮತ್ತು ವ್ಯಾಖ್ಯಾನಗಳು

1.3 ದೇಸಿ ಸಂಸ್ಕೃತಿ

1.4 ಜಾಗತೀಕರಣ – ವ್ಯಾಖ್ಯೆ ಮತ್ತು ಸ್ವರೂಪ

1.5 ಶಿಕ್ಷಣ ಮತ್ತು ಜಾಗತೀಕರಣ

1.6 ಭಾಷೆ ಮತ್ತು ಜಾಗತೀಕರಣ

1.7 ಮತಾಂತರ ಮತ್ತು ಜಾಗತೀಕರಣ

1.8 ಕೃಷಿ ಮತ್ತು ಜಾಗತೀಕರಣ

1.9 ಜಾಗತೀಕರಣ ಮತ್ತು ವಲಸೆ

1.10 ಇಂಗ್ಲಿಷ್ ಮತ್ತು ಕನ್ನಡ ಕಾದಂಬರಿಗಳಲ್ಲಿ ದೇಸಿಯತೆ:

1.11 ಕುವೆಂಪು (1904–1994)

1.12 ಥಾಮಸ್ ಹಾರ್ಡಿ (1840–1928)

ಅಧ್ಯಾಯ –1

1.1 ಅಧ್ಯಯನದ ಸ್ವರೂಪ, ಉದ್ದೇಶ ಮತ್ತು ವ್ಯಾಪ್ತಿ

ಕಾದಂಬರಿ ಎಂಬ ಅಧುನಿಕ ಸಾಹಿತ್ಯ ಪ್ರಕಾರವು ಸಾಹಿತ್ಯಲೋಕದಲ್ಲಿ ಒಂದು ಮಹತ್ತರವಾದ ಕೊಡುಗೆಯಾಗಿ ಅತ್ಯಂತ ಜನಪ್ರಿಯವಾಗಿ ಬೆಳೆದು ಬಂದಿದೆ. ಬದುಕಿನ ವಾಸ್ತವತೆಯನ್ನು, ಸಾಮಾಜಿಕ ಕಳಕಳಿಯನ್ನು ಮತ್ತು ಸಾಮಾಜಿಕ ಆವರಣವನ್ನು ಹೊಂದಿರುವ ಕಾದಂಬರಿಯು ಇತರೆ ಸಾಹಿತ್ಯ ಪ್ರಕಾರಗಳಿಗಿಂತ ಬಹುಬೇಗನೆ ಜನಸಾಮಾನ್ಯರಿಗೆ ಹತ್ತಿರವಾಗಿದೆ. ಹದಿನೆಂಟನೆಯ ಶತಮಾನದಲ್ಲಿ 'ಕಾದಂಬರಿ' ಜನಪ್ರಿಯತೆಯನ್ನು ಗಳಿಸಿದೆಯಾದರೂ ಅದರ ಉಗಮವಾದದ್ದು ಹದಿನಾರನೆಯ ಶತಮಾನದ ಆದಿಯಲ್ಲಿಯೆ. ಛಾಸರ್‌ನಂತ ಶ್ರೇಷ್ಠ ಲೇಖಕರ ಕೃತಿಗಳಲ್ಲಿ ಬರುವ ಪಾತ್ರಗಳ ವಾಸ್ತವ ಚಿತ್ರಣ ಕಾದಂಬರಿಯ ಮೂಲವನ್ನು ಶೋಧಿಸುತ್ತದೆ. ಪ್ರಾರಂಭದಲ್ಲಿ ವೀರಕೌಶಲ್ಯ, ಧರ್ಮೋಪದೇಶ, ನೈತಿಕ ನೆಲೆಗಟ್ಟಿನಲ್ಲಿ ಉಪದೇಶಾತ್ಮಕವಾಗಿ ಬೆಳೆದು ಹದಿನೆಂಟನೆಯ ಶತಮಾನದ ಹೊತ್ತಿಗೆ ಸಾಮಾಜಿಕ ಬದುಕು, ಮನುಷ್ಯ–ಪ್ರಕೃತಿ ಸಂಬಂಧಗಳು, ವಾಸ್ತವ ಬದುಕಿನ ಚಿತ್ರಣ, ಪಾತ್ರಗಳ ವಿಶ್ಲೇಷಣಾ ನಿರೂಪಣೆ ಮುಂತಾದ ಅಂಶಗಳು ಕಾದಂಬರಿಯ ಜನಪ್ರಿಯತೆಗೆ ಕಾರಣವಾಗುತ್ತವೆ. ಕಾದಂಬರಿಯ ಉಗಮ ಓದುಗರ ಹೊಸಪಡೆಯನ್ನು ಸೃಷ್ಟಿಮಾಡುತ್ತದೆ. ಸಾರ್ವತ್ರಿಕ ಶಿಕ್ಷಣದ ಪ್ರಭಾವ ವಿದ್ಯಾವಂತರ ಸಂಖ್ಯೆ ಹೆಚ್ಚಳಕ್ಕೆ ಕಾರಣವಾದರೆ, ಕೈಗಾರಿಕೀಕರಣ, ಸಾರಿಗೆ–ಸಂಪರ್ಕ ಸೌಕರ್ಯಗಳ ಹೆಚ್ಚಳ ಜನರಿಗೆ ಹೆಚ್ಚಿನ ವಿರಾಮವನ್ನು ಸೃಷ್ಟಿಮಾಡುತ್ತದೆ. ಇವುಗಳ ಪ್ರಯೋಜನ ಸಮಾಜದ ಪ್ರತಿಯೊಬ್ಬರಿಗೂ ಸಿಕ್ಕಿದಂತೆ ಓದುವ ಹವ್ಯಾಸ ಜನಸಾಮಾನ್ಯರಲ್ಲಿ ಹೆಚ್ಚಾಗುತ್ತದೆ. ಈ ಜನಸಾಮಾನ್ಯರೇ ಮಧ್ಯಮ ವರ್ಗದ ಭಾಗವಾಗುತ್ತಾರೆ. ವಿದ್ಯೆ, ವಿರಾಮ, ಆಸಕ್ತಿ ಹಾಗೂ ಶ್ರೇಷ್ಠ ಮಟ್ಟದ ಇತರೆ ಸಾಹಿತ್ಯ ಪ್ರಕಾರಗಳ ಮೇಲೆ ಒಲವಿಲ್ಲದ ಕಾರಣ ಈ 'ಮಧ್ಯಮ ವರ್ಗದ' ಆಸಕ್ತಿ–ಅಭಿರುಚಿಯೇನಿದ್ದರೂ ಕಾದಂಬರಿಯೇ ಆಗುತ್ತದೆ. ಸಾರ್ವಜನಿಕ ಶಿಕ್ಷಣ ಮಹಿಳಾ ವಿದ್ಯಾವಂತರ ಸೃಷ್ಟಿಗೂ ಕಾರಣವಾಗುತ್ತದೆ. ಸರಳ ನಿರೂಪಣೆ, ವಾಸ್ತವ ಬದುಕಿನ ಪ್ರತಿಸೃಷ್ಟಿ, ಶೈಲಿ, ಸಾಮಾಜಿಕ ಆವರಣ, ಜನಸಾಮಾನ್ಯರ ಆಡುನುಡಿಗಳು ಕಾದಂಬರಿ ಒಂದು ಪ್ರಬಲ ಸಾಹಿತ್ಯ ಪ್ರಕಾರವಾಗಿ ಬೆಳೆಯಲು ಕಾರಣವಾಗುತ್ತವೆ. ಹೀಗೆ ಕಾದಂಬರಿಯ ಬೆಳವಣಿಗೆಗೆ ಇಂಗ್ಲೀಷ್ ಸಾಹಿತ್ಯ ಲೋಕದಲ್ಲಿ ಅನೇಕ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ಪ್ರಜಾಪ್ರಭುತ್ವದ ಮೂಲಾಂಶಗಳು ಮತ್ತು ಅನೇಕ ಸ್ಥಿತ್ಯಂತರಗಳು ಕಾರಣವಾಗಿ ಹತ್ತೊಂಬತ್ತನೆಯ ಶತಮಾನದ ಹೊತ್ತಿಗೆ ಕಾದಂಬರಿ ಒಂದು ಸಮೃದ್ಧಿಯಾದ ಸಾಹಿತ್ಯ ಕ್ಷೇತ್ರವಾಗಿ ರೂಪುಗೊಳ್ಳುತ್ತದೆ.

ಇಂಗ್ಲೆಂಡಿನಲ್ಲಿ ವಿಕ್ಟೋರಿಯನ್‌ಯುಗ ಕಾದಂಬರಿಯ ಯುಗ. ಇಂಗ್ಲೆಂಡಿನ ಇತಿಹಾಸದಲ್ಲಿಯೇ ಅನೇಕ ಸುಧಾರಣೆಗಳಿಗೆ ಮತ್ತು ಬದಲಾವಣೆಗೆ ಕಾರಣವಾದ ವಿಕ್ಟೋರಿಯನ್‌ಯುಗ 'ಕಾದಂಬರಿ'ಯ ಬೆಳವಣಿಗೆಯಲ್ಲಿ ಮಹತ್ತರವಾದ ಪಾತ್ರವಹಿಸುತ್ತದೆ. ಕೈಗಾರಿಕೀಕರಣದ ಉತ್ಕರ್ಷ, ವ್ಯಾಪಾರ, ವಾಣಿಜ್ಯ ವ್ಯವಹಾರಗಳ ಬೆಳವಣಿಗೆ, ಶೈಕ್ಷಣಿಕ ವಾತಾವರಣ, ಮೇಲ್ಮಧ್ಯಮ ವರ್ಗದ ಸೃಷ್ಟಿ, ಭೌತಿಕ ಸಂಪತ್ತಿನ ಹೆಚ್ಚಳ, ವೈಜ್ಞಾನಿಕ, ಆವಿಷ್ಕಾರ ಮುಂತಾದ ಕಾರಣಗಳು, ಸಾಮಾಜಿಕ ಅಸಹನೆ, ಮಾನವೀಯ, ನೈತಿಕ ಮತ್ತು ಧಾರ್ಮಿಕ ಮೌಲ್ಯಗಳ ಕುಸಿತಕ್ಕೆ ಕಾರಣವಾಗುತ್ತವೆ. ಆಧುನಿಕ ಸಂಪರ್ಕ ಸಾಧನಗಳು ಬಂದು ಬದುಕಿನ ವೇಗವನ್ನು ಹೆಚ್ಚಿಸತೊಡಗುತ್ತವೆ. ತಂತ್ರಜ್ಞಾನ ಮತ್ತು ವೈಜ್ಞಾನಿಕ ಆವಿಷ್ಕಾರಗಳು ಸಾಂಪ್ರದಾಯಿಕ ಮತ್ತು ಕೃಷಿಯಾಧಾರಿತ ಬದುಕಿನ ಮೇಲೆ ಪ್ರಭಾವ ಭೀರಲಾರಂಭಿಸುತ್ತವೆ. ಯಂತ್ರನಾಗರಿಕತೆ ಮತ್ತು ಆಧುನಿಕ ಪರಿಕರಗಳ ಆಗಮನ ಸಾಂಪ್ರದಾಯಿಕವಾಗಿ ಬೆಳೆದು ಬಂದಿದ್ದ ಕೃಷಿಯನ್ನಷ್ಟೇ ಅಲ್ಲದೇ ಕೃಷಿಕರ, ಕೃಷಿಕಾರ್ಮಿಕರ ಜೀವನಕ್ರಮವನ್ನೇ ಪಲ್ಲಟಗೊಳಿಸುತ್ತವೆ. ಇದರ ಜೊತೆಗೆ ಕೃಷಿಯಾಧಾರಿತ ಸಾಂಪ್ರದಾಯಿಕ ಕಸುಬುಗಳು ಕಣ್ಮರೆಯಾಗಲು ಆಧುನಿಕ ಪರಿಕರಗಳು ಕಾರಣವಾಗುತ್ತವೆ. ಯಂತ್ರಗಳ ಆಗಮನ ಕೃಷಿಕಾರ್ಮಿಕರನ್ನು ನಿರುದ್ಯೋಗಿಗಳನ್ನಾಗಿ ಮಾಡಿ ವಲಸೆಗೆ ಕಾರಣವಾಗುತ್ತವೆ. ಇದರ ಪರಿಣಾಮವಾಗಿ ಗ್ರಾಮೀಣ ಸಂಸ್ಕೃತಿ ಅಥವಾ ದೇಸಿ ಸಂಸ್ಕೃತಿಗೆ ಬಲವಾದ ಹೊಡೆತ ಬೀಳುತ್ತದೆ. ಗ್ರಾಮೀಣ ಜನಸಮುದಾಯ ತಾವು ಹುಟ್ಟಿ ಬೆಳೆದು ಬದುಕು ಕಟ್ಟಿಕೊಂಡಿದ್ದ ಮಣ್ಣಿನ ಸಂಬಂಧವನ್ನು ಮತ್ತು ಪ್ರಕೃತಿಯೊಂದಿಗಿನ ಅನ್ಯೋನ್ಯ ಸಂಬಂಧವನ್ನು ಕಡಿದುಕೊಂಡು ಅವುಗಳ ಕನವರಿಕೆಯಲ್ಲಿ ಬದುಕು ಸವೆಸುವ ಅನಿವಾರ್ಯತೆಯು ಉಂಟಾಗುತ್ತದೆ. ಈ ಹಿನ್ನಲೆಯಲ್ಲಿ ದೇಸಿಯ ಬದುಕಿನ ಪ್ರಾಮುಖ್ಯತೆಯನ್ನು ಅರಿಯಲು ಹಾರ್ಡಿಯವರ ಕಾದಂಬರಿಗಳು ಒಂದು ವೇದಿಕೆಯನ್ನು ಒದಗಿಸಿಕೊಡುತ್ತವೆ. ಜಾಗತೀಕರಣದಿಂದ ಮತ್ತು ಕೈಗಾರಿಕೀಕರಣದಿಂದ ಉಂಟಾದ ಭೌತಿಕ ಸಂಪತ್ತು ಇಂಗ್ಲೆಂಡಿನಲ್ಲಿ ನಗರೀಕರಣಕ್ಕೆ ಕಾರಣವಾಗಿ ಗ್ರಾಮೀಣ ಸಂಸ್ಕೃತಿಯು ಕಣ್ಮರೆಯಾಗುವುದನ್ನು ಹಾರ್ಡಿಯವರ ಕಾದಂಬರಿಗಳಲ್ಲಿ ಕಾಣಬಹುದು. ಥಾಮಸ್ ಹಾರ್ಡಿ ತಮ್ಮ ಕಾದಂಬರಿಗಳಲ್ಲಿ ನಶಿಸಿಹೋಗುತ್ತಿರುವ ದೇಸಿ ಭಾಷೆಯನ್ನು, ಜನಸಾಮಾನ್ಯರ ಆಡುನುಡಿಗಳನ್ನು ಹಳ್ಳಿಯ ಮುಗ್ಧ, ನಿಷ್ಕಪಟ, ನಿಷ್ಕಲ್ಮಶ, ಮಣ್ಣಿನ ಮಕ್ಕಳ ರೂಢಿ–ಸಂಪ್ರದಾಯ ಆಚರಣೆ, ಆಚಾರ, ವಿಚಾರ, ಆಹಾರ, ಪಾನೀಯ, ಹಬ್ಬ, ಉತ್ಸವ ಮುಂತಾದ ಜೀವನಸಂಬಂಧಿ ವಿಷಯಗಳನ್ನು ಪ್ರತಿಸೃಷ್ಟಿಸುವುದರ ಮೂಲಕ ಅವುಗಳ ಪ್ರಾಮುಖ್ಯತೆಯನ್ನು ಅರಿಯಲು ಓದುಗರಿಗೆ ಒಂದು ಅವಕಾಶವನ್ನು ನೀಡಿದ್ದಾರೆ. ಇಂತಹ ಒಂದು ಅವಕಾಶದಿಂದ ಜಾಗತೀಕರಣದ ಈ ಸಂದರ್ಭದಲ್ಲಿ ದೇಸಿಯ ಸಂಸ್ಕೃತಿಯ ಬೇರುಗಳ ಸ್ವರೂಪವನ್ನು ಮತ್ತು

ಮೂಲವನ್ನು ಅನ್ವೇಷಿಸಲು ಹಾರ್ಡಿಯವರ ಕಾದಂಬರಿಗಳು ಆಕರವಾಗುವುದನ್ನು ಮನಗಾಣಬಹುದು. ಹಾರ್ಡಿಯವರೇ ಹೇಳುವಂತೆ: "ಹಳೆಯ ವಸ್ತುಗಳನ್ನು ಹಳೆಯ ಶೈಲಿಯಲ್ಲಿ ಬರೆಯುವುದು" ಎನ್ನುವಾಗ ಅವರ ಸಂಪ್ರದಾಯನಿಷ್ಠೆ, ದೇಸಿ ಬದುಕಿನ ಒಳಸ್ತರಗಳನ್ನು ಮತ್ತು ಜಾಗತೀಕರಣದಿಂದ ಉಂಟಾದ ಗ್ರಾಮೀಣ ಬದುಕಿನ ವಿಘಟನೆಯ ದುರಂತವನ್ನು ಅವರ ಕಾದಂಬರಿಗಳು ನಿರೂಪಿಸುವುದರಿಂದ ಪ್ರಸ್ತುತ ಸನ್ನಿವೇಶದಲ್ಲಿ ಅವರ ಕಾದಂಬರಿಗಳ ಅಧ್ಯಯನ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ.

ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ಕಾದಂಬರಿಯ ಉಗಮವಾಗುವುದು ವಸಾಹತೀಕರಣದ ಸಂದರ್ಭದಲ್ಲಿ ಎನ್ನಬಹುದು. ಭಾರತದಲ್ಲಿ ಬ್ರಿಟಿಷರ ವಸಾಹತು ಆಳ್ವಿಕೆ, ಕ್ರೈಸ್ತ ಮಿಷನರಿಗಳ ಆಗಮನ, ಆಧುನಿಕ ಇಂಗ್ಲೀಷ್ ಶಿಕ್ಷಣ ಜನಸಾಮಾನ್ಯರಲ್ಲಿ ಶಿಕ್ಷಣದ ಅರಿವಿಗೆ ಕಾರಣವಾಗಿ ವಿದ್ಯಾವಂತರ ಸಂಖ್ಯೆ ಹೆಚ್ಚಾಗುತ್ತದೆ. ಇದರ ಪರಿಣಾಮ ಓದುಗರ ಸಂಖ್ಯೆಯೂ ಸಹ ಹೆಚ್ಚಾಗುತ್ತದೆ. ಸರಳವಾದ ಕಥೆಯ ನಿರೂಪಣೆ, ವಸ್ತು, ಪಾತ್ರ, ಭಾಷೆ, ಘಟನೆ, ಸಾಮಾಜಿಕ ಆವರಣ ಮುಂತಾದ ಅಂಶಗಳು ಕಾದಂಬರಿಯೆಂಬ, ಒಂದು ನವೀನ ಸಾಹಿತ್ಯ ಪ್ರಕಾರ ಜನಪ್ರಿಯಗೊಳ್ಳಲು ಕಾರಣವಾಗುತ್ತವೆ. ಬ್ರಿಟಿಷ್ ಆಡಳಿತದಿಂದ ಬಂದ ಹೊಸ ಆಂಗ್ಲ ಶಿಕ್ಷಣ ಕ್ರಮ, ಸಾಮಾನ್ಯ ಓದುಗ ಪಡೆಯ ನಿರ್ಮಾಣಕ್ಕೆ ಕಾರಣವಾಯಿತು. ಕಾದಂಬರಿಯ ಗದ್ಯಕ್ಕೆ ಮತ್ತು ದೀರ್ಘ ಕಥಾನಕಗಳಿಗೆ ಸಾಮಾನ್ಯ ಓದುಗ ಹತ್ತಿರವಾಗುತ್ತಾನೆ. ಇದರ ಪರಿಣಾಮ ಕನ್ನಡ ಸಾಹಿತ್ಯದಲ್ಲಿ ಕಾದಂಬರಿ ಜನಪ್ರಿಯವಾಗತೊಡಗಿತು. ಇಂಗ್ಲೀಷ್ ಕಾದಂಬರಿಗಳ ಅನುವಾದದಿಂದ ಮೊದಲುಗೊಂಡು ಭಾರತದಲ್ಲಿ ಬ್ರಿಟಿಷ್‌ರ ವಸಾಹತು ಆಡಳಿತದಲ್ಲಿ ನೆಲೆಸಿದ್ದ ಇಂಗ್ಲೀಷ್ ಲೇಖಕರ ಕಾದಂಬರಿಗಳು, ನಂತರ ಭಾರತದ ಭಾಷೆಗಳಲ್ಲಿ ಕಾದಂಬರಿಗಳ ರಚನೆ ಪ್ರಾರಂಭವಾಗುತ್ತದೆ. ಈ ಅಂಶಗಳ ಹಿನ್ನಲೆಯಲ್ಲಿ ಕನ್ನಡ ಕಾದಂಬರಿಯ ಬೆಳವಣಿಗೆಯನ್ನು ಅರಿಯುವ ಪ್ರಯತ್ನ ಮೊದಲಾಗಿದೆ. ನಮ್ಮದೇ ನೆಲದ ಪರಂಪರೆಯನ್ನು ಮತ್ತು ಕಥಾನಕಗಳನ್ನು ನಮ್ಮದೇ ಭಾಷೆಯಲ್ಲಿ ನೀಡಬಹುದು ಎನ್ನುವ ಧೋರಣೆ ಬೆಳೆದು ಸ್ಥಳೀಯರ ಭಾಷೆ ಅಥವಾ ದೇಸಿ ಭಾಷೆಗೆ ಹೆಚ್ಚಿನ ಒತ್ತು ನೀಡಲಾಯಿತು. ಹೀಗೆ 'ಕಾದಂಬರಿ' ಕನ್ನಡ ಸಾಹಿತ್ಯ ಲೋಕದಲ್ಲಿ ಒಂದು ಹೊಸ ಪ್ರಕಾರವಾಗಿ ದೇಸಿ ಭಾಷೆಯನ್ನು, ದೇಸಿ ಸಂಸ್ಕೃತಿಯನ್ನು ಅಭಿವ್ಯಕ್ತಗೊಳಿಸುವಲ್ಲಿ ಸಫಲವಾಯಿತು.

ಈ ಹಿನ್ನಲೆಯಲ್ಲಿ ನವೋದಯ ಕಾಲವು ಲೇಖಕ ದೇಸಿಯ ಪ್ರೇರಣೆಗಳಿಗೆ ತಿರುಗಲು ಸೂಕ್ತವಾದ ವಾತಾವರಣವನ್ನು ಕಲ್ಪಿಸಿಕೊಡುತ್ತದೆ. ಹೊರಗಿನ ಪ್ರೇರಣೆಗಳಿಂದ ಪ್ರಭಾವಿತರಾಗಿ ಈ

ಕಾಲದ ಲೇಖಕರು ತಮ್ಮದೇ ನೆಲದ ಸಂಸ್ಕೃತಿ ಮತ್ತು ಪರಂಪರೆಯನ್ನು, ಜನಸಾಮಾನ್ಯರ ಭಾಷೆಯಲ್ಲಿಯೇ ಅಭಿವ್ಯಕ್ತಗೊಳಿಸುವುದರ ಮೂಲಕ ಹೊಸಗದ್ಯ ಸಾಹಿತ್ಯ ಪ್ರಕಾರವಾದ ಕಾದಂಬರಿಯ ಬೆಳವಣಿಗೆಗೆ ಕಾರಣರಾಗುತ್ತಾರೆ. ಗ್ರಾಮೀಣ ಸಾಮಾಜಿಕ ಬದುಕು, ಸಾಮಾಜಿಕ ಕಳಕಳಿ, ಆ ಪ್ರದೇಶದ ಜನ-ಸಮುದಾಯ ತಾವು ಹುಟ್ಟಿ ಬೆಳೆದು ಬದುಕು ಕಟ್ಟಿಕೊಂಡ ನೆಲದ ಸಂಸ್ಕೃತಿ ಮುಂತಾದ ದೇಸಿಯತೆಯ ಅಂಶಗಳು ಸಾಹಿತ್ಯದ ಮೂಲಕ ಅನಾವರಣಗೊಳ್ಳುತ್ತವೆ. ಇಂತಹ ದೇಸಿಯ ಬದುಕನ್ನು ಕಾದಂಬರಿಯಲ್ಲಿ ಅಭಿವ್ಯಕ್ತಪಡಿಸುವಲ್ಲಿ ಕುವೆಂಪು, ಗೋಕಾಕ್, ಕಾರಂತ, ಕಂಬಾರರು ಇಲ್ಲಿ ಮುಖ್ಯರಾಗುತ್ತಾರೆ. ಹಾಗೆಯೇ ಇಂಗ್ಲೆಂಡಿನ ವೆಸೆಕ್ಸ್ ಪ್ರದೇಶದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಅಸ್ತಿತ್ವದಲ್ಲಿದ್ದ ಮುಗ್ಧ ಹಳ್ಳಿಗರ ದೇಸಿಯ ಸಂಸ್ಕೃತಿಯನ್ನು ಅಭಿವ್ಯಕ್ತಪಡಿಸುವುದರಲ್ಲಿ ಥಾಮಸ್ ಹಾರ್ಡಿಯವರು ಮುಖ್ಯರಾಗುತ್ತಾರೆ. ಕುವೆಂಪು ಮತ್ತು ಹಾರ್ಡಿಯವರ ಕಾದಂಬರಿಗಳು ಸಮೃದ್ಧವಾದ ದೇಸಿಯತೆಯ ಗುಣಲಕ್ಷಣಗಳನ್ನು ಹೊಂದಿರುವುದರಿಂದ ಪ್ರಸ್ತುತ ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ.

ಕುವೆಂಪು ಅವರ ಎರಡೂ ಕಾದಂಬರಿಗಳೂ ಕಥಾನಿರೂಪಣೆ, ಪಾತ್ರವರ್ಗ, ಸ್ಥಳೀಯ ಸಾಮಾಜಿಕ, ಭೌಗೋಳಿಕ ಆಶಯಗಳಿಂದಾಗಿ ಇತರ ಕನ್ನಡ ಕಾದಂಬರಿಗಳಿಗಿಂತ ವಿಶಿಷ್ಟವಾಗಿವೆ. <u>ಕಾನೂರು ಹೆಗ್ಗಡಿತಿ</u> 1936ರಲ್ಲಿ ಮತ್ತು <u>ಮಲೆಗಳಲ್ಲಿ ಮದುಮಗಳು</u> 1967ರಲ್ಲಿ ಪ್ರಕಟಗೊಂಡ ಕಾದಂಬರಿಗಳು ಮಲೆನಾಡಿನ ಸಮೃದ್ಧವಾದ ಪ್ರಾದೇಶಿಕ ಬದುಕನ್ನು, ಆ ಪ್ರದೇಶದಲ್ಲಿ ಬದುಕು ಕಟ್ಟಿಕೊಂಡ ಜನಸಮುದಾಯದ ಭಾಷಾ ಸಂವೇದನೆಗಳನ್ನು, ಸಾಮಾಜಿಕ, ಸಾಂಸ್ಕೃತಿಕ ಮತ್ತು ಸಾಂಪ್ರದಾಯಿಕ ಬದುಕನ್ನು ಅತ್ಯಂತ ಸಹಜವಾಗಿ ಲೇಖಕರು ತಮ್ಮ ಕೃತಿಗಳಲ್ಲಿ ಚಿತ್ರಿಸಿದ್ದಾರೆ. ಮಲೆನಾಡು ಬೇರೆ ಯಾವುದೇ ಪ್ರದೇಶಕ್ಕಿಂತ ವಿಭಿನ್ನವಾಗಿರುವುದರಿಂದ, ಆ ಪ್ರದೇಶದ ಜನವರ್ಗದ ಜೀವನ ಕ್ರಮ, ಜಾತಿ-ಪಂಗಡ, ವರ್ಗ, ವಿಶೇಷಗಳು ಅಲ್ಲಿನ ಜನರ ವೃತ್ತಿ, ಪ್ರವೃತ್ತಿ, ಸಂಪ್ರದಾಯ, ನಂಬಿಕೆ, ಆಚರಣೆ, ಬೇಟೆ, ಬಲಿ, ಹರಕೆ ಮುಂತಾದ ವಿವರಣೆಗಳು ಅಧ್ಯಯನ ಯೋಗ್ಯವಾದ ಆಕರಗಳಾಗಿವೆ. ಮಲೆನಾಡಿನ ಬದುಕು ಮತ್ತು ಪ್ರಕೃತಿಯ ನಡುವಿನ ಅವಿನಾಭಾವ ಸಂಬಂಧ, ಮಾನವನ ಬದುಕಿನಲ್ಲಿ ಪ್ರಕೃತಿಯ ಪಾತ್ರ, ಪ್ರಭಾವ ಮುಂತಾದ ವಿವರಗಳು, ಮನುಷ್ಯ ಪಾತ್ರಗಳಂತೆಯೇ ಪ್ರಕೃತಿಯೂ ಮುಖ್ಯ ಪಾತ್ರವಾಗಿ, ಚಿತ್ರಿತಗೊಂಡಿರುವುದು ವಿಶೇಷವಾಗಿದೆ. ಸಣ್ಣಪುಟ್ಟ ಮತ್ತು ಸೂಕ್ಷ್ಮವಾದ ವಿಚಾರಗಳೂ, ವರ್ಣನೆಯಲ್ಲಿ ಮನುಷ್ಯ, ಬೆಟ್ಟಗುಡ್ಡ, ಕಾಡು, ಬದುಕು ಮುಂತಾದ ವಿವರಗಳು ಓದುಗರ ಆಸಕ್ತಿಯನ್ನು ಇಮ್ಮಡಿಗೊಳಿಸಿ, ಅಂದಿನ ಮಲೆನಾಡಿನ ಜೀವಂತ ಬದುಕಿಗೆ ಸಂಪರ್ಕ ಸೇತುವೆಯಾಗಿ ನಿಲ್ಲುವ ಪರಿ ಅಮೋಘವಾಗಿದೆ. (ಆಧುನಿಕ ಆಡಂಬರದ ಯಾಂತ್ರಿಕ ಬದುಕಿನಿಂದ ದೂರವಿದ್ದ, ಮಲೆನಾಡಿನ

ಬದುಕು ದೇಸಿಯ ಸಂಸ್ಕೃತಿಯ ಕೇಂದ್ರವಾಗಿತ್ತು. ಜಾಗತೀಕರಣದ ಹಿನ್ನಲೆಯಲ್ಲಿ ಮಲೆನಾಡಿನ ದೇಸಿಯ ಬದುಕಿನ ಅಧ್ಯಯನ ಅತ್ಯಂತ ಮಹತ್ವವಾದ ವಿಚಾರವಾಗಿವೆ.

ಥಾಮಸ್ ಹಾರ್ಡಿಯವರು 19ನೇ ಶತಮಾನದ ವಿಕ್ಟೋರಿಯನ್ ಯುಗ ಮತ್ತು ಆಧುನಿಕ ಯುಗದ ನಡುವಿನ ಸೇತುವೆ ಎಂದೇ ಖ್ಯಾತಿ ಪಡೆದಿದ್ದಾರೆ. ಕೈಗಾರಿಕೀಕರಣದಿಂದ ಉಂಟಾದ ನಗರೀಕರಣ, ಆಧುನಿಕ ಸಂಪರ್ಕ ಸಾಧನಗಳು ಇಂಗ್ಲೆಂಡಿನ ಗ್ರಾಮೀಣ ಬದುಕಿನ ಮೇಲೆ ಬೀರಿದ ಪರಿಣಾಮವನ್ನು ಅತ್ಯಂತ ಸಹಜವಾಗಿ ತಮ್ಮ ಕಾದಂಬರಿಗಳಲ್ಲಿ ಚಿತ್ರಿಸಿದ್ದಾರೆ. 1878ರಲ್ಲಿ 'ದಿ ರಿಟರ್ನ್ ಆಫ್ ದಿ ನೇಟಿವ್' ಕಾದಂಬರಿ ಮತ್ತು 1891ರಲ್ಲಿ 'ಟೆಸ್ ಆಫ್ ದಿ ಡಿ ಅರ್ಬರ್‌ವಿಲ್ಲೆ' ಕಾದಂಬರಿ ಪ್ರಕಟಗೊಳ್ಳುತ್ತವೆ. ಜಾಗತೀಕರಣದ ಪ್ರಭಾವಕ್ಕೊಳಗಾಗಿ, ನಶಿಸಿ ಹೋಗುತ್ತಿದ್ದ ದೇಸಿ ಭಾಷೆ, ಸಂಸ್ಕೃತಿ, ಪ್ರಕೃತಿಯ ಆರಾಧನೆ, ಹಬ್ಬ, ಉತ್ಸವ ಮುಂತಾದ ಸಾಂಪ್ರದಾಯಿಕ ವಿಷಯಗಳನ್ನು ತಮ್ಮ ಕಾದಂಬರಿಗಳಲ್ಲಿ ಜೀವಂತಗೊಳಿಸುವ ಮೂಲಕ ಇಂಗ್ಲೆಂಡಿನ ದೇಸಿಯ ಬದುಕಿನ ವಕ್ತಾರರಾಗಿದ್ದಾರೆ. ಕುವೆಂಪುರವರ ಮಲೆನಾಡಿನ ದೇಸಿಯ ಬದುಕು ಮತ್ತು ಹಾರ್ಡಿಯವರ ವೆಸೆಕ್ಸ್‌ನ ದೇಸಿ ಸಂಸ್ಕೃತಿ ಅನೇಕ ರೀತಿಯಲ್ಲಿ ಸಾಮ್ಯತೆಯಿಂದ ಕೂಡಿದೆ. ಭಾಷೆ, ಆಚರಣೆ, ಹಬ್ಬ, ಉತ್ಸವ ಮತ್ತು ಹಳ್ಳಿಯ ಮುಗ್ಧ ನಿಷ್ಕಳಂಕ, ನಿಷ್ಕಪಟ ಜನ ಸಮುದಾಯ, ಪ್ರಕೃತಿ ಮತ್ತು ಪಾತ್ರಗಳು ಇಬ್ಬರೂ ಕಾದಂಬರಿಕಾರರಲ್ಲಿ ಒಂದೇ ರೀತಿಯಲ್ಲಿರುವುದರಿಂದ ತೌಲನಿಕ ಅಧ್ಯಯನಕ್ಕೆ ಯೋಗ್ಯವಾದ ಕೃತಿಗಳಾಗಿವೆ. ಕುವೆಂಪುರವರ 'ಕಾನೂರು ಹೆಗ್ಗಡಿತಿ'ಯ ಹೂವಯ್ಯ ಮತ್ತು ಹಾರ್ಡಿಯವರ 'ದಿ ರಿಟರ್ನ್ ಆಫ್ ದಿ ನೇಟಿವ್', ಕಾದಂಬರಿಯ ಕ್ಲಿಮ್ ಯೋಬ್ರೈಟ್ ದೇಸಿಯ ಬದುಕಿಗೆ ಮಾರುಹೋಗಿ ಪಟ್ಟಣದಿಂದ ತಮ್ಮ ಹುಟ್ಟೂರಿಗೆ ಬಂದವರು ಮತ್ತೆ ಎಂದೂ ಪಟ್ಟಣಕ್ಕೆ ಹಿಂದಿರುಗುವುದಿಲ್ಲ. ಕೃಷಿಯೇ ಎರಡೂ ಸಮುದಾಯಗಳ ಜನವರ್ಗದವರ ಮೂಲಕಸುಬು, ಕೃಷಿ ಅವರ ಜೀವನ ಕ್ರಮವಾಗಿದ್ದು ಜೀವನ ವಿಧಾನವೂ ಅಗಿತ್ತು. ಕೃಷಿಯಾಧಾರಿತ ಗ್ರಾಮೀಣ ಬದುಕು ಜಾಗತೀಕರಣದ ಬಿರುಗಾಳಿಗೆ ಸಿಲುಕಿ ಕೃಷಿ ವರ್ಗದವರು, ತಮ್ಮ ಮೂಲ ನೆಲೆಯನ್ನು ಕಳೆದುಕೊಂಡು ನಗರಗಳಿಗೆ ವಲಸೆ ಹೋಗುವುದನ್ನು, ಮತ್ತು ದೇಸಿ ಸಂಸ್ಕೃತಿಯ ಪತನವಾಗುವುದನ್ನು ಇಬ್ಬರೂ ಕೃತಿಕಾರರಲ್ಲಿ ಸಮಾನವಾಗಿ ಚಿತ್ರಿತವಾಗಿರುವುದರಿಂದ ತೌಲನಿಕ ಅಧ್ಯಯನಕ್ಕೆ ಸೂಕ್ತವಾಗಿದೆ. ಕುವೆಂಪುರವರ ಮತ್ತು ಹಾರ್ಡಿಯವರ ಕಾದಂಬರಿಗಳ ತೌಲನಿಕ ಅಧ್ಯಯನಕ್ಕೆ ಮತ್ತೊಂದು ಕಾರಣವೇನೆಂದರೆ, ಹಾರ್ಡಿಯವರ 'ದಿ ರಿಟರ್ನ್ ಆಫ್ ದಿ ನೇಟಿವ್' ಕಾದಂಬರಿ ಕುವೆಂಪುರವರ ಮೇಲೆ ಬೀರಿದ ಪ್ರಭಾವ. 1933ರಲ್ಲಿ ಕುವೆಂಪುರವರು 'ದಿ ರಿಟರ್ನ್ ಆಫ್ ದಿ ನೇಟಿವ್' ಕಾದಂಬರಿಯನ್ನು ಓದಿ, ಹಾರ್ಡಿಯವರ ಪಾತ್ರಗಳ ಸೃಷ್ಟಿ, ಅವರ ಬದುಕಿನ ಚಿತ್ರಣ, ಕೌಟುಂಬಿಕ ಸಂಬಂಧಗಳು

ಮುಂತಾದ ವಿಷಯಗಳಿಗೆ ಮಾರು ಹೋಗಿ ತಾವೂ ಒಂದು ಕಾದಂಬರಿ ಬರೆಯಲು ತಕ್ಷಣವೇ ಪ್ರಾರಂಭಿಸುತ್ತಾರೆ. 'ದಿ ರಿಟರ್ನ್ ಆಫ್ ದಿ ನೇಟಿವ್' ಕಾದಂಬರಿ ಓದಿ ಮುಗಿಸಿದೆ.... ನಾನೊಂದು ಕಾದಂಬರಿಗೆ ವಸ್ತು ಸಂವಿಧಾನ ಪ್ರಾರಂಭಿಸಿದ್ದೇನೆ; ಮುಂದೆ 'ಕಾನೂರು ಹೆಗ್ಗಡಿತಿ' ಎಂದು ಸುಪ್ರಸಿದ್ಧವಾದ ನನ್ನ ಮಹಾಕಾದಂಬರಿಯ ಉಗಮಸ್ಥಾನವಾಗಿದೆ ಈ ಅಂದಿನ ಸಂಕಲ್ಪ".[1] ಕಥೆಯ ನಿರೂಪಣೆ, ಪಾತ್ರಗಳ ಸನ್ನಿವೇಶಗಳ ಪ್ರತಿಸೃಷ್ಟಿಯಲ್ಲಿ, ಜೀವನ ಸಂಘರ್ಷದಲ್ಲಿ, ಪ್ರಕೃತಿ ಮತ್ತು ಮಾನವ ಸಂಬಂಧಗಳ ವರ್ಣನೆಯಲ್ಲಿ ಕುವೆಂಪು ಮತ್ತು ಹಾರ್ಡಿಯವರ ನಡುವೆ ಸಾಮ್ಯತೆ ಇರುವುದರಿಂದ ತೌಲನಿಕ ಅಧ್ಯಯನಕ್ಕೆ ಸೂಕ್ತವೆಂದು ಅವರಿಬ್ಬರ ಕಾದಂಬರಿಗಳನ್ನು ಆಯ್ದುಕೊಳ್ಳಲಾಗಿದೆ.

ಮಲೆನಾಡಿನ ಪರಿಸರದಲ್ಲಿ ಮತ್ತು ವೆಸೆಕ್ಸ್‌ನ ಪ್ರದೇಶದ ಮಣ್ಣಿನಲ್ಲಿ ಜೀವತಳೆದು ಸಮೃದ್ಧವಾಗಿ ಬೆಳೆದು ಬಂದಿದ್ದ ದೇಸಿಯ ಸಂಸ್ಕೃತಿ ಜಾಗತೀಕರಣದ ಪ್ರಭಾವಕ್ಕೆ ಸಿಲುಕಿ ನೆಲೆಕಳೆದುಕೊಳ್ಳುವುದನ್ನು ಇಬ್ಬರೂ ಕಾದಂಬರಿಕಾರರ ಕೃತಿಗಳಲ್ಲಿ ಕಾಣಬಹುದಾಗಿದೆ. ಜಾಗತೀಕರಣದಿಂದ ಮುಂದೊಂದು ದಿನ ಒದಗಿಬರಲಿರುವ ದುರಂತವನ್ನು ಕುವೆಂಪರವರು ಹಿಂದೆಯೇ ಮನಗಂಡಿದ್ದರು ಮತ್ತು ಆ ಪರಿಣಾಮಗಳನ್ನು ತಮ್ಮ ಕಾದಂಬರಿ ಕಾನೂರು ಹೆಗ್ಗಡಿತಿಯಲ್ಲಿ ಸೂಚ್ಯವಾಗಿ ದಾಖಲಿಸಿದ್ದಾರೆ! "ಯಂತ್ರನಾಗರಿಕತೆ, ಇಂಗ್ಲೀಷು, ಚಾಂಚಲ್ಯ, ಉದ್ವೇಗ, ವೇಗ! ತಾನು ಎಂದೊ ಹಿಂದಿಕ್ಕಿ ಬಂದ ಆ ಪ್ರಗತಿಗಾಮಿಯಾದ ಪ್ರಪಂಚ ಮತ್ತೆ ಬಹುದೂರದ ಮಲೆನಾಡಿನ ಕೊಂಪೆಯಲ್ಲಿ ತನಗೆ ಕ್ಷಣದರ್ಶನ ಕೊಟ್ಟಂತಾಯ್ತು, ನಿಲ್ಲದೆ ಮುಂಬರಿಯತ್ತಿರುವ, ದಿನ ದಿನವೂ ಬದಲಾಯಿಸುತ್ತಿರುವ ಹೊರಗಣ ವಿಶಾಲ ಜಗತ್ತಿಗೆ ಪ್ರತಿಮೆಗಳಾದವು, ಆ ಬೈಸಿಕಲ್ ಮತ್ತು ಅದರ ಸವಾರ"[2] ಮಲೆನಾಡಿನ ದೇಸಿ ಪರಿಸರಕ್ಕೆ ಜಾಗತೀಕರಣದ ಆಕ್ರಮಣ ಶೀಲವಾದ ಪ್ರಭಾವವನ್ನು ಬೈಸಿಕಲ್‌ನ ಸಂಕೇತದ ಮೂಲಕ ತಿಳಿಸಲಾಗಿದೆ. ಅಂದು ಬೈಸಿಕಲ್ಲಿನ ರೂಪದಲ್ಲಿ ಆಗಮಿಸಿದ ಜಾಗತೀಕರಣ ಇಂದು ಬೃಹದಾಕಾರವಾಗಿ ಬೆಳೆದು ದೇಸಿ ಸಂಸ್ಕೃತಿಯನ್ನು, ದೇಸಿ ಭಾಷೆ, ವಿಚಾರಗಳನ್ನು ಹಿಡಿಯಾಗಿ ನಾಶಮಾಡುತ್ತಿರುವುದನ್ನು ಅರಿಯಲು ಈ ಒಂದು ತೌಲನಿಕ ಅಧ್ಯಯನ ಸಹಕಾರಿಯಾಗಲಿದೆ. ಹಾರ್ಡಿಯವರ 'ದಿ ರಿಟರ್ನ್ ಆಫ್ ದಿ ನೇಟಿವ್' ಕಾದಂಬರಿಯ ದುರಂತ ನಾಯಕಿ ಯುಸ್ಟೇಷ್ಯ ಜಾಗತೀಕರಣದ ರಾಯಭಾರಿ ಎಂದೇ ಹೇಳಬಹುದು. ಆಕೆಯ ಮುನ್ನುಗ್ಗುವ ದಾಷ್ಟಿಕದ ಮನಸು ಮತ್ತು ಅಸಂಪ್ರದಾಯಿಕ ಪ್ರವೃತ್ತಿ, ಪ್ಯಾರಿಸ್ಸಿಗೆ ಹೋಗಿ ನೆಲೆಸಬೇಕೆಂಬ ಅತಿಯಾದ ಹಂಬಲ ಜಾಗತೀಕರಣದ ಸಂಕೇತವಾಗಿದೆ. ಪ್ಯಾರಿಸ್ ಆಕೆಯ ಹೃದಯದ ಪಟ್ಟಣ, ಆದರೆ ಎಗ್ಡನ್ ಹೀತ್ ಆಕೆಯ ನರಕ, ಪ್ಯಾರಿಸ್ಸಿಗೆ ಹೋಗಬೇಕೆಂಬ ಉತ್ಕಟವಾದ ಬಯಕೆ ಆಕೆಯ ದುರಂತಕ್ಕೆ

ಕಾರಣವಾಗುತ್ತದೆ. ಆದರೆ ಆಕೆಯ ಪತಿ ಕ್ಲಿಮ್ ಎಗ್ಡನ್ನಿನ ಮಣ್ಣಿನ ಮಗ, ಪ್ಯಾರಿಸ್‌ನ ಕೃತಕ ಬದುಕಿಗೆ ವಿದಾಯ ಹೇಳಿ ತನ್ನೂರಿಗೆ ಮರಳಿ ಬರುತ್ತಾನೆ. ತಾನೂ ಹುಟ್ಟಿ ಬೆಳೆದ ಜನರೊಂದಿಗೆ ಬೆರೆಯಬೇಕೆಂಬ ಹಂಬಲ ದೇಸಿಯತೆಯ ಪ್ರೇರಣ ಶಕ್ತಿಯಾಗಿದೆ. ಜಾಗತೀಕರಣದ ಸೆಳೆತ, ಆಧುನಿಕ ಆಡಂಬರದ ನಗರದ ಬದುಕು ಅಸಹನೀಯ ಮತ್ತು ದೇಸಿಯ ಸಂಸ್ಕೃತಿಗೆ ಹೇಗೆ ಮಾರಕವಾಗಿದೆ ಎನ್ನುವುದನ್ನು ಹಾರ್ಡಿಯವರ ಕಾದಂಬರಿಗಳ ಮೂಲಕ ತಿಳಿಯಬಹುದಾಗಿದೆ.

ಥಾಮಸ್ ಹಾರ್ಡಿಯವರ ಮತ್ತೊಂದು ಕಾದಂಬರಿ 'ಟೆಸ್ ಆಫ್ ದಿ ಡಿ ಅರ್ಬರ್ ವಿಲ್ಲೆ' ಜಾಗತೀಕರಣದಿಂದ ದೇಸಿಯ ಕೃಷಿ ಪ್ರಧಾನ ಸಂಸ್ಕೃತಿಯ ಮೇಲೆ ಉಂಟಾಗುವ ಪರಿಣಾಮಗಳನ್ನು ಅತ್ಯಂತ ಸೂಕ್ಷ್ಮವಾಗಿ ಅನಾವರಣಗೊಳಿಸಿದೆ. ಕಾದಂಬರಿಯ ದುರಂತ ನಾಯಕಿ ಟೆಸ್, ಮುಗ್ಧ ಮಣ್ಣಿನ ಮಗಳು, ದೇಸಿಯ ಸಂಸ್ಕೃತಿಯ ಪ್ರತಿನಿಧಿಯಾಗಿ ಜಾಗತೀಕರಣದ ಬಿರುಗಾಳಿಗೆ ಸಿಲುಕಿ ನೆಲೆ ಕಳೆದುಕೊಂಡು ಅಲೆಮಾರಿಯಾಗಿ ತನ್ನ ಬದುಕನ್ನು ಅಂತ್ಯಗೊಳಿಸಿಕೊಳ್ಳುವುದನ್ನು ಕಾಣುತ್ತೇವೆ. ಹಾರ್ಡಿಯವರ ಎರಡೂ ಕಾದಂಬರಿಗಳು ದೇಸಿ ಮತ್ತು ಜಾಗತೀಕತೆಯ ಅಂಶಗಳನ್ನು ಒಳಗೊಂಡಿರುವ ಕಾರಣ ಪ್ರಸ್ತುತ ಅಧ್ಯಯನಕ್ಕೆ ಸೂಕ್ತವೆಂದು ಆಯ್ದುಕೊಳ್ಳಲಾಗಿದೆ. ಹಾರ್ಡಿಯವರ ಪಾತ್ರಗಳ ಸೃಷ್ಟಿ, ಸನ್ನಿವೇಶ, ಕಥಾನಿರೂಪಣೆ, ಭಾಷೆ, ಶೈಲಿ, ಸಾಮಾಜಿಕ ಆವರಣ ಮುಂತಾದ ಅಂಶಗಳು ಕುವೆಂಪುರವರ ಕಾದಂಬರಿಗಳಲ್ಲೂ ಸಾಮ್ಯತೆಯನ್ನು ಹೊಂದಿರುವುದರಿಂದ ಒಂದು ತೌಲನಿಕ ಅಧ್ಯಯನಕ್ಕೆ ಸಹಕಾರಿಯಾಗಬಲ್ಲದೆಂದು ಆಯ್ದುಕೊಳ್ಳಲಾಗಿದೆ.

ಬದಲಾಗುತ್ತಿರುವ ಇಂದಿನ ಸಾಮಾಜಿಕ ಸನ್ನಿವೇಶದಲ್ಲಿ ನಶಿಸಿ ಹೋಗುತ್ತಿರುವ ಸ್ಥಳೀಯ ಸಂಸ್ಕೃತಿ ಅಥವಾ ದೇಸಿ ಸಂಸ್ಕೃತಿ ಪರಂಪರೆಯ ಕುರಿತಾದ ಅಧ್ಯಯನ ಮಹತ್ವ ಪಡೆದುಕೊಂಡಿದೆ. ದೇಸಿಯ ಬದುಕಿನ ಬಗ್ಗೆ ಹೆಚ್ಚಿನ ಅಧ್ಯಯನಗಳು ನಡೆದಿಲ್ಲದಿರುವುದರಿಂದ ಮತ್ತು ಈಗಾಗಲೇ ಪ್ರಕಟಗೊಂಡಿರುವ ಲೇಖನಗಳು, ಕೃತಿಗಳು ಅವಿಸ್ತೃತವಾದ್ದರಿಂದ ಈ ಒಂದು ಅಧ್ಯಯನ ಅಲ್ಪ ಪ್ರಮಾಣದಲ್ಲಿ ಆ ಕೊರತೆಯನ್ನು ತುಂಬಿಕೊಡುವ ಪ್ರಯತ್ನವಾಗಿದೆ. ಹಾಗೆಯೇ ದೇಸಿಯತೆಯನ್ನು ಅದರ ಮೂಲ ಸ್ವರೂಪದಲ್ಲಿಯೇ ತಿಳಿಯಬೇಕಾದರೆ ಗ್ರಾಮೀಣ ಪರಿಸರದ ಹಿನ್ನಲೆ ಪ್ರಮುಖ ಪಾತ್ರವಹಿಸುತ್ತದೆ. ಗ್ರಾಮೀಣ ಬದುಕು ಸರಿಯಾದ ಅರ್ಥದಲ್ಲಿ ದೇಸಿಯ ಬದುಕು, ನಗರ ಮತ್ತು ಪಟ್ಟಣದ ಆಧುನಿಕ ಆಡಂಬರದ ಬದುಕಿನಿಂದ ದೂರವಿದ್ದು ದೇಸಿಯ ಸಮೃದ್ಧವಾದ ಸಂಸ್ಕೃತಿ, ಭಾಷೆಯನ್ನು ಪೋಷಿಸುತ್ತಾ ಬಂದಿರುವುದು ಗ್ರಾಮೀಣ ಪ್ರದೇಶವಾದ್ದರಿಂದ ಈ ಅಧ್ಯಯನದಲ್ಲಿ ದೇಸಿ ಬದುಕು ಎಂದರೆ ಗ್ರಾಮೀಣ ಬದುಕು ಎಂಬಂರ್ಥದಲ್ಲಿ ಅಧ್ಯಯನವನ್ನು ಮಾಡಲಾಗಿದೆ. ಇದರ ಜೊತೆಗೆ ಹತ್ತೊಂಬತ್ತನೆ ಮತ್ತು ಇಪ್ಪತ್ತನೆಯ ಶತಮಾನದ ದೇಸಿಯ

ಬದುಕಿನ ಅಧ್ಯಯನ ಇತಿಹಾಸದ ಪ್ರಜ್ಞೆಯನ್ನು ಉಂಟುಮಾಡುವುದರಿಂದ ಅಂದಿನ ದಿನಗಳ ಆಚಾರ-ವಿಚಾರ, ಆಲೋಚನೆ, ಆಚರಣೆ ಮುಂತಾದ ವಿಷಯಗಳು ಇಂದಿನ ಜಾಗತೀಕರಣದ ಪ್ರಭಾವಕ್ಕೆ ಸಿಲುಕಿ ದಿಕ್ಕು ಕಾಣದಾಗಿರುವ ಬದುಕಿಗೆ ಆಸರೆಯಾಗಬಲ್ಲದು. ಕುವೆಂಪು ಮತ್ತು ಹಾರ್ಡಿಯವರ ಕಾದಂಬರಿಗಳು ಕೇವಲ ಸಾಹಿತ್ಯಾಂಶಗಳನ್ನು ನೀಡಿ ಸಹೃದಯ ಓದುಗರ ಮನಸ್ಸನ್ನು ತಣಿಸುವುದಷ್ಟೇ ಅಲ್ಲದೆ ಆಯಾ ಕಾಲದ ಸಾಮಾಜಿಕ, ವೈಚಾರಿಕ, ಧಾರ್ಮಿಕ, ಚಾರಿತ್ರಿಕ ಅಂಶಗಳ ಮೇಲೆಯೂ ಬೆಳಕು ಚೆಲ್ಲುತ್ತವೆ. ಇಂತಹ ಅಂಶಗಳು ವರ್ತಮಾನಕ್ಕೆ ಅಷ್ಟೇ ಅಲ್ಲದೆ ಭವಿಷ್ಯಕ್ಕೂ ಸಹಾಯವಾಗಬಲ್ಲವು.

ಜಾಗತೀಕರಣದ ಪ್ರಸ್ತುತ ಸನ್ನಿವೇಶದಲ್ಲಿ ಕುವೆಂಪು ಮತ್ತು ಥಾಮಸ್ ಹಾರ್ಡಿಯವರ ಕಾದಬಂರಿಗಳು ದೇಸಿ ಬದುಕಿನ ಸಮಗ್ರ ಚಿತ್ರಣವನ್ನು ಒಳಗೊಂಡಿರುವುದರಿಂದ ಅವುಗಳ ಅಧ್ಯಯನ ಇಂದಿನ ದಾವಂತದ ಬದುಕಿಗೆ ಅನಿವಾರ್ಯವೆನಿಸುತ್ತವೆ. ದೇಸಿಯ ಬದುಕು ಮೌಲ್ಯಯುತವಾದ, ಆದರ್ಶವಾದ ಮತ್ತು ನೈತಿಕ ನೆಲೆಗಳಲ್ಲಿ ರೂಪುಗೊಂಡಿರುವಂತಹದ್ದು. ಆದರೆ ಇಂತಹ ಬದುಕು ಜಾಗತೀಕರಣದ ಬಿರುಗಾಳಿಗೆ ಸಿಲುಕಿ ಅವಸಾನಗೊಳ್ಳುವುದನ್ನು ಇಬ್ಬರೂ ಮಹಾನ್ ಕಾದಂಬರಿಕಾರರು ಒಂದು ಶತಮಾನದ ಹಿಂದೆಯೇ ಮನಗಂಡಿದ್ದರು ಎನ್ನುವುದನ್ನು ಪ್ರಸ್ತುತ ಅಧ್ಯಯನದಿಂದ ಅರಿಯಬಹುದಾಗಿದೆ. ದೇಸಿಯ ಬದುಕಿನ ತೊಟ್ಟಿಲುಗಳಾಗಿದ್ದ ಹಳ್ಳಿಗಳು ಜಾಗತೀಕರಣದ ಕಬಂದಬಾಹುಗಳಿಗೆ ಸಿಲುಕಿ ನೆಲೆಕಳೆದುಕೊಳ್ಳುವುದನ್ನು ಕಾಣುತ್ತೇವೆ. ತಲಾತಲಾಂತದಿಂದ ರೂಢಿಸಿಕೊಂಡು ಬಂದಿದ್ದ ದೇಸಿ ಕಸುಬುಗಳು ಜಾಗತೀಕರಣದ ಪ್ರಭಾವದಿಂದ ಅಸ್ತಿತ್ವ ಕಳೆದುಕೊಳ್ಳುವುದನ್ನು ಮತ್ತು ಅವುಗಳನ್ನೇ ನಂಬಿ ಜೀವನ ನಡೆಸುತ್ತಿದ್ದ ಹಳ್ಳಿಗರು ತಾವು ಹುಟ್ಟಿ ಬೆಳೆದ ಮಣ್ಣಿನ ಸಂಬಂಧವನ್ನು ಕಡಿದುಕೊಂಡು ನಗರ ಪಟ್ಟಣಗಳಿಗೆ ವಲಸೆ ಹೋಗುವುದನ್ನು ನೋಡಿದಾಗ ದೇಸಿಯ ಬದುಕಿನ ಅನಿವಾರ್ಯತೆ ಹಿಂದೆದಿಗಿಂತಲೂ ಇಂದು ಇದೆ ಎನಿಸುತ್ತದೆ. ಅತಿಯಾದ ಭೌತಿಕ ಸಂಪತ್ತು ಮಿತಿಮೀರಿದ ಗ್ರಾಹಕ ಸಂಸ್ಕೃತಿ, ಯಾಂತ್ರಿಕೃತಗೊಳ್ಳುತ್ತಿರುವ ಬದುಕು ಮತ್ತು ಅಪರಿಮಿತಿ ಮಾರುಕಟ್ಟೆ ವ್ಯವಸ್ಥೆ ಆಧುನಿಕ ಮಾನವನ ಬದುಕನ್ನು ಅಸಹನೀಯಗೊಳಿಸುತ್ತಿರುವ ಈ ಸಂದರ್ಭದಲ್ಲಿ ದೇಸಿ ಸಂಸ್ಕೃತಿಯ ಬೇರುಗಳ ಹುಡುಕಾಟ ಇಂದು ಅನಿವಾರ್ಯವೆನಿಸುತ್ತದೆ.

ಇಬ್ಬರು ಮಹಾನ್ ಕಾದಂಬರಿಕಾರರ ಕೃತಿಗಳ ಅಧ್ಯಯನ ಎರಡು ವಿಭಿನ್ನ ಭೌಗೋಳಿಕ ಪ್ರದೇಶಗಳ ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಿಕ ಮತ್ತು ಐತಿಹಾಸಿಕ ನೆಲೆಗಳನ್ನು ಅರಿಯಲು ಸಹಕಾರಿಯಾಗುತ್ತದೆ. ಇಬ್ಬರೂ ಕೃತಿಕಾರರ ಕೃತಿಗಳಲ್ಲಿ ಕಂಡುಬರುವ ಸಾಮ್ಯತೆ ಮತ್ತು ಭಿನ್ನತೆ

ಸಹಜವಾದರೂ ದೇಸಿಯ ಬದುಕಿನ ತಿರುಳು ಹಾಗೂ ಆಶಯ ಒಂದೇ ಆಗಿರುತ್ತದೆ ಎನ್ನುವುದನ್ನು ಮನಗಾಣಬಹುದಾಗಿದೆ. ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಗುಣಾವಗುಣಗಳನ್ನು ವಿಮರ್ಶಾತ್ಮಕವಾಗಿ ಅರಿಯಲು ಈ ಒಂದು ಅಧ್ಯಯನ ಸಹಕಾರಿಯಾಗುತ್ತದೆ. ನಶಿಸಿ ಹೋಗುತ್ತಿರುವ ದೇಸಿ ಭಾಷೆ, ಸಂಸ್ಕೃತಿ, ಆಚಾರ ವಿಚಾರ, ರೂಢಿ, ಸಂಪ್ರದಾಯ ಆಚರಣೆ, ಹಬ್ಬ-ಹರಿದಿನಗಳು ಇಂದಿನ ಬದುಕಿಗೆ ಅವಶ್ಯವೆನಿಸುತ್ತವೆ. ಈ ನಿಟ್ಟಿನಲ್ಲಿ ಈ ಒಂದು ತೌಲನಿಕ ಅಧ್ಯಾಯ ಮಹತ್ವ ಪಡೆದುಕೊಳ್ಳುತ್ತದೆ.

ಕುವೆಂಪು ಕಾದಂಬರಿಗಳು ಮಲೆನಾಡಿನ ಒಂದು ಕಾಲದ ಸಮಗ್ರ ಬದುಕನ್ನು ಒಳಗೊಂಡಿದ್ದು ಆ ಕಾಲದ ಜನರ ಆಚಾರ-ವಿಚಾರ, ರೂಢಿ, ಸಂಪ್ರದಾಯಗಳು ಇತರ ಭಾಗಗಳಿಗಿಂತ ವಿಭಿನ್ನವಾಗಿದ್ದವು ಎನ್ನುವುದನ್ನು ವಿವರಿಸುತ್ತವೆ. ಇದರಿಂದ ಮಲೆನಾಡಿನ ಗ್ರಾಮೀಣ ನೆಲಪರ ಸಂಸ್ಕೃತಿಯನ್ನು ಬೇರೆ ಯಾವುದೇ ಪ್ರದೇಶದ ಸಂಸ್ಕೃತಿಯೊಡನೆ ತೂಗಿ ನೋಡಲು ಸಾಮ್ಯತೆಯನ್ನು ಮತ್ತು ಭಿನ್ನತೆಯನ್ನು ಗುರುತಿಸಿ ನೋಡಲು ಸಾಧ್ಯವಾಗುತ್ತವೆ. ಆದ್ದರಿಂದಲೇ ಅನೇಕ ಅಂಶಗಳಲ್ಲಿ ಸಾಮ್ಯತೆ ಹಾಗೂ ವ್ಯತ್ಯಾಸವನ್ನು ಹೊಂದಿರುವ ಕಾರಣದಿಂದ ಹಾರ್ಡಿಯವರ ಕಾದಂಬರಿಗಳನ್ನು ಆಯ್ದುಕೊಳ್ಳಲಾಗಿದೆ. ಕುವೆಂಪುರವರ ಸಾಹಿತ್ಯ ಮತ್ತು ಹಾರ್ಡಿಯವರ ಆಂಗ್ಲ ಸಾಹಿತ್ಯದ ಅಧ್ಯಯನ ಭಾಷೆಯ ದೃಷ್ಟಿಯಿಂದಲೂ ಮಹತ್ವ ಪಡೆದುಕೊಳ್ಳುತ್ತದೆ. ಕನ್ನಡ ಸಾಹಿತ್ಯಕ್ಕೆ ಮತ್ತು ಆಂಗ್ಲ ಸಾಹಿತ್ಯದ ತೌಲನಿಕ ಅಧ್ಯಯನ ಹೊಸ ಸಾಧ್ಯತೆಗಳಿಗೆ ಸಹಾಯವಾಗುತ್ತದೆ. ಎರಡೂ ಭಾಷಾ ಸಾಹಿತ್ಯಗಳ ಅಧ್ಯಯನ ಹೊಸ ಸಾಹಿತ್ಯದ ಆಯಾಮಗಳಿಗೆ ಆಸರೆಯಾಗುತ್ತದೆ. ಆದ್ದರಿಂದ ಕುವೆಂಪು ಮತ್ತು ಹಾರ್ಡಿಯವರ ಆಯ್ದ ಕೃತಿಗಳ ತೌಲನಿಕ ಅಧ್ಯಯನ ಮೇಲಿನ ಉದ್ದೇಶಗಳಿಗೆ ಸಹಕಾರಿಯಾಗಲಿವೆ.

ವ್ಯಾಪ್ತಿ:- ಕುವೆಂಪುರವರ 'ಕಾನೂರು ಹೆಗ್ಗಡಿತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಹಾಗೂ ಹಾರ್ಡಿಯವರ 'ದಿ ರಿರ್ಟರ್ನ್ ಆಫ್ ದಿ ನೇಟಿವ್' ಮತ್ತು 'ಟೆಸ್ ಆಫ್ ದಿ ಡಿ ಅರ್ಬರ್‌ವಿಲ್ಲೆ' ಕಾದಂಬರಿಗಳು ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ಸೇರುತ್ತವೆ. ಈ ಕಾದಂಬರಿಗಳಲ್ಲಿ ದೇಸಿಯತೆ ಮತ್ತು ಜಾಗತೀಕತೆಯನ್ನು ವ್ಯಕ್ತಪಡಿಸುವ ಅಂಶಗಳು ಮುಖ್ಯವಾಗಿದ್ದು, ಕಾದಂಬರಿಗಳ ಕಥಾನಿರೂಪಣೆ, ರಚನೆ, ಶೈಲಿ, ತಂತ್ರ ಮುಂತಾದ ವಿಮರ್ಶಾತ್ಮಕ ಅಂಶಗಳು ಈ ಅಧ್ಯಯನದ ವ್ಯಾಪ್ತಿಗೆ ಬರುವುದಿಲ್ಲ. ಇಬ್ಬರೂ ಕಾದಂಬರಿಕಾರರ ಕಾದಂಬರಿಗಳಲ್ಲಿ ಅಭಿವ್ಯಕ್ತಗೊಂಡಿರುವ ಸಾಮಾಜಿಕ, ಸಾಂಸ್ಕೃತಿ ಬದುಕಿನ ಚಿತ್ರಣ ಮತ್ತು ಸಮಾಜಶಾಸ್ತ್ರೀಯ ಅಂಶಗಳು ಈ ಅಧ್ಯಯನಕ್ಕೆ ಒಳಪಡುತ್ತವೆ. ಈ ಅಂಶಗಳು ಎರಡು ಭೌಗೋಳಿಕ ಪರಿಸರದ ಹಿನ್ನಲೆಯಲ್ಲಿ ದೇಸಿಯತೆಯನ್ನು

ನಿರೂಪಿಸುತ್ತವೆ ಎನ್ನುವುದನ್ನು ಮತ್ತು ಈ ಅಂಶಗಳ ಮೇಲೆ ಜಾಗತೀಕರಣದ ಪರಿಣಾಮವನ್ನು ಈ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಇಬ್ಬರೂ ಕಾದಂಬರಿಕಾರರ ಕೃತಿಗಳ ಕಥಾನಕದ ಕಾಲ, ಪ್ರದೇಶ, ಸಾಮಾಜಿಕ ಸನ್ನಿವೇಶಗಳು ಮತ್ತು ಬಾಹ್ಯ ಪ್ರಭಾವಗಳು ಅಧ್ಯಯನದ ಭಾಗವಾಗಿವೆ.

ಕುವೆಂಪುರವರ ಕಾದಂಬರಿಗಳ ಕಥಾನಕದ ಮುಖ್ಯ ಪ್ರದೇಶ ಮಲೆನಾಡು. ಕಾನೂರು ಹೆಗ್ಗಡತಿಯ ಕಥೆ ತೀರ್ಥಹಳ್ಳಿ ಮತ್ತು ಕೊಪ್ಪ ನಡುವಿನ ಕಾನೂರು ಹಾಗೂ ಅದರ ಸುತ್ತಮುತ್ತಲ ಊರುಗಳಾದ ಅಗ್ರಹಾರ, ಅತ್ತಿಗದ್ದೆ, ಆಗುಂಬೆ, ಕುರುವಳ್ಳಿ, ಕೂಳೂರು, ಬಾಳೂರು, ಮಂಡಗದ್ದೆ, ಮೇಗರವಳ್ಳಿ, ಸಿದ್ಧರಮಠ, ನೆಲ್ಲುವಳ್ಳಿ, ಮುತ್ತುಳ್ಳಿ, ಸೀತೆಮನೆ ಮುಂತಾದ ಸ್ಥಳಗಳಲ್ಲಿ ಜರಗುತ್ತದೆ. ಮಲೆಗಳಲ್ಲಿ ಮದುಮಗಳು ಕಾದಂಬರಿಯ ಕಥೆಯು ಆಗುಂಬೆಯಿಂದ ಮೇಗರವಳ್ಳಿ, ತೀರ್ಥಹಳ್ಳಿ, ಕೊಪ್ಪ, ಸಿಂಬಾವಿ, ಶೃಂಗೇರಿ, ಸಿಂಧುವಳ್ಳಿ, ಹಳೆಮನೆ, ಹೂವಳ್ಳಿ, ಹೊಸಕೇರಿ, ಮೂಗೂರು, ಕಾನೂರು ಬೆಟ್ಟಳ್ಳಿ, ಸೀತೆಮನೆ ಮುಂತಾದ ಊರುಗಳಿಗೆ ಹಬ್ಬಿರುವುದನ್ನು ಕಾಣಬಹುದು. ಕುವೆಂಪುರವರ ಎರಡೂ ಕಾದಂಬರಿಗಳಲ್ಲಿ ಬಹಳಷ್ಟು ಊರುಗಳು ಕಾಲ್ಪನಿಕವಾಗಿ ಉಲ್ಲೇಖಿತವಾಗಿದ್ದು ಕಥೆಗೆ ಪೂರಕವಾದ ಸನ್ನಿವೇಶಗಳನ್ನು ಒಳಗೊಂಡಿವೆ. ಹಾರ್ಡಿಯವರ ಕಾದಂಬರಿಗಳ ಕಥಾನಕದ ಪ್ರದೇಶವು ಇಂಗ್ಲೇಂಡಿನ ದಕ್ಷಿಣದ ಒಳನಾಡಿನ ವೆಸೆಕ್ಸ್ ಪ್ರಾಂತ್ಯವಾಗಿದೆ. ಎಗ್ಡನ್ ಹೀತ್, ಬಡ್‌ಮತ್, ಬ್ಲೂಮ್ಸ್‌ಎಂಡ್, ಮಿಸ್ಟೋವರ್, ಕ್ಯಾಸ್ಟರ್‌ಬ್ರಿಜ್, ಅಲ್ದರ್‌ಮೌತ್, ಫ್ಲಿಂಟ್‌ಕೂಂಬ್ ಆ್ಯಶ್, ಎಮ್ಮಿನಿಸ್ಟರ್, ಟಾಲ್‌ಬೋತಿ, ಮುಂತಾದ ಊರುಗಳನ್ನು ಒಳಗೊಂಡಿದೆ.

ಕುವೆಂಪುರವರ ಕಾದಂಬರಿಗಳ ಕಥಾನಕದ ಕಾಲವು ಸರಿಸುಮಾರು ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಿಂದ ಇಪ್ಪತ್ತನೆಯ ಶತಮಾನದ ಉತ್ತರಾರ್ಧದವರೆಗೂ ವಿಸ್ತರಿಸಿದೆ. ಕಾನೂರು ಹೆಗ್ಗಡಿತಿ ಕಾದಂಬರಿಯು 1936 ರಲ್ಲಿ ಮತ್ತು ಮಲೆಗಳಲ್ಲಿ ಮದುಮಗಳು ಕಾದಂಬರಿಯು 1967ರಲ್ಲಿ ಪ್ರಕಟಣೆಗೊಂಡಿದ್ದರೂ, ಕಥಾನಕದ ದೃಷ್ಟಿಯಿಂದ ಮಲೆಗಳಲ್ಲಿ ಮಲೆಮಗಳು ಕಾದಂಬರಿ ಮೊದಲು ಬರುತ್ತದೆ. ಇದರ ಮುಂದುವರಿದ ಭಾಗವಾಗಿ ಕಾನೂರು ಹೆಗ್ಗಡಿತಿ ಬರುವುದನ್ನು ಕಾಣಬಹುದಾಗಿದೆ. ಮಲೆಗಳಲ್ಲಿ ಮದುಮಗಳು ಕಾದಂಬರಿಯ ನಾಯಿಗುತ್ತಿ ಪೋಲಿಸರಿಂದ ತಪ್ಪಿಸಿಕೊಂಡು ತೀರ್ಥಹಳ್ಳಿಯ 'ದೋಣಿಗಂಡಿಯಲ್ಲಿ' ತುಂಗಾನದಿ ದಾಟಿ ಮುತ್ತಳ್ಳಿ, ಸೀತೆಮನೆ, ಕಾನೂರುಗಳಿಗೆ ಹೋಗುವವರ ಜೊತೆಯಲ್ಲಿ ನಿಂತಿರುವಾಗ ಹುರಿಮೀಸೆ ಬಿಟ್ಟಿರುವ, ಮದುಮಗನ ಹಾಗೆ ಅಂಗಿ ಹಾಕಿರುವ ಕಾನೂರಿನ ಚಂದ್ರಯ್ಯಗೌಡರ ಪರಿಚಯಮಾಡಿಕೊಂಡು ಅವರ ಜೀತದಾಳಾಗಿ ಸೇರಿಕೊಳ್ಳುತ್ತಾನೆ.[3] ಹೀಗೆ ಕಥಾನಕದ ದೃಷ್ಟಿಯಿಂದ ಮಲೆಗಳಲ್ಲಿ ಮದುಮಗಳು ಕಾದಂಬರಿ ಮೊದಲಲ್ಲಿ ಬರುತ್ತದೆ ಎನ್ನುವುದು ಸ್ಪಷ್ಟವಾಗುತ್ತದೆ. ಇದರ

ಜೊತೆಗೆ ಈ ಕಾದಂಬರಿಯಲ್ಲಿ ಬರುವ ತೀರ್ಥಹಳ್ಳಿಯ ಪಾದ್ರಿ ಜೀವರತ್ನಯ್ಯ ದೇವಯ್ಯಗೌಡನನ್ನು ಮತಾಂತರಗೊಳಿಸಲು ಮಲೆನಾಡಿಗೆ ಪ್ರವೇಶಿಸಿದ ದಿನಾಂಕ 11ನೇ ತೇದಿ ಸೋಮವಾರ ಸೆಪ್ಟೆಂಬರು 1893ನೆಯ ಇಸವಿ ಎಂದು ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ.[4] ಇದರಿಂದ ಮಲೆಗಳಲ್ಲಿ ಮದುಮಗಳು ಕಾದಂಬರಿಯ ಕಥಾನಕದ ಕಾಲವು 19ನೇ ಶತಮಾನದ ಉತ್ತರಾರ್ಧವೆಂದು ತಿಳಿಯಬಹುದಾಗಿದೆ. ಇನ್ನು ಕಾನೂರು ಹೆಗ್ಗಡಿತಿ ಕಾದಂಬರಿಯಲ್ಲಿ ಬರುವ ಚಂದ್ರಯ್ಯಗೌಡರ ಮನೆಯ ವಿವರಣೆಯಲ್ಲಿ ಒಬ್ಬಿಬ್ಬರು ದೇಶಭಕ್ತರ ಪಟಗಳೂ ಭಾರತಾಂಬೆಯ ಚಿತ್ರಪಟವೂ ಅಲ್ಲಿದ್ದು, ಸರ್ವವ್ಯಾಪಿಯಾಗುತ್ತಿದ್ದ ರಾಷ್ಟ್ರೀಯ ಮಹಾಸಭೆಯ ಪ್ರಭಾವವನ್ನು ಸೂಚಿಸುತ್ತದೆ.[5] ಇದೇ ಕಾದಂಬರಿಯಲ್ಲಿ ಬರುವ ಭಾರತೀಯರ ಸ್ವರಾಜ್ಯ ಕುರಿತಾದ ಪ್ರಯತ್ನಗಳು, ರಾಷ್ಟ್ರನಾಯಕರ ಆಂದೋಲನಕಾರಕ ಉಪನ್ಯಾಸಗಳು, ಬ್ರಿಟಿಷರ ದಬ್ಬಾಳಿಕೆಯ ನಡತೆಗಳು ಮುಂತಾದ ಉಲ್ಲೇಖಗಳು ಕಾನೂರು ಹೆಗ್ಗಡಿತಿ ಕಾದಂಬರಿಯ ಕಾಲ ಸ್ವಾತಂತ್ರ್ಯ ಸಂಗ್ರಾಮವನ್ನು ತಿಳಿಸುತ್ತವೆ.[6] ಮಲೆಗಳಲ್ಲಿ ಮದುಮಗಳು ಕಾದಂಬರಿ ಜೀವರತ್ನಯ್ಯ ಮೇಗರವಳ್ಳಿಯ ಮಿಶನ್ ಸ್ಕೂಲಿನ ಉದ್ಘಾಟನೆಗೆ ಮತ್ತು ದೇವಯ್ಯಗೌಡನನ್ನು ಕ್ರೈಸ್ತಮತಕ್ಕೆ ಮತಾಂತರಗೊಳಿಸುವ ಸಲುವಾಗಿ ಮೈಸೂರಿನಿಂದ ರೆವರೆಂಡ್ ಲೇಕ್‌ಹಿತ್ ಪಾದ್ರಿಗಳನ್ನು ಕರೆಸಿರುತ್ತಾನೆ. ಲೇಕ್‌ಹಿತ್ ಸಾಹೇಬರಿಗೆ ಭಾರತದಲ್ಲಿ ಆಳ್ವಿಕೆ ನಡೆಸುತ್ತಿದ್ದ ಬ್ರಿಟಿಷ್ ಸರಕಾರದ ಸಂಪೂರ್ಣ ಸಹಕಾರವಿದ್ದುದು ಉಲ್ಲೇಖಿತವಾಗಿದೆ.[7] ಈ ಎಲ್ಲಾ ಉಲ್ಲೇಖಗಳನ್ನು ಗಮನಿಸಿದರೆ ಕುವೆಂಪುರವರ ಎರಡೂ ಕಾದಂಬರಿಗಳ ಕಥಾನಕದ ಕಾಲ 19ನೇ ಶತಮಾನದ ಉತ್ತರಾರ್ಧದಿಂದ 20ನೇ ಶತಮಾನದ ಉತ್ತರಾರ್ಧದವರೆಗೆ ವಿಸ್ತರಿಸಿರುವುದು ಸ್ಪಷ್ಟವಾಗುತ್ತದೆ. ಈ ಅವಧಿಯಲ್ಲಿ ಮತ್ತು ಮಲೆನಾಡಿನ ನಿರ್ದಿಷ್ಟ ಪ್ರದೇಶಗಳಲ್ಲಿ ಜೀವಂತವಿದ್ದ ದೇಸಿ ಸಂಸ್ಕೃತಿಯ ತಿರುಳು ಕುವೆಂಪುರವರ ಕಾದಂಬರಿಗಳಲ್ಲಿ ಪ್ರತಿಬಿಂಬಿತವಗಿರುವುದರಿಂದ ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ಒಳಪಡುತ್ತದೆ.

ಹಾರ್ಡಿಯವರ 'ದಿ ರಿಟರ್ನ್ ಆಫ್ ದಿ ನೇಟಿವ್' ಕಾದಂಬರಿ 1878 ಮತ್ತು 'ಟೆಸ್ ಆಫ್ ದಿ ಡಿ ಅರ್ಬರ್ ವಿಲ್ಲೆ' 1891ರಲ್ಲಿ ಪ್ರಕಟಗೊಂಡಿವೆ. ಎರಡೂ ಕಾದಂಬರಿಗಳ ಕಥಾನಕವು ಹತ್ತೊಬತ್ತನೆಯ ಶತಮಾನದ ಆದಿಯಿಂದ ಪ್ರಾರಂಭಗೊಳ್ಳುವುದು. ಕೈಗಾರೀಕರಣ, ರಾಷ್ಟ್ರೀಯ ಶಿಕ್ಷಣ, ನಗರೀಕರಣ ಮುಂತಾದ ಆಧುನಿಕ ಶೈಲಿಯ ಅಂಶಗಳು ಇಂಗ್ಲೆಂಡಿನ ಗ್ರಾಮೀಣ ಭಾಗದ ಮೇಲೆ ಉಂಟಾಗುತ್ತಿದ್ದ ಪರಿಣಾಮಗಳನ್ನು ಹಾರ್ಡಿಯವರು ತಮ್ಮ ಕಾದಂಬರಿಗಳಲ್ಲಿ ಸೆರೆ ಹಿಡಿದಿದ್ದಾರೆ. ಆಧುನಿಕ ಸಂಪರ್ಕ ಸಾಧನಗಳಾದ ರೈಲ್ವೆ, ಮೋಟಾರು, ಅಂಚೆ, ಟೆಲಿಸ್ಕೋಪ್, ಟೆಲಿಫೋನ್ ಮುಂತಾದವುಗಳ ಆಗಮನ ಹತ್ತೊಂಬತ್ತನೆಯ ಶತಮಾನದ ಪ್ರಾರಂಭದಲ್ಲಿ ನಗರ ಕೇಂದ್ರಿತ ಪ್ರದೇಶಗಳಿಂದ ಗ್ರಾಮೀಣ ಪ್ರದೇಶಗಳಿಗೂ ವಿಸ್ತರಿಸುತ್ತಿರುವುದನ್ನು ದಿ ರಿಟರ್ನ್ ಆಫ್

ದಿ ನೇಟಿವ್ ಕಾದಂಬರಿಯಲ್ಲಿ ಹಾರ್ಡಿಯವರು ಉಲ್ಲೇಖಿಸಿದ್ದಾರೆ.[8] ಹಾಗೆಯೇ ಟೆಸ್ ಆಫ್ ದಿ ಡಿ ಅರ್ಬರ್‌ವಿಲ್ಲೆ ಕಾದಂಬರಿಯಲ್ಲಿ ರೈಲ್ವೆ ಮೂಲಕ ಲಂಡನ್ನಿಗೆ ಹಾಲಿನ ಉತ್ಪನ್ನಗಳನ್ನು ಟಾಲ್‌ಬೋತಿಯಿಂದ ಸಾಗಿಸುವುದನ್ನು ಮತ್ತು ಕೃಷಿಯ ಚಟುವಟಿಕೆಗಳಿಗೆ ಯಂತ್ರಗಳ ಬಳಕೆ, ಹತ್ತೊಂಬತ್ತನೆಯ ಶತಮಾನದ ಪ್ರಾರಂಭದ ಕಾಲವನ್ನು ಸೂಚಿಸುತ್ತದೆ. ಒಟ್ಟಾರೆಯಾಗಿ ಹಾರ್ಡಿಯವರು ಇಂಗ್ಲೆಂಡಿನಲ್ಲಿ ಕೈಗಾರಿಕ ಕ್ರಾಂತಿಯಿಂದ ದೇಸಿ ಬದುಕಿನ ಮೇಲೆ ಉಂಟಾದ ಪರಿಣಾಮಗಳನ್ನು ತಮ್ಮ ಎಲ್ಲಾ ಕಾದಂಬರಿಗಳಲ್ಲಿ ವಿವರಿಸಿದ್ದಾರೆ. ಹತ್ತೊಂಬತ್ತನೆಯ ಶತಮಾನ ಹಾಡಿಯನವರ ಕಥಾನಕದ ಕಾಲವಾಗಿರುವುದರಿಂದ ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ಒಳಪಡುತ್ತದೆ.

1.2 ದೇಸಿ ಅಥವಾ ದೇಸಿಯತೆ ಪದದ ಅರ್ಥ ಮತ್ತು ವ್ಯಾಖ್ಯಾನಗಳು

ಯಾವುದೇ ಕಾಲದ ಒಂದು ಶ್ರೇಷ್ಠಮಟ್ಟದ ಸಾಹಿತ್ಯ ಪ್ರಕಾರವು ಮೂಲದಲ್ಲಿ ದೇಸಿ ಪರಿಕಲ್ಪನೆಯಿಂದ ರೂಪುಗೊಂಡಿರುತ್ತದೆ. ದೇಸಿಯ ಸಮಾಜವನ್ನು, ಸಂಸ್ಕೃತಿ ಮತ್ತು ಪರಂಪರೆಗಳನ್ನು ಲೇಖಕ ತನ್ನ ಕೃತಿಯಲ್ಲಿ ಪ್ರತಿಸೃಷ್ಟಿಸುತ್ತಾನೆ. ಒಂದು ನಿರ್ದಿಷ್ಟ ಭೌಗೋಳಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸರದ ಚಿತ್ರಣ ಲೇಖಕನ ಕೃತಿಯಲ್ಲಿ ಅನಾವರಣಗೊಳ್ಳುವುದರ ಮೂಲಕ ದೇಸಿಯತೆಯ ಅಸ್ತಿತ್ವ ಉಳಿದುಕೊಂಡು ಬರುತ್ತದೆ. ಲೇಖಕನ ಕೃತಿಯಲ್ಲಿ ಅಭಿವ್ಯಕ್ತಿಗೊಳ್ಳುವ ಸಾಮಾಜಿಕ, ಭೌಗೋಳಿಕ ಪರಿಸರ, ಆ ಪರಿಸರದಲ್ಲಿ ಜೀವ ತಳೆದ ಒಂದು ಜನಾಂಗದ ಜೀವನ ವಿಧಾನ, ನಂಬಿಕೆ, ಆಚರಣೆ ಮುಂತಾದ ಜೀವನ ಸಂಬಂಧಿ ವಿವರಗಳು ದೇಸಿಯತೆಯನ್ನು ನಿರ್ದೇಶಿಸುತ್ತವೆ ದೇಸಿಯತೆ ಎನ್ನುವುದು ಒಂದು ನಿರ್ದಿಷ್ಟ ಪ್ರದೇಶದ ಜನ ಜೀವನಕ್ಕೆ ಸಂಬಂಧಿಸಿರುವಂತಹದು. ಬಾಹ್ಯಸಂವೇದನೆಗಳಿಂದ, ಪರಕೀಯ ಭಾಷೆ, ಮೌಲ್ಯಗಳಿಂದ ಮತ್ತು ಅನ್ಯ ಸಂಸ್ಕೃತಿಗಳಿಂದ ತನ್ನತನವನ್ನು ರಕ್ಷಿಸಿಕೊಳ್ಳಲು ಮತ್ತು ಅಸ್ತಿತ್ವವನ್ನು ರೂಪಿಸಿಕೊಳ್ಳಲು ರೂಪುಗೊಂಡ ಪ್ರಕ್ರಿಯೆ ದೇಸಿಯತೆಯಾಗಿದೆ. ದೇಸಿಯತೆಯು ಸ್ವಾಭಾವಿಕವಾಗಿ, ಸ್ವತಂತ್ರವಾಗಿ ಮತ್ತು ಆಳವಾಗಿ ಬೇರು ಬಿಟ್ಟ ಒಂದು ನೆಲಪರ ಸಂಸ್ಕೃತಿಯಾಗಿದೆ. ದೇಸಿಯತೆ ಎಂದರೆ ಏನು? ಯಾವುದನ್ನು ದೇಸಿಯತೆ ಎಂದು ಕರೆಯುತ್ತೇವೆ? ದೇಸಿಯತೆಯನ್ನು ನಿರೂಪಿಸುವ ಲಕ್ಷಣಗಳಾವುವು? ದೇಸಿಯತೆಯ ಮೇಲೆ ಜಾಗತೀಕರಣದ ಪ್ರಭಾವ ಎಂತಹದು? ಎಂಬ ಅನೇಕ ಪ್ರಶ್ನೆಗಳಿಗೆ ಉತ್ತರಿಸುವ ಮೂಲಕ ದೇಸಿಯತೆ ಮತ್ತು ಜಾಗತೀಕರಣ ಪದಗಳ ಅರ್ಥ ಮತ್ತು ವಿವರಣೆಯನ್ನು ತಿಳಿಯುವುದು ಮುಖ್ಯವಾಗುತ್ತದೆ.

ದೇಸಿ ಅಥವಾ ದೇಸಿಯತೆ ಎಂಬುದು ಇತ್ತೀಚೆಗೆ ಬಳಸುತ್ತಿರುವ ಪದವಲ್ಲ. ಕನ್ನಡದ ಆದಿ ಕವಿ ಪಂಪನಿಗಿಂತ ಪೂರ್ವದಲ್ಲಿ ಕವಿರಾಜಮಾರ್ಗಕಾರ ತನ್ನ ಕೃತಿಯಲ್ಲಿ ಈ ಪದವನ್ನು ಹೀಗೆ ಬಳಸಿದ್ದಾನೆ; "ದೇಸಿಯೊಳ್ ಪೊಗುವುದು, ಪೊಕ್ಕು ಮಾರ್ಗದೊಳ್ ತಳ್ವುದು".[9] ಇದರ ಅರ್ಥ ಯಾವುದೇ ಸಾಹಿತ್ಯ ಪ್ರಕಾರವು ಪ್ರಾರಂಭದಲ್ಲಿ ದೇಸಿ ಭಾಷೆಯಲ್ಲಿ ಪ್ರಾರಂಭಗೊಂಡು ನಂತರ ಮಾರ್ಗವನ್ನು ತನ್ನೊಳಗೆ ಗರ್ಭೀಕರಿಸಿಕೊಂಡು ಹೊರಹೊಮ್ಮುತ್ತದೆ. ಆದ್ದರಿಂದಲೇ ಯಾವುದೇ ಪ್ರಕಾರದ ಸಾಹಿತ್ಯ, ಕಲೆ, ಮೂಲದಲ್ಲಿ ದೇಸಿಯಾಗಿರುತದೆ ಎನ್ನಬಹುದು.

ದೇಸಿ ಅಥವಾ ದೇಸಿಯತೆ ಎಂಬ ಪದಕ್ಕೆ ಕಿಟ್ಟೆಲ್ ಕೋಶದಲ್ಲಿ ಈ ರೀತಿಯ ಅರ್ಥ ನೀಡಲಾಗಿದೆ. 'ದೇಶಿಯ" ತತ್ಸಮವಾದರೆ, 'ದೇಸಿ"ತದ್ಬವ ರೂಪವಾಗಿದೆ 'ದೇಸಿ ಎಂದರೆ belonging to a country or province or native pertaining to the dialect or language peculiar to a country.[10] ಇಲ್ಲಿ ದೇಸಿ ಎನ್ನುವುದು ಒಂದು ನಿರ್ದಿಷ್ಟ ಪ್ರದೇಶಕ್ಕೆ ಸಂಬಂಧಪಟ್ಟ ಆಡುನುಡಿಗೆ ಅಥವಾ ನಾಡಭಾಷೆಗೆ ಸಂಬಂದಧಿಸಿರುವಂತಹದು ಎಂದು ಹೇಳಲಾಗಿದೆ.

ದೇಸಿಯತೆ ಎಂಬ ಪದವು ಆಂಗ್ಲ ಭಾಷೆಯ 'Native' ಪದದ ಸಮಾನಾರ್ಥವಾಗಿದೆ. ಇದು ಲ್ಯಾಟಿನ್ ಭಾಷೆಯ 'Nasci' ಎಂಬ ಪದದಿಂದ ಬಂದಿದ್ದು, ಜನಪದ, ಜನ, ಜನನಿ, ಜನಕ, ಜಾತಿ, ಜಾತ ಮುಂತಾದ ಅರ್ಥಗಳನ್ನು ಒಳಗೊಂಡಿದೆ.[11]

'Native' ಎಂಬ ಪದಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ನಿಘಂಟಿನಲ್ಲಿ 'ಸ್ಥಳೀಯ, ಸ್ಥಳವಂದಿಗ, ಒಂದು ಗೊತ್ತಾದ ಸ್ಥಳದಲ್ಲಿ ಹುಟ್ಟಿರುವವನು, ನೆಲೆಸಿದ, ದೇಸಿಯ, ನಾಡಿಗ, ಹೊರಗಿನಿಂದ ಬಂದು ನೆಲೆಸಿದವರಲ್ಲದ, ಮುಂತಾದ ಅರ್ಥಗಳನ್ನು ನೀಡಲಾಗಿದೆ. 'Nativism' ಎಂದರೆ ಸಹಜ ಜ್ಞಾನ ಸಿದ್ಧಾಂತ, ಮನಸ್ಸು ಜ್ಞಾನದ ಮೂಲಾಂಶಗಳನ್ನು ಬಾಹ್ಯ ಸಂವೇದನೆಯಿಂದ ಪಡೆದುಕೊಳ್ಳದೆ ಸ್ವತಃ ಸಹಜವಾಗಿ ಪಡೆದಿರುವುದೆಂಬ ವಾದ ಸಿದ್ಧಾಂತ ಎಂದು, ಅದೇ ನಿಘಂಟಿನಲ್ಲಿ ನೀಡಲಾಗಿದೆ".[12] ಈ ವಿವರಣೆಯ ಪ್ರಕಾರ ದೇಸಿಯತೆ ಎನ್ನುವುದು ಒಂದು ನಿರ್ದಿಷ್ಟ ಪ್ರದೇಶದಲ್ಲಿ ಹುಟ್ಟಿ ಬೆಳೆದು ಬದುಕು ಕಟ್ಟಿಕೊಂಡ ಜನಸಮುದಾಯದ ಜೀವನ ವಿಧಾನಕ್ಕೆ ಮತ್ತು ಬಾಹ್ಯ ಸಂವೇದನೆಗಳಿಂದ, ಅನ್ಯ ಸಂಸ್ಕೃತಿಗಳಿಂದ ದೂರ ಉಳಿದ ಜೀವನ ಸಂಸ್ಕೃತಿಗೆ ಸಂಬಂಧಿಸಿರುವಂತಹದ್ದು ಎಂದು ತಿಳಿಯಬಹುದು.

'ದೇಸಿ' ಎನ್ನುವುದು ಮಾರ್ಗವಲ್ಲದ್ದು, ನಾಡಾಡಿಯಾದುದು ಮತ್ತು ಆಧುನಿಕವಲ್ಲದ್ದು. 'ದೇಶಿ' ಎನ್ನುವುದು ಮೂಲತಃ ಸಂಸ್ಕೃತದ ಪದ. ಅದರ ತದ್ಭವ ರೂಪ 'ದೇಸಿ'ಯಾಗಿದೆ. 'ದೇಶಿ' ಎಂದರೆ ಒಂದು ದೇಶಕ್ಕೆ ಸಂಬಂಧಿಸಿದುದಾಗಿದೆ. ಆಯಾ ದೇಶದಲ್ಲಿ ಮಾತ್ರ ವ್ಯವಹಾರದಲ್ಲಿರುವ ಉಡುಪು, ಅಲಂಕಾರ, ಆಚಾರ–ವಿಚಾರ, ಮೊದಲಾದವುಗಳ ವಿಶಿಷ್ಟ ರೀತಿ–ಬಗೆ ಎಂಬರ್ಥವನ್ನು ನೀಡುತ್ತದೆ. 'ದೇಸಿ' ಎಂಬುದಕ್ಕೆ ಒಂದು ದೇಶದಲ್ಲಿ ಪರಂಪರಗನುಗತವಾಗಿ ಬಂದಿರುವ ಸಂಸ್ಕೃತಿ, ಆಚಾರ–ವಿಚಾರ, ವ್ಯವಹಾರ ಮೊದಲಾದವು ಎಂಬರ್ಥವನ್ನು ಕನ್ನಡ–ಕನ್ನಡ ಶಬ್ದಕೋಶದಲ್ಲಿ ನೀಡಲಾಗಿದೆ.[13]

ಜಿ.ಎನ್. ದೇವಿಯವರ ಪ್ರಕಾರ 'ದೇಸಿ' ಮತ್ತು 'ದೇಶಿ' ಎರಡೂ ಒಂದೇ ಪದದ ಎರಡು ಮುಖಗಳು. 'ದೇಶಿ' ಎನ್ನುವುದು ಸಂಸ್ಕೃತದಿಂದ ಬಂದು 'ದೇಶ' ರಾಷ್ಟ್ರ ಎಂಬ ಅರ್ಥವನ್ನು ನೀಡುತ್ತದೆ. ಆಂಗ್ಲ ಪದದ 'Nativism'ಗೆ ಸಮಾನವಾಗಿ 'ದೇಶಿವಾದ' ಪ್ರಚಲಿತದಲ್ಲಿದೆ ಎಂದು ಹೇಳುತ್ತಾರೆ.[14] ಡಾ. ರಾಜೇಂದ್ರ ಚೆನ್ನಿಯವರು ತಮ್ಮ "ದೇಶಿವಾದ" ಕೃತಿಯಲ್ಲಿ 'ದೇಸಿ' ಮತ್ತು 'ದೇಶೀ' ಇವೆರಡೂ 'ದೇಶ್ಯಾ' ಎನ್ನುವ ಪದದಿಂದಲೇ ಹುಟ್ಟಿವೆ, ಆದರೆ 'ದೇಸಿ' ಎಂಬುದು ಮೂಲತಃ ಅಭಿವ್ಯಕ್ತಿಗೆ ಮತ್ತು ಭಾಷೆಯ ಬಳಕೆಗೆ ಸಂಬಂಧಪಟ್ಟುದಾಗಿದೆ. ದೇಸಿಯ ಬಳಕೆಯ ಹಿಂದೆ ದೇಶಿವಾದದ ಒಲವು ಕಂಡುಬರುತ್ತದೆಯಾದರೂ ಅವೆರಡೂ ಒಂದೇ ಅಲ್ಲ. ಮುಖ್ಯವಾಗಿ ದೇಶಿವಾದವೆಂದರೆ ಸಾಹಿತ್ಯ ಸೃಷ್ಟಿ ಮತ್ತು ವಿಮರ್ಶೆಯ ಧೋರಣೆಗಳನ್ನು ಪ್ರಭಾವಿಸುವ ಒಂದು ಪ್ರವೃತ್ತಿ" ಎನ್ನುತ್ತಾರೆ.[15]

ಓ. ಎಲ್. ನಾಗಭೂಷಣಸ್ವಾಮಿಯವರು; "ದೇಸಿ, ದೇಸಿಯತೆ ಎಂಬುದು ಕೇವಲ ಸಾಹಿತ್ಯಕ್ಕೆ ಸಂಬಂಧಿಸಿದ ಮಾತುಗಳು ಮಾತ್ರವಲ್ಲ, ದೇಸಿ ಎಂಬುದು ಒಂದು ಮನೋಧರ್ಮಕ್ಕೆ, ಬದುಕನ್ನು ಅರಿಯುವ ರೀತಿಗೆ ಸಂಬಂಧಪಟ್ಟುದು" ಎನ್ನುತ್ತಾರೆ.[16] ಮತ್ತೊಂದು ವಿವರಣೆಯೆಂದರೆ "ದೇಸಿಯತೆ ಎನ್ನುವುದು ಪ್ರಾದೇಶಿಕ ಸತ್ವದಿಂದ ರೂಪುಗೊಂಡ, ರಾಷ್ಟ್ರೀಯ ಸಂಸ್ಕೃತಿಗಳೆಂದು ಕರೆಸಿಕೊಂಡ ಸಂಸ್ಕೃತಿಗಿಂತ ಭಿನ್ನವಾದ ಸಂಸ್ಕೃತಿಯನ್ನು ದೇಸಿ ಸಂಸ್ಕೃತಿ'ಎಂದು ಎಂ. ಜಿ. ಚಂದ್ರಶೇಖರಯ್ಯನವರು ಗುರುತಿಸುತ್ತಾರೆ. ಮುಂದುವರೆದು, ಕುವೆಂಪುರವರನ್ನು ದೇಶಿವಾದದ ವಕ್ತಾರರೆಂದು ಕರೆಯುತ್ತಾರೆ.[17]

ಗಿರಡ್ಡಿ ಗೋವಿಂದರಾಜ ಅವರ ವ್ಯಾಖ್ಯಾನ ಇಲ್ಲಿ ಪ್ರಸ್ತುತವೆನಿಸುತ್ತದೆ. ಅವರ ಪ್ರಕಾರ "ದೇಶೀವಾದವೆಂದರೆ, ಲೇಖಕ ತನ್ನ ಸಂಸ್ಕೃತಿ, ಪರಂಪರೆಗಳನ್ನು ಆಳವಾಗಿ ಅಭ್ಯಾಸಮಾಡಿ, ಅವುಗಳ ಗುಣ–ದೋಷಗಳನ್ನು ಗುರುತಿಸಿ, ಅಲ್ಲಿಯ ಉಪಯುಕ್ತವಾದ ಅಂಶಗಳೊಂದಿಗೆ

ಅಗತ್ಯವಾದ ಹೊರಗಿನ ಹೊಸ ಅಂಶಗಳನ್ನು ಒಳಗೊಳ್ಳುವುದು; ನಮ್ಮ ಪರಂಪರೆಯಲ್ಲಿಯ ಜೀವಂತವೂ ಅರ್ಥಪೂರ್ಣವೂ ಆದ ನೆಲೆಗಳನ್ನು ಉಳಿಸಿಕೊಂಡು, ಅವುಗಳನ್ನು ಇಂದಿನ ಅಗತ್ಯಗಳಿಗೆ ತಕ್ಕಂತೆ ಹೊಸ ರೀತಿಯಲ್ಲಿ, ಹೊಸ ಅರ್ಥಕ್ಕಾಗಿ ಬಳಸಿ, ಬೆಳೆಸಿ ಭಾರತೀಯವಾಗಿ ವಿಶಿಷ್ಟವಾದ ಸಾಹಿತ್ಯ ಪರಂಪರೆಯೊಂದನ್ನು ನಿರ್ಮಿಸುವುದು."[18]

'ದೇಸಿಯತೆ''ಎಂಬ ಪದಕ್ಕೆ ಇದಮಿತ್ಥಂ ಎಂಬಂತೆ ಖಚಿತವಾದ ವ್ಯಾಖ್ಯೆ ನೀಡುವುದು ಕಷ್ಟವಾದರೂ ಅನೇಕ ವಿದ್ವಾಂಸರು ಅದಕ್ಕೆ ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯೆಗಳನ್ನು ನೀಡಿದ್ದಾರೆ. ಮಾನವಶಾಸ್ತ್ರಜ್ಞರ ಪ್ರಕಾರ "ದೇಸಿಯತೆ ಎಂಬುದು ವಾಸ್ತವ ಸಮಾಜದ ಅಥವಾ ಜೀವಂತ ಸಮಾಜದ ಬದುಕಿನ ಚಿತ್ರಣ. ದೇಸಿಯತೆ ಎಂದರೆ ಯಾವುದು ಶ್ರೇಷ್ಠವಾಗಿದ್ದು ಮನುಷ್ಯನ ಬದುಕನ್ನು ನೈತಿಕ ನೆಲೆಯಲ್ಲಿ ನಿರ್ಬಂಧಿಸುತ್ತಿತ್ತೋ ಅದೇ ದೇಸಿಯತೆಯಾಗಿದೆ".[19]

ಡಾ. ಪರಾಂಜಪೆಯವರ ಪ್ರಕಾರ "ದೇಸಿಯತೆ ಎಂಬುದು ಸಂಪ್ರದಾಯದ ದೊಡ್ಡ ಶಕ್ತಿ, ದೇಸಿಯತೆ ರಾಷ್ಟ್ರೀಯ ವಾದಕ್ಕೆ ಮುನ್ನುಡಿಯಾಗಿ ಕಾರ್ಯನಿರ್ವಹಿಸುವಂತಹದ್ದು."[20] ಹೀಗೆ ಯಾವುದೇ ಒಂದು ಕಲೆ, ಸಾಹಿತ್ಯ ಮೂಲಭೂತವಾಗಿ ದೇಸಿಯಾಗಿರುತ್ತದೆ. ಸ್ಥಳೀಯವಾದುದನ್ನು ಅಥವಾ ಸ್ಥಳೀಯತೆಯನ್ನು ದೇಸೀಕರಣವೆಂದು ವ್ಯಾಖ್ಯಾನಿಸುವ ಪ್ರಯತ್ನವು ನಡೆದಿದೆ. ದಿನೇ ದಿನೇ ಕಿರಿದಾಗುತ್ತಿರುವ ವಿಶ್ವದಲ್ಲಿ ಹಾಗೂ ಎಲ್ಲವೂ ಅಂತಾರಾಷ್ಟ್ರೀಕರಣವಾಗುತ್ತಿರುವ ಸಂದರ್ಭದಲ್ಲಿ ಸ್ಥಳೀಯತೆ ಅಥವಾ ದೇಸಿಯತೆ ಅರ್ಥ ಹುಡುಕಿಕೊಳ್ಳುವ ಅನಿವಾರ್ಯತೆ ಎದುರಾಗಿರುವುದು ಸ್ಪಷ್ಟವಾಗುತ್ತದೆ.

'ಸ್ಥಳೀಯತೆ' ವ್ಯಕ್ತಿಯೋರ್ವ ಮೂಲತಃ ಸ್ಥಳೀಯ ವ್ಯವಸ್ಥೆ ಅಥವಾ ಸಮುದಾಯದೊಡನೆ ಹೊಂದಿರುವ ಅಂತರ್ ಸಂಬಂಧ, ಸ್ಥಳೀಯ ವ್ಯವಸ್ಥೆಯಲ್ಲಿ ಅಧಿಕಾರ, ನಾಯಕತ್ವ ಹಾಗೂ ಗೌರವಗಳನ್ನು ಸಂಪಾದಿಸಲು ನಡೆಸಿದ ಹೋರಾಟ ಇತ್ಯಾದಿಗಳಿಗೆ ಸಂಬಂಧಿಸಿದ್ದು. ಒಂದು ವ್ಯಕ್ತಿಯ ಮನೆತನದ, ಊರಿನ, ಜನಾಂಗಗಳ, ಪ್ರದೇಶಗಳ ಏಳು–ಬೀಳು, ಸೋಲು–ಗೆಲುವು, ವಿಶಿಷ್ಟತೆಗಳು ಜೀವಂತ ರೇಖೆಗಳಾಗಿರುತ್ತವೆ. ಇವು ಸ್ಥಳೀಯ ಚರಿತ್ರೆ ಎನಿಸಿಕೊಳ್ಳುತ್ತವೆ. ಸಾಮಾನ್ಯರ ಒಲವು, ನಲಿವು, ದುಃಖ, ದುಮ್ಮಾನ, ಸಾಧನೆಗಳು, ಸ್ಥಳೀಯವಾದ ಘಟನೆಗಳು, ಆಂದೋಲನಗಳು, ಅನಿಸಿಕೆಗಳು, ಕ್ರಿಯೆಗಳು, ಕಲ್ಪನೆಗಳು, ಸ್ಥಳೀಯವಾದ ಎಲ್ಲ ಆಲೋಚನೆಗಳು ದಾಖಲಾಗುವುದು ಸ್ಥಳೀಯ ಚರಿತ್ರೆಯಲ್ಲಿ ಹಾಗೂ ಜಗತ್ತಿನ ಎಲ್ಲದರ ಅಸ್ತಿತ್ವದ ನೆಲೆಗಳನ್ನು ಸೂಕ್ಷ್ಮವಾಗಿ ನಿರ್ಧರಿಸಲು ಇದು ಸಹಾಯವಾಗುತ್ತದೆ.[21]

ಸ್ಥಳೀಯತೆಯ ಅನನ್ಯತೆಯನ್ನು ಅದರ ವಿವಿಧ ಆಯಾಮಗಳನ್ನು ಪರಿಭಾಪಿಸುವ, ಪರಾಮರ್ಶಿಸುವ ಅಗತ್ಯ ಎಂದಿಗಿಂತ ಇಂದು ಹೆಚ್ಚಾಗಿದೆ. ದೇಸಿತನದ ಹುಡುಕಾಟ ನಮ್ಮತನದ ಹುಡುಕಾಟವಾಗಿದೆ. ಮನುಷ್ಯ ಒಂದು ಸ್ಥಳದಲ್ಲಿ ಊರಿಕೊಂಡು, ಊರು ಮಾಡಿಕೊಂಡು ಪರಸ್ಪರ ಸಂಪರ್ಕಕ್ಕೆ ಒಂದು ಭಾಷೆ ಮಾಡಿಕೊಂಡು ಆ ಊರಿನ ಗಾಳಿ, ಬಿಸಿಲು, ಪ್ರಾಣಿ ಮತ್ತು ಮನುಷ್ಯ ಪರಿಸರ ಎಲ್ಲವುಗಳೊಂದಿಗೆ ನಿಕಟವಾದ ಆತ್ಮೀಯ ಸಂಬಂಧ ಇಟ್ಟುಕೊಂಡು ಬದುಕನ್ನು ಹೊರಗಿನ ಯಾವ ಪ್ರಭಾವಕ್ಕೂ ಒಳಗಾಗದೆ ರೂಪಿಸಿಕೊಂಡಾಗ ದೇಸಿಗನಾಗುತ್ತಾನೆ.[22]

ಜಾಗತೀಕರಣದ ಇಂದಿನ ದಿನಗಳಲ್ಲಿ ಹಲವಾರು ದೇಶಗಳಲ್ಲಿ ವ್ಯಾಪಕವಾಗಿ ಸ್ಥಳೀಯ ಚರಿತ್ರೆಯ ಅಧ್ಯಯನ ನಡೆಯತೊಡಗಿದೆ. ಅದು ಮುಖ್ಯವೂ ಆಗಿದೆ, ಏಕೆಂದರೆ ಮಾನವ ಜನಾಂಗದ ಸಮಗ್ರ ಅಧ್ಯಯನಕ್ಕೆ ಇದು ಅನಿವಾರ್ಯ ಪ್ರಕ್ರಿಯೆಯಾಗಿದೆ ಎನ್ನಬಹುದು. ಸ್ಥಳೀಯ ಅಥವಾ ಪ್ರಾದೇಶಿಕ ಪ್ರಜ್ಞೆ (Regional Consciousness) ಸ್ಥಳೀಯವಾದುದನ್ನೆಲ್ಲಾ ಒಳಗೊಳ್ಳುವುದೇ ಸ್ಥಳೀಯ ಚರಿತ್ರೆ ಎನಿಸುತ್ತದೆ. ದೇಸಿಯತೆಯು ತನ್ನಷ್ಟಕ್ಕೆ ತಾನೆ ಅಭಿವ್ಯಕ್ತಗೊಳ್ಳುವ ಒಂದು ನಿರಂತರವಾದ ಪ್ರಕ್ರಿಯೆ, ರಾಷ್ಟ್ರೀಯತೆ ಮತ್ತು ಅಂತಾರಾಷ್ಟ್ರೀಯ ಪ್ರಕ್ರಿಯೆಯಂತೆ ಸದಾ ಚಲನಶೀಲವಾಗಿರುವಂತದ್ದು. ಭಾಷೆಯಲ್ಲಿ ಸಮೃದ್ಧವಾದ, ಸಾಂಪ್ರದಾಯಿಕವಾದ ದೇಸಿಯತೆಯನ್ನು ಇನ್ನೂ ಜೀವಂತವಾಗಿರಿಸಿರುವುದು ಅನಕ್ಷರಸ್ಥ ದೇಸಿಯ ಜನಸಮುದಾಯ. ಮಣ್ಣಿನ ಗಾಢ ಸ್ಪರ್ಶದಿಂದ ಪಡೆದ ಅಪಾರ ಅನುಭವದ ಮೂಲಕ ದೇಸಿ ಸಂಸ್ಕೃತಿ ಹೊರಹೊಮ್ಮುತ್ತದೆ.

ಹೀಗೆ ದೇಸಿಯತೆ ಮತ್ತು ದೇಸಿ ವಿಚಾರಗಳು ಪ್ರತಿಯೊಬ್ಬ ಲೇಖಕನ ಕೃತಿಗಳಲ್ಲಿ ಕಂಡುಬರುತ್ತದೆ. ಯಾವುದೇ ಲೇಖಕ ತಾನು ಬದುಕಿದ ಕಾಲಕ್ಕೆ ಕನ್ನಡಿ ಹಿಡಿಯುವುದು ಸರ್ವೇಸಾಮಾನ್ಯ. ಅದು ಆದಿಕವಿ ಪಂಪನಿಂದ ಮೊದಲ್ಗೊಂಡು ಜಾಗತೀಕರಣದ ಈವತ್ತಿನ ಲೇಖಕರಲ್ಲೂ ಕಂಡುಬರುತ್ತಿರುವುದು ಸರ್ವರಿಗೂ ತಿಳಿದ ವಿಚಾರವಾಗಿದೆ. ಹೀಗೆ ದೇಸಿಯತೆ ಎಂಬುದು ಒಂದು ಸಿದ್ಧಾಂತವಾಗಿ ಪ್ರತ್ಯೇಕವಾಗಿ ಕಾಣಿಸಿಕೊಳ್ಳದಿದ್ದರೂ ಕೃತಿಯೊಳಗೆ ಅದು ಸಹಜವಾಗಿ ಅಂತರ್‌ನಿಹಿತವಾಗಿರುತ್ತದೆ, ಅಂತೇ ಮಹತ್ವ ಪೂರ್ಣವಾದ ರೀತಿಯಲ್ಲಿ ಕೆಲಸಗಳನ್ನು ಮಾಡಿದೆ. ದೇಸಿಯತೆಯನ್ನು ಮುಖ್ಯವಾಗಿ ಭಾಷೆಯಲ್ಲಿ, ಸಂಸ್ಕೃತಿಯಲ್ಲಿ, ಆಚರಣೆಗಳಲ್ಲಿ, ಆಹಾರ, ಉಡುಗೆ–ತೊಡುಗೆ, ವೃತ್ತಿ, ಬೇಟೆ ಮುಂತಾದ ಅಂಶಗಳಲ್ಲಿ ಗುರುತಿಸಬಹುದಾಗಿದೆ.

ದೇಸಿಯತೆಯನ್ನು ಪ್ರಮುಖವಾಗಿ ಎರಡು ಅಂಶಗಳಲ್ಲಿ ಕಾಣಬಹುದು. ಮೊದಲನೆಯದಾಗಿ ಭೌಗೋಳಿಕ ಪರಿಸರದ ನೈಜ ನಿರೂಪಣೆ ಅಥವಾ ಚಿತ್ರಣ ದೇಸಿಯತೆಗೆ

ತಳಹದಿಯಾಗಿದೆ. ಆಯಾ ಪ್ರದೇಶದ ಜನಜೀವನದ ಲಕ್ಷಣಗಳು, ವೈಶಿಷ್ಟ್ಯಗಳು, ಆ ಜನ ಸಮುದಾಯವನ್ನು ಸುತ್ತುವರಿದಿರುವ ಆ ಜನರ ಕಾರ್ಯಚಟುವಟಿಕೆಗಳು ಹಾಗೂ ಆ ಜನರ ಬದುಕಿನ ಆಗು-ಹೋಗುಗಳ ಮೇಲೆ ತನ್ನ ಪ್ರಭಾವವನ್ನು ಬೀರಿ ಅವನ್ನು ರೂಪಿಸುವ ಶಕ್ತಿಯೆಂದರೆ ಭೌಗೋಳಿಕ ಪರಿಸರವೆನ್ನಬಹುದು. ಎರಡನೆಯದಾಗಿ ದೇಸಿಯತೆಯಲ್ಲಿ ಬರುವ ಜನಜೀವನ ಎಲ್ಲ ಮಾನವರ ಮೂಲ ಆಸೆ ಆಕಾಂಕ್ಷೆಗಳು, ಸುಖ ದುಃಖಗಳು ಒಂದೇ ಆದರೂ ಅವು ಅಭಿವ್ಯಕ್ತಗೊಳ್ಳುವ ರೀತಿಗಳು, ರೂಪಗಳು ಪ್ರದೇಶದಿಂದ ಪ್ರದೇಶಕ್ಕೆ ಬೇರೆ ಬೇರೆಯಾಗಿರುತ್ತವೆ. ಇದು ಸಹಜವೇ ಎನ್ನಬಹುದು ಜನರು ತೋರುವ ಸ್ನೇಹ ಸೌಹಾರ್ದಗಳು, ಪರಸ್ಪರ ಸಂಬಂಧಗಳು, ಅನುಕಂಪ, ಕ್ರೌರ್ಯ, ಆಸೆ, ನಿರಾಸೆಗಳು, ಸಾಮಾಜಿಕ ರೀತಿರಿವಾಜುಗಳು, ನಿಲುವುಗಳು ಅವರು ತಮ್ಮ ಜೀವಿತದ ಅವಧಿಯಲ್ಲಿ ಎದುರುಗೊಳ್ಳುವ ಧಾರ್ಮಿಕ, ನೈತಿಕ, ಮಾನವೀಯ ಮತ್ತು ಆರ್ಥಿಕ ಪರಿಸ್ಥಿತಿಗಳು ಪ್ರಾದೇಶಿಕ ಅಥವಾ ದೇಸಿಯ ಅಂಶಗಳಿಂದ ರೂಪುಗೊಂಡಿರುತ್ತದೆ ಎನ್ನಬಹುದು.

ದೇಸಿಯತೆಯನ್ನು ನಿರ್ದೇಶಿಸುವ ಮತ್ತೊಂದು ಮುಖ್ಯವಾದ ಅಂಶವೆಂದರೆ ಭಾಷೆಗೆ ಸಂಬಂಧಪಟ್ಟುದು. ದೇಸಿಯ ಸಂಸ್ಕೃತಿಯನ್ನು ಅಭಿವ್ಯಕ್ತಿಪಡಿಸುವ ಪ್ರಮುಖವಾದ ಮಾಧ್ಯಮವೆಂದರೆ ದೇಸಿ ಭಾಷೆ ಅಥವಾ ಗ್ರಾಮೀಣ ಭಾಷೆ ಅಥವಾ ಆಡು ಭಾಷೆ ಎನ್ನಬಹುದು. 'ಒಂದೇ ಭಾಷೆಯ ಹಲವು ಉಪಭಾಷೆಗಳು ಎಲ್ಲಾ ಕಡೆಯು ಕಂಡು ಬರುತ್ತದೆ. ಮೂಲತಃ ಇಡೀ ನಾಡಿನ ನುಡಿ ಒಂದೇ ಆಗಿದ್ದರೂ ಅದರ ಅನೇಕ ಪದಗಳ ಉಚ್ಚಾರಣೆಯಲ್ಲಿ, ಸ್ವರ ವಿನ್ಯಾಸದಲ್ಲಿ, ವಾಕ್ಯರಚನೆಯಲ್ಲಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಅಲ್ಪಸ್ವಲ್ಪ ವ್ಯತ್ಯಾಸ ಇದ್ದೇ ಇರುತ್ತದೆ. ಅದರಲ್ಲೂ ಹಳ್ಳಿಗಾಡಿನ ಜೀವನವನ್ನು ಕುರಿತು ರಚಿತವಾಗಿರುವ ಗ್ರಂಥಗಳಲ್ಲಿ ಗ್ರಾಮೀಣ ಭಾಷೆ, ಅನಿವಾರ್ಯ ನೈಸರ್ಗಿಕ ಆವರಣದ ಕಲ್ಪನೆ, ಜನ ಜೀವನದ ವಾಸ್ತವ ಚಿತ್ರಣ, ಇವುಗಳಷ್ಟೇ ಪರಿಣಾಮಕಾರಿಯಾಗಿ ಕೃತಿಗೆ ಗಟ್ಟಿನೆಲದ ಸಂಪರ್ಕವನ್ನು ಕೊಡುವ ಸಾಧನವೆಂದರೆ ಗ್ರಾಮೀಣ ಭಾಷೆ,'[23] ಇದನ್ನು ಸ್ಥಳೀಯರಾಡುವ ಮಣ್ಣಿನ ಭಾಷೆ ಎನ್ನಬಹುದು, ಇದುವೇ ದೇಸಿ ಭಾಷೆ. ಕುವೆಂಪುರವರ ಕಾದಂಬರಿಗಳಲ್ಲಿ ಬಳಸಿರುವ ಮಲೆನಾಡಿನ ಮತ್ತು ಹಾರ್ಡಿಯವರ ಕಾದಂಬರಿಗಳಲ್ಲಿ ಬಳಕೆಯಾಗಿರುವ ವೆಸೆಕ್ಸ್ ಜಿಲ್ಲೆಯ ಎಗ್ಡನ್ ಹೀತ್‌ನ ಭಾಷೆ ಆಯಾ ಪ್ರದೇಶಗಳ ದೇಸಿಯ ಬದುಕಿನ ಚಿತ್ರಣವನ್ನು ಸಮರ್ಥವಾಗಿ ಅನಾವರಣಗೊಳಿಸಿರುವುದನ್ನು ಕಾಣಬಹುದು.

ದೇಸಿಭಾಷೆ ದೇಸಿಯತೆಯ ಪ್ರತೀಕವಾಗಿರುವಂತೆಯೇ ಯಾವುದೇ ಪ್ರದೇಶದ ಕಾಲಮಾನ, ಇತಿಹಾಸ, ಪರಂಪರೆಯನ್ನು ಸೂಕ್ಷ್ಮವಾಗಿ ಪರಿಚಯ ಮಾಡಿಕೊಡುತ್ತದೆ. ಸಾಹಿತ್ಯ ಕೃತಿಯಲ್ಲಿ

ಬಳಸಿರುವ ಭಾಷೆಯಿಂದಲೇ ಒಂದು ಪ್ರದೇಶದ ದೇಸಿಯ ಸಂಸ್ಕೃತಿಯನ್ನು ಪರಿಚಯ ಮಾಡಿಕೊಳ್ಳಬಹುದು. ಸಾಮಾಜಿಕ ಸಾಂಸ್ಕೃತಿಕ ಹಿನ್ನಲೆ, ಮಾನವೀಯ ಸಂಬಂಧಗಳು, ಮಾನವ ಮತ್ತು ಪ್ರಕೃತಿಯ ಜೊತೆಗಿನ ಸಂಬಂಧಗಳು ದೇಸಿ ಭಾಷೆಯ ಮೂಲಕ ಅಭಿವ್ಯಕ್ತಿಗೊಳ್ಳುವುದನ್ನು ಕಾಣಬಹುದು. ಆದ್ದರಿಂದಲೇ 'ಮಹಾಭಾರತ'ವನ್ನು ಓದುವಾಗ ಗತಕಾಲದ ಭಾರತೀಯ ಸಂಸ್ಕೃತಿಯನ್ನು, ಯೂರಿಪಿಡಿಸನ 'ಈಲಿಯಡ್'' ಮಹಾಕಾವ್ಯವನ್ನು ಓದುವಾಗ ಗ್ರೀಕ್ ಸಂಸ್ಕೃತಿಯ ಪರಿಚಯದೊಂದಿಗೆ ಆ ಕಾಲದ ದೇಸಿಯ ಬದುಕಿನ ವರ್ಣನೆಯನ್ನು ಕಾಣಬಹುದು. ಹೀಗೆ ಒಂದು ಭಾಷೆ ಎನ್ನುವುದು ಕಾಲ, ದೇಶ, ಸಂಸ್ಕೃತಿ, ಪರಂಪರೆಯನ್ನು ಅಭಿವ್ಯಕ್ತಗೊಳಿಸುವ ಮತ್ತು ದೇಸಿಯತೆಯನ್ನು ಗುರುತಿಸುವ ಸಾಧನವಾಗಿದೆ.[24]

ಒಂದು ಜೀವನ ವಿಧಾನ, ಭೂತಕಾಲದ ಪ್ರೇರಣೆಗಳು, ಹಿಂದಿನವರ ಅಭಿಪ್ರಾಯಗಳು, ಜೀವನ ಮೌಲ್ಯಗಳು, ಮಾನವೀಯ, ಅಂತಃಕರಣೀಯ ಸಂಬಂಧಗಳು ವರ್ತಮಾನದ ಮೂಲಕ ಭವಿಷ್ಯತ್ತವನ್ನು ನಿರ್ದೇಶಿಸುವ ಅಂಶಗಳನ್ನು ದೇಸಿಯ ಸಂಸ್ಕೃತಿಯ ಸಂಕೇತಗಳೆಂದು ಪರಿಗಣಿಸಲಾಗಿದೆ. ಜೀವನ ವಿಧಾನದ ಜೊತೆಗೆ ಸಾಮಾಜಿಕ ಭಾವನಾತ್ಮಕ ಪ್ರತಿಕ್ರಿಯೆಗಳನ್ನು ದೇಸಿಯತೆಯಲ್ಲಿ ಕಾಣಬಹುದು.[25]

ವಿಶಾಲ ದೃಷ್ಟಿಯಿಂದ ನೋಡಿದಾಗ ದೇಸಿಯತೆಯು ಪ್ರಾದೇಶಿಕತೆಯನ್ನು, ಗ್ರಾಮೀಣ ಅಥವಾ ಹಳ್ಳಿಗಾಡಿನ ಜೀವನ ಚಿತ್ರಣವನ್ನು ಪ್ರತಿಬಿಂಬಿಸುವ ಸಂಸ್ಕೃತಿ ಎನ್ನಬಹುದು. ಇಂತಹ ದೇಸಿಯ ಸಂಸ್ಕೃತಿಯು ಅನೇಕ ಪ್ರಾದೇಶಿಕ ಕೃತಿಗಳಲ್ಲಿ ಅಭಿವ್ಯಕ್ತಗೊಂಡಿರುವುದನ್ನು ಕಾಣುತ್ತೇವೆ. ಯು. ಆರ್. ಅನಂತಮೂರ್ತಿಯವರ 'ಸಂಸ್ಕಾರ', 'ಅವಸ್ಥೆ' ಮತ್ತು 'ಭಾರತೀಪುರ', ಶಿವರಾಮಕಾರಂತರ 'ಮರಳಿಮಣ್ಣಿಗೆ', 'ಹಳ್ಳಿಯ ಹತ್ತು ಸಮಸ್ತರು', 'ಚೋಮನ ದುಡಿ', ರಾವ್‌ಬಹದ್ದೂರರ 'ಗ್ರಾಮಾಯಣ', ಆಲನಹಳ್ಳಿ ಶ್ರೀಕೃಷ್ಣ ಅವರ ಕಾದಂಬರಿಗಳು, ದೇವನೂರು ಮಹಾದೇವರ 'ಒಡಲಾಳ' ಮುಂತಾದ ಕಾದಂಬರಿಗಳಲ್ಲಿ ದೇಸಿಯ ಸಂಸ್ಕೃತಿ ಮೂಡಿಬಂದಿರುವುದನ್ನು ಕಾಣಬಹುದು.

ವಾಸ್ತವವಾಗಿ ಪ್ರಗತಿಪರ ಸಾಹಿತ್ಯಗಳ ಪರಿಚಯವಿರುವವರೆಲ್ಲರೂ ದೇಸಿಯ ಸಂಸ್ಕೃತಿಯನ್ನು ತಮ್ಮ ಕೃತಿಗಳಲ್ಲಿ ಬಳಸಿಕೊಂಡಿರುವುದನ್ನು ಕಾಣಬಹುದು. ಜನಸಾಮಾನ್ಯರು ತಮ್ಮ ದೈನಂದಿನ ಬದುಕಿನಲ್ಲಿ ಬಳಸುವ ಆಡುನುಡಿಗಳನ್ನು ತಮ್ಮ ಕೃತಿಗಳಲ್ಲಿ ಬಳಸುವ ಮೂಲಕ ಒಂದು ಉತ್ಕೃಷ್ಟ ಸಾಹಿತ್ಯ ಸೃಷ್ಟಿಗೆ ಕಾರಣವಾಗುತ್ತಾರೆ. ಡಿ. ಹೆಚ್. ಲಾರೆನ್ಸ್ ಇಂಗ್ಲೆಂಡಿನ 19ನೇ ಶತಮಾನದಲ್ಲಿ ಲಾಂಕಷೈರ್ ಪ್ರಾಂತ್ಯದ ಕಲ್ಲಿದ್ದಲು ಗಣಿಗಳಲ್ಲಿ ಕೆಲಸ ಮಾಡುತ್ತಿದ್ದವರ ಶೋಚನೀಯ ಬದುಕನ್ನು,

ಅವರ ವಾಸ್ತವಿಕ ಜೀವನ ಚಿತ್ರಣವನ್ನು ತನ್ನ 'ಸನ್ಸ್ ಅಂಡ್ ಲವರ್ಸ್' ಕಾದಂಬರಿಯಲ್ಲಿ ವರ್ಣಿಸಿದ್ದಾರೆ. ಹಾಗೆಯೇ ಅಮೇರಿಕಾದ ಮಾರ್ಕ್‌ಟ್ವೈನ್ ತನ್ನ 'ಹಕಲ್ ಬೆರಿ ಫಿನ್' ಕೃತಿಯಲ್ಲಿ ಮಿಸಿಸಿಪ್ಪಿ ನದಿಯ ಪ್ರಾಕೃತಿಕ ದೃಶ್ಯಗಳನ್ನು ಮತ್ತು ನದಿಯ ಎರಡೂ ಕಡೆಗಳಲ್ಲಿ ವಾಸಿಸುತ್ತಿದ್ದ 19ನೇ ಶತಮಾನದ ಜನಜೀವನ ಅವರ ಆಡುಭಾಷೆ ಮುಂತಾದ ಸನ್ನಿವೇಶಗಳನ್ನು ದೇಸಿಯ ಸಂಸ್ಕೃತಿಯ ಹಿನ್ನಲೆಯಲ್ಲಿ ಅನಾವರಣಗೊಳಿಸುವುದರ ಮೂಲಕ ಉತ್ತಮ ಸಾಹಿತ್ಯ ಸೃಷ್ಟಿಗೆ ಕಾರಣರಾಗಿದ್ದಾರೆ.

ಈಸೋಪನ ಪಂಚತಂತ್ರದ ಕಥೆಗಳು, ಅರೇಬಿಯನ್‌ನೈಟ್ಸ್ ಅಥವಾ ಶೇಕ್ಸ್‌ಪಿಯರ್‌ನ ಕೃತಿಗಳು ಮೂಲದಲ್ಲಿ ಸ್ಥಳೀಯ ಸಂಸ್ಕೃತಿಯ ಪ್ರತಿರೂಪಗಳು. ಸ್ಥಳೀಯ ಜನರ ಬದುಕಿನ ಚಿತ್ರಣವನ್ನು ನೀಡುವುದರ ಜೊತೆಗೆ ದೇಸಿಯ ಸಂಸ್ಕೃತಿಯನ್ನು ಅಭಿವ್ಯಕ್ತಪಡಿಸುವ ಮೂಲಕ ಕಾಲದೇಶವನ್ನು ಮೀರಿದ ಶ್ರೇಷ್ಠ ಕೃತಿಗಳೆನಿಸಿಕೊಂಡಿವೆ.[26] ಯಾವ ಸಾಹಿತ್ಯ ಕೃತಿಯಲ್ಲಿ ವಿಶ್ವಮಟ್ಟದ ದೇಸಿ ಸಂಸ್ಕೃತಿ ಅನಾವರಣಗೊಳ್ಳುವುದಿಲ್ಲವೊ ಆ ಸಾಹಿತ್ಯ ಕೃತಿ ಕ್ರಮೇಣ ತನ್ನ ಅಸ್ತಿತ್ವವನ್ನೆ ಕಳೆದುಕೊಳ್ಳುತ್ತದೆ. ದೇಸಿಯತೆಯು ಬಹುಸಂಸ್ಕೃತಿಯ, ವಿವಿಧ ರೂಪದ ವಿವರಣೆಗಳನ್ನೊಳಗೊಂಡ ನೈಜತೆಯ ಸಂಕೇತವಾಗಿದೆ. ಸಾಮಾನ್ಯವಾಗಿ ಯಾವುದೇ ಕಲೆ, ಸಾಹಿತ್ಯದಲ್ಲಿ ಅನಿರ್ಬಂಧಿತವಾಗಿ ವ್ಯಕ್ತಗೊಳ್ಳುವ ಸಹಜತೆ ದೇಸಿಯ ಸಂಸ್ಕೃತಿಗಿದೆ ಎಂದೇ ಹೇಳಬಹುದು. ಕುವೆಂಪುರವರ 'ಮಲೆಗಳಲ್ಲಿ ಮದುಮಗಳು' ಮತ್ತು 'ಕಾನೂರು ಹೆಗ್ಗಡಿತಿ' ಕಾದಂಬರಿಗಳು ಮತ್ತು ಹಾರ್ಡಿಯವರ 'ದಿ ರಿರ್ಟರ್ನ್ ಆಫ್ ದಿ ನೇಟಿವ್' ಮತ್ತು 'ಟೆಸ್ಸ್ ಆಫ್ ದಿ ಡಿ ಅರ್ಬರ್‌ವಿಲ್ಲೆ' ಕಾದಂಬರಿಗಳು ದೇಸಿಯ ಸಂಸ್ಕೃತಿಯ ನೆಲೆಗಟ್ಟಿನಲ್ಲಿ ರೂಪುಗೊಂಡಿರುವ ಕೃತಿಗಳಾಗಿವೆ.

ಡಾ. ರಾಜೇಂದ್ರ ಚೆನ್ನಿಯವರು ಹೇಳುವಂತೆ, "ದೇಸಿಯತೆ ಎನ್ನುವುದು ಕೇವಲ ಭಾಷೆಗೆ ಸಂಬಂಧಿಸದೆ, ಯಾವುದೇ ಒಂದು ಸಾಹಿತ್ಯದ ಪ್ರಾದೇಶಿಕ ಸತ್ವವನ್ನು, ಆ ಸಾಹಿತ್ಯವು ಹುಟ್ಟಿಕೊಳ್ಳುವ ಭಾಷಾಸಮುದಾಯದ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಅನನ್ಯತೆಯನ್ನು ಮತ್ತು ಆ ಸಾಹಿತ್ಯಕ್ಕಿರುವ ತನ್ನದೇ ಆದ ಸ್ವಾಯತ್ತತೆಯನ್ನು ಗುಣಾತ್ಮಕವೆಂದು ಒಪ್ಪಿಕೊಳ್ಳುವ ಸಿದ್ಧಾಂತವಾಗಿದೆ".[27] ಇದರಂತೆ ದೇಸಿಯತೆಯಲ್ಲಿ ಭಾಷೆ, ಸಾಹಿತ್ಯ, ಪ್ರಾದೇಶಿಕತೆ, ಸ್ಥಳೀಯತೆ, ಸಮುದಾಯ ಮತ್ತು ಸಾಂಸ್ಕೃತಿಕ ಸಂಬಂಧಗಳ ಜೊತೆಗೆ ಗುಣಾತ್ಮಕ ಸಾಹಿತ್ಯವನ್ನು ಕಾಣಬಹುದು. ಒಂದು ಸಾಹಿತ್ಯ ಕೃತಿಯು ದೇಸಿಯ ಪರಿಸರವನ್ನು, ದೇಸಿಯ ಜೀವನ, ವಿಧಾನ, ನಂಬಿಕೆ, ಆಚರಣೆ, ಮೌಲ್ಯ, ವಿಧಿಕ್ರಿಯೆ ಮುಂತಾದ ಜೀವನ ಸಂಬಂಧಿ ವಿವರಣೆಗಳನ್ನು ಒಳಗೊಂಡಿರುತ್ತದೆ. ಇಂತಹ ಅಂಶಗಳು ಸಾಹಿತ್ಯದ ಪ್ರಕಾರಗಳಾದ ಕಥೆ, ಕವನ, ಕಾದಂಬರಿ,

ನಾಟಕ, ಜಾನಪದ ಮುಂತಾದವುಗಳ ಮೂಲಕ ಅಭಿವ್ಯಕ್ತಿಗೊಳ್ಳುತ್ತದೆ. ಹಾಗೆಯೇ ಇಂತಹ ದೇಸಿಯ ಬದುಕನ್ನು ಸಾಹಿತ್ಯಕೃತಿಯಲ್ಲಿ ಅಭಿವ್ಯಕ್ತಿಗೊಳಿಸಲು ಲೇಖಕನು ಅನ್ವೇಷಣಾ ದೃಷ್ಟಿಯಿಂದ ನೋಡಬೇಕಾಗುತ್ತದೆ. ದೇಸಿಯ ಪರಿಸರದ ಭಾಷೆ, ತಂತ್ರ, ವಸ್ತು, ಪಾತ್ರಗಳು, ಸ್ಥಳೀಯ ಪರಿಸರದ ಮಣ್ಣಿನಿಂದಲೇ ಪ್ರವೇಶಿಸುತ್ತವೆ ಮತ್ತು ಆ ನೆಲದ ಸಂಸ್ಕೃತಿಯ ಸಂವೇದನೆಗಳನ್ನು ಬಿತ್ತರಿಸುತ್ತಾ ಹೋಗುತ್ತವೆ ಎಂಬುದನ್ನು ಯಾವುದೇ ಸಾಹಿತ್ಯ ಕೃತಿಯಲ್ಲಿ ಕಾಣಬಹುದು.

1.3 ದೇಸಿ ಸಂಸ್ಕೃತಿ:

ದೇಸಿಯತೆಯ ಅಧ್ಯಯನ ಮಾಡುವ ಸಂದರ್ಭದಲ್ಲಿ ದೇಸಿ ಸಂಸ್ಕೃತಿ ಎಂದರೇನು ಎಂಬುದನ್ನು ತಿಳಿಯಬೇಕಾದುದು ಅತ್ಯವಶ್ಯ. ಸಂಸ್ಕೃತಿ ಎಂದಾಕ್ಷಣ ಯಾವ ಸಂಸ್ಕೃತಿ, ಎಂಬ ಪ್ರಶ್ನೆ ಉದ್ಭವಿಸುತ್ತದೆ ನಗರ ಸಂಸ್ಕೃತಿ, ಸ್ಥಳೀಯ ಸಂಸ್ಕೃತಿ, ಗ್ರಾಮೀಣ ಸಂಸ್ಕೃತಿ, ಪಾಶ್ಚಾತ್ಯ ಸಂಸ್ಕೃತಿ ಮುಂತಾದ ಅನೇಕಾನೇಕ ಸಂಸ್ಕೃತಿಗಳ ಹೆಸರುಗಳು ಎಲ್ಲೆಡೆ ಕೇಳಿಬರುತ್ತವೆ. ಇಲ್ಲಿ ಪ್ರಸ್ತುತ ಅಧ್ಯಯನದ ದೃಷ್ಟಿಯಿಂದ ಸಂಸ್ಕೃತಿ ಮತ್ತು ದೇಸಿಯ ಸಂಸ್ಕೃತಿಯ ಬಗ್ಗೆ ಸಂಕ್ಷಿಪ್ತವಾಗಿ ವಿವರಣೆಯನ್ನು ನೀಡಲು ಪ್ರಯತ್ನಿಸಲಾಗಿದೆ.

'ಸಂಸ್ಕೃತಿ' ಎಂಬ ಪದವು ವಿಶಾಲಾರ್ಥವನ್ನು ಹೊಂದಿದ್ದು ಹಲವಾರು ವ್ಯಾಖ್ಯೆಗಳನ್ನು ಮತ್ತು ವಿವರಣೆಗಳನ್ನು ಒಳಗೊಂಡಿದೆ. ವಿವಿಧ ದೇಶಗಳ ವಿದ್ವಾಂಸರು, ವಿಮರ್ಶಕರು, ಸಾಹಿತಿಗಳು ಅಸಂಖ್ಯಾತ ಅರ್ಥವಿವರಣೆಗಳನ್ನು ನೀಡಿರುತ್ತಾರೆ. ಇಲ್ಲಿ 'ಸಂಸ್ಕೃತಿ' ಎಂಬ ಪದವು ಆಂಗ್ಲಭಾಷೆಯ 'ಕಲ್ಚರ್'(Culture) ಎಂಬ ಪದಕ್ಕೆ ಸಮಾನಾರ್ಥವಾಗಿ ಬಳಸಲ್ಪಡುತ್ತಿದೆ. 'Culture' ಎಂಬ ಪದವು ಲ್ಯಾಟಿನ್ ಮೂಲದ 'ಕಲ್ಟಸ್' (Cultus) ಶಬ್ದದಿಂದ ರೂಪುಗೊಂಡಿದ್ದು ವ್ಯವಸಾಯ, ಸಂಸ್ಕರಣೆ, ಪೋಷಿಸು, ಪೂಜಿಸು ಎಂಬರ್ಥಗಳನ್ನೊಳಗೊಂಡಿದೆ. ಕಾಲಾನಂತರ ಜರ್ಮನ್ ಭಾಷೆಯಲ್ಲಿ 'ಕಲ್ಚರ್' ಎಂದು ರೂಪುಗೊಂಡು, ನಂತರ ಆಂಗ್ಲಭಾಷೆಗೆ ಸೇರಿಕೊಂಡು ಬಳಕೆಗೆ ಬಂದಿದೆ, ಮುಂದೆ 'ಕಲ್ಚರ್' ಪದದ ಅರ್ಥ ವಿಸ್ತರಣೆಗೊಂಡು ಸಂಸ್ಕಾರ, ಸಂಸ್ಕೃತಿ, ಸುಶಿಕ್ಷಿತ, ಪಾಂಡಿತ್ಯ ಮುಂತಾದ ಶಬ್ದಗಳಿಂದ ಎಲ್ಲಾ ಭಾಷೆಯಲ್ಲಿಯೂ ಬಳಸಲ್ಪಡುತ್ತಿದೆ.

ಸಂಸ್ಕೃತಿ ಎಂದರೆ ಸಾಮಾನ್ಯವಾಗಿ ಎಲ್ಲರೂ ಅನುಮೋದಿಸುವ ಅರ್ಥವೆಂದರೆ, ಅದೊಂದು ಜೀವನವಿಧಾನ. ಒಂದು ಸಮುದಾಯದ ಜೀವನ ವಿಧಾನವೇ ಆ ಸಮಾಜದ ಸಂಸ್ಕೃತಿ. ಜನ ಸಮೂಹದ ಬದುಕಿನ ವಿಧಿ, ಆಚರಣೆಗಳು, ರೀತಿ ನೀತಿಗಳು, ಆಚಾರ–

ವಿಚಾರಗಳು, ಉಡುಗೆ-ತೊಡುಗೆ, ಆಹಾರಪದ್ಧತಿ, ನಡೆ-ನುಡಿ, ಮುಂತಾದವುಗಳನ್ನು ಒಳಗೊಂಡ ವಿಶಿಷ್ಟ ಅರ್ಥವನ್ನು ನೀಡುವ ಪದವೇ ಸಂಸ್ಕೃತಿ ಎನ್ನಬಹುದು.[28]

ರಹಮತ್ ತರೀಕೆರೆಯವರ ಪ್ರಕಾರ 'ಸಂಸ್ಕೃತಿಯು ಏಕರೂಪಿಯಾಗಿಲ್ಲ' ಏಕೆಂದರೆ ಒಂದು ಜನಾಂಗದ 'ಜೀವನ ವಿಧಾನವೇ ಸಂಸ್ಕೃತಿ' ಎಂದಾಗ ಎಲ್ಲಿಯೂ ಸಹ ಏಕರೂಪಿಯಾದ ಆಚರಣೆಯಾಗಲೀ, ಉಡುಗೆ-ತೊಡುಗೆಯಗಲೀ, ಆಹಾರ ಪದ್ಧತಿಯಾಗಲೀ, ರೀತಿ-ನೀತಿಗಳೇ ಆಗಲಿ ಒಂದೇ ರೀತಿಯಾಗಿ ಇರುವುದಿಲ್ಲ. ಆದರೆ ಆಯಾ ಸಮುದಾಯಕ್ಕೆ, ಸಮಾಜಕ್ಕೆ ತನ್ನದೇ ಆದ ಸ್ವತಂತ್ರ ಸಂಸ್ಕೃತಿ ಇದ್ದು ಅದೂ ಆ ಸಮೂದಾಯದ, ಆ ಸಮಾಜದ ಜನರ ಮನ್ನಣೆಗೆ ಪಾತ್ರವಾಗಿರುತ್ತದೆ ಎನ್ನಬಹುದು.[29]

ಸಂಸ್ಕೃತಿಯನ್ನು ಅದೊಂದು ಸಾಮಾಜಿಕ ಮನೋಧರ್ಮಕ್ಕೆ ಸಂಬಂಧಪಟ್ಟದ್ದು, ಶುದ್ಧೀಕರಿಸುವ ಗುಣವುಳ್ಳದ್ದು, ಶ್ರೇಷ್ಠಮಟ್ಟದಲ್ಲಿ ಇರುವಂತಹದ್ದು ಎಂದು ವಿಂಗಡಿಸಬಹುದಾದ ವಿಧಾನವೆಂದು ಅರ್ಥೈಸಬಹುದಾಗಿದೆ.[30] ಇದು ದೇಸಿಯ ಸಂಸ್ಕೃತಿಗೆ ಬಹಳ ಹತ್ತಿರವಾದ ವಿವರಣೆಯಾಗಿದೆ. ಏಕೆಂದರೆ ದೇಸಿ ಸಂಸ್ಕೃತಿಯು ಸ್ವತಂತ್ರವಾದ, ಸಹಜವಾದ ಸಂಸ್ಕೃತಿಯಾಗಿದೆ, ಒಂದು ನಿರ್ದಿಷ್ಟ ಪ್ರದೇಶದಲ್ಲಿ ಸಹಜವಾಗಿ ಹುಟ್ಟಿ, ವಿಕಾಸಗೊಂಡ ಪ್ರಕ್ರಿಯೆಯಾಗಿದೆ. ಸಾಮಾನ್ಯವಾಗಿ ಸಂಸ್ಕೃತಿ ಎಂದರೆ ಒಂದು ಸಭ್ಯ ಸಂಸ್ಕಾರ, ಜೀವನ ಮೌಲ್ಯ, ಸಾಮಾಜಿಕ ವರ್ತನೆ, ಸಹಜ ಸ್ವಭಾವ ಎಂಬರ್ಥಗಳಲ್ಲಿ ಬಳಕೆಯಾಗಿರುವುದನ್ನು ಕಾಣುತ್ತೇವೆ. ಹಾಗೇಯೇ ಲಲಿತಕಲೆಗಳ ರೂಪದಲ್ಲಿ ಮತ್ತು ಸಾಮಾಜಿಕ ಅರ್ಥದಲ್ಲಿ ಮುಂತಾದ ಬಹುಶಾಸ್ತ್ರೀಯ ಆಯಾಮಗಳಲ್ಲಿ ಸಂಸ್ಕೃತಿ ಎಂಬ ಪದವು ಎಲ್ಲಾ ಕ್ಷೇತ್ರಗಳಲ್ಲಿಯೂ ಚಾಲ್ತಿಯಲ್ಲಿದೆ.[31] ದೇಸಿಯ ಸಂಸ್ಕೃತಿಯು ಮೇಲಿನ ಎಲ್ಲಾ ಲಕ್ಷಣಗಳನ್ನು ಒಳಗೊಂಡಿರುವ ಒಂದು ಶ್ರೀಮಂತ ಸಂಸ್ಕೃತಿಯಾಗಿದೆ. ಆದ್ದರಿಂದಲೇ ದೇಸಿಯ ಸಂಸ್ಕೃತಿ ಬೇರೆಲ್ಲ ಸಂಸ್ಕೃತಿಗಳಿಗಿಂತ ಭಿನ್ನವಾಗಿದೆ ಎನ್ನಬಹುದು.

ಒಂದು ನಿರ್ದಿಷ್ಟ ಪ್ರದೇಶದ ಜನಸಮುದಾಯದ ಆಡುಭಾಷೆ, ಅನುಸರಿಸುವ ಧರ್ಮ, ಆಚರಣೆ, ಜಾತಿ-ಪಂಗಡ, ವರ್ಗ-ವರ್ಣ, ಆಹಾರ ಪದ್ಧತಿ, ಸಾಮಾಜಿಕ ಪರಿಸರ, ಸಾಮಾಜಿಕ ಬದುಕು, ಉಡುಗೆ-ತೊಡುಗೆ, ನಂಬಿಕೆ, ಮೂಢನಂಬಿಕೆಗಳು ಮುಂತಾದ ವಿಷಯಗಳ ಮೂಲಕ ದೇಸಿಯ ಸಂಸ್ಕೃತಿಯು ಅಭಿವ್ಯಕ್ತಗೊಂಡಿರುವುದನ್ನು ಈ ಅಧ್ಯಯನದಲ್ಲಿ ಗುರುತಿಸಲಾಗಿದೆ.

ವಸಾಹತು ಸಂಸ್ಕೃತಿ ದೇಸಿಯ ಸಂಸ್ಕೃತಿಯ ಮೇಲೆ ಪ್ರಭಾವ ಬೀರಿರುವುದನ್ನು ಅನೇಕ ಲೇಖಕರು ತಮ್ಮ ಕೃತಿಗಳಲ್ಲಿ ವ್ಯಕ್ತಪಡಿಸಿದ್ದಾರೆ. ವಸಾಹತು ಸಂಸ್ಕೃತಿಯಲ್ಲಿ ಪ್ರಧಾನವಾಗಿ

ಕ್ರಿಶ್ಚಿಯನ್ ಮಿಷನರಿಗಳು ದೇಸಿಯ ಸಮಾಜದಲ್ಲಿದ್ದ ಕೆಳಸ್ತರದ ಜಾತಿ, ಪಂಗಡಗಳ ಜನರನ್ನು ಮತಾಂತರಗೊಳಿಸುವ ಮೂಲಕ ಹೊಸದೊಂದು ಸಂಸ್ಕೃತಿಯ ಹುಟ್ಟಿಗೆ ಕಾರಣವಾಗಿದ್ದಾರೆ. ಪರಕೀಯ ಸಂಸ್ಕೃತಿಯೊಂದು ದೇಸಿಯ ಜನರ ಜೀವನ ಕ್ರಮದ ಮೇಲೆ ಉಂಟು ಮಾಡಿದ ಪ್ರಭಾವವನ್ನು ಕುವೆಂಪುರವರ ಕಾದಂಬರಿಗಳಲ್ಲಿ ಕಾಣಬಹುದು. ವಸಾಹತೀಕರಣ ಸಂದರ್ಭದಲ್ಲಿ ಅದರ ಉಪಸಂಸ್ಕೃತಿಯಾಗಿ ಆಧುನಿಕ ಜೀವನಕ್ರಮ ದೇಸಿಯ ಸಂಸ್ಕೃತಿಯ ಪಲ್ಲಟಕ್ಕೆ ಕಾರಣವಾಯಿತು ಎನ್ನುವುದನ್ನು ಕಾಣುತ್ತೇವೆ. ಇದು ವಾಸ್ತವ ಸಂಗತಿಯೂ ಆಗಿದೆ ಎನ್ನಬಹುದು. ಏಕೆಂದರೆ ದೇಸಿಯ ಸಂಸ್ಕೃತಿಯ ಮೇಲೆ ಪಾಶ್ಚಾತ್ಯ ಮತ್ತು ಯುರೋಪಿನ ಸಂಸ್ಕೃತಿ ಪ್ರಭಾವದ ಜೊತೆ ಜೊತೆಗೆ ಆಧುನಿಕ ಸಂಸ್ಕೃತಿಯ ಪ್ರಭಾವ ಮುಖ್ಯವಾದುದು. ಕೈಗಾರೀಕರಣ, ಸಂಪರ್ಕ ಸಾಧನಗಳಾದ ರೈಲ್ವೆ ಮೋಟಾರು ಮುಂತಾದವು ಮತ್ತು ವಸಾಹತುವಿನ ಮುಂದುವರಿದ ಭಾಗವಾಗಿ ಜಾಗತೀಕರಣದ ಪ್ರಭಾವ, ಕೈಗಾರಿಕಾ ಕಾನೂನುಗಳು ದೇಸಿಯ ಸಂಸ್ಕೃತಿಯಲ್ಲಿ ಬದಲಾವಣೆಗೆ ಕಾರಣವಾಗುತ್ತವೆ.[32] ಈ ಬದಲಾವಣೆಗಳನ್ನು ಕುವೆಂಪು ಮತ್ತು ಹಾರ್ಡಿಯವರ ಕಾದಂಬರಿಗಳಲ್ಲಿ ಸ್ಪಷ್ಟವಾಗಿ ಗುರುತಿಸಬಹುದಾಗಿದೆ.

ಹೀಗೆ ದೇಸಿ ಸಂಸ್ಕೃತಿ ಎನ್ನುವುದು ನಾಡು-ನುಡಿಯ ಸಂಸ್ಕೃತಿ. ಅದು ಆಧುನಿಕವಾದುದಲ್ಲ, ಸಾಂಪ್ರದಾಯಿಕವಾದುದು, ಮಣ್ಣಿನ ಸೊಗಡಿನಿಂದ ಜೀವತಳೆದದ್ದು, ಪರಕೀಯವಾದುದಲ್ಲ ಆದರೆ ಪರಕೀಯ ಸಂಸ್ಕೃತಿಗಳ ಪ್ರಭಾವದಿಂದ ತನ್ನತನವನ್ನು ಉಳಿಸಿಕೊಳ್ಳಲು ಎಚ್ಚೆತ್ತುಕೊಂಡದ್ದು. "ವಸಾಹತು ಸಂಸ್ಕೃತಿಯ ವಿರೋಧಕ್ಕೆ 'ದೇಶೀ ಸಂಸ್ಕೃತಿ' ಎನ್ನುವ ಪರಿಕಲ್ಪನೆಗಳು ಬಂದವು ಎಂದು ಸಹ ಹೇಳಲಾಗಿದೆ.[33] ವಸಾಹತು ಸಂಸ್ಕೃತಿಯ ಜೊತೆಗೆ ಬಂದದ್ದು ಪಾಶ್ಚಾತ್ಯ ಇಂಗ್ಲಿಷ್ ಭಾಷಾ ಸಂಸ್ಕೃತಿ, ಇದು ದೇಸಿ ಭಾಷೆಯ ಮೇಲೆ ಸಾಕಷ್ಟು ಪರಿಣಾಮ ಬೀರುವುದನ್ನು ಮುಂದಿನ ಅಧ್ಯಾಯಗಳಲ್ಲಿ ನಿರೂಪಿಸಲಾಗಿದೆ.

ದೇಸಿ ಸಂಸ್ಕೃತಿಯ ಮೂಲ ಹಳ್ಳಿಗಳು ಎಂಬುದು ನಿರ್ವಿವಾದವಾದುದು ಹಾಗೂ ಅಷ್ಟೇ ಸಹಜವಾದುದು. ಮಹಾತ್ಮಗಾಂಧಿಯವರ ಪ್ರಕಾರ ಸಂಸ್ಕೃತಿಯ ವ್ಯಾಖ್ಯಾನಕ್ಕೆ ಭಾರತದ ಹಳ್ಳಿಯೇ ಒಂದು ಕೇಂದ್ರ. ಇದರಲ್ಲಿ ದೇಸಿಯತೆಯನ್ನು ಮುಖ್ಯ ಪರಿಭಾಷೆಯನ್ನಾಗಿಸಿದ ಗಾಂಧಿಯವರ ಚಿಂತನಾಕ್ರಮ ಮೆಚ್ಚತಕ್ಕದ್ದು. ಈ ಗ್ರಾಮೀಣ ಅಥವಾ ಹಳ್ಳಿಯ ಪರಿಸರದಲ್ಲಿ ಅಪಾರವಾದ ಜೀವನ ಮೌಲ್ಯವಿದೆ, ಸಹಜತೆಯಿದೆ, ಶ್ರೇಷ್ಠಮಟ್ಟದ ಸಂಸ್ಕೃತಿಯಿದೆ. ದೇಸಿಯ ಮತ್ತೊಂದು ನೆಲೆಯಿರುವುದು 'ದೇಸಿಯ' ಅಸ್ತಿತ್ವದಲ್ಲಿ[34] ಎನ್ನುವ ಮಾತು ಒಪ್ಪತಕ್ಕದ್ದು. ಆದ್ದರಿಂದ ದೇಸಿ

ಸಂಸ್ಕೃತಿ ಗ್ರಾಮೀಣ ಪ್ರದೇಶದ, ಸಾಮಾಜಿಕ ಬದುಕಿನ ವಿಶಿಷ್ಟಲೋಕ, ಒಂದು ಸಮುದಾಯದ ಸಮಗ್ರ ಜೀವನ ವಿಧಾನದ ಪ್ರತಿಬಿಂಬ ಎನ್ನಬಹುದು.

1.4 ಜಾಗತೀಕರಣ – ವ್ಯಾಖ್ಯೆ ಮತ್ತು ಸ್ವರೂಪ:

ಇಂದು ನಾವು ಅನ್ಯೋನ್ಯಾಶ್ರಿತ ಪ್ರಪಂಚದಲ್ಲಿ ವಾಸಿಸುತ್ತಿದ್ದೇವೆ. ಇಂಥ ಪ್ರಪಂಚದಲ್ಲಿ ವಿಭಿನ್ನ ದೇಶಗಳ, ವಿಭಿನ್ನ ಜನರ, ವಿಭಿನ್ನ ಸಂಸ್ಕೃತಿಯ ಐತಿಹಾಸಿಕ ಅನುಭವ ಮತ್ತು ಪರಂಪರೆಗಳೆಲ್ಲವೂ ಒಟ್ಟಾಗಿ ಕ್ಷಣಮಾತ್ರದಲ್ಲಿ ಸಂವಹನಗೊಳ್ಳುತ್ತಿವೆ. ಅಪರಿಮಿತ ಆಸೆಗಳನ್ನು ಕ್ಷಣಮಾತ್ರದಲ್ಲಿ ಈಡೇರಿಸಿಕೊಳ್ಳುವ ನೆಪದಲ್ಲಿ ಅಪಾಯವನ್ನು ತಂದುಕೊಳ್ಳುತ್ತಿದ್ದೇವೆ. ಇಂತಹ ಚಮತ್ಕಾರದ ವ್ಯವಸ್ಥೆಯನ್ನು ಜಾಗತೀಕರಣ ಎಂದು ಕರೆಯಬಹುದು. ಇಂದು ಜಗತ್ತಿನಾದ್ಯಂತ ಜನರೆಲ್ಲರೂ ಒಬ್ಬರನ್ನೊಬ್ಬರು ಅವಲಂಬಿಸಿರುವುದು ಹಿಂದೆಂದಿಗಿಂತಲೂ ಹೆಚ್ಚಾಗಿದೆ; ಹಣದ ಮತ್ತು ಮಾಹಿತಿಗಳ ಹರಿವು ಶರವೇಗದಲ್ಲಿದೆ; ಸರಕು ಸೇವೆಗಳು ದೇಶ–ವಿದೇಶ ಗಡಿಗಳ ನಿರ್ಬಂಧವಿಲ್ಲದೆ ಜಗತ್ತಿನ ಮೂಲೆಮೂಲೆಗೂ ಅತ್ಯಂತ ಕಡಿಮೆ ಸಮಯದಲ್ಲಿ ತಲುಪುತ್ತಿವೆ; ಮಾನವನ ಜೀವನ ಅತಿ ವೇಗದಲ್ಲಿ ಸಂಚರಿಸುತ್ತಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾರಿಗೆ–ಸಂಪರ್ಕ ಸಾಮಾನ್ಯವಾಗಿ ಬಿಟ್ಟಿದೆ. ಇದು ಜಾಗತೀಕರಣದ ಫಲ.

ಜಾಗತೀಕರಣ ಎಂಬುದು ಸಾಮ್ರಾಜ್ಯಶಾಹಿ ಬಲಾಢ್ಯ ರಾಷ್ಟ್ರಗಳು ಇಡೀ ವಿಶ್ವವನ್ನೆ ತಮ್ಮ ಹಿಡಿತದಲ್ಲಿಟ್ಟುಕೊಳ್ಳಲು ಬಡರಾಷ್ಟ್ರಗಳ ಮೇಲೆ ನಿಯಂತ್ರಣ ಸಾಧಿಸಲು, ಆ ಮೂಲಕ ಬಡರಾಷ್ಟ್ರಗಳ ಸಂಪತ್ತನ್ನೆಲ್ಲ ದೋಚಲು ಹಾಕಿಕೊಂಡ ಜಾಗತಿಕ ಸಂಚು. ದುರ್ಬಲ ಮನಸ್ಸಿನ, ದುರ್ಬಲ ನಾಯಕತ್ವದ ಬಡರಾಷ್ಟ್ರಗಳು ಇಂತಹ ಜಾಗತಿಕ ಸಂಚಿಗೆ ತಲೆಕೊಟ್ಟಿವೆ. ಭಾರತ ದೇಶ ಕೂಡ ಇದಕ್ಕೆ ಹೊರತಲ್ಲ.[35] ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಸಾಮ್ರಾಜ್ಯಶಾಹಿ ವ್ಯವಸ್ಥೆ ಇನ್ನೂ ಜೀವಂತವಾಗಿದ್ದು ಬಡರಾಷ್ಟ್ರಗಳ ಮೇಲೆ ಏಕಚಕ್ರಾಧಿಪತ್ಯವನ್ನು ಸ್ಥಾಪಸುತ್ತಲೇ ಇವೆ.

ಬ್ರಿಟಿಷರ ಸಾಮ್ರಾಜ್ಯಶಾಹಿ ವ್ಯವಸ್ಥೆ, ಪಾಶ್ಚಾತ್ಯ ವಸಾಹತೀಕರಣಗಳ ನಂತರದ ಸ್ಥಾನವನ್ನು ಜಾಗತೀಕರಣ ವ್ಯವಸ್ಥೆ ಆಕ್ರಮಿಸಿಕೊಂಡಿದೆ. ನಾವು ಹಿಂದೆ ಯಾವುದನ್ನು ವಸಾಹತೀಕರಣ, ಬ್ರಿಟಿಷ್‌ರಾಜ್ ಎಂದು ಕರೆಯುತ್ತಿದ್ದೆವೋ ಅವುಗಳ ಮತ್ತೊಂದು ಅಥವಾ ಅವುಗಳಿಗಿಂತ ಅಪಾಯಕಾರಿಯಾದ ಅವತಾರವೇ ಜಾಗತೀಕರಣ. ಇದರ ವೇಗದ ತೀವ್ರತೆಗೆ ಸಿಲುಕಿ ಪ್ರತಿಯೊಂದು ದೇಶದ ನಾಗರಿಕತೆ, ಸಂಸ್ಕೃತಿ, ಧರ್ಮ, ಕಲೆ, ಸಾಹಿತ್ಯ, ರೂಢಿ ಸಂಪ್ರದಾಯಗಳು

ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತಿವೆ. ನಯವಾದ ಮಾತುಗಳಲ್ಲಿ ನಾಗರಿಕತೆ, ಆಧುನಿಕತೆ, ಮಾನವತಾವಾದ, ಲಿಂಗಸಮಾನತೆ, ಅಂತರರಾಷ್ಟ್ರೀಯತೆ ಮುಂತಾದ ಬಹುರೂಪಗಳಲ್ಲಿ ಕಾಣಿಸಿಕೊಂಡು ಜನರನ್ನು ಶೋಷಿಸುತ್ತಿರುವ ವ್ಯವಸ್ಥೆಯೇ ಜಾಗತೀಕತೆ ಎಂದು ಕರೆಯಬಹುದು.

ಜಾಗತೀಕರಣವೆಂಬುದು ಇಂದು-ನಿನ್ನೆಯ ಅವತಾರವಲ್ಲ. ನಾವು ಮಾನವನ ಇತಿಹಾಸವನ್ನು ಅವಲೋಕಿಸಿದರೆ ಸುಮರು 14 ಮತ್ತು 15ನೇ ಶತಮಾನದಲ್ಲಿ ವ್ಯಾಪಾರ ಮತ್ತು ಸಾಮ್ರಾಜ್ಯ ವಿಸ್ತರಣೆಗೆ ವಸಾಹತುಶಾಹಿ ಪ್ರದೇಶಗಳ ಅನ್ವೇಷಣೆಗೆ ಹೊರಟ ಕೊಲಂಬಸ್, ವಾಸ್ಕೋಡಗಾಮ, ಕ್ಯಾಪ್ಟನ್ ಕುಕ್ ಇವರನ್ನು ಜಾಗತೀಕರಣದ ಪಿತಾಮಹರೆಂದು ಕರೆದರೂ ತಪ್ಪಿಲ್ಲ.[36] ಅನೇಕ ಭೂಪ್ರದೇಶಗಳನ್ನು ಕಂಡುಹಿಡಿದ ನಂತರ ಯೂರೋಪ್ ದೇಶಗಳಿಂದ ಜನರು ವಲಸೆ ಹೋಗಲು ಪ್ರಾರಂಭಿಸಿದರು. ಹೀಗೆ ವಲಸೆ ಹೋದ ಯೂರೋಪ್ ಮುಂತಾದ ದೇಶಗಳ ಜನರು ಆ ಪ್ರದೇಶಗಳಲ್ಲಿದ್ದ ಮೂಲನಿವಾಸಿಗಳ ಮೇಲೆ ನಿಯಂತ್ರಣ ಸ್ಥಾಪಿಸಿ ಪ್ರಬಲರಾದರು. ಸ್ಥಳೀಯರನ್ನು ಶೋಷಣೆ ಮಾಡಿ ತಮ್ಮ ಅಧಿಪತ್ಯವನ್ನು ಸ್ಥಾಪಿಸಿದರು. ಯೂರೋಪಿನ ಬಿಳಿಯರಿಗೆ ದಕ್ಷಿಣ ಆಫ್ರಿಕಾದ ಕಪ್ಪು ಜನರು, ಆಸ್ಟ್ರೇಲಿಯಾದ ಮತ್ತು ಉತ್ತರ ಅಮೇರಿಕದ ಮೂಲನಿವಾಸಿಗಳು ಸುಲಭವಾಗಿ ಶೋಷಣೆಗೆ ಒಳಗಾದರು. ಆ ದೇಶಗಳಲ್ಲಿ ಹೇರಳವಾಗಿ ಸಿಗುತ್ತಿದ್ದ ನೈಸರ್ಗಿಕ ಸಂಪತ್ತನ್ನು ದೋಚಿದರು. ಇತರೆ ದೇಶಗಳಿಗೆ ಮಾರಾಟ ಮಾಡಿ ಶ್ರೀಮಂತರೆನಿಸಿಕೊಂಡರು. ಹೀಗೆ ಜಾಗತೀಕರಣದ ಅಟ್ಟಹಾಸವನ್ನು ಆಧುನಿಕ ನಾಗರಿಕತೆಯ ಇತಿಹಾಸದುದ್ದಕ್ಕೂ ನಾವು ಕಾಣಬಹುದು. ವಸಾಹತೀಕರಣದ ನಂತರ 18 ಮತ್ತು 19ನೇ ಶತಮಾನದಲ್ಲಿ ಉಂಟಾದ ಕೈಗಾರಿಕಾಕ್ರಾಂತಿಯು ಜಾಗತೀಕರಣದ ಪ್ರಸರಣಕ್ಕೆ ಮತ್ತೊಂದು ಮೈಲಿಗಲ್ಲಾಯಿತು. ಯುರೋಪಿನ ಅನೇಕ ದೇಶಗಳು, ಅಮೇರಿಕಾ ಮತ್ತು ಬಲಾಢ್ಯ ರಾಷ್ಟ್ರಗಳು ಸಾಮ್ರಾಜ್ಯ ವಿಸ್ತರಣೆಯ ಜೊತೆ ಜೊತೆಗೆ ವ್ಯಾಪಾರ ವಹಿವಾಟು ನಡೆಸಲು ಅನೇಕ ಬಹುರಾಷ್ಟ್ರೀಯ ಕಂಪೆನಿಗಳನ್ನು ಸ್ಥಾಪಿಸಿದವು. ಇಂಥಹ ಕಂಪೆನಿಗಳು ವಸಾಹತೀಕರಣಗೊಂಡ ದೇಶಗಳಿಂದ ಕಚ್ಚಾವಸ್ತಗಳನ್ನು ಹೊತ್ತು ತಂದು ಸಿದ್ಧವಸ್ತುಗಳನ್ನಾಗಿಸಿ ಪುನಃ ಅದೇ ದೇಶಗಳಿಗೆ ಮಾರಾಟ ಮಾಡಿ, ಬಂಡವಾಳವಿಲ್ಲದೆ ಬಂಡವಾಳ ಸೃಷ್ಟಿಸಿ ಲಾಭಗಳಿಸಿ ತಮ್ಮ ದೇಶಗಳ ಸಂಪತ್ತನ್ನು ವೃದ್ಧಿಗೊಳಿಸಿಕೊಳ್ಳುತ್ತಿದ್ದರು. ಇಂತಹ ಕಂಪೆನಿಗಳಲ್ಲಿ ಬಹಳ ಕುಖ್ಯಾತಿಗಳಿಸಿದ್ದ ಕಂಪೆನಿ ಈಸ್ಟ್ ಇಂಡಿಯಾ ಕಂಪೆನಿ ಹಾಗೂ ಆಫ್ರಿಕಾದ ದೇಶಗಳಿಂದ ಕಪ್ಪು ಜನರನ್ನು ಯುರೋಪಿನ ಮತ್ತು ಅಮೇರಿಕಾದ ದೇಶಗಳಿಗೆ ಮಾರಾಟಮಾಡುತ್ತಿದ್ದ ಟ್ರಾನ್ಸ್ ಸಹರಾ ಕಂಪೆನಿಗಳು ಪ್ರಮುಖವಾದವು. ಇಲ್ಲಿ ಕೇವಲ ಸರಕು-ಸೇವೆಗಳ ಸಾಗಾಣಿಕೆಯ ಜೊತೆಗೆ ಮಾನವರನ್ನು ಪ್ರಾಣಿಗಳಂತೆ ಮಾರಾಟ ಮಾಡುವ ಅಮಾನವೀಯ ವಹಿವಾಟಿದ್ದುದನ್ನು ಕಾಣಬಹುದು.

19 ಮತ್ತು 20ನೇ ಶತಮಾನದಲ್ಲಿ ಸಾಮ್ರಾಜ್ಯಶಾಹಿ ವ್ಯವಸ್ಥೆ ವಸಾಹತೀಕರಣದ ಮೂಲಕ ಶೋಷಣೆ ಮಾಡುತ್ತಿದ್ದ ವ್ಯವಸ್ಥೆ ಇಂದು ದೇಶದೇಶಗಳ ಎಲ್ಲೆ ಮೀರಿ ಹೊಸ ರೂಪ ಪಡೆದು 'ಜಾಗತೀಕರಣವಾಗಿದೆ'.'ಉದ್ದೇಶ ಮಾತ್ರ ಒಂದೇ, ಅದುವೇ 'ಮಾರುಕಟ್ಟೆ ಸಂಸ್ಕೃತಿ'. ಜಾಗತೀಕರಣ ಮುಂದೆ ಏಕಮೇವ ಸಂಸ್ಕೃತಿಯಾಗಿ ದೇಸೀಯರ ಬದುಕನ್ನು ದುರ್ಬಲಗೊಳಿಸಲು ಪ್ರಾರಂಭಿಸಿತು. ಪಾಶ್ಚಿಮಾತ್ಯ ಸಂಸ್ಕೃತಿ, ಜೀವನಶೈಲಿ, ಮಾರುಕಟ್ಟೆ ಸಂಸ್ಕೃತಿ ಮತ್ತು ಅತಿಯಾದ ಸರಕು-ಸೇವೆಗಳು ದೇಸಿಯ ಜೀವನ ವಿಧಾನವನ್ನೇ ಬದಲಾಯಿಸಿವೆ. ದೇಸಿಯ ಜೀವನದ ನೈತಿಕ ನೆಲೆಗಟ್ಟು ಶಿಥಿಲಗೊಂಡು ಕೊಡು-ಕೊಳ್ಳುವಿಕೆಯ ಸಂಸ್ಕೃತಿ ಎಲ್ಲೆಡೆ ವಿಜೃಂಭಿಸತೊಡಗಿದೆ. ಈ ವ್ಯವಸ್ಥೆಯಲ್ಲಿ ಗ್ರಾಹಕ ಸಂಸ್ಕೃತಿಯ ಬಿರುಗಾಳಿ ದೇಸಿಯ ಬದುಕನ್ನು, ಮಣ್ಣಿನ ಸೊಗಡನ್ನು ನಿರ್ದಯತೆಯಿಂದ ಕಣ್ಮರೆಯಾಗಿಸುತ್ತಿದೆ. ಮೆಕಾಲೆ ಮಾದರಿಯ ಆಂಗ್ಲಶಿಕ್ಷಣ ವ್ಯವಸ್ಥೆ ಜಾಗತೀಕರಣದ ತಳಹದಿಯಾಗಿದ್ದು ದೇಸಿಯ ಬದುಕನ್ನು ದುಸ್ತರವಾಗಿಸಿದೆ.[37]

20ನೇ ಶತಮಾನದ ಆದಿಯಲ್ಲಿ ಚುರುಕುಗೊಂಡ ಕೈಗಾರಿಕಾ ಚಟುವಟಿಕೆಗಳು ಮತ್ತು ವೈಜ್ಞಾನಿಕ ಆವಿಷ್ಕಾರಗಳ ಫಲದಿಂದ ಜಾಗತೀಕರಣ ಇನ್ನೂ ಬಿರುಸಾಗಲು ಪ್ರಾರಂಭಿಸಿತು. ಜಾಗತಿಕ ಆರ್ಥಿಕ ಮಾರುಕಟ್ಟೆಯಲ್ಲಿ ಅನೇಕ ಬದಲಾವಣೆಯಾಗುವುದರ ಮೂಲಕ ರಾಷ್ಟ್ರ-ರಾಷ್ಟ್ರಗಳ ನಡುವಿನ ವ್ಯಾಪಾರ ವಿನಿಮಯ ಹೆಚ್ಚಾಯಿತು. ಅನೇಕ ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಗಳು, ವಿನಿಮಯ ಕೇಂದ್ರಗಳು, ಅಂತಾರಾಷ್ಟ್ರೀಯ ಮಾರುಕಟ್ಟೆಯ ನಿಯಮಗಳು, ಒಪ್ಪಂದಗಳು ಜಾರಿಗೆ ಬಂದವು. ಎರಡನೆಯ ಮಹಾಯುದ್ಧದ ನಂತರ ಜಾಗತಿಕಮಟ್ಟದಲ್ಲಿ ಆರ್ಥಿಕ ವ್ಯವಸ್ಥೆಯನ್ನು ನಿಯಂತ್ರಿಸಲು ಮತ್ತು ಬಂಡವಾಳ ಒದಗಿಸಲು ವಿಶ್ವಬ್ಯಾಂಕ್ ಮತ್ತು ಅಂತಾರಾಷ್ಟ್ರೀಯ ಹಣಕಾಸು ನಿಧಿ ಸಂಸ್ಥೆಗಳು ಸ್ಥಾಪನೆಗೊಂಡವು. ಇವು ಮುಂದೆ ಆಧುನಿಕ ಜಾಗತೀಕರಣದ ಪೋಷಕ ಸಂಸ್ಥೆಗಳಾಗಿ, ಇಂದಿನ ವ್ಯವಸ್ಥೆಯನ್ನು ರೂಪಿಸಿದವು. ಮಹಾಯುದ್ಧದ ನಂತರ ಆಧುನಿಕತೆಯ ಹೆಸರಿನಲ್ಲಿ ಜಾಗತೀಕರಣವು ಏಕಮೇವ ಶಕ್ತಿಯಾಗಿ ಹೊರಹೊಮ್ಮುವುದನ್ನು ಕಾಣಬಹುದು. ಜಾಗತೀಕರಣಕ್ಕೆ ಸಂಬಂಧಪಟ್ಟಂತೆ ಅನೇಕ ಪ್ರಸ್ತಾವನೆಗಳು, ಒಪ್ಪಂದಗಳು ಜಾರಿಗೆ ಬಂದವು. ಅವುಗಳಲ್ಲಿ ಮುಕ್ತಮಾರುಕಟ್ಟೆ ವ್ಯವಸ್ಥೆ, W.T.O., G.A.T.T., ಮತ್ತು ಡಂಕಲ್ ಪ್ರಸ್ತಾವನೆಗಳು ಮುಖ್ಯವಾದವು. ಇವುಗಳ ಮೂಲ ಉದ್ದೇಶ ಮಾತ್ರ ಆರ್ಥಿಕ ಶೋಷಣೆ ಮಾಡುವುದಾಗಿದೆ. ಮುಂದುವರಿದ ರಾಷ್ಟ್ರಗಳು ಜಾಗತಿಕ ಒಪ್ಪಂದ ಮತ್ತು ಪ್ರಸ್ತಾವನೆಗಳ ಮೂಲಕ ತಮ್ಮ ಸರಕು-ಸೇವೆಗಳನ್ನು ಮಾರಲು ಅಭಿವೃದ್ಧಿಶೀಲ ರಾಷ್ಟ್ರಗಳನ್ನು ಆಯ್ಕೆ ಮಾಡಿಕೊಂಡವು. ಖಾಸಗೀಕರಣದ ಮತ್ತು ಉದಾರೀಕರಣದ ಮಂತ್ರವು

ಆರ್ಥಿಕವಾಗಿ ದುರ್ಬಲ ರಾಷ್ಟ್ರಗಳ ನೆಲ, ಜಲ, ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿಕೊಂಡು ಅಲ್ಲಿನ ದೇಸಿಯ ಸಂಸ್ಕೃತಿಯನ್ನು ನಾಶಮಾಡಲು ಪ್ರಾರಂಭಿಸಿದವು.

ಹೀಗೆ ಜಾಗತೀಕರಣವೆಂಬುದು ಒಂದು ಪ್ರಚಲಿತವಾದ ಅರ್ಥಶಾಸ್ತ್ರದ ಪರಿಭಾಷೆಯಗಿ ರೂಪುಗೊಂಡು ಬಹುರಾಷ್ಟ್ರೀಯ ಕಂಪೆನಿಗಳ ಮೂಲಕ ಇಡೀ ಜಗತ್ತಿಗೆ ಪರಿಚಯವಾಗುತ್ತಿದೆ. ಲಾಭದ ದೃಷ್ಟಿಯಿಂದ ರೂಪುಗೊಂಡ ಜಾಗತೀಕರಣವು ಜಾಗತಿಕವಾಗಿ ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಹಿತ್ಯಿಕವಾಗಿ ಬದುಕಿನ ಮೇಲೆ ಪ್ರಭಾವ ಬೀರಲು ಪ್ರಾರಂಭಿಸಿತು. ಇಲ್ಲಿ ಡಾ. ಕೆ. ಕೇಶವಶರ್ಮರವರ ಮಾತನ್ನು ಉದಾಹರಿಸುವುದಾದರೆ, "1960ರ ದಶಕದ ಕೊನೆಯ ಭಾಗದಲ್ಲಿ ಮತ್ತು 1970ರ ದಶಕದ ಮೊದಲ ಭಾಗದಲ್ಲಿ ಈ ಜಾಗತೀಕರಣವೆಂಬ ಪದವು ಹೆಚ್ಚು ಚಾಲ್ತಿಗೆ ಬಂತು. ಬಹುರಾಷ್ಟ್ರೀಯ ಕಂಪೆನಿಗಳು ತಮ್ಮ ವ್ಯಾಪಾರದ ಉದ್ದೇಶಕ್ಕಾಗಿ, ಯಾವುದೇ ಸೀಮಿತವಾದ ಗಡಿರೇಖೆಗಳು ಇರಬಾರದೆಂಬ ಕಾರಣಕ್ಕಾಗಿ ಈ ಜಾಗತೀಕರಣವನ್ನು ಚಾಲ್ತಿಗೆ ತಂದವು".[38] ಜಾಗತೀಕರಣವೆನ್ನುವುದು ಇಡಿಯ ಜಗತ್ತನ್ನು ಏಕರೂಪ ಮಾರುಕಟ್ಟೆಯ ವ್ಯವಸ್ಥೆಗೆ ಒಳಪಡಿಸುವುದಾಗಿದೆ. ತಂತ್ರಜ್ಞಾನದ ಆವಿಷ್ಕಾರ, ಮಾರುಕಟ್ಟೆಯ ವಿಸ್ತರಣೆ, ಮುಕ್ತವ್ಯಾಪಾರ ನೀತಿ ಮುಂತಾದವು ಜಾಗತೀಕರಣದ ಉತ್ಕರ್ಷಕ್ಕೆ ಕಾರಣವಾಗುತ್ತವೆ. ಸಾಮ್ರಾಜ್ಯಶಾಹಿ ವ್ಯವಸ್ಥೆಯಿಂದ ರೂಪುಗೊಂಡು ವಸಾಹತು ಕಾಲಘಟ್ಟಕ್ಕೆ ಪ್ರವೇಶ ಪಡೆದ ಜಾಗತೀಕರಣವು ಸಾಮಾಜಿಕ ಕಾಳಜಿಯ ವೇಷವನ್ನು ಧರಿಸಿ ಸಾಮಾಜಿಕ ಮೌಲ್ಯಗಳಿಗೆ ತಿಲಾಂಜಲಿ ನೀಡುವುದನ್ನು ಕಾಣುತ್ತೇವೆ.

'ಜಾಗತಿಕ ಜ್ಞಾನ ಪರಂಪರೆ'ಯೆಂಬ ವಿಚಾರಧಾರೆಯನ್ನು ಹರಿಯಬಿಟ್ಟು ದೇಶೀಯ ಜ್ಞಾನ ಪರಂಪರೆಯನ್ನು ನಾಶಮಾಡಿ ಸಮಾಜದಲ್ಲಿ ಅರಾಜಕತೆಯನ್ನುಂಟು ಮಾಡುವುದೇ ಇದರ ಗುರಿಯಾಗಿದೆ.[39] ದೇಸಿಯತೆ ಎಂದರೆ ಪ್ರಾದೇಶಿಕ ಔಚಿತ್ಯವನ್ನು ಒಳಗೊಂಡು ನಮ್ಮ ಸಾಮಾಜಿಕ ಅಗತ್ಯಕ್ಕೆ ಅನುಗುಣವಾಗಿ ರೂಪುಗೊಂಡಿರುವಂತದ್ದು, ಮತ್ತು ದೇಶಿಯ ಜ್ಞಾನಪರಂಪರೆಯು ನಮ್ಮ ಅಗತ್ಯಕ್ಕನುಗುಣವಾಗಿ ರೂಪುಗೊಂಡಿದೆ. ಇಂತಹ ದೇಸಿಯ ಜ್ಞಾನ ಪರಂಪರೆಯನ್ನು ಜಾಗತಿಕ ಪರಂಪರೆಯು ಹೊಸಕಿ ಹಾಕುವುದನ್ನು ಕಾಣಬಹುದು.

ಇಂದಿನ ಅಂತರಾವಲಂಬಿ ಜಗತ್ತಿನಲ್ಲಿ ನಮ್ಮೆಲ್ಲ ಸ್ಥಳೀಯ ಸಂಸ್ಕೃತಿಗಳು ಮತ್ತು ಐತಿಹಾಸಿಕ ಪರಂಪರೆ, ಜೀವನ ಮೌಲ್ಯಗಳು ಅತ್ಯಂತ ವೇಗವಾಗಿ ಬದಲಾಗುತ್ತಿದ್ದು, ಈ ಬದಲಾವಣೆಗಳಿಗೆಲ್ಲ ಜಾಗತೀಕರಣವೇ ಕಾರಣವೆಂದು ಹೇಳಬಹುದು. ಜಾಗತೀಕರಣದ ಈ ಯುಗವು ಇಂದಿನ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ವಾತಾವರಣವನ್ನು ತನ್ನ ಕಪಿಮುಷ್ಟಿಯಲ್ಲಿ ಹಿಡಿದುಕೊಂಡಿದೆ. ಜಾಗತೀಕರಣವು ಇಂದು ಕೇವಲ ವ್ಯಾಪಾರಕ್ಕೆ

ಸಂಬಂಧಪಡದೆ ಸಾಮಾಜಿಕ ಚಟುವಟಿಕೆಗಳು, ಕಾರ್ಮಿಕ ಸಂಘಟನೆಗಳು, ಪತ್ರಿಕೋದ್ಯಮ, ಶಿಕ್ಷಣ, ಅಂತಾರಾಷ್ಟ್ರೀಯ ಸಂಘಟನೆಗಳು ಮುಂತಾದ ಜಾಗತಿಕ ಕ್ಷೇತ್ರಗಳನ್ನು ಒಳಗೊಂಡು ಪ್ರತಿಯೊಂದು ಕ್ಷೇತ್ರದಲ್ಲಿಯೂ ತನ್ನದೇ ಆದ ಪ್ರಭಾವವನ್ನು ಭೀರಿ ನಿಯಂತ್ರಿಸುತ್ತಿದೆ.

1.5 ಶಿಕ್ಷಣ ಮತ್ತು ಜಾಗತೀಕರಣ:

ಭಾರತದಲ್ಲಿ ಹಿಂದೆ ಅಸ್ತಿತ್ವದಲ್ಲಿದ್ದ ಗುರುಕುಲ ಮಾದರಿಯ ಶಿಕ್ಷಣ ವ್ಯವಸ್ಥೆ ಮತ್ತು ಐಗಳ ಮಠಗಳು ಜೀವನಕ್ಕೆ ಅವಶ್ಯಕವಾದ ಮೌಲ್ಯಾಧಾರಿತ ನೈತಿಕ ಶಿಕ್ಷಣವನ್ನು ನೀಡುತ್ತಿದ್ದವು. ಆದರೆ ಸುಮಾರು 1820ರ ಹೊತ್ತಿಗೆ ಕ್ರಿಶ್ಚಿಯನ್ ಮಿಷನರಿಗಳು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪನೆ ಮಾಡಿ ಅನೇಕ ಶಾಲೆಗಳನ್ನು ಪ್ರಾರಂಭಿಸಿದರು. ಇದರಿಂದ ಭಾರತದಂತಹ ದೇಶದಲ್ಲಿ ಬ್ರಿಟಿಷ್ ಶಿಕ್ಷಣ ಪಡೆದವರ ಸಂಖ್ಯೆ ಹೆಚ್ಚಾಗುತ್ತಾ ಬಂದಿತು. ಹಾಗೆಯೇ ಭಾರತೀಯರು ಕೂಡ ಅನೇಕ ಶಾಲೆ ಕಾಲೇಜುಗಳನ್ನು ಪ್ರಾರಂಭಿಸಿ ಬ್ರಿಟಿಷ್ ಮಾದರಿಯ ಶಿಕ್ಷಣದಿಂದ ಪ್ರೇರೇಪಿತರಾಗಿ ಗಣಿತಶಾಸ್ತ್ರ, ಪಾಶ್ಚಿಮಾತ್ಯ ತತ್ವಶಾಸ್ತ್ರ, ಮೂಲ ವಿಜ್ಞಾನಶಾಸ್ತ್ರಗಳನ್ನು ಪರಿಚಯಿಸಿದರು. ಇಂತಹ ಬ್ರಿಟಿಷ್ ಮಾದರಿಯ ಶಾಲೆ-ಕಾಲೇಜುಗಳಲ್ಲಿ ಶಿಕ್ಷಣದ ಮುಖ್ಯ ಉದ್ದೇಶವೆಂದರೆ, ಭಾರತೀಯ ಸಿವಿಲ್ ಸೇವೆಗಳಲ್ಲಿ ಸೇರುವುದು. ಇನ್ನೂ ಕೆಲವರು ಬ್ರಿಟಿಷ್ ದೇಶಗಳಿಗೂ ಉನ್ನತ ಶಿಕ್ಷಣವನ್ನರಸಿ ವಲಸೆ ಹೋಗಲು ಪ್ರಾರಂಭಿಸಿದರು. ಭಾರತೀಯರಲ್ಲಿ ಬಹುಸಂಖ್ಯಾತರು ಆರ್ಥಿಕವಾಗಿ ದುರ್ಬಲರಾದವರು. ಇವರು ಮೊದಲು ಸ್ಥಳೀಯ ಶಾಲೆಗಳಲ್ಲಿ ಕಲಿತು ನಂತರ ಇಂಗ್ಲಿಷ್ ಮಾದರಿಯ ಪ್ರೌಢಶಾಲೆಗಳಿಗೆ ಸೇರಿ ತದನಂತರ ಉನ್ನತ ಶಿಕ್ಷಣಕ್ಕೆ ಸೇರ್ಪಡೆಯಾಗಬೇಕಿತ್ತು. ಹೀಗೆ ಪಾಶ್ಚಾತ್ಯ ಶಿಕ್ಷಣ ಮತ್ತು ಆಂಗ್ಲಭಾಷೆ 19ನೇ ಶತಮಾನದ ಪ್ರಾರಂಭದಲ್ಲಿಯೇ ಸ್ಥಳೀಯರ ಮೇಲೆ ಹೆಚ್ಚಿನ ಪ್ರಭಾವವನ್ನು ಬೀರಲಾರಂಭಿಸಿತು. ಬ್ರಿಟಿಷ್ ಮಾದರಿಯ ಶಿಕ್ಷಣದ ಪ್ರಮುಖ ಭಾಷೆಯಾಗಿ ಆಂಗ್ಲಭಾಷೆ ಬಳಕೆಯಲ್ಲಿದ್ದು, ಅನೇಕ ಸ್ಥಳೀಯ ಭಾಷೆಗಳನ್ನು ಸ್ಥಳಾಂತರಿಸಲಾರಂಭಿಸಿತು.[40] ಆಂಗ್ಲಭಾಷೆ ಭಾರತೀಯರಿಗೆ ಇತರೆ ದೇಶಗಳೊಡನೆ ವ್ಯವಹಾರ, ವ್ಯಾಪಾರ, ಸಂಪರ್ಕ ಸಾಧಿಸಲು ಸಹಾಯ ಮಾಡಲಾರಂಭಿಸಿತು. ಸುಮಾರು 179 ಭಾಷೆಗಳು, 544 ಉಪಭಾಷೆಗಳನ್ನು ಮತ್ತು ಸಾವಿರಾರು ಸ್ಥಳೀಯ ಭಾಷೆಗಳನ್ನು ಹೊಂದಿದ್ದ ದೇಶದಲ್ಲಿ ಆಂಗ್ಲಭಾಷೆ ಪ್ರಾತಿನಿಧಿಕ ಭಾಷೆಯಾಗಿ ಸಮಾಜದ ಎಲ್ಲಾ ಕ್ಷೇತ್ರಗಳಲ್ಲೂ ಪ್ರಭಾವ ಬೀರಲು ಅವಕಾಶ ಪಡೆಯಿತು.[41]

ಭಾರತವನ್ನು ವಸಾಹತೀಕರಣಗೊಳಿಸಿದ ಬ್ರಿಟಿಷರು ಹೊರನೋಟಕ್ಕೆ ಬೌದ್ಧಿಕವಾಗಿ ಕಾಣುವ, ಆದರೆ ಅಸ್ಪಷ್ಟವಾದ, ಅಪಾಯಕಾರಿಯಾದ ವಿಶ್ವಾಸಘಾತಕ (Intellectual class) ವರ್ಗವನ್ನು ಸೃಷ್ಟಿ ಮಾಡಿದರು. ಇವರು ಬ್ರಿಟಿಷರ ಆಳ್ವಿಕೆಯಿಂದ ಪ್ರೇರೇಪಿತರಾಗಿ ದೇಸೀಯ ಬದುಕನ್ನಷ್ಟೇ ಅಲ್ಲದೆ ನಮ್ಮ ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆಯನ್ನು ನಾಶಮಾಡುವ ಮೂಲಕ ದೇಸೀಯರ ಮನಸ್ಸನ್ನು ಸಹ ವಸಾಹತೀಕರಿಸಿದರು. ಬ್ರಿಟಿಷ್ ಆಡಳಿತಗಾರರಿಗೆ ಭಾರತದಂತಹ ದೇಶದಲ್ಲಿ ಮತಾಂತರಗೊಳಿಸುವುದು ಕಷ್ಟವೆನಿಸಿದಾಗ ಪಾಶ್ಚಾತ್ಯ ಶಿಕ್ಷಣದ ಮೂಲಕ ದೇಸಿಯ ಸಂಸ್ಕೃತಿಯನ್ನು ನಾಗರಿಕತೆಯ ಹೆಸರಿನಲ್ಲಿ ನಿರ್ಮೂಲನೆ ಮಾಡುವುದನ್ನು ಸುಲಭವಾಗಿಸಿದರು. ಉನ್ನತ ಶಿಕ್ಷಣ ಪಡೆದ ಭಾರತೀಯರಲ್ಲೂ ವಸಾಹತೀಕರಣವೆಂಬುದು ಶೋಷಣೆಯಲ್ಲ, ಮಿಗಿಲಾಗಿ ಪ್ರಗತಿಶೀಲವಾದುದೆಂಬ ಭಾವನೆ ಬೆಳೆಯಲಾರಂಭಿಸಿತು. ದೇಸಿಯ ನಿವಾಸಿಗಳು ಆಂಗ್ಲಮಾಧ್ಯಮದ ಪಾಶ್ಚಾತ್ಯ ಮಾದರಿಯ ಶಿಕ್ಷಣದಿಂದ ಪ್ರಭಾವಿತರಾಗಿ ಬ್ರಿಟಿಷ್ ಜೀವನ ಶೈಲಿ, ಆಚಾರ, ವಿಚಾರಗಳನ್ನು ಅಳವಡಿಸಿಕೊಳ್ಳಲಾರಂಭಿಸಿದರು. ಇಂಥ ಶಿಕ್ಷಣದ ವ್ಯವಸ್ಥೆಗೆ ಕಾರಣರಾದವರು ಲಾರ್ಡ್ ಮೆಕಾಲೆ, ಕಲ್ಕತ್ತದ ಗರ್ವನರ್ ಜನರಲ್(1830) ಇವರ ಉದ್ದೇಶ ಭಾರತದಂತಹ ದೇಶದಲ್ಲಿ ಬ್ರಿಟಿಷರ ಆಡಳಿತಕ್ಕೆ ಬೇಕಾಗಿದ್ದ ಕಾರಕೂನರನ್ನು ತಯಾರು ಮಾಡುವುದಾಗಿತ್ತು. ಅವರ ಉದ್ದೇಶ 1900ಕ್ಕೂ ಮೊದಲೇ ನಿರೀಕ್ಷೆ ಮೀರಿ ಹೆಚ್ಚಾಗುವುದನ್ನು ಕಾಣುತ್ತೇವೆ. ಹೀಗೆ ಮೆಕಾಲೆಯವರು ರೂಪಿಸಿದ ಶಿಕ್ಷಣ ಇಂದಿನ ಜಾಗತೀಕರಣಕ್ಕೆ ರಹದಾರಿಯಾಗುವುದನ್ನು ಮನಗಾಣಬಹುದು.[42]

ಇಂಗ್ಲಿಷ್ ಭಾಷೆಯನ್ನು ವ್ಯವಹಾರಕ್ಕೆ ಅತ್ಯಗತ್ಯ ಭಾಷೆಯೆಂಬಂತೆ ಚಾಲ್ತಿಗೆ ತರಲಾಗಿದೆ. ಇಂಗ್ಲಿಷ್ ಭಾಷೆಯು ಒಂದು ಜಾಗತಿಕ ಭಾಷೆಯಾಗಿ, ಬೌದ್ಧಿಕ ಅಗತ್ಯಗಳನ್ನು ಪೂರೈಸುವ ಮತ್ತು ಜಾಗತಿಕ ಮಾರುಕಟ್ಟೆಯ ವ್ಯವಹಾರಗಳನ್ನು ನಿರ್ವಹಿಸಲು ಅಗತ್ಯವಾದ ಮಾಧ್ಯಮವೆಂದು ಪರಿಗಣಿಸಲಾಗಿದೆ. ಇದರಿಂದ ಉದಾರೀಕರಣದ ಸಂದರ್ಭದಲ್ಲಿ ಈ ಜಾಗತಿಕ ಭಾಷೆಯು ಮಾರುಕಟ್ಟೆಯ ಅಗತ್ಯಕ್ಕೆ ಅನುಸಾರವಾಗಿಯೇ ಬಳಕೆಯಾಗುತ್ತಿದೆ. ಇಂಗ್ಲಿಷ್ ಈಗ ಗೌರವಯುತ ಸ್ಥಾನಮಾನವನ್ನು ಪಡೆದುಕೊಳ್ಳಬೇಕಾದ ಭಾಷೆಯೆಂದೇ ತಿಳಿದುಕೊಳ್ಳಲಾಗಿದೆ. ಈ ಕಾರಣದಿಂದಲೇ ಇಂಗ್ಲಿಷ್‌ಗೆ ಜಾಗತಿಕಮಟ್ಟದ ಸ್ಥಾನಮಾನವನ್ನು ಕೊಟ್ಟು ಅದಕ್ಕೊಂದು ವಿಶಿಷ್ಟ ಜಾಗವನ್ನು ಕಲ್ಪಿಸಲಾಗಿದೆ. ಇದರ ಪರಿಣಾಮವಾಗಿ ರಾಷ್ಟ್ರೀಯ ಭಾಷೆ, ಪ್ರಾದೇಶಿಕ ಭಾಷೆ ಮುಂತಾದವು ತಮ್ಮ ಕೇಂದ್ರಗಳನ್ನು ಬದಲಾಯಿಸಿಕೊಂಡಿವೆ. ವಸಾಹತೋತ್ತರ ಸಂದರ್ಭದಲ್ಲಿ ಇಂಗ್ಲಿಷ್ ಭಾಷೆ ಮತ್ತು ಸಾಹಿತ್ಯ ಕಲಿಕೆಗೆ ಅದರಲ್ಲೂ ಉದಾರೀಕರಣದ ಸಂದರ್ಭದಲ್ಲಿ ಇಂಗ್ಲಿಷ್ ಕಲಿಕೆ ಮತ್ತು ಸಂಪಾದನೆಗೆ ವಿಶೇಷ ಅರ್ಥ ಬಂದಿದೆ. ಇಂಗ್ಲಿಷಿನ ಜ್ಞಾನಕ್ಕೂ ಮತ್ತು ಅಂತಾರಾಷ್ಟ್ರೀಯ

ಕಂಪೆನಿಗಳಲ್ಲಿ ಉದ್ಯೋಗಕ್ಕೂ ಒಂದು ಸಂಬಂಧ ಕಲ್ಪಿಸಲಾಗಿದೆ. ಇದರ ಪರಿಣಾಮದಿಂದ ಅಂತಿಮವಾಗಿ ಪ್ರಾದೇಶಿಕ ಭಾಷೆಗಳಿಗೆ ದೊಡ್ಡದೊಂದು ಕಂಟಕವು ಎದುರಾದರೆ ಆಶ್ಚರ್ಯವೇನಿಲ್ಲ.[43] ಅವರು ವ್ಯಕ್ತಪಡಿಸಿರುವ ಸಂಶಯವು ಇಂದು ನಿಜವಾಗಿದೆ. ಜಾಗತೀಕರಣದ ವ್ಯಾವಹಾರಿಕ ಭಾಷೆಯಾಗಿ ಇಂಗ್ಲಿಷ್ ಭಾಷೆ ದೇಸೀಯ ಅಥವಾ ಪ್ರಾದೇಶಿಕ ಉಪಭಾಷೆಗಳನ್ನು ನಿರ್ನಾಮ ಮಾಡಿ ತನಗೆ ತಾನೇ ಸಾಟಿಯೆಂಬಂತೆ ಮೆರೆಯುತ್ತಿರುವುದನ್ನು ಕಾಣುತ್ತೇವೆ.

ಜಾಗತೀಕರಣದ ಪ್ರಭಾವದಿಂದ ತಲಾತಲಾಂತರದಿಂದ ರೂಢಿಯಾಗಿ ಬಂದಿದ್ದ ಸಾಂಪ್ರದಾಯಿಕ ಶಿಕ್ಷಣವನ್ನು ಸೇವೆಗಳಡಿಯಲ್ಲಿ ಸೇರಿಸಿರುವುದು ದೇಶಿಯ ಸಂಸ್ಕೃತಿಯ ಮೇಲೆ ಬಿದ್ದ ಬಲವಾದ ಪೆಟ್ಟು ಎನ್ನಬಹುದು. ಡಾ. ಜಗದೀಶ ಕೊಪ್ಪ ಅವರ ಪ್ರಕಾರ ಪ್ರತಿಯೊಂದು ರಾಷ್ಟ್ರಕ್ಕೂ ಇರುವ ತನ್ನದೇ ಆದ ಸಾಂಸ್ಕೃತಿಕ ಹಿನ್ನಲೆ ಪರಂಪರೆ ದೇಸಿ ಜ್ಞಾನಗಳನ್ನೊಳಗೊಂಡ ತಳಹದಿಯ ಮೇಲೆ ಆಯಾ ರಾಷ್ಟ್ರದ ಶಿಕ್ಷಣ ವ್ಯವಸ್ಥೆ ರೂಪುಗೊಂಡು ಬಂದಿದೆ. ಯಾವುದೇ ಒಂದು ತಲೆಮಾರು ತನ್ನ ನೆಲದ ಸಾಂಸ್ಕೃತಿಕ, ಐತಿಹಾಸಿಕ ಹಾಗೂ ಪ್ರಾಚೀನ ಇತಿಹಾಸದ ಹಿನ್ನಲೆಯಿಲ್ಲದ ವಿದ್ಯೆಯಲ್ಲಿ ಪರಿಪೂರ್ಣವಾಗದು. ಆದರೆ ಇಂದು ವಿಶ್ವವ್ಯಾಪಾರ ಸಂಘಟನೆ, ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ಹೆಸರಿನಲ್ಲಿ ಶಿಕ್ಷಣವನ್ನು ವ್ಯಾಪಾರೀಕರಣಗೊಳಿಸಲಾಗುತ್ತಿದೆ. ಜಾಗತೀಕರಣದ ಪ್ರಭಾವದಿಂದಾಗಿ ವಿಶ್ವದ ಅನೇಕ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಹಾಗೂ ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಕೇವಲ ಲಾಭದಾಯಕ ಕೋರ್ಸ್‌ಗಳಾದ B.C.A., B.B.M., I.T.T, I.C.W.A, M.B.A., ಮುಂತಾದವುಗಳನ್ನು ತೆರೆದು ಉಳಿದ ಜ್ಞಾನಶಾಖೆಗಳನ್ನು ನಿರ್ನಾಮ ಮಾಡಲಾಗುತ್ತಿದೆ. ಇಂತಹ ವ್ಯವಸ್ಥೆಯಲ್ಲಿ ದೇಶಿಯ ಶಿಕ್ಷಣದ ಜೊತೆ ತಲೆಮಾರಿನಿಂದ ತಲೆಮಾರಿಗೆ ಪ್ರಸರಿಸುತ್ತಿದ್ದ ಆಯಾ ರಾಷ್ಟ್ರಗಳ ಐತಿಹಾಸಿಕ ಪ್ರಜ್ಞೆ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಮೌಲ್ಯಗಳು ಚಲಿಸದೆ ಸ್ಥಗಿತಗೊಂಡಿವೆ.[44] ಎನ್ನುವ ಮಾತುಗಳು ಎಂತಹವರಲ್ಲೂ ಆತಂಕ ಹುಟ್ಟಿಸುವಂತಹದ್ದಾಗಿದೆ.

ವಿಶ್ವವ್ಯಾಪಾರ ಸಂಘಟನೆ ರೂಪಿಸುವ ಏಕರೂಪಿ ಶಿಕ್ಷಣದ ವ್ಯವಸ್ಥೆ ದೇಶೀಯ ಜ್ಞಾನಕೇಂದ್ರಗಳನ್ನು ನಾಶಮಾಡುವುದರ ಜೊತೆಗೆ, ಮಾನವಿಕ ಶಾಸ್ತ್ರಗಳ ಮೂಲಕ ನೀಡುತ್ತಿದ್ದ ಮೌಲ್ಯಾಧಾರಿತ ದೇಶೀಯ ಶಿಕ್ಷಣವನ್ನು ಕಣ್ಮರೆಯಾಗಿಸುತ್ತಿದೆ. ಗುರು-ಶಿಷ್ಯರ ನಡುವೆ ಇದ್ದಂತಹ ಭಾವನಾತ್ಮಕ ಸಂಬಂಧಗಳು ಹೋಗಿ, ಲಾಭ-ನಷ್ಟಗಳ ಸ್ಥಾನಮಾನಗಳನ್ನು ಅಲಂಕರಿಸಲು ಬೇಕಾದ ಮಾರುಕಟ್ಟೆ ಸಂಸ್ಕೃತಿಯನ್ನು ಆಧರಿಸಿದ ಶಿಕ್ಷಣ ಇಂದು ಎಲ್ಲೆಡೆ ರಾರಾಜಿಸುತ್ತಿದೆ. ಮೌಲ್ಯಾಧಾರಿತ ದೇಶೀಯ ಶಿಕ್ಷಣದ ಮೂಲಕ ಸಾಮಾಜಿಕ, ಮಾನವೀಯ ಕಳಕಳಿಯನ್ನು ನೀತಿ,

ನಿಯಮ, ಶಿಸ್ತು, ಸಂಯಮ ಮುಂತಾದ ಉದಾತ್ತ ಗುಣಗಳಿಂದ ಆದರ್ಶ ಪ್ರಜ್ಞೆಗಳನ್ನು ರೂಪಿಸಬೇಕಾಗಿದ್ದ ಶಿಕ್ಷಣದ ಸ್ಥಾನದಲ್ಲಿ ಪಾಶ್ಚಾತ್ಯ ಮಾದರಿಯ ಅಂಧಾನುಕರಣೆ ಮಾಡುವ, ಮಾರುಕಟ್ಟೆ ಸಂಸ್ಕೃತಿಗೆ ದಾಸರಾಗುವ ಶಿಕ್ಷಣವನ್ನು ಜಾಗತೀಕರಣವು ಅಂತರಾಷ್ಟ್ರೀಯ ಸಂಸ್ಥೆಗಳ ಮೂಲಕ ತೃತೀಯ ಜಗತ್ತಿನ ರಾಷ್ಟ್ರಗಳ ಮೇಲೆ ಹೇರುತ್ತಿರುವುದನ್ನು ಕಾಣಬಹುದು. ಶಿಕ್ಷಣದ ಮೇಲೆ ಜಾಗತೀಕರಣ ಪ್ರಭಾವ ಕುರಿತು ಡಾ. ಜಗದೀಶ ಕೊಪ್ಪರವರ ಹೇಳಿಕೆ: "ರಾಷ್ಟ್ರೀಯ ಪ್ರಜ್ಞೆ, ಭಾಷೆ, ಸಂಸ್ಕೃತಿ-ಸ್ವಂತಿಕೆ ಎಲ್ಲವೂ ಜಾಗತೀಕರಣದ ಬಿರುಗಾಳಿಯಲ್ಲಿ ತರಗೆಲೆಗಳಂತೆ ತೂರಿ ಹೋಗುತ್ತಿವೆ. ರಾಷ್ಟ್ರದ ಅಭಿವೃದ್ಧಿಯಲ್ಲಿ ಮಹತ್ವದ ಸ್ಥಾನ ಪಡೆದು ಆದ್ಯತೆ ಕ್ಷೇತ್ರವಾಗಿದ್ದ ಶಿಕ್ಷಣ ಇಂದು ಪ್ರಭುತ್ವದ ಕೈಯಿಂದ ಜಾರಿ ಮಾರುಕಟ್ಟೆ ಪ್ರಭುತ್ವದ ಕಬಂಧ ಬಾಹುಗಳ ಹಿಡಿತಕ್ಕೆ ಸಿಲುಕಿ ನಾಶವಾಗುತ್ತಿದೆ. ಈ ಮಾತು ಪ್ರಸ್ತುತ ಪರಿಸ್ಥಿತಿಯಲ್ಲಿ ಅಕ್ಷರಶಃ ಸತ್ಯವಾಗುತ್ತಿದೆ."[45]

1.6 ಭಾಷೆ ಮತ್ತು ಜಾಗತೀಕರಣ:

ಜಾಗತೀಕರಣದ ಪ್ರಭಾವದಿಂದಾಗಿ ಜಾಗತಿಕ ಮಾರುಕಟ್ಟೆಯ ಭಾಷೆಗೆ ಇಂಗ್ಲಿಷ್ ಭಾಷೆ ಏಕರೂಪಾತ್ಮಕವಾಗಿ ಹೊರಹೊಮ್ಮಿದೆ. "ಜಾಗತಿಕ ಅರ್ಥಶಾಸ್ತ್ರವು ತಂದೊಡ್ಡುವ ಅಪಾಯ ಪ್ರಾದೇಶಿಕ ಭಾಷೆಗಳ ಮೇಲಿದೆ. ಪ್ರಾದೇಶಿಕ ಭಾಷೆಗಳಿಗಿಂತ ಜಾಗತಿಕ ಅರ್ಥವಲಯಕ್ಕೆ ಪ್ರೇರಕವಾದ ಭಾಷೆಗಳು ಮಾತ್ರ ಉಪಯುಕ್ತವಾಗಬಲ್ಲವು. ಈಗ ಬಳಕೆಯಲ್ಲಿರುವ ಕಂಪ್ಯೂಟರ್ ತಂತ್ರಜ್ಞಾನವನ್ನೆ ಉದಾಹರಣೆಗೆ ತೆಗೆದುಕೊಂಡರೆ ಇದಕ್ಕೆ ಪ್ರಾದೇಶಿಕ ಉಪಭಾಷೆಗಳು ಉಪಯುಕ್ತವಲ್ಲ. ಒಂದು ಪ್ರಾದೇಶಿಕ ಭಾಷೆ ಒಂದು ಪ್ರದೇಶದ ಮಣ್ಣಿನ ಸೊಗಡನ್ನು ಅಭಿವ್ಯಕ್ತಗೊಳಿಸುವ ಸಂವಹನವಾಗಿದೆ. ಆ ಭಾಷೆ ಆ ಮಣ್ಣಿನ ವಾಸನೆಯನ್ನು ಸ್ವಾಭಾವಿಕತೆಯನ್ನು ಒಳಗೊಂಡು ಪ್ರಕೃತಿಗೆ ಹತ್ತಿರವಾಗಿರುತ್ತದೆ. ಈ ಪ್ರಾದೇಶಿಕ ಭಾಷೆ, ಉಪಭಾಷೆಗಳು ಆ ಪ್ರದೇಶದ ಸಂಸ್ಕೃತಿಯ ಪ್ರತಿಬಿಂಬವಾಗಿರುತ್ತದೆ. ಆದ್ದರಿಂದಲೇ ಸಂದರ್ಭಕ್ಕನುಸಾರವಾಗಿ ಭಾಷೆಯಲ್ಲಿ ವೈಶಿಷ್ಟ್ಯತೆಯನ್ನು ವಿಭಿನ್ನತೆಯನ್ನು ಭಾಷೆಯ ಬಹುರೂಪಕತ್ವವನ್ನು ಕಾಣುತ್ತೇವೆ. ಉದಾಹರಣೆಗೆ, ಕನ್ನಡದ ಭಾಷೆಯ ಪ್ರಾದೇಶಿಕ ವೈಶಿಷ್ಟ್ಯಗಳನ್ನು ಬೇರೆ ಬೇರೆ ರೀತಿಯವು, ಧಾರವಾಡ ಕನ್ನಡ, ಮೈಸೂರಿನ ಕನ್ನಡ, ದಕ್ಷಿಣಕನ್ನಡದ ಕನ್ನಡ, ಹೀಗೆ ನಮ್ಮ ಭಾಷೆಯ ಚಹರೆಯಿಂದ ಭಾಷೆಯ ಬಹುತ್ವವನ್ನು ಕಾಣಬಹುದು. ಆದರೆ ಜಾಗತಿಕ ಅರ್ಥವ್ಯವಸ್ಥೆಗೆ, ಸಂಪರ್ಕ-ಸಂವಹನಗಳಿಗೆ ಮಾಧ್ಯಮಗಳ ಭಾಷೆಯ ಬಹುತ್ವವು ಬೇಕಾಗಿಲ್ಲ, ಜನಸಾಮಾನ್ಯರ, ಸ್ಥಳೀಯರ ಗ್ರಾಮೀಣ ಭಾಷೆ, ಆಡುನುಡಿಯ ಭಾಷೆ, ಮಣ್ಣಿನ ಭಾಷೆ, ನೈಸರ್ಗಿಕ ಭಾಷೆ ಬೇಕಾಗಿಲ್ಲ, ಜಾಗತೀಕರಣದ ಪ್ರಕ್ರಿಯೆಯಲ್ಲಿ

ಅದು ಭಾಷೆಯನ್ನು ಹೇರುವುದರ ಮೂಲಕ ಯಜಮಾನಿಕೆಯನ್ನು ಮೆರೆಯುವುದರಿಂದ ಪ್ರಾದೇಶಿಕ ಭಾಷೆಗಳು ಸತ್ವಹೀನವಾಗುತ್ತವೆ. ಇದರಿಂದ ದೇಸೀಯ ಸಂಸ್ಕೃತಿಯ ಮೇಲೆ ದಬ್ಬಾಳಿಕೆ ನಡೆಸಿದಂತಾಗುತ್ತದೆ. ಪ್ರಾದೇಶಿಕ ಭಾಷೆಗಳ ನಾಶದಿಂದ ಮಾನವೀಯ ಸಂಬಂಧಗಳ ನಾಶವನ್ನು ಜಾಗತೀಕರಣದ ಭಾಷೆ ಇಂದು ಮಾಡುತ್ತಿದೆ.[46]

1.7 ಮತಾಂತರ ಮತ್ತು ಜಾಗತೀಕರಣ:

ಜಾಗತೀಕರಣದ ಮುಖ್ಯ ಉದ್ದೇಶ ಆರ್ಥಿಕ ಶೋಷಣೆಯಾಗಿದೆ, ಆ ಉದ್ದೇಶವನ್ನು ಈಡೇರಿಸಿಕೊಳ್ಳಲು ಧರ್ಮದ ದುರ್ಬಳಕೆ ಮಾಡಿಕೊಳ್ಳುವುದನ್ನು ಕಾಣಬಹುದು. ಬ್ರಿಟಿಷ್ ವಸಾಹತು ಆಳ್ವಿಕೆಯಲ್ಲಿ ಪ್ರಾಟಸ್ಟೆಂಟ್ ಕ್ರಿಶ್ಚಿಯನ್ ಧರ್ಮ ಭಾರತದ ಸಮಾಜದ ಮೇಲೆ ಪ್ರಭಾವ ಬೀರಲು ಪ್ರಾರಂಭಿಸಿತು. ಆದರೆ ಕ್ರೈಸ್ತ ಧರ್ಮವು ಬಿಟಿಷರು ಮತ್ತು ಪೋರ್ಚುಗೀಸರು ಭಾರತಕ್ಕೆ ಬರುವ ಪೂರ್ವದಲ್ಲಿಯೇ ಭಾರತಕ್ಕೆ ಪ್ರವೇಶಿಸಿದೆ ಎಂದು ಇತಿಹಾಸ ಹೇಳುತ್ತದೆ. ಅಪೋಸಲ್ ಥಾಮಸ್ ಎಂಬ ಪಾದ್ರಿ ಕ್ರಿ.ಶ. 50ರಲ್ಲಿ ಚರ್ಚುಗಳನ್ನು ಸ್ಥಾಪಿಸಲು ಭಾರತಕ್ಕೆ ಬಂದಿರುವ ನಿದರ್ಶನಗಳಿವೆ.[47] ಬ್ರಿಟಿಷರ ಆಳ್ವಿಕೆಯಲ್ಲಿ ಕ್ರೈಸ್ತ ಮಿಷನರಿಗಳು ಸ್ಥಳೀಯರನ್ನು ಮತಾಂತರಗೊಳಿಸುವ ಮೂಲಕ ತಮ್ಮ ಧರ್ಮವನ್ನು ವಿಸ್ತರಿಸಲು ಕಾರ್ಯಪ್ರವೃತ್ತರಾಗಿ. ತಾವು ಕೈಗೊಂಡ ಕಾರ್ಯದಲ್ಲಿ ಸಫಲತೆಯನ್ನು ಪಡೆಯುತ್ತಾರೆ. ಭಾರತದ ಜಾತಿ ವ್ಯವಸ್ಥೆಯಲ್ಲಿ, ಸಮಾಜದಲ್ಲಿ ಕೆಳಸ್ತರದಲ್ಲಿದ್ದವರನ್ನು ಮತ್ತು ಅಸ್ಪೃಶ್ಯರನ್ನು ಕ್ರೈಸ್ತ ಧರ್ಮಕ್ಕೆ ಸಾಕಷ್ಟು ಸಂಖ್ಯೆಯಲ್ಲಿ ಮತಾಂತರಗೊಳಿಸುತ್ತಾರೆ.[48] ಭಾರತದಲ್ಲಿದ್ದ ಜಾತಿ-ವರ್ಗ-ವರ್ಣ ವ್ಯವಸ್ಥೆಯನ್ನು ಟೀಕಿಸುವುದರ ಮೂಲಕ ಮತಾಂತರಗೊಳಿಸುವುದನ್ನು ಬಹಳ ಸುಲಭವಾಗಿ ನಿರ್ವಹಿಸುತ್ತಾರೆ. ಕ್ರೈಸ್ತ ಮಿಷನರಿಗಳ ಪ್ರಕಾರ ಜಾತಿ ವ್ಯವಸ್ಥೆ ಎನ್ನುವುದು ಸಾಮಾಜಿಕ ಸ್ಥಾನ ಮತ್ತು ಧಾರ್ಮಿಕ ಸಂಸ್ಥೆಯನ್ನು ಒಳಗೊಂಡಿದೆ. ಇವೆರಡನ್ನು ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಬೇರ್ಪಡಿಸಲು ಕಷ್ಟಸಾಧ್ಯವೆಂದು ಅವರು ಮನಗಂಡು. ಹೆಚ್ಚಿನ ಸಂಖ್ಯೆಯಲ್ಲಿ ಕ್ರೈಸ್ತೀಕರಣಗೊಳಿಸಲು ಅನೇಕ ಮಾರ್ಗೋಪಾಯಗಳನ್ನು ಕಂಡುಕೊಳ್ಳುತ್ತಾರೆ. ಅವುಗಳಲ್ಲಿ ಬಂಡವಾಳಶಾಹಿ ವ್ಯವಸ್ಥೆಯನ್ನು ವಿಸ್ತರಿಸುವುದು, ತಾಂತ್ರಿಕ ಕೌಶಲ್ಯವನ್ನು ಸಮಾಜದ ಕೆಳಸ್ತರದವರಿಗೆ ಪರಿಚಯಿಸುವುದು, ಆಧುನಿಕ ಪರಿಕರಗಳ ಆಮಿಷಗಳನ್ನೊಡ್ಡುವುದು ಪ್ರಧಾನವಾದವು. ಇವುಗಳ ಮೂಲಕ 19ನೇ ಶತಮಾನದ ಅಂತ್ಯದ ವೇಳೆಗೆ ಬಹಳಷ್ಟು ಸಂಖ್ಯೆಯಲ್ಲಿ ಹಿಂದೂ ಧರ್ಮದವರನ್ನು ಕ್ರೈಸ್ತ ಧರ್ಮಕ್ಕೆ ಮತಾಂತರಗೊಳಿಸುತ್ತಾರೆ.[49]

ಹೀಗೆ ಮತಾಂತರ ಜಾಗತೀಕರಣದ ಮತ್ತೊಂದು ಭಾಗವಾಗಿದೆ. ಕ್ರೈಸ್ತೀಕರಣದ ಮೂಲಕ ದೇಸಿಯರ ಸಾಮಾಜಿಕ, ಸಾಂಸ್ಕೃತಿಕ ಬದುಕನ್ನು, ರೂಢಿ-ಸಂಪ್ರದಾಯಗಳನ್ನು ಅಪಾಯಕ್ಕೊಡ್ಡಿ, ಮತಾಂತರಗೊಳಿಸುವುದು ಜಾಗತೀಕರಣದ ಉದ್ದೇಶವಾಗಿದೆ.[50] ಜಾಗತೀಕರಣದ ಪ್ರಮುಖ ಧರ್ಮವೆಂದರೆ ಕ್ರೈಸ್ತ ಧರ್ಮವಾಗಿದೆ. ಕ್ರೈಸ್ತ ಧರ್ಮದ ಮೂಲಕ ಪಾಶ್ಚಾತ್ಯ ಸಂಸ್ಕೃತಿ, ಆಲೋಚನೆಗಳು ಪ್ರವೇಶ ಮಾಡಿ ದೇಸೀಯ ಸಾಂಪ್ರದಾಯಿಕ ಬದುಕನ್ನು ಅಸಹನೀಯಗೊಳಿಸುವುದನ್ನು ಕಾಣುತ್ತೇವೆ. ಮತಾಂತರ ಹೊಂದಿದ ದೇಸಿಯರು ಕ್ರೈಸ್ತ ಮತವನ್ನಲ್ಲದೆ, ಪಾಶ್ಚಾತ್ಯ ವೇಷ, ಭೂಷಣ, ನಡೆ-ನುಡಿಯನ್ನು ಅನುಕರಿಸುತ್ತ ತಾವು ಹುಟ್ಟಿ ಬೆಳೆದ ಮಣ್ಣಿನ ಸಂಸ್ಕೃತಿಗೆ ದೂರವಾಗಿ ಪರಕೀಯರಾಗುವುದನ್ನು ಕಾಣಬಹುದು.

1.8 ಕೃಷಿ ಮತ್ತು ಜಾಗತೀಕರಣ :

ಭಾರತ ಒಂದು ಕೃಷಿ ಪ್ರಧಾನವಾದ ರಾಷ್ಟ್ರ. ದೇಶದ ಜನಸಂಖ್ಯೆಯ ಶೇಕಡ 74 ಜನರಿಗೆ ಕೃಷಿಯೇ ಮೂಲ ಕಸುಬು. ಈ ದೇಶದ ಬೆನ್ನೆಲುಬಾದ ಅನ್ನದಾತ ರೈತ ಸಾವಿರಾರು ವರ್ಷಗಳಿಂದಲೂ ತನ್ನ ಬದುಕಿಗೆ ಕೃಷಿಯನ್ನು ಅವಲಂಬಿಸಿ ಸಾಂಪ್ರದಾಯಿಕ ರೀತಿಯಲ್ಲಿ ಸಾಗುವಳಿ ಮಾಡಿ ತಾನೂ ಬದುಕಿ ಇತರರಿಗೂ ಅನ್ನ ನೀಡುತ್ತಿದ್ದವನು. ಈ ದೇಶದ ಮಣ್ಣಿನ ನಿಜವಾದ ಮಗನೆಂದರೆ ರೈತ ಆದರೆ ಮುಕ್ತಮಾರುಕಟ್ಟೆ ಹೆಸರಿನಲ್ಲಿ ಇಡೀ ವಿಶ್ವದ ಕೃಷಿ ಕ್ಷೇತ್ರವನ್ನು ಆಕ್ರಮಿಸಿಕೊಳ್ಳಲು ಮತ್ತು ಕೃಷಿ ಪ್ರಧಾನವಾದ ಭಾರತ ದೇಶವನ್ನು ನಿಯಂತ್ರಿಸಲು ಬಹುರಾಷ್ಟ್ರೀಯ ಕಂಪೆನಿಗಳು ಮುಂದಾದವು. ಇದರಿಂದ ಸಾಂಪ್ರದಾಯಕವಾಗಿ ಬೆಳೆದು ಬಂದ ಭಾರತದ ಕೃಷಿ ವಲಯವನ್ನು ನಾಶಮಾಡಿ, ಉತ್ಪಾದನಾ ಸಾಮರ್ಥ್ಯವನ್ನು ಮೊಟಕುಗೊಳಿಸಿ ದೇಸಿಯ ತಳಿಗಳನ್ನು ನಾಶಪಡಿಸಿ, ಹೊಸತಳಿಗಳ ಬಿತ್ತನೆ ಬೀಜಗಳ ಮೂಲಕ ಹಿಂದುಳಿದ ರಾಷ್ಟ್ರಗಳ ಕೃಷಿಕ್ಷೇತ್ರವನ್ನು ಅಲ್ಲೋಲ ಕಲ್ಲೋಲಗೊಳಿಸಿದವು. ಜಾಗತೀಕರಣವು ಮುಕ್ತಮಾರುಕಟ್ಟೆ, ಉದಾರೀಕರಣ ಹಾಗೂ ಜಾಗತೀಕರಣದ ಮೂಲಕ ಕೃಷಿಯನ್ನೇ ಮೂಲಕಸುಬನ್ನಾಗಿ ನಂಬಿಕೊಂಡಿದ್ದ ರೈತನ ಅಸ್ತಿತ್ವವನ್ನು ನಿರ್ನಾಮ ಮಾಡಲು ಹೊರಟಿವೆ ಎಂದರೆ ತಪ್ಪಾಗಲಾರದು.

ವಿಶ್ವವ್ಯಾಪಾರ ಸಂಘಟನೆ ಕೃಷಿ ಒಪ್ಪಂದಗಳನ್ನು ಜಾರಿಗೆ ತಂದು ತೃತೀಯ ಜಗತ್ತಿನ ರಾಷ್ಟ್ರಗಳ ಕೃಷಿಯ ಮೇಲೆ ನಿಯಂತ್ರಣ ಸಾಧಿಸುವುದರ ಮೂಲಕ ಸ್ಥಳೀಯ ಕೃಷಿವಲಯಗಳನ್ನು ನಾಶಮಾಡುವುದನ್ನು ಕಾಣಬಹುದು. ಕೃಷಿಗೆ ನೀಡುವ ಸಹಾಯಧನ ಅಥವಾ ಸಬ್ಸಿಡಿಯನ್ನು

ತೆಗೆದು ಹಾಕುವುದು, ಬಡರಾಷ್ಟ್ರಗಳ ಕೃಷಿ ಮಾರುಕಟ್ಟೆಗೆ ಲಗ್ಗೆಯಿಟ್ಟು ಅವುಗಳ ಮಾರುಕಟ್ಟೆ ವ್ಯವಸ್ಥೆಯನ್ನು ನಾಶಮಾಡುವುದು, ಸ್ಥಳೀಯವಾಗಿ ರೂಢಿಯಲ್ಲಿದ್ದ ಬಿತ್ತನೆ ಬೀಜಗಳ ಬಳಕೆಯನ್ನು ನಿಷ್ಕ್ರಿಯಗೊಳಿಸುವುದು, ರೈತನಿಗೆ ಹೈಬ್ರಿಡ್ ಬಿತ್ತನೆ ಬೀಜಗಳನ್ನು ನೀಡಿ ರೈತರನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳುವುದು, ರಾಸಾಯನಿಕ ಗೊಬ್ಬರಗಳನ್ನು, ಕ್ರಿಮಿನಾಶಕಗಳನ್ನು ನೀಡಿ ಮಣ್ಣಿನ ಫಲವತ್ತತೆಯನ್ನು ನಾಶಮಾಡುವುದು ಮುಂತಾದ ನೀತಿಗಳಿಂದ ತಲತಲಾಂತರವಾಗಿ ಬೆಳೆದು ಬಂದಿದ್ದ ಸಾಂಪ್ರದಾಯಿಕ ಕೃಷಿ ಕ್ಷೇತ್ರವನ್ನು ನಾಶಮಾಡುವುದೇ ಜಾಗತೀಕರಣದ ಧ್ಯೇಯ ಗುರಿಯಾಯಿತು.

ದೇಸಿಯ ಕೃಷಿ ವ್ಯವಸ್ಥೆಯಲ್ಲಿ ಆಹಾರೋತ್ಪತ್ತಿ ಮಾಡುತ್ತಿದ್ದಾಗ ಗ್ರಾಮೀಣ ಭಾಗದ ನೆಲ, ಜಲ, ಪರಿಸರ, ಎಲ್ಲವೂ ಪವಿತ್ರವಾಗಿದ್ದು, ಇವುಗಳ ಬಳಕೆಯಿಂದ ಪಡೆಯಲಾದ ಇಳುವರಿ ಅಥವಾ ಆಹಾರವೂ ಕೂಡ ಪರಿಶುದ್ಧವಾಗಿದ್ದು ಆರೋಗ್ಯಕರವಾಗಿತ್ತು. ಇದು ಸಾಂಪ್ರದಾಯಿಕ ಕೃಷಿ ಪದ್ಧತಿಯ ಕೊಡುಗೆ. ಜಾಗತೀಕರಣದ ಪ್ರವೇಶದಿಂದ ಬಹುರಾಷ್ಟ್ರೀಯ ಕಂಪೆನಿಗಳು ಜೈವಿಕ ತಂತ್ರಜ್ಞಾನವನ್ನು ಸೃಷ್ಟಿ ಮಾಡಿದವು, ಇದರ ಪರಿಣಾಮವಾಗಿ ವಂಶವಾಹಿನಿ ತಂತ್ರಜ್ಞಾನದ ಆವಿಷ್ಕಾರವಾಯಿತು. ಇದರಿಂದ ಶ್ರೀಮಂತರಾಷ್ಟ್ರಗಳು ಸಾಂಪ್ರದಾಯಿಕ ಬೀಜೋತ್ಪಾದನೆ ಬೀಜ ಸಂಗ್ರಹಣೆಗೆ ಬಲವಾದ ಪೆಟ್ಟು ನೀಡಿದವು. ಈ ಕಂಪೆನಿಗಳು ಜೈವಿಕ ತಂತ್ರಜ್ಞಾನದಿಂದ ಹಲವಾರು ಬೀಜಮಾರುಕಟ್ಟೆಗಳನ್ನು ತೆರೆದು ರೈತರಿಗೆ ಆಮಿಷವೊಡ್ಡಿ ಮಾರಾಟಮಾಡುತ್ತಿವೆ. ಹಾಗೆಯೇ ರೈತರು ಬಹುರಾಷ್ಟ್ರೀಯ ಕಂಪೆನಿಗಳ ಕುಯುಕ್ತಿಗೆ ಬಲಿಯಾಗಿ ಹೆಚ್ಚಿನ ಇಳುವರಿ ಪಡೆಯಬಹುದು ಎಂದು ಮುಗಿಬೀಳುತ್ತಿದ್ದಾರೆ. ಕಡಿಮೆ ಅವಧಿಯಲ್ಲಿ ಮತ್ತು ಕಡಿಮೆ ಪ್ರದೇಶದಲ್ಲಿ ಹೆಚ್ಚು ಇಳುವರಿಯನ್ನು ಹೇಗೆ ತೆಗೆಯಬಹುದೆಂದು ತಿಳಿಸಿ ಅದಕ್ಕೆ ಬೇಕಾದ ಕೀಟನಾಶಕ, ರಾಸಾಯನಿಕ ಗೊಬ್ಬರಗಳನ್ನು ಬಹುರಾಷ್ಟ್ರೀಯ ಕಂಪೆನಿಗಳು ರೈತರಿಗೆ ನೀಡುತ್ತವೆ. ಇದರಿಂದ ರೈತ, ರೈತನ ಹೊಲಗದ್ದೆಗಳು, ಪರಿಶ್ರಮ ಎಲ್ಲವನ್ನು ಈ ಕಂಪೆನಿಗಳೇ ನಿಯಂತ್ರಿಸುತ್ತವೆ. ಇದೊಂದು ರೀತಿಯ ಗುಲಾಮಗಿರಿ. ಸರ್ವಸ್ವತಂತ್ರವಾಗಿ ಪರಿಶುದ್ಧವಾದ, ದವಸ ಧಾನ್ಯಗಳನ್ನು ಬೆಳೆದು ಪರಿಸರ ಸ್ನೇಹಿಯಾಗಿ ನೆಲ, ಜಲ, ನೈಸರ್ಗಿಕ ಸಂಪನ್ಮೂಲಗಳನ್ನು ಸದ್ಬಳಕೆ ಮಾಡುತ್ತಿದ್ದ ರೈತರು ಬಹುರಾಷ್ಟ್ರೀಯ ಕಂಪೆನಿಗಳ ದಾಸರಾಗಿ ಇಡೀ ಭೂಮಿಯನ್ನು ಬಂಜರಾಗಿಸುತ್ತಿದ್ದಾರೆ. ಇದರ ಪರಿಣಾಮವೆಂದರೆ ಆಹಾರ ಸ್ವಾವಲಂಬನೆಯನ್ನು–ನಾಶಗೊಳಿಸುವುದು ಹಾಗೂ ಇಲ್ಲಿದ್ದ ದೇಸಿಯ ತಳಿಗಳನ್ನು ನಾಶಪಡಿಸುವುದು, ಹೊಸ ತಳಿಗಳ ಬಿತ್ತನೆ ಬೀಜಗಳ ಹತೋಟಿಯ ಮೂಲಕ ನಿಯಂತ್ರಣ ಸಾಧಿಸುವುದು, ಇದು ಜಾಗತೀಕರಣದ ಹೆಸರಿನಲ್ಲಿ ಬಹುರಾಷ್ಟ್ರೀಯ ಕಂಪೆನಿಗಳು ನಡೆಸುತ್ತಿರುವ ಕುತಂತ್ರವಾಗಿದೆ.[51]

ವಂದನಾಶಿವ ಅವರ ಕೃತಿಯಲ್ಲಿ 'ಸುಗ್ಗಿಯ ದರೋಡೆ'(Stolen Harvest), ಜಾಗತಿಕ ಆಹಾರ ವ್ಯವಸ್ಥೆಯ ಮೇಲೆ ಬೆಳಕನ್ನು ಚೆಲ್ಲುತ್ತಾ, 'ಆಹಾರ ಸಂಸ್ಕೃತಿಯು ಪ್ರತಿಯೊಬ್ಬನ ಆತ್ಮವಾಗಿತ್ತು ಎಂದು ಪ್ರತಿಪಾದಿಸುತ್ತಾರೆ. ಇಂದು ಜೈವಿಕ ತಂತ್ರಜ್ಞಾನ, ಕೃಷಿನೀತಿಗಳು ಮತ್ತು ಜಾಗತಿಕ ಆಹಾರ ವ್ಯವಸ್ಥೆಯು ದೇಶೀಯ ಆಹಾರ ಸರಪಳಿಯನ್ನು ನಾಶಮಾಡುತ್ತಿವೆ. ಬಡವರ ಪಾಲಿನ ಆಹಾರವನ್ನು ಕಸಿದುಕೊಳ್ಳುತ್ತಿವೆ ಎಂದು ಹೇಳುವುದರಲ್ಲಿ ಸುಳ್ಳಿರಲಾರದು ಎಂದೆನಿಸುತ್ತದೆ. ಏಕೆಂದರೆ 'ವಾಣಿಜ್ಯ ಕೃಷಿ' ಅಥವಾ 'ಕೃಷಿ–ವ್ಯಾಪಾರ'ವೆಂಬ ಹೊಸ ನುಡಿಗಟ್ಟು ಇಂದು ಜಾಗತೀಕರಣದ ಕೇಂದ್ರೀಕೃತ ಭಾಗವಾಗಿ ವಂಶವಾಹಿನಿ ತಂತ್ರಜ್ಞಾನದ ಮೂಲಕ ಕೃಷಿ ಕ್ಷೇತ್ರದ ಮೇಲೆ ನಿರ್ದಾಕ್ಷಿಣ್ಯವಾದ ನಿಯಂತ್ರಣ ಸಾಧಿಸುತ್ತಿದೆ. ಜೈವಿಕತಂತ್ರಜ್ಞಾನದ ಉದಯದಿಂದಾಗಿ ಕೃಷಿ, ವಾಣಿಜ್ಯ ಕ್ಷೇತ್ರದಲ್ಲಿ 'ವಂಶವಾಹಿನಿ ತಂತ್ರಜ್ಞಾನವು' ಬಹುರಾಷ್ಟ್ರೀಯ ಕಂಪೆನಿಗಳ ಅವತಾರವಾಗಿದ್ದು ಇಡೀ ಕೃಷಿ ಕ್ಷೇತ್ರವನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡು ನಿಯಂತ್ರಿಸುತ್ತಿವೆ.[52]

ಸಾಂಪ್ರದಾಯಿಕ ಪರಿಸರ ಸ್ನೇಹಿ ಕೃಷಿಯನ್ನು, ಕೃಷಿ–ವಾಣಿಜ್ಯ ಕ್ಷೇತ್ರವನ್ನಾಗಿಸಿದ ಬಹುರಾಷ್ಟ್ರೀಯ ಕಂಪೆನಿಗಳು ಸ್ಥಳೀಯ ಬೆಳೆಗಳು, ಬಹು ವೈವಿಧ್ಯಮಯ ತಳಿಗಳನ್ನು ಹೇಗೆ ನಿರ್ನಾಮ ಮಾಡಿದರು ಎಂಬುದನ್ನು ವಂದನಾಶಿವ ಅವರು ತಮ್ಮ ಕೃತಿ 'Stolen Harvest'ನಲ್ಲಿ ಹೇಳುತ್ತಾರೆ. ಬಹುರಾಷ್ಟ್ರೀಯ ಕಂಪೆನಿಗಳು ಬರುವ ಮೊದಲು ಸಾಸಿವೆ ಎಣ್ಣೆಯನ್ನು ಸಮಾಜದ ಎಲ್ಲಾ ವರ್ಗದವರು ತಮ್ಮ ದೈನಂದಿನ ಆಹಾರವಾಗಿ ಬಳಸುತ್ತಿದ್ದರು. ಜಾಗತೀಕರಣದ ಪ್ರಭಾವದಿಂದ ಬಂದ ಕುಯುಕ್ತಿ ಮನಸ್ಸಿನ ಬಹುರಾಷ್ಟ್ರೀಯ ಕಂಪೆನಿಗಳು ಸಾಸಿವೆ ಎಣ್ಣೆಯ ಸ್ಥಾನದಲ್ಲಿ 'ಸೋಯಾ' ಎಂಬ ಏಕರೂಪಿ ತಳಿಯನ್ನು ತಂದ ಬಗೆಯನ್ನು ವಿವರಿಸುತ್ತಾರೆ. ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ, ಕಡಿಮೆ ವೆಚ್ಚದಲ್ಲಿ ಪರಿಸರದ ಮೇಲೆ ಯಾವ ಪ್ರತಿಕೂಲ ಪರಿಣಾಮವನ್ನು ಬೀರದ, ಸಾಸಿವೆ ಬೇಸಾಯದ ಸ್ಥಾನದಲ್ಲಿ ಕೇಂದ್ರಿಕೃತ ಏಕ ವ್ಯವಸ್ಥೆಯ ಮೂಲಕ ದುಬಾರಿ ಬೆಲೆಯ, ಮನುಷ್ಯರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟುಮಾಡಬಲ್ಲ ಪರಿಸರಕ್ಕೂ ಮಾರಕವಾದ ಸೋಯಾಬಿನ್, ಅತ್ಯಂತ ವ್ಯವಸ್ಥಿತವಾಗಿ ರೂಪಿಸಿದ ಪಿತೂರಿಯ ಮೂಲಕ ಸ್ಥಳೀಯ ಆಹಾರ ಸಂಸ್ಕೃತಿಯ ಮೇಲೆ ಆಕ್ರಮಣ ಮಾಡಿತ್ತು ಎನ್ನುವುದನ್ನು ಕಾಣಬಹುದು. ಇಲ್ಲಿ ಕೇವಲ ದೇಸೀಯ, ಸಾಂಪ್ರದಾಯಿಕ, ಆಹಾರ ಸಂಸ್ಕೃತಿಯನ್ನಷ್ಟೇ ಅಲ್ಲದೆ ದೇಸೀಯ ಜನರ ಆರೋಗ್ಯಕರ ಬದುಕನ್ನು ಅಪಾಯಕ್ಕೊಡ್ಡುವುದನ್ನು ಕಾಣುತ್ತೇವೆ.[53]

ದೇಸಿಯ ಕೃಷಿಯ ಜೊತೆಗೆ ರೈತನಿಗೆ ಆಸರೆಯಾಗಿದ್ದ ಹೈನುಗಾರಿಕೆ, ಕುರಿ ಸಾಕಾಣಿಕೆ, ಕೋಳಿಸಾಕಾಣಿಕೆಯ ಮೇಲೂ ಜಾಗತೀಕರಣದ ಕರಿನೆರಳು ಬೀಳುವುದನ್ನು ಕಾಣುತ್ತೇವೆ.

ದೇಸಿಯವಾಗಿ ತಲತಲಾಂತರಗಳಿಂದ ರೈತನ ಜೀವನದ ಜೊತೆಗೆ ಅವಿನಾಭಾವ ಸಂಬಂಧ ಹೊಂದಿದ್ದ ಹಸು, ಎಮ್ಮೆ, ಕುರಿ, ಕೋಳಿ, ಮೇಕೆ ಮುಂತಾದ ಸಾಕುಪ್ರಾಣಿಗಳು ರೈತನಿಗೆ ಆಸರೆಯಾಗಿದ್ದು, ರೈತನ ದಿನನಿತ್ಯದ ಅವಿಭಾಜ್ಯ ಅಂಗವಾಗಿದ್ದವು. ರೈತನ ಆದಾಯದ ಮೂಲವಾಗಿದ್ದು, ಕೃಷಿಗೆ ಬೇಕಾದ ಸಹಾಯವನ್ನು ಇವುಗಳಿಂದ ಪಡೆದು ರೈತ ಸ್ವಾವಲಂಬಿ ಬದುಕನ್ನು ನಡೆಸುವುದರ ಮೂಲಕ ಗ್ರಾಮೀಣ ಸಂಸ್ಕೃತಿಯ ಹಿರಿಮೆಗೆ ಗರಿಷ್ಠ ಕೊಡುಗೆಯನ್ನು ನೀಡುತ್ತಿದ್ದ. ಆದರೆ ಜಾಗತೀಕರಣದ ಪ್ರಭಾವ ಮತ್ತು ಮಾರುಕಟ್ಟೆ ಸಂಸ್ಕೃತಿಯಿಂದ ಜಾನುವಾರುಗಳ ನಡುವಿನ ಸಂಬಂಧ ಹೋಗಿ ಕೇವಲ ಕೊಡುಕೊಳ್ಳುವಿಕೆಯ ವ್ಯಾಪಾರಿ ಧೋರಣೆಯನ್ನು ಕಾಣುತ್ತಿದ್ದೇವೆ.

ದೇಸೀ ಪರಿಸರದಲ್ಲಿ ರೈತ ಹೊಲಗದ್ದೆಗಳ ಉಳುಮೆ ಮಾಡಲು, ಜೀವನಕ್ಕೆ ಬೇಕಾದ ಹಾಲು, ಮೊಸರು, ಬೆಣ್ಣೆ ಮುಂತಾದ ಹಾಲಿನ ಪದಾರ್ಥಗಳಿಗೆ ಹಸು, ಎಮ್ಮೆಗಳನ್ನು ಸಾಕುತ್ತಿದ್ದು, ದೇಸಿಯ ತಳಿಗಳ ರಾಸುಗಳೇ ರೈತನ ಪಾಲಿಗೆ ಅಮೂಲ್ಯವಾಗಿದ್ದವು. ಆದರೆ ಇಂದು ಹೈಬ್ರಿಡ್ ರಾಸುಗಳು ಬಂದು ಹೈನುಗಾರಿಕೆ ಜೊತೆಗೆ ಮಾಂಸೋದ್ಯಮವನ್ನು ಪೋಷಿಸುತ್ತಿವೆ. ಹಿಂದೆ ಇದ್ದ ಸಾಂಪ್ರದಾಯಕ ಹೈನುಗಾರಿಕೆ ಇಂದು ಆಧುನಿಕ ಕೈಗಾರಿಕೋದ್ಯಮವಾಗಿದೆ. ಹಿಂದೆ ಹಾಲು ಕೊಡುತ್ತಿದ್ದ ರೈತನ ಪಾಲಿಗೆ ಪವಿತ್ರವಾಗಿದ್ದ ಹಸು ಇಂದು ಹಾಲು ಹಿಂಡುವ ಮಾಂಸ ನೀಡುವ ಯಂತ್ರವಾಗಿದೆ.

ಗ್ರಾಮೀಣ ಜನತೆಗೆ ಉದ್ಯೋಗವನ್ನೊದಗಿಸಿ ಆದಾಯದ ಮೂಲವಾಗಿದ್ದ ಹೈನುಗಾರಿಕೆ, ಪರಿಸರ ಸ್ನೇಹಿಯಾಗಿತ್ತು, ಸ್ಥಳೀಯ ಕಸಾಯಿಖಾನೆಗಳಲ್ಲಿ ರಾಸುಗಳ ಪ್ರತಿಯೊಂದು ಭಾಗವನ್ನು ಬಳಸಿಕೊಂಡು ಗುಡಿ ಕೈಗಾರಿಕೆಗೆ ಉತ್ತೇಜನ ನೀಡುತ್ತಿದ್ದರು. ಆದರೆ ರಫ್ತು ಆಧಾರಿತ ಮಾಂಸೋದ್ಯಮದಿಂದ, ಅನೇಕ ಜನರ ಉದ್ಯೋಗವನ್ನು ಕಸಿದುಕೊಂಡು, ಕಸಾಯಿಖಾನೆಗಳಲ್ಲಿ ಮಾಂಸವೊಂದೇ ಪ್ಯಾಕ್ ಆಗಿ ಇನ್ನುಳಿದ ಭಾಗವನ್ನು ನಿರುಪಯುಕ್ತವೆಂದು ಬಿಸಾಡುವುದರಿಂದ ಪರಿಸರಕ್ಕೆ ಮಾರಕವಾಗುವುದನ್ನು ಕಾಣುತ್ತೇವೆ.[54] ಅಮೆರಿಕಾ ಮೂಲದ ದೈತ್ಯ ಬಹುರಾಷ್ಟ್ರೀಯ ಕಂಪೆನಿಗಳಾದ ಕಾರ್ಗಿಲ್, ಮ್ಯಾಕ್‌ಡೊನಾಲ್ಡ್, ಆರ್ಚರ್ ಡೇನಿಯಲ್, ಮಿಡ್‌ಲ್ಯಾಂಡ್, ನೆಸ್ಲೆ, ಜಾನ್ಸನ್ ಮುಂತಾದವು ಕೃಷಿ ಕ್ಷೇತ್ರವನ್ನು ಕೈಗಾರಿಕೀರಣಗೊಳಿಸಿ ಆಹಾರೋತ್ಪಾದನೆಯನ್ನು ಯಾಂತ್ರೀಕರಿಸುವುದರ ಮೂಲಕ ಸಾಂಪ್ರದಾಯಕ ಆಹಾರ ಪದ್ಧತಿಯನ್ನೇ ಅಲ್ಲೋಲ ಕಲ್ಲೋಲ ಮಾಡುತ್ತಿರುವುದನ್ನು ಕಾಣಬಹುದು. ಪಾಶ್ಚಿಮಾತ್ಯದ ಕೃಷಿ ವ್ಯಾಪಾರವು ಇಂದು ಬಹು ವೈವಿಧ್ಯಮಯವಾದ ರಾಸುಗಳ ಮತ್ತು ದವಸ ಧಾನ್ಯಗಳ ದೇಶಿಯ ತಳಿಯನ್ನು ಏಕಕೃಷಿಯಾಧಾರಿತ, ತಳಿತಂತ್ರಜ್ಞಾನದ ಆಕರವಾದ ಸೋಯಾ, ಗೋಧಿ, ಸೀಗಡಿ ಮತ್ತು ಹಸುಗಳಿಂದ

ನಾಶಮಾಡುತ್ತಿರುವುದನ್ನು ಕಾಣುತ್ತೇವೆ. ಅದೇ ರೀತಿ ವೈವಿಧ್ಯಮಯವಾದ ಮಾನವನ ಬದುಕನ್ನು ಮತ್ತು ಸಾಂಪ್ರದಾಯಕ ಆಹಾರ ಪದ್ಧತಿಯನ್ನು, ಇನ್ನು ಮುಂದೆ ಅಸಾಧ್ಯವೆನ್ನುವಂತೆ ಮಾಡಲಾಗಿದೆ.

1.9 ಜಾಗತೀಕರಣ ಮತ್ತು ವಲಸೆ:

ದೇಸಿಯ ಸಂಸ್ಕೃತಿಯ ಪೋಷಕ ಕೇಂದ್ರಗಳಾಗಿದ್ದ ಗ್ರಾಮಗಳಲ್ಲಿ ಪರಾಂಪರಾಗತವಾಗಿ ಬೆಳೆದು ಬಂದಿದ್ದ ಕೃಷಿ ಮತ್ತು ಕೃಷಿ ಆಧಾರಿತ ಕಸಬುಗಳು ಕಾಲಕ್ರಮೇಣ ಜಾಗತೀಕರಣದ ಪ್ರಕ್ರಿಯೆಯಲ್ಲಿ ನಶಿಸತೊಡಗಿದವು. ಜಾಗತೀಕರಣದ ಪ್ರಭಾವದಿಂದ ಸಾಂಪ್ರದಾಯಿಕ ಗ್ರಾಮಗಳು ನಶಿಸಿ ಹೋಗಿ ಸಾಂಪ್ರದಾಯಿಕ ಕಸಬುಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡವು. ಇದರ ಪರಿಣಾಮ ಗ್ರಾಮೀಣ ಪ್ರದೇಶದಲ್ಲಿ ನಿರುದ್ಯೋಗ ಸಮಸ್ಯೆ ಕಾಡಲಾರಂಭಿಸಿತು. ಕೃಷಿ ಕ್ಷೇತ್ರದಲ್ಲಿ ಯಂತ್ರಗಳ ಪ್ರವೇಶದಿಂದ, ಕೃಷಿಕಾರ್ಮಿಕರಿಗೆ ಕೆಲಸವಿಲ್ಲದಂತಾಯಿತು. ಕೃಷಿಯನ್ನೇ ನಂಬಿ ಜೀವನ ನಡೆಸುತ್ತಿದ್ದ ಕೃಷಿ ಕಾರ್ಮಿಕರ ಬದುಕು ದುಸ್ತರವಾಯಿತು. ಇದರಿಂದ ಗ್ರಾಮೀಣ ಸಂಸ್ಕೃತಿಯ ಮೇಲೆ ಬಲವಾದ ಹೊಡೆತ ಬಿದ್ದು ಹಳ್ಳಿಗಳ ಬದುಕು ಅಲ್ಲೋಲಕಲ್ಲೋಲವಾಗಿತು. ಜನರು ಗ್ರಾಮೀಣ ಪ್ರದೇಶದಿಂದ ನಗರಗಳಿಗೆ ವಲಸೆ ಹೋಗಲು ಪ್ರಾರಂಭಿಸಿ ದೇಸಿಯ ಸಂಸ್ಕೃತಿಗೆ ಪೋಷಕರೇ ಇಲ್ಲದಂತಾಗಿ ದೇಸಿಯ ಸಂಸ್ಕೃತಿಯು ನಾಶವಾಗುವುದನ್ನು ಕಾಣಬಹುದು.[55]

ಮಹಾತ್ಮಾಗಾಂಧಿಯವರು ಹೇಳಿದಂತೆ ದೇಸಿಯ ಸಂಸ್ಕೃತಿಯ ತಿರುಳು ಗ್ರಾಮೀಣ ಬದುಕಿನಲ್ಲಿದೆ. ಗ್ರಾಮಗಳನ್ನು ನಿರ್ಲಕ್ಷಿಸಿದರೆ, ಭಾರತದ ಸಂಸ್ಕೃತಿಯ ಅವನತಿಗೆ ಕಾರಣವಾಗುತ್ತದೆ. ಅವರ ಮಾತು ಜಾಗತೀಕರಣದ ಸಂದಂರ್ಭದಲ್ಲಿ ನಿಜವಾಗತೊಡಗಿದೆ.

ಡಾ. ಮುನಿವೆಂಕಟಪ್ಪನವರ ಅಭಿಪ್ರಾಯವು ಸಹ ಈ ಸಂದರ್ಭದಲ್ಲಿ ಸತ್ಯವೆನಿಸುತ್ತದೆ. ಅವರ ಪ್ರಕಾರ ಜಾಗತೀಕರಣದಿಂದ ಗ್ರಾಮೀಣ ಪ್ರದೇಶದ ಜನರಲ್ಲಿ ನಿರುದ್ಯೋಗ ಹೆಚ್ಚಾಯಿತು. ಖಾಸಗೀಕರಣದಿಂದಾಗಿ ನಿರುದ್ಯೋಗದ ಸಮಸ್ಯೆಯ ಜೊತೆಗೆ ಸಾಮಾಜಿಕ ನ್ಯಾಯದ ವಾದವು ಹುಸಿಯಾಯಿತು. ಉದಾರ ನೀತಿಯಿಂದ ಖಾಸಗಿ ಕ್ಷೇತ್ರದಲ್ಲಿ ಉದ್ಯೋಗಗಳು ಮೇಲು ವರ್ಗದವರ ಪಾಲಾಯಿತು. ಮತ್ತೆ ಭಾರತದ ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರು, ದಲಿತರು, ಅತಂತ್ರ ಸ್ಥಿತಿಗೆ ತಲುಪಿದ್ದಾರೆ. ಕೃಷಿಯನ್ನು ಮೂಲ ಕಸುಬನ್ನಾಗಿ ಅವಲಂಬಿಸಿಕೊಂಡಿದ್ದ ಈ ಜನರು ಗ್ರಾಮಾಂತರ ಪ್ರದೇಶದಿಂದ ನಗರ ಪ್ರದೇಶಗಳಿಗೆ ಗುಳೇ ಹೋಗಿ ಕೊಳಚೆ ಪ್ರದೇಶಗಳಲ್ಲಿ ತಮ್ಮ ಭವಿಷ್ಯವನ್ನು ಹುಡುಕಲು ಪ್ರಾರಂಭಿಸಿದರು.[56]

1.10 ಇಂಗ್ಲಿಷ್ ಮತ್ತು ಕನ್ನಡ ಕಾದಂಬರಿಗಳಲ್ಲಿ ದೇಸಿಯತೆ:

ಹದಿನೆಂಟನೆಯ ಶತಮಾನದಲ್ಲಿ ಜಾಗತಿಕ ಸಾಹಿತ್ಯಕ್ಕೆ ಇಂಗ್ಲೆಂಡ್ ನೀಡಿದ ಮಹತ್ತರವಾದ ಕೊಡುಗೆ ಎಂದರೆ ಕಾದಂಬರಿ. ಕಾದಂಬರಿ ಎಂಬ ನವೀನ, ಹೊಸಬಗೆಯ ಸಾಹಿತ್ಯ ಪ್ರಕಾರವು ಇಂಗ್ಲೆಂಡಿನಲ್ಲಿ ಜೀವ ತಳೆದು ಇತರೆ ದೇಶಗಳಿಗೆ ಬಹು ಬೇಗನೆ ಹರಡಿಕೊಂಡು ಒಂದು ಜನಪ್ರಿಯ ಸಾಹಿತ್ಯವಾಗುತ್ತದೆ. ಕಾದಂಬರಿಯ ಕಲ್ಪನೆ ಮತ್ತು ಬುದ್ಧಿಶಕ್ತಿಯ ಸಮ್ಮಿಶ್ರಣವಾಗಿದೆ ಇವೆರಡೂ ಬೆರೆತು ಮಾನವನ ಬದುಕನ್ನು ಕಥೆಯ ಮೂಲಕ ಅಭಿವ್ಯಕ್ತಪಡಿಸುತ್ತದೆ. ಮಾನವ ಸಂಬಂಧಗಳು, ಪ್ರಭಾವಗಳು, ಪ್ರೇರಣೆಗಳು ಮತ್ತು ವಾಸ್ತವ ಬದುಕಿನಲ್ಲಿ ಅವುಗಳ ಮಹತ್ವ ಕಾದಂಬರಿಯ ಮೂಲಕ ಅನಾವರಣಗೊಳ್ಳುತ್ತದೆ. ಬೇರೆ ಯಾವುದೇ ಸಾಹಿತ್ಯ ಪ್ರಕಾರಗಳಿಗಿಂತ ಕಾದಂಬರಿಯು ಬದುಕಿನ ವಾಸ್ತವತೆಯನ್ನು ಅತ್ಯಂತ ಸಹಜವಾಗಿ ವಿಶೇಷವಾಗಿ ಮತ್ತು ವಿವರಣಾತ್ಮಕವಾಗಿ ನೀಡುವುದರ ಮೂಲಕ ದೇಸಿಯತೆಗೆ ಕನ್ನಡಿ ಹಿಡಿಯುತ್ತದೆ. ಹದಿನೆಂಟನೆಯ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ಆದ ಕೈಗಾರಿಕಾಕ್ರಾಂತಿ, ರಾಷ್ಟ್ರೀಯ ಶಿಕ್ಷಣ ನೀತಿ, ಮಹಿಳೆಯರಲ್ಲಿ ಹೆಚ್ಚಾದ ಸಾಹಿತ್ಯದ ಅಭಿರುಚಿ, ಪ್ರಜಾಪ್ರಭುತ್ವ ಚಳುವಳಿ ಮುಂತಾದವು ಜನರಲ್ಲಿ ವಿದ್ಯೆ, ವಿರಾಮ ಮತ್ತು ಸಾಹಿತ್ಯದ ಬಗ್ಗೆ ಹೆಚ್ಚಾದ ಒಲವು ಕಾದಂಬರಿಯ ಜನಪ್ರಿಯತೆಗೆ ಕಾರಣವಾಗುತ್ತವೆ. ಕಾದಂಬರಿಯ ಮೂಲಕ ಹೊಸ ಗದ್ಯದ ಅವತಾರವಾಗುತ್ತದೆ. ಸಾಮಾನ್ಯರ ಬದುಕನ್ನು, ಸಾಮಾನ್ಯ ಸಂಗತಿಗಳನ್ನು, ವಾಸ್ತವ ಬದುಕಿನ ಸಂಕೀರ್ಣತೆಯನ್ನು ಅತ್ಯಂತ ಸಹಜವಾಗಿ ಸರಳವಾದ, ಸ್ಪಷ್ಟವಾದ ನೇರವಾದ ಭಾಷಾ ಶೈಲಿಯಲ್ಲಿ ಅಭಿವ್ಯಕ್ತಗೊಳಿಸುವ ಮಾಧ್ಯಮವಾಗಿ ಕಾದಂಬರಿ ಜನಸಾಮಾನ್ಯರ ಕಾವ್ಯವೆಂದೇ ಪ್ರಸಿದ್ಧಿ ಪಡೆಯುತ್ತದೆ.

ಹತ್ತೊಂಬತ್ತನೆಯ ಶತಮಾನದ ವಿಕ್ಟೋರಿಯನ್ ಯುಗ ಕಾದಂಬರಿಯ ಯುಗ. ಇಂಗ್ಲೆಂಡಿನ ಇತಿಹಾಸದಲ್ಲಿಯೇ ಬದುಕಿನ ಪ್ರತಿಯೊಂದು ಕ್ಷೇತ್ರಗಳಲ್ಲಿಯೂ ಅತ್ಯಂತ ಹೆಚ್ಚು ಸುಧಾರಣೆ ಕಂಡಂತಹ ಯುಗ. ಅತಿಯಾದ ಭೌತಿಕ ಸಂಪತ್ತಿನ ಹೆಚ್ಚಳ, ಪ್ರಜಾಪ್ರಭುತ್ವವಾದ, ಕೈಗಾರಿಕೆ ಮತ್ತು ತಾಂತ್ರಿಕತೆಯ ಬೆಳವಣಿಗೆ ವೈಜ್ಞಾನಿಕ ಆವಿಷ್ಕಾರಗಳು ಇವುಗಳಿಂದ ಉಂಟಾದ ಸಾಮಾಜಿಕ, ಆರ್ಥಿಕ ಅಸಮಾನತೆ ಮತ್ತು ಅಸಹನೆ, ಆಧುನಿಕ ಮಾಧ್ಯಮಗಳ ಕೊರತೆ ಸಾಮಾನ್ಯ ಜನರಲ್ಲಿ ಕಾದಂಬರಿಯ ಬಗ್ಗೆ ಅಭಿರುಚಿ ಮೂಡಿಸುತ್ತದೆ. ಬಂಡವಾಳಶಾಹಿ ನಾಗರಿಕತೆಯ ಉಗಮದ ಜೊತೆಗೆ ಜನಪ್ರಿಯತೆ ಪಡೆದ ಕಾದಂಬರಿ ಮಧ್ಯಮ ವರ್ಗದವರ ಮಹಾಕಾವ್ಯವಾಗುತ್ತದೆ. ಕೈಗಾರಿಕೀರಣದಿಂದ ನೆಲೆ ಕಳೆದುಕೊಳ್ಳಲಾರಂಭಿಸಿದ ಸಾಂಪ್ರದಾಯಿಕ ಬದುಕಿನ ಬಗ್ಗೆ ಸಾಮಾನ್ಯ ಜನರಲ್ಲಿ ಆಸ್ಥೆ ಉಂಟಾಗುತ್ತದೆ. ಬಂಡವಾಳಶಾಹಿ ನಾಗರಿಕತೆ,

ಕೈಗಾರಿಕರಣ, ವಲಸೆ ಸಮಸ್ಯೆ, ನಗರೀಕರಣ ಮುಂತಾದ ಅಂಶಗಳು ಸಾಂಪ್ರದಾಯಿಕ ಗ್ರಾಮೀಣ ಬದುಕಿನೆಡೆಗೆ ಗಮನಹರಿಸಲು ಪ್ರೇರಕವಾಗುತ್ತವೆ. ಗ್ರಾಮೀಣ ಬದುಕು ಭಾಷೆ, ರೂಢಿ, ಸಂಪ್ರದಾಯ, ಆಚರಣೆಗಳು ಕಾದಂಬರಿಯ ವಸ್ತುಗಳಾಗುತ್ತವೆ. ದೇಸಿಯತೆಯ ಪೋಷಕ ಪಾತ್ರವಹಿಸಿದ್ದ ಹಳ್ಳಿಗಳು ಆಧುನಿಕ ನಗರೀಕರಣದಿಂದ ಮತ್ತು ಕೈಗಾರೀಕರಣದಿಂದ ಕಣ್ಮರೆಯಾಗಲಾರಂಭಿಸುತ್ತವೆ. ಹೀಗೆ ಕಣ್ಮರೆಯಾಗುತ್ತಿರುವ ದೇಸಿಯ ಬದುಕನ್ನು ಪ್ರತಿಸೃಷ್ಟಿಸುವಲ್ಲಿ ಡಿ. ಹೆಚ್. ಲಾರೆನ್ಸ್, ಥಾಮಸ್ ಹಾರ್ಡಿ, ಜಫೇರೀಸ್, ಎಡ್ವರ್ಡ್ ಥಾಮಸ್ ಮುಂತಾದ ಕಾದಂಬರಿಕಾರರು ಪ್ರಮುಖರಾಗುತ್ತಾರೆ. "ಹಳೆಯ ವಸ್ತುಗಳನ್ನು (ಥೀಮ್) ಕುರಿತು ಹಳೆಯ ಶೈಲಿಯಲ್ಲಿ ಬರೆಯುವುದು, ಅದನ್ನೇ ನಮಗಿಂತ ಮೊದಲು ಬರೆದವರಿಗಿಂತ ಸ್ವಲ್ಪ ಚೆನ್ನಾಗಿ ಮಾಡಲು ಪ್ರಯತ್ನಿಸುವುದು ಇದಿಷ್ಟೆ ನನಗೆ ಸಾಧ್ಯವಿರುವುದು"[57] ಎಂದು ಹೇಳುವುದರ ಮೂಲಕ ಹಾರ್ಡಿ ಹಳ್ಳಿಗಾಡಿನ ದೇಸಿಯ ಬದುಕಿನ ವಕ್ತಾರರಾಗಿ ಕಾಣಿಸಿಕೊಳ್ಳುತ್ತಾರೆ.

ಥಾಮಸ್ ಹಾರ್ಡಿ ಕುವೆಂಪುರವರ ಹಾಗೆಯೇ ಸ್ಥಳೀಯ ಕಾದಂಬರಿಕಾರ ಎಂದೇ ಪರಿಗಣಿಸಲಾಗಿದೆ. ಹಾರ್ಡಿ ಗ್ರಾಮ ಜೀವನಕ್ಕೆ ಸೇರಿದ, ಅವರ ಸರಳತೆ ಪರಾಂಪರಾಗತವಾಗಿ ಬಂದ ಜೀವನ ಶೈಲಿ, ಶಾಂತಿ ಇವುಗಳನ್ನು ಮೆಚ್ಚಿಕೊಂಡವರು. ಕೈಗಾರಿಕೀರಣ, ನಗರೀಕರಣ, ವೈಜ್ಞಾನಿಕ ಆವಿಷ್ಕಾರಗಳ ಉತ್ತುಂಗದಲ್ಲಿ ದೇಸಿಯ ಬದುಕಿನ ಸುಗ್ಗಿಯ ಸಡಗರ, ಲಾವಣಿ, ನೃತ್ಯ, ಹುಟ್ಟುಹಬ್ಬ ಮತ್ತು ವಿವಾಹ ಸಂದರ್ಭಗಳ ಸಂತೋಷಕೂಟಗಳು, ಹಾಡು, ಕಥೆ ಹೇಳುವುದು ಮುಂತಾದ ಚಟುವಟಿಕೆಗಳು ನೆಲೆಕಳೆದುಕೊಳ್ಳುತ್ತಿರುವುದನ್ನು ತಮ್ಮ ಕಾದಂಬರಿಗಳಲ್ಲಿ ಅನಾವರಣಗೊಳಿಸುವುದರ ಮೂಲಕ ದೇಸಿಯ ಬದುಕಿನ ವಕ್ತಾರರಾಗಿ ಪ್ರಸಿದ್ಧಿಯಾಗಿದ್ದಾರೆ.

ಇಂಗ್ಲಿಷ್ ಸಾಹಿತ್ಯದಲ್ಲಿ 18ನೇ ಶತಮಾನ ಕಾದಂಬರಿಯ ಉದಯದ ಕಾಲವಾದರೆ ಕನ್ನಡ ಸಾಹಿತ್ಯದಲ್ಲಿ ಅದರ ಬೆಳವಣಿಗೆಗೆ ಮತ್ತು ಜನಪ್ರಿಯತೆಗೆ ಒಂದು ಶತಮಾನವೇ ಬೇಕಾಗುತ್ತದೆ. ಬಂಡವಾಳಶಾಹಿ ಉದಯದ ಜೊತೆಗೆ ಕಾದಂಬರಿಯ ಉಗಮ ಆಗುತ್ತದೆ. ಹೊಸ ಮಧ್ಯಮ ವರ್ಗವೊಂದು ಹುಟ್ಟುತ್ತದೆ. ಈ ಮಧ್ಯಮ ವರ್ಗದ ಮಹಾಕಾವ್ಯವೇ ಕಾದಂಬರಿ ಎಂದು ಹೆಗಲ್ ವ್ಯಾಖ್ಯಾನಿಸುತ್ತಾರೆ.[58] ಆದರೆ ಭಾರತದ ಅಥವಾ ಕನ್ನಡ ಕಾದಂಬರಿಗೆ ಸಂಬಂಧಿಸಿದಂತೆ ಸನ್ನಿವೇಶ ಭಿನ್ನವಾಗಿರುತ್ತದೆ. ಇಲ್ಲಿ ಕಾದಂಬರಿಯ ಉಗಮವಾಗುವುದು ವಸಾಹತೀಕರಣದ ಜೊತೆಗೆ. ಇಂಗ್ಲಿಷರ ವಸಾಹತು ಆಳ್ವಿಕೆ ಪ್ರಾರಂಭವಾದಾಗ, ಪ್ರಸಿದ್ಧ ಇಂಗ್ಲಿಷ್ ಕಾದಂಬರಿಗಳನ್ನು ದೇಶೀಯ ಇತರೆ ಭಾಷೆಗಳಿಗೆ ಅನುಕರಣೆ, ಅನುವಾದ ಮಾಡುವ ಮೂಲಕ

ಮೊದಲುಗೊಂಡು ನಂತರದ ದಿನಗಳಲ್ಲಿ ಸ್ವತಂತ್ರ ಕಾದಂಬರಿಗಳು ರಚನೆಗೊಳ್ಳುವುದರ ಮುಖಾಂತರ ಕಾದಬಂರಿಯು ಜನಪ್ರಿಯ ಸಾಹಿತ್ಯ ಪ್ರಕಾರವಾಗಿ ಹೊರಹೊಮ್ಮುತ್ತದೆ.

ಇಂಗ್ಲಿಷ್ ಕಾದಬಂರಿಗಳ ಜನಪ್ರಿಯತೆಗೆ ಕಾರಣವಾದ ಅಂಶಗಳೇ ಬಹುಮಟ್ಟಿಗೆ ಕನ್ನಡ ನೆಲದಲ್ಲೂ ಕಾಣಿಸಿಕೊಳ್ಳುತ್ತವೆ. ಹೊಸ ಶಿಕ್ಷಣದ ಪ್ರಭಾವ, ಕ್ರೈಸ್ತಮಿಶನರಿಗಳ ಮತಾಂತರ ಕಾರ್ಯ, ಅಚ್ಚುಕೂಟಗಳ ಪ್ರಾರಂಭ, ಸಂಪರ್ಕ-ಸಾಧನಗಳ ಬೆಳವಣಿಗೆ, ವಿರಾಮ ಮುಂತಾದ ಅಂಶಗಳು ಹೊಸ ಓದುಗರ ಪಡೆಯ ಸೃಷ್ಟಿಗೆ ಕಾರಣವಾಗುತ್ತವೆ. ಕನ್ನಡ ಕಾದಂಬರಿಗಳ ಉಗಮಕ್ಕೆ ಇಂಗ್ಲಿಷ್ ಕಾದಂಬರಿಗಳ ಅನುವಾದ, ಅನುಕರಣೆ ಮತ್ತು ವಸಾಹತೀಕರಣದ ಜೊತೆಗೆ ಪರಕೀಯ ಯಜಮಾನ ಸಂಸ್ಕೃತಿ ಮತ್ತು ದೇಸಿ ಸಂಸ್ಕೃತಿಗಳ ನಡುವಿನ ಮುಖಾಮುಖಿ ಕಾರಣವಾಗುತ್ತದೆ. ದೇಸಿ ಮಧ್ಯಮ ವರ್ಗ ರೂಪುಗೊಂಡು ತನಗೊಂದು ಆಧುನಿಕ ಸಾಂಸ್ಕೃತಿಕ ವ್ಯಕ್ತಿತ್ವ ನಿರ್ಮಾಣ ಮಾಡಿಕೊಳ್ಳುವಾಗ ದ್ವಂದ್ವದಲ್ಲಿ ಕಾದಂಬರಿ ಹುಟ್ಟುತ್ತದೆ.[59] ಇಲ್ಲಿ ಗಮನಿಸಬೇಕದ ಮುಖ್ಯ ಅಂಶವೆಂದರೆ ವಸಾಹತೀಕರಣದಿಂದ ಬಂದ ಪರಕೀಯ ಸಂಸ್ಕೃತಿಗೆ ಪ್ರತಿಯಾಗಿ ದೇಸಿ ಪ್ರಜ್ಞೆ ರೂಪುಗೊಳ್ಳುತ್ತದೆ. ಭಾರತದ ಲೇಖಕರಲ್ಲಿ ಸ್ವಂತಿಕೆಯ ಪ್ರಜ್ಞೆ ಮೂಡಿ ಪರಕೀಯ ಸಂಸ್ಕೃತಿ ಮತ್ತು ಸಾಹಿತ್ಯಕ್ಕೆ ಸರಿಸಾಟಿಯಾಗಿ ದೇಸಿಯತೆಯು ಅಸ್ತಿತ್ವವನ್ನು ಪ್ರತಿಪಾದಿಸುವ ಕಾರ್ಯ ನಡೆಯುತ್ತದೆ.

ಗಿರಡ್ಡಿ ಗೋವಿಂದರಾಜ ಅವರ ಮಾತುಗಳು ಇಲ್ಲಿ ಉಲ್ಲೇಖನೀಯವಾಗಿವೆ: "ದೇಶೀಯ ಮೂಲಗಳತ್ತ ತಿರುಗಬೇಕೆಂಬ ಒತ್ತಾಸೆ ಒಬ್ಬ ಲೇಖಕನಲ್ಲಿ ಮೂಡಬೇಕಾದರೆ ಮತ್ತು ಅದು ಸಾರ್ವತ್ರಿಕವಾಗಿ ಅರ್ಥಪೂರ್ಣವಾಗಬೇಕಾದರೆ ಅಂಥ ಒತ್ತಾಸೆ ಅವನ ಜನಾಂಗದ ಸುತ್ತಲಿನ ಪರಿಸರದ ತುಡಿತವಾಗಿ ಕಾಣಿಸಿಕೊಳ್ಳಬೇಕಾಗುತ್ತದೆ. ಅಂಥ ಸಂದರ್ಭದಲ್ಲಿ ಆ ತುಡಿತವೇ ತನ್ನ ಅಭಿವ್ಯಕ್ತಿಗಾಗಿ ಸಮರ್ಥ ಲೇಖಕರನ್ನು ಹುಟ್ಟಿಸಿಕೊಳ್ಳುತ್ತದೆ. ತಕ್ಷಣ ಅಂಥ ಬರವಣಿಗೆ ಒಂದು ಆದರ್ಶವಾಗಿ ಅನೇಕರನ್ನು ಆಕರ್ಷಿಸುತ್ತದೆ. ನಂತರ ಅದೇ ಒಂದು ವ್ಯಾಪಕ ಆಂದೋಲನವಾಗಿ ಹಬ್ಬುತ್ತದೆ.[60] ಈ ಹಿನ್ನಲೆಯಲ್ಲಿ ಕುವೆಂಪುರವರು ದೇಸಿಯ ಮೂಲಗಳತ್ತ ಬೆಳಕು ಹರಿಸಿ, ಅಲ್ಲಿನ ವಾಸ್ತವ ಬದುಕಿನ ಚಿತ್ರಣವನ್ನು ತಮ್ಮ ಕಾದಂಬರಿಗಳಲ್ಲಿ ತೆರೆದಿಡುವ ಮೂಲಕ ದೇಸಿಯ ಬದುಕಿನ ವಕ್ತಾರರಾಗಿ ಕಾಣಿಸಿಕೊಳ್ಳುತ್ತಾರೆ.

ಕಾದಂಬರಿಯ ಬೆಳವಣಿಗೆಯಲ್ಲಿ ನವೋದಯದ ಕಾದಂಬರಿಕಾರ ವಾಸ್ತವ ಮಾರ್ಗವನ್ನು ಆಯ್ದುಕೊಳ್ಳುವುದರ ಮೂಲಕ ವ್ಯಕ್ತಿಯ ಸಾಮಾಜಿಕ, ಸಾಂಸ್ಕೃತಿಕ ಬದುಕನ್ನು ಸರಳವಾದ ಭಾಷೆ, ನಿರೂಪಣೆ, ತಂತ್ರಗಳಿಂದ ಅನಾವರಣಗೊಳಿಸುತ್ತಾನೆ. ಸಾಮಾನ್ಯರ ಬದುಕು ಕಾದಂಬರಿಯ ವಸ್ತುವಾಗುತ್ತದೆ. ಸಾಮಾನ್ಯ ಓದುಗನಿಗೆ ಬೇಕಾದ ಕಥಾನಕವನ್ನು ಅವನದೇ ಆದ ಭಾಷೆಯಲ್ಲಿ

ನೀಡುವುದರ ಮೂಲಕ ಕಾದಂಬರಿ ಎಂಬ ನವೀನ ಪ್ರಕಾರವು ಮಧ್ಯಮ ವರ್ಗದವರ ಮೆಚ್ಚುಗೆಗೆ ಪಾತ್ರವಾಗುತ್ತದೆ. ನವೋದಯದ ಕಾಲಘಟ್ಟದಲ್ಲಿ ಬಂದ ಅನೇಕ ಕಾದಂಬರಿಗಳಲ್ಲಿ ದೇಸಿಯ ಬದುಕಿನ ಕೇಂದ್ರಸ್ಥಾನವಾದ ಗ್ರಾಮೀಣ ಪರಿಸರ, ಸಾಮಾಜಿಕ ಸಾಂಸ್ಕೃತಿಕ ಬದುಕು ಮುಂತಾದ ಜೀವನ ಸಂಬಂಧಿ ವಿಷಯಗಳು ಕಾದಂಬರಿಯ ವಸ್ತುಗಳಾಗುತ್ತವೆ. ಈ ಸಾಲಿನಲ್ಲಿ ಬಂದ ಅತ್ಯುತ್ತಮ ಕಾದಂಬರಿಗಳೆಂದರೆ ಶಿವರಾಮ ಕಾರಂತರ 'ಮರಳಿಮಣ್ಣಿಗೆ', ಕುವೆಂಪುರವರ 'ಕಾನೂರುಹೆಗ್ಗಡತಿ', ಗೋಕಾಕರ 'ಇಜ್ಜೋಡು' ಮುಂತಾದವು.[61] ಜನಸಾಮಾನ್ಯರ ಬದುಕನ್ನು ಅವರ ಸ್ವಾಭಾವಿಕ ಗುಣಗಳಿಂದಲೇ ಪ್ರತಿಸೃಷ್ಟಿಸುವುದರ ಮೂಲಕ ಅವರ ಸಮುದಾಯದ ಒಟ್ಟು ಬದುಕನ್ನೇ ಕುವೆಂಪುರವರು ತಮ್ಮ ಕಾದಂಬರಿಗಳಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ. ದಟ್ಟವಾದ ಜಾನಪದ ಬದುಕು, ಪರಂಪರೆ ನೆಲಪರ ಸಂಸ್ಕೃತಿ ಮುಂತಾದ ಅಂಶಗಳು ಕುವೆಂಪುರವರ ಕಾದಂಬರಿಗಳಲ್ಲಿ ಸ್ವಾಭಾವಿಕವಾಗಿ ಮೂಡಿ ಬಂದಿವೆ. ವಸಾಹತೀಕರಣ, ಆಧುನೀಕರಣ, ವಿದ್ಯಾಭ್ಯಾಸ ತಂತ್ರಜ್ಞಾನ, ಬದಲಾಗುತ್ತಿರುವ ರೀತಿ-ನೀತಿಗಳ ಮತ್ತು ಆಚಾರ-ವಿಚಾರಗಳ ಮಧ್ಯೆ ಕಣ್ಮರೆಯಾಗುತ್ತಿರುವ ದೇಸಿಯ ಪರಂಪರೆ, ಸಂಸ್ಕೃತಿ, ಸಾಂಪ್ರದಾಯಿಕ, ಸಾಮಾಜಿಕ, ಸಾಂಸ್ಕೃತಿಕ ಬದುಕಿನ ಬಗ್ಗೆ ಚಿಂತಿಸುವ, ಆ ಬದುಕನ್ನು ಅರಿಯುವ ಮತ್ತು ಅದರ ಮೌಲ್ಯವನ್ನು ಪರಾಮರ್ಶಿಸುವ ದೃಷ್ಟಿಯಿಂದ ಅನೇಕ ಕಾದಂಬರಿಕಾರರು ದೇಸಿಯ ಬದುಕನ್ನು ತಮ್ಮ ಕೃತಿಗಳಲ್ಲಿ ಪ್ರತಿಸೃಷ್ಟಿಸಿದ್ದಾರೆ.

1.11 ಕುವೆಂಪು 1904-1994:

ಶ್ರೀ ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪನವರು ತಮ್ಮ ಊರು, ತಂದೆ ಮತ್ತು ತಮ್ಮ ಹೆಸರಿನ ಮೊದಲಕ್ಷರಗಳನ್ನು ಕೂಡಿಸಿ ಕುವೆಂಪು'ಎಂಬ ಕಾವ್ಯನಾಮದಿಂದ ಕನ್ನಡ ನವೋದಯ ಸಾಹಿತ್ಯದ ಸುಪ್ರಸಿದ್ಧ ಬರಹಗಾರರೆಂದು, ಪ್ರಾಚಾರ್ಯರೆಂದು ಮೈಸೂರು ವಿಶ್ವಾವಿದ್ಯಾಲಯದ ನಿವೃತ್ತ ಕುಲಪತಿಗಳೆಂದು, ರಾಷ್ಟ್ರಕವಿ ಎಂದು, ಜ್ಞಾನಪೀಠ ಪ್ರಶಸ್ತಿ ವಿಜೇತರೆಂದು ಲೋಕಪ್ರಸಿದ್ಧರಾದವರು. ವೆಂಕಟಪ್ಪ ಗೌಡ ಹಾಗೂ ಸೀತಮ್ಮನವರ ಮಗನಾಗಿ ಕುವೆಂಪು ರವರು 29-12-1904ರಂದು ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳಿಯ ಅವಿಭಕ್ತ ಕುಟುಂಬದಲ್ಲಿ ಜನಿಸಿದರು. ಪ್ರಕೃತಿ ಸೌಂದರ್ಯದ ನಡುವಿನ ಮಲೆನಾಡಿನ ಕುಪ್ಪಳ್ಳಿ ನಿರುದ್ವಿಗ್ನವಾದ ಹಳ್ಳಿ. ಸಾಮಾನ್ಯವಾಗಿ ಮಲೆನಾಡಿನಲ್ಲಿ ಹಳ್ಳಿಯೆಂದರೆ ಒಂದೇ ಒಂದು ಮನೆ ಮನೆಗಳೆಂದರೆ ಪುಣ್ಯಕೋಟೆಗಳಂತೆ ಇರುವುವು, ದೊಡ್ಡಹೆಬ್ಬಾಗಿಲು, ದಪ್ಪವಾದ ಸುತ್ತು ಗೋಡೆ, ಸ್ವಲ್ಪ ಸ್ಥೂಲವಾಗಿ ಹೇಳುವುದಾದರೆ ನಾಜೂಕಿನ ದೃಷ್ಟಿಗಿಂತ ಬಲದ ದೃಷ್ಟಿಯೇ ಹೆಚ್ಚು, ಏಕೆಂದರೆ ಆ ಕಾಡಿನಲ್ಲಿ, ಆ ಮಳೆಯಲ್ಲಿ, ಆ ಬಿರುಗಾಳಿಯಲ್ಲಿ, ಆ ಸಿಡಿಲು

ಮಿಂಚುಗಳ ರುದ್ರವಾದ ನಲಿದಾಟದಲ್ಲಿ ಮನೆಗಳು ಭೀಮಾಕಾರವಾಗಿರದಿದ್ದರೆ ಬಹಳ ಕಾಲ ಬಾಳುವುದಿಲ್ಲ.[62] ಎರಡು ಮೂರು ತಲೆಮಾರುಗಳಿಂದ ಅವಿಭಕ್ತವಾಗಿಯೇ ಉಳಿದುಕೊಂಡ ಆ ಕುಟುಂಬದಲ್ಲಿ ಪುಟ್ಟಪ್ಪನವರು ಇತರರ ಮಕ್ಕಳೊಡನೆ ಸಂತೋಷವಾಗಿಯೇ ಬಾಲ್ಯವನ್ನು ಕಳೆದರು.

ಕುಪ್ಪಳ್ಳಿಯ ಮನೆ ಜನನಿಬಿಡವಾಗಿದ್ದು, ಎಲ್ಲಾ ವಯಸ್ಸಿನ ಜನರು, ಆಳುಕಾಳುಗಳು, ಅವರ ಮಕ್ಕಳು ವಿವಿಧ ವೃತ್ತಿಗಳ ಜನರು ಮಠದ ಅಯ್ಯಗಳು, ನೆಂಟರಿಷ್ಟರೂ ಬಾಲ್ಯದಲ್ಲಿಯೇ ಪುಟ್ಟಪ್ಪನವರ ಮೇಲೆ ಪ್ರಭಾವ ಬೀರಿದ್ದರು. ಕಥೆ ಹೇಳುವ ಹಿರಿಯರು, ಬೇಟೆಯ ಸಾಹಸವನ್ನು ವರ್ಣಿಸುವವರು, ದನಕಾಯಲು ಹೋದಾಗ ಪ್ರಕೃತಿಯಲ್ಲಿ ಸಿಗುವ ನಾನಾರೀತಿಯ ಹಣ್ಣುಹಂಪಲುಗಳು, ಗ್ರಾಮೀಣ ಕ್ರೀಡೆಗಳು ಬಾಲಕ ಪುಟ್ಟಪ್ಪನವರ ಮೇಲೆ ಸಾಕಷ್ಟು ಪರಿಣಾಮ ಬೀರಿದ್ದವು. ಬಾಲ್ಯದಲ್ಲಿಯೇ ರಾಮಾಯಣ, ಮಹಾಭಾರತ ವಾಚನಗಳು ಪುಟ್ಟಪ್ಪನವರ ಮನಸ್ಸನ್ನು ನಾಟಿದವು. ಆಗಿನ ಕಾಲದಲ್ಲಿ ಹಳ್ಳಿಗಳಿಗೆ ಶಿಕ್ಷಣದ ಸೌಲಭ್ಯಗಳಿಲ್ಲವಾದ್ದರಿಂದ ಕೂಲಿಮಠಗಳೇ ಅವರ ವಿದ್ಯಾಕೇಂದ್ರಗಳಾಗಿದ್ದವು. ಕುಪ್ಪಳ್ಳಿಯ ಕೂಲಿಮಠದಲ್ಲಿ ಐಗಳಿಂದ ಪ್ರಾಥಮಿಕ ಶಿಕ್ಷಣ ಮುಗಿಸಿ ಮಾಧ್ಯಮಿಕ ವ್ಯಾಸಂಗಕ್ಕೆ ತೀರ್ಥಹಳ್ಳಿ ಸೇರುತ್ತಾರೆ. ಇಲ್ಲಿಂದ ಅವರಿಗೆ ಆಧುನಿಕ ಶಿಕ್ಷಣ ಪರಿಚಯವಾಗಿ ಶಿವಮೊಗ್ಗ ಮತ್ತು ಮೈಸೂರುಗಳಲ್ಲಿ ಉನ್ನತ ಶಿಕ್ಷಣವನ್ನು ಪಡೆಯುತ್ತಾರೆ. ಮೈಸೂರಿನಲ್ಲಿದ್ದಾಗ ಕುವೆಂಪು ಪಾಶ್ಚಾತ್ಯ ಹಾಗೂ ಪೌರ್ವಾತ್ಯ ಸಾಹಿತ್ಯವನ್ನು ಚೆನ್ನಾಗಿ ಅಧ್ಯಯನ ಮಾಡಿದರು, ಭಾರತೀಯ ತತ್ವಶಾಸ್ತ್ರವನ್ನು ಮತ್ತು ಅನ್ಯಧರ್ಮೀಯರ ತತ್ವಗ್ರಂಥಗಳನ್ನು, ವೇದೋಪನಿಷತ್ತು, ಶಾಸ್ತ್ರ ಪುರಾಣಗಳನ್ನು ಅಧ್ಯಯನ ಮಾಡಿದರು. ವಿದ್ಯಾರ್ಥಿಯಾಗಿದ್ದಾಗಲೇ ಮೈಸೂರಿನ ಶ್ರೀ ರಾಮಕೃಷ್ಣಾಶ್ರಮಕ್ಕೆ ಸೇರಿ ಶ್ರೀ ರಾಮಕೃಷ್ಣ ಪರಮಹಂಸ, ಶ್ರೀ ಸ್ವಾಮಿ ವಿವೇಕಾನಂದರ ಜೀವನ ಮತ್ತು ಕೃತಿಗಳನ್ನು ಅಧ್ಯಯನ ಮಾಡಿದರು. ಆಶ್ರಮದಲ್ಲಿ ಸ್ವಾಮಿ ಯತೀಶ್ವರಾನಂದ ಸ್ವಾಮೀಜಿಯವರ ವಾತ್ಸಲ್ಯದಿಂದ ಕಲ್ಕತ್ತೆಗೆ ಹೋಗಿ ಶ್ರೀ ರಾಮಕೃಷ್ಣರ ನೇರ ಶಿಷ್ಯರಾಗಿದ್ದ ಶಿವಾನಂದರ ದರ್ಶನ ಪಡೆದಿದ್ದರು. ಆ ಶಿವಾನಂದ ಯತಿವರೇಣ್ಯರಿಂದ ದೀಕ್ಷೆ ಪಡೆದರು. ಇದರಿಂದ ಅವರ ಮನಸ್ಸು ಪರಿಪಕ್ವವಾಯಿತು.

ಕುವೆಂಪುರವರು ಈ ವೇಳೆಗಾಗಲೇ ಜಗತ್ತಿನ ಶ್ರೇಷ್ಠ ಕವಿಗಳ ಕೃತಿಗಳನ್ನು ಪರಿಚಯ ಮಾಡಿಕೊಂಡಿದ್ದರು. ಹೋಮರ್, ಡಾಂಟೆ, ವರ್ಜಿಲ್ ಟಾಲ್ಸ್‌ಟಾಯ್, ಮಿಲ್ಟನ್, ಶೇಕ್ಸ್‌ಪಿಯರ್, ವರ್ಡ್ಸ್‌ವರ್ತ್, ಶೆಲ್ಲಿ, ಹಾರ್ಡಿ ಮುಂತಾದವರನ್ನು ಅಧ್ಯಯನ ಮಾಡಿ ತಮ್ಮ ಬುದ್ಧಿ, ಆಧ್ಯಾತ್ಮಿಕ ಕ್ಷೇತ್ರವನ್ನು ಶ್ರೀಮಂತಗೊಳಿಸಿಕೊಂಡಿದ್ದರು. ಪ್ರಾರಂಭದಲ್ಲಿ ಆಂಗ್ಲ ಕವಿಗಳ ಕವನಗಳನ್ನು ಅನುಕರಣೆ ಮಾಡಿ ನೂರಾರು ಪದ್ಯಗಳನ್ನು "Bigginners Muse", ಎಂಬ ಹೆಸರಿನಲ್ಲಿ

1922ರಲ್ಲಿ ಪ್ರಕಟಿಸಿದರು. ಇದರ ಒಂದು ಹಸ್ತಪ್ರತಿಯನ್ನು ಐರಿಷ್ ಕವಿ ಜೇಮ್ಸ್ ಹೆಚ್ ಕಸಿನ್ಸ್‌ಗೆ ತೋರಿಸಿದಾಗ ಪುಟ್ಟಪ್ಪನವರನ್ನೊಮ್ಮೆ ಅಪಾದಮಸ್ತಕವಾಗಿ ನೋಡಿದರು. ಕೂಡಲೇ ಅವರ ಉಡುಪಿನ ಕಡೆಗೆ ಬೆರಳು ಮಾಡಿ ಅದು ಮಾತ್ರ ಸ್ವದೇಶಿ, ಕವನ ಮಾತ್ರ ಸ್ವದೇಶಿಯಲ್ಲ, ಕನ್ನಡದಲ್ಲಿ ಏನಾದರೂ ಬರೆದಿದ್ದರೆ ತೋರಿಸಿ ಎಂದೂ ಕೇಳಿದರು.[63] ಇದಾದ ನಂತರ ಕುವೆಂಪು ಅವರನ್ನೂ ಕನ್ನಡದ ಕಡೆಗೆ ತಿರುಗುವಂತೆ ಬಿ.ಎಂ.ಶ್ರೀ. ಯವರು ಪ್ರೇರೇಪಿಸುತ್ತಾರೆ. ಮುಂದೆ ಕನ್ನಡದಲ್ಲಿ ಕೃತಿರಚನೆ ಮಾಡಲು ನಿರ್ಧರಿಸುವುದು ಪುಟ್ಟಪ್ಪನವರ ಜೀವನದಲ್ಲಿ ಮಹತ್ತರವಾದ ಘಟ್ಟವೆನ್ನಬಹುದು. ಆ ಕಾಲಕ್ಕೆ ದೇಶದಾದ್ಯಂತ ನಡೆಯುತ್ತಿದ್ದ ರಾಷ್ಟ್ರೀಯ ಆಂದೋಲನ ಇವರ ಮೇಲೆ ಸಾಕಷ್ಟು ಪ್ರಭಾವ ಬೀರಿತು, ಭಾರತ ಮಾತೆಯ ಬಿಡುಗಡೆಯ ತೀವ್ರವಾದ ಬಯಕೆ ಅವರಲ್ಲಿ ಬೆಳೆಯಿತು, ದೇಶ ಭಕ್ತಿ ಗೀತೆಗಳು, ನಾಟಕಗಳ ಮೂಲಕ, ವಿದೇಶೀ ವಸ್ತುಗಳನ್ನು ಬಹಿಷ್ಕರಿಸುವ ಮೂಲಕ ದೇಶಪ್ರೇಮವನ್ನು ಮೆರೆದರು.

ಕುವೆಂಪುರವರು ತಾವು ವಿದ್ಯಾರ್ಜನೆ ಮಾಡಿದ ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ, ಕಡೆಗೆ ಅದೇ ವಿಶ್ವವಿದ್ಯಾನಿಲಯದಲ್ಲಿ ಉಪಕುಲಪತಿಗಳಾಗಿ 1956ರಲ್ಲಿ ನೇಮಕವಾದರು, ಕುಲಪತಿಗಳಾಗಿದ್ದ ಅವಧಿಯಲ್ಲಿ ಪ್ರಸಾರಾಂಗ, ಬೋಧನಾಂಗ, ಶೋಧನಾಂಗಗಳೆಂಬ ಮೂರು ಪ್ರತ್ಯೇಕ ಭಾಗಗಳ ಸ್ಥಾಪನೆಯಲ್ಲಿ ಮತ್ತು ಈ ಮೂರು ಬಗೆಯ ಕಾರ್ಯಶಾಖೆಗಳನ್ನು ಒಳಗೊಂಡ ಮಾನಸಗಂಗೋತ್ರಿಯ ಸ್ಥಾಪನೆ ಇವರ ಆಡಳಿತದ ಹೆಗ್ಗಳಿಕೆಯಾಗಿದೆ. ಕುವೆಂಪುರವರು ಕುಲಪತಿಗಳಾಗಿದ್ದ ಅವಧಿಯಲ್ಲಿ ಸಾಧಿಸಿದ ಮತ್ತೊಂದು ಮಹತ್ತರವಾದ ಕಾರ್ಯವೆಂದರೆ ಬೋಧನಾಂಗದಲ್ಲಿ ಕನ್ನಡದ ಅಳವಡಿಕೆ, ಒಬ್ಬ ದಕ್ಷ ಆಡಳಿತಗಾರನಾಗಿ ಕುವೆಂಪುರವರು ಅನೇಕ ನವೀನ ಯೋಜನೆಗಳನ್ನು ಕಾರ್ಯಗತಗೊಳಿಸಿ ಮೈಸೂರು ವಿಶ್ವವಿದ್ಯಾನಿಲಯದ ಕೀರ್ತಿಯನ್ನು ಹೆಚ್ಚಿಸಿದರು.

ಕುವೆಂಪುರವರು ತಮ್ಮ ಸಾಹಿತ್ಯ ರಚನೆಯಲ್ಲಿ ಯಾವುದೇ ಒಂದು ಪಂಥಕ್ಕೆ ಅಥವಾ ಪರಂಪರೆಗೆ ಅಂಟಿಕೊಳ್ಳದೇ ಎಲ್ಲಾ ಪಂಥಗಳ ಲಕ್ಷಣಗಳನ್ನು ತಮ್ಮ ಕೃತಿಗಳಲ್ಲಿ ನಿರೂಪಿಸಿದ್ದಾರೆ. ನವೋದಯದಿಂದ ಮೊದಲುಗೊಂಡು, ಪ್ರಗತಿಶೀಲ, ನವ್ಯ, ನವ್ಯೋತ್ತರ ಅಥವಾ ಆಧುನಿಕೋತ್ತರ ಪಂಥಗಳವರೆಗೆ ಸಾಹಿತ್ಯಕೃಷಿಯನ್ನು ಮಾಡಿದ್ದಾರೆ. ಶ್ರೀ ಕುವೆಂಪುರವರು ಶ್ರೇಷ್ಠ ರೀತಿಯ ಭಾವಗೀತರಕಾರರೆಂದೂ ಮತ್ತು ಶ್ರೇಷ್ಠ ರೀತಿಯ ಪ್ರಕೃತಿ ಕವಿಗಳೆಂದೂ ಗೌರವಿಸಲ್ಪಟ್ಟಿದ್ದಾರೆ. ಪ್ರಕೃತಿಯ ಆರಾಧನೆಯೇ ಪರಮನ ಆರಾಧನೆ ಎಂಬ ಘನತರವಾದ ತತ್ವವನ್ನು ಅನುಷ್ಠಾನದಲ್ಲಿ ಇಟ್ಟುಕೊಂಡವರು ಕುವೆಂಪು, ಕೊಳಲು, ಪಕ್ಷಿಕಾಶಿ, ಕೃತ್ತಿಕೆ ಮುಂತಾದ ಕೃತಿಸಂಕಲನಗಳ

ಕವನಗಳು ಪ್ರಕೃತಿ ಸೌಂದರ್ಯದಿಂದ ಆದ ರಸಾನುಭವದ ಫಲವೆಂದೇ ಹೇಳಬಹುದು.[64] ಕುವೆಂಪುರವರು ಅನುಭಾವದ ಕವಿಗಳಾಗಿದ್ದರೂ, ಶೃಂಗಾರ ಕವನಗಳಲ್ಲಿಯೂ ಹೆಸರುಗಳಿಸಿದ್ದಾರೆ.

ಕನ್ನಡ ಸಾಹಿತ್ಯ ಲೋಕಕ್ಕೆ ವಿಮರ್ಶೆಯ ಮಾರ್ಗವನ್ನು ಅದರಲ್ಲೂ 'ಪ್ರಾಯೋಗಿಕ ವಿಮರ್ಶೆ"ಎಂಬ ವಿಮರ್ಶಾ ಪದ್ಧತಿಯನ್ನು ಪರಿಚಯಿಸಿದರು ಕುವೆಂಪು. ಇವರ 'ರಸೋ ವೈ ಸಃ', 'ದ್ರೌಪದಿಯ ಶ್ರೀಮುಡಿ', 'ತಪೋನಂದನ' ಮುಂತಾದ ಕೃತಿಗಳಲ್ಲಿ ಸಾಹಿತ್ಯ ವಿಮರ್ಶೆ ಮತ್ತು ಕಾವ್ಯ ಮೀಮಾಂಸೆಗೆ ಸಂಬಂಧಪಟ್ಟ ಅಂಶಗಳನ್ನು ಕಾಣಬಹುದು. ಶ್ರೀ ಕುವೆಂಪುರವರ ಭಾಷಾ ಸೌಂದರ್ಯದ ಬಗ್ಗೆ ಎಷ್ಟು ಹೇಳಿದರೂ ಸಾಲುವುದಿಲ್ಲ. ಪದ್ಯಗಳ ಭಾಷೆಯಲ್ಲಿ ಕಣ್ಣಿಗೆ ಕಾಣುವ ದೃಶ್ಯ ಕಾವ್ಯದ ಮತ್ತು ಶ್ರಾವ್ಯವಾದ ಛಂದಸ್ಸಿನ ಶ್ರುತಿಯಿದೆ. ಗದ್ಯದ ಭಾಷೆಯಲ್ಲಿ ಪದ್ಯದ ಭಾಷೆಯ ಲಕ್ಷಣಗಳು ಕಾಣಿಸಿಕೊಂಡರೂ ಆಡುಮಾತಿನ ಸೊಗಡಿದೆ. ಪದ್ಯ ಮತ್ತು ಗದ್ಯ ಎರಡರಲ್ಲೂ ಭಾಷೆಯನ್ನು ಸಂದರ್ಭೋಚಿತವಾಗಿ, ರಸೋಚಿತವಾಗಿ, ಪಾತ್ರೋಚಿತವಾಗಿ ಬಳಸಿದ್ದಾರೆ. ಸಮಾಜದ ವಿವಿಧ ಸ್ತರಗಳ ಜನರಾಡುವ ಭಾಷೆ, ವಯೋಮಾನಕ್ಕನುಗುಣವಾಗಿ ಮಕ್ಕಳು, ಗಂಡಸರು, ಹೆಂಗಸರು, ವೃದ್ಧರು, ಮುಂತಾದವರ ಭಾಷಾ ವ್ಯತ್ಯಾಸಗಳನ್ನು ಸೂಕ್ಷ್ಮವಾಗಿ ಗುರುತಿಸಿ ತಮ್ಮ ಕಾದಂಬರಿಗಳಲ್ಲಿ ಬಳಸಿದ್ದಾರೆ. ಜನಸಾಮಾನ್ಯರ ಬದುಕನ್ನು ಅವರಾಡುವ ಭಾಷೆಯಲ್ಲಿಯೇ ನಿರೂಪಿಸಿರುವುದನ್ನು ಅವರ ಕಾದಂಬರಿಗಳಲ್ಲಿ ಕಾಣಬಹುದು. ಜಾತಿ ಪದ್ಧತಿಯನ್ನು ವಿರೋಧಿಸಿ 'ಮನುಷ್ಯ ಜಾತಿ ತಾನೊಂದೇ ವಲಂ' ಎಂಬ ಪಂಪನ ಘೋಷಣೆಯನ್ನು ತಮ್ಮ ಕೃತಿಗಳಲ್ಲಿ ವಾಸ್ತವಕ್ಕಿಳಿಸಿದ ಕೀರ್ತಿ ಕುವೆಂಪುರವರಿಗೆ ಸಲ್ಲುತ್ತದೆ. ತಮ್ಮ ನಿಷ್ಠುರ ಅಭಿಪ್ರಾಯಗಳಿಂದ ಜಾತಿ ಪದ್ಧತಿಯನ್ನು ವಿರೋಧಿಸಿ, ಶೋಷಿತರ, ದೀನದಲಿತರ ಪರವಾಗಿ ನಿಲ್ಲುತ್ತಾರೆ. ಅವರಲ್ಲಿದ್ದ ವೈಚಾರಿಕ ಪ್ರಜ್ಞೆ, ಸಾಮಾಜಿಕ ಕಳಕಳಿ, ಬಡಬಗ್ಗರ ವಿಷಯದಲ್ಲಿ ಅವರಿಗಿದ್ದ ಅನುಕಂಪ ವಿಶಿಷ್ಟವಾದವು. ಅನಕ್ಷರತೆ, ಅಜ್ಞಾನ, ಹಸಿವು, ರೋಗ, ಮುಂತಾದ ಸಾಮಾಜಿಕ ಅನಿಷ್ಟಗಳನ್ನು ತಮ್ಮ ಕೃತಿಗಳಲ್ಲಿ ಅತ್ಯಂತ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಜಾತಿ–ಮತ ಸಾಮಾನ್ಯರ ಬದುಕಿನಲ್ಲಿ ಬೆಳೆದು ಮೌಢ್ಯ–ಕೂಪಕ್ಕೆ ಅವರನ್ನು ತಳ್ಳಿ ವಿಚಾರವಾದ, ವೈಜ್ಞಾನಿಕ ಪ್ರಜ್ಞೆ ಅವರಲ್ಲಿ ಬೆಳೆಯದಂತೆ ಮಾಡಿದೆ ಮತ್ತು ತಲೆತಲಾಂತರದಿಂದಲೂ ಮಾನವ ಸಮಾಜಕ್ಕೆ ಬಹಳಷ್ಟು ಹಾನಿ ಮಾಡಿದೆ ಎಂಬ ಅಭಿಪ್ರಾಯವನ್ನು ತಮ್ಮ ವೈಚಾರಿಕ ಕೃತಿಗಳಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ. ಜಾತಿ–ಮತ, ವರ್ಣ–ವರ್ಗಗಳು ಮನುಷ್ಯ ಮನುಷ್ಯರ ನಡುವೆ ಕಲ್ಲಿನ ಕೋಟೆಗಳನ್ನು ಸೃಷ್ಟಿಸಿವೆ. ಅದ್ದರಿಂದ ನಮ್ಮದು "ಮನುಜಮತ" ವಿಶ್ವಪಥವಾಗಬೇಕು, ಸರ್ವೋದಯ, ಸಮನ್ವಯ; ಪೂರ್ಣ ದೃಷ್ಟಿ ಮಂತ್ರಗಳಾಗಬೇಕು ಎಂದು ತಮ್ಮ ಅನೇಕ ಭಾಷಣಗಳಲ್ಲಿ ಮತ್ತು ಕೃತಿಗಳಲ್ಲಿ ಕವಿ ನೀಡಿದ ಸಂದೇಶವಾಗಿದೆ. ಜೀವನ ಶ್ರದ್ಧೆಯ ಬಗ್ಗೆ ಮತ್ತು ಬದುಕಿನ ಆಸ್ಥೆಯ

ಬಗ್ಗೆ ಮಾತನಾಡುವಾಗಲೆಲ್ಲಾ ಜೀವನದ ತೀವ್ರ ತುಡಿತ ಹಾಗೂ ಬದುಕಿನ ನಿರಂತರ ಆಶಾವಾದವನ್ನು ನಂಬಿ ಸರ್ವನಾಶದಲ್ಲಿಯೂ ಸಹ ಸದಾ ಒಳ್ಳೆಯದನ್ನೇ ಹಾರೈಸುವ ಕುವೆಂಪು ಅವರ 'ವಿಶ್ವಮಾನವ' ತತ್ವ ಜೀವನ ಪ್ರೀತಿಯ ಚೇತೋಹಾರಿ ಪ್ರಕೃತಿಯ ನೆಲೆಯಿಂದ ಮೂಡಿ ಬಂದದ್ದು. ವೈಚಾರಿಕತೆ, ವೈಜ್ಞಾನಿಕ ಮನೋಭಾವ, ಸಾಮಾಜಿಕ ಪ್ರಜ್ಞೆ, ದೀನದಲಿತರ ಬಗ್ಗೆ ಅನುಕಂಪ, ಜಾತಿ–ಧರ್ಮ, ವರ್ಣ ವರ್ಗದ ಬಗ್ಗೆ ಕೋಪ, ಅಸಮಾನತೆ, ಸಮಾಜದ ಅನಿಷ್ಟಗಳ ಬಗ್ಗೆ ಅಸಹನೆ ಮುಂತಾದ ಗುಣಗಳು ಅವರನ್ನು ವಿಶ್ವಮಾನವ ಪಟ್ಟಕ್ಕೇರಿಸಿರುವುದು ಉತ್ಪ್ರೇಕ್ಷೆಯಲ್ಲ ಎಂದೆನಿಸುತ್ತದೆ.[65]

ಕುವೆಂಪುರವರು ಕವಿಯಾಗಿ, ನಾಟಕಕಾರರಾಗಿ, ಕಾದಂಬರಿಕಾರರಾಗಿ, ವಿಮರ್ಶಕರಾಗಿ ಜನಮನ್ನಣೆ ಪಡೆದಿದ್ದಾರೆ. ಅವರ ವಿಶ್ವಮಾನವ ಸಂದೇಶ ಅವರನ್ನು ರಾಷ್ಟ್ರಕವಿಯ ಮಟ್ಟಕ್ಕೇರಿಸಿದೆ. ಆಧುನಿಕ ಯುಗದಲ್ಲೂ 'ಶ್ರೀ ರಾಮಾಯಣ ದರ್ಶನಂ' ಎಂಬ ಮಹಾಕಾವ್ಯವನ್ನು ಸೃಷ್ಟಿಸುವುದರ ಮೂಲಕ ಕುವೆಂಪುರವರು ಮಹಾಕವಿ ಎನಿಸಿಕೊಂಡಿದ್ದಾರೆ. ಕನ್ನಡ ಸಾಹಿತ್ಯದ ಮೇರುಶಿಖರವೆನಿಸಿದ ರಾಷ್ಟ್ರಕವಿ, ಮಹಾಕವಿಯಾದ ಕುವೆಂಪುರವರನ್ನು ಅರಸಿ ಅನೇಕ ಪ್ರಶಸ್ತಿಗಳು ಮತ್ತು ಪದವಿಗಳು ಬಂದಿವೆ. ಅವುಗಳಲ್ಲಿ ಮುಖ್ಯವಾಗಿ ಪದ್ಮಭೂಷಣ(1958), ಜ್ಞಾನಪೀಠ ಪ್ರಶಸ್ತಿ (1967), ಪದ್ಮವಿಭೂಷಣ(1988) ಪಂಪಪ್ರಶಸ್ತಿ(1988), ಕರ್ನಾಟಕ ರತ್ನ(1992). ಕರ್ನಾಟಕದ ಅನೇಕ ವಿಶ್ವವಿದ್ಯಾನಿಲಯಗಳು ಮತ್ತು ಕಾನ್‌ಪುರದ ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ಪದವಿಗಳನ್ನು ನೀಡಿ ಗೌರವಿಸಿವೆ. ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಮಾತ್ರವಲ್ಲದೇ ಕನ್ನಡ ಭಾಷೆಯ ಬೆಳವಣಿಗೆಗೆ ಭದ್ರ ಬುನಾದಿ ಹಾಕಿದವರಲ್ಲಿ ಕುವೆಂಪುರವರು ಮೊದಲಿಗರು. ಕನ್ನಡ ಭಾಷೆಯ ಅಭಿವೃದ್ಧಿಯ ಹಾದಿಯಲ್ಲಿದ್ದ ಅಡಚಣೆಗಳನ್ನು, ಅಡ್ಡಿ–ಆತಂಕಗಳನ್ನು ದೂರಮಾಡಲು ಸಂಕಲ್ಪ ತೊಟ್ಟವರು ಮತ್ತು ನಾಡಿನ ಜನತೆಯನ್ನು ಈ ನಿಟ್ಟಿನಲ್ಲಿ ಕನ್ನಡ ಡಿಂಡಿಮವನ್ನು ಬಾರಿಸುವುದರ ಮೂಲಕ ಬಡಿದೆಚ್ಚರಿಸಿದವರು ಅವರು.

1.12 ಥಾಮಸ್ ಹಾರ್ಡಿ (1840–1928)

ಥಾಮಸ್ ಹಾರ್ಡಿಯವರು 1840 ಇಸವಿ ಜೂನ್ ತಿಂಗಳ 2ರಂದು ಡಾರ್ಸೆಟ್ ಜಿಲ್ಲೆಯ ಸ್ಟಿನ್‌ಫೋರ್ಡ್ ಹತ್ತಿರದ ಬೊಕಾಮ್ಟನ್‌ನಲ್ಲಿ ಜನಿಸಿದರು. ಅವರ ತಂದೆ ಒಬ್ಬ ಶಿಲ್ಪಿಯಾಗಿದ್ದರು, ತಾಯಿ ಸ್ಥಿತಿವಂತ ಸುಶಿಕ್ಷಿತ ಕುಟುಂಬದಿಂದ ಬಂದವರು. ಹಾರ್ಡಿಯವರು ತನ್ನೆಲ್ಲ ಶ್ರೇಯಸ್ಸಿಗೆ ತನ್ನ ತಂದೆ ತಾಯಿಗಳಿಗೆ ಹಾಗೂ ತಾನು ಹುಟ್ಟಿ ಬೆಳೆದ ಊರಿಗೆ ಆಭಾರಿಯಾಗಿದ್ದಾರೆ. ತಂದೆಯಿಂದ ಸಂಗೀತವನ್ನು ತಾಯಿಯಿಂದ ಪುಸ್ತಕಗಳನ್ನು ಓದುವ ಒಲವಿನ ಜೊತೆಗೆ ಬದಲಾಗುತ್ತಿರುವ ಪ್ರಪಂಚದಲ್ಲಿ ಒಂದು ಅಪರೂಪವಾದ ಸ್ಥಿರ ವ್ಯಕ್ತಿತ್ವವನ್ನು ಪಡೆದುಕೊಂಡಿದ್ದರು.

ಥಾಮಸ್ ಹಾರ್ಡಿಯವರು ಪ್ರಾಥಮಿಕ ಶಿಕ್ಷಣವನ್ನು ತನ್ನ ಹಳ್ಳಿಯಲ್ಲಿ ನಂತರ ಡಾರ್ಚೆಸ್ಟರ್‌ನಲ್ಲಿ ಪಡೆದರು. ಗ್ರೀಕ್ ಭಾಷೆಯನ್ನು ತನ್ನ ಸ್ವಂತ ಪರಿಶ್ರಮದಿಂದಲೇ ಕಲಿತರು. 1856ರಲ್ಲಿ ಚರ್ಚಿನ ವಾಸ್ತುಶಿಲ್ಪಿಯಾದ ಜಾನ್ ಹಿಕ್ಸರ್ ಬಳಿ ಉದ್ಯೋಗಾರ್ಥಿಯಾಗಿ ಸೇವೆಗೆ ಸೇರುತ್ತಾರೆ. ಜಾನ್ ಹಿಕ್ಸರ್‌ನ ಕಟ್ಟಡದ ಪಕ್ಕದ ಕಟ್ಟಡದಲ್ಲಿ ಶಾಲೆಯನ್ನು ನಡೆಸುತ್ತಿದ್ದ ಡಾರ್ಸೆಟ್‌ನ ಕವಿ ವಿಲಿಯಂ ಬಾನ್ಸರ್ ಹಾರ್ಡಿಯವರ ಶಿಕ್ಷಣವನ್ನು ಮುಂದುವರಿಸಲು ಪ್ರೋತ್ಸಾಹ ನೀಡುತ್ತಾರೆ. ಡಾರ್ಸೆಟ್‌ನ ಮತ್ತೊಬ್ಬ ವ್ಯಕ್ತಿ ಕ್ರೈಸ್ತಮತ ಬೋಧಕ ಹೊರೆಸ್ ಮೌಲ್ ಹಾರ್ಡಿಯವರಲ್ಲಿದ್ದ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಿದವರಲ್ಲಿ ಪ್ರಮುಖರು. ಕೈಗಾರಿಕಾ ಕ್ರಾಂತಿ ಮತ್ತು ಸುಧಾರಣಾ ಚಳುವಳಿಗಳು ಬಲಗೊಳ್ಳುತ್ತಿದ್ದಂತಹ ದಿನಗಳಲ್ಲಿ ಇಂಗ್ಲೆಂಡ್‌ನ ನೈರುತ್ಯ ಪ್ರದೇಶವಾದ ಡಾರ್ಸೆಟ್‌ನ ಗ್ರಾಮೀಣ ಪ್ರದೇಶ (ಮುಂದೆ ಇದೇ ಪ್ರದೇಶ ಹಾರ್ಡಿಯವರ ಕುಟುಂಬಗಳಲ್ಲಿ ವೆಸ್ಸೆಕ್ಸ್‌ನ ಹೆಸರಿನಲ್ಲಿ ಕರೆಯಲ್ಪಡುವುದು) ಮಾತ್ರ ಯಾವುದೇ ತಾಂತ್ರಿಕ ಬದಲಾವಣೆಯ ಬಿರುಗಾಳಿಗೆ ಸಿಲುಕದೆ ಉಳಿದುಕೊಂಡಿರುತ್ತದೆ. ಸಾಂಪ್ರದಾಯಿಕ ಗ್ರಾಮೀಣ ಪ್ರದೇಶವಾದ ಡಾರ್ಸೆಟ್‌ನ ಜನಜೀವನ, ಆಚರಣೆ, ಭಾಷೆ ಮುಂತಾದ ಜೀವನಸಂಬಂಧಿ ಅಂಶಗಳು ಬದಲಾವಣೆಯಿಂದ ದೂರ ಉಳಿದಿದ್ದವು. ಇಂತಹ ತಟಸ್ಥ ಗ್ರಾಮೀಣ ಬದುಕು ಮುಂದೆ ಹಾರ್ಡಿಯವರ ಕಾದಂಬರಿಗಳಿಗೆ ವೇದಿಕೆಯಾಗುವುದನ್ನು ಕಾಣುತ್ತೇವೆ.

ಹಾರ್ಡಿಯವರು ಏಳು ವರ್ಷದವರಾಗಿದ್ದಾಗ ಡಾರ್ಚೆಸ್ಟರ್‌ನಲ್ಲಿ ಮೊದಲು ರೈಲು ಮಾರ್ಗವನ್ನು ನೋಡುತ್ತಾರೆ. ಮುಂದೆ ಕೆಲವು ದಶಕಗಳಲ್ಲಿ ಗ್ರಾಮೀಣ ಪ್ರದೇಶಕ್ಕೆ ಹೊಸ ಯಂತ್ರಗಳ, ಹೊಸ ಜನರ ಆಗಮನ ಆಗುತ್ತದೆ. ಪ್ರಶಾಂತವಾಗಿ ಆನಂದಮಯವಾಗಿದ್ದ ಸದಾ ಶಾಂತಿ ನೆಮ್ಮದಿಯನ್ನು ನೀಡುತ್ತಿದ್ದ ಗ್ರಾಮೀಣ ಪ್ರದೇಶಕ್ಕೆ ಯಂತ್ರ ನಾಗರಿಕತೆಯ ಆಗಮನ ಸಾಂಪ್ರದಾಯಿಕ ದೇಸಿ ಬದುಕಿನ ಸ್ಥಿತ್ಯಂತರಕ್ಕೆ ಕಾರಣವಾಗುವುದನ್ನು ಹಾರ್ಡಿಯವರ ಕಾದಂಬರಿಗಳು ಪ್ರತಿಬಿಂಬಿಸುತ್ತವೆ. ಸಾವಯವ ಸಂಸ್ಕೃತಿಯಿಂದ ವೆಸೆಕ್ಸ್‌ನ ಪರಿಸರ ಆಧುನಿಕ, ಯಾಂತ್ರಿಕ ಪರಿಕರಗಳಿಂದ ಸಂಕ್ರಮಣಕ್ಕೊಳಗಾಗುತ್ತದೆ ಎನ್ನುವುದಕ್ಕೆ ಹಾರ್ಡಿಯವರು ಸಾಕ್ಷಿಯಾಗುತ್ತಾರೆ, ಬಾಲ್ಯದಲ್ಲಿ ಹಾರ್ಡಿ ಜಾನಪದ ಹಾಡುಗಳನ್ನು, ಕಥೆಗಳನ್ನು ಸಮೃದ್ಧವಾಗಿ ಕೇಳಿದ್ದುದು ಮುಂದೆ ಅವರ ಕಾದಂಬರಿಗಳಿಗೆ ಆಧಾರವಾಗುತ್ತವೆ. ಟೆಸ್ ಕಾದಂಬರಿಯನ್ನು ಅಧ್ಯಯನ ಮಾಡಿದರೆ ಅದರ ತಳಹದಿ ಜಾನಪದ ಕಥೆಯೆಲ್ಲಿರುವುದು ತಿಳಿಯುತ್ತದೆ.

1862ರಲ್ಲಿ ಹಾರ್ಡಿ 22 ವರ್ಷದವರಾಗಿದ್ದಾಗ ಲಂಡನ್‌ಗೆ ಹೋಗಿ ಆರ್ಥರ್ ಬ್ಲೂಮ್‌ಫೀಲ್ಡ್ ಬಳಿಯಲ್ಲಿ ದಸ್ತಾವೇಜು ಲೇಖಕನಾಗಿ ಸೇರಿಕೊಳ್ಳುತ್ತಾರೆ. ಲಂಡನ್‌ನಲ್ಲಿದ್ದಾಗ ಆ

ಕಾಲದ ಪ್ರಮುಖ ಸಾಹಿತಿಗಳಾದ ಚಾರ್ಲ್ಸ್ ಸ್ವಿನ್‌ಬರ್ನ್, ರಾಬರ್ಟ್ ಬ್ರೌನಿಂಗ್ ಮತ್ತು ಚಾರ್ಲ್ಸ್ ಡಾರ್ವಿನ್‌ರ ಪ್ರಭಾವಕ್ಕೆ ಒಳಗಾಗುತ್ತಾರೆ. ಆದರೆ ಅನಾರೋಗ್ಯದ ಕಾರಣ 1867ರಲ್ಲಿ ತನ್ನ ಹುಟ್ಟೂರಿಗೆ ವಾಪಸ್ಸಾಗಿ ಮತ್ತೆ ಜಾನ್ ಹಿಕ್ಸ್ ಮತ್ತು ಜಿ ಆರ್ ಕ್ರಿಕ್ಮೆರವರಲ್ಲಿ ವಾಸ್ತುಶಿಲ್ಪಿಯಾಗಿ ಕೆಲಸಕ್ಕೆ ಸೇರಿಕೊಳ್ಳುತ್ತಾರೆ. ಇದರಿಂದ ಅವರ ಉನ್ನತಮಟ್ಟದ ಶಿಕ್ಷಣಕ್ಕೆ ಧಕ್ಕೆ ಉಂಟಾಗುತ್ತದೆ. ತಾನು ಇಂಗ್ಲೆಂಡಿನ ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಸುಧಾರಣಾ ಧಾರ್ಮಿಕ ಅನುಯಾಯಿ ಆಗಬೇಕೆಂಬ ಕನಸು ಆರ್ಥಿಕ ಮುಗ್ಗಟ್ಟಿನಿಂದ ನನಸಾಗುವುದಿಲ್ಲ. ಆದ್ದರಿಂದ ಸ್ವಪ್ರಯತ್ನದಿಂದ ಸಾಹಿತ್ಯಾಭ್ಯಾಸ ಮಾಡಲು ತನ್ನನ್ನು ತೊಡಗಿಸಿಕೊಳ್ಳುತ್ತಾರೆ. ವಾಸ್ತು ಶಿಲ್ಪಿಯಾಗಿ ಕೆಲಸ ಮಾಡುತ್ತಲೇ ಚಿಕ್ಕ ವಯಸ್ಸಿನಲ್ಲಿಯೇ ಸಾಹಿತ್ಯ ಕೃಷಿಗೆ ಕೈ ಹಾಕುತ್ತಾರೆ. ಹಾರ್ಡಿಯವರ ಮೊದಲ ಕಾದಂಬರಿ 'ದಿ ಪ್ಯೂರ್ ಮ್ಯಾನ್ ಆ್ಯಂಡ್ ದಿ ಲೇಡಿ' (1867–68)"ಪ್ರಕಾಶಕರಿಂದ ನಿರಾಕರಿಸಲ್ಪಡುತ್ತದೆ. ಆದರೆ ಜಾರ್ಜ್ ಮೆರಿಡಿತ್‌ರ ಪ್ರೋತ್ಸಾಹದಿಂದ ಮುಂದೆ ಹಾರ್ಡಿ ತನ್ನ ಬರವಣಿಗೆಯ ಶೈಲಿಯನ್ನು ಸುಧಾರಿಸಿಕೊಂಡು, 'ಡೆಸ್ಪರೇಟ್ ರೆಮಿಡಿಸ್'(1871) ಎಂಬ ಕಾದಂಬರಿಯನ್ನು ಬರೆದಾಗ ಪ್ರಕಾಶಕರು ಒಪ್ಪಿಕೊಂಡು ಪ್ರಕಟಿಸುತ್ತಾರೆ, ಅವರ ಮುಂದಿನ ಕಾದಂಬರಿ 'ಅಂಡರ್ ದಿ ಗ್ರೀನ್ ಉಡ್ ಟ್ರೀ' 1972ರಲ್ಲಿ ಪ್ರಕಟಗೊಳ್ಳುತ್ತದೆ.

1874ರಲ್ಲಿ ಹಾರ್ಡಿ ಕಾರ್ನ್ ವಾಲ್‌ನಲ್ಲಿ ವಾಸ್ತುಶಿಲ್ಪಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ತನ್ನ ಮೊದಲ ಪತ್ನಿ ಎಮಿಲಾ ವಿನಿಗಿಫ್ಫರ್ಡ್‌ಳ ಪರಿಚಯವಾಗಿ ವಿವಾಹವಾಗುತ್ತಾರೆ. ತನ್ನ ಪತ್ನಿಯ ಇಷ್ಟದಂತೆ ವಾಸ್ತುಶಿಲ್ಪಿಕಾರನ ವೃತ್ತಿಯನ್ನು ಬಿಟ್ಟು ಸಂಪೂರ್ಣವಾಗಿ ಸಾಹಿತ್ಯ ಕ್ಷೇತ್ರಕ್ಕೆ ಹಾರ್ಡಿ ಸಮರ್ಪಿಸಿಕೊಳ್ಳುತ್ತಾರೆ. ಅವರ ಅನೇಕ ಕಾದಂಬರಿಗಳು ವಾರಪತ್ರಿಕೆಗಳಲ್ಲಿ ಧಾರಾವಾಹಿಯಾಗಿ ಪ್ರಕಟಗೊಳ್ಳುತ್ತಿದ್ದವು. ಇದರಿಂದ ಹಾರ್ಡಿಯವರು ಸಾಹಿತ್ಯವಲಯದಲ್ಲಿ ಒಂದು ಸುಭದ್ರ ಸ್ಥಾನವನ್ನು ಪಡೆದು ಪ್ರಸಿದ್ಧಿಯಾಗುತ್ತಾರೆ. ವೆಸ್ಸೆಕ್ಸ್ ಪ್ರದೇಶವನ್ನು ಮೊದಲ ಬಾರಿಗೆ ತಮ್ಮ 'ಫ್ಲಾರ್ ಫ್ರಮ್ ದಿ ಮ್ಯಾಡಿಂಗ್ ಕ್ರೌಡ್'(1874) ಕಾದಂಬರಿಯಲ್ಲಿ ಪರಿಚಯಿಸುತ್ತಾರೆ. ಮುಂದಿನ ಕಾದಂಬರಿಗಳಾದ 'ದಿ ರಿಟರ್ನ್ಸ್ ಆಫ್ ದಿ ನೇಟಿವ್'(1878) ಮತ್ತು 'ದಿ ಮೇಯರ್ ಆಫ್ ಕ್ಯಾಸ್ಟರ್‌ಬ್ರಿಜ್'(1886) ಇಂಗ್ಲಿಷ್ ಸಾಹಿತ್ಯ ಲೋಕದಲ್ಲಿ ಕೀರ್ತಿಯನ್ನು ತಂದಿಟ್ಟ ಕೃತಿಗಳಾಗಿವೆ.

ಹಾರ್ಡಿಯವರ ಕೊನೆಯ ಎರಡು ಕಾದಂಬರಿಗಳೆಂದರೆ 'ಟೆಸ್ ಆಫ್ ದಿ ಡಿ ಅರ್ಬರ್ ವಿಲ್ಲೆ'(1891) ಮತ್ತು 'ಜೂಡ್ ದಿ ಅಬ್ಸ್ಕ್ಯೂರ್'(1895) ಈ ಎರಡೂ ಕಾದಂಬರಿಗಳು ಸಾಹಿತ್ಯಾಭಿಮಾನಿಗಳಿಗೆ ಅಘಾತವನ್ನುಂಟುಮಾಡುತ್ತವೆ ಈ ಕಾದಂಬರಿಗಳು ವಿಕ್ಟೋರಿಯನ್ ವಿಚಾರಗಳಿಗೆ ನೈತಿಕ, ಧಾರ್ಮಿಕ ಮತ್ತು ಸಾಮಾಜಿಕ ಕಟ್ಟು ಕಟ್ಟಳೆಗಳಿಗೆ ಘಾಸಿಯನ್ನುಂಟುಮಾಡಿದವು

ಎಂದು ಆರೋಪಿಸಲಾಗುತ್ತದೆ. ಇಂಗ್ಲೆಂಡಿನಾದ್ಯಂತ ಸಾಹಿತ್ಯ ವಲಯದಲ್ಲಿ ಬಿಸಿ ಬಿಸಿ ಚರ್ಚೆಯಾಗುತ್ತವೆ. ಇಂತಹ ಕಟು ಟೀಕೆಗಳಿಂದ ಬೇಸತ್ತು ಕಾದಂಬರಿ ರಚನೆಯನ್ನೇ ತ್ಯಾಗ ಮಾಡುತ್ತಾರೆ. ತನ್ನೆಲ್ಲ ಆಸಕ್ತಿಯನ್ನು ಕಾವ್ಯರಚನೆಗೆ ಸೀಮಿತಗೊಳಿಸಿ ಮುಂದೆ ಒಂದೇ ಒಂದು ಕಾದಂಬರಿಯನ್ನೂ ಬರೆಯುವುದಿಲ್ಲ. 1895 ಮತ್ತು 1912ರ ನಡುವೆ ಮೂರು ಸಂಪುಟಗಳಷ್ಟು ಸಣ್ಣ ಕಥೆಗಳನ್ನು ಮತ್ತು ಮೂರು ಸಂಪುಟಗಳ ಪದ್ಯಗಳನ್ನು ರಚಿಸುವುದರೊಂದಿಗೆ ತನ್ನ ಜೀವನದಲ್ಲಿ ಅತ್ಯಂತ ಶ್ರೇಷ್ಠ ಮಟ್ಟದ ಸಾಹಿತ್ಯ ಸಾಧನೆಯನ್ನು ಮಾಡುತ್ತಾರೆ. 520 ಪುಟಗಳಷ್ಟು ಗದ್ಯ, ನಾಟಕ, ಭಾವಗೀತೆ ಮತ್ತು ತತ್ವಶಾಸ್ತ್ರಕ್ಕೆ ಸಂಬಂಧಪಟ್ಟ ಪದ್ಯಗಳನ್ನೊಳಗೊಂಡ 'ದಿ ಡೈನೆಸ್ಟ್' ಎಂಬ ಮಹಾ ಕೃತಿ ಪ್ರಕಟಗೊಳ್ಳುತ್ತದೆ. ಇದರಿಂದ ತಮ್ಮ ಸಾಹಿತ್ಯ ಜೀವನದ ಆಸೆ, ಆಕಾಂಕ್ಷೆಗಳ ಈಡೇರಿಕೆ ಜೊತೆಗೆ ಸರ್ವ ಶ್ರೇಷ್ಠವಾದ ಸಾಧನೆಯನ್ನು ಮುಡಿಗೇರಿಸಿಕೊಳ್ಳುತ್ತಾರೆ. ಇಂಗ್ಲಿಷ್ ಸಾಹಿತ್ಯ ಲೋಕದಲ್ಲಿ ತಡವಾಗಿಯಾದರೂ ಒಬ್ಬ ಅತ್ಯಂತ ಶ್ರೇಷ್ಠ ಲೇಖಕ ಎಂಬ ಖ್ಯಾತಿಯನ್ನು ಪಡೆಯುತ್ತಾರೆ. ಇವರ ಈ ಸಾಹಿತ್ಯ ಸಾಧನೆಯನ್ನು ಗುರುತಿಸಿ 1910ರಲ್ಲಿ 'ದಿ ಆರ್ಡರ್ ಆಫ್ ಮೆರಿಟ್' ಪದವಿಯನ್ನು ಕೊಟ್ಟು ಪುರಸ್ಕರಿಸಲಾಗುತ್ತದೆ. ಅನೇಕ ವಿಶ್ವವಿದ್ಯಾನಿಲಯಗಳಿಂದ ಗೌರವ ಡಾಕ್ಟರೇಟ್‌ಗಳನ್ನು ನೀಡಿ ಹಾರ್ಡಿಯವರನ್ನು ಗೌರವಿಸಲಾಗುತ್ತದೆ.

1928 ನೇ ಇಸವಿ ಜನವರಿ 11 ನೇ ತಾರೀಖು ಹಾರ್ಡಿಯವರು ಮರಣ ಹೊಂದುವರು ಅವರ ಸಾವು ಇಂಗ್ಲೆಂಡಿನ ಸಾಹಿತ್ಯ ಲೋಕಕ್ಕೆ ಆದ ನಷ್ಟ ಎನ್ನುವುದಕ್ಕಿಂತ 19ನೇ ಶತಮಾನದ, ವಿಕ್ಟೋರಿಯನ್ ಯುಗದ ಕೊನೆಯ ಕೊಂಡಿ ಕಣ್ಮರೆಯಾದದ್ದು ಅತ್ಯಂತ ದುಃಖಕರವಾದ ಸಂಗತಿಯೆಂದೇ ಹೇಳಬಹುದು. ವಿಕ್ಟೋರಿಯನ್ ಯುಗದ ಕೊನೆಯ ಮಹಾನ್ ಲೇಖಕ ಎಂದು ಇಂಗ್ಲೆಂಡಿನ ಜನ ಅಂತಿಮ ಗೌರವವನ್ನು ಸಲ್ಲಿಸುತ್ತಾರೆ, ಅವರ ಚಿತಾಭಸ್ಮವನ್ನು ಇಗ್ಲೆಂಡಿನ ವೆಸ್ಟ್ ಮಿನಿಸ್ಟರ್ ಅಬ್ಬೆಯಲ್ಲೂ, ಅವರಿಗೆ ವೆಸೆಕ್ಸನ ಮೇಲಿದ್ದ ಭಾವನಾತ್ಮಕ ಸಂಬಂಧದ ದ್ಯೋತಕವಾಗಿ ಅವರ ಹೃದಯವನ್ನು ಅವರ ಊರಿನ ಸ್ಮಶಾನದಲ್ಲೂ ಐಕ್ಯಗೊಳಿಸಲಾಯಿತು.

ಕೊನೆ ಟಿಪ್ಪಣಿ

1. ಕುವೆಂಪು: ನೆನಪಿನ ದೋಣಿ, ಪುಟ–1023
2. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ–283
3. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ–596

4. ಅದೇ, ಪುಟ–196
5. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ–32
6. ಅದೇ, ಪುಟ–301
7. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ–689
8. ಥಾಮಸ್ ಹಾರ್ಡಿ: ದಿ ರಿಟರ್ನ್ ಆಫ್ ದಿ ನೇಟಿವ್, ಪುಟ 64
9. ಸೀತಾರಾಮಯ್ಯ ಎಂ.ವಿ.: ಶ್ರೀ ವಿಜಯಾಕೃತ ಕವಿರಾಜ ಮಾರ್ಗಂ, ಪುಟ–16
10. Kittel's Kannada-English Dictionary: Revised by Prof. M Mariyappa Bhat.
11. The New Book of Knowledge Dictionary Vol – II.
12. ಇಂಗ್ಲೀಷ್–ಕನ್ನಡ ನಿಘಂಟು, ಮೈಸೂರು ವಿಶ್ವವಿದ್ಯಾನಿಲಯ ಇಜಟಿ–ಖಚಚ.
13. ಕನ್ನಡ–ಕನ್ನಡ ಶಬ್ದಕೋಶ.
14. Devy G N: Desivad, Keynote Address, Page -5.
15. ರಾಜೇಂದ್ರ ಚೆನ್ನಿ: ದೇಶಿವಾದ, ಪುಟ–1
16. ನಾಗಭೂಷಣಸ್ವಾಮಿ ಓ.ಎಲ್.: ದೇಸಿಯತೆಯ ಪ್ರಶ್ನೆ, ಪುಟ–353
17. ಚಂದ್ರಶೇಖರಯ್ಯ ಎಂ. ಜಿ.: ದೇಶಿ ಸಂಸ್ಕೃತಿಯ ಚಿಂತಕಾರಗಿ ಕುವೆಂಪು, ಪುಟ–423.
18. ಗಿರಡ್ಡಿ ಗೋವಿಂದರಾಜ: ಸಾಹಿತ್ಯದಲ್ಲಿ ದೇಶಿಯತೆ, ಪುಟ–93.
19. Balachandra Nemade: Nativisim in Literature, Page-249.
20. Makarand Paranjape: Nativism Essays in Criticism, Page-164
21. Ibid, Page-175
22. ನಾಗಭೂಷಣಸ್ವಾಮಿ ಓ.ಎಲ್.: ದೇಸಿಯತೆಯ ಪ್ರಶ್ನೆ, ಪುಟ–354
23. ರಾಮರಾವ್ ಎಂ.: ಕನ್ನಡ ಕಾದಂಬರಿಯಲ್ಲಿ ಪ್ರಾದೇಶಿಕತೆ, ಪುಟ–284
24. Balachandra Nemade: Nativisim in Literature, Page-. 247
25. Ibid, Page- 251
26. Ibid, Page- 244
27. ರಾಜೇಂದ್ರ ಚೆನ್ನಿ ಡಾ.: ದೇಶಿವಾದ, ಪುಟ–2
28. ಶಿವರಾಮಯ್ಯ: ಊಳಿಗಮಾನ್ಯ ಸಂಸ್ಕೃತಿಯ ಪ್ರಧಾನ ಮತ್ತು ಸೃಜನಶೀಲತೆ, ಪುಟ–20
29. ರಹಮತ್ ತರೀಕೆರೆ: ಸಂಸ್ಕೃತಿ ಹಾಗಂದರೇನು?, ಪುಟ–2
30. ಅದೇ, ಪುಟ– 3
31. ರಹಮತ್ ತರೀಕೆರೆ: ಸಾಂಸ್ಕೃತಿಕ ಅಧ್ಯಯನ, ಪುಟ–2
32. ಕೇಶವಶರ್ಮಾ: ನವೋದಯ ಸಾಹಿತ್ಯ, ವಸಾಹತುಶಾಹಿ ಮತ್ತು ದೇಶೀಯ ಸಂಸ್ಕೃತಿಗಳ ಅನುಸಂದಾನ, ಪುಟ– 122
33. ಅದೇ, ಪುಟ– 224

34. ಅದೇ, ಪುಟ- 122

35. ಮುನಿವೆಂಕಟಪ್ಪ: ಜಾಗತೀಕರಣ ಒಂದು ಅವಲೋಕನ, ಪುಟ–96

36. ಜಗದೀಶ್ ಕೊಪ್ಪ: ಜಾಗತೀಕರಣ ಮತ್ತು ಗ್ರಾಮಭಾರತ, ಪುಟ–34

37. Sundaram V.: Impact of Globalisation on Indian Culture: http://www.blogi.com/ prespective. Dec 3. 2006.

38. ಕೇಶವಶರ್ಮಾ: ಜಾಗತೀಕರಣ ಪರ್ಯಾಯ ಸಾದ್ಯತೆಗಳು, ಸಾಹಿತ್ಯಕ ಆಯಾಮ, ಪುಟ–516.

39. ಅದೇ, ಪುಟ–510

40. Sundaram V.: Impact of Globalisation on Indian Culture: http://www.blogi.com/ prespective. Dec3. 2006.

41. Vohra Ranbir: The Making of India, A Historical Survey, Edn II, Page- 94

42. Sundaram V.: Impact of Globalisation on Indian Culture: http://www.blogi.com/ prespective. Dec3. 2006.

43. ಕೇಶವಶರ್ಮಾ: ಜಾಗತೀಕರಣ ಪರ್ಯಾಯ ಸಾಧ್ಯತೆಗಳು, ಸಾಹಿತ್ಯಕ ಆಯಾಮ, ಪುಟ–516.

44. ಜಗದೀಶ್ ಕೊಪ್ಪ: ಜಾಗತೀಕರಣ ಮತ್ತು ಗ್ರಾಮಭಾರತ, ಪುಟ–163

45. ಅದೇ, ಪುಟ–164

46. ಕೇಶವಶರ್ಮಾ: ಜಾಗತೀಕರಣ ಪರ್ಯಾಯ ಸಾದ್ಯತೆಗಳು, ಸಾಹಿತ್ಯಕ ಆಯಾಮ, ಪುಟ–520

47. PARK:Christianities in India, Emroy University, Eng Dept., Post – Colonial Students http/ www/emroy,edu/English//Batirsh 09-01-2003,

48. DIRKS, Nicholas B.: Colonialism and the making of Modem India, Page 24

49. Ibid – Page 131.

50. Sundarm V.: Impact of Globalisation on Indian Culture: http://www.blogi.com/ prespective. Dec3. 2006.

51. ಮುನಿವೆಂಕಟಪ್ಪ ಜಾಗತೀಕರಣ: ಒಂದು ಅವಲೋಕನ, ಪುಟ- 99

52. Vandanda Shiva: Stolen Harvest, (Page 12) http://www. Green prophet.com/ 2008/.

53. Ibid, Page-13

54. Ibid, Page-14

55. ಜಗದೀಶ್ ಕೊಪ್ಪ: ಗ್ರಾಮಭಾರತದ ಮೇಲೆ ಜಾಗತೀಕರಣದ ಪ್ರಭಾವ, ಪುಟ–164

56. ಮುನಿವೆಂಕಟಪ್ಪ ಜಾಗತೀಕರಣ: ಒಂದು ಅವಲೋಕನ, ಪುಟ–99

57. ಶೇಷಗಿರಿ ರಾವ್ ಎಲ್.ಎಸ್.: ಇಂಗ್ಲೀಷ್ ಸಾಹಿತ್ಯ ಚರಿತ್ರೆ, ಪುಟ–375

58. ನಾಗರಾಜ್ ಡಿ.ಆರ್.: ಕನ್ನಡ ಕಾದಂಬರಿಗಳಲ್ಲಿ ಆದರ್ಶ ಮತ್ತು ವಾಸ್ತವ, ಪುಟ–141

59. ಅದೇ, ಪುಟ–142

60. ಗಿರಡ್ಡಿ ಗೋವಿಂದರಾಜ: ಸಾಹಿತ್ಯದಲ್ಲಿ ದೇಶೀಯತೆ, ಪುಟ– 95

61. ಅಮೂರ ಜಿ.ಎಸ್.: ಕನ್ನಡ ಕಥನ ಸಾಹಿತ್ಯ ಕಾದಂಬರಿ, ಪುಟ– 56

62. ಕುವೆಂಪು: ಮಲೆನಾಡಿನ ಚಿತ್ರಗಳು, ಪುಟ–24

63. ಕುವೆಂಪು: ನೆನಪಿನ ದೋಣಿಯಲ್ಲಿ, ಪುಟ–337

64. ಪರಮೇಶ್ವರಭಟ್ಟ ಎಸ್.ವಿ.: ಶ್ರೀ ಕುವೆಂಪು, ಪುಟ–6

65. ಚಕ್ಕೆರೆ ಶಿವಶಂಕರ್: ಸಹ್ಯಾದ್ರಿಯ ಸೂರ್ಯ, ಪುಟ–31

ಅಧ್ಯಾಯ – 2

ಕುವೆಂಪು ಮತ್ತು ಹಾರ್ಡಿಯವರ ಕಾದಂಬರಿಗಳಲ್ಲಿ ಚಿತ್ರಿತವಾಗಿರುವ ದೇಸಿಯತೆ ಮತ್ತು ಜಾಗತೀಕತೆ

2.1 ದೇಸಿ ಕೃಷಿ

2.2 ದೇಸಿ ಕಸುಬುಗಳು ಮತ್ತು ಸಾಕು ಪ್ರಾಣಿಗಳು

2.3 ದೇಸಿ ಬದುಕು ಮತ್ತು ಬೇಟೆ

2.4 ದೇಸಿ ಕುಟುಂಬ ಮತ್ತು ಹಳ್ಳಿಯ ಚಿತ್ರಣ

2.5 ದೇಸಿ ಕ್ರೀಡೆಗಳು ಮತ್ತು ಮನರಂಜನೆ

2.6 ದೇಸಿ ಶಿಕ್ಷಣ ಮತ್ತು ಜಾಗತೀಕರಣ

2.7 ದೇಸಿ ಕೃಷಿ ಮತ್ತು ಜಾಗತೀಕರಣ

2.8 ದೇಸಿ ಬದುಕು ಮತ್ತು ಆಧುನಿಕ ಸಂಪರ್ಕ–ಸಾಧನಗಳು

2.9 ದೇಸಿ ಸಮಾಜ ಮತ್ತು ಜಾಗತೀಕರಣ

ಅಧ್ಯಾಯ –2

ಕುವೆಂಪು ಮತ್ತು ಥಾಮಸ್ ಹಾರ್ಡಿಯವರ ಕಾದಂಬರಿಗಳಲ್ಲಿ ದೇಸಿಯತೆ ಮತ್ತು ಜಾಗತಿಕತೆ

ದೇಸಿ ಮತ್ತು ಜಾಗತಿಕತೆ ಪದಗಳ ಅರ್ಥ ವಿವರಣೆ ಮತ್ತು ವ್ಯಾಖ್ಯಾನಗಳನ್ನು ಗಮನಿಸಿದಾಗ ಕುವೆಂಪು ಮತ್ತು ಹಾರ್ಡಿಯವರ ಕಾದಂಬರಿಗಳಲ್ಲಿ ದೇಸಿ ಬದುಕಿನ ಸಮೃದ್ಧವಾದ ಮತ್ತು ಸ್ಪಷ್ಟವಾದ ಚಿತ್ರಣವನ್ನು ಕಾಣಬಹುದು. ಕುವೆಂಪುರವರ ಕಾದಂಬರಿಗಳು ಮಲೆನಾಡಿನ ಪ್ರದೇಶದ ಸಾಮಾಜಿಕ, ಭೌಗೋಳಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ಅಭಿವ್ಯಕ್ತಪಡಿಸುವ ಮೂಲಕ ದೇಸಿಯತೆಯನ್ನು ಅನಾವರಣಗೊಳಿಸಿವೆ. ಇನ್ನು ಇಂಗ್ಲೆಂಡಿನ ಒಳನಾಡಿನ ವೆಸೆಕ್ಸ್ ಪ್ರದೇಶದ ಗ್ರಾಮೀಣ ಜನರ, ನಾಗರೀಕತೆಯ ಸೋಂಕಿಲ್ಲದ ಆದರೆ ನಾಗರೀಕತೆಯ ಹೊಸ್ತಿಲಲ್ಲಿದ್ದ ಪ್ರಾದೇಶಿಕ ಬದುಕನ್ನು ಹಾರ್ಡಿಯವರು ತಮ್ಮ ಕಾದಂಬರಿಗಳಲ್ಲಿ ಚಿತ್ರಿಸುವುದರ ಮೂಲಕ ದೇಸಿಯತೆಯನ್ನು ಜೀವಂತಗೊಳಿಸಿದ್ದಾರೆ. ನಿರ್ದಿಷ್ಟ ಪ್ರದೇಶಗಳು ಮತ್ತು ಕಾಲ ಒಟ್ಟಾಗಿ ಜನರ ಜೀವನಕ್ರಮ, ವೈವಿಧ್ಯಮಯ ಸಂಸ್ಕೃತಿ, ವರ್ಗ–ಸಂಘರ್ಷಗಳು, ಜೀವನಾನುಭವ, ಲಿಂಗ ತಾರತಮ್ಯ ಮುಂತಾದ ಅಂಶಗಳನ್ನು ದೇಸಿ ಸಂಸ್ಕೃತಿಯ ಭಾಗವಾಗಿ ಇಬ್ಬರೂ ಕೃತಿಕಾರರು ತಮ್ಮ ಕಾದಂಬರಿಗಳಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ. ಕಾದಂಬರಿಗಳಲ್ಲಿ ಬಳಸಲ್ಪಟ್ಟಿರುವ ಭಾಷೆ, ಶೈಲಿ, ನಿರಕ್ಷರಕುಕ್ಷಿಗಳ ಭಾಷಾ ಉಚ್ಚಾರಣೆ ಮತ್ತು ಅಧುನಿಕತೆಯ ಸ್ಪರ್ಶವಿಲ್ಲದ ಮುಗ್ಧ ಗ್ರಾಮೀಣ ಜನಪದರ ಬದುಕು ದೇಸಿಯತೆಯ ಜೀವಾಳವಾಗಿದೆ. ಸಾಹಿತ್ಯ ಕೃತಿಯ ಭಾಷೆಯೆ ಕಾದಂಬರಿಗಳ ನಿರ್ದಿಷ್ಟ ಕಾಲ ಮತ್ತು ಪ್ರದೇಶಗಳನ್ನು ಸೂಚಿಸುವುದರ ಮಟ್ಟಿಗೆ ಕುವೆಂಪು ಮತ್ತು ಹಾರ್ಡಿಯವರು ದೇಸಿಯತೆಯ ಸ್ಪಷ್ಟ ಚಿತ್ರಣವನ್ನು ನೀಡಿದ್ದಾರೆ.

ದೇಸಿ ಸ್ವರೂಪವನ್ನು ನಿರ್ದೇಶಿಸುವಲ್ಲಿ ಪ್ರಾದೇಶಿಕತೆ ಅಥವಾ ಸ್ಥಳೀಯತೆಯು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಮಲೆನಾಡಿನ ಪ್ರಾದೇಶಿಕ ಚಿತ್ರಣವನ್ನು ಅಭಿವ್ಯಕ್ತಿಪಡಿಸುವುದರ ಮೂಲಕ ಕುವೆಂಪುರವರ ಎರಡೂ ಕಾದಂಬರಿಗಳು ಪ್ರಾದೇಶಿಕ ಕಾದಂಬರಿಗಳೆಂದು'ಕರೆಯಲ್ಪಟ್ಟಿವೆ. ಮಲೆನಾಡಿನ ಪರಿಸರದ ಪ್ರಾದೇಶಿಕ ಸತ್ವವನ್ನು ಆ ಪ್ರದೇಶದಲ್ಲಿ ಜೀವತಳೆದ ಜೀವರಾಶಿಗಳೆಲ್ಲದರಲ್ಲಿಯೂ ಕಾಣಬಹುದು. ಮಲೆನಾಡಿನ ಜನರ ವೃತ್ತಿ, ಪ್ರವೃತ್ತಿ, ವ್ಯವಹಾರ, ಆಹಾರ, ಪಾನೀಯಗಳು, ವೇಷಭೂಷಣಗಳು, ಪ್ರಾದೇಶಿಕ ವೈಶಿಷ್ಟ್ಯತೆಗಳನ್ನು ಅಭಿವ್ಯಕ್ತಿಗೊಳಿಸುವುದರ ಮೂಲಕ ಅವರ ಕಾದಂಬರಿಗಳು ದೇಸಿ ಬದುಕಿಗೆ ಕನ್ನಡಿ ಹಿಡಿದಿವೆ.

ಮಲೆನಾಡಿನ ಜನರು ಅವಿದ್ಯಾವಂತರು, ನಿರಕ್ಷರಕುಕ್ಷಿಗಳು ವಿದ್ಯೆಯ ಪ್ರಾಮುಖ್ಯತೆಯನ್ನರಿಯದ ಮುಗ್ಧರು. ಮೂಢನಂಬಿಕೆಗಳನ್ನು ಆಚರಿಸುತ್ತ ಸಾಂಪ್ರದಾಯಿಕ ಕೃಷಿ ಕಾರ್ಯಗಳಲ್ಲಿ ತೊಡಗಿ ಜೀವನ ಸಾಗಿಸುತ್ತಿದ್ದವರು. ಕೃಷಿಯೇ ಅವರ ಮೂಲ ಕಸುಬು. ಮಲೆನಾಡಿನ ದಟ್ಟ ಅಡವಿಗಳಲ್ಲಿ ಅಲ್ಪಸ್ವಲ್ಪ ಭೂಮಿಯನ್ನು ಹದ ಮಾಡಿ ತೋಟಗದ್ದೆಗಳನ್ನು ಮಾಡಿಕೊಂಡು ಆ ಪರಿಸರಕ್ಕೆ ಸರಿಹೊಂದುವ ಬೆಳೆಗಳಾದ ಅಡಿಕೆ, ಭತ್ತ, ಬಾಳೆ, ಮುಂತಾದವುಗಳನ್ನು ಬೇಸಾಯ ಮಾಡಿ ಜೀವನ ಸಾಗಿಸುತ್ತಿದ್ದರು. ಕೃಷಿಗೆ ಹೊಂದಿಕೊಂಡಂತೆ ಇತರ ಉಪಕಸುಬುಗಳಾದ ಹೈನುಗಾರಿಕೆ, ಕೋಳಿ, ಹಂದಿ ಸಾಕಾಣಿಕೆ ಮುಂತಾದವು ಕೂಡ ಸ್ಥಳೀಯರ ಬದುಕಿನ ಭಾಗವಾಗಿದ್ದವು.

2.1 ದೇಸಿ ಕೃಷಿ:

"ಕೋಟಿ ವಿದ್ಯೆಗಳಿಗಿಂತ ಮೇಟಿ ವಿದ್ಯೆಯೇ ಮೇಲು" ಎಂಬ ಸರ್ವಜ್ಞನ ವಚನ ಕೃಷಿಯ ಪ್ರಾಮುಖ್ಯತೆಯನ್ನು ಹೇಳುತ್ತದೆ. ಒಕ್ಕಲುತನ ಅಥವಾ ಕೃಷಿ ಒಕ್ಕಲಿಗರ ಮೂಲ ಉದ್ಯೋಗ. ಒಕ್ಕಲು ಎಂದರೆ ಕೃಷಿಕ ಎಂದರ್ಥ. ಗ್ರಾಮೀಣ ಸಮುದಾಯದಲ್ಲಿ ಒಕ್ಕುವ ಅಥವ ಕೃಷಿ ಚಟುವಟಿಕೆಗಳಲ್ಲಿ ತೊಡಗಿರುವವರಿಗೆ ಒಕ್ಕಲಿಗರು ಅಥವಾ ಊರ ಕೃಷಿಕರು ಎಂದು ಕರೆಯುತ್ತಿದ್ದರು. ಮಲೆನಾಡಿನ ಪ್ರದೇಶದಲ್ಲಿ ಒಕ್ಕಲುತನವನ್ನೇ ಮುಖ್ಯ ಕಸುಬನ್ನಾಗಿ ಸಾಂಪ್ರದಾಯಿಕ ರೀತಿಯಲ್ಲಿ ಅನುಸರಿಸುತ್ತ ಬಂದವರೆ ಬಹುಸಂಖ್ಯಾತರಾಗಿದ್ದರು. ಒಕ್ಕಲಿಗ ಮತ್ತು ಒಕ್ಕಲುತನಕ್ಕೆ ಬಿಡಿಸಲಾರದ ಸಂಬಂಧವಿತ್ತೆಂಬುದನ್ನು ಮತ್ತು ಬೇರೆ ಜಾತಿಯವರಿಗೆ ನಿಷಿದ್ಧವಾಗಿತ್ತು ಎಂಬುದನ್ನು ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಕಾಣಬಹುದು. "ವೇದ ಕಲಿಯುವುದು ಶೂದ್ರರಿಗೆ ಹೇಗೆ ನಿಷಿದ್ಧವೋ ಹಾಗೆಯೇ ಸ್ವಂತ ಜಮೀನು ಮಾಡುವುದು ಹಳೆಪೈಕದವರಿಗೆ ನಿಷಿದ್ಧ ಎಂದು ಒಕ್ಕಲಿಗರಾಗಿದ್ದ ಹೆಗ್ಗಡೆ ಗೌಡ ನಾಯಕರುಗಳೆಲ್ಲ ಸೇರಿ ತೀರ್ಮಾನ ಮಾಡಿದ್ದರು".[1] ಒಕ್ಕಲಿಗರೇ ಒಕ್ಕಲುತನವನ್ನು ಮಾಡುತ್ತಿದ್ದು ಇತರ ಜಾತಿಯವರು ಆ ವೃತ್ತಿಗೆ ನೇರವಾಗಿ ತೊಡಗಿಸಿಕೊಂಡಿರಲಿಲ್ಲ ಎನ್ನಬಹುದು. ಆದರೆ ಕಾಲಾನಂತರ ಇತರ ಜಾತಿಯವರೂ ಅಲ್ಪ ಸ್ವಲ್ಪ ಜಮೀನು ಹೊಂದಿ ಒಕ್ಕಲುತನಕ್ಕೆ ಸೇರಿಕೊಂಡರೆಂಬುದನ್ನು ಹಳೇಪೈಕದ ಸೇಸನಾಯ್ಕ ಮತ್ತು ಬ್ರಾಹ್ಮಣನಾದ ಕಲ್ಲೂರ ಮಂಜಭಟ್ಟರಲ್ಲಿ ಕಾಣಬಹುದು. ಹಳೆಪೈಕದ ಸೇಸನಾಯ್ಕ ಬಗನಿಯ ಮರದಿಂದ ಕಳ್ಳು ಇಳಿಸುವ ಕುಲಕಸುಬಿನ ಜೊತೆಗೆ ಸ್ವಂತ ಜಮೀನು ಹೊಂದಿದ್ದರೂ ಸಹ ಬಹಿರಂಗವಾಗಿ ಒಕ್ಕಲಿಗ ಜಮೀನುದಾರರನ್ನು ಎದುರು

ಹಾಕಿಕೊಳ್ಳುತ್ತಿರಲಿಲ್ಲ. ಅದೇ ರೀತಿ ಕಲ್ಲೂರ ಮಂಜಭಟ್ಟರು ಪೂಜೆ ಪುನಸ್ಕಾರಗಳ ಜೊತೆಗೆ ಒಂದಿಷ್ಟು ಜಮೀನನ್ನು ಪಡೆದು ಸಾಗುವಳಿ ನಡೆಸುತ್ತಿದ್ದರು.

ಮಲೆನಾಡಿನಲ್ಲಿ ಭೌಗೋಳಿಕ ಪರಿಸರ ಮತ್ತು ಹವಾಮಾನಕ್ಕೆ ಅನುಗುಣವಾಗಿ ಬೆಳೆಯುತ್ತಿದ್ದ ಬೆಳೆಗಳಲ್ಲಿ ಭತ್ತ, ಅಡಿಕೆ, ಬಾಳೆ ಮುಂತಾದವು ಮುಖ್ಯವಾಗಿದ್ದವು. ಆಹಾರದ ಬೆಳೆಯಾಗಿ ಭತ್ತ ಪ್ರಮುಖ ಬೆಳೆಯಾಗಿತ್ತು. ಮುಂಗಾರು ಪ್ರಾರಂಭವಾದೊಡನೆ ಜನರೆಲ್ಲ ಬೇಸಿಗೆಯ ಆಲಸ್ಯದಿಂದ ಹೊರಬಂದು ಕೃಷಿ ಚಟುವಟಿಕೆಗಳಲ್ಲಿ ತೊಡಗುತ್ತಿದ್ದರು. “ಮುಂಗಾರಿನ ಪ್ರಾರಂಭದಲ್ಲಿ ಹಠಾತ್ತಾಗಿ ಕಾಣಿಸಿಕೊಂಡು, ಆಕಾಶವನ್ನೆಲ್ಲ ಆಚ್ಛಾದಿಸಿ, ಮಿಂಚು ಗುಡುಗು ಸಿಡಿಲು ಬಿರುಗಾಳಿಗಳಿಂದ ರುದ್ರ ಪರಿವಾರದೊಡನೆ ಬಂದು, ಬಿರುಮಳೆಗೆರೆದು–ಹಗಲಿರುಳೂ ಒಂದೇ ಸಮನಾಗಿ ಜಡಿಮಳೆಯನ್ನು ಹುಯ್ಯತೊಡಗಿತ್ತು”.[2] ಇದರಿಂದ ಮಲೆನಾಡಿನ ಜನ ತಮ್ಮ ವ್ಯವಸಾಯಕ್ಕೆ ಮಳೆಯನ್ನೇ ನಂಬಿಕೊಂಡಿದ್ದರು ಮತ್ತು ಮುಂಗಾರಿನ ಪ್ರಾರಂಭದೊಡನೆ ಕಾರ್ಯಶೀಲರಾಗುತ್ತಿದ್ದರು ಎನ್ನುವುದನ್ನು ಕಾಣುತ್ತೇವೆ: “ಮನೆಮನೆಯಲ್ಲಿಯ ಹಳ್ಳಿಯ ಜನರು ಗದ್ದೆಯ ಕೆಲಸಕ್ಕೆ ಶುರು ಮಾಡಿದ್ದಾರೆ; ಆರು ಕಟ್ಟುತ್ತಿದ್ದಾರೆ; ಅಗೋಡಿ ಮಾಡುತ್ತಿದ್ದಾರೆ; ಅಂಚು ಕೆತ್ತುತ್ತಿದ್ದಾರೆ. ಹಗಲು ಕೂಣಿ ಹಾಕಿ ಮೀನು ಹಿಡಿಯುತ್ತಿದ್ದಾರೆ; ರಾತ್ರಿ, ದೊಂದಿ ಲಾಟೀನುಗಳ ಬೆಳಕಿನಲ್ಲಿ ಹತ್ತು ಮೀನು ಕಡಿಯುತ್ತಿದ್ದಾರೆ. ಅಟ್ಟದ ಮೇಲಿದ್ದ ಗೊರಬುಗಳೆಲ್ಲ ಹೆಣ್ಣಾಳುಗಳ ತಲೆಗೇರಿ ಸಂಚರಿಸುತ್ತವೆ; ಹಾಸಿಗೆಯಲ್ಲಿಯೂ ಸಂದಿಮೂಲೆಗಳಲ್ಲಿಯೂ ಇದ್ದ ಕಂಬಳಿಗಳೆಲ್ಲ ಕೊಪ್ಪೆಗಳಾಗಿ ಗಂಡಾಳುಗಳ ತಲೆಗೇರಿ ದುಡಿದಾಡುತ್ತಿವೆ. ಎತ್ತಿನ ಹಟ್ಟಿಯ ಉಳುಮೆಯ ಕೆಲಸದ ಎತ್ತುಗಳಿಗೆಲ್ಲ ರಜಾಕಾಲ ಮುಗಿದು ಇಸ್ಕೂಲು ಪ್ರಾರಂಭವಾದಂತಿದೆ.”[3] ಹೀಗೆ ಮುಂಗಾರು ಪ್ರಾರಂಭವಾದೊಡನೆ ಆರು ಕಟ್ಟುವುದರ ಮೂಲಕ ಭತ್ತದ ಸಸಿಮಡಿಗಳು ಅಂದರೆ ಅಗೋಡಿಗಳನ್ನು ಹದಗೊಳಿಸುತ್ತಿದ್ದರು. ನಂತರ ಗದ್ದೆಯ ಅಂಚು ಕಡಿದು, ಗೊಬ್ಬರ ಹಾಕಿ, ನೀರು ನಿಲ್ಲಿಸಿ ನಂತರ ಭತ್ತದ ಸಸಿಗಳನ್ನು ನಾಟಿ ಮಾಡುತ್ತಿದ್ದರು. ಸುರಿಯುವ ಮಳೆಯಿಂದ ರಕ್ಷಣೆ ಪಡೆಯಲು ಹೆಣ್ಣಾಳುಗಳು ತಲೆಗೆ ಗೊರಬುಗಳನ್ನು, ಗಂಡಾಳುಗಳು ಕಂಬಳಿ ಕೊಪ್ಪೆಗಳನ್ನು ಧರಿಸುತ್ತಿದ್ದರು.

ಕೃಷಿ ಕಾರ್ಯದಲ್ಲಿ ನಿರತರಾದ ಆಳುಗಳಿಗೆ ಬೇಸರವಾಗದಿರಲೆಂದು ಕಥೆ ಹೇಳುವುದು, ಹಾಡುವುದು ದೇಸಿ ಸಂಸ್ಕೃತಿಯ ಭಾಗವಾಗಿತ್ತು ಎನ್ನುವುದನ್ನು ಕಾನೂರು ಹೆಗ್ಗಡಿತಿ ಕಾದಂಬರಿಯಲ್ಲಿ ಕಾಣುತ್ತೇವೆ: ಹೂವಯ್ಯ ಕಥೆ ಹೇಳುವುದು, ಪದ್ಯ ಹಾಡುವುದು, ವಿನೋದವಾಡುವುದು ಮೊದಲಾದವುಗಳಿಂದ ತನ್ನೊಡನೆ ಕೆಲಸ ಮಾಡುವವರೆಲ್ಲರನ್ನೂ ಉತ್ಸಾಹಗೊಳಿಸುತ್ತಿದ್ದನು.[4]

ಎಂಬೆಲ್ಲಾ ವಿವರಗಳಿಂದ ಜಾನಪದ ಸಂಸ್ಕೃತಿ ಮಲೆನಾಡಿನ ದೇಸಿ ಬದುಕಿನಲ್ಲಿ ಹಾಸುಹೊಕ್ಕಾಗಿತ್ತು ಎಂಬುದನ್ನು ಕಾಣಬಹುದು.

ಮಲೆನಾಡಿನಲ್ಲಿ ಭತ್ತ ಪ್ರಮುಖ ಆಹಾರ ಬೆಳೆಯಾದರೆ ಅಡಿಕೆ ವಾಣಿಜ್ಯ ಬೆಳೆಯಾಗಿತ್ತು. ಅಲ್ಲಿನ ಜನರ ಆರ್ಥಿಕ ಜೀವನದ ಮೂಲವಾಗಿದ್ದು, ಅವರ ಬೇಕು ಬೇಡಗಳನ್ನು ಪೂರೈಸುತ್ತಿತ್ತು. ಭೂಮಿ ಹುಣ್ಣಿಮೆಯ ಹಬ್ಬದ ನಂತರ ಮಳೆಯ ರಭಸ ನಿಂತಮೇಲೆ ಅಡಿಕೆ ಕೊಯ್ಲು ಪ್ರಾರಂಭವಾಗುತ್ತಿತ್ತು. ಮಲೆನಾಡಿನ ಮನೆಮಂದಿಯೆಲ್ಲ ಬಹಳ ಚಟುವಟಿಕೆಯಿಂದ ಅಡಿಕೆ ಸುಲಿಯುವ ಕೆಲಸದಲ್ಲಿ ಮಗ್ನರಾಗುತ್ತಿದ್ದರು. "ಕಾನೂರು ಮನೆಯಲ್ಲಿ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಕೊನೆ ತೆಗೆಯುವುದು, ಕುತ್ತರೆ ಹಾಕುವುದು, ಚಪ್ಪರದ ಮೇಲೆ ವಾಟೆಯ ತಟ್ಟಿಗಳಲ್ಲಿ ಹರಡಿ ಬಿಸಿಲಿನಲ್ಲಿ ಆರಿಸುವುದು ಮುಂತಾದ ಕೆಲಸಗಳು ಭರದಿಂದ ಸಾಗುತ್ತಿದ್ದವು".[5] ರಾತ್ರಿಯ ವೇಳೆಯಲ್ಲಿ ಅಡಿಕೆ ಹದಗೊಳಿಸುವ ಕಾರ್ಯ ನಡೆಯುತ್ತಿತ್ತು. ಮನೆಯ ಜಗುಲಿಯಲ್ಲಿ, ಕಿರು ಜಗುಲಿಯಲ್ಲಿ, ಚೌಕಿಯಲ್ಲಿ ಎಲ್ಲೆಲ್ಲಿಯೂ ಆಳುಗಳು ಮೆಟ್ಟುಗತ್ತಿಗಳಿಂದ ಅಡಿಕೆ ಸುಲಿಯುತ್ತಿದ್ದ ಸದ್ದು ಲಯಬದ್ಧವಾಗಿ ಮನಮೋಹಕವಾಗಿರುತ್ತಿತ್ತು. ಸುಲಿದ ಅಡಿಕೆಗಳನ್ನು ಒಂದು ನಿರ್ದಿಷ್ಟ ಆಕಾರಕ್ಕೆ ಕತ್ತರಿಸಿ ಬೇಯಿಸುತ್ತಿದ್ದರು. "ಚೌಕಿಯ ಮೂಲೆಯಲ್ಲಿ ದೊಡ್ಡದಾದ ಅಡಿಕೆ ಒಲೆಯ ಮೇಲೆ ಕರಿ ಹಿಡಿದು ಚೊಗರುಬಿದ್ದ ಚಿತ್ರವಿಚಿತ್ರವಾಗಿದ್ದ ತಾಮ್ರದ ದೊಡ್ಡ ಹಂಡೆಯಲ್ಲಿ ಅಡಿಕೆ ತಕಪಕನೆ ಕುದಿಯುತ್ತಿತ್ತು. ಇನ್ನೊಂದು ಕಡೆ ಆ ರಾತ್ರಿ ಬೇಯಿಸಿದ ಅಡಿಕೆಯನ್ನು ಒಣಗಿಸಲು ಹೊಗೆದಟ್ಟಿಯೂ ಸಿದ್ಧವಾಗಿದ್ದಿತು."[6] ಹೀಗೆ ಅಡಿಕೆ ಕೊನೆ ತೆಗೆಯುವುದರಿಂದ ಹಿಡಿದು, ಸುಲಿದು, ಬೇಯಿಸಿ, ಹರಡಿ ಒಣಗಿಸಿ ಮಾರುವುದರ ತನಕ ಮಲೆನಾಡಿನ ಜನರಿಗೆ ಪುರುಸೊತ್ತಿಲ್ಲದ ಕಾರ್ಯವಾಗಿತ್ತು.

ಮಲೆನಾಡಿನಲ್ಲಿ ಬೆಳೆಯುತ್ತಿದ್ದ ಇತರ ಬೆಳೆಗಳೆಂದರೆ ಕಬ್ಬು, ಬಾಳೆ, ತೆಂಗು ಮುಂತಾದವುಗಳಾಗಿದ್ದವು. ಒಕ್ಕಲುತನ ಒಕ್ಕಲಿಗರ ಮುಖ್ಯ ಕಸುಬಾಗಿದ್ದರೂ ಬೇಸಾಯದ ಕೆಲಸಗಳನ್ನು ನಿರ್ವಹಿಸಲು ಇತರ ಜನಾಂಗದವರೂ ಸಹ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಪಾಲ್ಗೊಳ್ಳುತ್ತಿದ್ದರು. ಭತ್ತದನಾಟಿ ಮಾಡಲು ಅಡಿಕೆ ಸುಲಿಯಲು, ಹೆಚ್ಚು ಜನರ ಅಗತ್ಯವಿದ್ದುದರಿಂದ ಆ ಮಲೆನಾಡಿನಲ್ಲಿಯೇ ಇದ್ದ ಜೀತದ ಆಳುಗಳು, ಜೊತೆಗೆ ಘಟ್ಟದ ಕೆಳಗಿನಿಂದ ಬಂದ ಕೂಲಿಯಾಳುಗಳು ಸಹಾಯ ಮಾಡುತ್ತಿದ್ದರು. ಮಲೆನಾಡಿನಲ್ಲಿ ಜನಸಂಖ್ಯೆ ವಿರಳವಾದ್ದರಿಂದ ಒಕ್ಕಲಿಗ ಜಮೀನುದಾರರು ಘಟ್ಟದ ಕೆಳಗಿನಿಂದ ಸೇರೆಗಾರರಂತ ದಳ್ಳಾಳಿಗಳ ಮೂಲಕ ಕೂಲಿಯಾಳುಗಳನ್ನು ಕರೆಸಿ, ತೋಟ ಮತ್ತು ಗದ್ದೆ ಕೆಲಸಗಳನ್ನು ಮಾಡಿಸುತ್ತಿದ್ದರು. ಒಟ್ಟಿನಲ್ಲಿ ಕೃಷಿ

ಅಥವಾ ಒಕ್ಕಲುತನ ಮಲೆನಾಡಿನ ದೇಸಿ ಬದುಕಿನ ಅವಿಭಾಜ್ಯ ಅಂಗವಾಗಿತ್ತು ಎನ್ನುವುದನ್ನು ಕುವೆಂಪುರವರ ಎರಡೂ ಕಾದಂಬರಿಗಳು ನಿರೂಪಿಸುತ್ತವೆ.

ಕುವೆಂಪುರವರಂತೆಯೇ ಹಾರ್ಡಿಯವರು ಸಹ ಅಂದಿನ ಇಂಗ್ಲೆಂಡಿನ ಗ್ರಾಮೀಣ ಪ್ರದೇಶದ ಕೃಷಿಯಾಧಾರಿತ ಬದುಕನ್ನು ತಮ್ಮ ಕಾದಂಬರಿಗಳಲ್ಲಿ ಅನಾವರಣಗೊಳಿಸಿದ್ದಾರೆ. ವೆಸೆಕ್ಸ್ ಪ್ರದೇಶದ ಎಗ್ಡನ್ ಹೀತ್‌ನ ಜನರಿಗೆ ಕೃಷಿಯೇ ಮುಖ್ಯ ಕಸುಬಾಗಿತ್ತು. ಎಗ್ಡನ್ನಿನ ನಿವಾಸಿಗಳು ಮುಗ್ಧರು, ಅನಕ್ಷರಸ್ಥರು ಆದರೂ ಬುದ್ಧಿವಂತರು, ಮತ್ತು ಭಾವನಾ ಜೀವಿಗಳು. ಎಗ್ಡನ್ನಿನ ಕಪ್ಪು ಮಿಶ್ರಿತ ಕಂದು ಬಣ್ಣದ ಮಣ್ಣಿನೊಡನೆ ಅನನ್ಯ ಸಂಬಂಧವಿಟ್ಟುಕೊಂಡಿದ್ದವರು, ಆ ಮಣ್ಣಿನಲ್ಲಿ ಬೆಳೆಯುವ ಕೆಲವೇ ಆಹಾರ ಧಾನ್ಯಗಳಲ್ಲಿ ತೃಪ್ತಿಯನ್ನು ಹೊಂದುತ್ತಿದ್ದರು ಎಂಬುದನ್ನು ಹಾರ್ಡಿಯವರು ತಮ್ಮ <u>‘ದಿ ರಿಟರ್ನ್ ಆಫ್ ದಿ ನೇಟಿವ್’</u> ಮತ್ತು <u>‘ಟೆಸ್ ಆಫ್ ದಿ ಡಿ ಅರ್ಬರ್‌ವಿಲ್ಲೆ’</u> ಕಾದಂಬರಿಗಳಲ್ಲಿ ವಿವರಿಸಿದ್ದಾರೆ. ಗ್ರಾಮೀಣ ಪ್ರದೇಶದ ಹೊಲಗದ್ದೆ, ತೋಟಗಳ ಹಿನ್ನಲೆಯಲ್ಲಿ ರೂಪುಗೊಂಡ ಮಣ್ಣಿನ ಮಕ್ಕಳಾದ ರೈತರ ದೈನಂದಿನ ಬದುಕಿನ ಚಿತ್ರಣವನ್ನು ಅವುಗಳಲ್ಲಿ ಕಾಣುತ್ತೇವೆ. ರೈತರು ಮತ್ತು ಇನ್ನಿತರ ವೃತ್ತಿಗಳ ಜನರ ಮಧ್ಯೆ ಯಾವುದೇ ವ್ಯತ್ಯಾಸವನ್ನು ಗುರುತಿಸುವುದು ಬಹಳ ಕಷ್ಟವೆನಿಸುವಷ್ಟರ ಮಟ್ಟಿಗೆ ಹಾರ್ಡಿಯವರು 19ನೇ ಶತಮಾನದ ಕೃಷಿ ಸಮಾಜದ ಸಾಮಾನ್ಯರ ಬದುಕನ್ನು ವಿವರಿಸಿದ್ದಾರೆ. ಕುವೆಂಪುರವರ ಮಲೆನಾಡಿನ ಒಕ್ಕಲಿಗರಿಗಿಂತ ಹಾರ್ಡಿಯವರ ಜಮೀನ್ದಾರರು ಸಂತೃಪ್ತ ಜೀವನ ನಡೆಸುತ್ತಿದ್ದರು ಎನ್ನುವುದನ್ನು ಕಾಣಬಹುದು.[7]

<u>‘ಟೆಸ್ ಆಫ್ ದಿ ಡಿ ಅರ್ಬರ್‌ಲ್ಲೆ’</u> ಕಾದಂಬರಿಯು ಕೃಷಿ ಸಮಾಜ ಮತ್ತು ಕೃಷಿ ಕಾರ್ಮಿಕರ ಬದುಕಿನ ಮೇಲೆ ಬೆಳಕು ಚೆಲ್ಲುತ್ತದೆ. “ಗ್ರಾಮೀಣ ಭಾಗದಲ್ಲಿ ಊಳಿಗಮಾನ ಪದ್ಧತಿಯಲ್ಲಿ ಹಳ್ಳಿಯಲ್ಲಿ ರೆಸಿಡೆಂಟರು, ಸ್ವತಂತ್ರ ಜಮೀನ್ದಾರರು ಬಹುಪಾಲು ಭೂಮಿಯನ್ನು ಹೊಂದಿದ್ದರು, ಅವರ ಹೊಲಗಳಲ್ಲಿ ಬೇರೆಡೆಯಿಂದ ವಲಸೆ ಬಂದ ಕೂಲಿಕಾರ್ಮಿಕರು ಕೆಲಸ ಮಾಡುತ್ತಿದ್ದರು.”[8] ಮಲೆನಾಡಿನ ಜಮೀನುದಾರರಂತೆ ಇವರೂ ಸಹ ಕೆಲಸದಾಳುಗಳನ್ನು ಶೋಷಣೆ ಮಾಡುವುದರಲ್ಲಿ ನಿರತರಾಗಿದ್ದರು ಎನ್ನುವುದನ್ನು ಟೆಸ್ ಮತ್ತು ಆಕೆಯ ಸ್ನೇಹಿತೆಯರ ವಿಷಯದಲ್ಲಿ ಕಾಣುತ್ತೇವೆ. ಘಟ್ಟದ ಕೆಳಗಿನಿಂದ ಕರಾರಿನ ಮೇಲೆ ಆಳುಗಳನ್ನು ಕರೆತರುತ್ತಿದ್ದ ಸೇರೆಗಾರರಂತೆ, ಇವರೂ ಸಹ ವಾರ್ಷಿಕ ಕರಾರಿನ ಮೇಲೆ ಫ್ಲಿಂಟ್ ಕೊಂಬ್ ಆ್ಯಶ್, ಟಾಲ್‌ಬೋತಿ ಮುಂತಾದ ಪ್ರದೇಶಗಳಿಗೆ ವಲಸೆ ಹೋಗಿ ದುಡಿಯುತ್ತಿದ್ದರು.

ಕೃಷಿ ಕಾರ್ಯಗಳಲ್ಲಿ ನಿರತರಾದ ವೆಸೆಕ್ಸ್ ಪ್ರದೇಶದ ಜನರು ತಮ್ಮ ಬೇಸರವನ್ನು ಕಳೆಯಲು ಲಾವಣಿ ಪದಗಳನ್ನು ಹಾಡುವುದು ಮಲೆನಾಡಿನ ಜನಪದ ಸಂಸ್ಕೃತಿಯನ್ನು ನೆನಪಿಸುತ್ತದೆ: "ಟೆಸ್ ಮತ್ತು ಇತರರು ಮ್ಯಾರ್ಲಾಟ್‌ನ ಹೊಲದಲ್ಲಿ ಕೆಲಸ ಮಾಡುವ ಆಳುಗಳ ಜೊತೆ ಲಾವಣಿ ಪದಗಳನ್ನು ಹಾಡುತ್ತಾ, ಕೆಲಸ ಮಾಡುತ್ತಿದ್ದರು."[9] ಹೀಗೆ ಲಾವಣಿಪದ ಮತ್ತು ಸುಗ್ಗಿಯ ಪದಗಳು ವೆಸೆಕ್ಸ್‌ನ ಗ್ರಾಮೀಣ ಪ್ರದೇಶದ ಜಾನಪದ ಸಂಸ್ಕೃತಿಯ ಪ್ರತೀಕವಾಗಿದ್ದವು. ಕೃಷಿ ಕಾರ್ಮಿಕರು ಮತ್ತು ಕೂಲಿಯಾಳುಗಳು ಎಲ್ಲ ಕಡೆಯೂ ಒಂದೇ, ಏಕೆಂದರೆ ಕುವೆಂಪುರವರ ಕಾದಂಬರಿಗಳಲ್ಲಿ ಬರುವ ಜೀತದಾಳುಗಳೂ, ಘಟ್ಟದ ಕೆಳಗಿನಿಂದ ಬಂದ ಕೂಲಿಯಾಳುಗಳೂ, ಹಾರ್ಡಿಯವರ ವೆಸೆಕ್ಸ್‌ನ ಪ್ರದೇಶದ ಆಳುಗಳೂ ತಮ್ಮ ದುಡಿಮೆಯ ಹೆಚ್ಚಿನ ಭಾಗವನ್ನು ಹೆಂಡ, ಕಳ್ಳು, ಜೂಜು, ಮೋಜಿಗಾಗಿ ವ್ಯಯಿಸುತ್ತಿದ್ದರು ಎನ್ನುವುದನ್ನು ಕಾಣಬಹುದು.

ವೆಸೆಕ್ಸ್‌ನ ಕೃಷಿಯಾಧಾರಿತ ದೇಸಿಯ ಬದುಕು ಯಾಂತ್ರೀಕೃತಗೊಳ್ಳುವುದನ್ನು ಟೆಸ್ ಕಾದಂಬರಿಯಲ್ಲಿ ಕಾಣಬಹುದು. ಶ್ರೀಮಂತ ಜಮೀನ್ದಾರರು ತಮ್ಮ ಹೊಲಗಳಲ್ಲಿ ಕೆಲಸ ಮಾಡಲು, ಸುಗ್ಗಿಯಲ್ಲಿ ಒಕ್ಕಣೆಮಾಡಲು ಯಂತ್ರಗಳನ್ನು ಬಳಸುವುದನ್ನು ಕಾಣುತ್ತೇವೆ.[10] ಬೆಳೆಯನ್ನು ಕಟಾವು ಮಾಡುವ 'reaping machine', ದವಸಧಾನ್ಯಗಳನ್ನು ಹುಲ್ಲಿನಿಂದ ಬೇರ್ಪಡಿಸುವ 'harvestor' ಮುಂತಾದ ಯಂತ್ರಗಳು ದೇಸಿಯ ಬದುಕಿಗೆ ಪ್ರವೇಶಿಸುವುದನ್ನು ಕಾಣುತ್ತೇವೆ. ಸಾಂಪ್ರದಾಯಿಕ ಕೃಷಿ ಕ್ಷೇತ್ರವನ್ನು ಯಂತ್ರಗಳು ಆಕ್ರಮಿಸುವುದನ್ನು ವೆಸೆಕ್ಸ್ ಭಾಗದ ಹಳ್ಳಿಯ ವೃದ್ಧರ ಮಾತಿನಲ್ಲೂ ಕಾಣಬಹುದು. "The old men on the rising straw-rick talked of the past days when they had been accustomed to thresh with flails on the oaken barnfloor: when everything, even to winnowing, was effected by hand-labour, which, to their thinking, though slow, produced better results"[೧೧] ಈ ಮಾತುಗಳಲ್ಲಿ ಕಳೆದುಹೋಗುತ್ತಿರುವ ದೇಸಿ ಬದುಕಿನ ಬಗ್ಗೆ ಮೂಲ ನಿವಾಸಿಗಳ ವಿಷಾದವನ್ನು ಕಾಣುತ್ತೇವೆ.

ಟಾಲ್‌ಬೋತಿ ಮತ್ತು ಫ್ಲಿಂಟ್‌ಕೊಂಬ್ ಆ್ಯಶ್ ಎರಡು ಮುಖ್ಯ ಕೃಷಿ ಪ್ರದೇಶಗಳು ಇಂಗ್ಲೆಂಡಿನ ಕೃಷಿ ಸಮಾಜವನ್ನು ಪರಿಚಯಿಸುತ್ತವೆ, 19ನೇ ಶತಮಾನದ ಕೃಷಿ ಪದ್ಧತಿ, ಕೃಷಿ ಕಾರ್ಮಿಕರ ಸಾಮಾಜಿಕ ಪರಿಸ್ಥಿತಿಯನ್ನು ಹಾರ್ಡಿಯವರು 'ಟೆಸ್' ಕಾದಂಬರಿಯಲ್ಲಿ ವಿವರಿಸುತ್ತಾರೆ. ಟಾಲ್ ಬೋತಿ ದಕ್ಷಿಣ ಇಂಗ್ಲೆಂಡಿನ ಫಲವತ್ತಾದ ಕೃಷಿವಲಯವಾಗಿದ್ದರೆ, ಫ್ಲಿಂಟ್ ಕೊಂಬ್ ವಿಶಾಲವಾದ, ಬೆಟ್ಟ ಗುಡ್ಡ, ಕುರುಚಲು ಗಿಡಗಳಿಂದ ಕೂಡಿದ್ದು ಕೃಷಿಗೆ ಅಷ್ಟೇನೂ

ಯೋಗ್ಯವಾಗಿರಲಿಲ್ಲ ಎನ್ನುವುದನ್ನು ಕಾಣುತ್ತೇವೆ.[12] ಒಟ್ಟಿನಲ್ಲಿ ಮ್ಯಾರ್ಲಾಟ್, ಎಮ್ಮಿನಿಸ್ಟರ್ ಮತ್ತು ಟ್ಯಾಂಟ್ರಿಜ್ ಹಳ್ಳಿಗಳು ವಿಶಾಲವಾದ ಕೃಷಿ ಯೋಗ್ಯ ಭೂಮಿಯನ್ನು ಹೊಂದಿದ್ದವು ಮತ್ತು 19ನೇ ಶತಮಾನದ ಇಂಗ್ಲೆಂಡಿನ ವ್ಯವಸಾಯದ ಕೇಂದ್ರ ಪ್ರದೇಶಗಳಾಗಿದ್ದವು. ಕೈಗಾರಿಕಾ ಕ್ರಾಂತಿಯ ಕರಿನೆರಳು ಇನ್ನೂ ಆ ಪ್ರದೇಶಗಳಿಗೆ ಪ್ರವೇಶಿಸಿರಲಿಲ್ಲ ಎನ್ನುವುದನ್ನು ಕಾಣುತ್ತೇವೆ. ಇದರಿಂದ ಕುವೆಂಪುರವರ ಮಲೆನಾಡಿನ ಒಕ್ಕಲುತನಕ್ಕೂ ಹಾರ್ಡಿಯವರು ನಿರೂಪಿಸಿರುವ ಕೃಷಿ ಸಮಾಜಕ್ಕೂ ಸಾಮ್ಯತೆಯಿರುವುದು ವೇದ್ಯವಾಗುತ್ತದೆ.

2.2 ದೇಸಿ ಕಸುಬುಗಳು ಮತ್ತು ಸಾಕು ಪ್ರಾಣಿಗಳು

ಮಲೆನಾಡಿನ ದೇಸಿಯ ಬದುಕಿನಲ್ಲಿ ಒಕ್ಕಲುತನ ಮುಖ್ಯ ಕಸುಬಾದರೆ, ಒಕ್ಕಲುತನಕ್ಕೆ ಸಹಕಾರಿಯಾಗುವಂತಹ ಮತ್ತೊಂದು ಕಸುಬು ಎಂದರೆ ಪ್ರಾಣಿ ಸಾಕಾಣಿಕೆ. ಅನಾದಿಕಾಲದಿಂದಲೂ ಮಾನವ ತನ್ನ ಬದುಕಿಗೆ ಆಸರೆಯಾಗಿ ಪ್ರಾಣಿಗಳನ್ನು ಪಳಗಿಸಿ ಸಾಕುವುದನ್ನು ಕಲಿತಿದ್ದಾನೆ. ಅಹಾರ ಉತ್ಪಾದನೆಯನ್ನು ಕೈಗೊಳ್ಳುವ ಪೂರ್ವದಲ್ಲಿಯೇ ಪ್ರಾಣಿಗಳನ್ನು ಬೇಟೆಯಾಡಿ ಅಥವಾ ಪಳಗಿಸಿ ಸಾಕುವುದನ್ನು ಮತ್ತು ಅವುಗಳನ್ನು ತನ್ನ ಜೀವನೋಪಾಯಕ್ಕೆ ಬಳಸಿಕೊಂಡಿದ್ದನೆಂದು ತಿಳಿದು ಬರುತ್ತದೆ: "ಜೊತೆಗೆ ಬೇಟೆಗೆ ಹೋದಾಗ ಬೇಟೆಯಾಡಿದ ಪ್ರಾಣಿಗಳ ಮರಿಗಳನ್ನು ತಂದು ಮನೆಯಲ್ಲಿ ಸಾಕಿರಬಹುದು. ದನ, ಎಮ್ಮೆ, ಕತ್ತೆ, ಆಡು, ಕುರಿಗಳ ಮರಿಗಳು ಮಾನವನ ಮನೆ ಸೇರಿದವು. ಬೇಟೆ ಸಿಗದಾಗಲಂತೂ ಅವುಗಳು ಆಹಾರವಾಗಬಲ್ಲವು. ಹೀಗೆ ಮಾನವನ ಮನೆ ಸೇರಿದ ಗಂಡು ಹೆಣ್ಣು ಮರಿಗಳು ಒಟ್ಟಾಗಿ ಬೆಳೆದಾಗ, ಅವುಗಳಿಗೆ ಇವನ ನೆಲೆಯಲ್ಲೇ ಮರಿಗಳಾದಾಗ ಪ್ರಾಣಿಗಳನ್ನು ಪಳಗಿಸುವುದರ ಹೆಚ್ಚಿನ ಲಾಭವೇನೆಂದು ಮಾನವನಿಗೆ ಮನವರಿಕೆಯಾಯಿತು. ಮಾನವ ಹಿಗ್ಗಿ ಹೋದ, ಆಹಾರದ ಬಗೆಗಿನ ಬಹಳಷ್ಟು ಚಿಂತೆ ಈಗ ದೂರವಾಯಿತು."[13] ಇದರಿಂದ ಮಾನವ ಕೃಷಿಯ ಪೂರ್ವದಲ್ಲಿಯೇ ಪ್ರಾಣಿಗಳನ್ನು ಸಾಕುವುದನ್ನು ಒಂದು ವೃತ್ತಿಯನ್ನಾಗಿ ಮಾಡಿಕೊಂಡಿದ್ದನು ಎಂಬುದು ತಿಳಿಯುತ್ತದೆ.

ಕುವೆಂಪು ಕಾದಂಬರಿಗಳಲ್ಲಿ ಸಾಕುಪ್ರಾಣಿಗಳಾದ ಕುರಿ, ಕೋಳಿ, ನಾಯಿ, ದನ, ಎತ್ತು, ಎಮ್ಮೆ, ಹಂದಿ ದೇಸಿ ಬದುಕಿನ ಭಾಗವಾಗಿದ್ದು ಸ್ಥಳೀಯರ ಬೇಕು-ಬೇಡಗಳನ್ನು ಪೂರೈಸುತ್ತಿದ್ದುದನ್ನು ಕಾಣುತ್ತೇವೆ. ಆಹಾರಕ್ಕಾಗಿ ಮತ್ತು ಭೂತ, ಪಿಶಾಚಿ, ಮತ್ತು ದೇವರಿಗೆ ಬಲಿಕೊಡಲು ಕುರಿ, ಕೋಳಿ, ಮೇಕೆ, ಹಂದಿಗಳನ್ನು ಸಾಕಿದರೆ, ಹಾಲು ಮೊಸರಿಗಾಗಿ ದನ,

ಎಮ್ಮೆಗಳನ್ನು ಸಾಕುತ್ತಿದ್ದರು. ವ್ಯವಸಾಯಕ್ಕಾಗಿ ಗದ್ದೆ, ತೋಟಗಳನ್ನು ಉಳುಮೆ ಮಾಡಲು, ಚಕ್ಕಡಿ ಅಥವಾ ಗಾಡಿಗಳನ್ನು ಎಳೆಯಲು ಎತ್ತುಗಳನ್ನು ಬಳಸುತ್ತಿದ್ದರು. ಪ್ರಾರಂಭದಲ್ಲಿ ಸಾಕು ಪ್ರಾಣಿಗಳನ್ನು ಸ್ವಂತ ಉಪಯೋಗಕ್ಕೆ ಬಳಸುತ್ತಿದ್ದು, ನಂತರ ಅದೊಂದು ಕಸುಬಾಗಿ, ವ್ಯಾಪಾರವಾಗಿ ಮಾರ್ಪಾಡಾಗುತ್ತದೆ. ಸಾಕು ಪ್ರಾಣಿಗಳಿಗಾಗಿ ಪ್ರತ್ಯೇಕ ಮನೆಗಳನ್ನು ಕಟ್ಟಿಸುತ್ತಿದ್ದರು. ಮಲೆಗಳಲ್ಲಿ ಮದುಮಗಳು ಕಾದಂಬರಿಯ ಸುಬ್ಬಣ್ಣ ಹೆಗ್ಗಡೆಯವರ ಮನೆಯಲ್ಲಿ ಎಲ್ಲಾ ತರಹದ ಸಾಕುಪ್ರಾಣಿಗಳನ್ನು ಕಾಣುತ್ತೇವೆ. ಅವರ ಮನೆಯೊಂದು ಪ್ರಾಣಿಸಂಗ್ರಹಾಲಯವಾಗಿತ್ತು ಎನ್ನಬಹುದು. "ಅವರಿಗೆ ಕೋಳಿ ಒಡ್ಡಿ, ಕುರಿ ಒಡ್ಡಿ, ಹಂದಿ ಒಡ್ಡಿಗಳೆಂದರೆ ಗದ್ದೆ ತೋಟಗಳಷ್ಟೇ ಮುಖ್ಯವಾಗಿದ್ದವು, ಅಮೂಲ್ಯವಾಗಿದ್ದವು.... ಅವುಗಳಿಗಿರುವ ಒಡ್ಡಿಗಳು ಕಣ್ಣಿನಿಂದ ಮರೆಯಾಗಿದ್ದರೆ ಮನಸ್ಸಿನಿಂದಲೂ ಎಲ್ಲಿಯಾದರೂ ಮರೆಯಾಗಿ ಬಿಟ್ಟಾವು ಎಂಬ ಅಳುಕಿನಿಂದಲೇ ಜಗಲಿಯ ಎದುರುಗಡೆ, ನೇರವಾಗಿ ಕಾಣುವಂತೆ ಒಡ್ಡಿಗಳನ್ನು ಕಟ್ಟಿಸಿದ್ದರು.[14]

ಮಲೆನಾಡಿನ ದೈನಂದಿನ ಬದುಕು ಪ್ರಾರಂಭವಾಗುತ್ತಿದ್ದುದೇ ಈ ಸಾಕುಪ್ರಾಣಿಗಳು ಅವುಗಳ ವಾಸಸ್ಥಾನದಿಂದ ಹೊರಬರುವಾಗ ಉಂಟಾಗುತ್ತಿದ್ದ ಕಲರವದಿಂದ ಎನ್ನಬಹುದು. ಬೆಳಕಾಗುತ್ತಿದ್ದಂತೆಯೇ "ಅಂಗಳಗಳಲ್ಲಿದ್ದ ಒಡ್ಡಿಗಳಲ್ಲಿಯೂ, ಒಡ್ಡಿಗಳ ಹಿಂದಿದ್ದ ಕೊಟ್ಟಿಗೆಲ್ಲಿಯೂ ಗೊರಸಿನ ಸದ್ದು, ಕೊಂಬಿನ ಸದ್ದು, ದೊಂಟೆಯ ಸದ್ದು, ಹೋತದ ಸೀನಿನ ಸದ್ದು, ಸಲಗನ ಗುರುಗುರು ಸದ್ದು, ಒಂದಾದ ಮೇಲೊಂದು ಕೇಳಿಸತೊಡಗಿತು."[15] ಈ ಮಾತುಗಳು ಸಾಕುಪ್ರಾಣಿಗಳು ಮಲೆನಾಡಿನ ದೇಸಿಯ ಬದುಕಿನ ಭಾಗವಾಗಿದ್ದವು ಎನ್ನುವುದನನ್ನು ಸೂಚಿಸುತ್ತದೆ. ಸಾಕುಪ್ರಾಣಿಗಳು ದೇಸಿಯ ಬದುಕಿನಲ್ಲಿ ಸ್ಥಳೀಯರ ಆರ್ಥಿಕ ಮೂಲವೂ ಕೂಡ ಆಗಿತ್ತು. ಸುಬ್ಬಣ್ಣ ಹೆಗ್ಗಡೆಯವರ ಬಳಿ ವೆಂಕಟಣ್ಣ ಹಂದಿಯನ್ನು ದೆಯ್ಯದ ಹರಕೆಗೆಂದು ಸಾಲ ತೆಗೆದುಕೊಂಡು ಹೋಗುವುದು, ಈ ವಿಷಯವನ್ನು ಸ್ಪಷ್ಟಪಡಿಸುತ್ತದೆ. ಕೋಳಿ, ಕುರಿ, ಹಂದಿ ಮತ್ತು ಮೇಕೆಗಳನ್ನು ದೆಯ್ಯ-ದ್ಯಾವರುಗಳಿಗೆ ಬಲಿ ಕೊಡಲು, ಮದುವೆ ಮುಂತಾದ ಸಾಮೂಹಿಕ ಭೋಜನಗಳಿಗೆ ಬಳಸುತ್ತಿದ್ದರು. ಕಾನೂರಿನಲ್ಲಿ ದೆಯ್ಯದ ಹರಕೆ ಎಂದರೆ, ಅದೊಂದು ಮಹಾಸಂಭ್ರಮದ ಘಟನೆ. ಚಂದ್ರಯ್ಯಗೌಡರ ಆಳು, ಒಕ್ಕಲು ಸಮೀಪದ ಬಂಧುಗಳು ಎಲ್ಲರೂ ಅದರಲ್ಲಿ ಭಾಗಿಗಳಾಗುವುದು ವಾಡಿಕೆಯಾಗಿತ್ತು. ಕೆಲವು ಕುರಿಗಳೂ ಅನೇಕ ಕುಕ್ಕಟಗಳೂ ಆ ದಿನ ಭೂತ, ರಣ, ಬೇಟೆ ರಣ, ಚೌಡಿ, ಪಂಜ್ರೊಳ್ಳಿ ಮೊದಲಾದ ದೆಯ್ಯ ದ್ಯಾವರುಗಳಿಗೆ ಬಲಿಯಾಗುತ್ತಿದ್ದುದರಿಂದ ಕೆಲವರ ಕಣ್ಣಿಗೂ ಎಲ್ಲರ ಹೊಟ್ಟೆಗೂ ಹಬ್ಬವಾಗುತ್ತಿತ್ತು."[16] ಹರಕೆ ಹೊತ್ತ ಜನರು ತಮ್ಮ ಸ್ಥಾನಮಾನ, ಆರ್ಥಿಕ ಸಾಮರ್ಥ್ಯಕ್ಕೆ ಅನುಗುಣವಾಗಿ ಮತ್ತು ದೊಡ್ಡ, ಸಣ್ಣ ದೆಯ್ಯಗಳ ಶಕ್ತಿ ಸಾಮರ್ಥ್ಯಕ್ಕೆ ತಕ್ಕಂತೆ ತಮ್ಮ ಪ್ರಾಣಿಗಳನ್ನು ಬಲಿಕೊಡುತ್ತಿದ್ದರು. ಕೆಲವು ದೆಯ್ಯಗಳಿಗೆ ಅದರಲ್ಲೂ ಚೌಡಿಯ

ಬಸಕ್ಕೆ ಅತ್ಯಂತ ಕ್ರೂರವಾಗಿ ಅಂದರೆ ಪ್ರಾಣಿಯ ವಕ್ಷಸ್ಥಳಕ್ಕೆ ಒನಕೆಯಿಂದ ಬೀಸಿ ಬೀಸಿ ಹೊಡೆದು ಕೊಲ್ಲುತ್ತಿದ್ದರು. ಹೀಗೆ ಕುರಿ, ಕೋಳಿ, ಮೇಕೆಗಳನ್ನು ಬಲಿಕೊಟ್ಟು ರಕ್ತವನ್ನು ಮರದ ಬುಡದಲ್ಲಿಟ್ಟು ಭೂತದ ಕಲ್ಲಿಗೆ ಹಚ್ಚುತ್ತಿದ್ದರು.

ಕೋಳಿಗಳನ್ನು ಕೇವಲ ಆಹಾರಕ್ಕಾಗಿ ಅಥವಾ ಬಲಿಕೊಡಲು ಮಾತ್ರವೇ ಸಾಕುತ್ತಿರಲಿಲ್ಲ ಜೊತೆಗೆ ಅಂಕಕ್ಕಾಗಿಯೂ ವಿಶೇಷವಾಗಿ ಸಾಕುತ್ತಿದ್ದರು. ಕೋಳಿ ಅಂಕಕ್ಕಾಗಿಯೇ ಕಸುಬುದಾರರು ವಿಶೇಷವಾಗಿ ತರಬೇತಿ ನೀಡಿ, ಕಟ್ಟಿ ಸಾಕಿರುತ್ತಿದ್ದರು. ಅವುಗಳು ಎಷ್ಟು ಅಂಕಗಳಲ್ಲಿ ಗೆದ್ದಿವೆ ಎನ್ನುವ ಆಧಾರದ ಮೇಲೆ ಅವುಗಳಿಗೆ'ಅರ್ಜುನ, ಕರ್ಣ, ಅಭಿಮನ್ಯು'ಮೊದಲಾದ ಬಿರುದುಗಳನ್ನು ಸಹ ಕೊಡುತ್ತಿದ್ದರು. ಅಂಕದ ಹುಂಜಗಳಿಗೆ ಜೊತೆ ಹಾಕಿ, ಕಾಲಿಗೆ ಎರಡಂಗುಲದಷ್ಟು ಉದ್ದವಾಗಿ ಕಾಲಂಗುಲದಷ್ಟು ಅಗಲವಾಗಿ, ಕ್ಷೌರದ ಕತ್ತಿಗಿಂತಲೂ ನಿಶಿತವಾದ, ಬೆಳ್ಳಗೆ ಥಳಥಳಿಸುವ ಕತ್ತಿಗಳನ್ನು ಕಟ್ಟಿ ರಣರಂಗಕ್ಕೆ ಬಿಡುತ್ತಿದ್ದರು.[17] ಯಾರ ಹುಂಜ ಅಂಕದಲ್ಲಿ ಸೋಲುವುದೋ, ಓಡುವುದೋ ಅಥವಾ ಸಾಯುವುದೋ ಅದು ಗೆದ್ದ ಹುಂಜದವನಿಗೆ ಸೇರಬೇಕಾದುದು ಅಂಕದ ಕಾನೂನಾಗಿತ್ತು. ಪ್ರೇಕ್ಷಕರು ನೂರಾರು ರೂಪಾಯಿಗಳ ಮೇಲು ಜೂಜು'ಕಟ್ಟಿ ಸಂಭ್ರಮಿಸುತ್ತಿದ್ದರು. ಕೋಳಿಗಳನ್ನು'ಅಂಕಕ್ಕೆ ಬಿಡುವ ಮೊದಲು ಪಂಚಾಂಗ ನೋಡಿ ಘಳಿಗೆ, ತಿಥಿ, ರಾಹುಕಾಲ, ಗುಳಿಕಕಾಲ ಇತ್ಯಾದಿಗಳನ್ನೂ, ಯಾವ ಬಣ್ಣದ ಕೋಳಿ, ಯಾವ ಬಣ್ಣದ ಕೋಳಿಯನ್ನು ಯಾವಾಗ ಸೋಲಿಸುತ್ತದೆ ಮೊದಲಾದ ವಿಚಾರಗಳನ್ನು ನಿರ್ಣಯಿಸಿಕೊಡುವ ಶೂದ್ರ ಜೋಯಿಸರುಗಳೂ ಅಂಕಕ್ಕೆ ಬರುತ್ತಿದ್ದರು.[18] ಇಂತಹ ಕ್ರೌರ್ಯದಿಂದ ಕೂಡಿದ, ಹಿಂಸಾತ್ಮಕವಾದ ಕೋಳಿಯಂಕ ಮಲೆನಾಡಿನ ದೇಸಿಯ ಸಂಸ್ಕೃತಿಯಲ್ಲಿತ್ತು ಎನ್ನುವುದನ್ನು ಕಾಣಬಹುದು.

ಹಾರ್ಡಿಯವರ ಕಾದಂಬರಿಗಳಲ್ಲಿ ರೂಢಿ, ಸಂಪ್ರದಾಯ, ಮೂಢನಂಬಿಕೆಗಳು ದೇಸಿಯ ಬದುಕಿನ ಭಾಗವಾಗಿದ್ದರೂ, ಆಹಾರಕ್ಕಾಗಿ ಪ್ರಾಣಿಗಳನ್ನು ಸಾಕುತ್ತಿದ್ದರೂ, ದೆಯ್ಯ-ದ್ಯಾವರುಗಳಿಗೆ ಬಲಿಕೊಡುವ, ಬರ್ಬರವಾಗಿ ಕೊಲ್ಲುವ ನಿದರ್ಶನ ಕಂಡುಬರುವುದಿಲ್ಲ. ಕೋಳಿ ಸಾಕಾಣಿಕೆಯನ್ನು ಒಂದು ಉದ್ಯಮವಾಗಿ ವೆಸೆಕ್ಸ್‌ನ ಭಾಗದ ಶ್ರೀಮಂತ ಜಮೀನುದಾರರು ತಮ್ಮ ತೋಟಗಳಲ್ಲಿ ನಡೆಸುತ್ತಿದ್ದರು. ಟೆಸ್ ಕಾದಂಬರಿಯಲ್ಲಿ ಡಿ ಅರ್ಬರವಿಲ್ಲೆ ಕುಟುಂಬ ಟ್ಯಾಂಟ್ರಿಡ್ಜ್‌ನಲ್ಲಿ ನಡೆಸುತ್ತಿದ್ದ ಕೋಳಿ ಸಾಕಾಣಿಕೆ ಕೇಂದ್ರಕ್ಕೆ ಟೆಸ್‌ಳನ್ನು ನೇಮಿಸುವುದು, ಕೋಳಿಗಳ ಆರೈಕೆಯ ಬಗ್ಗೆ ಆಕೆಗೆ ನಿರ್ದೇಶನ ನೀಡುವುದನ್ನು ಕಾಣುತ್ತೇವೆ.[19] ಗ್ರಾಮೀಣ ಪ್ರದೇಶದಲ್ಲಿ ಒಬ್ಬ ರೈತನ ಹೆಂಡತಿ ಹೇಗಿರಬೇಕು, ಆಕೆ ಯಾವ ಯಾವ ಗೃಹ ಕೃತ್ಯಗಳ ಬಗ್ಗೆ, ಹೊಲಗದ್ದೆಗಳ ಬಗ್ಗೆ, ಸಾಕುಪ್ರಾಣಿಗಳ ಬಗ್ಗೆ ತಿಳಿದಿರಬೇಕು ಎಂಬುದನ್ನು ಏಂಜೆಲ್ ಕ್ಲೇರ್ ತನ್ನ ತಂದೆ-ತಾಯಿಯರಿಗೆ ವಿವರಿಸುತ್ತಾ

ಹೋಗುತ್ತಾನೆ. "ಮೊದಲನೆಯದಾಗಿ ಆಕೆಗೆ ಹಾಲು ಕರೆಯುವುದು ಗೊತ್ತಿರಬೇಕು, ಮಜ್ಜಿಗೆ ಕಡೆಯುವುದು, ಬೆಣ್ಣೆ ತೆಗೆಯುವುದು, ಗಿಣ್ಣು ತಯಾರಿಸುವುದು, ಕೋಳಿಗಳನ್ನು ಕಾವಿಗೆ ಕೂರಿಸುವುದು, ಮರಿ ಮಾಡಿಸುವುದು, ಸಾಕುವುದು, ಹೊಲಗದ್ದೆಗಳಿಗೆ ಹೋಗಿ ಆಳುಗಳಿಗೆ ನಿರ್ದೇಶನ ನೀಡುವುದು, ಕುರಿ-ಮೇಕೆಗಳ ಸಾಕಾಣಿಕೆ ಮತ್ತು ಅವುಗಳ ಮೌಲ್ಯ ತಿಳಿದಿರಬೇಕು[20] ಈ ವಿವರಣೆಯಲ್ಲಿ ದೇಸಿಯ ಬದುಕಿನ ಸಾರವಿದೆ. ದೇಸಿಯ ಬದುಕಿನಲ್ಲಿ ವ್ಯವಸಾಯ, ಅದಕ್ಕೆ ಸಂಬಂಧಪಟ್ಟಂತೆ ಸಾಕುಪ್ರಾಣಿಗಳು, ಅವುಗಳನ್ನು ನಿರ್ವಹಿಸುವ ರೀತಿ, ಅವುಗಳ ಜೊತೆಗೆ ಸಹಬಾಳ್ವೆ ನಡೆಸುವ ರೀತಿ ಎಷ್ಟೊಂದು ಸ್ವಾಭಾವಿಕವಾಗಿತ್ತು ಎನ್ನುವುದನ್ನು ಇಬ್ಬರೂ ಕಾದಂಬರಿಕಾರರ ಕಾದಂಬರಿಗಳಲ್ಲಿ ಕಾಣುತ್ತೇವೆ.

ಚಿಕ್ಕದಾದ, ಗೂಡಿನಂತಿರುವ ಒಡ್ಡಿಗಳು ಕೋಳಿ, ಹಂದಿಗಳಿಗೆ ಮನೆಯಾದರೆ ದೊಡ್ಡ ಪ್ರಾಣಿಗಳಾದ ಎತ್ತು, ಎಮ್ಮೆ, ದನಕರುಗಳಿಗೆ ಮತ್ತು ಕೋಣಗಳಿಗೆ ಕೊಟ್ಟಿಗೆಗಳನ್ನು ನಿರ್ಮಿಸುತ್ತಿದ್ದರು. ಇಂತಹ ಕೊಟ್ಟಿಗೆಗಳು ಜನರು ವಾಸಿಸುವ ಮನೆಗಳಿಗೆ ಹೊಂದಿಕೊಂಡೇ ಇರುತ್ತಿದ್ದವು. ದನಕರುಗಳನ್ನು, ಲಾಲನೆ-ಪಾಲನೆ ಮಾಡಲು ಗೋಪಾಲಕರಿರುತ್ತಿದ್ದರು. ಸಾಮಾನ್ಯವಾಗಿ ಹಳ್ಳಿಯ ಜಮೀನುದಾರರ ರಾಸುಗಳನ್ನು ನೋಡಿಕೊಳ್ಳಲು ಅವರ ಮನೆಯ ಜೀತದಾಳುಗಳು ಇರುತ್ತಿದ್ದರು. "ದನಕರುಗಳ ಪಾಲನೆ ಪೋಷಣೆಯನ್ನು ನಡೆಸುತ್ತಿದ್ದ ಗೋಪಾಲಕರು ಮಲೆನಾಡಿನಲ್ಲಿರುತ್ತಿದ್ದರು. ಒಕ್ಕಲಿಗ, ಹಳೆಪೈಕದವರಲ್ಲಿ ವಿರಳವಾಗಿಯೂ, ಹಸಲ, ಬೇಲ ಹೊಲೆಯರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿಯೂ ಇರುತ್ತಿದ್ದ, ದನಗಳನ್ನು ಕಾಯುವವರೇ ಈ ಗೋಪಾಲಕರು."[21] "<u>ಮಲೆಗಳಲ್ಲಿ ಮದುಮಗಳು</u> ಕಾದಂಬರಿಯ ಹಳೆಮನೆ ಹೆಗ್ಗಡೆಯವರ ದನಕಾಯುವ ಹೊಲೆಯರ ಬೈರ ಬೇರೆ ಕೆಲಸಕ್ಕೆ ಹೋಗುತ್ತಿರಲಿಲ್ಲ. ಒಂದು ವೇಳೆ ಹೋದರೂ ತಾನೂ ಕೆಲಸ ಮಾಡದೆ ಇತರರನ್ನೂ ಕೆಲಸ ಮಾಡಗೊಡುತ್ತಿರಲಿಲ್ಲ. ಆದ್ದರಿಂದ ಹೆಗ್ಗಡೆಯವರು ಅವನನ್ನು ಖಾಯಂ ಆಗಿ ದನ ಕಾಯುವ ಕೆಲಸಕ್ಕೆ ಹಾಕಿಬಿಟ್ಟಿದ್ದರು.[22] ಬೈರನಂತೆ ಇತರೆ ಹಳ್ಳಿಗಳವರೂ ಬಯಲುಗಳಲ್ಲಿ ದನ ಮೇಯಿಸಲು ಬರುತ್ತಿದ್ದರು. ದನಕರುಗಳ ಪಾಲನೆಯನ್ನು ಹೊಲೆಯರು, ಜೀತದಾಳುಗಳು ಮಾಡುತ್ತಿದ್ದರೆ ಹಾಲು ಕರೆಯಲು ಸಾಮಾನ್ಯವಾಗಿ ಮನೆಯ ಹೆಂಗಸರೆ ತೊಡಗಿಸಿಕೊಳ್ಳುತ್ತಿದ್ದರು. <u>ಕಾನೂರು ಹೆಗ್ಗಡಿತಿಯಲ್ಲಿ</u> ಗೌರಮ್ಮನವರು ದನದ ಕೊಟ್ಟಿಗೆಯಿಂದ ಹಾಲು ತುಂಬಿದ್ದ ಹಿತ್ತಾಳೆಯ ತಂಬಿಗೆಯನ್ನು ಕೈಯಲ್ಲಿ ಹಿಡಿದುಕೊಂಡು ಬರುವುದು, ಹಳೆಮನೆಯ ಮಂಜಮ್ಮ ಮತ್ತು ಕಾನೂರಿನ ಮನೆಯ ಹೆಂಗಸರೇ ಹಾಲು ಕರೆಯುತ್ತಿದ್ದರು ಎನ್ನುವ ವಿವರಣೆಯಿಂದ ಮಲೆನಾಡಿನಲ್ಲಿ ಮಹಿಳೆಯರು ಹೈನುಗಾರಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು ಎಂಬುದು ತಿಳಿಯುತ್ತದೆ.

ದನದ ಕೊಟ್ಟಿಗೆಯ ಚಿತ್ರಣವನ್ನು ಕಾನೂರು ಹೆಗ್ಗಡಿತಿ ಕಾದಂಬರಿಯಲ್ಲಿ ಕಾಣಬಹುದು. ಹೂವಯ್ಯ, ನಾಗಮ್ಮ ಮತ್ತು ಪುಟ್ಟಣ್ಣ ಕೌಲಿ ಎಂಬ ದನ ಕರು ಹಾಕಿರುವುದನ್ನು ನೋಡಲು ಕೊಟ್ಟಿಗೆ ಪ್ರವೇಶಿಸಿದಾಗ: "ಒಡನೆಯೆ ಸೆಗಣೆ, ಗೋಮೂತ್ರ, ಹುಲ್ಲು, ದನಗಳ ಮೈವಾಸನೆ, ಅವುಗಳ ಉಸಿರಿನ ವಾಸನೆ, ಇವುಗಳಿಂದ ತುಂಬಿದ ನಸುಬಿಸುಪಾದ ಸೀನುಗಾಳಿ ಮೂಗಿಗೆ ಬೀಸಿತು, ಕಾಲಿಗೂ ಸೆಗಣಿ ಗಂಜಲಗಳ ಅನುಭವವಾಯಿತು. ಮಲಗಿದ್ದ ಕೆಲವು ದನಗಳು ಎದ್ದು ನಿಂತು ದೊಡ್ಡದಾದ ಕಣ್ಣು ಬಿಟ್ಟು ನೋಡಿದವು. ಅವು ಗಾಬರಿಯಿಂದ ಜೋರಾಗಿ ಎಳೆದುಬಿಡುತ್ತಿದ್ದ ಉಸಿರೂ ಕೇಳಿಸಿತು. ಅವು ಚಲಿಸಿದಾಗ ನೆಲಕ್ಕೆ ಹಾಕಿದ್ದ ಕಲ್ಲುಗಳಿಗೆ ತಗಲಿ ಆಗುತ್ತಿದ್ದ ಗೊರಸಿನ ಸದ್ದೂ, ಕಂಬಗಳಿಗೆ ಕೋಡುಹೊಡೆದ ಸದ್ದೂ ಕೇಳಿಸಿ ಹೂವಯ್ಯನ ಮನಸ್ಸಿನಲ್ಲಿ ರೈತನ ಜಗತ್ತಿನ ಸುಖದ ಸ್ಮೃತಿ ಮೂಡಿತು. ಆ ದನಗಳ ಕಣ್ಣುಗಳು, ಕಿವಿಗಳು, ಕೋಡುಗಳು, ಗೋಡೆಯ ಮೇಲೆ ಚಲಿಸುತ್ತಿದ್ದ ದೊಡ್ಡ ನೆರಳುಗಳೂ ಹೇಗೆ ಕಾಣುತ್ತಿವೆ। ಯಾವುದೋ ಒಂದು ದನದ ಕೊರಳಿನಲ್ಲಿ ದೊಂಟೆಯ ಸದ್ದಾಗುತ್ತಿದೆ। ಮತ್ತೊಂದು ಕರುವಿನ ಕುತ್ತಿಗೆಯಲ್ಲಿ ಕಿರುಗಂಟೆಯ ಟಿಂಟಿಣಿಯಾಗುತ್ತಿದೆ।....[23] ಹೀಗೆ ದನದ ಕೊಟ್ಟಿಗೆ, ಅಲ್ಲಿನ ದನಕರುಗಳು, ಅವುಗಳೊಂದಿಗೆ ಮಲೆನಾಡಿನ ದೇಸಿ ಬದುಕು ಬೆಸೆದುಕೊಂಡಿರುವುದನ್ನು ಕಾಣುತ್ತೇವೆ.

ಆಧುನಿಕ ಸಾರಿಗೆ ಸಂಪರ್ಕ ಸಾಧನಗಳಾದ ರೈಲು, ಮೋಟಾರು ಪಟ್ಟಣಗಳಿಗೆ ಕಾಲಿಟ್ಟಿದ್ದರೂ ಮಲೆನಾಡಿನ ಬದುಕಿಗೆ ಇನ್ನೂ ಪರಿಚಯವಾಗಿರಲಿಲ್ಲ. ಮಲೆನಾಡಿನ ಪ್ರದೇಶದಲ್ಲಿ ರಸ್ತೆ ಎಂಬ ಹೆಸರೇ ಇನ್ನೂ ಚಾಲ್ತಿಗೆ ಬರದಿದ್ದ ಕಾಲದಲ್ಲಿ ಕೊರಕಲು, ಹೊಂಡಗಳಿಂದ ಆವೃತವಾದ ಕಾಲುದಾರಿಗಳೇ ಹೆದ್ದಾರಿಗಳಾಗಿದ್ದವು. ಅಂತಹ ಹಳ್ಳಿಗಾಡಿನ ದಾರಿಗಳಲ್ಲಿ ಶ್ರೀಮಂತರಷ್ಟೇ ಎತ್ತಿನ ಬಂಡಿಗಳ ಮೂಲಕ ಹತ್ತಿರದ ಪಟ್ಟಣಗಳಿಗೆ ಹೋಗಿ ಬರುತ್ತಿದ್ದರು. ಚಕ್ಕಡಿಗಾಡಿಗಳನ್ನು ಎಳೆಯಲು ಎತ್ತುಗಳನ್ನು ಬಳಸುತ್ತಿದ್ದರು. ಕಾನೂರು ಹೆಗ್ಗಡಿತಿ ಕಾದಂಬರಿಯಲ್ಲಿ ಹೂವಯ್ಯ ಮತ್ತು ರಾಮಯ್ಯರು ಮೈಸೂರಿನಿಂದ ತೀರ್ಥಹಳ್ಳಿಗೆ ಮೋಟಾರಿನಿಂದ ಬಂದಿಳಿದು ತುಂಗಾನದಿಯ ಕಲ್ಲುಸಾರವನ್ನು ದಾಟಿ ಕುರುವಳ್ಳಿಯಿಂದ ಕಾನೂರಿಗೆ ಕಮಾನುಗಾಡಿಯಲ್ಲಿ ಪ್ರಯಾಣ ಬೆಳೆಸುವುದನ್ನು ಕಾಣುತ್ತೇವೆ.[24] ಎತ್ತಿನ ಬಂಡಿಗಳು ಅದರಲ್ಲೂ ಕಮಾನುಗಾಡಿಗಳೂ ಮಲೆನಾಡಿನ ದೇಸಿಯ ಬದುಕಿನಲ್ಲಿ ಶ್ರೀಮಂತಿಕೆಯ ಸಂಕೇತಗಳಾಗಿದ್ದವು. ಎತ್ತಿನ ಗಾಡಿ ಅಥವಾ ಚಕ್ಕಡಿಗಾಡಿಗಳನ್ನು ತೀರ್ಥಯಾತ್ರೆಗಳಿಗೆ, ವಿವಾಹ ಸಂದರ್ಭಗಳಲ್ಲಿ ದಿಬ್ಬಣ ತೆಗೆದುಕೊಂಡು ಹೋಗಲು, ಅಗ್ರಹಾರ ದೇವಸ್ಥಾನಗಳಿಗೆ ಭೇಟಿಕೊಡಲು ಬಳಸುತ್ತಿದ್ದರು ಎನ್ನುವುದನ್ನು ಕುವೆಂಪುರವರ ಎರಡೂ ಕಾದಂಬರಿಗಳಲ್ಲಿ ಕಾಣುತ್ತೇವೆ.

ಮಲೆನಾಡಿನ ದೇಸಿ ಬದುಕಿನ ಭಾಗವಾಗಿದ್ದ ಸಾಕುಪ್ರಾಣಿಗಳ ಚಿತ್ರಣವನ್ನು ಹಾರ್ಡಿಯವರ ವೆಸೆಕ್ಸ್ ಪ್ರದೇಶದಲ್ಲೂ ಕಾಣುತ್ತೇವೆ. ಕೋಳಿಸಾಕಾಣಿಕೆ ಜೊತೆಗೆ, ಹೈನುಗಾರಿಕೆ ಗ್ರಾಮೀಣ ಪ್ರದೇಶದಲ್ಲಿ ಒಂದು ಉದ್ಯಮವಾಗಿ ನಡೆಯುತ್ತಿತ್ತು ಎನ್ನುವುದನ್ನು ಟೆಸ್ ಆಫ್ ದಿ ಡಿ ಅರ್ಬರ್‌ಬರ್‌ವಿಲ್ಲೆ ಕಾದಂಬರಿ ಉಲ್ಲೇಖಿಸುತ್ತ. ಎಗ್ಡನ್ ಹೀತ್‌ನ ಕಣಿವೆ ಪ್ರದೇಶ ಹೈನುಗಾರಿಕೆಗೆ ಅತ್ಯುತ್ತಮ ಪ್ರದೇಶವಾಗಿತ್ತು. ಅಲ್ಲಿನ ಫ್ರೂಮ್ ಅಥವಾ ವ್ಯಾರ್ ನದಿಗಳು ಹುಲ್ಲುಗಾವಲಿಗೆ ಪ್ರಸಿದ್ಧಿ ಪಡೆದಿದ್ದು ಹೈನು ಉತ್ಪಾದನೆಗೆ ಉತ್ತೇಜನಕಾರಿಯಾಗಿದ್ದವು. ಟಾಲ್‌ಬೋತಿಯ ಕ್ರಿಕ್, ತನ್ನ ಡೈರಿಯಲ್ಲಿ ಟೆಸ್‌ಳನ್ನು ಹಾಲು ಕರೆಯುವ ಕೆಲಸಕ್ಕೆ ನೇಮಿಸಿಕೊಳ್ಳುತ್ತಾನೆ. ಇದೇ ಡೈರಿಯಲ್ಲಿ ಟೆಸ್‌ಳಂತೆ ಅನೇಕ ಜನರು ಹಾಲು ಕರೆಯುವುದು, ಬೆಣ್ಣೆ ತಯಾರಿಸುವ ಕೆಲಸ ಮಾಡುತ್ತಿರುತ್ತಾರೆ.[25] ಹಾಲು ಕರೆಯುವಾಗ ಹಸುಗಳನ್ನು ಓಲೈಸಲು ಮೆಲುದನಿಯಲ್ಲಿ ಹಾಡುವುದು ಸಾಮಾನ್ಯವಾಗಿತ್ತು. ಏಂಜೆಲ್ ಕ್ಲೇರ್, ಒಬ್ಬ ಧರ್ಮೋಪದೇಶಕನ ಮಗನಾಗಿ ಕೃಷಿ ಮತ್ತು ಹೈನುಗಾರಿಕೆಯನ್ನು ತನ್ನ ವೃತ್ತಿಯನ್ನಾಗಿ ಸ್ವೀಕರಿಸಿ ಮತ್ತು ಗ್ರಾಮೀಣ ಬದುಕಿಗೆ ಮಾರುಹೋಗಿ ಟಾಲ್‌ಬೋತಿಗೆ ಉದ್ಯೋಗಾರ್ಥಿಯಾಗಿ ಬರುತ್ತಾನೆ. ಏಂಜೆಲ್ ಕ್ಲೇರ್‌ನ ನಿರ್ಧಾರ ದೇಸಿ ಕಸುಬುಗಳ ಮೇಲೆ ಅವನಿಗಿದ್ದ ಒಲವನ್ನು ಸೂಚಿಸುತ್ತದೆ ಎನ್ನಬಹುದು. ಮಲೆನಾಡಿನ ಜನರಂತೆ ದನಕರುಗಳನ್ನು ಮನೆಗೆ ಬೇಕಾದ ಹಾಲು, ಮೊಸರು, ಬೆಣ್ಣೆ ಮುಂತಾದ ಅವಶ್ಯಕತೆಗಳ ಪೂರೈಕೆಗಷ್ಟೇ ಅಲ್ಲದೆ ನಗರ ಪ್ರದೇಶಗಳಿಗೆ ಹೈನು ಉತ್ಪನ್ನಗಳನ್ನು ಮಾರಾಟ ಮಾಡಲು ವೆಸೆಕ್ಸ್‌ನ ಜನರು ಸಾಕುತ್ತಿದ್ದರು ಎನ್ನುವುದನ್ನು ಕಾಣುತ್ತೇವೆ. ಡೈರಿ ಮೂಲಕ ಕ್ರಿಕ್ ತನ್ನ ಡೈರಿಯಲ್ಲಿ ಉತ್ಪಾದನೆಗೊಂಡ ಹಾಲು ಮತ್ತು ಹಾಲಿನ ಪದಾರ್ಥಗಳನ್ನು ಲಂಡನ್ನಿಗೆ ರೈಲುಗಾಡಿಗಳ ಮೂಲಕ ಕಳುಹಿಸುತ್ತಿದ್ದನು.[26] ಇದರಿಂದ ಹೈನೋದ್ಯಮ ಇಂಗ್ಲೆಂಡಿನ ಗ್ರಾಮೀಣ ಪ್ರದೇಶಗಳಲ್ಲಿ ವಿಸ್ತಾರಗೊಂಡಿತ್ತು ಎನ್ನುವುದು ತಿಳಿಯುತ್ತದೆ. 'ದಿ ರಿಟರ್ನ್ ಆಫ್ ದಿ ನೇಟಿವ್' ಕಾದಂಬರಿಯ ಡಿಗರಿ ವೆನ್ ತನ್ನ ಸಾಂಪ್ರದಾಯಿಕ ವೃತ್ತಿಯಾದ ಕಾವಿ ಮಾರುವುದನ್ನು ಬಿಟ್ಟು ಐವತ್ತು ಹಸುಗಳ ಡೈರಿಯನ್ನು ಪ್ರಾರಂಭಿಸುತ್ತಾನೆ.[27] ಅವನ ಪ್ರಕಾರ ಡೈರಿಯಿಂದ ಹೆಚ್ಚಿನ ಲಾಭದ ಜೊತೆಗೆ ಅವನ ಸಾಮಾಜಿಕ ಪ್ರತಿಷ್ಠೆಯೂ ಹೆಚ್ಚಾಗುತ್ತದೆ ಎನ್ನುವ ನಂಬಿಕೆ ಕೂಡ ವೃತ್ತಿ ಬದಲಾವಣೆಗೆ ಕಾರಣವಾಗುತ್ತದೆ.

ಮಲೆನಾಡಿನ ಪ್ರದೇಶದಲ್ಲಿ ಶ್ರೀಮಂತ ಜಮೀನುದಾರರ ಪ್ರತಿಷ್ಠೆಯ ಸಂಕೇತವಾಗಿದ್ದ ಎತ್ತಿನಗಾಡಿಗಳು, ಕಮಾನುಗಾಡಿಗಳು ವೆಸೆಕ್ಸ್‌ನ ಗ್ರಾಮೀಣ ಪ್ರದೇಶದಲ್ಲಿ ಕಂಡುಬರುವುದಿಲ್ಲ, ಬದಲಾಗಿ ಕುದುರೆಗಾಡಿಗಳು ಅಥವಾ ಟಾಂಗಾಗಳು ಸಂಚಾರ ಸಾಧನಗಳಾಗಿದ್ದವು. ಟೆಸ್ ಕಾದಂಬರಿಯಲ್ಲಿ ಟೆಸ್ ಜೇನು ಸಂಗ್ರಹಿಸಿ ಹತ್ತಿರದ ಕ್ಯಾಸ್ಟರ್ ಬ್ರಿಡ್ಜ್‌ನಲ್ಲಿ ಮಾರಾಟ ಮಾಡಲು ಕುದುರೆಗಾಡಿಯನ್ನು ಬಳಸುತ್ತಿದ್ದು, ನಂತರ ಅಪಘಾತದಲ್ಲಿ ಕುದುರೆ 'ಪ್ರಿನ್ಸ್' ಸಾಯುವುದನ್ನು

ಕಾಣುತ್ತೇವೆ.[28] ಟೆಸ್‌ಳನ್ನು ಟ್ರ್ಯಾಂಟ್ರಿಡ್ಜ್‌ಗೆ ಕೆಲಸಕ್ಕಾಗಿ ಕರೆದುಕೊಂಡು ಹೋಗಲು ಅಲೆಕ್ ಅಲಂಕಾರಗೊಂಡ ಕುದುರೆಗಾಡಿಯಲ್ಲಿ ಬರುವುದನ್ನು ಕಾಣಬಹುದು. ಹತ್ತೊಂಭತ್ತನೆಯ ಶತಮಾನದ ಪ್ರಾರಂಭದಲ್ಲಿ ಗ್ರಾಮೀಣ ಭಾಗದ ಇಂಗ್ಲೆಂಡಿನಲ್ಲಿ ಕುದುರೆಗಾಡಿಗಳ ಸಂಚಾರ ವ್ಯವಸ್ಥೆ ಇದ್ದುದನ್ನು ಕಾಣುತ್ತೇವೆ. ಕುದುರೆಗಾಡಿಗಳನ್ನು ವಿವಾಹ ಸಂದರ್ಭಗಳಲ್ಲಿ ವಿಶೇಷವಾಗಿ ಅಲಂಕರಿಸಿ ಬಳಸುತ್ತಿದ್ದುದರ ವಿವರಣೆಯನ್ನು ಹಾರ್ಡಿಯವರ ಎರಡೂ ಕಾದಂಬರಿಗಳಲ್ಲಿವೆ. ಕ್ಲಿಮ್ ಮತ್ತು ಯುಸ್ಟೇಷ್ಯ, ಏಂಜೆಲ್ ಕ್ಲೇರ್ ಮತ್ತು ಟೆಸ್‌ಳ ವಿವಾಹ ಸಂದರ್ಭಗಳಲ್ಲಿ ಅಲಂಕೃತಗೊಂಡ ಕುದುರೆಗಾಡಿಗಳನ್ನು ಬಳಸಿರುವುದು ದೇಸಿಯ ಸಾಂಪ್ರದಾಯಿಕ ಸಂಚಾರ ಸಾಧನವಾಗಿತ್ತು ಎನ್ನುವುದನ್ನು ಸೂಚಿಸುತ್ತದೆ. ಹೀಗೆ ಇಂಗ್ಲೆಂಡಿನ ಗ್ರಾಮೀಣ ಭಾಗದಲ್ಲಿ ಕುದುರೆಗಳನ್ನು ಊರಿನಿಂದ ಊರಿಗೆ ಸರಕು–ಸಾಗಣೆ ಮಾಡಲು, ಪ್ರವಾಸಕ್ಕಾಗಿ ಮತ್ತು ವಿಶೇಷ ಸಂದರ್ಭಗಳಲ್ಲಿ ಬಳಸುತ್ತಿದ್ದರು. ಆದರೆ ಕುವೆಂಪುರವರು ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಹೇಳುವಂತೆ, ಮಲೆನಾಡಿಗೆ ಸ್ವಲ್ಪಮಟ್ಟಿಗೆ ಕುದುರೆ ವಿದೇಶಿಯವಾಗಿತ್ತು. ದನ, ಎತ್ತು, ಹುಲಿ, ಹಂದಿ, ಮಿಗ, ಕಡ, ಕುರ್ಕ, ಬರ್ಕ, ಮೊಲ, ಮುಂಗುಸಿ, ನವಿಲು, ಹೊರಸಲು, ಕಾಜಾಣ, ಪಿಕಳಾರ, ಕಾಡುಕೋಳಿ, ಕಣೆಹಂದಿ ಮೊದಲಾದ ಜಂತುಗಳು ಸ್ಥಳೀಯವಾಗಿದ್ದವು.[29] ಇದರಿಂದ ತಿಳಿಯುವುದೇನೆಂದರೆ ಆಯಾ ಸಾಮಾಜಿಕ, ಭೌಗೋಳಿಕ, ಸಾಂಸ್ಕೃತಿಕ, ಆರ್ಥಿಕ ಹಿನ್ನಲೆನುಗುಣವಾಗಿ ಪ್ರಾಣಿಗಳನ್ನು ಸಾಕುತ್ತಿದ್ದರು ಎನ್ನುವುದು ಸ್ಪಷ್ಟವಾಗುತ್ತದೆ.

ದೇಸಿ ಬದುಕಿನಲ್ಲಿ ಸಂಬಂಧಗಳು ಕೇವಲ ಮನುಷ್ಯರಿಗೆ ಮಾತ್ರ ಸೀಮಿತವಾಗಿರದೆ, ಪ್ರಾಣಿಗಳಿಗೂ ವಿಸ್ತರಿಸಿತ್ತು. ತಮ್ಮ ಮನೆಯ ಸಾಕುಪ್ರಾಣಿಗಳಾದ ಕುರಿ, ಮೇಕೆ, ನಾಯಿ, ಬೆಕ್ಕು, ಹಸು, ಎಮ್ಮೆ ಮುಂತಾದ ಪ್ರಾಣಿಗಳೊಡನೆ ಅಕ್ಕರೆಯ ಸಂಬಂಧಗಳನ್ನು ಹೊಂದಿದ್ದರು. ತಾವು ಸಾಕಿದ ಪ್ರಾಣಿಗಳನ್ನು ತಮ್ಮ ಕುಟುಂಬದ ಆತ್ಮೀಯ ಸದಸ್ಯರಂತೆ ಕಾಣುವುದರ ಜೊತೆಗೆ ಅವುಗಳೊಂದಿಗೆ ಭಾವನಾತ್ಮಕ ಸಂಬಂಧ ಹೊಂದಿದ್ದರು ಎನ್ನುವುದಕ್ಕೆ ಕುವೆಂಪುರವರ ಎರಡೂ ಕಾದಂಬರಿಗಳಲ್ಲಿ ಸಾಕಷ್ಟು ವಿವರಣೆಗಳಿವೆ. ಕಾನೂರು ಹೆಗ್ಗಡತಿ ಕಾದಂಬರಿಯ ಪ್ರಾರಂಭದಲ್ಲಿ ಹೂವಯ್ಯ ಮತ್ತು ರಾಮಯ್ಯನನ್ನು ಕರೆತರಲು ಹೋದ ಕಮಾನುಗಾಡಿಯ ಎತ್ತುಗಳಿಗೆ 'ನಂದಿ' 'ಲಚ್ಚ' ಎಂದೂ ಕರೆಯುತ್ತಿದ್ದರು. ಬಲಿಯಾಗಬೇಕಿದ್ದ ಮೇಕೆ ತಪ್ಪಿಸಿಕೊಂಡು ಹೂವಯ್ಯನ ಮನೆಸೇರಿದಾಗ ಅದಕ್ಕೆ 'ಬಲೀಂದ್ರ"ಎಂದು ನಾಮಕರಣ ಮಾಡಲಾಗಿತ್ತು. ಹಾಗೆಯೇ ಹೂವಯ್ಯನ ತಾಯಿ ನಾಗಮ್ಮ ಮುದ್ದಿನಿಂದ ಸಾಕಿದ್ದ ಆಕಳಿಗೆ 'ಕೌಲಿ"ಎಂದು ಕರೆಯುತ್ತಿದ್ದರು. ಮುತ್ತಳ್ಳಿ ಶ್ಯಾಮಯ್ಯಗೌಡರ ನಾಯಿಗೆ 'ರೂಬಿ' ಎಂದೂ, ಕಾನೂರಿನ ನಾಯಿಗಳನ್ನು ಟೈಗರು, ಡೈಮಂಡು, ರೋಜಿ, ಟಾಪ್ಸಿ, ಕೊತ್ವಾಲ ಮುಂತಾದ ಹೆಸರುಗಳಿಂದ ಕರೆಯುವಾಗ ಆ

ಹೆಸರುಗಳು ಯಾರೋ ಮನುಷ್ಯರಿರಬೇಕು ಎಂದೆನಿಸುತ್ತದೆ.[30] ಆದರೆ ಅವೆಲ್ಲ ಸಾಕುಪ್ರಾಣಿಗಳು. ಅವುಗಳನ್ನು ಕೇವಲ ಅವುಗಳಿಂದ ಸಿಗುವ ಪ್ರಯೋಜನಕ್ಕಾಗಿಯೇ ಸಾಕುತ್ತಿರಲಿಲ್ಲ ಎನ್ನಬಹುದು. ಸಿಂಬಾವಿ ಕರಿಸಿದ್ದನ ಗಬ್ಬದ ಆಡನ್ನು ಇಜಾರದ ಸಾಬಿ ಕೊಲೆ ಮಾಡಿದ ವಿಚಾರ ಅವನ ಮನೆಯವರಿಗೆಲ್ಲ ಸಿಡಿಲು ಬಡಿದಂತಾಗುತ್ತದೆ: "ಬಡ ಹೊಲೆಯರ ಸಂಸಾರಕ್ಕೆ ತಮ್ಮ ಒಂದು ಗಬ್ಬದ ಆಡು ಕೊಲೆಯಾದ ವಿಚಾರ ಹೇಗೆ ತಾನೆ ಲಘುವಾದೀತು? ಅಲ್ಲದೆ ಹುಟ್ಟಿದಂದಿನಿಂದ ಅವರೊಡನೆ ಬೆಳೆದಿದ್ದ ಅದರೊಡನೆಯ ಅಕ್ಕರೆಯ ಸಂಬಂಧಗಳು ಬೇರೆ ಬೆಳೆದಿರುತ್ತವೆ. ಮನುಷ್ಯರಾಗಿದ್ದರೂ ಪಶು ಜೀವನದ ಮಟ್ಟಕ್ಕೆ ಅತಿ ನಿಕಟವಾಗಿದ್ದ ಅವರಿಗೆ ತಮ್ಮ ಒಂದು ಪ್ರೀತಿಯ ಪ್ರಾಣಿ ಕಳುವಾಗಿ ಕೊಲೆಯಾದದ್ದು ತಮ್ಮ ಕುಟುಂಬದ ಒಂದು ವ್ಯಕ್ತಿಯ ಅಪಮೃತ್ಯುವಿಗೀಡಾದಂತಾಗಿತ್ತು"[31] ಆ ಸಾಕುಪ್ರಾಣಿಗಳ ಜೊತೆ ಎಂತಹ ಅವಿನಾಭಾವ ಸಂಬಂಧವನ್ನು ಸ್ಥಳೀಯರು ಹೊಂದಿದ್ದರು ಎನ್ನುವುದನ್ನು ಮೇಲಿನ ಮಾತುಗಳು ತಿಳಿಸುತ್ತವೆ.

ಇನ್ನು ಮಾನವ ಮತ್ತು ನಾಯಿಗಳ ಸಂಬಂಧವಂತೂ ಹೇಳತೀರದು. ಮಲೆಗಳಲ್ಲಿ ಮದುಮಗಳು ಕಾದಂಬರಿಯ ನಾಯಿ ಗುತ್ತಿ ಇದಕ್ಕೆ ಉದಾಹರಣೆ. ಈ ಕಾದಂಬರಿ ಪ್ರಾರಂಭವಾಗುವುದೇ ಗುತ್ತಿ ಮತ್ತು ಅವನು ಸಾಕಿದ್ದ ನಾಯಿ ಹುಲಿಯನ ಪ್ರಯಾಣದಿಂದ. "ಮೇಗರವಳ್ಳಿಯ ಬೀದಿಯಲ್ಲಿ ಇನ್ನೂ ಹೆಸರಿಡದೆ ಮರಿಯಾಗಿ, ತಬ್ಬಲಿಯಾಗಿ ತೂರಾಡುತ್ತಿದ್ದುದನ್ನು ಗುತ್ತಿ ಎತ್ತಿ ತಂದು ಸಾಕಿ, ಅದರ ಗುಣಕ್ಕೆ ತಕ್ಕಂತೆ ಹುಲಿಯ ಎಂದು ನಾಮಕರಣ ಮಾಡಿದ್ದನು.[32] ಗುತ್ತಿ ಎಲ್ಲೇ ಹೋದರೂ ಅವನ ನೆರಳಾಗಿ ಹುಲಿಯ ಹೋಗುತ್ತಿತ್ತು. ಹುಲಿಯನ ಶಕ್ತಿ, ಯುಕ್ತಿ, ಧೈರ್ಯ, ವೇಗ, ಬುದ್ಧಿವಂತಿಕೆ ಇವುಗಳ ವಿಚಾರವಾಗಿ ಕಥೆ ಕಥೆಗಳೆ ಹಳ್ಳಿಯಿಂದ ಹಳ್ಳಿಗೆ ಹಬ್ಬಿಬಿಟ್ಟಿತ್ತು. ಒಮ್ಮೆ ಬೇಟೆಯಲ್ಲಿ ಗಾಯಗೊಂಡ ಹುಲಿಯನನ್ನು ಶುಶ್ರೂಷೆ ಮಾಡಿದ ನಂತರ ಅದರ ಮತ್ತು ಮುಕುಂದಯ್ಯನ ಪರಸ್ಪರ ಪರಿಚಯವಾಗುತ್ತದೆ. ಅದರ ಮೇಲೆ ಭಾರಿ ಮಮತೆ ಹುಟ್ಟಿ ಅದನ್ನು ತನಗೇ ಬಿಟ್ಟುಕೊಡಬೇಕೆಂದು ಗುತ್ತಿಯನ್ನು ಕೇಳಿಕೊಳ್ಳುತ್ತಾನೆ. ಮೇಲುಜಾತಿಯವರೂ ಒಡೆಯರೂ ದೊಡ್ಡ ಮನುಷ್ಯರೂ ಆದ ಮುಕುಂದಯ್ಯನ ಬಲವಂತಕ್ಕೆ ಮನಸ್ಸಿಲ್ಲದೆ ಒಪ್ಪಿ ಹುಲಿಯನನ್ನು ಕೊಡುವನು. ಪ್ರೀತಿಯಿಂದ ಮುಕುಂದಯ್ಯ ಒಂದು ಹೊಸ ಹೆಗ್ಗಂಬಳಿ, ಒಂದು ಕಸೆ ಅಂಗಿ, ಎಲೆ ಅಡಿಕೆ ಹೊಗೆಸೊಪ್ಪು, ಒಂದು ರೂಪಾಯಿ ಕೊಡುವನು. ತಾನು ಸಾಕಿದ ನಾಯಿ ಹುಲಿಯನಿಂದ ಬೇರ್ಪಟ್ಟ ಗುತ್ತಿ ಸ್ಥಿತಿ ಚಿಂತಾಜನಕವಾಗುತ್ತದೆ. ಒಂದು ಮೈಲಿ ಹೋಗುವುದರೊಳಗೆ ಗುತ್ತಿಗೆ ಮುಂದಕ್ಕೆ ಅಡಿಯಿಡಲಾಗಲಿಲ್ಲ. ಏನೋ ಸುಸ್ತು! ಏನೋ ಸಂಕಟ! ಯಾರನ್ನೋ ಅತ್ಯಂತ ಪ್ರಿಯತಮರನ್ನು ಅಗಲಿದಂತೆ ಎದೆ ಬೇಗೆ! ಹಾದಿಯ ಪಕ್ಕದಲ್ಲಿ ಉಸ್ಸೆಂದು ಕುಳಿತು, ಕಾಡಿನ ನಡುವೆ ಯಾರೂ ನೋಡುವುದಿಲ್ಲವೆಂದು ಧೈರ್ಯ ಮಾಡಿಕೊಂಡು

ಬಿಕ್ಕಿ ಬಿಕ್ಕಿ ಅತ್ತುಬಿಟ್ಟನು[33]. ಇದರಿಂದ ಗುತ್ತಿ ಮತ್ತು ಅವನ ನಾಯಿ ಹುಲಿಯನ ನಡುವೆ ಎಂತಹ ಅದ್ಭುತ ಭಾವನಾತ್ಮಕ ಸಂಬಂಧವಿತ್ತೆಂದು ತಿಳಿಯುತ್ತದೆ. ನಂತರ ಗುತ್ತಿ ಮರಳಿ ಬಂದು ಮುಕುಂದಯ್ಯ ಕೊಟ್ಟಿದ್ದ ಸಾಮಾನುಗಳನ್ನೆಲ್ಲ ಹಿಂದಿರುಗಿಸುತ್ತಾನೆ." ನನಗೆ ನಾಯಿಯನ್ನು ಕೊಡದಿದ್ದರೂ ಚಿಂತೆಯಿಲ್ಲ, ಅದನ್ನು ಮಾರಿಬಿಟ್ಟ ಎಂದು ತನ್ನ ಮನಸ್ಸಿಗೆ ಇಸ್ಸಿ ಆಗಬಾರದು[34] ಎನ್ನುತ್ತಾನೆ. ತನ್ನ ನಾಯಿಯ ಮೇಲಿನ ಪ್ರೀತಿ ಎಲ್ಲವನ್ನೂ ಮೀರಿಸಿತ್ತು ಎಂಬುದನ್ನು ಗುತ್ತಿ ಪ್ರತಿಪಾದಿಸುತ್ತಾನೆ.

ಗುತ್ತಿ ತನ್ನ ಹೆಂಡತಿ ತಿಮ್ಮಿಯ ವಿಚಾರದಲ್ಲಿ ತನ್ನ ಮಾವನ ಕಡೆಯವರಿಂದ ಒದಗಬಹುದಾದ ಕಿರುಕುಳವನ್ನು ಮತ್ತು ಪೋಲೀಸರ ಭಯದಿಂದ ತಪ್ಪಿಸಿಕೊಳ್ಳಲು ದೇಶಾಂತರ ಹೋಗಲು ತೀರ್ಮಾನಿಸಿ ತೀರ್ಥಹಳ್ಳಿಗೆ ಬಂದು ತುಂಗಾನದಿಯನ್ನು ದಾಟಲು ದೋಣಿಗಾಗಿ ಕಾಯುತ್ತಿರುತ್ತಾನೆ. ಹುಲಿಯನನ್ನು ತಪ್ಪಿಸಿ ಹೋಗಲು ಗುತ್ತಿ ಎಷ್ಟೇ ಪ್ರಯತ್ನಿಸಿದರೂ ಸಾಧ್ಯವಾಗುವುದಿಲ್ಲ. ಅಂಬಿಗ ನಾಯಿಯನ್ನು ಹತ್ತಿಸಿಕೊಳ್ಳಲು ಒಪ್ಪುವುದಿಲ್ಲ. ಗುತ್ತಿ ಅದನ್ನು ದಡದಲ್ಲಿಯೇ ಬಿಟ್ಟು ದೋಣಿಯಲ್ಲಿ ತಿಮ್ಮಿಯೊಡನೆ ಹೊರಡುತ್ತಾನೆ. ಬೇರೆ ದಾರಿಕಾಣದ ತನ್ನ ಒಡೆಯನನ್ನು ಹಿಂಬಾಲಿಸಲು ಹುಲಿಯ ತನ್ನ ಪ್ರಾಣವನ್ನೇ ಪಣಕ್ಕಿಟ್ಟು ನೆರೆಯಲ್ಲಿ ಧುಮುಕುತ್ತದೆ, ಪ್ರವಾಹದ ವಿರುದ್ಧ ಈಜುತ್ತದೆ, ಕೊನೆಗೆ ನೀರಿನಲ್ಲಿ ಕೊಚ್ಚಿಹೋಗುತ್ತದೆ.[35] ಗುತ್ತಿ ಕಣ್ಣೀರಿಡುತ್ತಾನೆ. ಗುತ್ತಿಯ ನಾಯಿ ಕೊನೆಗೆ ತನ್ನ ಪ್ರಾಣವನ್ನೇ ಘೋರವಾದ ರೀತಿಯಲ್ಲಿ ತನ್ನ ಒಡೆಯನಿಗೆ ತ್ಯಾಗ ಮಾಡಿ ಸ್ವಾಮಿಭಕ್ತಿಯನ್ನು ಮೆರೆಯುವ ದೃಶ್ಯ ನಿಜವಾಗಿಯೂ ಮನಕಲಕುವಂತಿದೆ.

ಗುತ್ತಿಯ ನಾಯಿ ಹುಲಿಯನ ಸ್ವಾಮಿಭಕ್ತಿ ಮತ್ತು ದುರಂತ ಸಾವನ್ನು ನೆನಪಿಸುವ ಮತ್ತೊಂದು ದೃಶ್ಯವನ್ನು ಕಾನೂರು ಹೆಗ್ಗಡಿತಿ ಕಾದಂಬರಿಯಲ್ಲಿ ಕಾಣುತ್ತೇವೆ. ಕಾನೂರಿನ ಪುಟ್ಟಣ್ಣ ಒಬ್ಬ ನುರಿತ ಬೇಟೆಗಾರನಾಗಿ ಅಷ್ಟೇ ಚೆನ್ನಾಗಿ ಶಿಕಾರಿ ಮಾಡುವ ನಾಯಿ ಟೈಗರ್‌ನನ್ನು ಸಾಕಿದ್ದನು. ತನ್ನ ಟೈಗರ್ ಎಂದರೆ ಪುಟ್ಟಣ್ಣನಿಗೆ ಎಲ್ಲಿಲ್ಲದ ಪ್ರೀತಿಯಿತ್ತು. ಅದರಲ್ಲಿ ತನ್ನ ಪ್ರಾಣವನ್ನೇ ಇಟ್ಟುಕೊಂಡಿದ್ದನು. ಪುಟ್ಟಣ್ಣ ಬೇಟೆಯಾಡಿದ ಹಂದಿಯನ್ನು ಸಿಂಗಪ್ಪಗೌಡರ ಆಳು ಜಾಕಿ ತನ್ನದೆಂದು ಜಗಳ ತೆಗೆಯುತ್ತಾನೆ. ದೊಣ್ಣೆಯನ್ನು ಬಲವಾಗಿ ಬೀಸುತ್ತಾ ಚಂದ್ರಯ್ಯಗೌಡರ ಆಳುಗಳನ್ನು ಹೊಡೆಯಲು ಹೋಗುತ್ತಾನೆ. ಅಲ್ಲಿಯೇ ರೋಷ ದೃಷ್ಟಿಯಿಂದ ನೋಡುತ್ತಿದ್ದ ಟೈಗರ್ ಜಾಕಿಯ ಮೇಲೆ ಬಾಣದಂತೆ ನುಗ್ಗಿದಾಗ, ಜಾಕಿ ಬೀಸಿದ ದೊಣ್ಣೆ ಅದರ ತಲೆಗೆ ಬಿದ್ದು ಸಾಯುತ್ತದೆ.[36] ತನ್ನವರಿಗಾಗಿ ಜೀವತೆತ್ತ ಟೈಗರ್‌ನನ್ನು ಕಂಡು ಪುಟ್ಟಣ್ಣನಿಗೆ ದುಃಖ, ರೋಷ, ಕೋಪ ಒಮ್ಮೆಲೇ ಉಕ್ಕಿ ಬರುತ್ತದೆ. ಟೈಗರ್ ಮೃತಪಟ್ಟಿದ್ದು ನಿಶ್ಚಯವಾದೊಡನೆಯೆ ಪುಟ್ಟಣ್ಣ

ರೋಷ ಭೀಷಣನಾಗಿ, ಮುಯ್ಯಿ ತೀರಿಸಿಕೊಳ್ಳುವ ಛಲದಿಂದ ಮೇಲೆದ್ದನು. ಪನಿ ತುಂಬಿದ್ದ ಅವನ ನೇತ್ರಗಳು ವಿಸ್ಫರಿತವಾಗಿ ಆರಕ್ತವಾದವು. ಕ್ರೋಧಾವೇಗದಿಂದ ತುಟಿಗಳು ಕಂಪಿಸಿದವು. ಮುಖ ಕರಾಳ ಕರ್ಕಶವಾಯಿತು[37] ತನ್ನ ಪ್ರಾಣಕ್ಕಿಂತಲೂ ಮಿಗಿಲಾದ ಟೈಗರ್‌ನ ಸಾವಿನಿಂದ ಪುಟ್ಟಣ್ಣ ಎಂತಹ ಅನಾಹುತವನ್ನುಂಟು ಮಾಡುತ್ತಾನೋ ಎಂಬ ಭಯ ಅಲ್ಲಿದ್ದವರನ್ನು ಕಾಡಲಾರಂಭಿಸಿತು. ಆವೇಶದಲ್ಲಿ ಜಾಕಿಯನ್ನು ಬಂದೂಕಿನಿಂದ ಕೊಲ್ಲಲು ವಿಫಲ ಯತ್ನ ಮಾಡಿ ಕೊನೆಗೆ ಬಿಕ್ಕಿ ಬಿಕ್ಕಿ ಅಳತೊಡಗಿದನು. ಜಾಕಿಯ ನೆತ್ತರಿಗೆ ಬದಲಾಗಿ ತನ್ನ ಕಣ್ಣೀರನ್ನೇ ನಾಯಿಯ ಮೇಲೆ ಸುರಿಸಿದನು. ನಂತರ ಪುಟ್ಟಣ್ಣ ಕಾನು ಬೈಲಿನಲ್ಲಿ ಒಂದು ಉನ್ನತ ಪ್ರಶಸ್ತವಾದ ಸ್ಥಳದಲ್ಲಿ ಕುಣಿ ತೋಡಿ, ಪಂಚೆಯಿಂದ ಟೈಗರಿನ ಹೆಣವನ್ನು ಪ್ರೀತಿಪೂರ್ವಕವಾಗಿ ಕಂಬನಿಗರೆಯುತ್ತ ಮಣ್ಣು ಮಾಡುತ್ತಾನೆ. ಶವ ಸಂಸ್ಕಾರದ ನಂತರ ಪುಟ್ಟಣ್ಣ ತನ್ನ ಪ್ರೀತಿಯ ನಾಯಿಯಾದ್ದರಿಂದ ಎಂದಿಗೂ ನರಕಕ್ಕೆ ಹೋಗಲಾರದು. ಅಲ್ಲದೆ ಅದು ಸ್ವಾಮಿ ಭಕ್ತಿಗಾಗಿ ಪ್ರಾಣ ಕೊಟ್ಟಿದೆ. ಆದ್ದರಿಂದ ಅದರ ಆತ್ಮವು ಮುಗಿಲಿನ ರೂಪದಿಂದ ಸ್ವರ್ಗಕ್ಕೆ ಹೋಗುತ್ತದೆ ಎಂದು ಭಾವಿಸುತ್ತಾನೆ.[38]

ಹೀಗೆ ಕುವೆಂಪುರವರು ತಮ್ಮೆರಡೂ ಕಾದಂರಿಗಳಲ್ಲಿ ಸಾಕುಪ್ರಾಣಿಗಳು ಅದರಲ್ಲಿಯೂ ನಾಯಿ ಮತ್ತು ಮಾನವನ ಸಂಬಂಧ ಎಷ್ಟೊಂದು ಅನ್ಯೋನ್ಯವಾಗಿತ್ತು ಎಂಬುದನ್ನು ವಿವರಿಸುತ್ತಾರೆ. ಹಾಗೆಯೇ ಮಲೆನಾಡಿನ ದೇಸಿ ಸಂಸ್ಕೃತಿಯಲ್ಲಿ ಮಾನವರೂ ತಮ್ಮ ಸಾಕುಪ್ರಾಣಿಗಳನ್ನು ಗೆಳೆಯರಂತೆ, ತಮ್ಮ ಮನೆಯ ಸದಸ್ಯರಂತೆ, ಬಂಧುಗಳಂತೆ ಕಾಣುತ್ತಿದ್ದರು. ಮತ್ತು ಅವುಗಳ ಜೊತೆಗೆ ಭಾವನಾತ್ಮಕವಾದ ಸಂಬಂಧವನ್ನಿಟ್ಟುಕೊಂಡಿದ್ದರು ಎನ್ನುವುದನ್ನು ವರ್ಣಿಸಿದ್ದಾರೆ.

ಹಾರ್ಡಿಯವರ ಕಾದಂಬರಿಗಳಲ್ಲಿ ಇಂತಹ ಮಾನವ–ಪ್ರಾಣಿಗಳ ನಡುವಿನ ಭಾವನಾತ್ಮಕ ಮಧುರ ಸಂಬಂಧವನ್ನು ಕಾಣುವುದು ವಿರಳವೆನ್ನಬಹುದು. ಟೆಸ್ ಕಾದಂಬರಿಯಲ್ಲಿ ಮಾತ್ರ ಪ್ರಿನ್ಸ್ ಎನ್ನುವ ಕುದುರೆ ಅಪಘಾತದಲ್ಲಿ ಸಾಯುವುದನ್ನು ಕಾಣುತ್ತೇವೆ. ಇದರಿಂದ ವೆಸೆಕ್ಸ್‌ನ ಜನರೂ ಸಹ ತಮ್ಮ ಸಾಕುಪ್ರಾಣಿಗಳಿಗೆ ಮನುಷ್ಯರಂತೆ ಹೆಸರನ್ನಿಡುತ್ತಿದ್ದರು ಎನ್ನುವುದನ್ನು ತಿಳಿಯಬಹುದು. ಆಧುನಿಕ ಶಿಕ್ಷಣ, ಕೈಗಾರಿಕೀಕರಣ ಮತ್ತು ವೈಚಾರಿಕತೆಯ ಸ್ಪರ್ಶ ಗ್ರಾಮೀಣ ಪರಿಸರಕ್ಕೆ ಕಾಲಿಡುತ್ತಿದ್ದುದರಿಂದಲೋ ಏನೋ ಜನರು ತಮ್ಮ ಪ್ರಾಣಿಗಳ ಬಗ್ಗೆ ಅಷ್ಟೊಂದು ಆತ್ಮೀಯತೆಯನ್ನು ಇಟ್ಟುಕೊಂಡಿರಲಿಲ್ಲ ಎನ್ನಬಹುದು ಮತ್ತು ಅವುಗಳಿಂದ ಸಿಗುವ ಪ್ರಯೋಜನಗಳಿಗಾಗಿ ಸಾಕುತ್ತಿದ್ದರೇನೋ ಎನ್ನಿಸುತ್ತದೆ ಈ ವಿಚಾರದಲ್ಲಿ ವೆಸೆಕ್ಸ್‌ನ ದೇಸಿ ಬದುಕು ಮಲೆನಾಡಿನ ದೇಸಿ ಬದುಕಿಗಿಂತ ಭಿನ್ನವಾಗಿದೆ.

2.3 ದೇಸಿ ಬದುಕು ಮತ್ತು ಬೇಟೆ:

ಬೇಟೆ ನಾಗರೀಕತೆಯ ಪೂರ್ವದಿಂದಲೂ ಮಾನವನ ಬದುಕಿನ ಭಾಗವಾಗಿತ್ತು. ಕೃಷಿಯನ್ನು ಒಂದು ವೃತ್ತಿಯನ್ನಾಗಿ ಕೈಗೊಳ್ಳುವ ಮೊದಲು ಬೇಟೆಯೇ ಅವನ ಜೀವನಾಧಾರವಾಗಿತ್ತು. ಬೇಟೆಯಾಡಿದ ಪ್ರಾಣಿಗಳನ್ನು ತಿಂದು ಜೀವಿಸುತ್ತಿದ್ದ ಮಾನವ ನಂತರ ಒಂದೇ ಕಡೆ ನೆಲೆಯೂರಿ ಭೂಮಿಯನ್ನು ಹದ ಮಾಡಿ ಬೇಸಾಯ ಮಾಡಿ ಜೀವಿಸಲು ಪ್ರಾರಂಭಿಸಿದನು. ಕೃಷಿಯನ್ನು ಅವಲಂಬಿಸಿದ ನಂತರ ಪ್ರಾಣಿಗಳ ಬೇಟೆ ಕಡಿಮೆಯಾದರೂ ಒಂದು ಹವ್ಯಾಸವಾಗಿ, ಕ್ರೀಡೆಯಾಗಿ ಮುಂದುವರಿಯಿತು. ಯಾವುದೇ ದೇಶದ ಮೂಲನಿವಾಸಿಗಳ ಅಥವಾ ಆದಿವಾಸಿಗಳ ಬದುಕನ್ನು ಅವಲೋಕಿಸಿದಾಗ ಬೇಟೆ ಎನ್ನುವುದು ಆ ಸಮುದಾಯದ ಸಂಸ್ಕೃತಿಯಾಗಿ ಮತ್ತು ಅವರ ಬದುಕಿನ ಭಾಗವಾಗಿ ಗುರುತಿಸಿಕೊಂಡಿದೆ. ಕುವೆಂಪುರವರ ಕಾದಂಬರಿಗಳಲ್ಲಿ ವರ್ಣಿತಗೊಂಡಿರುವ ಮಲೆನಾಡಿನ ದೇಸಿ ಬದುಕಿನಲ್ಲಿ ಬೇಟೆ ಒಂದು ವೃತ್ತಿಯಾಗಿ ಅಲ್ಲದಿದ್ದರೂ ಹವ್ಯಾಸವಾಗಿ, ಸಾಹಸ ಕ್ರೀಡೆಯಾಗಿ, ಕಲೆಯಾಗಿ ವಿವಿಧ ರೂಪಗಳಲ್ಲಿ ಮೂಡಿಬಂದಿದೆ. ಮಲೆನಾಡಿನ ಗಿರಿ–ಕಂದರಗಳು, ಹಳ್ಳ–ತೊರೆಗಳು ಅಸಂಖ್ಯಾತ ಪ್ರಾಣಿ–ಪಕ್ಷಿಗಳಿಗೆ, ಜಲಚರಗಳಿಗೆ ಆವಾಸಸ್ಥಾನವಾಗಿದ್ದವು. ಇವುಗಳ ಮಧ್ಯದಲ್ಲಿಯೇ ಬದುಕನ್ನು ಕಟ್ಟಿಕೊಂಡ ಮಾನವ ತನ್ನ ಬಿಡುವಿನ ವೇಳೆಯಲ್ಲಿ, ಮಾಂಸಾಹಾರಕ್ಕಾಗಿಯೂ, ಸಾಹಸವನ್ನು ಮೆರೆಯಲೂ ಬೇಟೆಯಾಡುವುದನ್ನು ಮುಂದುವರಿಸಿಕೊಂಡು ಬಂದಿರುವುದನ್ನು ಕಾಣುತ್ತೇವೆ. ಹೀಗೆ ಬೇಟೆ ಎನ್ನುವುದು ಮಲೆನಾಡಿನ ದೇಸಿ ಸಂಸ್ಕೃತಿಯಾಗಿ ರೂಢಿಯಲ್ಲಿತ್ತು ಎನ್ನುವುದು ಗಮನಾರ್ಹವಾಗಿದೆ.

ದೊಡ್ಡಬೇಟೆ: ಕುವೆಂಪುರವರ ಕಾದಂಬರಿಗಳಲ್ಲಿ ಅನೇಕ ವಿಧದ ಪ್ರಾಣಿ ಬೇಟೆಗಳನ್ನು ಕಾಣುತ್ತೇವೆ. ದೊಡ್ಡ ಬೇಟೆ, ಅಥವಾ ಕೂಡು ಬೇಟೆ, ಮರಸು ಬೇಟೆ, ಸಾರಿಕೆ ಬೇಟೆ, ಕರೆಬೇಟೆ, ಹಂದಿ ಬೇಟೆ, ಹಕ್ಕಿ ಬೇಟೆ, ಮೀನು ಬೇಟೆ, ಏಡಿ ಶಿಕಾರಿ, ಜೇನು ಬೇಟೆ ಮುಂತಾದವು ಮಲೆನಾಡಿನ ದೇಸಿ ಬದುಕಿನಲ್ಲಿ ಹಾಸುಹೊಕ್ಕಾಗಿದ್ದವು. ಮಲೆಗಳಲ್ಲಿಮದುಮಗಳು ಕಾದಂಬರಿಯ ಪ್ರಾರಂಭದಲ್ಲಿಯೇ ದೊಡ್ಡ ಬೇಟೆಯ ವಿವರಣೆಯಿದೆ. ಗುತ್ತಿ ಹುಲಿಕಲ್ಲು'ಗುಡ್ಡದ ಹತ್ತಿರ ಬಂದಾಗ ಎಂಥವರಿಗೂ ಭಯ ಹುಟ್ಟಿಸುವಂತಿತ್ತು ಆ ಗುಡ್ಡ. "ಅದರ ಕಡಿಪೂ ನಿಬಿಡತೆಯೂ ಎಷ್ಟರ ಮಟ್ಟಿಗೆ ಇತ್ತೆಂದರೆ ದೊಡ್ಡ ಬೇಟೆಗೆ ಹೋಗುವವರು ಆ ಕಾಡಿಗೆ ಹೋಗಲು ಹಿಂಜರಿಯುತ್ತಿದ್ದರು.[39] ಇಲ್ಲಿ ದೊಡ್ಡ ಬೇಟೆಯ ಉಲ್ಲೇಖವಿದ್ದು, ಸಾಮೂಹಿಕವಾಗಿ ಜಾತಿ ಭೇದವಿಲ್ಲದೆ ಬೇಲರು, ಹೊಲೆಯರು,

ಮಾದಿಗರು, ಕರಾದಿಯವರೂ ಬಾಡಿನಾಸೆಗಾಗಿ ಭಾಗವಹಿಸುತ್ತಿದ್ದರು. ವಿವಿಧ ಬಗೆಯ ಕೋವಿಗಳು, ಬತ್ತಿಕೋವಿ, ಭರ್ಜಿ, ಈಟಿ, ಉದ್ದಗತ್ತಿ, ಬಿಲ್ಲು ಬಾಣ ಮುಂತಾದ ಆಯುಧಗಳನ್ನು ಬಳಸುತ್ತಿದ್ದರು. ದೊಡ್ಡ ಬೇಟೆ ಅಥವಾ ಕೂಡು ಬೇಟೆಗೆ ಹೊರಟವರು ಎರಡು ಗುಂಪುಗಳಾಗಿ ಒಂದು ಗುಂಪು ಕೋವಿ ಹಿಡಿದು ಆಯಾಕಟ್ಟಿನ ಸ್ಥಳಗಳಲ್ಲಿ ಕುಳಿತು ಪ್ರಾಣಿಗಳಿಗೆ ಗುರಿಯಿಟ್ಟು ಹೊಡೆಯುವವರು, ಮತ್ತೊಂದು ಗುಂಪು ಅಂದರೆ ಹಳುವಿನವರು ಪ್ರಾಣಿಗಳನ್ನು ನಿರ್ದಿಷ್ಟ ಸ್ಥಳಗಳಿಗೆ ಅಟ್ಟಿಸಿಕೊಂಡು ಬರುತ್ತಿದ್ದರು. ಕೋವಿ ಹಿಡಿದು ಕೂಡುವ ಸ್ಥಳಗಳನ್ನು 'ಕಂಡಿ'ಎನ್ನುತ್ತಿದ್ದರು. ಹೀಗೆ ಹಳುವಿನವರು ಅಟ್ಟಿಸಿಕೊಂಡು ಬಂದ ಪ್ರಾಣಿಗಳನ್ನು ಕಂಡಿಕಾಯುವವರು ಹೊಡೆಯುತ್ತಿದ್ದರು.

ಮರಸು ಬೇಟೆ : ಪ್ರಾಣಿಗಳನ್ನು ಬೇಟೆಯಾಡಲು ಮರದ ಮೇಲೆ ಅಟ್ಟಣಿಗೆ ಕಟ್ಟಿಕೊಂಡು ಮರೆಯಲ್ಲಿ ಕೂತು ಬೇಟೆಯಾಡುವುದನ್ನು"ಮರಸು' ಬೇಟೆ ಎನ್ನುತ್ತಾರೆ. ಸಾಮಾನ್ಯವಾಗಿ ರಾತ್ರಿಯ ಬೆಳದಿಂಗಳ ವೇಳೆಯಲ್ಲಿ, ಪ್ರಾತಃ ಕಾಲದಲ್ಲಿ ಆಹಾರ, ನೀರಿಗಾಗಿ ಪ್ರಾಣಿಗಳು ಬರುವ ಸ್ಥಳಗಳನ್ನು ಆಯ್ಕೆ ಮಾಡಿಕೊಂಡು ಬೇಟೆಗಾರರು ಮರದ ಕೊಂಬೆಯ ಅಥವಾ ಅಟ್ಟಣೆಯ ಮೇಲೆ ಕುಳಿತು ಶಿಕಾರಿ ಮಾಡುತ್ತಿದ್ದರು. ಇಂತಹ ಮರಸು ಬೇಟೆಯ ವಿವರಣೆಯನ್ನು ಐತ ಧರ್ಮುವಿಗೆ ನೀಡುತ್ತಾನೆ. ಐತ ಚಿಕ್ಕವನಿದ್ದಾಗ ದೊಡ್ಡಣ್ಣ ಹೆಗ್ಗಡೆಯವರೊಡನೆ ಒಂದು ಹೂಡುವ ಎತ್ತನ್ನು ಹಿಡಿದಿದ್ದ ಹುಲಿಯ ಬೇಟೆಗಾಗಿ ರಾತ್ರಿ ಮರಸಿಗೆ ಕೂತಿದ್ದ ಸ್ವಾರಸ್ಯಕರವಾದ ಕಥೆ[40]. ಹುಲಿ ದನ ಹಿಡಿದಿದೆ ಎಂಬ ಸುದ್ದಿ ಕೇಳಿ ಕೃಷ್ಣಪ್ಪ ಮರಸಿಗೆ ಕೂರಲು ಓಬಯ್ಯ ಮತ್ತು ಕಿಲಸ್ತರ ಜಾಕಿಗೆ, ಅಟ್ಟಣೆ ಕಟ್ಟಲು ಹೇಳುವುದು ಮತ್ತು ಹುಲಿ ಷಿಕಾರಿ ಮಾಡುವ ಅವಕಾಶ ದೊರೆತಿದ್ದಕ್ಕೆ ಒಳಗೊಳಗೆ ಹಿಗ್ಗಿದನು[41] ಎನ್ನುವುದನ್ನು ಕುವೆಂಪುರವರ ಎರಡೂ ಕಾದಂಬರಿಗಳಲ್ಲಿ ಕಾಣುತ್ತೇವೆ. ಮಲೆನಾಡಿನ ಪರಿಸರದಲ್ಲಿ ಮರಸು ಬೇಟೆ ಸಾಮಾನ್ಯವಾಗಿತ್ತು ಎನ್ನಬಹುದು.[41]

ಕೋವಿ ಕಟ್ಟುವಿಕೆ: 'ಕೋವಿ ಕಟ್ಟುವಿಕೆ' ಬೇಟೆಯ ಮತ್ತೊಂದು ವಿಧಾನವಾಗಿತ್ತು. ದೊಡ್ಡಬೇಟೆ, ಮರಸು ಬೇಟೆಗಳಲ್ಲಿ ಬೇಟೆಗಾರರು ಸ್ವತಃ ಹಾಜರಿದ್ದು, ನೇರವಾಗಿ ಪ್ರಾಣಿಗಳನ್ನು ಗುರಿಯಿಟ್ಟು ಕೊಲ್ಲುವುದು ಒಂದು ತೆರನಾದರೆ, ಬೇಟೆಗಾರರ ಅನುಪಸ್ಥಿತಿಯಲ್ಲಿ ಬೇಟೆಯಾಡುವುದು ಇನ್ನೊಂದು ಪರಿಯಾಗಿತ್ತು. ದನ ಹಿಡಿದ ಹುಲಿಯನ್ನು ಕೊಲ್ಲಲು ಕೃಷ್ಣಪ್ಪ ಮೊದಲು ಮರಸು

ಕೂರುವುದೆಂದು ಆಲೋಚಿಸುತ್ತಾನೆ ನಂತರ ಮೂರು ಗಂಟೆಯ ಹೊತ್ತಿಗೆ ಪಶು ಶವವಿದ್ದ ಜಾಗಕ್ಕೆ ಹೋಗಿ ಕೋವಿ ಕಟ್ಟುತ್ತಾನೆ.[42] ಇಲ್ಲಿ ಕೋವಿ ಕಟ್ಟುವುದೆಂದರೆ ಕಾಡುಪ್ರಾಣಿಗಳ ಚಲನವಲನಗಳನ್ನು ಗುರುತಿಸಿ, ಅವುಗಳು ಸಂಚರಿಸುವ ಸ್ಥಳಗಳಲ್ಲಿ ಗಿಡಮರಗಳಿಗೆ ಮದ್ದು-ಗುಂಡು ತುಂಬಿದ ಕೋವಿಗಳನ್ನು ಒಂದು ನಿರ್ದಿಷ್ಟ ಅಳತೆಯ ಎತ್ತರಕ್ಕೆ ಕಟ್ಟುತ್ತಿದ್ದರು. ಕೋವಿಯ ಕುದುರೆಗೆ ದಾರ ಕಟ್ಟಿ ಒಂದು ತುದಿಯನ್ನು ಸ್ವಲ್ಪ ದೂರದಲ್ಲಿ ಸಿಡಿಗೋಲಿಗೆ ಕಟ್ಟಿರುತ್ತಿದ್ದರು. ಪ್ರಾಣಿಯ ದೇಹದ ಯಾವುದೇ ಭಾಗ ದಾರಕ್ಕೆ ತಗುಲಿದರೆ ಸಾಕು ಕೋವಿ ಹಾರಿ ಪ್ರಾಣಿಗೆ ಗುಂಡು ತಗಲುತ್ತಿತ್ತು.[43] ಕೋವಿಕಟ್ಟುವುದು ಬೇಟೆಗಾರನ ಚಾಣಾಕ್ಷತನ, ಅನುಭವ ಮತ್ತು ಬುದ್ಧಿವಂತಿಕೆಯನ್ನು ಅವಲಂಬಿಸಿರುತ್ತಿತ್ತು. ಏಕೆಂದರೆ ಇದೊಂದು ಅಪಾಯಕಾರಿಯಾದ ಬೇಟೆಯಾಗಿತ್ತು. ಕೆಲವು ವೇಳೆ ಕೋವಿಯ ಈಡು ದನಕರುಗಳಿಗೆ, ಮಾನವರಿಗೆ ತಗಲುವ ಸಂಭವವಿತ್ತು. ಆದ್ದರಿಂದಲೇ ಕೋವಿ ಕಟ್ಟಿದ್ದ ಕೃಷ್ಣಪ್ಪ ಈಡಿನ ಶಬ್ದ ಕೇಳಿದಾಗ ಆ ಜಾಗಕ್ಕೆ ಹೋಗಿ ಬೇಗ ಬೇಗನೆ ಗುಂಡು ಹಾರದಿದ್ದ ಕೋವಿಗಳನ್ನು ಬಿಚ್ಚಿಟ್ಟನು ಇಲ್ಲದಿದ್ದರೆ ನಾಯಿಗಳು ಸೂತ್ರದ ಮೇಲೆ ಹಾದು ಸಾಯುತ್ತಿದ್ದವು[44] ಹೀಗೆ ಕೋವಿ ಕಟ್ಟುವುದು ಅಪಾಯಕಾರಿಯಾದ ಬೇಟೆಯಾಗಿತ್ತು ಎನ್ನುವುದನ್ನು ತಿಳಿಯಬಹುದು.

ಸಾರಿಕೆ ಬೇಟೆ: ಸಾರಿಕೆ ಬೇಟೆಯಲ್ಲಿ ಬೇಟೆಗಾರ ಏಕಾಂಗಿಯಾಗಿ ಕಾಡಿಗೆ ಹೋಗಿ ಬೇಟೆಯಾಡುವುದು. ಇದೂ ಸಹ ಮಲೆನಾಡಿನ ಪ್ರಾಂತ್ಯದಲ್ಲಿ ಸಾಮಾನ್ಯವಾಗಿತ್ತು. ಇಲ್ಲಿ ಬೇಟೆಗಾರ ಪ್ರಾಣಿಗಳ ಜಾಡನ್ನು ಹಿಡಿದು. ನಾಯಿಗಳ ಸಹಾಯವಿಲ್ಲದೆ ಬೇಟೆಯಾಡುತ್ತಿದ್ದನು. ಕಾನೂರಿನ ಪುಟ್ಟಣ್ಣ ಹೂವಯ್ಯನಿಂದ ತೋಟಗಳನ್ನು ತೆಗೆದುಕೊಂಡು ಬೇಟೆಯಾಡಲು ಹೋಗುತ್ತಿದ್ದುದನ್ನು. ಬೆಟ್ಟಳ್ಳಿಯ ದೇವಯ್ಯಗೌಡ ಕಲ್ಲೂರಿನ ದೇವಸ್ಥಾನಕ್ಕೆ ಹೋಗುವ ದಾರಿಯಲ್ಲಿ ತನ್ನ ಹೊಸ ತೋಟ ಕೋವಿಯಿಂದ ಹಂದಿ ಷಿಕಾರಿ ಮಾಡಿ, ಹಸಿಗೆಯಾದ ನಂತರ, ತನ್ನ ತೋಟ ಕೋವಿ ಸಮೇತ ತಾನೂ ದೇವಸ್ಥಾನಕ್ಕೆ ಹೋಗುವುದನ್ನು[45] ಕಾಣುತ್ತೇವೆ.

ಕರೆಬೇಟೆ: 'ಕರೆಬೇಟೆ' ಮಲೆನಾಡಿನ ಮತ್ತೊಂದು ಬೇಟೆಯಾಗಿತ್ತು. ಗುರುಪಾದ ಮರಿಗುದ್ದಿಯವರು ಹೇಳುವಂತೆ "ಬೇಟೆಗಾರರು ಇಲ್ಲಿ ಪ್ರಾಣಿಗಳಂತೆ ಕೂಗುವ ಅನುಕರಣೆಯನ್ನು ಚೆನ್ನಾಗಿ ಮಾಡಿದಷ್ಟು ಬೇಟೆ ಫಲಪ್ರದವಾಗುತ್ತದೆ. ಸಾಮಾನ್ಯವಾಗಿ ಆಯಾ ಪ್ರಾಣಿಗಳ ಪ್ರಣಯಭಾವ ಉದ್ದೀಪನಗೊಂಡ ಸಂದರ್ಭದಲ್ಲಿ, ಜೊತೆಗಾಗಿ ಅವು ಪರಿತಪಿಸುವಲ್ಲಿ ಬೇಟೆಗಾರ ಅದರ ಲಾಭ ಪಡೆದುಕೊಳ್ಳುತ್ತಾನೆ."[46]ಕರೆಬೇಟೆ ಎನ್ನುವುದು ಒಂದು ಬೇಟೆಯ ಕಲೆ ಎನ್ನಬೇಕು.

ಏಕೆಂದರೆ ಪ್ರಾಣಿಪಕ್ಷಿಗಳ ಧ್ವನಿಯನ್ನು ಸಮಯ–ಸಂದರ್ಭಕ್ಕೆ ಅನುಗುಣವಾಗಿ ಅನುಕರಿಸುವುದು ಎಲ್ಲರಿಗೂ ಬರುವಂತಹದ್ದಲ್ಲ. ಕೆಲವೇ ಕೆಲವು ಮಂದಿ ನುರಿತ ಬೇಟೆಗಾರರು ಮಾತ್ರ ಮಾಡಲು ಸಾಧ್ಯವಾಗಿರುವಂತಹದ್ದು. ಮಲೆನಾಡಿನ ಪ್ರದೇಶದಲ್ಲಿ ಇಂತಹ ವಿಶಿಷ್ಟವಾದ ಬೇಟೆಯಿತ್ತು ಎನ್ನುವುದನ್ನು ಕುವೆಂಪುರವರ ತಮ್ಮ ಕಾದಂಬರಿಯಲ್ಲಿ ವಿವರಿಸಿದ್ದಾರೆ. ರಂಗಪ್ಪಸೆಟ್ಟರು ಕಾಡುಕೋಳಿಯ ಹುಂಜನನ್ನು ಬೇಟೆಯಾಡಲು: "ಹೇಂಟೆಯಂತೆ ತೆಕೋ ತೆಕ್ ತೆಕ್ ತೆಕ್।..... ಎಂದು ಪದೇ ಪದೇ ಅನುಕರಣೆ ಮಾಡುತ್ತಾರೆ. ಹುಂಜವು ಪ್ರಣಯಾವೇಶದಿಂದ ಮುಂದೆ ನುಗ್ಗಿ, ಇಳಿಜಾರಿನಿಂದ ಉಬ್ಬಿನ ಕಡೆಗೆ ಧಾವಿಸಿತು. ಸ್ವಲ್ಪ ದೂರ ಹೋಗಿ ನೋಡುತ್ತದೆ. ಪೊದೆಗಳ ನಡುವೆ ಅಡಗಿ ನಿಂತಂತಿದೆ ಒಂದು ಮನುಷ್ಯಾಕಾರ। ಅಲ್ಲಿಂದಲೇ ಕೇಳಿ ಬರುತ್ತಿದ್ದುದು ಆ ಮಾಯಾ ಹೇಂಟೆಯ ಕರೆ। ಹುಂಜವೂ ಬೆದರಿ ಹಿಂತಿರುಗುವುದರಲ್ಲಿತ್ತು. ಅಷ್ಟರಲ್ಲಿ ಏನೋ ದೇಹಕ್ಕೆ ತಗುಲಿದಂತಾಗಿ ಮಹಾಶಬ್ದವಾಯಿತು. ಹುಂಜವು ಮೂರ್ಛೆ ಹೋಗಿ ನೆಲಕ್ಕುರುಳಿತು"[47] ಹೀಗೆ ಕರೆಬೇಟೆಯೆಂದರೆ ಪ್ರಾಣಿಗಳ ಧ್ವನಿಯನ್ನು ಅನುಕರಿಸಿ ಅವುಗಳನ್ನು ಹತ್ತಿರಕ್ಕೆ ಕರೆದು ಬೇಟೆಯಾಡುವುದು ಎಂಬುದಾಗಿದೆ.

ಹಂದಿ ಬೇಟೆ : ಮಲೆನಾಡಿನ ದೇಸಿಯ ಬದುಕಿನಲ್ಲಿ ಹೆಚ್ಚು ಜನಪ್ರಿಯವಾಗಿದ್ದ ಪ್ರಾಣಿ ಬೇಟೆ ಎಂದರೆ ಕಾಡುಹಂದಿಯದು. ಕುವೆಂಪುರವರ ಎರಡೂ ಕಾದಂಬರಿಗಳಲ್ಲಿ ಕಾಡುಹಂದಿಯ ಬೇಟೆ ಬಗ್ಗೆ ಅನೇಕ ಉದಾಹರಣೆಗಳನ್ನು ಕಾಣಬಹುದು. ಕಾನೂರಿನ ಸಮೀಪದಲ್ಲಿದ್ದ 'ಕತ್ತಲೆಗಿರಿಯ' ಸರುವಿನಲ್ಲಿ'ಒಂಟಿಗ ಹೋರಿ ಹಂದಿಯನ್ನು ಬೇಟೆನಾಯಿಗಳು ಸುತ್ತುವರಿಯುವುದು, ಒಂಟಿಗ ಹಂದಿಯೂ ಹೂಂಕರಿಸುತ್ತಾ ನಾಯಿಗಳ ಮೇಲೆ ಆಕ್ರಮಣ ಮಾಡುವುದನ್ನು ಕಾಣುತ್ತೇವೆ. ಸಿಂಗಪ್ಪಗೌಡರು ಕಡಿಸಿದ್ದ ಕಳ್ಳನಾಟಗಳನ್ನು ಕದ್ದು ಸಾಗಿಸಲೆಂದು ಕಾನೂರಿನಿಂದ ಹೊರಟಿದ್ದ ರಂಗಪ್ಪ ಸೆಟ್ಟಿ, ಪುಟ್ಟಣ್ಣ, ಮುಂತಾದವರ ದಂಡು ನಾಯಿಗಳ ಕೂಗು ಬರುತ್ತಿದ್ದ ಕಡೆಗೆ ಹೋಗಿ ನೋಡಿ ದಟ್ಟವಾದ ಹಳುವಿನಲ್ಲಿ ಸಿಕ್ಕಿಕೊಂಡ ಹಂದಿಯ ಕಡೆ ಪುಟ್ಟಣ್ಣ ಬಂದೂಕಿನಿಂದ ಒಂದರ ನಂತರ ಮತ್ತೊಂದು ಗುಂಡು ಹೊಡೆದನು. ಗಾಯಗೊಂಡ ಒಂಟಿಗ ಹಂದಿ ದಟ್ಟ ಹಳುವಿನಲ್ಲಿ ಕಣ್ಮರೆಯಾಯಿತು. ರಕ್ತದ ಜಾಡನ್ನು ಹುಡುಕಿಕೊಂಡು ಹೋಗುತ್ತಿದ್ದಾಗ ಒಂದು ಈಡು ಕೇಳಿಸಿತು. ಅದು ಸಿಂಗಪ್ಪಗೌಡರ ಮಗ ಕೃಷ್ಣಪ್ಪನದಾಗಿತ್ತು. ಹೀಗೆ ಎರಡು ಗುಂಪುಗಳು ಒಂಟಿ ಹಂದಿಯನ್ನು ನಾಯಿಗಳ ಸಹಾಯದಿಂದ ಬೇಟೆಯಾಡುತ್ತಾರೆ.[48] ಕಾನೂರಿನ ಪುಟ್ಟಣ್ಣ ಕಣೆಹಂದಿ ಅಂದರೆ ಮುಳ್ಳುಹಂದಿಯನ್ನು ಬೇಟೆಯಾಡಿದ ರೀತಿ ನಿಜವಾಗಿಯೂ ಭಯಾನಕವಾಗಿಯೂ

ಭೀಭತ್ಸವಾಗಿಯೂ ವರ್ಣಿತವಾಗಿದೆ. ಎರಡು ಈಡು ಹೊಡೆದರೂ ಲೆಕ್ಕಿಸದೆ ಒಂದು ಕಣೆಹಂದಿ ಗುದ್ದಿನಲ್ಲಿ ಅವಿತುಕೊಂಡಿರುವುದನ್ನು ಖಾತರಿಪಡಿಸಿಕೊಂಡು ಗುದ್ದಿನ ಬಾಯಿಗೆ ಬೆಂಕಿ ಹಾಕುತ್ತಾರೆ. ಕಣೆ ಹಂದಿ ಹೊರಬರಲು ತಲೆಯನ್ನು ಗುದ್ದಿನ ಬಾಯಿಗೆ ಹಾಕಿದಾಗ ದೈತ್ಯನಾದ ಪುಟ್ಟಣ್ಣ ತನ್ನ ಕಂಬಳಿಯಿಂದ ಬಲವಾಗಿ ಅದುಮಿ ಎಡಗೈಯಿಂದ ತನ್ನ ಕೋವಿಯ ಚೀಲದಲ್ಲಿದ್ದ ಚಾಕುವನ್ನು ತೆಗೆದು ಹಂದಿಯ ತಲೆಯನ್ನು ಕಚಕಚನೆ ಕೊಚ್ಚಿಹಾಕುತ್ತಾನೆ.[49] ಬೆಟ್ಟಳ್ಳಿಯ ದೇವಯ್ಯಗೌಡ ಮತ್ತು ಮುಕುಂದಯ್ಯ ಕಲ್ಲೂರ ದೇವಸ್ಥಾನಕ್ಕೆ ಹೊರಟಿದ್ದರೂ ತೋಟಕೋವಿಯಿಂದ ಹಂದಿ ಷಿಕಾರಿ ಮಾಡಿ, ಹಸಿಗೆಯಾಗುತ್ತಿದ್ದ ಸುಟ್ಟವಾಸನೆ ಗಾಳಿಯಲ್ಲಿ ತೇಲಿಬರುತ್ತಿತ್ತು. ಮಲೆನಾಡಿನ ಹುಡುಗರೆಲ್ಲರಿಗೂ ಬೇಟೆ ಎಂದರೆ ಪ್ರಾಣ ಎಂದು ಕಾದಂಬರಿಕಾರರೇ ವಿವರಿಸುತ್ತಾರೆ.[50]

<u>ಹಕ್ಕಿ ಬೇಟೆ:</u> ಮಲೆನಾಡಿನ ದಟ್ಟಡವಿಗಳು, ಹಳು-ಸರುಗಳು ಕೇವಲ ಪ್ರಾಣಿಗಳಲ್ಲದೆ ಅಸಂಖ್ಯಾತ ಪಕ್ಷಿಗಳಿಗೂ ಆವಾಸಸ್ಥಾನವಾಗಿತ್ತು. ಅಲ್ಲಿನ ನಿವಾಸಿಗಳು ಕಾಡುಪ್ರಾಣಿಗಳನ್ನಷ್ಟೇ ಅಲ್ಲದೆ ವಿವಿಧ ಜಾತಿಯ ಹಕ್ಕಿಗಳನ್ನು ಬೇಟೆಯಾಡುತ್ತಿದ್ದರು. ಹಕ್ಕಿ ಬೇಟೆಯಲ್ಲಿ ವಯಸ್ಸಿನ ಅಂತರವಿಲ್ಲದೆ ಮತ್ತು ಲಿಂಗಭೇದವಿಲ್ಲದೆ ಮಕ್ಕಳಿಂದ ವಯಸ್ಕರವರೆಗೂ, ಹೆಂಗಸರೂ ತೊಡಗಿಸಿಕೊಳ್ಳುತ್ತಿದ್ದರು ಎನ್ನುವುದು ವಿಶೇಷ. ಹಕ್ಕಿಗಳನ್ನು ಬೇಟೆಯಾಡಲು ಸೆಬೆ, ಉರುಳು, ಬಿಲ್ಲು ಮತ್ತು ಕೋವಿಗಳನ್ನು ಬಳಸುತ್ತಿದ್ದರು. <u>ಕಾನೂರು ಹೆಗ್ಗಡಿತಿ</u>ಯಲ್ಲಿ ವಾಸು ಹಿಂದಿನ ದಿನವೇ ಗಂಗ ಹುಡುಗನ ಜೊತೆ ಹೋಗಿ ಮರಿಗಳ ಜೊತೆಗೆ ತಾಯಿ ಹಕ್ಕಿಯನ್ನು ಹಿಡಿಯಲು ಸೆಬೆ ಒಡ್ಡಿರುತ್ತಾನೆ. ಮಾರನೆಯ ದಿನವೇ ಹೋಗಿ ನೋಡುತ್ತಾರೆ ಸೆಬೆಗೆ ಹಕ್ಕಿಸಿಕ್ಕಿಬಿದ್ದಿದೆ, ಹೆದೆಯೇರಿದ ಧನುಸ್ಸಿನಂತೆ ನೆಲದಿಂದ ಮೇಲೆದ್ದು ಬಾಗಿದ್ದ ಸಿಡಿಗೋಲಿನ ತುದಿಯಿಂದ, ನೆಲ್ಲಕ್ಕೆ ಬಿಮ್ಮನೆ ನೇರವಾಗಿ ಇಳಿದಿದ್ದ ಸೂತ್ರದ ಮಧ್ಯೆ, ಉರುಳುಗಣ್ಣಿನಲ್ಲಿ ಒಂದು ಕಾಲು ಸಿಕ್ಕಿ ತಲೆಕೆಳಗಾಗಿ ನೇತಾಡುತ್ತಿದೆ ಪಿಕಳಾರ ಹಕ್ಕಿ[51]. ಮುಕುಂದಯ್ಯ ತಾನು ಹಿಂದಿನ ದಿನ ಒಡ್ಡಿದ್ದ ಉರುಳಿನ ಜಾಗಕ್ಕೆ ಬಂದಾಗ,'ಉರುಳು ಸ್ಥಳಾಂತರ ಹೊಂದಿ ಬಿದ್ದಿದೆ! ಉರುಳಿಗೆ ಸಿಕ್ಕಿದ್ದ ಒಂದು ಚಿಟ್ಟುಗೋಳಿಯ ತಲೆ, ಕಾಲು, ರೆಕ್ಕೆಯ ತುದಿ ಭಾಗಗಳು ಮಾತ್ರ ಬಿದ್ದಿವೆ! ಅಯ್ಯೋ ನಿನ್ನೆಯೆ ಬಂದಿದ್ದರೆ! ಹಾಳು ನರಿಯೋ, ಮುಂಗುಸಿಯೋ, ಕಬ್ಬೆಕ್ಕೋ ರಾತ್ರಿ ತಿಂದುಹಾಕಿಬಿಟ್ಟಿದೆ!"ಎಂದು ಶಪಿಸುತ್ತಾನೆ. ಇದರಿಂದ ಸೆಬೆ ಎಂದರೆ ಉರುಳು ಒಡ್ಡುವುದು ಎಂದು ತಿಳಿಯುತ್ತದೆ. ಹಕ್ಕಿಗಳು ಕುಳಿತುಕೊಳ್ಳುವ ಸ್ಥಳ, ಅವುಗಳ ಆಕಾರ, ಗಾತ್ರ, ಸ್ವಭಾವ ಮುಂತಾದವುಗಳ ಆಧಾರದ ಮೇಲೆ ಸಿಡಿಗೋಲನ್ನು ಸೂತ್ರದ ದಾರದಿಂದ ಬಿಲ್ಲಿನಂತೆ ಬಾಗಿಸಿ ಹಕ್ಕಿಗಳು ಕೂಡುವ ಸ್ಥಳದಲ್ಲಿ ಕಟ್ಟಿರುತ್ತಾರೆ. ಸೂತ್ರದ

ಮಧ್ಯದಲ್ಲಿ ಉರುಳುಗಣ್ಣನ್ನು ಬಿಟ್ಟಿರುತ್ತಾರೆ. ಹಕ್ಕಿಗಳು ಆಕಸ್ಮಿಕವಾಗಿ ಉರುಳಿಗೆ ಬಿದ್ದರ ಸಿಡಿಗೋಲು ಸಿಡಿದು ಉರುಳು ಬಾಗಿದಂತೆ ಹಕ್ಕಿಗಳು ಒದ್ದಾಡುತ್ತಾ ತೂಗಾಡುತ್ತಿರುತ್ತವೆ.[52] ಹಕ್ಕಿಗಳನ್ನು ಸೆಬೆಯಿಂದಲ್ಲದೆ, ಚಿಟ್ಟುಬಿಲ್ಲಿನಿಂದ ಮತ್ತು ಕೋವಿಗಳಿಂದಲೂ ಬೇಟೆಯಾಡುತ್ತಿದ್ದರು ಎನ್ನುವುದನ್ನು ಕಾಣುತ್ತೇವೆ.

<u>**ಮೀನುಷಿಕಾರಿ:**</u> ಮೀನುಷಿಕಾರಿ ಅಥವಾ ಮೀನುಬೇಟೆ ಮಲೆನಾಡಿನಲ್ಲಿ ಬಹಳ ಜನಪ್ರಿಯವಾಗಿತ್ತು. ನದಿ-ತೊರೆಗಳು, ಹಳ್ಳ-ಕೊಳ್ಳಗಳು, ಹೊಂಡಗಳು, ಕೆರೆಗಳು ಮೀನುಗಳು ಸರ್ವಋತುವಿನಲ್ಲಿಯೂ ಸಿಗುವ ಸ್ಥಳಗಳಾಗಿದ್ದವು. ಮಲೆನಾಡಿನ ಸ್ಥಳೀಯರು ತಮ್ಮ ಬಿಡುವಿನ ವೇಳೆಯಲ್ಲಿ, ಕೆಲವೊಂದು ಬಾರಿ ಕೆಲಸಕ್ಕೆ ಗೈರುಹಾಜರಾಗಿ, ಹವ್ಯಾಸಕ್ಕಾಗಿ, ಆಹಾರಕ್ಕಾಗಿ, ಬಾಯಿರುಚಿಗಾಗಿ ಮೀನುಬೇಟೆ ಮಾಡುವುದನ್ನು ಕುವೆಂಪುರವರ ಕಾದಂಬರಿಗಳಲ್ಲಿ ಕಾಣಬಹುದು. ಮುತ್ತಳ್ಳಿಯ ಚಿನ್ನಯ್ಯ ಮೈಸೂರಿನಿಂದ ಬರುತ್ತಿದ್ದ ಹೂವಯ್ಯ ರಾಮಯ್ಯರಿಗಾಗಿ ತನ್ನ ಮನೆಯಲ್ಲಿ ರಾತ್ರಿಯ ಔತಣಕ್ಕಾಗಿ ಮೀನಿನ ಷಿಕಾರಿ ಮಾಡಬೇಕೆಂದು ಯೋಚಿಸಿ ನಂಜನ ಜೊತೆಗೆ ಬೈಲುಕೆರೆಗೆ ಹೋಗುತ್ತಾನೆ. ಕೆರೆಯ ದಡದಲ್ಲಿದ್ದ ಎರಡು ಮರಗಳ ಮೇಲೆ ಇಬ್ಬರೂ ಹತ್ತಿ ಬಂದೂಕು ಹಿಡಿದು ಕುಳಿತುಕೊಂಡರು. ಬಹಳ ಹೊತ್ತಿನ ನಂತರ ನೀರು ಕಚ್ಚಲು ಮೇಲೆ ಬಂದ ಅವಲು ಮೀನಿಗೆ ಗುರಿಯಿಟ್ಟು ಹೊಡೆದನು. ಏಟು ಬಿದ್ದ ಮೀನು ಮೇಲೆ ಕೆಳಗೆ ಹಾರಿ ನೀರಿನ ತಳ ಸೇರುತ್ತದೆ. ನಂಜನು ನೀರಿನಲ್ಲಿ ತಡವಿ ತಡವಿ'ತಲೆಹೊಟ್ಟಿ ಹಾರಿಹೋಗ್ಯದೆ"ಎನ್ನುತ್ತ ದಡದ ಮೇಲೆ ಅದನ್ನು ಎಸೆಯುತ್ತಾನೆ.[53] ಮರಸು ಬೇಟೆಯಿಂದ ಪ್ರಾಣಿಗಳನ್ನು ಕೋವಿಯಿಂದ ಹೊಡೆಯುವಂತೆ ಮೀನುಗಳನ್ನು ಕೋವಿಯಿಂದ ಬೇಟೆಯಾಡುತ್ತಿದ್ದುದು ಇದರಿಂದ ತಿಳಿಯುತ್ತದೆ.

ಬೇಲರ ಬೈರ ಕೆಲಸಕ್ಕೆ ಹೋಗದೆ "ತನ್ನ ಮಗ ಗಂಗನನ್ನು ಜೊತೆಗೆ ಕರೆದುಕೊಂಡು ಕಂಬಳಿ, ಕತ್ತಿ, ಹಾಳೆಹೊಟ್ಟೆ, ಹಾಳೆ ಮುಂತಾದ ಪರಿಕಗಳಿಂದ, ಹೊಂಡ ತೋಣಕಿ'ಮೀನು ಹಿಡಿಯಲು ಹೋಗುತ್ತಾರೆ. "ತಂದೆ ಮಕ್ಕಳಿಬ್ಬರೂ ಹೊಂಡ ತೋಣಕಲು ಅಂದರೆ (ಹೊಂಡದಲ್ಲಿರುವ ನೀರನ್ನು ತುಳುಕಿ, ಬತ್ತಿಸಿ ಮೀನು ಹಿಡಿಯುವುದು ಎಂದರ್ಥ) ಪ್ರಾರಂಭಿಸಿದರು. ಸ್ವಲ್ಪ ಕಾಲದಲ್ಲಿ ಹೊಂಡದ ನೀರು ಬತ್ತಿದಂತೆಲ್ಲ ಹೆಚ್ಚು ಹೆಚ್ಚು ಬಗ್ಗಡವಾಯಿತು. ಹೊಂಡದಲ್ಲಿ ನೀರು ಕಡಿಮೆಯಾಗಲು ಹಾಳೆಯಿಂದ ತುಳುಕುತ್ತಿದ್ದ ನೀರಿನಲ್ಲಿಯೇ ಸಣ್ಣ ದೊಡ್ಡ ಸೋಸಲು ಮೀನುಗಳು ಹೋಗುತ್ತಿರಲು, ಕಂಬಳಿಯನ್ನೇ ಬಲೆಯನ್ನಾಗಿ ಮಾಡಿ ಗೋಚಿದರು.... ಆಮೇಲೆ ಕೆಸರನ್ನು ಹಿಸುಕಿಯೂ, ಬೇರಿನ ಸಂದಿಗೊಂದಿಗಳಲ್ಲಿ ಕೈಹಾಕಿಯೂ, ಕಲ್ಲಿನ

ಪೊಟರೆಗಳಿಗೆ ಕೋಲು ಹಾಕಿಯೂ, ತೊಳ್ಳೆಮೀನು, ಮುರುಗುಂಡು, ಗಿರಲು, ಕೊಚ್ಚಲಿ, ಕಾರೇಡಿ ಮೊದಲಾದ ಜಲಜಂತುಗಳನ್ನು ಬೇಟೆಯಾಡಿದರು.[54]

ಹತ್ತು ಮೀನು ಬೇಟೆ: ಮುಂಗಾರು ಮಳೆ ಪ್ರಾರಂಭವಾದ ದಿನಗಳಲ್ಲಿ ಹತ್ತು ಮೀನು ಕಡಿಯುವುದು ಮಲೆನಾಡಿನಲ್ಲಿ ವಿಶಿಷ್ಟವಾದ ಬೇಟೆಯಾಗಿತ್ತು. ಧಾರಾಕಾರವಾಗಿ ಸುರಿಯುತ್ತಿದ್ದ ಮುಂಗಾರಿನ ಮಳೆಯಿಂದ ತೋಟಗದ್ದೆಗಳಿಗೆ ನೀರು ಹರಿಯಲಾರಂಭಿಸುತ್ತದೆ. ಆಗ ತೊರೆ-ಕೆರೆಗಳಿಂದ ಮೀನುಗಳು ಹೊಸನೀರಿನ ಜಾಡು ಹಿಡಿದು ಮೇಲೇರಿ ಬರುತ್ತವೆ. ಅಂತಹ ಮೀನುಗಳನ್ನು ದೊಂದಿ-ಲಾಟೀನುಗಳಿಂದ ಆಕರ್ಷಿಸಿ ಹಿಡಿಯುತ್ತಾರೆ. ಇದನ್ನೇ ಹತ್ತು ಮೀನು ಕಡಿಯುವುದು ಅಥವಾ ಬೇಟೆಯಾಡುವುದು ಎನ್ನುತ್ತಾರೆ. ಸೀತೂರು ಗುಡ್ಡದಲ್ಲಿ ಪ್ರಯಾಣ ಮಾಡುತ್ತಿದ್ದ ಗುತ್ತಿ ಮಳೆಯಿಂದ ಹಳ್ಳಕೊಳ್ಳಗಳೆಲ್ಲ ಪ್ರವಾಹದಿಂದ ಉಕ್ಕಿ ಹರಿಯತೊಡಗಿದಾಗ, ಅವನಿಗೆ ಲಕ್ಕುಂದ ಗದ್ದೆ ಕೋಗಿನ ಜಡ್ಡಿನಲ್ಲಿ, ಪದೇ ಪದೇ ಬೀಸುತ್ತಿದ್ದ ದೊಂದಿಗಳೂ ಲಾಟೀನುಗಳೂ ಕಾಣಿಸಿತು. "ಈ ಮಳೇಲಿ ಮೀನು ಕಡಿಯಾಕೆ ಹೊರಟರಲ್ಲಪ್ಪಾ? ಈ ದೀವರು ಮಕ್ಕಳಿಗೆ ಕಳ್ಳು ಹೆಚ್ಚಾಗಿದ್ದೇ."[55] ಎಂದು ಯೋಚಿಸುತ್ತಾನೆ.

ಮಲೆನಾಡಿನ ಜನರಿಗೆ ಮಳೆಗಾಲದಲ್ಲಿ ಸಾಕಷ್ಟು ಕೆಲಸವಿದ್ದರೂ ಸ್ವಲ್ಪ ವಿರಾಮ ಮಾಡಿಕೊಂಡು "ಗದ್ದೆಗೆ ಕೂಣಿ ಹಾಕುವುದು, ಹಳ್ಳದ ಕಟ್ಟಿಗೆ ಹೆಗ್ಗೂಣಿ ಕಟ್ಟುವುದು, ಮಳೆ ಜೋರಾದ ರಾತ್ರಿಗಳಲ್ಲಿ ದೊಂದಿ ಲಾಟೀನು ಮೊದಲಾದ ದೀಪ ಸೌಕರ್ಯಗಳನ್ನು ಹಿಡಿದುಕೊಂಡು ಹೋಗಿ ಬಯಲು ಒಡ್ಡುಗಳಿಗೆ ಹತ್ತಿ ಬರುತ್ತಿದ್ದ ಹತ್ತು ಮೀನುಗಳನ್ನು ಕಡಿಯುವುದು"[56] ಮುಂತಾದ ಸಾಹಸದ ಉದ್ಯೋಗಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಗಾಳ, ಕೂಣಿ, ಬಲೆ ಮುಂತಾದ ಪರಿಕರಗಳಿಂದಲೂ ಮೀನು ಬೇಟೆ ಮಾಡುತ್ತಿದ್ದರು ಎನ್ನುವುದರ ಜೊತೆಗೆ ಮಲೆನಾಡಿನಲ್ಲಿ ಮೀನು ಷಿಕಾರಿ ಅವರ ಬದುಕಿನ ಆಹಾರಪದ್ಧತಿಯ, ಸಾಹಸದ, ಹವ್ಯಾಸದ ಭಾಗವಾಗಿತ್ತು ಎನ್ನಬಹುದು. ಮೀನು ಬೇಟೆಯಲ್ಲಿ ಮತ್ತೊಂದು ವಿಚಿತ್ರವಾದ ವಿಧಾನವನ್ನು <u>ಕಾನೂರು ಹೆಗ್ಗಡಿತಿ</u>ಯಲ್ಲಿ ಕಾಣುತ್ತೇವೆ. "ಕೆಳಕಾನೂರಿನ ಅಣ್ಣಯ್ಯಗೌಡರ ಮಗ ಓಬಯ್ಯ ಅಗ್ರಹಾರದ ದೇವರ ಮೀನುಗಳಿಗೆ ಹೊಗೆಸೊಪ್ಪಿನೊಂದಿಗೆ ಸುಣ್ಣವನ್ನು ಸೇರಿಸಿ ತಿಕ್ಕಿ ಒಂದು ಗುಳಿಗೆ ಮಾಡಿ ನೀರಿಗೆ ಎಸೆದನು. ಒಂದೆರಡು ನಿಮಿಷಗಳಲ್ಲಿ ಒಂದು ಸಾಧಾರಣ ಗಾತ್ರದ ಮೀನು ಹೊಟ್ಟೆ ಮೇಲಾಗಿ ಬಡಬಡನೆ ಒದ್ದಾಡಿಕೊಂಡು ಚಿಮ್ಮಿ ದಡಕ್ಕೆ ಬಿದ್ದಿತು."[57] ಇಂತಹ ಮೀನು ಷಿಕಾರಿಯನ್ನು ಗುರುಪಾದ ಮರಿಗುದ್ದಿಯವರು 'ಕಡು' ಹಾಕುವುದು'

ಎನ್ನುತ್ತಾರೆ. ಮೀನುಗಳು ತಿಂಡಿಯೆಂದು ಭ್ರಮಿಸಿ ನುಂಗುವ ಮತ್ತು ವಿಷಕಾರಿಯಾಗುವ ವಸ್ತುವನ್ನು ನೀರಿಗೆಸೆದು ಇಲ್ಲವೆ ಮೀನುಗಳಿಂದ ಮಡುವಿನ ನೀರನ್ನು ಕಡುಗೊಳಿಸಿ ಬೇಟೆಯಾಡುತ್ತಾರೆ. ಘಾಟಿನ, ಕಡುವಾದ ಹಾಗೂ ಮತ್ತು ಬರಿಸುವ ಕಾಯಿ ಬೇರು ತೊಗಟೆಗಳನ್ನು ಇದಕ್ಕಾಗಿ ಉಪಯೋಗಿಸುತ್ತಾರೆ.[58]

<u>**ಏಡಿಷಿಕಾರಿ:**</u> ಮೀನುಬೇಟೆಯ ಜೊತೆಗೆ ಏಡಿಷಿಕಾರಿಯೂ ಸಹ ಮಲೆನಾಡಿನಲ್ಲಿ ವಿಶಿಷ್ಟವಾದ ಬೇಟೆಯಾಗಿತ್ತು. ಗಂಗ ಹುಡುಗ ಹೊಂಡದಲ್ಲಿ ನೀರೆಲ್ಲ ಖಾಲಿಯಾದ ನಂತರ ಕಪ್ಪೆಯೊಂದನ್ನು ಹೊಡೆದು ಕೊಂದು, ಅದನ್ನು ಕೋಲಿನ ತುದಿಗೆ ಕಟ್ಟಿ'ಕಪ್ಪೆಗೋಲಿನಿಂದ ಅನೇಕ ಏಡಿಗಳನ್ನು ಹಿಡಿದು, ಕೊಂಬು ಕಾಲುಗಳನ್ನು ಮುರಿದು, ಹಾಳೆಕೊಟ್ಟೆಗೆ ತುಂಬಿದನು.[59] ಏಡಿ ಷಿಕಾರಿಯಲ್ಲಿ ಕಪ್ಪೆಗೋಲಿನ ವಿಧಾನ ಸಾಮಾನ್ಯವಾಗಿತ್ತು. ಒಂದು ಕಪ್ಪೆಯನ್ನು ಕೋಲಿನ ತುದಿಗೆ ಕಟ್ಟಿ ಡೊಗರಿಗೆ ಹಾಕಿದರೆ ತೂತಿನಲ್ಲಿರುವ ಏಡಿ ಸತ್ತ ಕಪ್ಪೆಯನ್ನು ಕೊಂಬುಗಳಿಂದ ಬಲವಾಗಿ ಕಚ್ಚುಕೊಳ್ಳುತ್ತಿದ್ದು, ಕೋಲನ್ನು ಮೇಲೆಳೆದು ಕೊಂಡರೂ ಹಿಡಿದ ಕಪ್ಪೆಯನ್ನು ಬಿಡುತ್ತಿರಲಿಲ್ಲ. ಕಾನೂರಿನ ಬೈರ ಮತ್ತು ಸಿದ್ದರು ಬೇಸಿಗೆಯಲ್ಲಿ ಒಂದು ದಿವಸ ಸರಲಿನಲ್ಲಿ ಕಲ್ಲುಗಳನ್ನು ಎತ್ತಿ, ಹೊಂಡಗಳನ್ನೆಲ್ಲ ಕೊಣಕಿ ಹಾಕಿ ಏಡಿ ಷಿಕಾರಿ ಮಾಡುತ್ತಾ ಮಧ್ಯೆ ಮಧ್ಯೆ ಚಂದ್ರಯ್ಯಗೌಡರ ಬಗ್ಗೆ ಹರಟುತ್ತಾ, ಏಡಿಯೊಂದರ ಕಾಲುಗಳನ್ನು ಅದರ ಕಡೆ ಒಂದಿನಿತೂ ಲಕ್ಷ್ಯ ಕೊಡದೆ, ಒಂದೊಂದನ್ನಾಗಿ ಕಡ್ಡಿ ಮುರಿಯುವಂತೆ ಮುರಿದು ಮುರಿದು ಬಿಸಾಡತೊಡಗಿದರು[60] ಕಲ್ಲೂರ ಮುಕುಂದಯ್ಯ, ಐತ ಪೀಂಚಲು ಮೂವರೂ ಒಟ್ಟಾಗಿ ಕಪ್ಪೆಗೋಲು ಹಾಕುತ್ತಾ ಸರಳಿನಲ್ಲಿ ನಾಲ್ಕಾರು ಕಾರೇಡಿಗಳನ್ನು ಕೊಂಬುಕಾಲು ಮುರಿದು ಹಾಳೆಕೊಟ್ಟೆಗೆ ಹಾಕಿಕೊಳ್ಳುತ್ತಾರೆ. ಎಳೆಬಸುರಿಯಾಗಿದ್ದ ಪೀಂಚಲು ನಾಲಗೆಗೆ ರಾತ್ರಿಯ ಗಂಜಿಯೂಟಕ್ಕೆ ನಂಚಿಕೊಳ್ಳಲು "ಗದ್ದೆಗಿಳಿದು ಬೆಳ್ಳೇಡಿಗಳನ್ನು ಹಿಡಿದು, ಅವು ಬುಟ್ಟಿಯ ತುದಿಗೆ ಹತ್ತಿ ಮತ್ತೆ ಗದ್ದೆಗೆ ಹಾರದಂತೆ ಅವುಗಳ ಕೊಂಬು ಮತ್ತು ಚಿಕ್ಕಬೆರಳುಗಳನ್ನು ಮುರಿದು ಬುಟ್ಟಿಯೊಳಗೆ ಹಾಕಿಕೊಳ್ಳುತ್ತಿದ್ದಳು. ಅವಳ ಆ ಬೆಳ್ಳೇಡಿ ಬೇಟೆಯಲ್ಲಿ ಚಿನ್ನಮ್ಮನೂ, ಮೃಗಯಾ ವಿನೋದಕ್ಕಾಗಿಯೇ ಪಾಲುಗೊಂಡು, ನೆರವಾಗುತ್ತಿದ್ದಳು"[61] ಏಡಿ ಷಿಕಾರಿಯಲ್ಲಿ ಹೆಂಗಸರೂ ಪಾಲ್ಗೊಳ್ಳುತ್ತಿದ್ದರು ಎನ್ನುವುದು ಇದರಿಂದ ತಿಳಿಯುವುದು, ಏಡಿಗಳಲ್ಲಿ ಕಾರೇಡಿ, ಬೆಳ್ಳೇಡಿ ಮುಂತಾದ ವಿಧಗಳನ್ನು ಮತ್ತು ಅವುಗಳಿಂದ ಚಟ್ನಿ ತಯಾರಿಸಿ ಊಟದ ಜೊತೆ ನಂಚಿಕೊಳ್ಳುತ್ತಿದ್ದರು ಎನ್ನುವಾಗ ಏಡಿ ಷಿಕಾರಿ ಮಲೆನಾಡಿನ ದೇಸಿಯ ಆಹಾರ ಪದ್ಧತಿಯ ಭಾಗವಾಗಿತ್ತು ಎನ್ನಬಹುದು.

ಜೇನು ಬೇಟೆ: ಮಲೆನಾಡಿನ ಇನ್ನಿತರ ಬೇಟೆಗಳಲ್ಲಿ ಜೇನು ಬೇಟೆ ಕೂಡ ಒಂದಾಗಿತ್ತು. ಮಲೆನಾಡಿನ ದಟ್ಟಡವಿಗಳು, ಬೆಟ್ಟಗುಡ್ಡಗಳು ಜೇನಿಗೆ ಪ್ರಸಿದ್ಧವಾಗಿದ್ದವು. ಜೇನು ಬೇಟೆಯಾಡುವುದರಲ್ಲಿ ಅಲ್ಲಿನ ಜನರು ಸಹ ತುಂಬಾ ಪಳಗಿದ್ದರು ಎನ್ನುವುದನ್ನು ಮುಕುಂದಯ್ಯ ಪೀಂಚಲು ಬಗ್ಗೆ ಹೇಳುವ ಮಾತುಗಳಲ್ಲಿ ಕಾಣುತ್ತೇವೆ. ತಾನೂ ಐತನೂ ಹುಳುಗಳಿಗೆ ಹೆದರಿ ಓಡಿ ಹೋದಾಗ ಅವಳು (ಪೀಂಚಲು) ಕಚ್ಚಿಸಿಕೊಂಡು ಹೆದರದೆ ಹುತ್ತದಲ್ಲಿದ್ದ ತುಡುವೆ ಜೇನನ್ನು ಕಿತ್ತುಕೊಟ್ಟಿದ್ದಳು[62]. ಜೇನು ಬೇಟೆಯನ್ನು ಹೆಂಗಸರೂ ಸಹ ಧೈರ್ಯದಿಂದ ಮಾಡುತ್ತಿದ್ದರು ಎನ್ನುವುದನ್ನು ಕಾಣುತ್ತೇವೆ. ಮಲೆನಾಡಿನಲ್ಲಿ ಇರುವೆ ಬೇಟೆಯೂ ನಡೆಯುತ್ತಿತ್ತು ಎನ್ನುವುದಕ್ಕೆ ಕುವೆಂಪುರವರ ಕಾದಂಬರಿಯಲ್ಲಿ ಉಲ್ಲೇಖವಿದೆ. ಕಾನೂರು ಹೆಗ್ಗಡಿತಿಯ ಸೋಮ ಮೊರದೊಡನೆ ಆಲದಮರವನ್ನೇರಿ, ಚಗಳಿಯ ಗೂಡಿದ್ದ ಕೊಂಬೆಗೆ ಹೋಗಿ, ಮೊರವನ್ನು ಗೂಡಿನ ಕೆಳಗಡೆಗೆ ಹಿಡಿದು, ಗೂಡು ಕಟ್ಟಿದ್ದ ಸಣ್ಣ ಕೊಂಬೆಯನ್ನು ಕಡೆಯತೊಡಗಿದನು. ಚಗಳಿಯಿರುವೆಗಳು ಬಳಬಳನೆ ಮೊರಕ್ಕೆ ಉದುರಿದವು. ಅವುಗಳೊಡನೆ ಹರಿದ ಗೂಡಿನಿಂದ ಗೋಧಿಯ ಗಾತ್ರದ ಬಿಳಿಯ ಮೊಟ್ಟೆಗಳು ಬಿದ್ದುವು....[63] ಇರುವೆಗಳಲ್ಲಿ ಚಗಳಿರುವೆಗಳನ್ನು ಉಪ್ಪಿನ ಜೊತೆಗೆ ಸೇರಿಸಿ ಚಟ್ನಿ ಮಾಡಿ ಊಟದ ಜೊತೆ ನೆಂಚಿಕೊಳ್ಳುವುದು ಸಹ ರೂಢಿಯಲ್ಲಿತ್ತು.

ಮಕ್ಕಳಿಂದ–ವಯಸ್ಕರವರೆಗೂ, ಜಾತಿ–ಭೇದವಿಲ್ಲದೆ, ಲಿಂಗ–ತಾರತಮ್ಯವಿಲ್ಲದೆ, ಪ್ರತಿಯೊಬ್ಬರೂ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಭಾಗಿಯಾಗುತ್ತಿದ್ದ ವೃತ್ತಿಯೆಂದರೆ ಬೇಟೆಯಾಗಿತ್ತು. ಮಕ್ಕಳಿಂದ ದೊಡ್ಡವರಾದಿಯಾಗಿ ಬೇಟೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದರು. "ಮಕ್ಕಳಿಗೆ ಹಕ್ಕಿಗೂಡು ಕಂಡುಹಿಡಿಯುವುದು, ಜೇನು ಕೀಳುವುದು, ಗಾಳಹಾಕಿ ಮೀನು ಹಿಡಿಯುವುದು, ಹೊಂಡ ತೋಣಕುವುದು, ಸೆಬೆ ಒಡ್ಡಿ ಕಾಡುಕೋಳಿ, ಚಿಟ್ಟಕೋಳಿ ಹಿಡಿಯುವುದು"[64] ಮುಂತಾದ ಬೇಟೆಗಳಾದರೆ ದೊಡ್ಡವರಿಗೆ ದೊಡ್ಡ ದೊಡ್ಡ ಪ್ರಾಣಿಗಳನ್ನು ಬೇಟೆಯಾಡುವುದು ಸಾಮಾನ್ಯವಾಗಿತ್ತು. ಬೇಟೆಯಾಡಲು ಬಳಸುತ್ತಿದ್ದ ಆಯುಧಗಳು ಅಂದಿನ ದೇಸಿ ಬದುಕಿನ ಭಾಗವಾಗಿದ್ದವು. ಅವುಗಳಲ್ಲಿ ಬತ್ತಿಕೋವಿ, ಭರ್ಜಿ, ಈಟಿ, ಉದ್ದಗತ್ತಿ, ಮೊಲದ ಬಲೆ, ಹಂದಿ ಬಲೆ, ಮಿಗಬಲೆ, ಬಿಲ್ಲುಬಾಣ ಮುಂತಾದ ಸಾಧಾರಣ ಆಯುಧಗಳಾದರೆ, ಶ್ರೀಮಂತ ಜಮೀನುದಾರರು ಕೇಪಿನ ಕೋವಿ ಮತ್ತು ತೋಟಾ' ಕೋವಿಗಳನ್ನು ಬಳಸುತ್ತಿದ್ದರು. ಕೋವಿ ಚೀಲದಲ್ಲಿ ಮದ್ದು, ಚರೆ, ಮಸಿ, ತೋಟಾ ಮುಂತಾದವುಗಳನ್ನು ಜೊತೆಯಲ್ಲಿ ಕೊಂಡೊಯ್ಯುತ್ತಿದ್ದರು.

ಮಲೆನಾಡಿನ ದೈನಂದಿನ ಬದುಕು ಮತ್ತು ಬೇಟೆ ಬೇರ್ಪಡಿಸಲಾರದಂತೆ ಬೆಸೆದುಕೊಂಡಿರುವುದು ಮೇಲಿನ ಉಲ್ಲೇಖಗಳಿಂದ ತಿಳಿದುಬರುತ್ತದೆ. ನೈಸರ್ಗಿಕವಾಗಿ ಬೆಳೆದು

ನಿಂತಿರುವ ದಟ್ಟಡವಿಗಳು, ಗಿರಿಕಂದರಗಳು ಅಸಂಖ್ಯಾತ ಪ್ರಾಣಿ-ಪಕ್ಷಿಗಳಿಗೆ, ಜಲಚರಗಳಿಗೆ ಆಸರೆಯಾಗಿದ್ದು, ಆ ಪರಿಸರದಲ್ಲಿಯೇ ಹುಟ್ಟಿ ಬೆಳೆದು ಬದುಕು ಕಟ್ಟಿಕೊಂಡ ಮಾನವನಿಗೆ ಅವುಗಳ ಚಲನವಲನ, ಬದುಕಿನ ಜಾಡು, ಸ್ವಭಾವ, ವರ್ತನೆ ಮುಂತಾದವುಗಳನ್ನು ಸೂಕ್ಷ್ಮವಾಗಿ ಗ್ರಹಿಸಿ ಬೇಟೆಯಾಡುತ್ತಿದ್ದ ರೀತಿ ಸಹಜವಾಗಿತ್ತು. ಬೇಟೆಯಾಡಿದ ಪ್ರಾಣಿಗಳನ್ನು ಪಾಲು ಮಾಡಿಕೊಳ್ಳುವಾಗ ಬೇಟೆಯಲ್ಲಿ ಪಾಲುಗೊಂಡ ನಾಯಿಗಳಿಗೂ ಪಾಲುಕೊಡುತ್ತಿದ್ದುದು ಮತ್ತು ಬೇಟೆಯಲ್ಲಿ ಬಳಸಿದ ಆಯುಧಗಳಿಗೂ ಸಮಾನವಾಗಿ ಪಾಲು ಮಾಡುತ್ತಿದ್ದ ರೀತಿ ಗಮನಾರ್ಹವಾಗಿದೆ. ಒಟ್ಟಿನಲ್ಲಿ ಬೇಟೆ ಮಲೆನಾಡಿನ ಬದುಕಿನ ಅವಿಭಾಜ್ಯ ಅಂಗವಾಗಿದ್ದು, ಅಲ್ಲಿನ ಜನರ ಧೈರ್ಯ, ಸಾಹಸಕ್ಕೆ, ಸೂಕ್ಷ್ಮ ಸಂವೇದನೆಗಳಿಗೆ ಸಾಕ್ಷಿಯಾಗಿದೆ, ಎಂಬುದನ್ನು ಕುವೆಂಪುರವರ ತಮ್ಮ ಎರಡೂ ಕಾದಂಬರಿಗಳಲ್ಲಿ ಅನೇಕ ನಿದರ್ಶನಗಳಿಂದ ನಿರೂಪಿಸಿದ್ದಾರೆ.

ಥಾಮಸ್ ಹಾರ್ಡಿಯವರು ಚಿತ್ರಿಸಿರುವ ವೆಸೆಕ್ಸ್ ಮತ್ತು ಎಗ್ಡನ್ ಹೀತ್‌ನ ಗ್ರಾಮೀಣ ಪ್ರದೇಶದಲ್ಲಿಯೂ ಸಹ ಬೇಟೆ ಸಾಮಾನ್ಯವಾಗಿತ್ತು ಎನ್ನುವುದನ್ನು ಕಾಣುತ್ತೇವೆ. ಟೆಸ್ಸ್ ಕೆಲಸವನ್ನು ಹುಡುಕುತ್ತಾ ಚಾಕ್-ನೀವ್-ಟನ್ ಕಡೆಗೆ ಹೊರಟು ದಾರಿ ಮಧ್ಯೆ ಒಂದು ರಾತ್ರಿಯನ್ನು ಬೆಟ್ಟಗುಡ್ಡಗಳಿಂದ ಕೂಡಿದ ಪ್ರದೇಶದಲ್ಲಿ ಕಳೆಯಬೇಕಾಗುತ್ತದೆ. ಆ ರಾತ್ರಿ ಒಂದು ಮರದ ಕೆಳಗೆ ಮಲಗಿರುವಾಗ ಏನೋ ವಿಚಿತ್ರ ಶಬ್ದವಾಗುತ್ತದೆ, ಸ್ವಲ್ಪ ಹೊತ್ತಿನಲ್ಲಿಯೇ ಮರದ ಮೇಲಿಂದ ದೊಪ್ಪೆಂದು ಯಾವುದೋ ವಸ್ತು ಬೀಳುತ್ತದೆ. ಟೆಸ್ ಭಯದಿಂದ ನೋಡಿದ ಮೇಲೆ ಅದೊಂದು ಗಾಯಗೊಂಡ ಹಕ್ಕಿಯೆಂದು ತಿಳಿಯುತ್ತದೆ. ಇದರಿಂದ ಆಕೆ ತನ್ನ ಬಾಲ್ಯದ ದಿನಗಳನ್ನು ಮೆಲುಕು ಹಾಕುತ್ತಾ ತನ್ನ ಹಳ್ಳಿಗೆ ಆಗಿನ ಕಾಲದಲ್ಲಿ ಬರುತ್ತಿದ್ದ ಬೇಟೆಗಾರರ ನೆನಪಾಗುತ್ತದೆ. ಬೇಟೆಗಾರರು ಗಿಡ ಮರ ಮತ್ತು ಪೊದೆಗಳಲ್ಲಿ ಅಡಗಿ ಕುಳಿತು ನಿರ್ದಯತೆಯಿಂದ ಹಕ್ಕಿಗಳಿಗೆ ಗುರಿಯಿಟ್ಟು ಹೊಡೆಯುತ್ತಿದ್ದುದನ್ನು ನೆನೆಸಿಕೊಳ್ಳುತ್ತಾಳೆ.[65] ಬೇಟೆಗಾರರು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹಕ್ಕಿಗಳ ಗುಂಪನ್ನು ಅಟ್ಟಿಸಿಕೊಂಡು ಹೋಗುತ್ತಿದ್ದುದು, ಅವುಗಳನ್ನು ಬೇಟೆಯಾಡುತ್ತಿದ್ದುದು ಸಾಮಾನ್ಯವಾಗಿತ್ತು. ಇಲಿ ಬೇಟೆಯ ಉಲ್ಲೇಖವನ್ನು ಟೆಸ್ ಮತ್ತು ಮರಿಯನ್ ಹೊಲದಲ್ಲಿ ಕೆಲಸ ಮಾಡುತ್ತಿದ್ದಾಗ ಹುಲ್ಲಿನ ಬಣವೆಯ ತಳದಲ್ಲಿ ಅಡಗಿಕೊಂಡಿದ್ದ ಇಲಿಗಳನ್ನು ಅಟ್ಟಾಡಿಸಿ ಹಿಡಿಯುವ ದೃಶ್ಯವನ್ನು ಕಾಣಬಹುದು.[66] ಬೇಟೆ ಇಂಗ್ಲೆಂಡಿನ ಗ್ರಾಮೀಣ ಪ್ರದೇಶದಲ್ಲಿಯೂ ಸಹ ರೂಢಿಯಲ್ಲಿತ್ತು ಎನ್ನುವುದನ್ನು ಹಾರ್ಡಿಯವರ ಕಾದಂಬರಿಗಳಲ್ಲಿ ಕಾಣುತ್ತೇವೆ.

ಆದರೆ, ಕುವೆಂಪುರವರ ಕಾದಂಬರಿಗಳಲ್ಲಿ ಬರುವ ಬೇಟೆಯ ವರ್ಣನೆ, ಬೇಟೆಯ ವಿವಿಧ ರೂಪಗಳು, ಹಾರ್ಡಿಯವರ ಕಾದಂಬರಿಗಳಲ್ಲಿ ವಿರಳವಾದರೂ, ಬೇಟೆ ಅಲ್ಲಿನ ದೇಸಿಯ

ಬದುಕಿನಲ್ಲಿ ಅಸ್ತಿತ್ವದಲ್ಲಿತ್ತು ಎನ್ನುವುದರಲ್ಲಿ ಸಂಶಯವಿಲ್ಲ. ಅದು ಆಹಾರಪದ್ಧತಿಯ ಭಾಗವಾಗಿರಬಹುದು, ಹವ್ಯಾಸವಾಗಿರಬಹುದು, ಸಾಹಸ-ಕ್ರೀಡೆಯಾಗಿರಬಹುದು ಒಟ್ಟಿನಲ್ಲಿ ಬೇಟೆ ದೇಸಿ ಬದುಕಿನ ಭಾಗವಾಗಿತ್ತು ಎನ್ನುವುದಕ್ಕೆ ಇಬ್ಬರೂ ಕಾದಂಬರಿಕಾರರ ವರ್ಣನೆಗಳೇ ಸಾಕ್ಷಿಯಾಗಿವೆ.

2.4 ದೇಸಿ ಕುಟುಂಬ ಮತ್ತು ಹಳ್ಳಿಯ ಚಿತ್ರಣ:

ಕುವೆಂಪು ಅವರ ಎರಡೂ ಕಾದಂಬರಿಗಳು ಮಲೆನಾಡಿನ ದೇಸಿ ಸಂಸ್ಕೃತಿಗೆ ಕನ್ನಡಿ ಹಿಡಿದಿವೆ. ಮಲೆನಾಡಿನಲ್ಲಿ ಅಸ್ತಿತ್ವದಲ್ಲಿದ್ದ ಸಾಮಾಜಿಕ, ಸಾಂಸ್ಕೃತಿಕ ಬದುಕನ್ನು ಆ ಬದುಕನ್ನು ನಿರ್ವಹಿಸುತ್ತಿದ್ದ ಪ್ರಮುಖ ಜಾತಿಗಳು, ಊಳಿಗಮಾನ್ಯ ಪದ್ಧತಿ, ದಲಿತರ ಜೀವನ ಚರಿತ್ರೆ ಮುಂತಾದವು ದೇಸಿ ಬದುಕಿನ ಭಾಗವಾಗಿ ಹೊರಹೊಮ್ಮಿವೆ. ಕೃತಿಕಾರರೇ ಹೇಳುವಂತೆ ಕಾನೂರು ಹೆಗ್ಗಡತಿ ಕಾದಂಬರಿಯೊಂದು ಮಲೆನಾಡಿನ ಬಾಳಿನ ಚಿತ್ರಣ[67] ಮಲೆನಾಡಿನ ಹಳ್ಳಿಯೊಂದರ ಚಿತ್ರಣವೇ ಸಮಗ್ರವಾದ ದೇಸಿ ಚಿತ್ರಣವನ್ನು ನೀಡುತ್ತದೆ. ಮಲೆನಾಡಿನಲ್ಲಿ ಹಳ್ಳಿಯೆಂದರೆ ಒಂದೇ ಒಂದು 'ಮನೆ' ಅದು ಗೌಡರ ನಿವಾಸ ಉಳಿದವರೆಲ್ಲರ ನಿವಾಸಗಳಿಗೆ 'ಬಿಡಾರ,''ಗುಡಿ'ಎಂದು ಹೆಸರು.[68] ಗೌಡರ ನಿವಾಸಕ್ಕೆ ಸ್ವಲ್ಪ ದೂರದಲ್ಲೆ ಹಳೇ ಪೈಕದವರ, ಬೇಲರ, ಕುಂಬಾರರ, ಗಟ್ಟದ ಕೆಳಗಿನಿಂದ ಬಂದ ಕೆಲಸಗಾರರ ನಿವಾಸಗಳು, ಪ್ರತಿಯೊಂದು ಹಳ್ಳಿಯೂ ಒಂದೊಂದು ಪುಟ್ಟ ಪ್ರಪಂಚದಂತಿದೆ. ನಾಗರೀಕತೆಯ ಸೋಂಕಿಲ್ಲದ, ವಿದ್ಯೆಯ ಗಂಧಗಾಳಿಯಿಲ್ಲದ ನಿರಕ್ಷರ ಮಣ್ಣಿನ ಮಕ್ಕಳ ಬದುಕು ಮತ್ತು ಅವರ ಪ್ರಕೃತಿಯೊಡಗಿನ ಸಹಜ ಸಂಬಂಧಗಳು ದೇಸಿಯತೆಯ ಸೊಬಗನ್ನು ಸೂಸುತ್ತವೆ. ಮಲೆನಾಡಿಗರಿಗೆ ತಾವು ಹುಟ್ಟಿ ಬೆಳೆದ ಹಳ್ಳಿಯೇ ಒಂದು ಪ್ರಪಂಚವಾಗಿತ್ತು, ಅವರ ಇಡೀ ಬದುಕಿನ ಭಾಗವೆಲ್ಲ ಕೆಲವೇ ಕೆಲವು ಮೈಲುಗಳಿಗೆ ಸೀಮಿತವಾಗಿತ್ತು. ತಮ್ಮ ನೆರೆಯ ಹಳ್ಳಿಗಳೇ ಪರದೇಶವಾಗಿದ್ದವು. ಬೇಲರ ಬೈರ ಮಾರ್ಕನನ್ನು "ನಿಮ್ಮ ಮನೆ ಎಲ್ಲಿ? 'ನಿಮ್ಮ ಊರು'! ಎಂದನು, 'ತೀರ್ಥಹಳ್ಳಿ'!.... ತೀರ್ಥಹಳ್ಳಿಯ ಪೇಟೆಯೇ ಬಹುದೂರದ ಮಹಾನಗರವಾಗಿದ್ದ ಬೈರ ಓಹೋಹೋ ಸುಮಾರು ದೂರದಿಂದ ಬಂದೀರಿ?"[69] ಎನ್ನುವಾಗ ಮಲೆನಾಡಿನ ಜನರಿಗೆ ಕೆಲವು ಮೈಲಿ ದೂರದ ಕೊಪ್ಪ, ಸಿಂಗೇರಿ(ಶೃಂಗೇರಿ)ಗಳೇ ದೂರದ ದೇಶಗಳಾಗಿದ್ದವು. ಗುತ್ತಿ ತಿಮ್ಮಿಯೊಡನೆ ತುಂಗಾನದಿಯನ್ನು ದಾಟಲು ದೋಣಿಗಾಗಿ ಕಾಯುತ್ತಿದ್ದವನಿಗೆ ಪರ ಊರು ಎಂದರೆ ಪರದೇಶವಾಗಿತು: "ಮುತ್ತೂರು ಸೀಮೆಯೂ ಕೂಡ ದೇಸಾಂತ್ರವಾಗಿದ್ದ ಗುತ್ತಿಯ ಬದುಕೆಲ್ಲ ಇದುವರೆಗೆ ಸಿಂಬಾವಿ, ಮೇಗರವಳ್ಳಿ, ಹಳೆಮನೆ, ಹೂವಳ್ಳಿ,

ಕೋಣೂರು, ಬೆಟ್ಟಳ್ಳಿಗಳಿಗೇ ಸಿಮಿತವಾಗಿದ್ದುದರಿಂದ..... ಒಮ್ಮೆಯಾದರೂ ಅವನು ಎಳ್ಳಾಮಾಸೆಯ ಜಾತ್ರೆಗಾದರೂ ತೀರ್ಥಹಳ್ಳಿಯಂತಹ 'ದೂರದೇಶಕ್ಕೆ'ಬಂದವನಲ್ಲ."[70] ಇದರಿಂದ ಮಲೆನಾಡಿನ ದೇಸಿಯ ಬದುಕು ಕೆಲವೇ ಮೈಲುಗಳ ಅಂತರಕ್ಕೆ ಸೀಮಿತವಾಗಿತ್ತು ಎನ್ನುವುದನ್ನು ಕಾಣಬಹುದು.

ಕುವೆಂಪುರವರ ಮಲೆನಾಡಿನ ದೇಸಿ ಬದುಕಿನ ಚಿತ್ರಣವನ್ನು ಹಾರ್ಡಿಯವರ ವೆಸೆಕ್ಸ್‌ನ ಗ್ರಾಮೀಣ ಭಾಗದಲ್ಲಿ ಕಾಣುತ್ತೇವೆ. ಎಗ್ಡನ್‌ಹೀತ್ ಜನರಿಗೆ ತಮ್ಮ ಹಳ್ಳಿಯೇ ಒಂದು ಪ್ರಪಂಚವಾಗಿತ್ತು. ಟೆಸ್‌ಳಿಗೆ ತಾನು ಹುಟ್ಟಿ ಬೆಳೆದ ಮ್ಯಾರ್ಲಾಟನಿಂದ ಕೆಲಸವನ್ನರಸಿ ವೆಸೆಕ್ಸ್‌ನ ದಕ್ಷಿಣ ಭಾಗಕ್ಕೆ ಹೋಗುವಾಗ ಬೇರೆ ದೇಶಕ್ಕೆ ಹೋದ ಅನುಭವವಾಗುತ್ತದೆ. ಸೀಮಿತ ಪ್ರದೇಶದ ಮುಗ್ಧ ಜನರಿಗೆ ಕೆಲವೇ ಮೈಲುಗಳ ಪ್ರದೇಶಗಳೇ ಪುಟ್ಟ ಪ್ರಪಂಚಗಳಾಗಿದ್ದವು. ವೆಸೆಕ್ಸ್‌ನ ಹಳ್ಳಿಗಮಾರರಿಗೆ ಪಾದ್ರಿಯ(Parish) ಪ್ರದೇಶವೇ ಒಂದು ಪರಗಣವಾಗಿಯೂ (county), ಒಂದು ಪರಗಣವೇ ಒಂದು ಸಾಮ್ರಾಜ್ಯವಾಗಿ ಕಾಣುತ್ತಿತ್ತು.[71] ಇದರಿಂದ ಕುವೆಂಪುರವರ ಮಲೆನಾಡಿನ ಗ್ರಾಮೀಣಪ್ರದೇಶಗಳ ಜನರ ಬದುಕಿಗೂ ಹಾರ್ಡಿಯವರ ಗ್ರಾಮೀಣ ಜನರ ಬದುಕಿಗೂ ಯಾವ ವ್ಯತ್ಯಾಸವೂ ಕಂಡು ಬರುವುದಿಲ್ಲ ಬದಲಾಗಿ ಸಾಮ್ಯತೆಯಿಂದ ಕೂಡಿದ್ದುದನ್ನು ಕಾಣಬಹುದು.

ಮಲೆನಾಡಿನಲ್ಲಿ ಒಂದು ಹಳ್ಳಿಯೇ ಒಂದು ದೇಸಿ ಪ್ರಪಂಚವಾದರೆ, ಆ ಹಳ್ಳಿಯಲ್ಲಿ ಒಂದು ಮನೆಯ ಚಿತ್ರಣ ಸಮಗ್ರವಾದ ದೇಸಿಯತೆಗೆ ಸಾಕ್ಷಿಯಾಗಿದೆ: "ಕಾನೂರು ಚಂದ್ರಯ್ಯಗೌಡರ ಮಂಗಳೂರು ಹೆಂಚಿನ ದೊಡ್ಡಮನೆ ಕಾಡು ಕಿಕ್ಕಿರಿದ ಬೆಟ್ಟಗುಡ್ಡಗಳ ತಪ್ಪಲಿನಲ್ಲಿ, ಮಹಾವಟವೃಕ್ಷದ ಬುಡದಲ್ಲಿ ಎದ್ದಿರುವ ಹುತ್ತದ ನೆನಪು ತರುವಂತೆ ಏಕಾಂತವಾಗಿತ್ತು. ಮನೆಯ ಪೂರ್ವೋತ್ತರ ದಿಕ್ಕುಗಳಲ್ಲಂತೂ ಕಾಡುಬೆಟ್ಟಗಳ ಹೆಗ್ಗೋಡೆ ಭಯಂಕರ ಸಮೀಪವಾಗಿ ಮೇಲೆದ್ದಿತ್ತು. ಪಶ್ಚಿಮ ದಕ್ಷಿಣ ದಿಕ್ಕುಗಳಲ್ಲಿ ಅವರ ಗದ್ದೆ ತೋಟಗಳಲ್ಲಿ ಒಕ್ಕಲು ಮತ್ತು ಆಳುಗಳ ಹುಲ್ಲುಮನೆ ಮತ್ತು ಬಿಡಾರಗಳೂ ಕಣ, ಕೊಟ್ಟಿಗೆ, ಹಟ್ಟಿಗಳೂ ಇದ್ದವು. ಮನೆ ಹಳೆಯ ಕಾಲದ್ದು, ರಚನೆಯಲ್ಲಿ ಎಲ್ಲೆಲ್ಲಿ ನೋಡಿದರೂ ಭೀಮತೆ ಪ್ರಧಾನವಾಗಿತ್ತು. ಗೋಡೆ ಕಂಬಗಳಿಂದ ಹಿಡಿದು ತೊಲೆ ಪಕಾಸಿ ರೀಪುಗಳವರೆಗೂ ಸ್ಥೂಲತೆ ತೋರುತ್ತಿತ್ತು....ಅಂಗಳದ ಮೂಲೆಯಲ್ಲಿ ಅಡಕೆ ಒಲೆ, ಪಕ್ಕದಲ್ಲಿ ಮಣ್ಣಾದ ನೇಗಿಲು, ಜಗುಲಿಯ ಮೇಲೆ ಒಂದು ಹೆಗ್ಗಡಿಯಾರದ ಸುತ್ತಲೂ ಕೆಲವು ತಿರುಪತಿಯ ಬಣ್ಣದ ಚಿತ್ರಗಳಿದ್ದವು."[72] ಈ ವಿವರಣೆಗಳು ಶ್ರೀಮಂತ ಜಮೀನುದಾರರ ವಿಶಾಲವಾದ, ಹಳೆಯಕಾಲದ ನವನಾಗರೀಕತೆಯ ಸ್ಪರ್ಶವಿಲ್ಲದ ಮನೆಯ ಚಿತ್ರಣವಾಗಿತ್ತು. ಆ ಮನೆಯಲ್ಲಿ ವಿವಿಧ ತಳಿಯ ನಾಯಿಗಳು, ಕೋಳಿಗಳು ದನ, ಕರು, ಬೆಕ್ಕು, ಹಂದಿ ಮುಂತಾದ ಪ್ರಾಣಿಗಳೆಲ್ಲ ಆಶ್ರಯ ಪಡೆದು ಮನೆಯ ಸದಸ್ಯರಂತೆ ಸಹಜೀವನ ನಡೆಸುತ್ತಿದ್ದವು.

ಕಾನೂರಿನ ಮನೆಗೆ ಸಂಬಂಧಿಸಿದ ಮತ್ತೊಂದು ವರ್ಣನೆ ಹೀಗಿದೆ: "ಮನೆಯ ಒಂದುಕಡೆ ಗೋಡೆಗೆ ಆನಿಸಿ ನಿಲ್ಲಿಸಿರುವ ಒಂದೆರಡು ಒನಕೆಗಳು ಬಳಿಯಲ್ಲಿ ಕಲ್ಲಿನ ಒರಳು ಮತ್ತು ಕಡೆಗುಂಡು. ಒಂದು ಬೀಸುವ ಕಲ್ಲು, ಮೆಟ್ಟುಗತ್ತಿ, ನೀರು ತುಂಬಿದ ತಾಮ್ರದ ಹಂಡೆ ಇಂತಹ ಮನೆಯಲ್ಲಿ ಹಿಂದೆ ಮೂವತ್ತೈದರಿಂದ ನಲವತ್ತೈದು ಜನ ಒಟ್ಟಿಗೆ ವಾಸವಿದ್ದರು ಎನ್ನುವುದು ಅವಿಭಕ್ತ ಕುಟುಂಬ ದೇಸಿ ಬದುಕಿನ ಭಾಗವಾಗಿತ್ತು ಎನ್ನುವುದನ್ನು ಕಾಣುತ್ತೇವೆ. ಕಾನೂರಿನ ಮನೆಯ ಒಳಗಿನ ಚಿತ್ರಣದಲ್ಲಿ ಬೆಳಗಾಗಿದ್ದರೂ ಅಡುಗೆ ಮನೆಗೆ ಇನ್ನು ಮಬ್ಬು ತಪ್ಪಿರಲಿಲ್ಲ. ಏಕೆಂದರೆ ಅದಕ್ಕಿದ್ದುದು ಒಲೆಯ ಮೇಲುಗಡೆ ಒಂದೇ ಕಿಟಕಿ. ಆದರೂ ಪಾಕಶಾಲೆಯ ರೂಪು ರೇಖೆ ತಕ್ಕಮಟ್ಟಿಗೆ ಪ್ರದರ್ಶಿತವಾಗಿತ್ತು. ಬಾಗುಮರಿಗೆ, ಉಪ್ಪಿನಮರಿಗೆ, ಕೈಯುದ್ದದ ಹಿತ್ತಾಳೆಯ ತಂಬಾಳೆ, ಸಿಕ್ಕದ ಮೇಲೆ ಮೆಣಸಿನಕಾಯಿಯ ಬುಟ್ಟಿ, ಮೊಸರು ಗಡಿಗೆ, ಮಜ್ಜಿಗೆ ಚರಿಗೆ, ಕಡೆಗೋಲು ಕಂಬ, ತುಪ್ಪ ಬೆಣ್ಣೆ ಮೊದಲಾದವುಗಳನ್ನು ಇಟ್ಟು ಬೀಗ ಹಾಕಿದ ಒಂದು ಕಲಬಿ, ಮಣೆಯ ರಾಶಿ, ಅಡುಗೆ ಮನೆಯ ಒಂದು ಅನಿವಾರ್ಯವಾದ ಅಂಗವಾಗಿ ಒಲೆಯ ಪಕ್ಕದ ಬೆಚ್ಚನೆಯ ಮೂಲೆಯಲ್ಲಿ ತನ್ನೆರಡು ಮರಿಗಳೊಡನೆ ಪವಡಿಸಿದ್ದ ಬೆಕ್ಕು.... ಅದರ ವಾತಾವರಣ ಅಷ್ಟೊಂದು ಪೂರ್ವಿಕತೆಯಿಂದ ತುಂಬಿಕೊಂಡಿತ್ತು!"[73]

ಇಂತಹ ಪುರಾತನವಾದ ಮನೆಯಲ್ಲಿ "ಅನೇಕ ತಲೆಮಾರುಗಳು ತಿಂದುಂಡು ಹೋಗಿದ್ದವು, ಅ ಮೂರಡಿಯ ಎತ್ತರದ ಕಡೆಗೋಲು ಕಂಬವು ಶತಮಾನಗಳಿಗೆ ಸಾಕ್ಷಿಯಾಗಿ ನಿಂತಿತ್ತು. ಎಷ್ಟು ಜನ ಹೆಣ್ಣುಗಳು ಅದರ ಮುಂದೆ ಕುಳಿತು ಪ್ರಾತಃ ಕಾಲದಲ್ಲಿ ಮೊಸರು ಕಡೆದಿದ್ದಾರೆ! ಅದಕ್ಕೆ ಎಷ್ಟು ಕೋಮಲ ಕರಗಳ ಸ್ಪರ್ಶವಾಗಿದೆ! ಎಷ್ಟು ಕಂಠಗಳು, ಎಷ್ಟು ರೂಪಗಳು, ಎಷ್ಟು ವಿಧವಾದ ಸಂಭಾಷಣೆಗಳು ಎಷ್ಟು ಕ್ಷುದ್ರ ಕಲಹಗಳು ಅದಕ್ಕೆ ತಿಳಿದಿವೆ!"[74] ಹೀಗೆ ಕಾನೂರಿನ ಮನೆಯ ವಿಶಾಲತೆ, ಅಡುಗೆಮನೆಯ ಚಿತ್ರಣ, ವಿವಿಧ ರೂಪದ ಪರಿಕರಗಳು ದೇಸಿ ಸಂಸ್ಕೃತಿಯ ಪ್ರತೀಕವಾಗಿದೆ. ಕಾನೂರಿನ ಮನೆ ಹಿಸ್ಸೆಯಾಗುವ ಸಂದರ್ಭದಲ್ಲಿ ಅಂದಿನ ಕಾಲದಲ್ಲಿ ಬಳಕೆಯಲ್ಲಿದ್ದ ಒಡವೆಗಳಾದ ಉಂಗುರ, ಅಡ್ಡಿಕೆ, ಡಾಬು, ಕಾಸಿನಸರ, ಕಟ್ಟಾಣಿ, ಹೊಂಬಳೆ ಮುಂತಾದವುಗಳು ಶ್ರೀಮಂತಿಕೆಯ ಸಂಕೇತವಾಗಿದ್ದು ದೇಸಿ ಸಂಸ್ಕೃತಿಯ ಭಾಗವಾಗಿದ್ದವು, ಬೆಲೆಬಾಳುವ ವಸ್ತುಗಳನ್ನು ಭಾಗಮಾಡಿಕೊಂಡ ಹಾಗೆ ಕಾನೂರಿನ ಮನೆಯಲ್ಲಿದ್ದ ಇನ್ನಿತರ ದಿನಬಳಕೆಯ ವಸ್ತುಗಳಾದ "ಹಳೆ ಪೊರಕೆಗಳು, ಕರಿ ಮಡಕೆಗಳು, ಮೊರಗಳು, ಸಾರಣೆಗಳು, ಸಿಕ್ಕಗಳು, ಸೌಟುಗಳು, ಒನಕೆಗಳು, ಹಾರೆ, ಸವೆಗೋಲುಗಳು, ಹೆಡಗೆಗಳು, ಬುಟ್ಟಿಗಳು, ತಾಮ್ರ ಹಿತ್ತಾಳೆಯ ಪಾತ್ರೆಗಳು, ಜೋಮಾಲೆ ಹಾಕಿದ್ದ ಇರಿಕೆಗಳು, ಹಪ್ಪಳ ಸಂಡಿಗೆ, ಉಪ್ಪಿನಕಾಯಿಗಳನ್ನ ಒಣ ಹಾಕುವ ಹಾಸುವ ವಸ್ತುಗಳು, ಡಬ್ಬಗಳು....[75]

ಮೊದಲಾದವು ಗ್ರಾಮೀಣ ಬದುಕಿನ ಭಾಗವಾಗಿದ್ದು ದೇಸಿಯತೆಗೆ ಕನ್ನಡಿ ಹಿಡಿದಿವೆ. ಕಾನೂರಿನ ಮನೆಯೆಂದರೆ ದೇಸಿ ಬದುಕಿನ ವಸ್ತುಸಂಗ್ರಹಾಲಯವಿದ್ದಂತೆ, ಅಸಂಖ್ಯಾತ ದಿನ ಬಳಕೆಯ ವಸ್ತುಗಳು ದೇಸಿ ಬದುಕಿನ ಸಮಗ್ರ ಚಿತ್ರಣವನ್ನು ನಮ್ಮ ಮುಂದೆ ತೆರೆದಿಡುತ್ತವೆ.

ಮಲೆನಾಡಿನ ಶ್ರೀಮಂತ ಜಮೀನುದಾರರು ಮತ್ತು ಅಗ್ರಹಾರಗಳಲ್ಲಿ ವಾಸಿಸುವ ಬ್ರಾಹ್ಮಣರು ಮಂಗಳೂರು ಹೆಂಚಿನ ಮನೆಗಳಲ್ಲಿ ವಾಸಿಸಿದರೆ, ಕೂಲಿಯಾಳುಗಳು, ಜೀತದಾಳುಗಳು, ಹಳೇಪೈಕದವರು, ದಲಿತರು ಮತ್ತು ಗಟ್ಟದ ಕೆಳಗಿನಿಂದ ಬಂದ ಕೂಲಿಯಾಳುಗಳು ಬಿಡಾರಗಳಲ್ಲಿ ವಾಸಿಸುತ್ತಿದ್ದರು. ಮುತ್ತಳ್ಳಿಯ ಕುಂಬಾರ ನಂಜನ ಗುಡಿಸಿಲಿನ ವರ್ಣನೆ ಅವನ ಅಂತಸ್ತಿಗೆ ಸಾಕ್ಷಿಯಾಗಿತ್ತು; "ಹುಲ್ಲುಗುಡಿಸಿಲಿನ ಕಿರುಬಾಗಿಲಿನಲ್ಲಿ ಒಳಗರ್ಧ ಹೊರಗರ್ಧ ದೇಹ ಮಾಡಿಕೊಂಡು ಹೊಸ್ತಿಲ ಮೇಲೆ ಒಂದು ಕಾಲಿಟ್ಟು, ಬಾಗಿಲ ಎರಡು ನಿಲುವುಗಳನ್ನು ಎರಡು ಕೈಗಳಿಂದಲೂ ಹಿಡಿದು ಬಿಲ್ಲಿನಂತೆ ಬಾಗಿ ನಿಂತಿದ್ದ ನಂಜನು ಹಾಕಿಕೊಂಡಿದ್ದ ತಾಂಬೂಲದ ಕೆಂಪು ಉಗುಳನ್ನು ಬಾಗಿಲಿನ ಒಂದು ಹೊರಭಾಗದ ಪಕ್ಕಕ್ಕೆ ಬಾಣದಂತೆ ಪಿಚಕ್ಕನೆ ಉಗುಳಿ, ಗಂಟಲು ಸರಿಮಾಡಿಕೊಳ್ಳಲೆಂಬಂತೆ ಕೆಮ್ಮುತ್ತ, ಆಮೆಯ ತಲೆ ಅದರ ದೇಹದಲ್ಲಿ ಹುದುಗುವಂತೆ ಗುಡಿಸಿಲೊಳಗೆ ಹೋದನು. ಹುಲ್ಲು, ತರಗು, ಕಬ್ಬಿನ ಸಿಪ್ಪೆ, ಮಡಕೆ ಚೂರು, ಕಂಬಳಿ ಚಿಂದಿ ಮೊದಲಾದ ಪದಾರ್ಥ ಮತ್ತು ಪದಾರ್ಥ ಶೇಷಗಳು ಅಸ್ತವ್ಯಸ್ತವಾಗಿ ಹರಡಿದ್ದ ಆ ಗುಡಿಸಲಿನ ಅಂಗಳದಲ್ಲಿ...."[76] ಎನ್ನುವುದು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅತ್ಯಂತ ಕೆಳಸ್ತರದ ಜನರ ಜೀವನವನ್ನು ನಂಜನ ಗುಡಿಸಲಿನ ವರ್ಣನೆ ಪ್ರತಿನಿಧಿಸುತ್ತವೆ. ಪ್ರಾಣಿಗಳ ವಾಸಸ್ಥಳಗಳಿಗಿಂತಲೂ ಅಸಹ್ಯಕರವಾದ ಅವರ ಬಿಡಾರಗಳು ಅಥವಾ ಗುಡಿಸಲುಗಳು ದೇಸಿ ಬದುಕಿನ ವಿಭಿನ್ನ ಸ್ತರಗಳನ್ನು ಅನಾವರಣಗೊಳಿಸುತ್ತವೆ.

ಹಾರ್ಡಿಯವರ ಕಾದಂಬರಿಗಳಲ್ಲಿಯೂ ದೇಸಿಯತೆಯ ಕೇಂದ್ರಸ್ಥಾನಗಳೆಂದರೆ 'ಹಳ್ಳಿಮನೆಗಳು' ಶ್ರೀಮಂತ ಜಮೀನುದಾರರು ದೊಡ್ಡ ಮನೆಗಳಲ್ಲಿ ಅಥವಾ ಮ್ಯಾನಶನ್‌ಗಳಲ್ಲಿ ವಾಸಿಸುತ್ತಿದ್ದರು, ಆದರೆ ನಿಜವಾದ ದೇಸಿಯ ಬದುಕಿನ ಚಿತ್ರಣವಿರುವುದು ಹಳ್ಳಿಯ ಮುಗ್ಧ ನಿರಕ್ಷರ ಕೂಲಿ ಕಾರ್ಮಿಕರು ವಾಸವಿದ್ದುದ ಗುಡಿಸಲು ಅಥವಾ ಕಾಟೇಜ್‌ಗಳಲ್ಲಿ ಎನ್ನಬಹುದು. ಕುವೆಂಪುರವರ ಕಾದಂಬರಿಗಳಲ್ಲಿ ಬರುವ ಮನೆಯ ವರ್ಣನೆಯನ್ನು ಹಾರ್ಡಿಯವರ ಕೃತಿಗಳಲ್ಲಿ ಕಾಣಲಾಗದಿದ್ದರೂ, ಕಾಟೇಜ್‌ನಲ್ಲಿ ವಾಸಿಸುವ ಬಡವರ ಬದುಕಿನ ಚಿತ್ರಣವನ್ನು ಕಾಣಬಹುದು. ಟೆಸ್ ಹುಟ್ಟಿ ಬೆಳೆದ ಚಿಕ್ಕ ಮನೆ ಅಥವಾ ಗುಡಿಸಲು ಎಂಟು ಮಂದಿಗೆ ಆಶ್ರಯ ನೀಡಿತ್ತು[77]. ಹುಲ್ಲುಗರಿಯಿಂದ ಹೊದಿಸಿದ ಗುಡಿಸಲಾದರೂ ಕುವೆಂಪುರವರ ಕಾದಂಬರಿಯಲ್ಲಿ ಬರುವ

ಬಿಡಾರಕ್ಕಿಂತ ಉತ್ತಮವಾಗಿತ್ತು ಎನ್ನಬಹುದು. ಸಾಮಾನ್ಯವಾಗಿ ಈ ಗುಡಿಸಲುಗಳು ಉಪ್ಪರಿಗೆಯನ್ನು ಹೊಂದಿದ್ದವು. ತಳಮನೆಯಲ್ಲಿ ಅಡಿಗೆಮನೆ ಮತ್ತು ಹಜಾರಗಳಿದ್ದರೆ ಉಪ್ಪರಿಗೆಯಲ್ಲಿ ಮಲಗುವ ಕೊಠಡಿ ಮತ್ತು ಓದುವ ಕೋಣೆಗಳಿರುತ್ತಿದ್ದವು. ಇಂತಹ ಮಾಳಿಗೆ ಮನೆಗಳಲ್ಲಿ ಮಧ್ಯಮ ಮತ್ತು ಕೆಳ ಮಧ್ಯಮ ವರ್ಗದವರು ವಾಸಿಸುತ್ತಿದ್ದರು. 'ದಿ ರಿಟರ್ನ್ ಆಫ್ ದಿ ನೇಟಿವ್' ಕಾದಂಬರಿಯ ಕ್ಲಿಮ್ ಯೋಬ್ರೈಟ್, ಕ್ಯಾಪ್ಟನ್ ವೈ, ವೈಲ್ಡೀವ್ ಮುಂತಾದವರು ಇಂತಹ ಮನೆಗಳಲ್ಲಿ ವಾಸವಿದ್ದುದನ್ನು ಕಾಣುತ್ತೇವೆ. ಶ್ರೀಮತಿ ಯೋಬ್ರೈಟ್ ತನ್ನ ಮಗ ಕ್ಲಿಮ್ ಪ್ಯಾರಿಸ್ಸಿನಿಂದ ಬಂದ ಸಂಭ್ರಮದಲ್ಲಿ ಔತಣಕೂಟವನ್ನು ತನ್ನ ವಿಶಾಲವಾದ ಮನೆಯಲ್ಲಿಯೇ ಏರ್ಪಡಿಸುತ್ತಾಳೆ. ಕೆಳಮನೆಯಲ್ಲಿ ನೃತ್ಯ-ನಾಟಕ ಮಾಡಲು, ಕಲಾವಿದರು ಸ್ನೇಹಿತರು ಕುಳಿತುಕೊಳ್ಳಲು ವಿಶಾಲವಾದ ಸ್ಥಳವಿದ್ದುದನ್ನು ಉಪ್ಪರಿಗೆಯಲ್ಲಿ ತೋಮಸಿನಳ ಕೊಠಡಿ ಮತ್ತು ಕ್ಲಿಮ್‌ನ ಓದುವ ಕೊಠಡಿಗಳಿರುವುದನ್ನು ಕಾಣುತ್ತೇವೆ.[78]

ಹಾರ್ಡಿಯವರ ಎಗ್ಡನ್ ಹೀತ್‌ನಲ್ಲಿ ವಾಸಮಾಡುವ ಕೂಲಿ ಕಾರ್ಮಿಕರು ಮತ್ತು ಸಣ್ಣಪುಟ್ಟ ವೃತ್ತಿಗಳನ್ನು ಮಾಡುವ ಕೆಳವರ್ಗದವರು ಸಾಮಾನ್ಯವಾಗಿ ಸಣ್ಣಪುಟ್ಟ ಗುಡಿಸಲುಗಳಲ್ಲಿ ವಾಸಮಾಡುತ್ತಿದ್ದರು. ಸೂಸನ್ ನನ್‌ಸಚ್, ಕ್ಯಾಂಟಲ್ ತಾತ, ಹಂಫ್ರಿ, ಕ್ರಿಶ್ಚಿಯನ್ ಮುಂತಾದವರು ವಾಸಿಸುತ್ತಿದ್ದುದು ಸಣ್ಣ ಬಿಡಾರಗಳಲ್ಲಿ. ಆದರೆ ಕುವೆಂಪುರವರ ಕಾದಂಬರಿಗಳಲ್ಲಿ ಬರುವ ದಲಿತರ ಬಿಡಾರಗಳಿಗಿಂತ ಹಾರ್ಡಿಯವರ ಕಾದಂಬರಿಗಳಲ್ಲಿ ವರ್ಣಿತವಾಗಿರುವ ಗುಡಿಸಲುಗಳು ಅಥವಾ ಬಿಡಾರಗಳು ತಕ್ಕಮಟ್ಟಿಗೆ ವಾಸಯೋಗ್ಯವಾಗಿದ್ದವು ಎನ್ನಬಹುದು.

ಅವಿಭಕ್ತ ಕುಟುಂಬಗಳು: ದೇಸಿ ಪರಿಸರದಲ್ಲಿ ಮನೆ ದೊಡ್ಡದಾದರೇನು ಚಿಕ್ಕದಾದರೇನು, ಮನೆ ಅಥವಾ ಗುಡಿಸಲುಗಳಲ್ಲಿ ಹುಟ್ಟಿ ಬೆಳೆದು ಬದುಕು ಕಟ್ಟಿಕೊಂಡವರ ಸಂಬಂಧಗಳು ಮುಖ್ಯವಾಗುತ್ತವೆ. ಸಾಮಾನ್ಯವಾಗಿ ಅವಿಭಕ್ತ ಕುಟುಂಬಗಳು ದೇಸಿ ಬದುಕಿನ ಗುಣಲಕ್ಷಣಗಳನ್ನು ಹೊಂದಿರುವುದನ್ನು ಕಾಣುತ್ತೇವೆ. ಕುಟುಂಬದ ಸದಸ್ಯರ ಅನ್ಯೋನ್ಯ ಸಂಬಂಧಗಳು, ಪರಸ್ಪರ ಸಹಕಾರ, ಪ್ರೀತಿ, ವಾತ್ಸಲ್ಯ, ಔದಾರ್ಯ ಮುಂತಾದ ಗುಣಗಳನ್ನು ದೇಸಿಯ ಅವಿಭಕ್ತ ಕುಟುಂಬಗಳಲ್ಲಿ ಮಾತ್ರ ಕಾಣಬಹುದು. ಇಂತಹ ಕೌಟುಂಬಿಕ ಚಿತ್ರಣವನ್ನು ಇಬ್ಬರೂ ಕಾದಂಬರಿಕಾರರು ತಮ್ಮ ಕೃತಿಗಳಲ್ಲಿ ಚಿತ್ರಿಸುವ ಮೂಲಕ ದೇಸಿಯ ಬದುಕಿನ ಶ್ರೇಷ್ಠತೆಯನ್ನು ಉದಾತ್ತಗೊಳಿಸಿದ್ದಾರೆ. ಹಳೇಮನೆ ಸುಬ್ಬಣ್ಣಹೆಗ್ಗಡೆಯವರ ಹಿರಿಯ ಮಗ ದೊಡ್ಡಣ್ಣಹೆಗ್ಗಡೆ ಬಗ್ಗೆ ಕೃತಿಕಾರರು ಹೇಳುವ ಮಾತುಗಳು ಇಲ್ಲಿ ಪ್ರಸ್ತುತವೆನಿಸುತ್ತವೆ. "ರಂಗಮ್ಮ ಮತ್ತು

ದೊಡ್ಡಣ್ಣಹೆಗ್ಗಡೆಯವರ ದಾಂಪತ್ಯ ಜೀವನ ಆ ಹತ್ತೊಂಬತ್ತನೆ ಶತಮಾನದ ತುದಿಗಾಲಲ್ಲಿ ಮಲೆನಾಡಿನ ಶ್ರೀಮಂತ ಅವಿಭಕ್ತ ಕುಟುಂಬದಲ್ಲಿ ಸಾಗುತ್ತಿದ್ದ ಇತರ ಅನೇಕರ ದಾಂಪತ್ಯ ಜೀವನದಂತೆ ಉಬ್ಬು ತಗ್ಗು, ಏರು ಇಳಿತಗಳಿಂದ ಕೂಡಿ ಸಾಗಿತ್ತು, ತಕ್ಕ ಮಟ್ಟಿಗೆ ಸುಖಮಯವಾಗಿ, ನೆಮ್ಮದಿಯಿಂದಲೇ ಎಂದು ಹೇಳಬಹುದಾದಷ್ಟು."[79] ತಿರುಪತಿಯಾತ್ರೆಗೆ ಹೋದ ದೊಡ್ಡಣ್ಣಹೆಗ್ಗಡೆ ಮತ್ತೆ ಮರಳಿ ಬರುವುದಿಲ್ಲ, ಅದೇ ಕೊರಗಿನಲ್ಲಿ ತಂದೆ ಸುಬ್ಬಣ್ಣಹೆಗ್ಗಡೆ, ಹೆಂಡತಿ ರಂಗಮ್ಮ ಕೊರಗಿ ಕೊರಗಿ ಸಾಯುವುದನ್ನು ಕಾಣುತ್ತೇವೆ.

ಹಳೆಮನೆ ಸುಬ್ಬಣ್ಣಹೆಗ್ಗಡೆಯವರಂತೆಯೇ ಮಲೆನಾಡಿನಲ್ಲಿ ಇನ್ನೂ ಅನೇಕ ಅವಿಭಕ್ತ ಕುಟುಂಬಗಳನ್ನು ಕಾಣುತ್ತೇವೆ. ಅವುಗಳಲ್ಲಿ ಕೋಣೂರು ರಂಗಪ್ಪಗೌಡ ಮತ್ತು ಮುಕುಂದಯ್ಯರ ಮನೆ, ಬೆಟ್ಟಳ್ಳಿ ಕಲ್ಲಯ್ಯಗೌಡರ ಮನೆ, ಸಿಂಬಾವಿ ಭರಮೈಹೆಗ್ಗಡೆಯವರ ಮನೆಗಳು ಶ್ರೀಮಂತ ಅವಿಭಕ್ತ ಕುಟುಂಬಗಳಾಗಿದ್ದವು. ಕಾನೂರಿನ ಚಂದ್ರಯ್ಯಗೌಡರ ಮನೆ ಮೊದಲು ಅವಿಭಕ್ತ ಕುಟುಂಬವಾಗಿತ್ತು. ಆ ಮನೆಯಲ್ಲಿ ಮೂವತ್ತು ನಲವತ್ತು ಮಂದಿ ನಿರಾತಂಕವಾಗಿ ವಾಸಮಾಡಬಹುದಾಗಿತ್ತು. "ಈ ಕಥೆಯ ಕಾಲಕ್ಕೆ ಪೂರ್ವದಲ್ಲಿ ಗಂಡಸರು, ಹೆಂಗಸರು, ಮಕ್ಕಳು ಎಲ್ಲಾ ಇಪ್ಪತ್ತೈದು ಮೂವತ್ತು ಮಂದಿ ಮನೆಯವರೂ, ಹತ್ತು ಹದಿನೈದು ಜನ ಸೇವಕರೂ ಒಟ್ಟೂ ನಲವತ್ತು ನಲವತ್ತೈದು ಜನಗಳ ಮಟ್ಟಿಗೆ ಮನೆಯನ್ನೆಲ್ಲ ತುಂಬಿರುತ್ತಿದ್ದರಂತೆ, ಒಟ್ಟು ಕುಟುಂಬವಾಗಿದ್ದರಿಂದ ಹಾಗಿದ್ದುದರಲ್ಲೇನು ಆಶ್ಚರ್ಯವಿಲ್ಲ."[80] ಹೀಗೆ ಒಂದೇ ಮನೆಯಲ್ಲಿ ಎರಡು ಮೂರು ತಲೆಮಾರುಗಳ ಜನರಲ್ಲ ಒಟ್ಟಾಗಿ ಬಾಳುತ್ತಿದ್ದದು ಸಹಜವಾಗಿತ್ತು, ಕುಟುಂಬದಲ್ಲಿ ಹಿರಿಯಮಗ ಮನೆಯ ಎಲ್ಲಾ ಜವಾಬ್ದಾರಿಗಳನ್ನು ನೋಡಿಕೊಂಡರೆ ಇತರರು ಅವನಿಗೆ ಸಹಕಾರ ನೀಡುತ್ತಿದ್ದುದು ವಿಶೇಷವಾಗಿತ್ತು. ಮನೆಯಲ್ಲಿ ಹಿರಿಯರಿಗೆ ಗೌರವ ಕೊಡುತ್ತಿದ್ದುದು, ಅವರ ಆಣತಿಯಂತೆ ಪ್ರತಿಯೊಂದು ಸದಸ್ಯನೂ ನಡೆಯುತ್ತಿದ್ದುದರಿಂದಲೇ ಅವಿಭಕ್ತ ಕುಟುಂಬಗಳು ದೇಸಿಯ ಪರಿಸರದಲ್ಲಿ ಕಂಡುಬರುತ್ತಿದ್ದವು ಎನ್ನಬಹುದು.

ಅವಿಭಕ್ತ ಕುಟುಂಗಳು ದೇಸಿ ಬದುಕಿನ ಭಾಗವಾಗಿದ್ದರೂ ಅಂತಹ ಕುಟುಂಗಳ ಸದಸ್ಯರಲ್ಲಿ ಸಾಮರಸ್ಯದ ಕೊರತೆಯಿತ್ತು ಎನ್ನುವುದನ್ನು ಕಾಣುತ್ತೇವೆ. ಕಾನೂರು ಚಂದ್ರಯ್ಯಗೂಡರ ಮನೆ ಅವಿಭಕ್ತ ಕುಟುಂಬವಾಗಿದ್ದರೂ ಹೂವಯ್ಯನ ತಾಯಿ ಮತ್ತು ನಾಗಮ್ಮ ಮತ್ತು ಚಂದ್ರಯ್ಯಗೌಡ ಹಾಗೂ ಸಬ್ಬಮ್ಮರ ನಡುವೆ ಯಾವಾಗಲೂ ಜಗಳವಾಗುತ್ತಿದ್ದುದು ಸಾಮಾನ್ಯವಾಗಿತ್ತು. ಇದರಿಂದ ಬೇಸರಗೊಂಡು ಚಂದ್ರಯ್ಯಗೌಡ ಹೂವಯ್ಯನಿಗೆ ಮನೆಯಲ್ಲಿ ಪಾಲುಕೊಟ್ಟು ಬೇರೆಯಾಗುವುದನ್ನು ಕಾಣಬಹುದು. ಹಾಗೆಯೇ ಮಲೆಗಳಲ್ಲಿ ಮದುಮಗಳು

ಕಾದಂಬರಿಯಲ್ಲಿ ಕೋಣೂರು ರಂಗಪ್ಪಗೌಡ ಮತ್ತು ಮುಕುಂದಯ್ಯನವರ ಸಂಬಂಧ ಹೊರಗಿನವರಿಗೆ ಸರಿಯೆನಿಸಿದರೂ ಕೊನೆಗೆ ಮುಕುಂದಯ್ಯ ಚಿನ್ನಮ್ಮನನ್ನು ವಿವಾಹವಾಗುವ ವಿಚಾರದಲ್ಲಿ ಮನೆಯಿಂದ ಹೊರಗುಳಿಯುತ್ತಾನೆ. ಆದರೂ ಅಂತರಂಗದಲ್ಲಿ ಚಿನ್ನಮ್ಮನನ್ನು ವಿವಾಹವಾಗುವ ವಿಚಾರದಲ್ಲಿ ಮನೆಯಿಂದ ಹೊರಗುಳಿಯುತ್ತಾನೆ. ಆದರೂ ಅಂತರಂಗದಲ್ಲಿ ಮುಕುಂದಯ್ಯ ತನ್ನ ಅಣ್ಣನ ಬಗ್ಗೆ ಯಾವುದೇ ವಿರೋಧವನ್ನು ವ್ಯಕ್ತಪಡಿಸದೆ ಮನೆಯ ಗೌರವವನ್ನು ಕಾಪಾಡುತ್ತಾನೆ. ಅದೇ ರೀತಿ ಹೂವಯ್ಯ ಚಂದ್ರಯ್ಯಗೌಡ ಮತ್ತು ರಾಮುವಿನ ನಿಧನದ ಹಿಣದೆ ತಮ್ಮ ಪೂರ್ವಜರು ಬಾಳಿ ಬದುಕಿದ ಕಾನೂರಿನ ಮನೆಗೆ ವಾಪಾಸಾಗುತ್ತಾನೆ.

ಅವಿಭಕ್ತ ಕುಟುಂಬಗಳು ಮಲೆನಾಡಿನ ದೇಸಿ ಸಂಸ್ಕೃತಿಯ ಭಾಗವಾದರೆ ಚಿಕ್ಕ ಅಥವಾ ವಿಭಕ್ತ ಕುಟುಂಬಗಳು ವೆಸೆಕ್ಸ್‌ನ ದೇಸಿಯ ಬದುಕಿನಲ್ಲಿ ಕಂಡುಬರುತ್ತಿದ್ದವು. ಹಾರ್ಡಿಯವರ ಎರಡೂ ಕಾದಂಬರಿಗಳಲ್ಲಿ ಅವಿಭಕ್ತ ಕುಟುಂಬಗಳು ಅಸ್ತಿತ್ವದಲ್ಲಿದ್ದ ಬಗ್ಗೆ ವಿವರಣೆ ಇಲ್ಲದಿರುವುದು ಅಲ್ಲಿನ ಸಾಮಾಜಿಕ, ಕೌಟುಂಬಿಕ ವ್ಯವಸ್ಥೆಯನ್ನು ಪರಿಚಯಿಸುತ್ತದೆ. ಇದರಿಂದ ಅವಿಭಕ್ತ ಕುಟುಂಬದ ಕಲ್ಪನೆ ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಹೆಚ್ಚಾಗಿ ಕಂಡುಬರುವುದನ್ನು ಕಾಣುತ್ತೇವೆ. ಹಾಗೆಯೇ ಈ ವಿಷಯದಲ್ಲಿ ಕುವೆಂಪುರವರ ಕಾದಂಬರಿಗಳು ಹಾರ್ಡಿಯವರ ಕಾದಂಬರಿಗಳಿಗಿಂತ ಭಿನ್ನವಾಗಿರುವುದನ್ನು ಕಾಣಬಹುದು. ಕೌಟುಂಬಿಕ ವ್ಯವಸ್ಥೆ ಯಾವುದಾದರೇನು, ಕುಟುಂಬದ ಸದಸ್ಯರ ಭಾವನಾತ್ಮಕ ಸಂಬಂಧಗಳು ಇಬ್ಬರೂ ಕಾದಂಬರಿಕಾರರ ಕೃತಿಗಳಲ್ಲಿ ಒಂದೇ ರೀತಿಯಾಗಿ ಅಭಿವ್ಯಕ್ತಗೊಂಡಿವೆ.

ಹಾರ್ಡಿಯವರ ಕಾದಂಬರಿಯ ಟೆಸ್ ಕೆಲಸವನ್ನರಸಿ ಶ್ರೀಮಂತಳಾದ ಡಿ ಅರ್ಬರ್‌ವಿಲ್ಲೆಯ ಊರಾದ ಚೇಸ್‌ಗೆ ಹೊರಡುವಾಗ ಮನೆಮಂದಿಯಲ್ಲ ಕಣ್ಣೀರು ತುಂಬಿಕೊಂಡು ಬೀಳ್ಕೊಡುವುದನ್ನು ಕಾಣುತ್ತೇವೆ. ಟೆಸ್‌ಳ ಸಹೋದರ–ಸಹೋದರಿಯರು ಕಣ್ತುಂಬಿಕೊಂಡು, "ಟೆಸ್ ತಮ್ಮನ್ನೆಲ್ಲ ಬಿಟ್ಟು ಹೋಗುವುದು ಬೇಡ"[81] ಎಂದು ಅಳುವ ದೃಶ್ಯ ನಿಜವಾಗಿಯೂ ಮನಕಲುಕುವಂತಿದೆ. ಮಗಳನ್ನು ಕಳುಹಿಸಿ ಬಂದ ಮೇಲೆ ಜೋನ್ ಡರ್ಬಿಫೀಲ್ಡ್ ಕೂಡ ಕಣ್ಣೀರಿಡುವುದನ್ನು ಮತ್ತು ತಾನೂ ಅವಸರದಲ್ಲಿ ಟೆಸ್‌ಳನ್ನು ಕೆಲಸಕ್ಕೆ ಕಳುಹಿಸಲು ತೆಗೆದುಕೊಂಡ ನಿರ್ಧಾರದ ಬಗ್ಗೆ ಪಶ್ಚಾತ್ತಾಪಪಡುವುದನ್ನು ಕಾಣುತ್ತೇವೆ. ಕುಟುಂಬ ಸದಸ್ಯರ ಅಗಲಿಕೆ ಎಷ್ಟೊಂದು ನೋವನ್ನುಂಟು ಮಾಡುತ್ತದೆ ಎನ್ನುವುದನ್ನು ಹಾರ್ಡಿಯವರ ಮತ್ತೊಂದು ಕಾದಂಬರಿ 'ದಿ ರಿಟರ್ನ್ ಆಫ್ ದಿ ನೇಟಿವ್'ನಲ್ಲೂ ಸಹ ವ್ಯಕ್ತವಾಗುತ್ತದೆ. ತಾನು ಸಾಕಿ ಬೆಳೆಸಿದ ಮಗಳು ತೋಮಸಿನ್ ವೈಲ್ಡೀವ್‌ನನ್ನು ಮದುವೆಯಾಗಲು ಹೊರಡುವಾಗ ಶ್ರೀಮತಿ

ಯೋಬ್ರೈಟ್‌ಳ ಕಣ್ಣುಗಳು ತುಂಬಿ ಬಂದು ಬೀಳ್ಕೊಡುವುದನ್ನು ಕಾಣುತ್ತೇವೆ. ತೋಮಸಿನ್ ತನ್ನ ಚಿಕ್ಕಮ್ಮಳಿಂದ ಬೀಳ್ಕೊಂಡು ಸ್ವಲ್ಪ ದೂರ ಹೋಗಿ ಅಗಲಿಕೆಯ ಭಾವೋದ್ವೇಗವನ್ನು ತಡೆದುಕೊಳ್ಳಲಾಗದೆ ಮತ್ತೆ ಓಡಿ ಬಂದು ಶ್ರೀಮತಿ ಯೋಬ್ರೈಟ್‌ಳನ್ನು ತಬ್ಬಿಕೊಳ್ಳುತ್ತಾಳೆ. ಆಕೆಯ ಉತ್ಕೃಷ್ಟ ಭಾವನೆಗಳು ಮಾತು ಹೊರಡದಂತೆ ಮಾಡುತ್ತದೆ, ಸ್ವಲ್ಪ ಸಮಯದ ನಂತರ ಹೋಗಿ ಬಾ ಎಂದು ಶ್ರೀಮತಿ ಯೋಬ್ರೈಟ್ ತೋಮಸಿನ್‌ಳನ್ನು ಕಳುಹಿಸಿಕೊಡುತ್ತಾಳೆ"[82] ತವರೂರನ್ನು ಬಿಟ್ಟು ಗಂಡನ ಮನೆಗೆ ಸೇರುವ ಹೆಣ್ಣಿಗೆ ಕಣ್ಣೀರು ಹಾಕುವುದೊಂದು ಅಲಂಕಾರದ ಅವಶ್ಯಕವಾದ ಪದ್ಧತಿಯಲ್ಲಿದೇ?" ಇದು ದೇಸಿ ಸಂಸ್ಕೃತಿಯ ಸಂಕೇತವಾಗಿತ್ತು.[83] ಇದರಿಂದ ದೇಸಿ ಬದುಕಿನಲ್ಲಿ ಜನರ ಭಾವನೆಗಳು ಎಷ್ಟೊಂದು ನಿಷ್ಕಲ್ಮಶವಾಗಿ ಮತ್ತು ಸ್ವಾಭಾವಿಕವಾಗಿತ್ತವೆ ಎನ್ನುವುದನ್ನು ಕಾಣಬಹುದು. ತನಗಿರುವ ಒಬ್ಬನೇ ಮಗ ಒಂದು ಹೆಣ್ಣಿಗೆ ಮಾರುಹೋಗಿ ಮನೆಬಿಟ್ಟು ಹೋಗುವಾಗ ಹೆತ್ತ ತಾಯಿಗೆ ಆಗುವ ನೋವು, ಸಂಕಟ ಮತ್ತು ಯಾತನೆಯನ್ನು ಶ್ರೀಮತಿ ಯೋಬ್ರೈಟ್ ಮತ್ತು ಕ್ಲಿಮ್‌ರ ಬಾಳಿನಲ್ಲಿ ಕಾಣುತ್ತೇವೆ. ವೃದ್ಧಾಪ್ಯದಲ್ಲಿ ತನ್ನ ತಾಯಿಗೆ ಆಸರೆಯಾಗಬೇಕಾಗಿದ್ದ ಕ್ಲಿಮ್ ಮನೆಬಿಟ್ಟು ಬೇರೆಯಾಗಿ ಬೇರೊಂದು ಬಾಡಿಗೆ ಮನೆಗೆ ಹೋದರೂ ಕೆಲವು ದಿನಗಳ ನಂತರ ತಾಯಿಯೇ ಮನಸೋತು ಮಗನನ್ನು ನೋಡಲು ಹೋಗುತ್ತಾಳೆ.[84] ಟೆಸ್ ಹಿರಿಯ ಮಗಳಾಗಿ ತನ್ನ ತಮ್ಮ-ತಂಗಿಯರಿಗೆ ಸಹಾಯಮಾಡುವುದು ತನ್ನ ನೈತಿಕ ಹೊಣೆ ಎಂದು ಕೊಳ್ಳುವುದು, ತಾನು ಹುಟ್ಟಿ ಬೆಳೆದ ಮನೆಗೆ ತನ್ನ ಬದುಕನ್ನೆ ತ್ಯಾಗ ಮಾಡುವುದು ಆಕೆಗೆ ತನ್ನ ತಂದೆ-ತಾಯಿ ಮತ್ತು ಒಡಹುಟ್ಟಿದವರ ಬಗ್ಗೆ ಇದ್ದ ಪ್ರೀತಿ-ವಾತ್ಸಲ್ಯವನ್ನು ತೋರುತ್ತದೆ. ಇಂತಹ ಪವಿತ್ರವಾದ, ಸಹಜ ಮತ್ತು ಸ್ವಾಭಾವಿಕವಾದ ಭಾವನಾತ್ಮಕ ಸಂಬಂಧಗಳನ್ನು ದೇಸಿಯ ಬದುಕಿನಲ್ಲದೆ ಬೇರೆ ಎಲ್ಲೂ ಕಾಣಲು ಸಾಧ್ಯವಿಲ್ಲ ಎನ್ನಬಹುದು.

ಕಾನೂರಿನ ಮನೆ ಹಿಸ್ಸೆಯಾಗಿ ಹೂವಯ್ಯ ತನ್ನ ತಾಯಿಯೊಡನೆ ಬೇರೆ ಮನೆಗೆ ಹೋದರೂ ನಾಗಮ್ಮ ಮತ್ತು ಚಂದ್ರಯ್ಯಗೌಡರ ಮಗಳು ಪುಟ್ಟಮ್ಮರ ನಡುವಿನ ಸಂಬಂಧ ಮತ್ತು ನಾಗಮ್ಮ ವಾಸುವಿನ ಸಂಬಂಧಗಳು ಅತ್ಯಂತ ವಾತ್ಸಲ್ಯಮಯವಾಗಿದ್ದವು. ಪುಟ್ಟಮ್ಮ ತನ್ನ ಮದುವೆಗೆ ದೊಡ್ಡಮ್ಮಳಾದ ನಾಗಮ್ಮಳನ್ನು ಕರೆಯಲು ತನ್ನ ತಂದೆಗೆ ಗೊತ್ತಾಗದಂತೆ ಹೋದಾಗ ನಾಗಮ್ಮನವರಿಗೆ ಮಾತು ತೊದಲುವಷ್ಟು ಆನಂದವಾಯಿತು. ಬೇಗ ಬೇಗನೆ ರೊಟ್ಟಿ ಮೊಟ್ಟೆ ಪಲ್ಯಗಳನ್ನು ಮಾಡಿ ಊಟ ಬಡಿಸಿ ಕಳುಹಿಸಿಕೊಡುತ್ತಾರೆ. ಕಾನೂರಿನಿಂದ ಗಂಡನೊಡನೆ ದಂಡಿಗೆ ಏರಿ ಮುತ್ತಳ್ಳಿಗೆ ಹೋಗುವಾಗ ಮದುವಣಗಿತ್ತಿ ಪುಟ್ಟಮ್ಮನನ್ನು ನಾಗಮ್ಮನವರು ಕಂಡು ಹರಸಿ ಸಂತೋಷಪಡಿಸುವ ಸಲುವಾಗಿ ಮಗನಿಗೆ ಹೇಳಿ ಕೆಳಕಾನೂರಿನ ಗದ್ದೆ ಮೂಲೆಯ ಗಾಡಿರಸ್ತೆಯಲ್ಲಿ ದಿಬ್ಬಣದ ಸತ್ಕಾರಕ್ಕೆ ಚಪ್ಪರ ಹಾಕಿಸುತ್ತಾರೆ.[85] ಹಾರ್ಡಿಯ '<u>ದಿ ರಿಟರ್ನ್ ಆಫ್ ದಿ ನೇಟಿವ್</u>"

ಕಾದಂಬರಿಯ ಶ್ರೀಮತಿ ಯೋಬ್ರೈಟ್ ತೋಮಸಿನರ ವಾತ್ಸಲ್ಯ ಪೂರಿತ ಸಂಬಂಧವನ್ನು ನಾಗಮ್ಮ-ಪುಟ್ಟಮ್ಮನವರಲ್ಲಿ ಕಾಣುತ್ತೇವೆ. ಅವಿಭಕ್ತ ಕುಟುಂಬಗಳು ವಿಭಕ್ತಗೊಂಡರೂ ಮನೆಯ ಸದಸ್ಯರ ಅಂತಃಕರಣದಲ್ಲಿ ಉತ್ಕಟ ಭಾವನೆಗಳೂ ಎಂದೆಂದೂ ಜೀವಂತವಾಗಿರುತ್ತವೆ ಎನ್ನುವುದನ್ನು ಇಬ್ಬರೂ ಕಾದಂಬರಿಕಾರರು ಅನೇಕ ಉಲ್ಲೇಖಗಳಿಂದ ನಿರೂಪಿಸಿದ್ದಾರೆ.

ಹಬ್ಬ, ಹರಕೆ, ಉತ್ಸವ, ಜಾತ್ರೆಗಳಿಗೆ ನೆಂಟರಿಷ್ಟರು ಬರುವುದು ಸಾಮನ್ಯವಾಗಿತ್ತು. ಪ್ರತಿವರ್ಷವೂ ಕಾನೂರಿನ ದೆಯ್ಯದ ಹರಕೆಗೆ ಶಾಮಯ್ಯ ಗೌಡರಾಗಲಿ ಚಿನ್ನಯ್ಯನಾಗಲಿ ಗೌರಮ್ಮ, ಸೀತೆ, ಲಕ್ಷ್ಮಿಯರನ್ನು ಕರೆದುಕೊಂಡು ಬರುವುದು ವಾಡಿಕೆಯಾಗಿತ್ತು. ಹಾಗೆ ಬಂದಾಗಲೆಲ್ಲ ಸ್ತ್ರೀಬಂಧುಗಳು ಒಂದೆರಡು ವಾರಗಳು ನೆಂಟರ ಮನೆಯಲ್ಲಿಯೇ ನಿಲ್ಲುತ್ತಿದ್ದರು.[86] ಹೀಗೆ ರಕ್ತ ಸಂಬಂಧಗಳು, ಬಾದರಾಯಣ ಸಂಬಂಧಗಳು ಸ್ನೇಹ-ಸಂಬಂಧಗಳು ದೇಸಿ ಬದುಕಿನಲ್ಲಿ ಹಾಸುಹೊಕ್ಕಾಗಿದ್ದವು. ತಾಯಿ ಮತ್ತು ಮಕ್ಕಳ ಸಂಬಂಧಗಳ ಹಾಗೆಯೇ ಪತಿ-ಪತ್ನಿಯರ ನಡುವಿನ ವೈವಾಹಿಕ ಸಂಬಂಧಗಳು ಪವಿತ್ರವಾಗಿದ್ದವು ಎನ್ನವುದನ್ನು ಕಾಣುತ್ತೇವೆ. ಹಾರ್ಡಿಯವರ <u>'ದಿ ರಿಟರ್ನ್ ಆಫ್ ದಿ ನೇಟಿವ್'</u> ಕಾದಂಬರಿಯ ದುರಂತ ನಾಯಕಿ ಯುಸ್ಟೇಷ್ಯಳ ಮಾತುಗಳು ಪತಿವ್ರತೆ ಧರ್ಮಕ್ಕೆ ಅನುಗುಣವಾಗಿದೆ: "ಒಬ್ಬರ ಸಹಧರ್ಮಿಣಿಯಾಗಿ ನಾನು ನೇರವಾಗಿದ್ದೀನಿ"[87] ಎನ್ನುವಾಗ ಆಕೆ ಕ್ಲಿಮ್ ಯೋಬ್ರೈಟ್‌ನ ಹೆಂಡತಿಯಾಗಿ ತನ್ನ ಪತಿಗೆ ವಿಧೇಯಳಾಗಿದ್ದು ತಾನು ಪತಿವ್ರತೆಯೆಂದು ಸಾಬೀತುಪಡಿಸುತ್ತಾಳೆ. ಯುಸ್ಟೇಷ್ಯ ಈ ವಿಷಯದಲ್ಲಿ ದೇಸಿಯ ಮೌಲ್ಯಗಳ ಪ್ರತೀಕವಾಗಿರುತ್ತಾಳೆ. ಇಂತಹ ಪವಿತ್ರವಾದ ಸಂಬಂಧಗಳನ್ನು ಕುವೆಂಪುರವರ ಕಾದಂಬರಿಗಳಲ್ಲೂ ಕಾಣುತ್ತೇವೆ. ಮುತ್ತಳ್ಳಿಯ ಶ್ಯಾಮಯ್ಯಗೌಡ-ಗೌರಮ್ಮ, ಚಿನ್ನಯ್ಯ-ಪುಟ್ಟಮ್ಮ, ಕೋಣೂರ ಮುಕುಂದಯ್ಯ-ಚಿನ್ನಮ್ಮ, ಹಳೇಮನೆ ದೊಡ್ಡಣ್ಣಹೆಗ್ಗಡೆ-ರಂಗಮ್ಮ, ಕಲ್ಲೂರ ದೇವಯ್ಯಗೌಡ-ದೇವಮ್ಮ, ಐತ-ಪೀಂಚಲು, ಮುಂತಾದವರ ದಾಂಪತ್ಯ ಜೀವನ ಮಧುರವಾಗಿದ್ದು ಅನ್ಯೋನ್ಯತೆಯಿಂದ ಕೂಡಿದ್ದು ದೇಸಿಯ ಸಂಸ್ಕೃತಿಯ ಪ್ರತೀಕವಾಗಿತ್ತು.

ದೇಸಿಯ ಬದುಕಿನಲ್ಲಿ ಅನ್ಯೋನ್ಯ ಸಂಬಂಧಗಳು ಕೇವಲ ಕುಟುಂಬದ ಸದಸ್ಯರ, ನೆಂಟರಿಷ್ಟರ ಸ್ನೇಹಿತರ, ನಡುವೆಯಲ್ಲದೆ, ಕುಟುಂಬದ ಸದಸ್ಯರು ಕೂಲಿಯಾಳುಗಳೊಡನೆ, ಜೀತದಾಳುಗಳೊಡನೆ, ವ್ಯಾಪಾರಿಗಳೊಡನೆ ಮತ್ತು ಅನೇಕ ಕೂಲಿಕಸುಬುಗಳನ್ನು ನಿರ್ವಹಿಸುವವರೊಡನೆಯೂ ಉತ್ತಮ ಸಂಬಂಧಗಳನ್ನು ಹೊಂದಿರುತ್ತಿದ್ದರು. ಒಬ್ಬರನ್ನೊಬ್ಬರು ಅವಲಂಬಿಸಿ, ಕೊಡು-ಕೊಳ್ಳುವಿಕೆಯಿಂದ ಜೀವನ ಸಾಗಿಸುತ್ತಿದ್ದುದನ್ನು ಕಾಣುತ್ತೇವೆ. ಅವರವರ

ಜಾತಿ, ಧರ್ಮ, ಸಂಸ್ಕೃತಿಯ ಹೊರಗೆ ಉತ್ತಮ ಸಂಬಂಧಗಳು ದೇಸಿಯ ಬದುಕಿಗೆ ಪೂರಕವಾಗಿದ್ದವು.

ದೇಸಿಯ ಬದುಕು ಎಷ್ಟೊಂದು ಸ್ವಾಭಾವಿಕವಾಗಿತ್ತು ಎಂದರೆ ಸೂರ್ಯೋದಯವಾಗುವಾಗಲೇ ಅಡುಗೆಮನೆಯ ದಿಕ್ಕಿನಿಂದ ಮಜ್ಜಿಗೆ ಕಡೆಯುತ್ತಿದ್ದ ಕಡಗೋಲಿನ ಸದ್ದು ಕೇಳಿಬರುತ್ತಿತ್ತು. ಮನೆಗೆ ಅಂಟಿಕೊಂಡಿದ್ದ ದನದಕೊಟ್ಟಿಗೆಯಿಂದ ಕೋಡುಗಳ ಸದ್ದು, ಗೊರಸುಗಳ ಸದ್ದು, ಕರುಗಳ ಕರೆಯುವ ಅಂಬಾ ಸದ್ದೂ....[88] ಮುಂತಾದ ಕೋಳಿ, ಕುರಿ, ಹಂದಿಗಳ ನಾದಸಮಗದಿಂದ ದೇಸಿಯ ಬದುಕು ದಿನನಿತ್ಯ ಜೀವಪಡೆಯುವುದನ್ನು ಕಾಣುತ್ತೇವೆ. ಮನೆಯ ಸಾಕುಪ್ರಾಣಿಗಳ ಹಿತಕರವಾದ ನಾದಕ್ಕೆ ಇಂಬುಕೊಡುವಂತೆ ಜೋಗುಳದ ಹಾಡು ಕೂಡ ಎಳೆಯ ಮಕ್ಕಳಿರುವ ಮನೆಗಳಲ್ಲಿ ಆಗಿಂದಾಗ್ಗೆ ಕೇಳಿಬರುತ್ತಿತ್ತು. ಬೆಟ್ಟಳ್ಳಿ ದೇವಯ್ಯಗೌಡನ ಹೆಂಡತಿ ದೇವಮ್ಮ "ನೇತಾಡುತ್ತಿದ್ದ ತೊಟ್ಟಿಲಲ್ಲಿ ಮಲಗಿದ್ದ ತನ್ನ ಐದು ತಿಂಗಳ ಬಾಲೆಯನ್ನು ತೂಗಿ ಮಲಗಿಸುತ್ತಿದ್ದಳು. ಬಾಯಿ ಯಾಂತ್ರಿಕವಾಗಿ ಎಂಬಂತೆ ಏನೋ ಹಾಡನ್ನು ಬಹು ಮೆಲ್ಲಗೆ ಗುನುಗುತ್ತಿತ್ತು."[89] ಹಾರ್ಡಿಯವರ ಟೆಸ್ ಕಾದಂಬರಿಯಲ್ಲಿ ಶ್ರೀಮತಿ ಜೋನ್ ಡರ್ಬಿಫೀಲ್ಡ್ ತನ್ನ ಪುಟ್ಟ ಮಕ್ಕಳನ್ನು ಮಲಗಿಸಲು ಜೋಗುಳ ಹಾಡುವುದನ್ನು ಕಾಣುತ್ತೇವೆ. ವೆಸೆಕ್ಸ್‌ನ ಮ್ಯಾರ್ಲಾಟನ ಗ್ರಾಮೀಣ ಪ್ರದೇಶದಲ್ಲಿ ಲಾವಣಿ ಪದಗಳು, ಸುಗ್ಗಿಯ ಹಾಡುಗಳು ಜನರ ದೈನಂದಿನ ಬದುಕಿನಲ್ಲಿ ರೂಢಿಯಲ್ಲಿದ್ದವು. ಕುವೆಂಪುರವರ ಮಲೆನಾಡಿನ ದೇಸಿ ಸಂಸ್ಕೃತಿಯಲ್ಲಿದ್ದ ಜೋಗುಳದ ಹಾಡುಗಳು, ಲಾವಣಿ ಪದಗಳು ಮತ್ತು ಸುಗ್ಗಿಯ ಹಾಡುಗಳು ಹಾರ್ಡಿಯವರ ವೆಸೆಕ್ಸ್‌ನ ಗ್ರಾಮೀಣ ಪರಿಸರದಲ್ಲೂ ಇದ್ದುದನ್ನು ಕಾಣುತ್ತೇವೆ. ಇದರಿಂದ ದೇಸಿ ಸಂಸ್ಕೃತಿಯೆನ್ನುವುದು ಕಾಲಾತೀತವಾದದ್ದು ಮತ್ತು ದೇಶಾತೀತವಾದದ್ದು ಎನ್ನಬಹುದು. ದೇಶ, ಭಾಷೆ, ಧರ್ಮ, ಜಾತಿಗಳ ಎಲ್ಲೆಯನ್ನು ಮೀರಿ ಮಾನವನ ಭಾವನೆಗಳು ದೇಸಿ ಸಂಸ್ಕೃತಿಯ ಭಾಗವಾಗಿದ್ದವು ಎಂಬುದನ್ನು ಇಬ್ಬರೂ ಕಾದಂಬರಿಕಾರರಲ್ಲಿ ಕಾಣುತ್ತೇವೆ.

2.5 ದೇಸಿ ಕ್ರೀಡೆಗಳು ಮತ್ತು ಮನರಂಜನೆ:

ಪ್ರಾಚೀನ ಕಾಲದಿಂದಲೂ ಕ್ರೀಡೆಗಳು ಮಾನವನ ದೈಹಿಕ ಮಾನಸಿಕ ಸ್ವಾಸ್ಥ್ಯವನ್ನು ಕಾಪಾಡುವಲ್ಲಿ ಮಹತ್ತರ ಪಾತ್ರವಹಿಸುತ್ತಾ ಬಂದಿದೆ. ಮಕ್ಕಳಿಂದ ಹಿಡಿದು ವೃದ್ಧರವರೆಗೂ ಅವರವರ ವಯೋಮಾನಕ್ಕೆ ಅನುಗುಣವಾಗಿ ವಿವಿಧ ರೀತಿಯ ಕ್ರೀಡೆಗಳು ರೂಢಿಯಲ್ಲಿದ್ದು

ಮಾನವನ ಕ್ರೀಡಾಸಕ್ತಿಯನ್ನು ತಣಿಸುವಲ್ಲಿ ಸಹಕಾರಿಯಾಗಿದ್ದವು. ವಿವಿಧ ಸಾಮಾಜಿಕ, ಭೌಗೋಳಿಕ ಹಿನ್ನಲೆಯಲ್ಲಿ ಅನೇಕ ಕ್ರೀಡೆಗಳು ರೂಪುಗೊಂಡಿದ್ದವು, ಬಡವ-ಬಲ್ಲಿದ, ಜಾತಿ-ಮತದ ತಾರತಮ್ಯವನ್ನು ಮೀರಿ ಆಯಾ ಪ್ರದೇಶಕ್ಕೆ ಮತ್ತು ಪರಿಸರಕ್ಕೆ ಸರಿಹೊಂದುವ ಕ್ರೀಡೆಗಳು ಅಸ್ತಿತ್ವದಲ್ಲಿದ್ದವು. ಸಂಪರ್ಕ ಸಾಧನಗಳು ಮತ್ತು ಮಾಧ್ಯಮಗಳ ಕೊರತೆಯಿಂದ ಕ್ರೀಡೆಗಳಲ್ಲಿ ಏಕರೂಪತೆಗೆ ಬದಲಾಗಿ ಭಿನ್ನತೆಯನ್ನು ಕಾಣುತ್ತೇವೆ. ಆದ್ದರಿಂದ ದೇಸಿಯ ಕ್ರೀಡೆಗಳೆಂದರೆ ಒಂದು ನಿರ್ದಿಷ್ಟ ಸಾಮಾಜಿಕ, ಭೌಗೋಳಿಕ ಪರಿಸರದಲ್ಲಿದ್ದ ಕ್ರೀಡೆಗಳು ಎನ್ನಬಹುದು.

ಮಲೆನಾಡಿನ ದೇಸಿಯ ಪರಿಸರದಲ್ಲಿ ಪುರುಷರು, ಮಕ್ಕಳು ಮತ್ತು ಮಹಿಳೆಯರು ಆಡುವ ಅನೇಕ ಬಗೆಯ ಆಟಗಳನ್ನು ಕಾಣುತ್ತೇವೆ. ಸಾಮಾನ್ಯವಾಗಿ ಪುರುಷರು ಮತ್ತು ಮಕ್ಕಳು ಆಡುತ್ತಿದ್ದ ಬುಗುರಿಯಾಟ, ಗೋಲಿ, ಮರಕೋತಿ, ಚಿನ್ನಿದಾಂಡು, ಲಗೋರಿ, ಕಬಡ್ಡಿ, ಲಗ್ಗೆಮಣೆ ಮುಂತಾದವು ಮಹಿಳೆಯರು ಆಡುತ್ತಿದ್ದ ಚೆನ್ನೆಮಣೆ, ಕುಂಟಾಟ, ಪಗಡೆ, ಕಲ್ಲಾಟ, ಹಗ್ಗಜಗ್ಗಾಟ ಪರಮಪದ ಸೋಪಾನ ಮುಂತಾದ ಆಟಗಳು ಮುಖ್ಯವಾಗಿವೆ. ಕೆಲವು ಆಟಗಳನ್ನು ಹೆಂಗಸರು, ಪುರುಷರು ಮತ್ತು ಮಕ್ಕಳೂ ಸಹ ಆಡುತ್ತಿದ್ದರು. ಅವುಗಳಲ್ಲಿ ಲಗ್ಗೆಮಣೆ, ಪಗಡೆ, ಕುಂಟಾಟ, ಸರಿಬೆಸ, ಕಣ್ಣುಮುಚ್ಚಾಲೆ ಮುಂತಾದವು ಕುವೆಂಪುರವರ ಕಾದಂಬರಿಗಳಲ್ಲಿ ಲಗ್ಗೆಮಣೆ, ಕಲ್ಲಾಟ, ಕದ್ದಡಗೋ ಆಟ ಮುಂತಾದವು ಮುಖ್ಯವಾದವು. ಹೂವಯ್ಯ ಮತ್ತು ರಾಮಯ್ಯ ತೀರ್ಥಹಳ್ಳಿಯ ಕಲ್ಲುಸಾರದ ಮೇಲೆ ನಡೆಯುವಾಗ ಕೆಲವು ಹುಡುಗರು ತುಂಗಾ ನದಿಯಲ್ಲಿ ಈಜುತ್ತಿದ್ದುದನ್ನು ನೋಡಿ ಹೂವಯ್ಯ ತಾನೂ ಈಜಾಡಿದ್ದುದನ್ನು ನೆನೆದನು "ಹುಡುಗರು ಈಜುತ್ತಿದ್ದರು, ಅದನ್ನು ನೋಡಿ ನಾವು ಈಜುತ್ತಿದ್ದನ್ನು ನೆನೆದು ಹಾಗೆಯೇ ನಿಂತುಬಿಟ್ಟೆ. ಅವರು ಈಗಲೂ ನಾವು ಆಡಿದ ಕಲ್ಲಾಟವನ್ನೇ ಆಡುತ್ತಿದ್ದಾರೆ".[90]

ಕಲ್ಲಾಟ ಮಲೆನಾಡಿನ ದೇಸಿಯ ಕ್ರೀಡೆಯಾಗಿದ್ದು ಸಾಮಾನ್ಯವಾಗಿ ಮಕ್ಕಳು ಈ ಆಟವನ್ನು ಹೆಚ್ಚಾಗಿ ಆಡುತ್ತಿದ್ದರು. ನೀರಿನ ಒಂದು ದಂಡೆಯಲ್ಲಿ ನಿಂತುಕೊಂಡು ಚಪ್ಪಟೆಯಾದ ಕಲ್ಲಿನಿಂದ ನೀರಿನ ಮೇಲೆ ಚಿಮ್ಮಿಕೊಂಡು ಮತ್ತೊಂದು ದಂಡೆಯ ಕಡೆಗೆ ಹಾರಿಕೊಂಡು ಹೋಗುವಂತೆ ಹೊಡೆಯಲಾಗುತ್ತಿತ್ತು. ಇದರಲ್ಲಿ ಯಾರು ಎಷ್ಟು ದೂರು ಕಲ್ಲನ್ನು ನೀರಿಗೆ ತಾಗಿ, ಚಿಮ್ಮುತ್ತಾ ಹಾರುತ್ತಾ ಹೋಗುವಂತೆ ಎಷ್ಟು ದೂರ ಎಸೆಯುತ್ತಾರೆ ಎನ್ನುವ ಅಂದಾಜಿನ ಮೇಲೆ ಅವರು ಇತರರಿಗಿಂತ ಉತ್ತಮ ಗುರಿಕಾರರೆಂದು ನಿರ್ಧರಿಸಲಾಗುತ್ತಿತ್ತು.

ಮಲೆನಾಡಿನ 'ಕೂಲಿಮಠ' ಅಥವಾ 'ಐಗಳ ಮಠದಲ್ಲಿ' ಓದುತ್ತಿದ್ದ ಮಕ್ಕಳೆಲ್ಲ ಆಡುತ್ತಿದ್ದ ಮತ್ತೊಂದು ಆಟವೆಂದರೆ 'ಕದ್ದಡಗೋ' ಆಟ. ಇದನ್ನೇ ಬಯಲು ಸೀಮೆಯಲ್ಲಿ ಕಣ್ಣುಮುಚ್ಚಾಲೆ

ಆಟ ಎಂತಲೂ ಕರೆಯುತ್ತಿದ್ದರು. ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಬಚ್ಚಿಟ್ಟುಕೊಂಡಿರುವ ಇತರರನ್ನು ಹುಡುಕುವುದು, ಯಾರು ಕೈಗೆ ಸಿಗುತ್ತಾರೋ ಅವರು ಮತ್ತೆ ಕಣ್ಣು ಮುಚ್ಚಿಕೊಂಡು ಉಳಿದವರನ್ನು ಹಿಡಿಯುವುದು ಈ ಆಟದ ರೀತಿ. ಕದ್ದಡಗೋ ಆಟಕ್ಕಿಂತಲೂ ಮಕ್ಕಳು ಹೆಚ್ಚು ಇಷ್ಟಪಡುತ್ತಿದ್ದ ಆಟವೆಂದರೆ 'ಲಗ್ಗೆಮಣೆ' ಆಟವಾಗಿತ್ತು. ಇದನ್ನೇ ಬೇರೆ ಕಡೆಗಳಲ್ಲಿ ಲಗೋರಿ ಎಂತಲೂ ಕರೆಯುತ್ತಾರೆ. ಕೋಣೂರಿನಲ್ಲಿದ್ದ ಐಗಳ ಕೂಲಿಮಠದ ಹುಡುಗರೆಲ್ಲ "ವಿಶಾಲವಾಗಿದ್ದ ಅಂಗಳದಲ್ಲಿ ಮಣೆಯನ್ನು ಕಡ್ಡಿಯ ಆಪು ಕೊಟ್ಟು ಹೂಡಿ, ಲಗ್ಗೆಯಾಟ ಪ್ರಾರಂಭಿಸುವ ಮೊದಲು ಎರಡು ಪಕ್ಷಗಳನ್ನು ವಿಂಗಡಿಸತೊಡಗಿದರು. ತಿಮ್ಮು ಒಂದು ಕಡೆಯ ಮುಖಂಡನೆಂದೂ ಕಾಡು ಮತ್ತೊಂದು ಕಡೆಯ ಮುಖಂಡನೆಂದೂ ಗೊತ್ತಾಗಿ, ತಮತಮಗೆ ಬೇಕಾದವರನ್ನು ಹೆಸರು ಹಿಡಿದು ಕೂಗಿದರು"[91] ಈ ಆಟಕ್ಕೆ ಬೇಕಾದ ಲಗ್ಗೆ ಚೆಂಡು ಮತ್ತು ಮಣೆಗಳೊಂದಿಗೆ ಎರಡು ಗುಂಪುಗಳಾದ ಅಥವಾ ತಂಡಗಳನ್ನು ಮಾಡುತ್ತಾರೆ. ಒಂದು ಗುಂಪಿನವರು ಚೆಂಡಿನಿಂದ ಮಣೆಗೆ ಗುರಿಯಿಟ್ಟು ಹೊಡೆಯುತ್ತಾರೆ. ಚೆಂಡು ತಾಗಿ ಮಣೆ ಬಿದ್ದರೆ ಮತ್ತೊಂದು ಗುಂಪಿನವರು ಚೆಂಡು ತೆಗೆದುಕೊಂಡು ತಮ್ಮ ಎದುರಾಳಿ ತಂಡದವರನ್ನು ಅಟ್ಟಿಸಿಕೊಂಡು ಹೋಗುತ್ತಾರೆ. ಅವರಿಂದ ತಪ್ಪಿಸಿಕೊಂಡು ಓಡಿ ಬಂದು ಬಿದ್ದಿರುವ ಮಣೆಯನ್ನು ನಿಲ್ಲಿಸಲು ಪ್ರಯತ್ನಿಸುತ್ತಾರೆ. ಮಣೆಯನ್ನು ನಿಲ್ಲಿಸಿದರೆ ಆಟದಲ್ಲಿ ಗೆದ್ದಂತೆಯೆ ಸರಿ. ಇಲ್ಲವಾದರೆ ಚೆಂಡು ಎಸೆಯುವ ಸರದಿ ಎರಡನೆಯ ತಂಡಕ್ಕೆ ಸೇರುತ್ತದೆ. ಎದುರಾಳಿ ತಂಡದಿಂದ ತಪ್ಪಿಸಿಕೊಳ್ಳುವ ಬುದ್ಧಿಶಕ್ತಿ, ವೇಗ ಮತ್ತು ಗುರಿಕಾರಿಕೆಯನ್ನು ಈ ಆಟವು ಆಟಗಾರರಿಗೆ ನೀಡುತ್ತದೆ.

ಮಲೆನಾಡಿನಲ್ಲಿ ವರ್ಷದ ಬಹುಪಾಲು ಮಳೆಯ ಕಾರಣ ನದಿ, ಹಳ್ಳ, ಕೊಳ್ಳ, ಕೆರೆ-ಕಾಲುವೆ ನೀರಿನಿಂದ ತುಂಬಿ ಹರಿಯುತ್ತಿದ್ದುದರಿಂದ, ಕಾಡು-ಕಣಿವೆ, ಬೆಟ್ಟ-ಗುಡ್ಡಗಳೇ ಹೆಚ್ಚಿನ ಭಾಗವಾಗಿದ್ದರಿಂದ ಮಕ್ಕಳಿಗೆ ಆಟವಾಡಲು ವಿಶಾಲವಾದ ಸ್ಥಳದ ಕೊರತೆ, ದೊಡ್ಡವರಿಗೆ ಗದ್ದೆ-ತೋಟಗಳ ಬಿಡುವಿಲ್ಲದ ಕೆಲಸ ಮತ್ತು ಮಹಿಳೆಯರಿಗೆ ಮನೆಯಲ್ಲಿನ ಕೆಲಸ ಕಾರ್ಯಗಳಿಗೆ ಆಟ-ಮನರಂಜನೆಗೆ ಸಮಯದ ಅಭಾವ ಎದ್ದು ಕಾಣುತ್ತದೆ. ಆದರೂ ಮಳೆಯ ಬಿಡುವಿನ ವೇಳೆಯಲ್ಲಿ ಸಿಕ್ಕ ಸ್ವಲ್ಪ ಸಮಯದಲ್ಲೇ ಮಕ್ಕಳು, ಪುರುಷರು ಮತ್ತು ಮಹಿಳೆಯರು ಸೀಮಿತ ಆಟೋಟಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದುದು ವಿಶೇಷವಾಗಿತ್ತು.

ಗೊಂಬೆಯಾಟಗಳು ಮಲೆನಾಡಿನ ದೇಸಿ ಬದುಕಿನಲ್ಲಿ ಕಂಡುಬರುತ್ತವೆ. ಚಿಕ್ಕಮಕ್ಕಳು ಗೊಂಬೆಗಳ ಆಟದಲ್ಲಿ ತೊಡಗುವುದು, ದೊಡ್ಡವರ ಭಾವ ಭಂಗಿಗಳನ್ನು, ಮಾತುಗಳನ್ನು ವರ್ತನೆಗಳನ್ನು ಮತ್ತು ವೇಷ-ಭೂಷಣಗಳನ್ನು ಅನುಕರಿಸುವುದು ಇಲ್ಲಿ ಅವರ ಸೂಕ್ಷ್ಮ ಪ್ರಜ್ಞೆಗೆ

ಕಾರಣವಾಗುತ್ತದೆ. ಮುತ್ತಳ್ಳಿಯ ಸೀತೆಯ ತಂಗಿ ಲಕ್ಷ್ಮಿ "ಆಟದ ಮದುವೆ ಮಂಟಪದಲ್ಲಿ ಧಾರೆಯಾಗುತ್ತಿದ್ದಾಗ ಹೆಣ್ಣು ಗೊಂಬೆ ಉರುಳಿ ಬಿದ್ದು, ಅದಕ್ಕೆ ಉಡಿಸಿದ್ದ ಸೀರೆ ಕಳಚಿ ಬಿದ್ದು ಹೋಗಿತ್ತು. ಅದನ್ನು ಸರಿಮಾಡಲು ಅವಳೇ ಪ್ರಯತ್ನಿಸಿದಳು. ಆದರೆ ಫಲಕಾರಿಯಾಗದಿರಲು ಕೋಪದಿಂದ ಹೆಣ್ಣುಗೊಂಬೆಯ ದುರವಸ್ಥೆಗೆ ಗಂಡು ಗೊಂಬೆಯೇ ಕಾರಣವೆಂದು ಹೇಗೋ ತರ್ಕಮಾಡಿ, ಗಂಡು ಗೊಂಬೆಯನ್ನು ಎಡಗೈಯಲ್ಲಿ ತದುಕಿ ಹಿಡಿದು ನೆಲಕ್ಕೆ ಕುಕ್ಕಿದಳು".[92] ಹೀಗೆ ಗೊಂಬೆಯಾಟ ಚಿಕ್ಕಮಕ್ಕಳ ಕಲ್ಪನಾಶಕ್ತಿಯನ್ನು, ಹಿರಿಯರ ಬದುಕಿನ ಆಗು-ಹೋಗುಗಳನ್ನು ಅನುಕರಿಸುವ ಸೂಕ್ಷ್ಮ ದೃಷ್ಟಿಯನ್ನು ಹೆಚ್ಚಿಸಲು ಕಾರಣವಾಗುತ್ತವೆ ಎನ್ನಬಹುದು.

ಕೋಳಿಯಂಕ ಅಥವಾ 'ಅಂಕ'ವು ಮಲೆನಾಡಿನ ಜನಪ್ರಿಯವಾಗಿದ್ದ ಕ್ರೀಡೆಯಾಗಿತ್ತು ಇದನ್ನು 'ಜೂಜು' ಎನ್ನಲು ಅಡ್ಡಿಯಿಲ್ಲ. ಏಕೆಂದರೆ 'ಅಂಕ'ದಲ್ಲಿ ಕ್ರೀಡಾ ಮನೋಭಾವಕ್ಕಿಂತ ಹೆಚ್ಚಾಗಿ ಸ್ಪರ್ಧೆಯಲ್ಲಿ ಗೆಲ್ಲುವುದೇ ಮುಖ್ಯವಾಗಿತ್ತು. ಕೋಳಿಯ ಅಂಕದಲ್ಲಿ ಹೆಚ್ಚಾಗಿ ಕರಾವಳಿಯಿಂದ ಬಂದಿದ್ದ ಸೇರೆಗಾರರು ಮತ್ತು ಕೂಲಿಯಾಳುಗಳೇ ಭಾಗವಹಿಸುತ್ತಿದ್ದದರಿಂದ ಇದೊಂದು ಕರಾವಳಿ ಭಾಗದ ಕ್ರೀಡೆಯೆನ್ನಬಹುದು. ಕೋಳಿಗಳನ್ನು 'ಅಂಕ'ದ ದೃಷ್ಟಿಯಿಂದಲೇ ವಿಶೇಷವಾಗಿ ಬೆಳೆಸಿ ಹೆಸರನ್ನಿಟ್ಟು ಸ್ಪರ್ಧೆಗೆ ಬಿಡುತ್ತಿದ್ದರು. ಅಂಕ ನಡೆಯುತ್ತಿದ್ದ ಸ್ಥಳವನ್ನು 'ಕೋಳಿಯಂಕದ ಪಟ್ಟೆ'[93] ಎನ್ನುತ್ತಾರೆ. ಕಾನೂರು ಮತ್ತು ಮುತ್ತಳ್ಳಿ ನಡುವೆ ಕಳ್ಳಂಗಡಿಯ ಮುಂದೆ ಇದ್ದ ಬಯಲಿನಲ್ಲಿ ನಡೆಯುವ ಕೋಳಿ 'ಅಂಕ'ಕ್ಕೆ ಸೇರೆಗಾರ ರಂಗಪ್ಪ ಸೆಟ್ಟಿ, ಸೋಮ ಮುಂತಾದವರು ಪಾಲ್ಗೊಂಡ ದೃಶ್ಯವನ್ನು ಕಾಣುತ್ತೇವೆ. ಮೋಜು, ಕೋಳಿ ಅಂಕದ ಪಟ್ಟಿಯ ಸುತ್ತಲೂ ನೆರೆದ ಜನರ ಹರ್ಷ, ಕೇಕೆ, ಕೋಳಿಗಳನ್ನು ಹುರಿದುಂಬಿಸುವ ಪರಿ, ಅಟ್ಟಹಾಸ, ಕ್ರೌರ್ಯ ಮುಂತಾದ ಅಂಶಗಳು ಸಾಮಾನ್ಯವಾಗಿದ್ದವು.

ಕ್ರೀಡೆಗಳು ಮನಸ್ಸಿನ ಶೂನ್ಯತೆಯನ್ನು ಹೋಗಲಾಡಿಸಿ ಮನಸ್ಸಿಗೆ ಚೈತನ್ಯವನ್ನು ತುಂಬಿ, ದೈಹಿಕ ಮಾನಸಿಕ ಶಕ್ತಿಯನ್ನು ನೀಡಿದರೆ ಮನರಂಜನೆ ಮಾನವನ ಮನಸ್ಸಿಗೆ ಮತ್ತು ಭಾವನೆಗಳಿಗೆ ಮುದ ನೀಡಿ ಅವನನ್ನು ಚೈತನ್ಯಶೀಲನನ್ನಾಗಿ ಮಾಡುತ್ತಿದೆ. ಸಂಪರ್ಕ-ಸಾರಿಗೆ ಸಾಧನಗಳ ಕೊರತೆಯಿಂದ ಮಲೆನಾಡಿನ ದೇಸಿ ಪರಿಸರದಲ್ಲಿ ಮನರಂಜನೆಯ ಕ್ಷೇತ್ರಗಳು ಬಹಳ ವಿರಳವಾಗಿದ್ದವು. ಆದರೂ ಹರಿಕಥೆ, ಭಾಗವತರಾಟ, ರಾಮಾಯಣ, ಮಹಾಭಾರತ, ಪುರಾಣ, ಭಗವದ್ಗೀತೆಗಳ ವಾಚನ ಮತ್ತು ಪಠಣ, ಐಗಳ ಮಠ ಮತ್ತು ಶ್ರೀಮಂತರ ಮನೆಗಳಲ್ಲಿ ನಡೆಯುತ್ತಿದ್ದವು. ಮುತ್ತಳ್ಳಿಯ ಸೀತೆ ವಿನೋದ ವಿವಾಹದ ನಟನೆ ಮಾಡುವಾಗ "ಭಾಗವತರಾಟದಲ್ಲಿ ನೋಡಿದ್ದ ಸ್ವಯಂವರಾನುಕರಣೆಯ ಲೀಲೆಯಲ್ಲಿ ಸೀತೆ ಹೂವಯ್ಯನಿಗೆ

ತಾನೇ ತಯಾರು ಮಾಡಿದ ಹೂವಿನ ಮಾಲೆಯನ್ನು ಹಾಕಿ, ಅವನನ್ನು ಪತಿಯನ್ನಾಗಿ ವರಿಸಿದ್ದಳು"[94] ಇದು ಮಲೆನಾಡಿನ ಪರಿಸರದಲ್ಲಿ ಭಾಗವತರಾಟ ಒಂದು ಮನರಂಜನೆಯಾಗಿತ್ತು ಎಂಬುದನ್ನು ಸೂಚಿಸುತ್ತದೆ. ಹಬ್ಬ, ಜಾತ್ರೆ ಮತ್ತು ಮನೆಯಲ್ಲಿ ನಡೆಯುವ ವಿಶೇಷ ಧಾರ್ಮಿಕ ಆಚರಣೆಗಳಲ್ಲಿ ಭಾಗವತರಾಟಗಳನ್ನು ಏರ್ಪಡಿಸುವುದು ಸಾಮಾನ್ಯವಾಗಿತ್ತು. ಮನೆ ಮಂದಿಯೆಲ್ಲ ನೆಂಟರಿಷ್ಟರ ಜೊತೆಗೂಡಿ ಇಂಥ ಭಾಗವತರಾಟವನ್ನು ನೋಡಿ ಆನಂದಿಸುತ್ತಿದ್ದರು.

ಕಲ್ಲೂರ ದೇವಸ್ಥಾನಕ್ಕೆ ಬಂದಿದ್ದ ಬೆಟ್ಟಳ್ಳಿಯ ಮನೆಯವರಿಗೆ, ಜೋಯಿಸರು ಪೂಜೆಯನಂತರ ಪುರಾಣವಾಚನ ಮಾಡುವುದು, ಇದನ್ನೇ, 'ಹರಿಕಥೆ' ಅಥವಾ ಸತ್ಯನಾರಾಯಣ ಕಥೆ ಎಂತಲೂ ದೇವಯ್ಯಗೌಡ ಮತ್ತು ಮಕ್ಕಳು ಪರಿಹಾಸ್ಯ ಮಾಡುವುದನ್ನು ಕಾಣುತ್ತೇವೆ.[95] ಕಾನೂರಿಗೆ ಔತಣಕ್ಕೆ ಬಂದಿದ್ದ ಸೀತೆಮನೆ ಸಿಂಗಪ್ಪಗೌಡರು ಜೈಮಿನಿ ಭಾರತವನ್ನು ಓದಿ ಅರ್ಥ ಹೇಳುತ್ತಿದ್ದಾಗ ಹುಡುಗರೆಲ್ಲ ಅವರನ್ನು ಮುತ್ತುತ್ತಿದ್ದರು.[96] ಗಾಯಗೊಂಡ ಹೂವಯ್ಯ ಮುತ್ತಳ್ಳಿಯ ಮನೆಯಲ್ಲಿ ಮಲಗಿದ್ದಾಗ, ಹೊರ ಜಗುಲಿಯಲ್ಲಿ ಕೂತು ಸಿಂಗಪ್ಪಗೌಡರು ಜೈಮಿನಿ ಭಾರತವನ್ನು ವಾಚನ ಮಾಡುವುದನ್ನು ಕಾಣುತ್ತೇವೆ. ಆ ಪ್ರಾಂತ್ಯದಲ್ಲಿಯೇ ಜೈಮಿನಿಯನ್ನು ಅರ್ಥ ವಿವರಣೆ ಮೂಲಕ ರಾಗವಾಗಿ ಓದುವುದರಲ್ಲಿ ಸಿಂಗಪ್ಪಗೌಡರು ಹೆಸರು ಮಾಡಿದ್ದರು ಎಂಬುದು ತಿಳಿಯುತ್ತದೆ. ಅಗ್ರಹಾರದ ವೆಂಕಪ್ಪಯ್ಯ ಜೋಯಿಸರು ಹೂವಯ್ಯನ ಬಗ್ಗೆ ಜಿಗುಪ್ಸೆ ಪಡುವುದಕ್ಕೆ ಮುಖ್ಯ ಕಾರಣ "ಬ್ರಾಹ್ಮಣರಾದ ತಮಗಿಂತಲೂ ಶೂದ್ರನಾದ ಅವನಿಗೇ ಉಪನಿಷತ್ತು ಭಗವದ್ಗೀತೆ ಮೊದಲಾದವುಗಳ ಪರಿಚಯವೂ ಜ್ಞಾನವೂ ಹೆಚ್ಚಾಗಿದೆ"[97] ಎಂಬುದು ಮುಖ್ಯವಾಗುತ್ತದೆ. ಮಲೆನಾಡಿನ ಪರಿಸರದಲ್ಲಿ ಅಲ್ಪಸ್ವಲ್ಪ ವಿದ್ಯೆ ಕಲಿತ ಶ್ರೀಮಂತ ಜಮೀನುದಾರರು ರಾಮಾಯಣ, ಮಹಾಭಾರತ, ಭಗವದ್ಗೀತೆ ಮುಂತಾದ ಧಾರ್ಮಿಕ ಗ್ರಂಥಗಳ ವಾಚನ ಪಠಣಗಳನ್ನು ಶ್ರದ್ಧೆ, ಭಕ್ತಿಯಿಂದ ಕುಳಿತು ಕೇಳುತ್ತಿದ್ದರು. ಮಾತ್ರವಲ್ಲದೆ ಗ್ರಂಥಗಳನ್ನೆಲ್ಲ ಪ್ರತಿ ಮಾಡಿಸಿ ಜೋಪಾನ ಮಾಡುತ್ತಿದ್ದರು. ಮಲೆನಾಡಿನಲ್ಲಿ ಐಗಳ ಕೂಲಿಮಠದಲ್ಲಿ ಈ ಕೆಲಸ ಮಾಡುತ್ತಿದ್ದುದನ್ನು ಕಾಣಬಹುದು". ಐಗಳ ಅನೇಕಾನೇಕ ಕರ್ತವ್ಯಗಳಲ್ಲಿ.... ಗದುಗಿನ ಭಾರತ, ತೊರವೆ ರಾಮಾಯಣ, ಜೈಮಿನಿ ಭಾರತ ಇತ್ಯಾದಿಗಳನ್ನು ಓಲೆಗರಿಯಲ್ಲಿ ನಕಲು ಮಾಡುವುದು ಇತ್ಯಾದಿ...."[98] ಸೇರಿದ್ದವು. ಈ ಗ್ರಂಥಗಳ ನಕಲು ಅಥವಾ ಪ್ರತಿ ಮಾಡುವುದಕ್ಕೆ ಶ್ರೀಮಂತ ಜಮೀನುದಾರರು ಪ್ರೋತ್ಸಾಹ ನೀಡುತ್ತಿದ್ದರು. ಎನ್ನುವುದಕ್ಕೆ ಕೋಣೂರಿನ ರಂಗಪ್ಪಗೌಡರೇ ಸಾಕ್ಷಿಯಾಗಿದ್ದರು. ಐಗಳು ಊರಿಗೆ ಹೋಗಲು ಅನುಮತಿ ಕೇಳಿದಾಗ ರಂಗಪ್ಪಗೌಡರು, "ಈಗಲೇ ಎಲ್ಲಿ ಆಗುತ್ತದೇರಿ, ನೀವು ಊರಿಗೆ ಹೋಗಿ ಬರಾಕೆ? ಜೈಮಿನಿ ಬರೆದು ಕೊಡ್ತೀನಿ ಅಂದಿರಿ, ಅದೂ ಪೂರೈಸಿಲ್ಲ...."[99] ಹೀಗೆ ಶ್ರೀಮಂತ ಜಮೀನುದಾರರು ಮಹಾಕಾವ್ಯಗಳನ್ನು ಧಾರ್ಮಿಕ ಗ್ರಂಥಗಳನ್ನು ಓಲೆಗರಿಗಳಲ್ಲಿ ನಕಲು

ಮಾಡಿಸಿ ಮುಂದಿನ ಪೀಳಿಗೆಯವರಿಗೆ ರಕ್ಷಿಸಿ ಇಡುತ್ತಿದ್ದುದನ್ನು ಕಾಣುತ್ತೇವೆ. ಹೀಗೆ ಮಲೆನಾಡಿನ ದೇಸಿಯ ಬದುಕನ್ನು ಶ್ರೀಮಂತಗೊಳಿಸುವಲ್ಲಿ ದೇಸಿಯ ಕ್ರೀಡೆಗಳು, ಪುರಾಣವಾಚನ ಮಹಾಕಾವ್ಯಗಳು, ಭಾಗವತರಾಟಗಳು ಸಹಕಾರಿಯಾಗಿದ್ದವು ಎನ್ನುವುದು ತಿಳಿಯುತ್ತದೆ.

ಹಾರ್ಡಿಯವರ ಕಾದಂಬರಿಗಳಲ್ಲಿಯೂ ದೇಸಿ ಕ್ರೀಡೆ ಮತ್ತು ಮನರಂಜನೆಗಳ ಬಗ್ಗೆ ವಿವರಣೆಗಳಿರುವುದನ್ನು ಕಾಣುತ್ತೇವೆ. ಮಲೆನಾಡಿನ ದೇಸಿ ಕ್ರೀಡೆಗಳಿಗೆ ಹೋಲಿಸಿದರೆ ವೆಸೆಕ್ಸ್‌ನ ದೇಸಿ ಪರಿಸರದಲ್ಲಿ ಮಕ್ಕಳ ಮತ್ತು ಮಹಿಳೆಯರ ಕ್ರೀಡೆಗಳು ಬಹಳ ವಿರಳವೆನ್ನಬಹುದು, ಅವರ ಕಾದಂಬರಿಗಳಲ್ಲಿ ಎಲ್ಲಿಯೂ ಮಕ್ಕಳಾಟಗಳ ಬಗ್ಗೆ ಮತ್ತು ಮಹಿಳೆಯರ ಪ್ರತ್ಯೇಕ ಆಟಗಳ ಉಲ್ಲೇಖವಿರುವುದಿಲ್ಲ. ಆದರೆ ಮಲೆನಾಡಿನಲ್ಲಿ ಪ್ರಖ್ಯಾತವಾಗಿದ್ದ 'ಅಂಕ'ಪಟ್ಟಿಗೆ ಸಮಾನವಾದ 'ದಾಳದ' ಆಟ ಅಥವಾ ರ್‍ಯಾಫೆಲ್‌ನ್ನು ವೆಸೆಕ್ಸ್‌ನ ಎಗ್ಡನ್ ಹೀತ್‌ನ ಪ್ರದೇಶದಲ್ಲಿ ಆಡುತ್ತಿದ್ದ ಉಲ್ಲೇಖವಿದೆ. ದಾಳದ ಆಟವು ಪಗಡೆಯಾಟದಂತೆ ಜೂಜಿನ ಮತ್ತು ಮೋಜಿನ ಪಂದ್ಯವಾಗಿತ್ತು. ವೆಸೆಕ್ಸ್‌ನ ಗ್ರಾಮೀಣ ಪ್ರದೇಶದಲ್ಲಿ ವಿಶೇಷ ಸಂದರ್ಭಗಳಲ್ಲಿ ಮತ್ತು ಹಳ್ಳಿಯ ಹೋಟೆಲ್‌ಗಳಲ್ಲಿ ದಾಳದ ಆಟವು ಜನಪ್ರಿಯವಾಗಿತ್ತು. ಎಗ್ಡನ್ ಹೀತ್‌ನಲ್ಲಿ ಪ್ರತಿವರ್ಷವೂ ದಾಳದ ಆಟದ ಜಾತ್ರೆ ನಡೆಯುವ ದಿನ ಸುತ್ತಮುತ್ತಲಿನ ಜನರೆಲ್ಲ ಒಂದೆಡೆ ಸೇರುವುದನ್ನು ಕಾಣುತ್ತೇವೆ. ಇಬ್ಬರು ಆಟಗಾರರು ದಾಳಗಳನ್ನು ಬಿಡುತ್ತಿದ್ದರು. ಅದರಲ್ಲಿ ಗೆದ್ದವರಿಗೆ ಹಣ ಮತ್ತು ಇನ್ನಿತರ ವಸ್ತುಗಳನ್ನು ನೀಡಲಾಗುತ್ತಿತ್ತು.

ಎಗ್ಡನ್ ಹೀತ್‌ನ ಪ್ರಶಾಂತ ಹೋಟೆಲ್‌ನಲ್ಲಿ ನಡೆಯುತ್ತಿದ್ದ ದಾಳದ ಆಟದಲ್ಲಿ ಟಿಮೋತಿ, ಫೇರ್‌ವೇ, ಕ್ರಿಶ್ಚಿಯನ್ ಮುಂತಾದವರೆಲ್ಲ ಭಾಗವಹಿಸುವುದನ್ನು ಕಾಣುತ್ತೇವೆ. ಕ್ರಿಶ್ಚಿಯನ್, ಶ್ರೀಮತಿ ಯೋಬ್ರೈಟ್ ತನ್ನ ಮಗನಿಗೆ ಮತ್ತು ಸಾಕುಮಗಳು ತೋಮಸಿನ್‌ಗೆ ಭಾಗ ಮಾಡಿಕೊಟ್ಟ ಹಣವನ್ನು ತಲುಪಿಸಲು ಹೋಗುವಾಗ ದಾರಿ ಮಧ್ಯೆ ಸ್ನೇಹಿತರ ಒತ್ತಾಯಕ್ಕೆ ಮಣಿದು ಪ್ರಶಾಂತಿ ಹೋಟೆಲ್‌ನಲ್ಲಿ ನಡೆಯುತ್ತಿದ್ದ ದಾಳದಾಟವನ್ನು ವೀಕ್ಷಿಸುತ್ತಾನೆ. ದಾಳಗಳಲ್ಲಿ ಮಾಂತ್ರಿಕ ಶಕ್ತಿಯಿದೆ ಎಂದುಕೊಂಡು ಮೊದಮೊದಲು ಮುಟ್ಟಲೂ ಸಹ ಹೆದರುತ್ತಾನೆ. ಅವನಲ್ಲಿರುವ ಹಣದ ವಾಸನೆ ಹಿಡಿದು ವೈಲ್ಡೀವ್ ಆಮಿಷದಿಂದ ಕಾಡಿನ ಮಧ್ಯೆ ಲಾಟೀನಿನ ಬೆಳಕಿನಲ್ಲಿ ಪಗಡೆಯಾಟಕ್ಕೆ ಓಲೈಸುತ್ತಾನೆ. ಈ ಆಟದಲ್ಲಿ ವೈಲ್ಡಿವ್ ಕ್ರಿಶ್ಚಿಯನ್‌ನಲ್ಲಿದ್ದ ಎಲ್ಲಾ ಹಣವನ್ನು ಗೆದ್ದುಕೊಳ್ಳುವುದನ್ನು ಕಾಣುತ್ತೇವೆ[100]. ಆದರೆ ಡಿಗರಿ ವೆನ್ ವೈಲ್ಡೀವ್‌ನನ್ನು ಪಗಡೆಯಾಟಕ್ಕೆ ಆಹ್ವಾನಿಸಿ ವೈಲ್ಡೀವ್ ಕ್ರಿಶ್ಚಿಯನ್‌ನಿಂದ ಗೆದ್ದ ಹಣವನ್ನೆಲ್ಲ ಗೆಲ್ಲುತ್ತಾನೆ. ಹೀಗೆ ದಾಳಾದ ಆಟ ಅಥವಾ ಪಗಡೆಯಾಟ ವಿಶೇಷ ಸಂದರ್ಭಗಳಲ್ಲಿ ವಾರ್ಷಿಕ ಜೂಜಿನ ಪಂದ್ಯವಾಗಿ ಎಗ್ಡನ್ನಿನ ಪ್ರದೇಶದಲ್ಲಿ ಅಸ್ತಿತ್ವದಲ್ಲಿತ್ತು.

ಕುವೆಂಪುರವರ ಕಾದಂಬರಿಗಳಲ್ಲಿ ಕಳ್ಳಂಗಡಿಯ ಮುಂದೆ ವಿಶಾಲ ಬಯಲಿನಲ್ಲಿ ನಡೆಯುತ್ತಿದ್ದ ಕೋಳಿಯಂಕ ಪಂದ್ಯಕ್ಕೆ ಸಮಾನವಾಗಿ ಪ್ರಶಾಂತಿ ಹೋಟೆಲ್ ಮತ್ತು ಹೊರಗಿನ ಬಯಲು ಪ್ರದೇಶದಲ್ಲಿ ನಡೆಯುತ್ತಿದ್ದ ದಾಳದ ಆಟಗಳು ನಡೆಯುತ್ತಿದ್ದವು. ಕೋಳಿಯಂಕ ಮತ್ತು ದಾಳದ ಆಟಗಳಿಗೆ ಜನರು ಹಣ ಮತ್ತು ವಸ್ತುಗಳನ್ನು ಬಾಜಿ ಕಟ್ಟಲು ಬಳಸುತ್ತಿದ್ದರು.

ಮಲೆನಾಡಿನಲ್ಲಿ ಪ್ರಚಲಿತದಲ್ಲಿದ್ದ ಭಾಗವತರಾಟ, ದೊಡ್ಡಾಟಗಳಿಗೆ ಸಮಾನವಾಗಿ ವೆಸೆಕ್ಸ್‌ನ ಪ್ರದೇಶದಲ್ಲಿ ನಾಟಕ, ವಿವಿಧ ಬಗೆಯ ನೃತ್ಯಗಳು ಮತ್ತು ಕೆಲವು ವಾರ್ಷಿಕ ಉತ್ಸವಗಳಿ ಮನರಂಜನೆಯ ಕಲಾ ಪ್ರಕಾರಗಳಾಗಿದ್ದವು. ಶ್ರೀಮತಿ ಯೋಬ್ರೈಟ್ ತನ್ನ ಮಗ ಕ್ಲಿಮ್ ಪ್ಯಾರಿಸ್ಸಿನಿಂದ ಊರಿಗೆ ಬಂದಾಗ ಮನೆಯಲ್ಲಿ ಒಂದು ಸಂತೋಷಕೂಟವನ್ನು ಏರ್ಪಡಿಸಿರುತ್ತಾರೆ. ಇದರ ಜೊತೆಗೆ 'ಸಂತ ಜಾರ್ಜ್‌ನ' ನಾಟಕವನ್ನು ಸಹ ಆಯೋಜಿಸಿರುತ್ತಾರೆ. ಇದೊಂದು ಯೇಸು ಕ್ರಿಸ್ತನ ಜೀವನವನ್ನು ಕುರಿತ ಧಾರ್ಮಿಕ ನಾಟಕವಾಗಿತ್ತು[101]. ಹಳ್ಳಿಯ ಮಕ್ಕಳು ಮತ್ತು ಹಿರಿಯರು ಇಂತಹ ಧಾರ್ಮಿಕ ಪೌರಾಣಿಕ ನಾಟಕಗಳನ್ನು ಕಲಾತಂಡಗಳನ್ನು ಮಾಡಿಕೊಂಡು ಆಗಿಂದಾಗ್ಯೆ ಪ್ರದರ್ಶನಾಭ್ಯಾಸಗಳನ್ನು ಮಾಡಿ ವಿಶೇಷ ಸಂದರ್ಭಗಳಲ್ಲಿ ಪ್ರದರ್ಶನ ನೀಡುತ್ತಿದ್ದರು. ಈ ನಾಟಕಗಳಲ್ಲಿ ಪುರುಷರು ಮಾತ್ರ ಪಾತ್ರ ಮಾಡುತ್ತಿದ್ದುದನ್ನು ಕಾಣುತ್ತೇವೆ. ಆದರೆ ಕಾಲ ಕ್ರಮೇಣದಲ್ಲಿ ಹುಡುಗಿರಯರೂ ಸಹ ವೇಷ ಹಾಕಿ ಪಾತ್ರ ಮಾಡುತ್ತಿದ್ದುದನ್ನು ಕಾಣುತ್ತೇವೆ. ಯುಸ್ಟೇಷ್ಯ 'ಸಂತ ಜಾರ್ಜ್' ನಾಟಕದಲ್ಲಿ ಟರ್ಕಿಶ್‌ನೈಟ್‌ನ ಗಂಡು ಪಾತ್ರವನ್ನು ನಿರ್ವಹಿಸಿ ಕ್ಲಿಮ್ ಯೋಬ್ರೈಟ್‌ನನ್ನು ನೋಡಲು ಹೋಗುತ್ತಾಳೆ. ಇಂತಹ ಧಾರ್ಮಿಕ ಮತ್ತು ಪೌರಾಣಿಕ ನಾಟಕಗಳು ಪ್ರೋತ್ಸಾಹವಿಲ್ಲದೆ ನಶಿಸಿ ಹೋಗುವುದನ್ನು ಕಾಣುತ್ತೇವೆ. ಮಲೆನಾಡಿನ ಜಮೀನುದಾರರ ಹಾಗೆ ವೆಸೆಕ್ಸ್‌ನಲ್ಲಿ ಯಾರೂ ನಾಟಕವನ್ನು ಪ್ರತಿ ಮಾಡಿಸಿ, ಪ್ರೋತ್ಸಾಹಿಸುವ ಉಲ್ಲೇಖಗಳು ಕಂಡು ಬರುವುದಿಲ್ಲ ನಾಟಕಗಳ ಸ್ಥಾನವನ್ನು ನೃತ್ಯ ಪ್ರಕಾರಗಳು ಆಕ್ರಮಿಸಿಕೊಳ್ಳುವುದನ್ನು, ಲಾವಣಿ ಮತ್ತು ಜಾನಪದ ಹಾಡುಗಳಿಗೆ ಬದಲಾಗಿ ಸಂಗೀತ ವಾದ್ಯಗಳು ಅಸ್ತಿತ್ವಕ್ಕೆ ಬಂದುದನ್ನು ಹಾರ್ಡಿಯವರ ಕಾದಂಬರಿಗಳಲ್ಲಿ ಕಾಣುತ್ತೇವೆ.

ಹಾರ್ಡಿಯವರ ಕಾದಂಬರಿಗಳಲ್ಲಿ ಹಳ್ಳಿಗಾಡಿನ ನೃತ್ಯ ಮತ್ತು ವಾದ್ಯ ಸಂಗೀತಕ್ಕೂ ಸಾಕಷ್ಟು ವಿವರಣೆಗಳಿವೆ. ಮದುವೆ, ಧಾರ್ಮಿಕ ಆಚರಣೆ ಮತ್ತು ಹೊಸವರ್ಷದ ಆಚರಣೆಗಳಲ್ಲಿ ಸಾಮೂಹಿಕವಾಗಿ ನೃತ್ಯಮಾಡಿ ಆನಂದಿಸುವುದು ವೆಸೆಕ್ಸ್‌ನ ದೇಸಿಯ ಸಂಸ್ಕೃತಿಯಾಗಿತ್ತು. 'ದಿ ರಿಟರ್ನ್ ಆಫ್ ದಿ ನೇಟಿವ್' ಮತ್ತು 'ಟೆಸ್ ಆಫ್ ದಿ ಡಿ ಅರ್ಬರ್‌ವಿಲ್ಲೆ' ಕಾದಂಬರಿಗಳೆರಡೂ ಪ್ರಾರಂಭವಾಗುವುದೇ ನೃತ್ಯದ ಮೂಲಕ. ದಿ ರಿಟರ್ನ್ ಆಫ್ ದಿ ನೇಟಿವ್ ಕಾದಂಬರಿಯ

ಆರಂಭದಲ್ಲಿ ಬಾನ್‌ಫೈರ್ ಅಥವಾ ಕೊಂಡದ ಹಬ್ಬ ಆಚರಿಸಲ್ಪಡುವುದಲ್ಲಿ, ಬೆಂಕಿಯ ಸುತ್ತ ಮುತ್ತಲು ಹಳ್ಳಿಯ ಜನರೆಲ್ಲ ಒಂದೆಡೆ ಸೇರಿ ನೃತ್ಯ ಮಾಡುತ್ತಿದ್ದರು.[102] ಇದೇ ಕಾದಂಬರಿಯ ಕೊನೆಯಲ್ಲಿ ಬರುವ ಮೇ ಪೋಲ್ ಹಬ್ಬವೂ ಸಹ ಸಾಮೂಹಿಕ ನೃತ್ಯಕ್ಕೆ ಸಾಕ್ಷಿಯಾಗುತ್ತದೆ.[103] ಪೂರ್ವ ಎಗ್ಡನ್ನಿನ ಹಳ್ಳಿಯ ಜನರೆಲ್ಲ ಒಂದೆಡೆ ಸೇರಿ ವಿಶೇಷ ನೃತ್ಯ ಸಂಗೀತವನ್ನು ಏರ್ಪಡಿಸುವುದು ಮನರಂಜನೆಯ ಒಂದು ಭಾಗವಾಗಿರುತ್ತದೆ. ಯಾವುದೇ ಧಾರ್ಮಿಕ ಆಚರಣೆ ಮತ್ತು ಉತ್ಸವಗಳಲ್ಲಿ ಮಾಡುವ ನೃತ್ಯಗಳಲ್ಲಿ ಭಕ್ತಿಗಿಂತ ಮನರಂಜನೆಯೇ ಮುಖ್ಯವಾಗಿರುತ್ತಿತ್ತು. ಇದೇ ರೀತಿಯ ಸಾಮೂಹಿಕ ನೃತ್ಯದಿಂದಲೇ 'ಟೆಸ್ ಆಫ್ ದಿ ಡಿ ಅರ್ಬರ್‌ವಿಲ್ಲೆ' ಕಾದಂಬರಿ ಆರಂಭವಾಗುತ್ತದೆ. ಮ್ಯಾರ್ಲಾಟ್‌ನ ಹಳ್ಳಿಯ ಹುಡುಗಿಯರೆಲ್ಲ ಊರಿನ ವಿಶಾಲವಾದ ಹಸಿರು ಹುಲ್ಲು ಹಾಸಿನ ಮೇಲೆ ನೃತ್ಯಮಾಡುವುದು ಮನರಂಜನೆಯ ಉದ್ದೇಶವನ್ನು ಹೊಂದಿದೆ.

ಹಾರ್ಡಿಯವರ 'ಟೆಸ್' ಕಾದಂಬರಿಯಲ್ಲಿ ಜಾನಪದ ಹಾಡುಗಳಾದ ಲಾವಣಿ, ಸುಗ್ಗಿಯ ಹಾಡುಗಳು, ಸಾಮೂಹಿಕ ಜಾನಪದ ನೃತ್ಯಗಳು ದೇಸಿಯ ಬದುಕಿಗೆ ಕನ್ನಡಿ ಹಿಡಿದಂತಿವೆ. ಇಂಗ್ಲೆಂಡಿನ ಗ್ರಾಮೀಣ ಭಾಗದಲ್ಲಿದ್ದ ಹಳ್ಳಿಯ ಹಾಡುಗಳು, ಲಾವಣಿ, ಜಾನಪದಗೀತೆಗಳು ಮನರಂಜನೆಯ ಕ್ಷೇತ್ರಗಳಾಗಿದ್ದವು ಮತ್ತು ಅವುಗಳು ಅತಿವೇಗದಲ್ಲಿ ಕಣ್ಮರೆಯಾಗುತ್ತಿವೆ ಎನ್ನುವ ಭೀತಿಯನ್ನು ಕೃತಿಕಾರರು ವ್ಯಕ್ತಪಡಿಸುತ್ತಾರೆ[104] ಟ್ರ್ಯಾಂಟ್ರಿಡ್ಜ್‌ನ ಸುತ್ತಮುತ್ತಲ ಜನರು, ಹೆಚ್ಚಿನವರು ಕೂಲಿಯಾಳುಗಳು, ವಾರಾಂತ್ಯದಲ್ಲಿ ಸಂತೆಗೆ ಹೋಗುವುದು, ಸಂತೆಯಲ್ಲಿದ್ದ ಹೋಟೆಲ್‌ಗಳಲ್ಲಿ ಕುಡಿದು ನೃತ್ಯ ಮಾಡುವುದು, ಹಾಡುವುದು ಸಾಮಾನ್ಯವಾಗಿತ್ತು. ಪ್ರತಿ ಶನಿವಾರ ಟ್ರಾಂಟ್ರಿಡ್ಜ್‌ನ ಹೋಟೆಲ್‌ಗಳಲ್ಲಿ ಕುಡಿತ, ನೃತ್ಯ, ಮೋಜು ಮುಂತಾದ ಮನರಂಜನೆ ಕೂಟಗಳು ಮಧ್ಯರಾತ್ರಿಯವರೆಗೂ ನಡೆಯುತ್ತಿದ್ದವು.[105] ವೆಸೆಕ್ಸ್‌ನ ಪ್ರದೇಶದಲ್ಲಿದ್ದ ಹೋಟೆಲುಗಳು, ರಸ್ತೆ ಬದಿಯ ಇನ್‌ಗಳು, ಮಲೆನಾಡಿನ ಕಳ್ಳಂಗಡಿಗೆ ಸಮಾನವಾಗಿದ್ದವು. ಎರಡೂ ಸ್ಥಳಗಳು ಗ್ರಾಮೀಣ ಪ್ರದೇಶದ ಜನರ ಸಾಂಪ್ರದಾಯದ ದೇಸಿಯ ಮನರಂಜನಾ ಸ್ಥಳಗಳಾಗಿದ್ದವು. ಹೀಗೆ ದೇಸಿಯ ಕ್ರೀಡೆಗಳು, ನೃತ್ಯಗಳು, ಸಂಗೀತ, ಹಾಡು ಮುಂತಾದ ಕಲಾಪ್ರಕಾರಗಳು ಇಬ್ಬರೂ ಕೃತಿಕಾರರ ಕಾದಂಬರಿಗಳಲ್ಲಿ ದೇಸಿಯ ಬದುಕಿನ ಭಾಗವಾಗಿ ಅಭಿವ್ಯಕ್ತಗೊಂಡಿರುವುದನ್ನು ಕಾಣುತ್ತೇವೆ.

2.6 ದೇಸಿ ಶಿಕ್ಷಣ ಮತ್ತು ಜಾಗತೀಕರಣ:

ಕುವೆಂಪು ಮತ್ತು ಹಾರ್ಡಿಯವರ ಕಾದಂಬರಿಗಳಲ್ಲಿ ಸಾಂಪ್ರದಾಯಿಕ ವಿದ್ಯಾಭ್ಯಾಸದ ಬಗ್ಗೆ ಕೆಲವು ನಿದರ್ಶನಗಳಿದ್ದು ಅವು ಅಂದಿನ ಜನರ ವಿಭಿನ್ನ ಮನೋಭಾವಕ್ಕೆ ಸಾಕ್ಷಿಯಾಗಿವೆ.

ಆಧುನಿಕ ಸಾರ್ವತ್ರಿಕ ಶಿಕ್ಷಣದ ಸ್ಪರ್ಶವಿಲ್ಲದ ಗ್ರಾಮೀಣ ಜನರಿಗೆ ಅದರಲ್ಲೂ ಮೇಲ್ಜಾತಿಯವರಿಗೆ ಕೆಲವು ವಿದ್ಯಾಕೇಂದ್ರಗಳಿಂದ ಶಿಕ್ಷಣ ನೀಡಲಾಗುತ್ತಿತ್ತು. ಅಂತಹ ಕೇಂದ್ರಗಳೆಂದರೆ ಮಠ, ದೇವಾಲಯ ಮತ್ತು ಅಗ್ರಹಾರಗಳಾಗಿದ್ದವು. ಈ ಕೇಂದ್ರಗಳು ಸೀಮಿತ ವರ್ಗದವರಿಗೆ ಮಾತ್ರ ಶಿಕ್ಷಣ ನೀಡುತ್ತಾ, ಸಾಮಾಜಿಕವಾಗಿ ಮತ್ತು ಅರ್ಥಿಕವಾಗಿ ಕೆಳಸ್ತರದಲ್ಲಿರುವವರನ್ನು ಶಿಕ್ಷಣದಿಂದ ದೂರವಿಟ್ಟಿದ್ದವು ಎಂಬುದು ತಿಳಿಯುತ್ತದೆ. ಶಿಕ್ಷಣದ ಬಗ್ಗೆ ಸಾಮಾನ್ಯ ಜನರು ಸಾಂಪ್ರದಾಯಿಕವಾಗಿ ಬೆಳೆದು ಬಂದಿದ್ದ ಕೆಲವು ಪೂರ್ವಾಗ್ರಹಪೀಡಿತ ಭಾವನೆಗಳ ಬಗ್ಗೆ ಹೆಚ್ಚು ಒಲವು ತೋರುತ್ತಿದ್ದರು. ವಿದ್ಯೆ ಎನ್ನುವುದು ಮೇಲ್ಜಾತಿಯರು ಮಾತ್ರ ಪಡೆಯಬೇಕು, ಕೆಳಜಾತಿಯವರು ತಮ್ಮ ಕುಲಕಸುಬುಗಳನ್ನು ಮಾತ್ರ ಮುಂದುವರಿಸಿಕೊಂಡು ಹೋಗಬೇಕು. ಇದರಿಂದ ಒಕ್ಕಲಿಗನಾದವನು ಒಕ್ಕಲುತನವನ್ನೇ ಮಾಡಬೇಕು. ಅದನ್ನು ಬಿಟ್ಟು ಬೇರೆ ವಿದ್ಯೆ ಕಲಿಯುವುದು ಅನಿಷ್ಟಕರ ಮತ್ತು ಧರ್ಮಬಾಹಿರ ಎಂಬ ಭಾವನೆಗಳನ್ನು ಅವರಲ್ಲಿ ಬಿತ್ತಲಾಗಿತ್ತು ಈ ರೀತಿಯ ಪೂರ್ವಾಗ್ರಹಪೀಡಿತ ಭಾವನೆಗಳನ್ನು ಇಬ್ಬರೂ ಕೃತಿಕಾರರ ಕೃತಿಗಳಲ್ಲಿ ಕಾಣುತ್ತೇವೆ. ಅಗ್ರಹಾರದ ವೆಂಕಪ್ಪಯ್ಯ ಜೋಯಿಸರು ಶೂದ್ರರಿಗೆ ಶಿಕ್ಷಣ ನೀಡುವುದರ ಬಗ್ಗೆ ಕಾನೂರಿನ ಚಂದ್ರಯ್ಯಗೌಡರಿಗೆ ಹೇಳುವ ಮಾತುಗಳು: "ನಾನು ಹೇಳಿದ್ದೆ ನಿನಗೆ ಮೊದಲೇ, ಈಗಿನ ವಿದ್ಯಾಭ್ಯಾಸ ಹುಡುಗರನ್ನು ಹಾಳುಮಾಡಿಬಿಡುತ್ತದೆ ಎಂದು! ದೇವರು ದಿಂಡರು ಭಕ್ತಿಗಿಕ್ತಿ ಎಲ್ಲ ನಿರ್ನಾಮ!"[106] ಜೋಯಿಸರ ಪ್ರಕಾರ ವಿದ್ಯೆ ಏನಿದ್ದರೂ ಮೇಲ್ಜಾತಿಯವರಿಗೆ ಮಾತ್ರ ಮೀಸಲು ಶೂದ್ರರು ಯಾರೂ ವಿದ್ಯಾವಂತರಾಗಬಾರದು ಎಂಬ ಧೋರಣೆ ಅವರ ಮಾತಿನಲ್ಲಿ ಅಡಗಿರುವುದನ್ನು ಗುರುತಿಸಬಹುದು.

ಮಲೆನಾಡಿನ ಪರಿಸರದಲ್ಲಿ ಪರಂಪರಾನುಗತವಾಗಿ ಬೆಳೆದು ಬಂದಿದ್ದ ಮೌಢ್ಯದ ಜೊತೆಗೆ ಅನಕ್ಷರತೆಗೆ ಜೋಯಿಸರಂತಹವರೇ ಕಾರಣರಾಗುತ್ತಾರೆ. ಕಾಲಾನಂತರ ಬದಲಾವಣೆಯ ಗಾಳಿ ಬೀಸಲಾರಂಭಿಸಿದಾಗ ತಲ್ಲಣಗೊಂಡು ಸಮಾಜದಲ್ಲಿದ್ದ ಪ್ರತಿಷ್ಠಿತರ ಮನಸ್ಸಿಗೆ ಕಿಚ್ಚು ಹಚ್ಚಿ ಸಾಂಪ್ರದಾಯಕ ಸ್ಥಿತಿಯನ್ನೇ ಮುಂದುವರಿಸಲು ಹವಣಿಸುವುದನ್ನು ಕಾಣುತ್ತೇವೆ: "ಈ ಶೂದ್ರ ಮಕ್ಕಳಿಗೆಲ್ಲ ಉಪನಿಷತ್ತು, ಭಗವದ್ಗೀತೆ ಗಂಧವಾದರೂ ಗೊತ್ತಾಗುತ್ತದೆಯೇ? ನಮಗೇ ಗೊತ್ತಾಗುತ್ತಿಲ್ಲ.... ಅದನ್ನೆಲ್ಲ ಓದಿ ಮನೆ ಹಾಳು ಮಾಡಿ ಕೊಳ್ಳುತ್ತಾರೆ ಅಷ್ಟೇ!"[107] ಇದರಿಂದ ಮಲೆನಾಡಿನ ದೇಸಿಯ ಬದುಕಿನಲ್ಲಿ ಅನಕ್ಷರತೆ, ಮೌಢ್ಯಗಳು ರಾರಾಜಿಸಲು ಮೇಲ್ಜಾತಿಯವರೇ ಕಾರಣರಾಗುವುದನ್ನು ತಿಳಿಯಬಹುದು. ಇಂಥವರ ಮಾತುಗಳನ್ನು ಪ್ರಶ್ನೆ ಮಾಡದೆ ಒಪ್ಪಿಕೊಂಡು ತಾವು ಮಾಡುತ್ತಿರುವ ಕುಲಕಸುಬುಗಳನ್ನು ತಮ್ಮ ಮಕ್ಕಳು ಮಾಡಿಕೊಂಡು ಹೋದರೆ ಸಾಕು ಎಂಬ ಭಾವನೆ ದೇಸಿಯ ಬದುಕಿನಲ್ಲಿತ್ತು.

ಜೋಯಿಸರು ಹೇಳುವ ಮಾತುಗಳನ್ನೇ ಹಾರ್ಡಿಯವರ ಕಾದಂಬರಿಯಲ್ಲಿಯೂ ಸಹ ಕಾಣಬಹುದು. ಎಗ್ಡನ್ ಹೀತನ ಸಾಮಾನ್ಯ ಜನರ ಮತ್ತು ಕ್ಯಾಪ್ಟನ್ ವೈ ಅವರ ಸಂಭಾಷಣೆಯಲ್ಲಿ ವಿದ್ಯೆಯ ಬಗ್ಗೆ ಅವರಿಗಿದ್ದ ಅಭಿಪ್ರಾಯಗಳು ಹೊರಹೊಮ್ಮುತ್ತವೆ. ಕ್ಯಾಪ್ಟನ್ ವೈ ಪ್ರಕಾರ "ಈಚೆಗೆ ಹುಡುಗರನ್ನು ಶಾಲೆಗೆ ಕಳುಹಿಸುವುದು ಹೆಚ್ಚಾಯಿತು, ಅದರಿಂದಲೇ ತುಂಬಾ ಅಪಾಯ!.... ವಿದ್ಯೆ ಇಲ್ಲದಾಗ ದೇಶ ಸುಭಿಕ್ಷವಾಗೇ ಇತ್ತು".[108] ಅವರ ಪ್ರಕಾರ ಕ್ಲಿಮ್ ತನ್ನ ತಂದೆಯ ಕಸುಬು ಆದ ವ್ಯವಸಾಯವನ್ನೇ ಮಾಡಿಕೊಂಡಿದ್ದರೆ ಸಾಕಾಗಿತ್ತು, ಅವನು ಪ್ಯಾರಿಸ್ಸಿಗೆ ಹೋಗುವ ಅಗತ್ಯವಿರಲಿಲ್ಲ ಎನ್ನುವಾಗ ಜೋಯಿಸರು ಹೇಳುವ ಮಾತುಗಳು ನೆನಪಾಗುತ್ತವೆ. ಇದಕ್ಕೆ ಪೂರಕವಾಗಿ ಕ್ಯಾಪ್ಟನ್ ವೈ ತನ್ನ ವೃತ್ತಿಯನ್ನೇ ಉದಾಹರಣೆಯಾಗಿ ನೀಡುತ್ತಾರೆ. ಅವರ ತಂದೆ ನಾವಿಕನಾಗಿರುತ್ತಾನೆ, ಅದೇ ವೃತ್ತಿಯನ್ನೇ ತಾನು ಮುಂದುವರೆಸಿ ನಿವೃತ್ತನಾಗಿರುತ್ತಾನೆ. ಒಂದು ವೇಳೆ ತನಗೆ ಮಗನಿದ್ದರೆ ಆ ವೃತ್ತಿಯನ್ನೇ ಕೈಗೊಳ್ಳುತ್ತಿದ್ದ ಎನ್ನುತ್ತಾನೆ. ಅಗ್ರಹಾರದ ಜೋಯಿಸರು ಹೇಳಿದ ಮಾತಿಗೂ ಕ್ಯಾಪ್ಟನ್ ವೈ ಹೇಳಿದುದಕ್ಕೂ ಸಾಕಷ್ಟು ಸಾಮ್ಯತೆಯಿರುವುದು ಇದರಿಂದ ವೇದ್ಯವಾಗುತ್ತದೆ. ಇದು ಅವರಿಬ್ಬರ ಅಭಿಪ್ರಾಯವಲ್ಲದಿದ್ದರೂ ಅಂದಿನ ಕಾಲದ ದೇಸಿಯ ಬದುಕಿನಲ್ಲಿದ್ದ ಹಳ್ಳಿಗರ ಸಾಮಾನ್ಯ ಅಭಿಪ್ರಾಯವಾಗಿತ್ತು.

ಶಿಕ್ಷಣದ ಬಗ್ಗೆ ಗ್ರಾಮೀಣ ಭಾಗದ ಜನರ ಅಭಿಪ್ರಾಯಗಳೇನೇ ಇದ್ದರು ಮಲೆನಾಡಿನ ದೇಸಿ ಪರಿಸರದಲ್ಲಿ ಅಗ್ರಹಾರ, ದೇವಾಲಯ ಮತ್ತು ಐಗಳ ಕೂಲಿಮಠಗಳು ಶಿಕ್ಷಣ ಕೇಂದ್ರಗಳಾಗಿದ್ದವು. ಅಗ್ರಹಾರ ಮತ್ತು ದೇವಾಲಯಗಳು ಸಾಮಾಜಿಕ ಜಾತಿ ವ್ಯವಸ್ಥೆಯಲ್ಲಿ ಉನ್ನತ ಸ್ಥಾನದಲ್ಲಿದ್ದ ಬ್ರಾಹ್ಮಣ ಮಕ್ಕಳಿಗಾದರೆ, ಐಗಳ ಕೂಲಿಮಠಗಳು ಮಲೆನಾಡಿನ ಶ್ರೀಮಂತ ಜಮೀನುದಾರರ ಮಕ್ಕಳಿಗೆ ಮೀಸಲಾಗಿದ್ದವು. ಅಲ್ಲೊಂದು ಇಲ್ಲೊಂದರಂತೆ ಐಗಳ ಮಠಗಳು ಸಾಂಪ್ರದಾಯಿಕವಾದ ರೀತಿಯಲ್ಲಿ ಮಕ್ಕಳಿಗೆ ಶಿಕ್ಷಣ ನೀಡುತ್ತಿದ್ದವು. ಮಲೆನಾಡಿನಲ್ಲಿ ಶ್ರೀಮಂತ ಒಕ್ಕಲಿಗರು ಹೊರಗಿನಿಂದ ಐಗಳನ್ನು ಕರೆಸಿ ಅವರ ಮನೆಯ ಒಬ್ಬ ಸದಸ್ಯರಂತೆ ನೋಡಿಕೊಂಡು ಅವರಿಂದ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುತ್ತಿದ್ದರು. ಕೋಣೂರು ರಂಗಪ್ಪಗೌಡರ ಮಗ ತಿಮ್ಮು, ಹಳೇಮನೆ ದೊಡ್ಡಣ್ಣಹೆಗ್ಗಡೆಯವರ ಮಗ ಧರ್ಮು ಮತ್ತು ಬೆಟ್ಟಳ್ಳಿ ಕಲ್ಲಯ್ಯಗೌಡರ ಕಿರಿಯ ಮಗ ಕಾಡು, ಇನ್ನು ಮೂರು ನಾಲ್ಕು ಹತ್ತಿರದ ಹಳ್ಳಿಯ ಹುಡುಗರೂ ಒಟ್ಟಾಗಿ ಕೋಣೂರು ಮನೆಯ ಕೆಳಗರಡಿಯಲ್ಲಿದ್ದ ಐಗಳು ಅನಂತಯ್ಯನವರ ಕೂಲಿ ಮಠದಲ್ಲಿ ಕುಳಿತಿದ್ದರು ತಮ್ಮ ಮುಂದೆ ಅಕ್ಷರ ತಿದ್ದಲು ಗೋಡೆಗೆ ಒತ್ತಿ ನೆಲದ ಮೇಲೆ ಹರಡಿದ್ದ ಮಳಲಿನ ಮುಂದೆ?"[109] ಈ ಕೂಲಿಮಠಗಳಲ್ಲಿ ಐಗಳು ಮಕ್ಕಳಿಗೆ ಅಭ್ಯಂಜನಾದಿಗಳನ್ನು ಮಾಡಿಸುವುದು, ಅಕ್ಷರಾಭ್ಯಾಸ ಮಾಡಿಸುವುದರ ಜೊತೆಗೆ ರಾಮಾಯಣ, ಗದುಗಿನ ಭಾರತ, ಜೈಮಿನಿಭಾರತ, ಭಗವದ್ಗೀತೆ

ಮುಂತಾದ ಮಹಾಕಾವ್ಯಗಳನ್ನು ಓದಿ ಹೇಳುತ್ತಿದ್ದರು. ಅವರು ನೀಡುವ ಶಿಕ್ಷಣಕ್ಕೆ ಮತ್ತು ಮಾಡುವ ಇನ್ನಿತರೆ ಮನೆ ಕೆಲಸ ಕಾರ್ಯಗಳಿಗೆ ಪ್ರತಿಯಾಗಿ ಧವಸ-ಧಾನ್ಯಗಳನ್ನು ಬಟ್ಟೆ-ಬರೆಗಳನ್ನು ನೀಡುತ್ತಿದ್ದರು. ಮಕ್ಕಳ ಜೊತೆಯಲ್ಲಿ ತಾವೂ ಒಂದಾಗಿ ಬೆರೆತು ಮನೆಯ ಸದಸ್ಯರಲ್ಲಿ ತಾವೂ ಒಬ್ಬರಾಗಿ ಐಗಳು ಕೂಲಿಮಠದಲ್ಲಿ ಇರುತ್ತಿದ್ದರು.

ಮಲೆನಾಡಿನಲ್ಲಿದ್ದ ಐಗಳ ಮಠಗಳು ಗಂಡು ಮಕ್ಕಳಿಗೆ ಮಾತ್ರ ಶಿಕ್ಷಣ ನೀಡುತ್ತಿದ್ದುದು ವಿಶೇಷವಾಗಿತ್ತು. ಅಲ್ಲಿ ಹೆಣ್ಣು ಮಕ್ಕಳಿಗೆ ನೇರವಾಗಿ ಅಕ್ಷರಾಭ್ಯಾಸಮಾಡಲು ಅವಕಾಶವಿರಲಿಲ್ಲ ಕೋಣೂರಿನ ಐಗಳ ಮಠದಲ್ಲಿ ಹಳೆಮನೆ ಬೆಟ್ಟಳ್ಳಿ ಕಡೆಯ ಸಮೀಪದ ಊರುಮನೆಯ ಕೆಲವೇ ಮಕ್ಕಳು 'ಬರಾವು' ಕಲಿಯುತ್ತಿದ್ದವರಾದರೂ ಗಂಡು ಮಕ್ಕಳಿಗೇ ಅಪೂರ್ವವೂ ಅಸಾಧ್ಯವೂ ಅತಿ ವಿರಳವೂ ಆಗಿದ್ದ ಓದುಬರಹವನ್ನು 'ಹೆಣ್ಣು ಹೆಂಗಸರಿಗೆ; ಕಲಿಸಲು ಯಾರೂ ಒಪ್ಪುತ್ತಿರಲಿಲ್ಲ. 'ಹೆಂಗಸರು ಓದು ಕಲಿಯುವುದು ಗಂಡಸರು ಸೀರೆಯುಡುವುದಕ್ಕಿಂತಲೂ ಹಾಸ್ಯಾಸ್ಪದವಾಗಿತ್ತು'[110] ಶಿಕ್ಷಣ ದೊರೆಯುವುದೇ ದುರ್ಲಭವಾಗಿದ್ದ ಆ ಕಾಲದಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಯಾವ ಉತ್ತೇಜನವೂ ಇರಲಿಲ್ಲ ಮತ್ತು ಅವರನ್ನು ಶಿಕ್ಷಣದಿಂದ ಮೇಲ್ಜಾತಿಯವರು ಶೂದ್ರರನ್ನು ವಿದ್ಯೆಯಿಂದ ದೂರವಿಟ್ಟಂತೆ ಇಟ್ಟಿದ್ದರು ಎನ್ನುವುದನ್ನು ಕಾಣುತ್ತೇವೆ. ಲಿಂಗ ತಾರತಮ್ಯದ ಜೊತೆಗೆ ಒಕ್ಕಲಿಗರಿಗಿಂತ ಇನ್ನೂ ಕೆಳಗಿನ ಸ್ಥಾನಮಾನದವರಿಗೆ ಶಿಕ್ಷಣವೆನ್ನುವುದೂ ಮರೀಚಿಕೆಯಾಗಿತ್ತು ಎನ್ನುವುದೂ ಸಹ ತಿಳಿಯುತ್ತದೆ.) ಆದರೆ ಇಂತಹ ಲಿಂಗತಾರತಮ್ಯ ಹಾರ್ಡಿಯವರ ವೆಸೆಕ್ಸ್‌ನ ದೇಸಿ ಪರಿಸರದಲ್ಲಿರಲಿಲ್ಲ ಎನ್ನಬಹುದು. <u>'ದಿ ರಿಟರ್ನ್ ಆಫ್ ದಿ ನೇಟಿವ್'</u> ಕಾದಂಬರಿಯಲ್ಲಿ ಎಗ್ಡನ್ನಿನ ಪಾತ್ರಧಾರಿಗಳಾದ ಕ್ಲಿಮ್, ಯುಸ್ಟೇಷ್ಯ, ಶ್ರೀಮತಿ ಯೋಬ್ರೈಟ್, ಡಿಗರಿವೆನ್, ತೋಮಸಿನ್, ವೈಲ್ಡೀವ್ ಮುಂತಾದವರು ವಿದ್ಯಾವಂತರಾಗದಿದ್ದರೂ ಅಕ್ಷರಸ್ಥರಾಗಿದ್ದರು ಮತ್ತು ವಿದ್ಯಾಭ್ಯಾಸ ಮಾಡಲು ಹೆಣ್ಣು-ಗಂಡು ಎಂಬ ಭೇದ ಭಾವವಿರಲಿಲ್ಲ ಎನ್ನುವುದನ್ನು ಮನಗಾಣಬಹುದು. ಮನೆಯಲ್ಲಿ ದಟ್ಟ ದಾರಿದ್ರ್ಯವಿದ್ದರೂ ಟೆಸ್ಸ್ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದ್ದಳು, ಅದೇ ರೀತಿ ಆಕೆಯ ಊರಿನ ಇನ್ನಿತರ ಹೆಣ್ಣುಮಕ್ಕಳು ಶಾಲೆಗೆ ಹೋಗುವುದು ಸಾಮಾನ್ಯವಾಗಿತ್ತು. ಮಲೆನಾಡಿನ ಐಗಳ ಮಠಗಳ ಬದಲಾಗಿ ಹತ್ತೊಂಭತ್ತನೆಯ ಶತಮಾನದ ಅಂತ್ಯದಲ್ಲಿ ಗ್ರಾಮೀಣ ಇಂಗ್ಲೇಂಡಿನ ಭಾಗದಲ್ಲಿ ಹಳ್ಳಿ ಶಾಲೆಗಳು ಪ್ರಾರಂಭಗೊಂಡು ಮಕ್ಕಳಿಗೆ ಶಿಕ್ಷಣ ನೀಡುತ್ತಿದ್ದವು ಎನ್ನುವುದನ್ನು ಕಾಣುತ್ತೇವೆ.

ಆಂಗ್ಲೇಯರ ಆಡಳಿತದ ಪರಿಣಾಮದಿಂದ ಮತ್ತು ಕ್ರೈಸ್ತ ಮಿಷನರಿಗಳ ಆಗಮನದಿಂದ ಸಾಂಪ್ರದಾಯಿಕವಾಗಿ ಆಯಾ ಜಾತಿಗಳ ಮಕ್ಕಳಿಗೆ ಮಾತ್ರವೇ ಸೀಮಿತವಾಗಿದ್ದ ಅಗ್ರಹಾರ,

ದೇವಾಲಯ ಮತ್ತು ಕೂಲಿಮಠಗಳ ವಿದ್ಯಾಭ್ಯಾಸ ಕೊನೆಗೊಳ್ಳುವುದನ್ನು ಕುವೆಂಪುರವರ ಕಾದಂಬರಿಯಲ್ಲಿ ಕಾಣುತ್ತೇವೆ. "ಆಗ ತಾನೆ ಹಳೆಯ ತರಹದ ಕೂಲಿಮಠಗಳ ಕಾಲವೂ ಹಳೆಯ ವಿದ್ಯಾಭ್ಯಾಸ ಪದ್ಧತಿಯೂ ಮುಕ್ತಾಯಗೊಂಡು, ಆಂಗ್ಲೇಯರ ಆಡಳಿತದ ರೀತಿಯೂ ಇಂಗ್ಲೀಷಿನ ಪ್ರಭಾವೂ ಮೊಳೆದೋರುತ್ತಿದ್ದ ಸಂಧಿಸಮಯ ಮಲೆನಾಡಿಗೆ ಆ ಹೊಸ ಪ್ರಭಾವದ ಮರು ಬೆಳಕನ್ನು ಮೊತ್ತಮೊದಲು ತರುವುದರಲ್ಲಿ ಕ್ರೈಸ್ತಪಾದ್ರಿಗಳ ಕಾರ್ಯ ಗಣನೀಯವಾಗಿತ್ತು"[111] ಆಧುನಿಕ ಶಿಕ್ಷಣದ ಆಗಮನದಿಂದ ಜಾತಿ-ವರ್ಗ-ಲಿಂಗತಾರತಮ್ಯವಿಲ್ಲದ ಹಳ್ಳಿಯ ಎಲ್ಲಾ ಮಕ್ಕಳಿಗೂ ಸಮಾನವಾಗಿ ಅಕ್ಷರಾಭ್ಯಾಸ ಮಾಡಿಸುವ ಪ್ರಯತ್ನ ಮಲೆನಾಡಿನ ದೇಸಿ ಪರಿಸರದಲ್ಲಿ ಒಂದು ಆಶಯವಾಗಿ ಕಾಣಿಸಿಕೊಳ್ಳುತ್ತದೆ. ವೆಸೆಕ್ಸ್‌ನ ಗ್ರಾಮೀಣ ಪ್ರದೇಶದ 'ಸ್ಕೂಲು'ಗಳಂತೆಯೇ ಮಲೆನಾಡಿನ ಪ್ರದೇಶದಲ್ಲಿ 'ಇಸ್ಕೂಲು ಮನೆ' ಸ್ಥಳೀಯರಿಗೆ ವಿದ್ಯೆಯ ಅವಕಾಶವನ್ನು ಒದಗಿಸಲು ಪ್ರಾರಂಭಗೊಳ್ಳುತ್ತದೆ. ಇದರಿಂದ ಮಲೆನಾಡಿನ ಅನಕ್ಷರಸ್ಥ ಮುಗ್ಧರು ಸಾಕ್ಷರರಾಗಲು ಒಂದು ಅವಕಾಶ ಸಿಕ್ಕಂತಾಗುತ್ತದೆ. ಆದರೆ ಅನಕ್ಷರಸ್ಥರಾದ ಮತ್ತು ಮುಗ್ಧರಾದ ಮಾತ್ರಕ್ಕೆ ಮಲೆನಾಡಿನ ಮತ್ತು ವೆಸೆಕ್ಸ್‌ನ ಜನರು ಅನಾಗರೀಕರಾಗಿರಲಿಲ್ಲ ಎಂದೇ ಹೇಳಬಹುದು. ಏಕೆಂದರೆ ಈ ಅನಕ್ಷರಸ್ಥ ಹಳ್ಳಿಗರಿಂದಲೇ ಒಂದು ಶ್ರೀಮಂತ ದೇಸಿ ಸಂಸ್ಕೃತಿ ಉಳಿದು ಬೆಳೆದು ಬಂದಿರುವುದು. ನಿಜವಾಗಿಯೂ ಹಳ್ಳಿಯ ಮುಗ್ಧ ನಿರಕ್ಷರಕುಕ್ಷಿಗಳೆ ದೇಸಿಯತೆಯ ಪೋಷಕರು, ದೇಸಿ ಸಂಸ್ಕೃತಿಯನ್ನು ನೈಜರೀತಿಯಿಂದಲೇ, ಅಪವಿತ್ರಗೊಳ್ಳದಂತೆ ತಮ್ಮ ಮುಗ್ಧತೆಯಿಂದ ಬೆಳೆಸಿಕೊಂಡು ಬಂದಿದ್ದರು ಎನ್ನಬಹುದು. 'ದಿ ರಿಟರ್ನ್ ಆಫ್ ದಿ ನೇಟಿವ್' ಕಾದಂಬರಿಯ ಕ್ಯಾಪ್ಟನ್ ವೈ ಹೇಳುವ ಮಾತುಗಳು "ಶಿಕ್ಷಣವಿಲ್ಲದಿದ್ದಾಗ ದೇಶ ಸುಭಿಕ್ಷವಾಗೇ ಇತ್ತು" ಎನ್ನುವುದು ಸತ್ಯವೆನಿಸುತ್ತದೆ. ಅಲ್ಪಸ್ವಲ್ಪ ವಿದ್ಯೆ ಕಲಿತ ಜೋಯಿಸರಂತಹವರಿಂದಲೇ ದೇಸಿ ಸಂಸ್ಕೃತಿ ಅಪವಿತ್ರಗೊಳ್ಳುವುದನ್ನು, ಶೋಷಣೆಗೊಳಗಾಗುವುದನ್ನು ಗಮನಿಸಿದರೆ, ತುಳಿತಕ್ಕೊಳಗಾದ ಕೆಳವರ್ಗದವರಿಂದ ದೇಸಿ ಸಂಸ್ಕೃತಿ ಉಳಿದುಕೊಂಡಿದೆ ಎನ್ನಬಹುದು.

ದೇಸಿ ಸಂಸ್ಕೃತಿಯ ತೊಟ್ಟಿಲುಗಳೆಂದರೆ ಗ್ರಾಮಗಳು. ಗ್ರಾಮ ಸಮುದಾಯದ ಜನರು ಪರಾಂಪರಾಗತವಾಗಿ, ಜೀವನಾನುಭವದಿಂದ ಬೆಳೆದು ಬಂದ ಸಂಸ್ಕೃತಿಯನ್ನು ಪೋಷಿಸಿಕೊಂಡು ಬಂದಿದ್ದಾರೆ. ಗ್ರಾಮೀಣ ವಾಸಿಗಳ ಸಹಕಾರ ಭಾವನೆ, ಸಹಬಾಳ್ವೆ, ಪ್ರಕೃತಿಯೊಡಗಿನ ಸಂಬಂಧ, ತಾವು ಹುಟ್ಟಿ ಬೆಳೆದ ನೆಲದ ಮೇಲಿನ ಪ್ರೀತಿ, ಧಾರ್ಮಿಕ ಆಚರಣೆ, ನಂಬಿಕೆ, ಸಂಪ್ರದಾಯಗಳು, ಅನಕ್ಷರತೆ, ಅಜ್ಞಾನ ಮತ್ತು ಮುಗ್ಧತೆಯ ಜೊತೆಗೆ ಕೃಷಿಯನ್ನೇ ತಮ್ಮ ಮೂಲ ಕಸುಬನ್ನಾಗಿ ನಂಬಿಕೊಂಡು ಬಂದಿರುವುದು ದೇಸಿ ಬದುಕಿನ ಲಕ್ಷಣಗಳಾಗಿವೆ. ಇಂತಹ ಶ್ರೀಮಂತ ದೇಸಿ

ಸಂಸ್ಕೃತಿಯ ಮೇಲೆ ಜಾಗತೀಕರಣದ ಪ್ರಭಾವ ಮತ್ತು ಇದರಿಂದ ಆಗುವ ಬದಲಾವಣೆಗಳನ್ನು ಕುವೆಂಪು ಮತ್ತು ಹಾರ್ಡಿಯವರ ಕಾದಂಬರಿಗಳಲ್ಲಿ ಕಾಣಬಹುದು.

ಆಧುನಿಕ ನಾಗರೀಕತೆಯ ಸ್ಪರ್ಶದಿಂದ ದೂರವಿದ್ದ ಮಲೆನಾಡು ಜಾಗತೀಕರಣಕ್ಕೆ ಬಹುಬೇಗನೆ ತೆರೆದುಕೊಳ್ಳುತ್ತದೆ. ಮಲೆನಾಡು ಕರಾವಳಿಗೆ ಹತ್ತಿರವಿದ್ದುದರಿಂದ ಬ್ರಿಟಿಷರ ಆಡಳಿತ ವ್ಯವಸ್ಥೆಗೆ ಅನುಕೂಲಕರವಾಗಿತ್ತು. ವ್ಯಾಪಾರ-ವಹಿವಾಟು ನಡೆಸಲು ಕರಾವಳಿ ಪ್ರದೇಶದ ಮೂಲಕ ಹೊರಜಗತ್ತಿಗೆ ಸಂಪರ್ಕ ಹೊಂದಲು ಅನುವಾಗಿತ್ತು. ಮತಾಂತರಗೊಳಿಸಲು ಬರುತ್ತಿದ್ದ ಕ್ರಿಶ್ಚಿಯನ್ ಮಿಷನರಿಗಳಿಗೆ ಮಲೆನಾಡು ಪ್ರದೇಶ ಕೈಗೆಟುಕುವ ಅಂತರದಲ್ಲಿತ್ತು. ಮೈಸೂರಿನ ಕಡೆಯಿಂದ ಶಿವಮೊಗ್ಗದವರೆಗೆ ರೈಲು ಸಂಚಾರ ಮತ್ತು ಮೋಟಾರು ವ್ಯವಸ್ಥೆ ಸ್ವಲ್ಪ ಮಟ್ಟಿಗಾದರೂ ಇದ್ದುದರಿಂದ ಮಲೆನಾಡು ಇನ್ನಿತರ ಪ್ರಮುಖ ನಗರ-ಪಟ್ಟಣಗಳ ಸಂಪರ್ಕಕ್ಕೆ ಸುಲಭವಾಗಿ ಸಿಗುತ್ತಿದ್ದುದರಿಂದ, ಆಧುನಿಕ ಪರಿಕರಗಳ ಆಗಮನದಿಂದ ಜಾಗತೀಕರಣದ ಗಾಳಿ ಬೀಸಲಾರಂಭಿಸಿತು. ಇವರಿಂದ ಮಲೆನಾಡಿನ ಭೌಗೋಳಿಕ ಪರಿಸರ ಜಾಗತೀಕರಣಕ್ಕೆ ತಕ್ಕಮಟ್ಟಿಗೆ ಸಹಕಾರಿಯಾಗಿತ್ತು ಎನ್ನಬಹುದು. ಮಲೆನಾಡು ಎಷ್ಟೊಂದು ಬೇಗನೆ ಜಾಗತೀಕರಣದ ಪ್ರಭಾವಕ್ಕೆ ಒಳಗಾಗುತ್ತಿತ್ತು ಎನ್ನುವ ಸೂಚನೆಯನ್ನು <u>ಕಾನೂರು ಹೆಗ್ಗಡಿತಿ</u>ಯಲ್ಲಿ ಕಾಣಬಹುದು: "ಯಂತ್ರನಾಗರಿಕತೆ ಇಂಗ್ಲೀಷು, ಚಾಂಚಲ್ಯ, ಉದ್ವೇಗ, ವೇಗ! ತಾನು ಎಂದೋ ಹಿಂದಿಕ್ಕಿ ಬಂದ ಆ ಪ್ರಗತಿಗಾಮಿಯಾದ ಪ್ರಪಂಚ ಮತ್ತೆ ಬಹುದೂರದ ಮಲೆನಾಡಿನ ಕೊಂಪೆಯಲ್ಲಿ ತನಗೆ ಕ್ಷಣದರ್ಶನ ಕೊಟ್ಟಂತಾಯ್ತು. ನಿಲ್ಲದೆ ಮುಂಬರುತ್ತಿರುವ ದಿನದಿನವೂ ಬದಲಾಯಿಸುತ್ತಿರುವ ಹೊರಗಣ ವಿಶಾಲ ಜಗತ್ತಿಗೆ ಪ್ರತಿಮೆಗಳಾದವು, ಆ ಬೈಸಿಕಲ್ ಮತ್ತು ಅದರ ಸವಾರ.... ಪಟ್ಟಣದ ಸಂದಣಿಯಲ್ಲಿ ಗಮನಕ್ಕೂ ಬಾರದ ಬೈಸಿಕಲ್ಲು ಕಾಡು ಬೀಡಿನಲ್ಲಿ ವಿಶೇಷಾತಿಥಿಯಾಗಿ ತೋರಿತು. ಎಷ್ಟಾದರೂ ಆಕ್ರಮಣಶೀಲವಾದ ಆ ಚಂಚಲಮಾನ ನಾಗರಿಕ ಲೋಕವು ಮಲೆನಾಡಿಗೆ ದಾಳಿಯಿಡುವ ಮೊದಲು ಮುನ್ನಟ್ಟಿದ ರಣಚಾರನಲ್ಲವೆ, ಅ ಬೈಸಿಕಲ್ ಸವಾರ!"[112] ಈ ಮಾತುಗಳು ಜಾಗತೀಕರಣದ ಆಗಮನಕ್ಕೆ ಮುನ್ನುಡಿಯಾಗುತ್ತವೆ. ಜಾಗತೀಕರಣದ ಲಕ್ಷಣಗಳಾದ ಯಂತ್ರಗಳ ಆಗಮನ, ಇಂಗ್ಲೀಷ್ ಭಾಷೆಯ ಪ್ರಭಾವ, ಚಾಂಚಲ್ಯ, ವೇಗ, ಉದ್ವೇಗ, ಆಕ್ರಮಣಶೀಲ ಗುಣ ಮುಂತಾದವುಗಳೆಲ್ಲ ಗಿರಿ ಕಂದರಗಳ ಮಧ್ಯೆ ವಾಸಿಸುತ್ತಿದ್ದ ರಸ್ತೆ ಎಂದರೇನೆಂಬುದೇ ತಿಳಿಯದಿದ್ದ ಮಲೆನಾಡಿನ ಕಾಡು-ಕೊಂಪೆಗೆ ಆಗಮಿಸುತ್ತಿದ್ದ ರೀತಿ ಗಾಬರಿ ಹುಟ್ಟಿಸುತ್ತದೆ.

ಮಲೆನಾಡಿನಲ್ಲಿ ಅನಕ್ಷರತೆ, ಅಜ್ಞಾನ ತಾಂಡವಾಡುತ್ತಿದ್ದರೂ, ದೇವಸ್ಥಾನ, ಮಠ ಮತ್ತು ಅಗ್ರಹಾರಗಳು ಶಿಕ್ಷಣ ಕೇಂದ್ರಗಳಾಗಿದ್ದವು. ಪರಂಪರಾಗತವಾಗಿ ಬೆಳೆದು ಬಂದಿದ್ದ ನೈತಿಕ

ಶಿಕ್ಷಣವನ್ನು ಮಕ್ಕಳಿಗೆ ನೀಡುತ್ತಿದ್ದವು. ಈ ಶೈಕ್ಷಣಿಕ ಕೇಂದ್ರಗಳು ಜಾತೀಯಾಧಾರಿತವಾಗಿದ್ದರೂ ಮಕ್ಕಳಿಗೆ ಪುರಾಣ ಕಥೆಗಳನ್ನು, ಕಾವ್ಯ ವಾಚನ, ಉಪನಿಷತ್ತು, ಮಹಾಭಾರತ, ರಾಮಾಯಣ ಮುಂತಾದ ಮಹಾಕಾವ್ಯಗಳ ಪರಿಚಯ ಮಾಡಿಸುವುದರ ಮೂಲಕ ಅವರಲ್ಲಿ ನೈತಿಕ ಆಧ್ಯಾತ್ಮಿಕ ಮತ್ತು ಮಾನವೀಯ ಜ್ಞಾನವನ್ನು ಬೆಳಸುವುದರ ಬಗ್ಗೆ ಹೆಚ್ಚಿನ ಆಸಕ್ತಿವಹಿಸುತ್ತಿದ್ದವು. ಈ ದೇಸಿಯ ವಿದ್ಯಾಕೇಂದ್ರಗಳ ಸ್ಥಾನವನ್ನು ಮಿಶನ್ ಸ್ಕೂಲುಗಳು ಆಕ್ರಮಿಸಿಕೊಳ್ಳುವುದನ್ನು ಕಾಣುತ್ತೇವೆ. "ಆಗತಾನೆ ಹಳೆಯ ತರಹದ ಕೂಲಿಮಠಗಳ ಕಾಲವೂ ಹಳೆಯ ವಿದ್ಯಾಭ್ಯಾಸ ಪದ್ಧತಿಯೂ ಮುಕ್ತಾಯಗೊಂಡು, ಆಂಗ್ಲೇಯರ ಆಡಳಿದ ರೀತಿಯೂ ಇಂಗ್ಲೀಷಿನ ಪ್ರಭಾವವೂ ಮೊಳೆದೋರುತ್ತಿದ್ದ ಸಂಧಿಸಮಯ. ಮಲೆನಾಡಿಗೆ ಆ ಹೊಸ ಪ್ರಭಾವದ ಮುಂಬೆಳಕನ್ನು ಮೊತ್ತಮೊದಲು ತರುವುದರಲ್ಲಿ ಕ್ರೈಸ್ತಪಾದ್ರಿಗಳ ಕಾರ್ಯ ಗಣನೀಯವಾಗಿತ್ತು ಮತ್ತು ಶ್ಲಾಘನೀಯವಾಗಿತ್ತು"[113] ಎಂಬ ವಿವರಣೆ ಭಾರತದಲ್ಲಿ ಬ್ರಿಟಿಷರ ವಸಾಹತು ಆಡಳಿತ ವ್ಯವಸ್ಥೆ ಮತ್ತು ಮತಾಂತರಗೊಳಿಸುವ ಉದ್ದೇಶದಿಂದ ಮಲೆನಾಡಿನಂತಹ ದೂರದ ಹಳ್ಳಿಗಳಿಗೂ ಆಂಗ್ಲ ಶಿಕ್ಷಣದ ಪರಿಚಯವಾಗುವುದು ಜಾಗತೀಕರಣದ ಫಲವಾಗಿದೆ ಎಂದೇ ಹೇಳಬಹುದು.

ಶಿಕ್ಷಣ ಆಯಾ ಪ್ರದೇಶದ ಸಾಂಸ್ಕೃತಿಕ ಹಿನ್ನಲೆಯಲ್ಲಿ ರೂಪುಗೊಂಡು, ದೇಸಿಯ ಜ್ಞಾನ ಪರಂಪರೆಯನ್ನು ಒಳಗೊಂಡು ಸಾಮಾಜಿಕ, ಆರ್ಥಿಕ, ಮಾನವೀಯ ಮೌಲ್ಯಗಳ ಬೆಳವಣಿಗೆಗೆ ಪೂರಕವಾಗಿರಬೇಕು. ಇದರಿಂದ ಮಾನವನ ಮಾನಸಿಕ, ಬೌದ್ಧಿಕ ಬೆಳವಣಿಗೆಯ ಜೊತೆಗೆ ಆದರ್ಶ ವ್ಯಕ್ತಿತ್ವವನ್ನು ರೂಪಿಸುವಂತಾಗಬೇಕು. ಇಂತಹ ಶಿಕ್ಷಣವನ್ನು ದೇಸಿಯ ಶಿಕ್ಷಣ ಶಾಖೆಗಳು ನೀಡುತ್ತಿದ್ದುದನ್ನು ಕುವೆಂಪುರವರ ಮತ್ತು ಹಾರ್ಡಿಯವರ ಕಾದಂಬರಿಗಳಲ್ಲಿ ಕಾಣುತ್ತೇವೆ. 19ನೇ ಶತಮಾನದಲ್ಲಿ ಉಂಟಾದ ಕೈಗಾರಿಕಾ ಕ್ರಾಂತಿ, ವಸಾಹತೀಕರಣ, ಆಧುನೀಕರಣ ಮತ್ತು ಜಾಗತೀಕರಣದ ಪ್ರಭಾವದಿಂದ ದೇಸಿ ಶಿಕ್ಷಣಕ್ಕೆ ಧಕ್ಕೆಯಾಗಲಾರಂಭಿಸಿತು. ಭಾಷೆ, ಸಂಸ್ಕೃತಿ, ನೈತಿಕತೆ, ಸಾಮಾಜಿಕ ಮತ್ತು ಮಾನವೀಯ ಮೌಲ್ಯಗಳು ನಶಿಸಲಾರಂಭಿಸಿದವು, ಇಂಗ್ಲೆಂಡಿನಲ್ಲಿ ಪ್ರಾರಂಭವಾದ ರಾಷ್ಟ್ರೀಯ ಶಿಕ್ಷಣ ನೀತಿಯಿಂದಾಗಿ ಗ್ರಾಮೀಣ ಪ್ರದೇಶಗಳಲ್ಲಿದ್ದ ಜಾನಪದ ಸಂಸ್ಕೃತಿ, ಲಾವಣಿ ಪದಗಳು, ಪ್ರಾದೇಶಿಕ ಉಪಭಾಷೆಗಳು ಅಥವಾ ಆಡುನುಡಿಗಳು ಮತ್ತು ಅಲಿಖಿತ ಜಾನಪದ ಸಾಹಿತ್ಯ ಕಣ್ಮರೆಯಾಯಿತು,....[114] ಎನ್ನುವ ಮಾತುಗಳು ಕಳೆದು ಹೋಗುತ್ತಿರುವ ನೆಲಪರ ಸಂಸ್ಕೃತಿಯ ಸೂಚಕವಾಗಿದೆ. ಯಾವುದೇ ಶಿಕ್ಷಣದ ನೀತಿ, ನಿಯಮ ಮತ್ತು ಮಾಧ್ಯಮ ಆಯಾ ಪರಿಸರದ, ಮಣ್ಣಿನ ಸಂಸ್ಕೃತಿಗೆ ಪೂರಕವಾಗಿರಬೇಕು. ಶಿಕ್ಷಣವೆಂಬುದು ಕೇವಲ ಜ್ಞಾನ ಸಂಪಾದನೆ ಅಥವಾ ಪ್ರಸರಣ ಮಾತ್ರವಲ್ಲ, ಅದೊಂದು ಆಯಾ ಪ್ರದೇಶದ ಸಾಂಸ್ಕೃತಿಕ ಬದುಕಿನ ಪ್ರತಿಬಿಂಬವಾಗಿರಬೇಕು ಆಗ ಮಾತ್ರವೇ ಶಿಕ್ಷಣದ ಮೌಲ್ಯ ವೃದ್ಧಿಯಾಗುತ್ತದೆ.

ಜಾಗತೀಕರಣವು ಸಾಂಪ್ರದಾಯಿಕ ದೇಸಿ ಶಿಕ್ಷಣವನ್ನಲ್ಲದೆ ಶಿಕ್ಷಣದ ಮಾಧ್ಯಮವನ್ನು ಸಹ ಪಲ್ಲಟಗೊಳಿಸುತ್ತದೆ. ಪ್ರಾದೇಶಿಕ ಭಾಷೆ, ಉಪಭಾಷೆ, ಅಥವಾ ಮಾತೃಭಾಷೆಯಲ್ಲಿ ನೀಡುತ್ತಿದ್ದ ಶಿಕ್ಷಣವು ನೆಲದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತಿತ್ತು. ಆದರೆ ಜಾಗತೀಕರಣದ ಪ್ರಭಾವದಿಂದ ಮತ್ತು ವಸಾಹತೋತ್ತರ ಭಾಷೆಯಾಗಿ ಆಂಗ್ಲಭಾಷೆ ಏಕಮೇವ ಸಂವಹನ ಮಾಧ್ಯಮವಾಗಿ ರೂಪುಗೊಂಡು ಪ್ರಾದೇಶಿಕ ಉಪಭಾಷೆಗಳನ್ನು ಜನಸಾಮಾನ್ಯರ ಆಡುನುಡಿಗಳನ್ನು ನಾಶಪಡಿಸುತ್ತಿದೆ. ಸಾಮಾಜಿಕ, ಸಾಂಸ್ಕೃತಿಕ ಮತ್ತು ಮಾನವೀಯ ಸಂಬಂಧಗಳನ್ನು ಅಭಿವ್ಯಕ್ತಿಗೊಳಿಸುವ ಸಾಹಿತ್ಯದ ಭಾಷೆಯ ಮೇಲೆ ಜಾಗತೀಕರಣದ ಮಾರುಕಟ್ಟೆಯ ಭಾಷೆಯನ್ನು ಹೇರುವುದರಿಂದ ಪ್ರಾದೇಶಿಕ ಭಾಷೆಗಳಷ್ಟೆ ಅಲ್ಲದೆ ಮಾನವೀಯ ಸಂಬಂಧಗಳೂ ನಾಶಗೊಳ್ಳುತ್ತವೆ. ಏಕರೂಪಿಯಾದ ಜಾಗತಿಕ ಭಾಷೆಯು ಬಹುರೂಪಿಯಾದ ದೇಸಿ ಭಾಷೆಗಳನ್ನು ಸತ್ವಹೀನಗೊಳಿಸಿ ಸಾಹಿತ್ಯ ಸಂವಹನವನ್ನು ನಿಯಂತ್ರಿಸುತ್ತಿರುವುದನ್ನು ಕಾಣುತ್ತಿದ್ದೇವೆ.

2.7 ದೇಸಿ ಕೃಷಿ ಮತ್ತು ಜಾಗತೀಕರಣ

ದೇಸಿಯ ಬದುಕು ಕೃಷಿಯಾಧಾರಿತವಾದದ್ದು, ಸಾಂಪ್ರದಾಯಿಕ ಕೃಷಿ ಪದ್ಧತಿಯನ್ನೆ ಅನುಸರಿಸುತ್ತಾ ಸ್ವಾವಲಂಬನೆಯ ಜೀವನ ಸಾಗಿಸುತ್ತಿದ್ದ ರೈತಾಪಿ ವರ್ಗ ಪ್ರಕೃತಿಯೊಡನೆ ಸಹಜವಾದ ಸಂಬಂಧವನ್ನಿಟ್ಟುಕೊಂಡು ಸಾಮುದಾಯಿಕ ಬದುಕನ್ನು ನಡೆಸುತ್ತಿತ್ತು. ಯಂತ್ರನಾಗರೀಕತೆ, ಆಧುನಿಕ ಕೃಷಿ ಪರಿಕರಗಳು, ರಾಸಾಯನಿಕ ಗೊಬ್ಬರ, ಕೀಟನಾಶಕಗಳನ್ನು ಬಳಸದೆ ಸಾವಯವ ಕೃಷಿ ಪದ್ಧತಿಯನ್ನು ಅನುಸರಿಸುತ್ತಿದ್ದ ರೈತ ಸಹಜ ಕೃಷಿಯನ್ನೇ ಪರಂಪರಾಗತವಾಗಿ ಪೋಷಿಸಿಕೊಂಡು ಬಂದಿದ್ದನು. ಇಂತಹ ಕೃಷಿಯಾಧಾರಿತ ಬದುಕನ್ನು ಕುವೆಂಪುರವರ ಮಲೆನಾಡಿನ ಪರಿಸರದಲ್ಲಿ ಮತ್ತು ಹಾರ್ಡಿಯವರ ವೆಸೆಕ್ಸ್‌ನ ಗ್ರಾಮೀಣ ಪ್ರದೇಶದಲ್ಲಿ 19ನೇ ಶತಮಾನದ ಅಂತ್ಯದವರೆಗೂ ಕಾಣುತ್ತೇವೆ. ಕೈಗಾರಿಕಾ ಕ್ರಾಂತಿಯಿಂದ ಆಧುನಿಕ ಕೃಷಿ ಪರಿಕರಗಳ ಆಗಮನ, ಯಂತ್ರನಾಗರೀಕತೆಗೆ ನಾಂದಿಯಾಗುತ್ತದೆ. ವೈಜ್ಞಾನಿಕ ಆವಿಷ್ಕಾರಗಳಿಂದ ಮತ್ತು ಜೈವಿಕ ತಂತ್ರಜ್ಞಾನದಿಂದ ಸಾಂಪ್ರಾಯಕ ದೇಸಿ ಕೃಷಿ ಪದ್ಧತಿಯಲ್ಲಿ ಅನೇಕ ಬದಲಾವಣೆಗಳಾಗುತ್ತವೆ. ರಸಾಯನಿಕ ಗೊಬ್ಬರಗಳು, ಕೀಟನಾಶಕಗಳು ಬಹುರಾಷ್ಟ್ರೀಯ ಕಂಪೆನಿಗಳು ಉತ್ಪಾದಿಸುವ ಹೈಬ್ರಿಡ್ ಬೀಜಗಳು ಈಗಾಗಲೇ ಆಧುನಿಕತೆಯ ಹೆಸರಲ್ಲಿ ಕೃಷಿ ವಲಯವನ್ನು ಪ್ರವೇಶಿಸಿ ರೈತಾಪಿ ವರ್ಗವನ್ನು ಸಂಕಷ್ಟಕ್ಕೀಡು ಮಾಡುತ್ತಿವೆ.

ಥಾಮಸ್ ಹಾರ್ಡಿಯವರ ಕಾದಂಬರಿ 'ಟೆಸ್ ಆಫ್ ದಿ ಡಿ ಅರ್ಬರ್‌ವಿಲ್ಲೆ' ಜಾಗತೀಕರಣದಿಂದ ಕೃಷಿ ಸಮಾಜದಲ್ಲಿ ಉಂಟಾದ ಪಲ್ಲಟವನ್ನು ಮತ್ತು ರೈತಾಪಿ ಸಮುದಾಯ ವಿಘಟನೆಗೊಂಡು ದುರಂತ ಅಂತ್ಯ ಕಾಣುವುದನ್ನು ಸ್ಪಷ್ಟವಾಗಿ ವಿವರಿಸುತ್ತದೆ.[115] ಆ ಕಾದಂಬರಿಯ ದುರಂತ ನಾಯಕಿ ಟೆಸ್, ನಿಷ್ಕಲ್ಮಶ, ಮುಗ್ಧ ಮಣ್ಣಿನ ಮಗಳು, ಆಕೆಯ ಪೂರ್ವಜರು ಒಂದು ಕಾಲದಲ್ಲಿ ಶ್ರೀಮಂತ ಜಮೀನುದಾರರಾಗಿದ್ದರು. ಇಂದು ಕೃಷಿ ಕಾರ್ಮಿಕರಾಗಿ ಊರಿನಿಂದ ಊರಿಗೆ ಅಲೆಯುತ್ತಾ ಜೀವನಾಂಶಕ್ಕೆ ಹೋರಾಡುವುದು ಜಾಗತೀಕರಣದ ಫಲಶೃತಿಯಾಗಿದೆ. ವಿಘಟನೆಗೊಂಡ ಕೃಷಿ ಸಮುದಾಯದ ಪ್ರತಿನಿಧಿಯಾಗಿ ಟೆಸ್ ಈ ಕಾದಂಬರಿಯಲ್ಲಿ ಕಾಣಿಸಿಕೊಳ್ಳುತ್ತಾಳೆ.[116]

ಕೃಷಿ ಚಟುವಟಿಕೆಗಳಾದ, ಬಿತ್ತನೆ ಮಾಡುವುದು, ನಾಟಿ ಮಾಡುವುದು, ಕೊಯ್ಲು ಮಾಡಿ ಸುಗ್ಗಿ ಮಾಡುವುದು ದೇಸಿ ಬದುಕಿನಲ್ಲಿ ಒಂದು ಸಾಮೂಹಿಕವಾಗಿ, ಸಹಕಾರಿ ಮನೋಭಾವನೆಯಿಂದ, ಸಂಭ್ರಮದಿಂದ ಮಾಡುತ್ತಿದ್ದ ಪದ್ಧತಿಯಾಗಿತ್ತು. ಸುಗ್ಗಿಯ ಕಾಲದಲ್ಲಂತೂ ಹಾಡುವುದು, ಕಥೆ ಹೇಳುವುದು, ಲಾವಣಿ ಪದಗಳನ್ನು ಸಾಮೂಹಿಕವಾಗಿ ಹಾಡುತ್ತಾ ಧವಸ ಧಾನ್ಯಗಳನ್ನು ಕಣಗಳಲ್ಲಿ ಹುಲ್ಲಿನಿಂದ ಬೇರ್ಪಡಿಸಿ, ರಾಶಿ ಮಾಡುವುದು ದೇಸಿ ಕೃಷಿ ಪದ್ದತಿಯ ಬಹುಮುಖ್ಯವಾದ ಲಕ್ಷಣವಾಗಿತ್ತು. ಟೆಸ್ ಮತ್ತು ಇತರೆ ಮಹಿಳಾ ಕೃಷಿ ಕಾರ್ಮಿಕರು ಒಟ್ಟಾಗಿ ಸುಗ್ಗಿಯ ಹಾಡುಗಳನ್ನು ಹಾಡುತ್ತಾ ಕೃಷಿ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದುದನ್ನು ಕಾಣುತ್ತೇವೆ.[117] ಇಂತಹ ಸಾಂಪ್ರದಾಯಿಕ ಕೃಷಿ ಪದ್ಧತಿಯ ಸ್ಥಳವನ್ನು ಯಂತ್ರಗಳು ಆಕ್ರಮಿಸುವುದರೊಂದಿಗೆ ಸುಗ್ಗಿಯ ಹಾಡುಗಳಿಗೆ, ಜಾನಪದ ಸಂಸ್ಕೃತಿಗೆ ವಿದಾಯ ಹೇಳಬೇಕಾದ ಅನಿವಾರ್ಯತೆ ಉಂಟಾಗುತ್ತದೆ. ನಶಿಸಿ ಹೋಗುತ್ತಿರುವ ದೇಸಿ ಕೃಷಿಯ ಬಗ್ಗೆ ಫ್ಲಿಂಟ್‌ಕೊಂಬ್ ಆ್ಯಶ್‌ನ ರೈತಾಪಿ ವರ್ಗದವರ ಸಂಕಟವನ್ನು ಹೀಗೆ ವರ್ಣಿಸುತ್ತಾರೆ: "ಹಳೆಯ ತಲೆಮಾರಿನ ರೈತರು ಸುಗ್ಗಿಯ ಯಂತ್ರವನ್ನು ನೋಡಿ ತಮ್ಮ ಹಿಂದಿನ ದಿನಗಳೇ ಉತ್ತಮವಾಗಿದ್ದವು, ಕಣ ಮಾಡಲು ಹಳೆಯ ಕಾಲದ ಪರಿಕರಗಳಾದ ಮರದ ಬಡಿಗೆಯಿಂದ ಓಕ್ ಮರದಲ್ಲಿ ಮಾಡಲ್ಪಟ್ಟ ಒರಳಿನಲ್ಲಿ ಹಾಕಿ ಕುಟ್ಟತಿಯಿಂದ ದವಸ ಧಾನ್ಯಗಳನ್ನು ಶುದ್ಧಿಗೊಳಿಸುತ್ತಿದ್ದರು, ಈ ಪ್ರಕ್ರಿಯೆ ನಿಧಾನವಾದರೂ ಒಳ್ಳೆಯ ಫಲಿತಾಂಶ ಕೊಡುತ್ತಿತ್ತು".[118] ದೇಸಿಯ ಪರಿಕರಗಳಾದ ಮೊರ, ಜರಡಿ, ಕುಟ್ಟತ್ತಿ, ಬಡಿಗೆ ಮುಂತಾದವುಗಳ ಸಹಾಯದಿಂದ ಶುದ್ಧಗೊಳಿಸಿದ ಧವಸ-ಧಾನ್ಯಗಳು ಆರೋಗ್ಯದ ದೃಷ್ಟಿಯಿಂದ ಉತ್ತಮವಾಗಿದ್ದವು, ಅದರೆ ಸುಗ್ಗಿಯ ಯಂತ್ರ ಕರ್ಕಶ ಶಬ್ದದಿಂದ, ರಾಕ್ಷಸ ಶಕ್ತಿಯಿಂದ ರೈತರ ಶಾಂತಿ-ನೆಮ್ಮದಿಯನ್ನು ಮತ್ತು ಅವರ ಚೈತನ್ಯವನ್ನು ನಾಶಮಾಡುವುದರ ಮೂಲಕ ಜಾಗತೀಕರಣದ ಆಕ್ರಮಣ ಪ್ರವೃತ್ತಿ ಸಾಬೀತಾಗುತ್ತದೆ.

ಆಧುನಿಕತೆಯ ವೇಷ ಧರಿಸಿ ಅವತರಿಸಿದ ಜಾಗತೀಕರಣವು ರೈತ ಸಮುದಾಯವನ್ನು ಪಲ್ಲಟಗೊಳಿಸುವುದು ಮತ್ತೊಂದು ಪ್ರಮುಖ ಅಂಶವಾಗಿದೆ. ಕೃಷಿಯನ್ನು ತಮ್ಮ ಜೀವನದ ಮೂಲ ಕಸುಬನ್ನಾಗಿ ಮಾಡಿಕೊಂಡ ರೈತರ ಬಾಳಿನಲ್ಲಿ ಯಂತ್ರಗಳ ಆಗಮನ ಕೃಷಿಕಾರ್ಮಿಕರನ್ನು ನಿರುದ್ಯೋಗಿಗಳನ್ನಾಗಿ ಮಾಡುತ್ತದೆ. ಇದರಿಂದ ಕೃಷಿವಲಯದಲ್ಲಿ ತೊಡಗಿಸಿಕೊಂಡಿದ್ದ ಕಾರ್ಮಿಕರು ಸ್ಥಳದಿಂದ ಸ್ಥಳಕ್ಕೆ ಕೆಲಸವನ್ನರಸಿ ವಲಸೆ ಹೋಗಲು ಪ್ರಾರಂಭಿಸುತ್ತಾರೆ. ಕುವೆಂಪುರವರ ಕಾದಂಬರಿಗಳಲ್ಲಿ ಮಲೆನಾಡಿಗೆ ತೋಟ ಗದ್ದೆಗಳಲ್ಲಿ ಕೆಲಸ ಮಾಡಲು ದಕ್ಷಿಣಕನ್ನಡದಿಂದ ಆಳುಗಳನ್ನು ಕರೆತರುತ್ತಿದ್ದುದು ಸಾಮಾನ್ಯವಾಗಿತ್ತು. ಸೇರೆಗಾರಶೆಟ್ಟರು ಮಧ್ಯವರ್ತಿಗಳಾಗಿ ಆಳುಗಳನ್ನು ಕರೆತಂದು ಕೆಲಸ ಮಾಡಿಸುತ್ತಿದ್ದರು. ಕಾನೂರು ಹೆಗ್ಗಡಿತಿಯ ಸೇರೆಗಾರ ರಂಗಪ್ಪಸೆಟ್ರು ಮಲೆಗಳಲ್ಲಿ ಮದುಮಗಳು ಕಾದಂಬರಿಯ ಚೀಂಕ್ರ ಮೇಸ್ತ್ರಿಯಾಗಿ ಘಟ್ಟದ ತಗ್ಗಿನಿಂದ ಕರೆತಂದ ಆಳುಗಳಿಂದ ಮಲೆನಾಡಿನಲ್ಲಿ ಕೃಷಿಗೆ ಸಂಬಂಧಿಸಿದ ಕೆಲಸಗಳನ್ನು ಮಾಡಿಸುತ್ತಿದ್ದರು. ಮಲೆನಾಡಿಗೆ ಕೆಲಸವನ್ನರಸಿ ಬರುತ್ತಿದ್ದ ದಕ್ಷಿಣಕನ್ನಡ ಜಿಲ್ಲೆಯವರು ಸ್ಥಳೀಯ ವಲಸೆಗಾರರಾಗಿದ್ದರು, ಬಿಡುವಿನ ದಿನಗಳಲ್ಲಿ ತಮ್ಮ ಮೂಲ ಸ್ಥಳಗಳಿಗೆ ಹಿಂದಿರುಗುತ್ತಿದ್ದರು.

ಕುವೆಂಪುರವರ ಕಾದಂಬರಿಗಳಲ್ಲಿ ಚಿತ್ರಿತವಾಗಿರುವ ಕೃಷಿ ಕಾರ್ಮಿಕರ ವಲಸೆ ಪದ್ಧತಿ ಹಾರ್ಡಿಯವರದಕ್ಕಿಂತ ಭಿನ್ನವಾಗಿದೆ. ಹಾರ್ಡಿಯವರ ಟೆಸ್ ಕಾದಂಬರಿಯಲ್ಲಿ ಕೃಷಿಕಾರ್ಮಿಕರು ವಾರ್ಷಿಕ ಕರಾರಿನ ಮೇಲೆ ಶ್ರೀಮಂತ ಜಮೀನುದಾರರ ಹತ್ತಿರ ಕೆಲಸ ನಿರ್ವಹಿಸಬೇಕಾಗಿದ್ದು ಇದು ನೇರವಾಗಿ ಕಾರ್ಮಿಕ ಮತ್ತು ಜಮೀನುದಾರರ ನಡುವಿನ ಒಪ್ಪಂದವಾಗಿತ್ತು. ಆದರೆ ಕುವೆಂಪುರವರ ಕಾದಂಬರಿಗಳಲ್ಲಿ ಸೇರೆಗಾರ ಶೆಟ್ಟರು ಕೂಲಿಯಾಳುಗಳು ಮತ್ತು ಒಡೆಯರ ನಡುವೆ ಮಧ್ಯವರ್ತಿಗಳಾಗಿದ್ದರು. ವೆಸೆಕ್ಸ್‌ನ ಗ್ರಾಮೀಣ ಪ್ರದೇಶದಲ್ಲಿ ಪ್ರತಿವರ್ಷದ ಫೆಬ್ರವರಿ ತಿಂಗಳ ಮೊದಲವಾರ ಸಾಮಾನ್ಯ ವಲಸೆಯ ಕರಾರಿನ ಅಥವಾ ಕೂಲಿಕಾರ್ಮಿಕರ ನಿಯುಕ್ತಿಗೊಳಿಸುವ ಒಪ್ಪಂದದ ದಿನವನ್ನು 'ಕ್ಯಾಂಡಲ್‌ಮಾಸ್' ದಿನವೆಂದು ಕರೆಯುತ್ತಿದ್ದರು.[119] ಆ ದಿನದಂದು ಒಪ್ಪಂದ ಏರ್ಪಟ್ಟರೆ ಅದೇ ತಿಂಗಳ ಮೂರನೇ ವಾರದ 'ಲೇಡಿ ಡೇ' ಕೆಲಸಕ್ಕೆ ಹಾಜರಾಗಬೇಕಾದ ದಿನವಾಗಿತ್ತು. ಹೀಗೆ ವಾರ್ಷಿಕ ಕ್ಯಾಂಡಲ್ ಮಾಸ್ ದಿನದಿಂದ ಸಾಮಾನ್ಯ ವಲಸೆಯ ಕರಾರಿನ ದಿನವಾಗಿದ್ದು ಹಳೆಯ ಜಮೀನುದಾರರನ್ನು ಬಿಡುವುದು, ಬೇರೆ ಸ್ಥಳದ ಮತ್ತೊಬ್ಬ ಜಮೀನುದಾರರ ಬಳಿ ಕೆಲಸಕ್ಕೆ ಸೇರುವುದು ಜಾಗತೀಕರಣದ ಭಾಗವಾಗಿತ್ತು. ಟೆಸ್ ಮತ್ತು ಆಕೆಯ ಸ್ನೇಹಿತರಾದ ಮರಿಯನ್, ಇಜ್ಜ್ ಮುಂತಾದವರು ಫ್ಲಿಂಟ್‌ಕೊಂಬ್ ಆ್ಯಶ್‌ನಿಂದ ಬೇರೆ ಊರುಗಳ ಜಮೀನುದಾರರ ಬಳಿಗೆ ಕೆಲಸಕ್ಕೆ ವಲಸೆ ಹೋಗುವುದು ಒಂದು ರೀತಿಯಾದರೆ, ಕೃಷಿ ವಲಯದಿಂದ ನಗರ-ಪಟ್ಟಣಗಳಿಗೆ ಬೇರೆ ಬೇರೆ ಕೆಲಸಗಳನ್ನರಸಿ ವಲಸೆ

ಹೋಗುವುದು ಮತ್ತೊಂದು ರೀತಿಯಾಗಿತ್ತು. ಟೆಸ್ ಮತ್ತು ಆಕೆಯ ಸಹೋದರ-ಸಹೋದರಿಯರು ತಾವು ಹುಟ್ಟಿ ಬೆಳೆದ ಮ್ಯಾರ್ಲಾಟ್‌ನ ಮನೆಯಿಂದ ಕೆಲಸವನ್ನರಸಿ ಬೇರೆ ಊರಿಗೆ ವಲಸೆ ಹೋಗುವ ದೃಶ್ಯ ಮನಕಲಕುವಂತಿದೆ.[120]

ಕೃಷಿಯಾಧಾರಿತ ಕಸುಬಿನಿಂದ ಕೃಷಿಯೇತರ ಕಸುಬುಗಳನ್ನರಸಿ ಹಳ್ಳಿಗಳಿಂದ ನಗರ ಪಟ್ಟಣಗಳಿಗೆ ವಲಸೆ ಹೋಗುವ ರೀತಿ ಜಾಗತೀಕರಣದ ಸಂಕೇತವಾಗಿದೆ: "ಕೃಷಿವಲಯದಲ್ಲಿ ಇತ್ತೀಚೆಗೆ ವಲಸೆಯ ಜ್ವರ ಪ್ರಾರಂಭವಾಗಿದೆ. ಶ್ರಮಿಕ ವರ್ಗದವರು ಅಥವಾ ಕೂಲಿ ಕಾರ್ಮಿಕರು ಹೊಲಗಳಿಂದ ಹೊಲಗಳಿಗೆ ಕ್ಯಾಂಡಲ್‌ಮಾಸ್ ದಿನದಿಂದ ವಲಸೆ ಹೋಗುವುದು ಸಾಮಾನ್ಯವಾಗಿದೆ..... ಆದರೆ ಒಂದು ಕೃಷಿ ಕ್ಷೇತ್ರದಿಂದ ಮತ್ತೊಂದು ಕೃಷಿ ಕ್ಷೇತ್ರಕ್ಕೆ ವಾರ್ಷಿಕ ಕರಾರಿನ ಮೇಲೆ ವಲಸೆ ಹೋಗುವ ಪದ್ಧತಿ ಹಿಂದೆ ಅಂದರೆ ಟೆಸ್‌ಳ ತಾಯಿ ಚಿಕ್ಕವಳಿದ್ದಾಗ ಇರಲಿಲ್ಲ. ಆಗೇನಿದ್ದರೂ ಹೊಲದಲ್ಲಿ ಕೆಲಸ ಮಾಡುವ ಕಾರ್ಮಿಕರು ತಮ್ಮ ಜೀವಿತದ ಅವಧಿಯವರೆಗೂ ಒಂದೇ ಕಡೆ ನೆಲೆ ನಿಲ್ಲುತ್ತಿದ್ದರು. ತಾವು ಕೆಲಸ ಮಾಡುತ್ತಿದ್ದ ಕೃಷಿ ಕ್ಷೇತ್ರಗಳೇ ತಮ್ಮ ತಂದೆ ಅಜ್ಜಂದಿರ ಮನೆಯಾಗಿತ್ತು. ಆದರೆ ಇಂದು ಒಂದು ಕಡೆಯಿಂದ ಮತ್ತೊಂದು ಕಡೆಗೆ ವಲಸೆ ಹೋಗುವುದು ಅತಿಯಾಗಿದೆ".[121] ಈ ಮಾತುಗಳು ಜಾಗತೀಕರಣದ ಪ್ರಭಾವ ಎಷ್ಟೊಂದು ಪರಿಣಾಮಕಾರಿಯಾಗಿದೆ ಎನ್ನುವುದನ್ನು ಮತ್ತು ಕೃಷಿವಲಯದಲ್ಲಿ ಉಂಟಾದ ಬದಲಾವಣೆಗಳೂ, ಬದಲಾಗುತ್ತಿರುವ ದೇಸಿ ಕೃಷಿ ಪದ್ಧತಿ, ವಾಣಿಜ್ಯೀಕರಣಗೊಳ್ಳುತ್ತಿರುವ ಕೃಷಿವಲಯದ ಮೇಲೆ ಬೆಳಕು ಚೆಲ್ಲುತ್ತವೆ.

ದೇಸಿ ಕೃಷಿಯ ವಲಯ ವಾಣಿಜ್ಯೀಕರಣಗೊಳ್ಳುತ್ತಿರುವುದರ ಸ್ಪಷ್ಟವಾದ ಚಿತ್ರಣ ಹಾರ್ಡಿಯವರ ಕಾದಂಬರಿಯಲ್ಲಿ ಇದೆ. ಏಂಜೆಲ್‌ಕ್ಲೇರ್ ವಸಾಹತು ಕೃಷಿಕನಾಗಿ, ಅಮೆರಿಕಾ ಅಥವಾ ಇನ್ನಾವುದೇ ದೇಶಕ್ಕೆ ಹೋಗಿ ದೊಡ್ಡ ಮಟ್ಟದಲ್ಲಿ ಕೃಷಿಯನ್ನು ಒಂದು ವ್ಯಾಪಾರ ಉದ್ಯಮವನ್ನಾಗಿ ಬೆಳೆಸಬೇಕೆಂಬ ಹಂಬಲದಿಂದ ಉದ್ಯೋಗಾರ್ಥಿಯಾಗಿ ಟಾಲ್‌ಬೋತಿಗೆ ತರಬೇತಿಗೆ ಬರುತ್ತಾನೆ.[122] ದೇಸಿ ಕೃಷಿಯನ್ನು ಅಧ್ಯಯನ ಮಾಡಿ ದೊಡ್ಡ ಪ್ರಮಾಣದಲ್ಲಿ ಆ ವಲಯವನ್ನು ವಿಸ್ತರಿಸಬೇಕೆನ್ನುವ ಅವನ ಉದ್ದೇಶವನ್ನು ಇಲ್ಲಿ ಕಾಣಬಹುದು. ಹತ್ತೊಂಬತ್ತನೇ ಶತಮಾನದವರೆಗೆ ಕೃಷಿಯನ್ನು ಒಂದು ಮುಖ್ಯ ಕಸುಬನ್ನಾಗಿ, ಸ್ಥಳೀಯರ ಬೇಡಿಕೆಗೆ ಅನುಗುಣವಾಗಿ ಮಾತ್ರ ಮಾಡುತ್ತಿದ್ದು, ನಗರ-ಪಟ್ಟಣಗಳು ಬೆಳೆದಂತೆ, ಅಲ್ಲಿನ ನಿವಾಸಿಗಳಿಗೆ ಆಹಾರ ಸರಬರಾಜು ಮಾಡಲು ಒಂದು ಉದ್ಯಮವನ್ನಾಗಿ ಮಾರ್ಪಡಿಸುವುದನ್ನು ಕಾಣುತ್ತೇವೆ.

ಟೆಸ್ ಕಾದಂಬರಿಯ ಏಂಜೆಲ್ ಕ್ಲೇರ್ ಕೃಷಿವಲಯದಲ್ಲಿ ಹೊಸ ರೀತಿಯ ಪ್ರಯೋಗಗಳನ್ನು ಮಾಡಲು ಮತ್ತು ಕೃಷಿಯನ್ನು ಒಂದು ಬೃಹತ್ ಉದ್ಯಮದಂತೆ ವಿದೇಶಗಳ ವಸಾಹತುಗಳಲ್ಲಿ ಕೈಗೊಳ್ಳಲು ಬ್ರೆಜಿಲ್‌ಗೆ ಹೋಗುವುದನ್ನು ನೋಡಿದಾಗ ಜಾಗತೀಕರಣದ ಸ್ವರೂಪ ತಿಳಿಯುತ್ತದೆ. ಟಾಲ್‌ಬೋತಿಯ ಡೈರಿಯಲ್ಲಿ ಪ್ರಾಯೋಗಿಕವಾಗಿ ತರಬೇತಿ ಪಡೆದು ಬ್ರೆಜಿಲ್‌ಗೆ ಹೋಗಿ ಕೃಷಿಯನ್ನು ವ್ಯಾಪಾರದ ರೀತಿಯಲ್ಲಿ ಬೆಳೆಸಲು ನಿರ್ಧರಿಸಿ ಬಂಡವಾಳ ಹೂಡುವುದು ಜಾಗತೀಕರಣದ ಸಂಕೇತವಾಗಿದೆ.[123] ದೇಸಿಯ ಬದುಕಿನ ಮೂಲ ಕಸುಬಾಗಿದ್ದ ಕೃಷಿ ಕ್ರಮೇಣ ಜಾಗತೀಕರಣಗೊಳ್ಳುವುದನ್ನು ಹಾರ್ಡಿಯವರು ತಮ್ಮ ಕಾದಂಬರಿಯಲ್ಲಿ ವರ್ಣಿಸಿದ್ದಾರೆ. ಆದರೆ ಕುವೆಂಪುರವರ ಕಾದಂಬರಿಗಳಲ್ಲಿ ಕೃಷಿ ವಲಯದಲ್ಲಿ ಹೆಚ್ಚಿನ ಪರಿವರ್ತನೆಯನ್ನು ಕಾಣಲಾಗುವುದಿಲ್ಲ. ಕೃಷಿಯು ಗ್ರಾಮೀಣ ಸಮುದಾಯದ ಸ್ವಾವಲಂಬನೆಗಾಗಿ ಮಾತ್ರ ಮೀಸಲಿದ್ದು ವ್ಯಾಪಾರ ವಹಿವಾಟಿನ ಬಗ್ಗೆ ಯಾವುದೇ ಉಲ್ಲೇಖವನ್ನು ಕುವೆಂಪುರವರ ಕಾದಂಬರಿಗಳಲ್ಲಿ ಕಾಣಲಾಗುವುದಿಲ್ಲ. ಆಹಾರ ಪದಾರ್ಥಗಳನ್ನು ವಸ್ತುವಿನಿಮಯ ಪದ್ಧತಿಯಲ್ಲಿ ಬಳಸುತ್ತಿದ್ದು, ವಾಣಿಜ್ಯ ಬೆಳೆಗಳಾದ ಅಡಿಕೆ, ಬಾಳೆ, ಕಬ್ಬು ಮುಂತಾದವುಗಳನ್ನು ಹಣದ ರೂಪದಲ್ಲಿ ಮಾರಾಟ ಮಾಡುವುದನ್ನು ಮಾತ್ರ ಕಾಣುತ್ತೇವೆ. ಇದರಿಂದ ಮಲೆನಾಡಿನ ಪ್ರದೇಶದಲ್ಲಿ ಅದರಲ್ಲೂ ಕೃಷಿ ಕ್ಷೇತ್ರದಲ್ಲಿ ಜಾಗತೀಕರಣದ ಪಾತ್ರ ಹಾರ್ಡಿಯವರ ವೆಸೆಕ್ಸ್‌ನ ಪ್ರದೇಶಕ್ಕೆ ಹೋಲಿಸಿದರೆ ಇಲ್ಲವೆಂದೇ ಹೇಳಬಹುದು. ಹಾರ್ಡಿಯವರ ವೆಸೆಕ್ಸ್‌ನ ಪ್ರದೇಶದಲ್ಲಿ ಒಕ್ಕುವ ಯಂತ್ರಗಳು, ಉಳುವ ಯಂತ್ರಗಳು ಮತ್ತು ಇನ್ನಿತರ ಕೃಷಿ ಯಂತ್ರಗಳು ದೇಸಿಯ ಕೃಷಿಕ್ಷೇತ್ರಕ್ಕೆ ಕಾಲಿಟ್ಟಿದ್ದರೂ ಮಲೆನಾಡಿನ ಪ್ರದೇಶಕ್ಕೆ ಅವುಗಳು ಪರಿಚಯವಿಲ್ಲದೆ ಇನ್ನೂ ಸಾಂಪ್ರದಾಯಿಕ ಕೃಷಿ ಪದ್ಧತಿಯೆ ರೂಢಿಯಲ್ಲಿದ್ದುದನ್ನು ತಿಳಿಯಬಹುದು.

ದೇಸಿಯ ಕೃಷಿಯೇತರ ಉಪಕಸುಬುಗಳು ಮತ್ತು ವೃತ್ತಿಗಳು ಜಾಗತೀಕರಣಗೊಳ್ಳುವುದನ್ನು ಇಬ್ಬರೂ ಕಾದಂಬರಿಕಾರರ ಕೃತಿಗಳಲ್ಲಿ ಕಾಣುತ್ತೇವೆ. ಕುವೆಂಪುರವರ ಕಾದಂಬರಿಗಳಲ್ಲಿ ಸಾಕುಪ್ರಾಣಿಗಳನ್ನು ಸ್ಥಳೀಯರು ತಮ್ಮ ದೈನಂದಿನ ಅಗತ್ಯಗಳಿಗಾಗಿ ಸಾಕುತ್ತಿದ್ದರು. ಆದರೆ ಹಾರ್ಡಿಯವರ ಕಾದಂಬರಿಗಳಲ್ಲಿ ಅವುಗಳನ್ನು ವಾಣಿಜ್ಯ ಉದ್ದೇಶಗಳಿಗಾಗಿ ಸಾಕುತ್ತಿದ್ದರು. ಟೆಸ್ ಕಾದಂಬರಿಯಲ್ಲಿ ಕುಕ್ಕುಟ ಉದ್ಯಮದ ಉಲ್ಲೇಖವನ್ನು ಕಾಣುತ್ತೇವೆ. ಟೆಸ್ ಟ್ರ್ಯಾಂಟ್ರಿಡ್ಜ್‌ಗೆ ಹೋಗಿ ಶ್ರೀಮತಿ ಡಿ ಅರ್ಬರ್‌ವಿಲ್ಲೆಯ ಕೋಳಿ ಫಾರ್ಮನಲ್ಲಿ ಕೆಲಸಕ್ಕೆ ಸೇರುತ್ತಾಳೆ. ಇದರಿಂದ ಗ್ರಾಮೀಣ ಇಂಗ್ಲೆಂಡಿನಲ್ಲಾಗಲೇ 19ನೇ ಶತಮಾನದ ಅಂತ್ಯದಲ್ಲಿ ಜಾಗತೀಕರಣದ ಛಾಯೆಯನ್ನು ಕಾಣುತ್ತೇವೆ.[124] ಮಲೆನಾಡಿನ ಜನರು ಕೋಳಿಗಳನ್ನು ತಮ್ಮ ಮನೆಯವರ ಆಹಾರಕ್ಕಾಗಿ ಮಾತ್ರ ಸಾಕುತ್ತಿದ್ದರು. ಹಾಗೆಯೇ ಮಲೆನಾಡಿನಲ್ಲಿ ಹಸುಗಳನ್ನು ಹಾಲು ಮೊಸರು ಮುಂತಾದ

ಉತ್ಪನ್ನಗಳಿಗಾಗಿ ಅದರಲ್ಲೂ ಮನೆಯ ಅಗತ್ಯಗಳಿಗಾಗಿ ಮಾತ್ರ ಸಾಕುತ್ತಿದ್ದರು. ಅವುಗಳನ್ನು ಯಾವುದೇ ವಾಣಿಜ್ಯ ಉದ್ದೇಶಗಳಿಗೆ ಸಾಕುತ್ತಿರಲಿಲ್ಲ. ಆದರ ವೆಸೆಕ್ಸ್‌ನ ಗ್ರಾಮೀಣ ಪ್ರದೇಶದಲ್ಲಿ ಹೈನುಗಾರಿಕೆ ಒಂದು ಉದ್ಯಮವಾಗಿ ಬೃಹತ್ ಪ್ರಮಾಣದಲ್ಲಿ ನಡೆಯತ್ತಿತ್ತು. ಟಾಲ್‌ಬೋತಿಯಲ್ಲಿ "ರಿಚರ್ಡ್‌ಕ್ರಿಕ್ ತನ್ನದೇ ಆದ ಒಂದು ಡೈರಿಯನ್ನು ತೆರೆದು ಅಲ್ಲಿ ಅನೇಕ ಹಸುಗಳನ್ನು ಹಾಲಿಗಾಗಿ ಮತ್ತು ಹಾಲಿನ ಉತ್ಪನ್ನಗಳಿಗಾಗಿ ಸಾಕುತ್ತಿದ್ದನು. ಟೆಸ್‌ಳಂತೆ ಅನೇಕ ಜನರು ಅಲ್ಲಿ ಹಾಲು ಕರೆಯುವುದು, ಬೆಣ್ಣೆ ತೆಗೆಯುವುದು ಮುಂತಾದ ಕೆಲಸಗಳನ್ನು ಮಾಡುತ್ತಿದ್ದರು"[125] ಸ್ಥಳೀಯರ ಅಗತ್ಯಗಳನ್ನು ಅಲ್ಲದೆ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಕ್ರಿಕ್ ಲಂಡನ್ನಿಗೆ ರೈಲುಗಾಡಿಗಳ ಮೂಲಕ ಸರಬರಾಜು ಮಾಡುತ್ತಿದ್ದನು: "ಲಂಡನ್ನಿನ ಶ್ರೀಮಂತ ಮನೆತನದವರು, ರಾಯಭಾರಿಗಳು, ಉನ್ನತ ಹುದ್ದೆಯಲ್ಲಿರುವವರು ಶ್ರೀಮಂತ ಸ್ತ್ರೀಯರು, ವ್ಯಾಪಾರಸ್ಥರು ಮತ್ತು ಎಂದೂ ಆಕಳು ಹೇಗಿದೆ ಎಂದು ಗೊತ್ತಿಲ್ಲದ ಮಕ್ಕಳೆಲ್ಲರಿಗಾಗಿ ತಾನು ಹಾಲಿನ ಉತ್ಪನ್ನಗಳನ್ನು ಕಳುಹಿಸುತ್ತಿದ್ದೇನೆ" ಎಂದು ಹೇಳುತ್ತಾನೆ.[126] ಮಲೆನಾಡಿನಲ್ಲಿ ಸಾಕು ಪ್ರಾಣಿಗಳು ದೇಸಿಯ ಬದುಕಿನ ಭಾಗವಾಗಿ ಸ್ಥಳೀಯ ಅಗತ್ಯಗಳನ್ನು ಪೂರೈಸುತ್ತಿದ್ದರೆ, ವೆಸೆಕ್ಸ್‌ನಲ್ಲಿ ವಾಣಿಜ್ಯ ಉದ್ದೇಶಗಳಿಗಾಗಿ ಬಳಕೆಯಾಗುತ್ತಿದ್ದವು ಎನ್ನುವುದು ಜಾಗತೀಕರಣದ ವ್ಯಾಪಾರಿ ಮನೋಭಾವವನ್ನು ಕಾಣುತ್ತೇವೆ.

"ರೈಲು ಬಂದ ನಂತರ ವೆಸೆಕ್ಸ್‌ನಲ್ಲಿದ್ದ ಸಾಂಪ್ರದಾಯಿಕ ಕಸುಬುಗಳಲ್ಲಿ ಒಂದಾದ ಕಾವಿ ಮಾರುವುದು ಕಣ್ಮರೆಯಾಗುವುದನ್ನು ಕಾಣುತ್ತೇವೆ. ಕಾವ್ಯಮಯವಾದ ಈ ಕಸುಬುಗಳು ಹಿಂದಿನ ಕಾಲದಲ್ಲಿದ್ದವು"[127] 'ದಿ ರಿಟರ್ನ್ ಆಫ್ ದಿ ನೇಟಿವ್' ಕಾದಂಬರಿಯ ಡಿಗರಿ ವೆನ್ ವೃತ್ತಿಯಲ್ಲಿ ಕಾವಿ ಮಾರುವವನು ತನ್ನ ಕುದುರೆಗಾಡಿಯಲ್ಲಿ ಕಾವಿಯನ್ನು ತುಂಬಿಕೊಂಡು ಊರಿನಿಂದ ಊರಿಗೆ ಹೋಗಿ ಮಾರುತ್ತಿದ್ದನು. ಆದರೆ ಕಾಲ ಕಳೆದಂತೆ, ಆಧುನಿಕತೆಯ ಗಾಳಿ ಬೀಸಲಾರಂಭಿಸಿದ ಮೇಲೆ, ಸಂಚಾರ–ಸಂಪರ್ಕ ಸಾಧನಗಳ ಆಗಮನದಿಂದ ದೇಸಿಯ ಸಾಂಪ್ರದಾಯಿಕ ವೃತ್ತಿಗಳು ಮಹತ್ವವನ್ನು ಕಳೆದುಕೊಂಡು ಸಮಾಜದ ದೃಷ್ಟಿಯಲ್ಲಿ ಕೀಳುಮಟ್ಟದ ವೃತ್ತಿಗಳೆನಿಸಿಕೊಂಡವು. ಕ್ರಮೇಣ ಈ ಸಾಂಪ್ರದಾಯಿಕ ಕಸುಬುಗಳನ್ನು ಮಾಡುತ್ತಿದ್ದವರು ಬೇರೆ ವೃತ್ತಿಗಳನ್ನರಸಿ ನಗರ–ಪಟ್ಟಣಗಳಿಗೆ ವಲಸೆ ಹೋಗಲಾರಂಭಿಸಿದರು. ಡಿಗರಿ ವೆನ್ ಸಾಮಾಜಿಕ ಪ್ರತಿಷ್ಠೆಯನ್ನು ಗಳಿಸಲು ತನ್ನ ಕಾವಿಯ ವೃತ್ತಿಯನ್ನು ತೊರೆದು ಒಂದು ಡೈರಿಯನ್ನು ಪ್ರಾರಂಭಿಸುತ್ತಾನೆ.[128] ಹೀಗೆ ಕಾವಿ ಮಾರುವ ಕಸುಬಿನಿಂದ ಡೈರಿಯ ಕಸುಬಿಗೆ ಬದಲಾಗುವುದು ಒಂದು ರೀತಿಯಲ್ಲಿ ಸಾಂಪ್ರದಾಯಿಕ ವೃತ್ತಿಯಿಂದ ಮತ್ತೊಂದು ವ್ಯವಸ್ಥೆಗೆ ವಲಸೆ ಹೋಗುವುದು ಜಾಗತೀಕರಣದ ಭಾಗವಾಗಿದೆ ಎನ್ನಬಹುದು.

ಕುವೆಂಪುರವರ ಕಾದಂಬರಿಗಳಲ್ಲಿ ವರ್ಣಿಸಲಾಗಿರುವ ಕೇರಳದಿಂದ ಬಂದ ಬ್ಯಾರಿ ಮುಸ್ಲಿಮರು ಮಲೆನಾಡಿನ ಮಕ್ಕಳಿಗೆ ಕುದುರೆಯ ಪರಿಚಯ ಮಾಡಿಸುವುದು ಜಾಗತೀಕರಣ ಸೂಚಕವೆಂದೇ ಹೇಳಬಹುದು. ಏಕೆಂದರೆ "ನಾಗರೀಕತೆಗೆ ಸುದುಷ್ ಪ್ರವೇಶ್ಯವಾಗಿದ್ದ ಆ ಮಲೆನಾಡಿನ ಕೊಂಪೆಯ ಕಾಡುಹಳ್ಳಿಯ ಹುಡುಗರಿಗೆ ಮೇಗರವಳ್ಳಿಯ ಕರ್ಮೀನ್‌ಸಾಬರ ಕುದುರೆಯ ಆಗಮನವೆಂದರೆ ಒಂದು ಮಹತ್ತರ ಐತಿಹಾಸಿಕ ಘಟನೆಯೇ!"[129] ಮಲೆನಾಡಿನ ಜನರಿಗೆ ಬೇಕಾದ ಸಾಮಾನು ಸರಂಜಾಮುಗಳನ್ನು ಕೇರಳದಿಂದ ಬಂದ ಬ್ಯಾರಿ ಮುಸ್ಲಿಮರು ವಸ್ತು ವಿನಿಮಯ ಪದ್ಧತಿಯಲ್ಲಿ ಮಾರುತ್ತಿದ್ದರು. ಇಲ್ಲಿ ವಸ್ತುವಿನಿಮಯ ಪದ್ಧತಿ ದೇಸಿಯವಾದರೂ ವ್ಯಾಪಾರ-ವ್ಯವಹಾರದಲ್ಲಿ ಜಾಗತೀಕತೆಯ ಲಕ್ಷಣಗಳನ್ನು ಕಾಣುತ್ತೇವೆ. ಸ್ಥಳೀಯ ಮುಗ್ಧ, ಅನಕ್ಷರಸ್ಥ ಜನರನ್ನು ವಂಚಿಸಿ ಲಾಭ ಮಾಡಿಕೊಳ್ಳುತ್ತಿದ್ದ ಬ್ಯಾರಿ ಮುಸ್ಲಿಮರ ಲಾಭಕೋರತನವನ್ನು ಬಯಲು ಮಾಡಲಾಗಿದೆ. ಇದು ದೇಸಿಯ ಬದುಕಿನ ಮೇಲೆ ಜಾಗತೀಕರಣದ ಪ್ರಭಾವವನ್ನು ಸೂಚಿಸುತ್ತದೆ.

2.8 ದೇಸಿ ಬದುಕು ಮತ್ತು ಆಧುನಿಕ ಸಂಪರ್ಕ-ಸಾಧನಗಳು:

ಮಲೆನಾಡಿನ ದೇಸಿ ಬದುಕಿನಲ್ಲಿ ಎತ್ತಿನ ಬಂಡಿಗಳು ಮತ್ತು ಕಮಾನುಗಾಡಿಗಳು ಶ್ರೀಮಂತಿಕೆಯ ಸಂಕೇತವಾಗಿದ್ದವು. ಇನ್ನೂ ಆ ಮಲೆನಾಡಿನ ಕೊಂಪೆಯ ಕಾಡಿಗೆ ಆಗ ಹೊರಲೋಕದ ಸುದ್ದಿ ಸಂಪರ್ಕವೆ ಇರಲಿಲ್ಲ. ಪತ್ರಿಕೆಗಳೂ ಇರಲಿಲ್ಲ. 'ರಸ್ತೆ' ಎಂಬ ಹೆಸರೇ ಅಪರಿಚಿತವಾಗಿದ್ದ ಕಾಲವದು: "ಮುಂದೆ 'ರಸ್ತೆ'ಗೆ ಬದಲಾಗಿ 'ರೋಡು' ಎಂಬುದು ಬಳಕೆಗೆ ಬಂದಂತೆ, ಮುಸಲ್ಮಾನರ ದೌಲತ್ತು ಕೊನೆಗೊಂಡು ಇಂಗ್ಲೀಷರ ದೌಲತ್ತು ಸಂಪೂರ್ಣವಾಗಿ ಸಂಸ್ಥಾಪಿತವಾದುದು"[130] ಈ ವಿವರಣೆ ಅಂದಿನ ಮಲೆನಾಡಿನ ದೇಸಿಯ ಬದುಕು ಜಾಗತೀಕರಣಕ್ಕೆ ತೆರೆದುಕೊಳ್ಳುತ್ತಿದ್ದ ಕಾಲಕ್ಕೆ ಸಾಕ್ಷಿಯಾಗಿದೆ. 'ರಸ್ತೆ'ಮತ್ತು ಹೆದ್ದಾರಿಗಳ ಮೂಲಕ, ಬ್ರಿಟಿಷ್ ವಸಾಹತು ಆಡಳಿತ ಪ್ರಭಾವ ಬೀರಲು ಪ್ರಾರಂಭಿಸಿತು. ಇದರಿಂದ ಆಧುನಿಕತೆಯ ಹೆಸರಲ್ಲಿ ದೇಸಿಯ ಬದುಕು ಪರಿವರ್ತನೆಯಾಗುವುದು ಕಾಲದ ಮಹಿಮೆ ಎನ್ನಬಹುದು. ಮಲೆನಾಡಿಗೆ ಬೈಸಿಕಲ್ಲಿನ ಪ್ರವೇಶ ಆಧುನಿಕ ಸಂಪರ್ಕ ಸಾಧನಗಳ ಸಂಕೇತವೆಂದೇ ಹೇಳಬಹುದು. ಮಲೆಗಳಲ್ಲಿ ಮದುಮಗಳು ಕಾದಂಬರಿಯ ಪಾತ್ರಿ ಜೀವರತ್ನಯ್ಯ ದೇವಯ್ಯನಿಗೆ ಬೈಸಿಕಲ್ ಕಲಿಸುವ ಪ್ರಸಂಗದಿಂದ ಮಲೆನಾಡಿನಲ್ಲಿ ಆಧುನಿಕ ಸಂಪರ್ಕ ಸಾಧನಗಳ ಯುಗ ಪ್ರಾರಂಭವಾಗುತ್ತದೆ. ಈ ಆಧುನಿಕತೆಯ ದುಷ್ಪರಿಣಾಮವನ್ನು ಕುವೆಂಪು ಕಾನೂರು

ಹೆಗ್ಗಡತಿಯಲ್ಲಿ ಸೈಕಲ್ ಸವಾರ ಅಂಧಾದುಂಧಿಯಾಗಿ ವೇಗವಾಗಿ ಸವಾರಿ ಮಾಡಿ ಬೀಳುವುದರ ವರ್ಣನೆಯಲ್ಲಿ ಸೂಚಿಸಿದ್ದಾರೆ. ಮಲೆನಾಡಿನ ದೇಸಿ ಪರಿಸರದಲ್ಲಿ "ನಾಲ್ಕಾರು ಗ್ರಾಮಗಳಿಗೆ ಅನುಕೂಲವಾಗುವಂತೆ ಒಂದು ಆಸ್ಪತ್ರೆ, ಸ್ಕೂಲು, ಪೋಸ್ಟಾಫೀಸು, ಅಂಗಡಿಗಳು ಮೂಡಿ ವರ್ಧಿಸುತ್ತಿದ್ದವು. ಹಿಂದೆ ಬೈಸಿಕಲ್ಲಿನ ಪರಿಚಯಕ್ಕೂ ಪರದೇಶಿಯಾಗಿದ್ದ ಆ ರಸ್ತೆ ಮೋಟಾರು ಕಾರು, ಬಸ್ಸುಗಳ ಕೋಟಲೆಯಿಂದ ಬೇಸರಗೊಂಡಿತ್ತು.[131] ಆಧುನಿಕ ಸಂಪರ್ಕ ಸಾಧನಗಳು ದೇಸಿಯ ಬದುಕಿನ ಪರಿವರ್ತನೆಯಲ್ಲಿ ಪಾತ್ರವಹಿಸುತ್ತದೆ ಎನ್ನುವುದಕ್ಕೆ ಮೋಟಾರು ಕಾರು, ಬಸ್ಸು, ಮುಂತಾದವುಗಳೇ ಸಾಕ್ಷಿಯಾಗುತ್ತವೆ. ಹಾರ್ಡಿಯವರ ವೆಸೆಕ್ಸ್ ಪ್ರದೇಶಕ್ಕೆ ರೈಲುಗಾಡಿಯ ಆಗಮನ, ಪೋಸ್ಟಾಫೀಸು ಸ್ಥಳೀಯ ಬ್ಯಾಂಕುಗಳು ಪ್ರಾರಂಭಗೊಂಡು ದೇಸಿಯ ಬದುಕು ಪಲ್ಲಟಗೊಳ್ಳುವುದನ್ನು ಕಾಣುತ್ತೇವೆ. ಮಲೆನಾಡಿನ ಪ್ರದೇಶಕ್ಕಿಂತ ವೆಸೆಕ್ಸ್‌ನ ಪರಿಸರ ಜಾಗತೀಕರಣಕ್ಕೆ ಬಹುಬೇಗನೆ ತೆರೆದುಕೊಳ್ಳುವುದನ್ನು ಕಾಣುತ್ತೇವೆ.

2.9 ದೇಸಿ ಸಮಾಜ ಮತ್ತು ಜಾಗತೀಕರಣ:

ಭಾರತದ ಸಾಮಾಜಿಕ ವ್ಯವಸ್ಥೆಯು ಶ್ರೇಣಿಕೃತ ಜಾತಿ ವ್ಯವಸ್ಥೆಯ ಆಧಾರದ ಮೇಲೆ ರೂಪುಗೊಂಡಿದ್ದು ಇಂತಹ ಜಾತಿ-ಉಪಜಾತಿಗಳಿಂದ ಕೂಡಿದ ವ್ಯವಸ್ಥೆಯು ಸರ್ವವ್ಯಾಪಿಯಾಗಿ ಗ್ರಾಮ ಮಟ್ಟದಿಂದ ರಾಷ್ಟ್ರ ಮಟ್ಟದವರೆಗೂ ಬೇರುಬಿಟ್ಟಿದೆ. ಮಲೆನಾಡಿನಂತಹ ದೇಸಿ ಪರಿಸರವೂ ಸಾಂಪ್ರದಾಯಕ ಜಾತಿ ವ್ಯವಸ್ಥೆಯಿಂದ ಹೊರತಾಗಿಲ್ಲ. ಇದರ ಲಾಭವನ್ನು ಪಡೆದ ಬ್ರಿಟಿಷರು ತಮ್ಮ ವಸಾಹತು ಆಳ್ವಿಕೆಯಲ್ಲಿ ಭಾರತದ ಸಾಮಾಜಿಕ ವ್ಯವಸ್ಥೆಯ ಮೇಲೆ ಸಾಕಷ್ಟು ಬದಲಾವಣೆಯನ್ನು ತರಲಾರಂಭಿಸಿದರು. ಪಾಶ್ಚಾತ್ಯ ಶಿಕ್ಷಣ ಮತ್ತು ಆಧುನಿಕ ಪರಿಕರಗಳ ಮೂಲಕ ದೇಶದ ಶ್ರೇಣೀಕೃತ ವ್ಯವಸ್ಥೆಯನ್ನು ಚಲನಶೀಲವನ್ನಾಗಿ ಮಾಡುತ್ತಾರೆ. ಭಾರತದಲ್ಲಿದ್ದ ಜಾತಿ ವ್ಯವಸ್ಥೆಯನ್ನು ಟೀಕಿಸುವುದರ ಮೂಲಕ ಮತಾಂತರಗೊಳಿಸುವುದನ್ನು ಸುಲಭವಾಗಿಸುತ್ತಾರೆ. ಇದರ ಫಲವಾಗಿ ಜಾತಿ ವ್ಯವಸ್ಥೆಯಲ್ಲಿ ಕೆಳಸ್ತರದಲ್ಲಿದ್ದವರನ್ನು ಮತ್ತು ಅಸ್ಪೃಶ್ಯರನ್ನು ಕ್ರೈಸ್ತ ಧರ್ಮಕ್ಕೆ ಸಾಕಷ್ಟು ಸಂಖ್ಯೆಯಲ್ಲಿ ಮತಾಂತರಗೊಳಿಸುತ್ತಾರೆ. ಹೀಗೆ ಮತಾಂತರಗೊಳಿಸುವ ಮೂಲಕ ದೇಸಿಯ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಬದುಕು ಪಲ್ಲಟಗೊಳ್ಳುವುದನ್ನು ಕುವೆಂಪು ಮತ್ತು ಹಾರ್ಡಿಯವರ ಕಾದಂಬರಿಗಳಲ್ಲಿ ಕಾಣಬಹುದು.

ಮತಾಂತರ ಮತ್ತು ಜಾಗತೀಕರಣ: ಕುವೆಂಪುರವರ ಕಾದಂಬರಿಗಳಲ್ಲಿ ಮತಾಂತರದ ಬಗ್ಗೆ ಅನೇಕ ಉಲ್ಲೇಖಗಳನ್ನು ಕಾಣುತ್ತೇವೆ. ಮಲೆನಾಡು ಭೌಗೋಳಿಕವಾಗಿ ಕರಾವಳಿ ಪ್ರದೇಶಕ್ಕೆ ಹತ್ತಿರವಿದ್ದ ಕಾರಣಕ್ಕೋ ಏನೋ ಕ್ರೈಸ್ತ ಮಿಷನರಿಗಳಿಗೆ ರಹದಾರಿಯಾಗುತ್ತದೆ. ತೀರ್ಥಹಳ್ಳಿ ಕ್ರೈಸ್ತ ಮತದ ಮತ್ತು ಮತಾಂತರದ ಕೇಂದ್ರವಾಗಿತ್ತು. ಕರಾವಳಿ ಪ್ರದೇಶದಿಂದ ಆಗುಂಬೆ ಮೂಲಕ ಬರುತ್ತಿದ್ದ ಕ್ರೈಸ್ತ ಮಿಷನರಿಗಳು ಮತ್ತು ಮೈಸೂರಿನಿಂದ ಶಿವಮೊಗ್ಗದ ಮೂಲಕ ಬರುತ್ತಿದ್ದವರಿಗೆ ತೀರ್ಥಹಳ್ಳಿ ಒಂದು ಆಯಕಟ್ಟಿನ ಪ್ರದೇಶವಾಗಿದ್ದು, ಸುತ್ತಮುತ್ತಲಿನ ಅಮಾಯಕ, ಮುಗ್ಧ ಜನರನ್ನು ಆಮಿಷಗಳನ್ನೊಡ್ಡಿ ಮತಾಂತರಗೊಳಿಸುತ್ತಿದ್ದರು. ಕ್ರೈಸ್ತ ಮತಕ್ಕೆ ಸೇರಿದರೆ ಹಣ ಸಿಗುತ್ತದೆ ಎಂಬ ಆಸೆಯಿಂದ ಮತ್ತು ಹಿಂದೂ ಸಮಾಜದ ಕಟ್ಟುಗಳಿಂದ ಪಾರಾಗಲು ಕೆಲವರು ಮತಾಂತರಗೊಳ್ಳುತ್ತಿದ್ದರು. ಇಂತಹವರಲ್ಲಿ ಕಿಲಿಸ್ತರ ಜಾಕಿ ಕೂಡ ಒಬ್ಬನಾಗಿದ್ದನು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಮಲೆನಾಡಿನ ದೇಸಿ ಪರಿಸರದಲ್ಲಿದ್ದ ಜಾತಿ ವ್ಯವಸ್ಥೆ ಮತ್ತು ಕಿತ್ತು ತಿನ್ನುವ ಬಡತನ, ಸ್ಥಳೀಯರು ಅನ್ಯ ಧರ್ಮಕ್ಕೆ ಮತಾಂತರಗೊಳ್ಳಲು ಕಾರಣವಾಗುತ್ತಿತ್ತು. ಕ್ರೈಸ್ತಮತದವರ ಆಮಿಷಗಳಿಗೆ ಮಾರು ಹೋಗಿ ಅನೇಕ ಮಂದಿ ಮತಾಂತರಗೊಳ್ಳುತ್ತಿದ್ದರು ಎನ್ನುವುದನ್ನು ಕುವೆಂಪುರವರ ಕಾದಂಬರಿಗಳಲ್ಲಿ ಕಾಣಬಹುದು. ಆಮಿಷಕ್ಕಿಂತಲೂ ಹೆಚ್ಚಾಗಿ ಹಿಂದೂ ಧರ್ಮವನ್ನು ಹಿಂದೂ ಸಮಾಜದಲ್ಲಿದ್ದ ಶ್ರೇಣೀಕೃತ ಜಾತಿ ವ್ಯವಸ್ಥೆಯನ್ನು ನಿಂದಿಸುವುದರ ಮೂಲಕ ಮತಾಂತರಗೊಳಿಸಲಾಗುತ್ತಿತ್ತು. "ಯಃಕಶ್ಚಿತ್ ಪಾದ್ರಿಯೊಬ್ಬನು ಅದರಲ್ಲಿಯೂ ನೇಟಿವ್ ಪಾದ್ರಿ ಘೋರಾರಣ್ಯಮಯವಾದ ಸಹ್ಯಾದ್ರಿ ಶ್ರೇಣಿಯ ಮಲೆನಾಡಿನ ಕೊಂಪೆಯ ಅಜ್ಞ ಬೇಸಾಯಗಾರನೊಬ್ಬನಿಗೆ ಹಿಂದೂ ಧರ್ಮದ ಅನಾಚಾರ, ಅವಿವೇಕ, ಸಂಕುಚಿತ ಮನೋಭಾವ, ಜಾತಿ ಮತ ಪಕ್ಷಪಾತ.... ಇತ್ಯಾದಿಗಳನ್ನು ಯೇಸುಕ್ರಿಸ್ತನ ಮತ್ತು ಕ್ರೈಸ್ತಮತದ ಪರೋಪಕಾರ, ಪರಾನುಕಂಪನ ನೀತಿ, ತ್ಯಾಗ, ಭಕ್ತಿ, ಉದ್ಧಾರಕ ಸಾಮರ್ಥ್ಯ ಇತ್ಯಾದಿಗಳನ್ನು ಕುರಿತು ಮನಮುಟ್ಟುವಂತೆ ಉಪದೇಶ ಮಾಡುತ್ತಿದ್ದ".[132] ಇಂತಹ ಉಪದೇಶದಿಂದ ಪ್ರೇರೇಪಿತಗೊಂಡ ಸ್ಥಳೀಯ ಮುಗ್ಧ ಜನರು ಕ್ರೈಸ್ತ ಮತಕ್ಕೆ ಸೇರುತ್ತಿದ್ದರು. ಆ ಪಾದ್ರಿ ಜೀವರತ್ನಯ್ಯ ಮಲೆನಾಡಿನ ಗೌಡರುಗಳಲ್ಲಿ ಅಂಥವರನ್ನು ಪತ್ತೆ ಹಚ್ಚಿ ತನ್ನ ಕೆಲಸಕ್ಕೆ ಸೇರಿಸಿಕೊಳ್ಳುತ್ತಿದ್ದನು, ಸಿಂಧುವಳ್ಳಿ ಚಿನ್ನಪ್ಪನೆ ಪಾದ್ರಿಯ ಮೊತ್ತಮೊದಲನೆಯ ಬೇಟೆಯಾಗಿದ್ದನು.

ಮಲೆನಾಡಿನ ದೇಸಿ ಬದುಕಿನಲ್ಲಿ ಎತ್ತಿನ ಬಂಡಿಗಳೇ ಸಂಪರ್ಕ ಸಾಧನಗಳಾಗಿದ್ದ ದಿನಗಳಲ್ಲಿ ಬೈಸಿಕಲ್ಲಿನ ಆಗಮನ ಜಾಗತೀಕರತೆಯ ಪ್ರವೇಶವೆಂದೇ ಹೇಳಬಹುದು. ಪಾದ್ರಿ ಜೀವರತ್ನಯ್ಯ ಬೆಟ್ಟಳ್ಳಿ ದೇವಯ್ಯಗೌಡನನ್ನು ಮತಾಂತರಗೊಳಿಸಲು ಬೈಸಿಕಲ್ಲಿನ ಆಮಿಷದಿಂದ

ಪ್ರಯತ್ನಿಸುತ್ತಾನೆ. ಮೊಟ್ಟಮೊದಲ ಬಾರಿಗೆ ಬೈಸಿಕಲ್ಲನ್ನು ಮಲೆನಾಡಿಗೆ ತಂದಾಗ ಸ್ಥಳೀಯ ಜನರ ಕುತೂಹಲ ಎಷ್ಟಿತ್ತೆಂದರೆ ಸುತ್ತಮುತ್ತಲ ಊರಿನ ಜನರೆಲ್ಲ ಭೇದ ಭಾವವಿಲ್ಲದೆ ಅದನ್ನು ಮುಟ್ಟಿ ನೋಡಲು ನುಗ್ಗುತ್ತಾರೆ. ಇದನ್ನು ಕಂಡ ಪಾದ್ರಿ ಮನದಲ್ಲಿಯೇ "ಮತ ಪ್ರಚಾರಕ್ಕೆ ಬೈಬಲ್ಲು ಏಸುಕ್ರಿಸ್ತನಿಗಿಂತಲೂ ಬೈಸಿಕಲ್ಲೆ ಹೆಚ್ಚು ಪ್ರಭಾವಶಾಲಿ!"[133] ಎಂದು ಮನದಲ್ಲಿಯೇ ಸ್ಥಳೀಯರನ್ನು ಕ್ರೈಸ್ತಮತಕ್ಕೆ ಮತಾಂತರಗೊಳಿಸಲು ಸಂಚು ಹೂಡುತ್ತಾನೆ. ಮಲೆನಾಡಿನ ದೇಸಿ ಬದುಕಿಗೆ ಅಪರಿಚಿತವೂ, ಅಪರೂಪವೂ ಆಗಿದ್ದ ಆಧುನಿಕ ವಿಲಾಯಿತಿ ವಸ್ತುಗಳಾದ "ಲಾಟೀನು, ಬೈಸಿಕಲ್ಲು, ತೋಟಾಕೋವಿ, ಸೀಮೆ ಬಿಸ್ಕತ್ತು, ಕ್ರಾಮು, ಹ್ಯಾಟು, ಬೂಟ್ಸು ಇತ್ಯಾದಿಗಳನ್ನು" ಮತಾಂತರದ ಕಾಣಿಕೆಗಳಾಗಿ ನೀಡಿ ಮತಾಂತರಗೊಳಿಸಲು ಹುನ್ನಾರ ನಡೆಯುತ್ತಿತ್ತು.[134] ಇವಿಷ್ಟೇ ಅಲ್ಲದೆ ಅನಕ್ಷರಸ್ಥ ಗೌಡರಿಗೆ ಬ್ರಿಟಿಷ್ ಆಡಳಿತದಲ್ಲಿದ್ದ ಅಧಿಕಾರಿಗಳ ಜೊತೆ ವ್ಯವಹರಿಸಲು ತಕ್ಕಮಟ್ಟಿಗೆ ಇಂಗ್ಲೀಷ್ ತಿಳಿದಿದ್ದ ಪಾದ್ರಿ ಅವರಿಗೆ ನೆರವು ನೀಡುತ್ತಿದ್ದನು. "ಹಳ್ಳಿಯವರು ತೀರ್ಥಹಳ್ಳಿಗೆ ಹೋದಾಗ ಆಸ್ಪತ್ರೆ, ಡಾಕ್ಟರು, ಅಮಲ್ದಾರರು, ಪೋಲಿಸಿನವರು, ಪೋಸ್ಟಾಫೀಸು, ಕಾಫಿ, ಹೋಟೆಲ್, ಇಸ್ಕೂಲು ಮುಂತಾದ, ತಾವು ಹಿಂದೆಂದೂ ಕೇಳದಿದ್ದ ಭಾಷೆಯ ಹೆಸರುಗಳಿಗೆ ದಿಗಿಲು ಪಟ್ಟುಕೊಳ್ಳುತ್ತಿದ್ದಾಗ, ಪಾದ್ರಿಯಿಂದ ಅವರಿಗೆ ತುಂಬಾ ಉಪಕಾರವಾಗುತ್ತಿತ್ತು"[135] ಈ ರೀತಿಯ ಸಹಾಯ, ಆಮಿಷಗಳಿಂದ ಮುಗ್ಧ ಜನರನ್ನು ಕ್ರೈಸ್ತ ಮತಕ್ಕೆ ಮತಾಂತರಗೊಳಿಸಲಾಗುತ್ತಿತ್ತು.

ಮತಾಂತರಗೊಳಿಸುವ ಪ್ರಕ್ರಿಯೆ ಭಾರತದ ಸಮಾಜದಲ್ಲಷ್ಟೆ ಅಲ್ಲದೆ ಇಂಗ್ಲೆಂಡಿನ ಗ್ರಾಮೀಣ ಪ್ರದೇಶದಲ್ಲಿದ್ದ ಪೇಗನ್ ಸಂಸ್ಕೃತಿಯ ಜನರನ್ನು ಕ್ರೈಸ್ತ ಮತಕ್ಕೆ ಸೇರಿಸಿಕೊಳ್ಳುವ ಕಾರ್ಯ 19ನೇ ಶತಮಾನದಲ್ಲಿ ನಡೆಯುತ್ತಿತ್ತು ಎನ್ನುವುದನ್ನು ಹಾರ್ಡಿಯವರ ಕಾದಂಬರಿಯಲ್ಲಿ ಕಾಣುತ್ತೇವೆ. ಅಲೆಕ್ ಡಿ ಅರ್ಬರ್‌ವಿಲ್ಲೆ ತಾನು ಹಿಂದೆ ಮಾಡಿದ ಪಾಪ ಕೃತ್ಯಗಳಿಗೆ ಪ್ರಾಯಶ್ಚಿತ್ತವೆಂಬಂತೆ "ಕ್ರೈಸ್ತಮತಕ್ಕೆ ಮತಾಂತರಗೊಂಡು ಮುಂದೆ ವೆಸೆಕ್ಸ್‌ನ ಗ್ರಾಮೀಣ ಭಾಗದ ಎಮ್ಮಿನಿಸ್ಟರ್‌ನಲ್ಲಿ ಉಪದೇಶಿಯಗಿ ಅಲ್ಲಿನ ಮುಗ್ಧ ಜನರನ್ನು ಕ್ರೈಸ್ತಮತಕ್ಕೆ ಮತಾಂತರಗೊಳಿಸುವ ಕೆಲಸ ನಿರ್ವಹಿಸುತ್ತಿರುತ್ತಾನೆ."[136] ಕ್ರೈಸ್ತ ಮಿಷನರಿಗಳು ಮಲೆನಾಡಿನಲ್ಲಿ ಸ್ಥಳೀಯರಿಗೆ ನೀಡುತ್ತಿದ್ದ ಆಮಿಷ, ಹಣ ಮುಂತಾದ ವಸ್ತುಗಳನ್ನು ವೆಸೆಕ್ಸ್‌ನಲ್ಲಿ ಅಲ್ಲಿಯ ಮುಗ್ಧ ಜನರಿಗೆ ಕೊಡುತ್ತಿದ್ದರೆ ಅಥವಾ ಇಲ್ಲವೆ ಎನ್ನುವುದರ ಬಗ್ಗೆ ಹಾರ್ಡಿಯವರ ಕಾದಂಬರಿಯಲ್ಲಿ ಉಲ್ಲೇಖವಿರುವುದಿಲ್ಲ. ಆದರೆ ಹಳ್ಳಿಯ ಮುಗ್ಧ ಜನರನ್ನು ಕ್ರೈಸ್ತ ಮತಕ್ಕೆ ಮತಾಂತರಗೊಳಿಸಲಾಗುತ್ತಿತ್ತು ಎನ್ನುವುದು ಸ್ಪಷ್ಟವಾಗುತ್ತದೆ.

ಪರಂಪರಾಗತವಾಗಿ ಬೆಳೆದು ದೇಸಿ ಸಂಸ್ಕೃತಿಯ ಭಾಗವಾಗಿ ಬಂದಿದ್ದ ರೂಢಿ, ಸಂಪ್ರದಾಯಗಳು, ಸಾಮಾಜಿಕ ಮತ್ತು ಕೌಟುಂಬಿಕ ಸಂಬಂಧಗಳು ಮತಾಂತರದಿಂದ

ಅಸ್ಥಿರಗೊಳ್ಳುವುದನ್ನು ಕಾಣುತ್ತೇವೆ. ಜೀವರತ್ನಯ್ಯನ ಸಹವಾಸದಿಂದ ಮತ್ತು ಉಪದೇಶದಿಂದ ಬೆಟ್ಟಳ್ಳಿಯ ದೇವಯ್ಯ: "ಜುಟ್ಟು ಬೋಳಿಸಿ ಕಿರಾಪು ಬಿಟ್ಟದ್ದನ್ನು ಕಂಡು ಅವನ ಮನೆಯವರಿಗೆ ಆಘಾತವಾಗುತ್ತದೆ", ಅಪ್ಪ ಅವ್ವ ಸಾಯೋತನಕ ಕಾಯೋಕಾಗಲಿಲ್ಲವೇನೋ ಮಗನೇ?" ಎಂದು ತಾಯಿ ಅತ್ತೂ ಕರೆದು ಅನ್ನ ನೀರು ಬಿಟ್ಟಿದ್ದಳು. ಅಪ್ಪ ಅವ್ವ ಸತ್ತಾಗ ಮಾತ್ರ ತಲೆಬೋಳಿಸುತ್ತಿದ್ದುದು ಆಚಾರವಾಗಿತ್ತು. ಈಗ ಕಾರ್ಯವೇ ನಡೆದು ಹೋಗಿದ್ದುದರಿಂದ ಇನ್ನೇನು ಕಾರಣವೂ ನಡೆಯುವುದಕ್ಕೆಂದೇ ಮುನ್‌ಸೂಚಕವಾಗಿ ವಿಧಿ ದೇವಯ್ಯನ ಕೈಲಿ ಆ ಅಧರ್ಮ ಕಾರ್ಯ ಮಾಡಿಸಿದೆ ಎಂದು ಭೀತರಾಗಿದ್ದರು"[137] ಕ್ರೈಸ್ತ ಮಿಶನರಿಗಳ ಪ್ರಭಾವದಿಂದ ದೇವಯ್ಯ ದೇಸಿ ಸಂಸ್ಕೃತಿಯ ವಿರುದ್ಧ ಸಾಗುವುದು ಒಂದು ಸಂಕೇತವಷ್ಟೇ. ಏಕೆಂದರೆ ಮಲೆನಾಡಿನ ದೇಸಿ ಸಂಸ್ಕೃತಿಯಲ್ಲಿ ಹಣೆಗೆ ನಾಮ ಇಟ್ಟುಕೊಳ್ಳುವುದು, ತುಳಸಿ ಕಟ್ಟೆ ಸುತ್ತುವುದು, ದೆಯ್ಯ, ದ್ಯಾವರುಗಳಿಗೆ ಪೂಜೆ, ಹರಕೆ ಸಲ್ಲಿಸುವುದು, ಸತ್ಯನಾರಾಯಣ ವ್ರತ ಮಾಡುವುದು ಮುಂತಾದ ಆಚರಣೆಗಳು ಕ್ರೈಸ್ತ ಮತದ ಪ್ರಭಾವದಿಂದ ಅಪಾಯಕ್ಕೊಳಗಾಗುತ್ತವೆ.

ಮಲೆನಾಡಿನ ದೇಸಿಯ ಬದುಕಿನಲ್ಲಿ ಕೌಟುಂಬಿಕ ಸಂಬಂಧಗಳು ಬಹಳ ಅನ್ಯೋನ್ಯವಾಗಿ ಗಟ್ಟಿಯಾಗಿದ್ದವು. ಆದರೆ ಮತಾಂತರಕ್ಕೆ ಸಿಕ್ಕ ಆ ಸಂಬಂಧಗಳೆಲ್ಲ ಹಳಸಿ ಹೋಗುವುದನ್ನು ಕಾಣಬಹುದು. ಬೆಟ್ಟಳ್ಳಿಯ ದೇವಯ್ಯ ಮತ್ತು ಅವನ ಹೆಂಡತಿ ದೇವಮ್ಮನವರ ಸಂಬಂಧ ಪ್ರೀತಿ, ಪ್ರೇಮದಿಂದ, ಪವಿತ್ರವಾಗಿತ್ತು, "ಚೆಲುವೆಯಾಗಿದ್ದ ತನ್ನ ಹೆಂಡತಿಯನ್ನು ಅವನು ಮದುವೆಯಾದಂದಿನಿಂದಲೂ ತುಂಬಾ ಮೋಹದಿಂದ ಪ್ರೀತಿಸಿದ್ದನು, ಅವಳೂ ತನ್ನ ಗಂಡನನ್ನು ಇನ್ನಿಲ್ಲದಂತೆ ಮುದ್ದಿಸಿದ್ದಳು, ದೇವರಂತೆ ಗೌರವಿಸಿದ್ದಳು, ಅದನ್ನು ಕಂಡು ಅತ್ತೆಗೂ ಒಮ್ಮೊಮ್ಮೆ ಕರುಬು ಮೂಡಿತ್ತು"[138] ಮತಾಂತರ ಹೇಗೆ ಕೌಟುಂಬಿಕ ಸಾಮರಸ್ಯವನ್ನು ನಾಶಮಾಡಿತು ಎನ್ನುವುದನ್ನು ದೇವಮ್ಮನವರ ಮಾತಿನಲ್ಲಿ ಕಾಣುತ್ತೇವೆ. "ತನ್ನ ಗಂಡ ಮತಾಂತರಗೊಳ್ಳುವ ಮೊದಲು ತಾನು ತನ್ನ ಶಿಶುವಿನೊಡನೆ ಮೃತ್ಯುವನ್ನಪ್ಪುವುದೇ ಶ್ರೇಯಸ್ಕರ ಎಂದುಕೊಳ್ಳುತ್ತಾರೆ...... ತನ್ನ ಗಂಡನು ಪಾದ್ರಿಯ ಮಗಳೊಡನೆ ಸಂಬಂಧ ಬೆಳೆಸಿದ್ದಾನೆ ಎಂಬ ಗುಸುಗುಸು ಸುದ್ದಿ ಅವಳ ಕಿವಿಗೆ ಬಿದ್ದಾಗ, ಗರತಿ ಹೆಣ್ಣು ಸಂಕಟಪಟ್ಟುಕೊಳ್ಳುವಂತೆ ದುಃಖಿಯಾಗಿದ್ದಳು...... ಭಗವಂತ ತನ್ನ ತಾಳಿ ಕೆಡದಂತೆ ಕಾಪಾಡಿದರೆ ಸಾಕು......"[139] ಮತಾಂತರಗೊಳಿಸುವ ಉತ್ಸಾಹದಲ್ಲಿ ಆಧುನಿಕ ವಿಲಾಯಿತಿಗಳನ್ನಷ್ಟೇ ಅಲ್ಲದೆ ಅನೈತಿಕ ಸಂಬಂಧಗಳನ್ನು ಬೆಳೆಸುವುದರ ಮೂಲಕವೂ ಅನ್ಯ ಜಾತಿಯವರನ್ನು ತಮ್ಮ ಜಾತಿಗೆ ಸೇರಿಸಿಕೊಳ್ಳುತ್ತಿದ್ದರು ಎನ್ನುವುದಕ್ಕೆ ಪಾದ್ರಿ ಜೀವರತ್ನಯ್ಯನ ಮಗಳ ಮತ್ತು ದೇವಯ್ಯಗೌಡರ ಪ್ರಣಯ ವ್ಯವಹಾರ ದೇಹ ಸಂಬಂಧದವರೆಗೂ ಮುಂದುವರಿದಿತ್ತು ಎನ್ನುವುದೇ ಸಾಕ್ಷಿ"[140] ದೇವಯ್ಯ ಗೌಡ ತನ್ನ ಹೆಂಡತಿ ಕ್ರೈಸ್ತಳಾಗಲು ಒಪ್ಪುವುದಿಲ್ಲ ಆದ್ದರಿಂದ

ನಾನು ಹೇಗೆ ಕ್ರೈಸ್ತನಾಗಲಿ? ಎಂದು ಹೇಳಿದ್ದಕ್ಕೆ ಜೀವರತ್ನಯ್ಯ, ಕ್ರೈಸ್ತಮತ ಇಬ್ಬರು ಹೆಂಡಿರನ್ನು ಆಗಲು ಎಂದಿಗೂ ಸಮ್ಮತಿಸುವುದಿಲ್ಲ, ಆದರೆ ಮೊದಲ ಹೆಂಡತಿಯನ್ನು ಕಾನೂನು ಬದ್ದವಾಗಿ ಡೈವೋರ್ಸ್ ಮಾಡಬಹುದು" ಎಂದು ಸೂಚಿಸಿದ್ದನು"[141] ಮತಾಂತರಗೊಳಿಸುವುದು ಎಷ್ಟು ಕ್ರೂರವಾಗಿತ್ತು, ದೇಸಿಯ ಸಂಬಂಧಗಳನ್ನು ಅದರಲ್ಲೂ ವೈವಾಹಿಕ ಬದುಕನ್ನು ಅಪವಿತ್ರಗೊಳಿಸಿ ಕೊನೆಗೆ ನಾಶಮಾಡುವ ಮಟ್ಟಕ್ಕೆ ಮುಂದುವರಿದಿತ್ತು ಎನ್ನುವುದನ್ನು ಸೂಚಿಸುತ್ತದೆ. ಇದೇ ರೀತಿಯ ಒಡಕನ್ನು ಬೆಟ್ಟಳ್ಳಿಯ ಹೊಲೆಯರ ಸೇಸಿಯ ಮನೆಯಲ್ಲೂ ಕಾಣಬಹುದು. ಸೇಸಿ ತನ್ನ ಮಗಳು ತಿಮ್ಮಿಯನ್ನು, ಪಾದ್ರಿ ಜೊತೆಗೆ ಗುರುತಿಸಿಕೊಂಡು ಕ್ರೈಸ್ತ ಮತಕ್ಕೆ ಸೇರಿರುವ ಬಚ್ಚನಿಗೆ ಮದುವೆ ಮಾಡಿ ಕೊಡಲು ಹಿಂಜರಿಯುತ್ತಾಳೆ; "ಜಾತಿ ಕೆಟ್ಟೋವನಿಗೆ ಕೊಡಾಕೆ ಬದಲಾಗಿ ಬಾವಿಗೆ ಹಾಕಾದು ಲೇಸು",[142] ಎನ್ನುವಾಗ ಆಕೆಯ ಸಂಕಟ, ನೋವಿಗೆ ಕಾರಣ ಮತಾಂತರವೆನ್ನುವುದು ತಿಳಿಯುತ್ತದೆ. ಹೀಗೆ ಮತಾಂತರ ಮಲೆನಾಡಿನ ದೇಸಿ ಬದುಕಿನಲ್ಲಿದ್ದ ಸಾಮಾಜಿಕ, ಧಾರ್ಮಿಕ ಕೌಟುಂಬಿಕ ಸಾಮರಸ್ಯವನ್ನು, ಅನ್ಯೋನ್ಯ ಸಂಬಂಧಗಳನ್ನು ನಾಶಮಾಡುವುದನ್ನು ಕಾಣುತ್ತೇವೆ.

ಮತಾಂತರ ಜಾಗತೀಕರಣದ ಭಾಗವಾಗಿತ್ತು ಏಕೆಂದರೆ ಅದರ ಹಿಂದೆ ವ್ಯಾಪಾರೀ ಮನೋಭಾವನೆ ಕೆಲಸ ಮಾಡುತ್ತಿತ್ತು ಎನ್ನುವುದು ಅರಿವಿಗೆ ಬರುತ್ತದೆ: "ಇಂಡಿಯಾದಲ್ಲಿ ಬ್ರಿಟಿಷ್ ಸರಕಾರವು ಪ್ರೊಟೆಸ್ಟೆಂಟ್ ಮಿಷನರಿಗಳಿಗೆ ನೇಟಿವ್ ಜನರನ್ನು ಮತಾಂತರಗೊಳಿಸುವುದಕ್ಕೆ ಸರ್ವಾಧಿಕಾರವನ್ನೂ, ಸರ್ವಸೌಲಭ್ಯಗಳನ್ನು ಕೊಡುತ್ತಾ ಇದೆ ಮೈಸೂರು ಸಂಸ್ಥಾನವು ನೇಟಿವ್ ಸಂಸ್ಥಾನವಾದರೂ ಅದರ ರಾಜನು ಸಂಪೂರ್ಣವಾಗಿ ಬ್ರಿಟಿಷರ ಅಡಿಯಾಳು."[143] ಬ್ರಿಟಿಷರ ವಸಾಹತು ಆಳ್ವಿಕೆ ಮತ್ತು ಸಾಮ್ರಾಜ್ಯಶಾಹಿ ಧೋರಣೆ ಮತಾಂತರಕ್ಕೆ ಪ್ರೋತ್ಸಾಹ ನೀಡುವುದು ಸಹಜವಾಗಿತ್ತು. ಮತಪ್ರಚಾರಕರಿಗೆ ಸಿಗುತ್ತಿದ್ದ ಸವಲತ್ತುಗಳು ಬೇರೆಯವರನ್ನು ಮತಾಂತರಗೊಳಿಸಲು ಪ್ರೇರಣೆಯಾಗಿತ್ತು. "ಕ್ರೈಸ್ತಮತ ಪ್ರಚಾರಕರು ಬ್ರಿಟಿಷ್ ಸರ್ಕಾರದ ರಾಜಕೀಯ ಬಲ ಮತ್ತು ಪ್ರತಿಷ್ಠೆ ಮತ್ತು ಸೌಕರ್ಯ ಸೌಲಭ್ಯಗಳನ್ನು ಪಡೆದು, ವಿದ್ಯಾಭ್ಯಾಸ ಮತ್ತು ವೈದ್ಯಕೀಯ ನೆರವೀಯುವ ಬಲೆಯೊಡ್ಡಿ ಅರಿಯದ ಅಜ್ಞಾನಿಗಳನ್ನು ತಮ್ಮ ಜಾತಿಗೆ ಸೇರಿಸಿಕೊಂಡು, ತಮ್ಮ ಸಂಖ್ಯಾ ಪ್ರಮಾಣವನ್ನು ಹೆಚ್ಚಿಸಿಕೊಳ್ಳುವ ವ್ಯಾಪಾರೀ ಉದ್ಯಮದಲ್ಲಿದ್ದಾರೆ"[144] ನಿಜವಾದ ಧಾರ್ಮಿಕ ಮನೋಭಾವನೆಯಾಗಲೀ ಮಾನವೀಯ, ನೈತಿಕ ನೆಲೆಗಟ್ಟಾಗಲಿ ಮತಾಂತರದ ಹಿಂದೆ ಇರದೆ ಕೇವಲ ವ್ಯಾಪಾರಿ ಧೋರಣೆಯು ಇದ್ದುದು ಜಾಗತೀಕರಣದ ಮೂಲ ಕಾರಣವಾಗಿತ್ತು ಎನ್ನಬಹುದು.

ಜಾಗತೀಕರಣದ ಮತ್ತೊಂದು ವಿಶೇಷ ಲಕ್ಷಣವೆಂದರೆ ಜಾಹೀರಾತು ನೀಡುವುದು. ಈವತ್ತು ಜಾಹೀರಾತು ಆಧುನಿಕ ಬದುಕನ್ನು ಆವರಿಸಿಕೊಂಡಿದೆ. ಪ್ರತಿಯೊಂದು ಸರಕು-ಸೇವೆಗಳನ್ನು ಪ್ರಪಂಚದ ಮೂಲೆ ಮೂಲೆಗಳಿಗೂ ಪರಿಚಯಸುತ್ತಿರುವುದು ಜಾಹೀರಾತು ಎನ್ನುವುದನ್ನು ಸ್ಪಷ್ಟವಾಗಿ ಹೇಳಬಹುದು. ಪತ್ರಿಕೆಗಳು ಆಗ ತಾನೆ ಮಲೆನಾಡಿನ ಸೀಮೆಗೆ ಆಗೊಮ್ಮೆ ಈಗೊಮ್ಮೆ ರೈಲು ಮತ್ತು ಮೋಟಾರುಗಳ ಮೂಲಕ ಬರುತ್ತಿದ್ದವು. ಆದರೆ ಜಾಹೀರಾತಿನ ಪ್ರಭಾವ ದೇಸಿ ಬದುಕಿಗೆ ಇನ್ನೂ ಆಗಿರಲಿಲ್ಲ. ಹಾರ್ಡಿಯವರ ವೆಸೆಕ್ಸ್‌ನ ಗ್ರಾಮೀಣ ಪ್ರದೇಶಕ್ಕೆ ಜಾಹೀರಾತಿನ ಪರಿಚಯ ಹತ್ತೊಂಬತ್ತನೆಯ ಶತಮಾನದಲ್ಲೇ ಆಗಿತ್ತು ಎನ್ನುವುದಕ್ಕೆ ಉಲ್ಲೇಖವಿದೆ. "ಒಬ್ಬ ಶ್ರೀಮಂತ ವಿಧವೆಗೆ ಮನೆಯಲ್ಲಿರುವಂತಹ ಒಬ್ಬ ತರುಣಿ ಬೇಕಾಗಿದೆ, ಆ ವಿಧವೆಗೆ ಜೊತೆಯಾಗುವಂತ, ಹಾಡುಗಾರ್ತಿ ತರುಣಿ ಬೇಕೆಂದು ಪತ್ರಿಕೆಗಳಲ್ಲಿ ಜಾಹೀರಾತು ನೀಡಲಾಗುತಿತ್ತು"[145] ಉದ್ಯೋಗದ ಮಾಹಿತಿಗಳು ವಾಣಿಜ್ಯ ಪತ್ರಿಕೆಗಳಲ್ಲಿ ಪ್ರಕಟಿಸಲಾಗುತ್ತಿದ್ದರೂ, ಕೆಲಸಕ್ಕೆ ನೇಮಿಸಿಕೊಳ್ಳುವಾಗ ವಾರ್ಷಿಕ ಕರಾರಿನ ಮೇಲೆ ಕ್ಯಾಂಡಲ್‌ಮಾಸ್‌ನಲ್ಲಿ ಒಪ್ಪಂದ ಮಾಡಿಕೊಂಡು 'ಲೇಡಿ ಡೇ'ವರೆಗೆ ನಿಗದಿಪಡಿಸುತ್ತಿದ್ದುದು ಜಾಗತೀಕರಣದ ವ್ಯವಹಾರ ಭಾಗವೆನ್ನಬಹುದು.

ಒಟ್ಟಾರೆಯಾಗಿ ಹೇಳಬೇಕೆಂದರೆ ದೇಸಿಯ ಸಂಸ್ಕೃತಿಯ ಬದುಕಿನ ಲಕ್ಷಣಗಳಾಗಿದ್ದ ಸಾಂಪ್ರದಾಯಿಕ ಶಿಕ್ಷಣ, ದೇಸಿ ಕೃಷಿ ಪದ್ಧತಿ, ಸಂಪರ್ಕ-ಸಾಧನಗಳು, ಸಾಂಪ್ರದಾಯಿಕ ಕಸುಬುಗಳು ಮುಂತಾದ ದೇಸಿಯ ಕ್ಷೇತ್ರಗಳು ಜಾಗತೀಕರಣದ ಪ್ರಭಾವಕ್ಕೆ ಸಿಲುಕಿ ಪಲ್ಲಟಗೊಳ್ಳುವುದನ್ನು ಮಲೆನಾಡಿನ ಪ್ರದೇಶದಲ್ಲಿ ಮತ್ತು ಹಾರ್ಡಿಯವರ ವೆಸೆಕ್ಸ್‌ನಲ್ಲಿ ಕಾಣುತ್ತೇವೆ. ಹಾಗೆಯೇ ದೇಸಿಯ ಸಾಮಾಜಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಬದುಕೂ ಸಹ ಜಾಗತೀಕರಣದಿಂದ ಬದಲಾವಣೆಗೊಳ್ಳುತ್ತಿದ್ದುದು ದಾಖಲಾಗಿದೆ. ಯಾಂತ್ರಿಕ ಕೃಷಿ ಪರಿಕರಗಳು ರೈಲು, ಮೋಟಾರು, ಪೋಸ್ಟಾಫೀಸು, ಬ್ಯಾಂಕು, ಹೋಟೇಲು, ಆಸ್ಪತ್ರೆ ಮುಂತಾದವುಗಳಿಂದ ದೇಸಿಯ ಬದುಕು ಜಾಗತೀಕರಣಕ್ಕೆ ಶರಣಾಗುವುದನ್ನು ಕಾಣಬಹುದು.

ಕೊನೆ ಟಿಪ್ಪಣಿ

1. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ- 8
2. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ- 232
3. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ- 473
4. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ- 334
5. ಅದೇ, ಪುಟ- 367
6. ಅದೇ, ಪುಟ- 367
7. Thomas Hardy: Tess of the D' Urbervilles, Page- 15
8. Ibid, Page-302
9. Ibid, Page- 108
10. Ibid, Page- 102
11. Ibid, Page- 345
12. Criticla Analyses of Tess of the D Urbervilles, Page- 142
13. ಸೂರ್ಯನಾಥ ಕಾಮತ್: ಕೃಷಿಯ ಇತಿಹಾಸ, ಒಕ್ಕಲುತನ ಮತ್ತು ಒಕ್ಕಲಿಗರು, ಪುಟ- 04
14. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ- 33
15. ಅದೇ, ಪುಟ- 35
16. ಕುವೆಂಪು ಕಾನೂರು ಹೆಗ್ಗಡಿತಿ, ಪುಟ- 229
17. ಅದೇ, ಪುಟ- 475
18. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ- 479
19. Thomas Hardy: Tess of the D' Urbervilles, Page- 69
20. Ibid, Page- 179
21. ಗುರುಪಾದ ಮರಿಗುದ್ದಿ, ಕುವೆಂಪು ಕಾದಂಬರಿಗಳ ಸಾಂಸ್ಕೃತಿಕ ಅಧ್ಯಯನ, ಪುಟ- 51
22. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ- 96
23. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ- 429
24. ಅದೇ, ಪುಟ -04
25. Thomas Hardy: Tess of the D' Urbervilles, Page- 123
26. Ibid, Page - 148
27. Thomas Hardy: The Return of the Native, Page- 317
28. Thomas Hardy: Tess of the D' Urbervilles, Page- 44
29. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ- 356
30. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ- 53

31. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ– 381
32. ಅದೇ, ಪುಟ– 06
33. ಅದೇ, ಪುಟ– 128
34. ಅದೇ, ಪುಟ– 128
35. ಅದೇ, ಪುಟ– 611
36. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ– 138
37. ಅದೇ, ಪುಟ– 140
38. ಅದೇ, ಪುಟ– 157
39. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ– 57
40. ಅದೇ, ಪುಟ– 257
41. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ– 258
42. ಅದೇ, ಪುಟ– 260
43. ಅಂಬಳಿಕೆ ಹಿರಿಯಣ್ಣ: ಮಲೆನಾಡ ಜನಪದ ಸಂಪ್ರದಾಯಗಳು, ಪುಟ– 100
44. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ– 268
45. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ– 430
46. ಗುರುಪಾದ ಮರಿಗುದ್ದಿ: ಬೇಟೆ ಮಲೆನಾಡ ಬದುಕಿನ ವೈ ಲಕ್ಷಣ, ಪುಟ– 85
47. ಕುವೆಂಪು: ಕಾನೂರು ಹೆಗ್ಗಡತಿ, ಪುಟ– 40
48. ಅದೇ, ಪುಟ– 132
49. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ– 364
50. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ– 419
51. ಕುವೆಂಪು: ಕಾನೂರು ಹೆಗ್ಗಡತಿ, ಪುಟ– 59
52. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ– 126
53. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ– 23
54. ಅದೇ, ಪುಟ– 209
55. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ– 04
56. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ– 333
57. ಅದೇ, ಪುಟ– 90
58. ಗುರುಪಾದ ಮರಿಗುದ್ದಿ: ಬೇಟೆ ಮಲೆನಾಡ ಬದುಕಿನ ವೈಲಕ್ಷಣ್ಯ, ಪುಟ– 87
59. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ– 210

60. ಅದೇ, ಪುಟ– 535

61. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ– 634

62. ಅದೇ, ಪುಟ– 142

63. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ– 281

64. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ– 79

65. Thomas Hardy: Tess of the D' Urbervilles, Page- 296

66. Ibid, Page - 354

67. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ– ಅರಿಕೆ

68. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ– 9

69. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ– 208

70. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ– 597

71. Thomas Hardy: Tess of the D' Urbervilles, Page- 115

72. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ– 33

73. ಅದೇ, ಪುಟ– 47

74. ಅದೇ, ಪುಟ– 47

75. ಅದೇ, ಪುಟ– 316

76. ಅದೇ, ಪುಟ– 18

77. Thomas Hardy: Tess of the D' Urbervilles, Page- 34

78. Thomas Hardy: The Return of the Native, Page- 117

79. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ– 269

80. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ– 34

81. Thomas Hardy: Tess of the D' Urbervilles, Page- 64

82. Thomas Hardty: The Return of the Native, Page- 133

83. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ– 506

84. Thomas Hardy: The Return of the Native, Page- 228

85. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ– 434

86. ಅದೇ, ಪುಟ– 233

87. Thomas Hardy: The Return of the Native, Page- 282

88. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ– 318

89. ಅದೇ, ಪುಟ– 203

90. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ– 03

91. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ- 247
92. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ- 200
93. ಅದೇ, ಪುಟ- 470
94. ಅದೇ, ಪುಟ- 30
95. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ- 435
96. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ- 30
97. ಅದೇ, ಪುಟ- 103
98. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ- 118
99. ಅದೇ, ಪುಟ- 116
100. Thomas Hardy: The Return of the Native, Page- 190
101. Ibid, Page- 112
102. Ibid, Page- 14
103. Ibid, Page- 318
104. Thomas Hardy: Tess of the D' Urbervilles, Page- 34
105. Ibid, Page - 76
106. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ- 67
107. ಅದೇ, ಪುಟ- 67
108. Thomas Hardy: The Return of the Native, Page- 90
109. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ- 124
110. ಅದೇ, ಪುಟ- 70
111. ಅದೇ, ಪುಟ- 279
112. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ- 284
113. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ- 279
114. Thomas Hardy: Tess of the D' Urbervilles, Page- 34
115. Thomas Hardy: Tess of the D' Urbervilles, Introduction, Page -10
116. Ibid, Page- 206
117. Ibid, Page- 108
118. Ibid, Page- 345
119. Ibid, Page- 379
120. Ibid, Pag - 372
121. Ibid, Page- 372
122. Ibid, Page- 133
123. Ibid, Page- 283

124. Ibid, Page- 56
125. Ibid, Page- 124
126. Ibid, Page- 204
127. Thomas Hardy: The Return of the Native, Page- 64
128. Ibid, Page- 327
129. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ– 370
130. ಅದೇ, ಪುಟ– 453
131. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ– 587
132. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ– 197
133. ಅದೇ, ಪುಟ– 156
134. ಅದೇ, ಪುಟ– 421
135. ಅದೇ, ಪುಟ– 199
136. Thomas Hardy: Tess of the D' Urbervilles, Page- 327
137. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ– 202
138. ಅದೇ, ಪುಟ– 205
139. ಅದೇ, ಪುಟ– 644
140. ಅದೇ, ಪುಟ– 164
141. ಅದೇ, ಪುಟ– 648
142. ಅದೇ, ಪುಟ– 164
143. ಅದೇ, ಪುಟ– 648
144. ಅದೇ, ಪುಟ– 649
145. Thomas Hardy: The Return of the Native, Page- 77

ಅಧ್ಯಾಯ – 3

ಕುವೆಂಪು ಮತ್ತು ಹಾರ್ಡಿಯವರ ಕಾದಂಬರಿಗಳಲ್ಲಿ ಚಿತ್ರಿತವಾಗಿರುವ ಭೌಗೋಳಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸರ

3.1 ಭೌಗೋಳಿಕ ಪರಿಸರ

3.2 ಪ್ರಕೃತಿ ಮತ್ತು ಪಾತ್ರಗಳು

3.3 ಪ್ರಕೃತಿ ಮತ್ತು ಮಾನವ ಸಂಬಂಧಗಳು

3.4 ಸಾಮಾಜಿಕ ಪರಿಸರ

3.5 ಕುವೆಂಪು ಕಾದಂಬರಿಗಳಲ್ಲಿ ಜಾತಿ, ವರ್ಗವ್ಯವಸ್ಥೆ ಹಾಗೂ ಮಡಿ–ಮೈಲಿಗೆ

3.6 ಹಾರ್ಡಿಯವರ ಕಾದಂಬರಿಗಳಲ್ಲಿ ವರ್ಗವ್ಯವಸ್ಥೆ, ಸಾಮಾಜಿಕ ಪ್ರತಿಷ್ಠೆ ಮತ್ತು ತಾರತಮ್ಯ

3.7 ಸಾಂಸ್ಕೃತಿಕ ಪರಿಸರ

ಅಧ್ಯಾಯ-3

ಕುವೆಂಪು ಮತ್ತು ಥಾಮಸ್ ಹಾರ್ಡಿಯವರ ಕಾದಂಬರಿಗಳಲ್ಲಿ ಚಿತ್ರಿತವಾಗಿರುವ, ಭೌಗೋಳಿಕ, ಸಾಮಾಜಿಕ, ಮತ್ತು ಸಾಂಸ್ಕೃತಿಕ ಪರಿಸರ.

ದೇಸಿಯತೆಯನ್ನು ನಿರೂಪಿಸುವ ಅಂಶಗಳಲ್ಲಿ ಭೌಗೋಳಿಕ ಪರಿಸರವು ಬಹುಮುಖ್ಯವಾಗಿದೆ. ಒಂದು ಸಮುದಾಯದ ಜೀವನ, ಸಂಸ್ಕೃತಿ, ಸಾಹಿತ್ಯ ಮತ್ತು ಪರಂಪರೆಯ ಮೇಲೆ ಭೌಗೋಳಿಕ ಪರಿಸರದ ಪ್ರಭಾವವನ್ನು ಕಾಣುತ್ತೇವೆ. ಭೌಗೋಳಿಕ ಪರಿಸರದ ಸ್ಪಷ್ಟ ಕಲ್ಪನೆ ಪ್ರಾದೇಶಿಕತೆಗೆ ತಳಹದಿ ಹಾಕಿದಂತೆ. ಇದರ ಮೂಲಕ ದೇಸಿಯತೆಯ ಚಿತ್ರಣವನ್ನು ಕಾಣಬಹುದು. ದೇಸಿಯತೆಯನ್ನು ನಿರ್ಧರಿಸುವಲ್ಲಿ ಆಯಾ ಪ್ರದೇಶದ ಜನ ಜೀವನ, ವೈಶಿಷ್ಟ್ಯಗಳು ಆ ಜನರ ಸಮಸ್ಯೆಗಳು, ಚಟುವಟಿಕೆಗಳು ಮುಖ್ಯವಾದರೆ ಅವರ ಸುತ್ತಲೂ ಹಬ್ಬಿನಿಂತು, ಅವರ ಕಾರ್ಯ ವಿಧಾನಗಳನ್ನು ಮತ್ತು ಆಗು ಹೋಗುಗಳನ್ನು ನಿರ್ಧರಿಸುವಲ್ಲಿ ಭೌತಪ್ರಕೃತಿಯ ಪಾತ್ರ ಮಹತ್ತರವಾಗಿರುತ್ತದೆ.

ಭೌಗೋಳಿಕ ಪರಿಸರವೆಂದರೆ ನಮ್ಮ ಸುತ್ತಲಿನ ಬದುಕಿಗೆ, ಅಸ್ತಿತ್ವಕ್ಕೆ ಆಸರೆಯಾಗಿರುವ ವಾಯು, ನೆಲ, ಜಲ, ಕಾಡು, ಕಣಿವೆ, ನದಿ, ಪ್ರಾಣಿ ಮತ್ತು ಪಕ್ಷಿಸಂಕುಲಗಳೆನ್ನಬಹುದು. ಮಾನವನ ಭೌತಿಕ, ಮಾನಸಿಕ, ಭಾವನಾತ್ಮಕ ಮತ್ತು ಸಾಮಾಜಿಕ ಬದುಕಿಗೆ ಹಾಗೂ ಅವನ ವ್ಯಕ್ತಿತ್ವದ ವಿಕಾಸಕ್ಕೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಪ್ರಭಾವಬೀರುವುದು ಭೌಗೋಳಿಕ ಪರಿಸರ ಎಂದರೆ ತಪ್ಪಾಗಲಾರದು. ಮನುಕುಲದ ಉಗಮವಾದಾಗಿನಿಂದಲೂ ಮಾನವನ ಭೌತಿಕ, ಬೌದ್ಧಿಕ ವಿಕಾಸದಲ್ಲಿ, ಅವನ ಬದುಕಿನ ಜಂಜಾಟದಲ್ಲಿ ಭೌಗೋಳಿಕ ಸನ್ನಿವೇಶಗಳು ಪ್ರಭಾವ ಬೀರಿವೆ.

ಡಾ॥ ರಾಜೇಂದ್ರ ಚೆನ್ನಿಯವರ ಪ್ರಕಾರ "ದೇಶಿವಾದದ ಚರ್ಚೆಯಲ್ಲಿ ಪ್ರಾದೇಶಿಕ ಚೌಕಟ್ಟು ವಿಶಿಷ್ಟವಾದ ಸಂಸ್ಕೃತಿಯೊಂದನ್ನು ಹೊಂದಿರುವ ಭಾಷಾ ಸಮುದಾಯವೊಂದರ ವಾಸ್ತವಿಕ ಜೀವನದ ಹೊರ ಆವರಣವಾಗಿ ಮಾತ್ರ ಮುಖ್ಯವಾಗಿರುತ್ತದೆ. ಅಲ್ಲದೇ ಭಾಷಾ ಸಮುದಾಯ ಒಂದು ತನ್ನದೆ ಆದ ಚಿಂತಿಸುವ ಮತ್ತು ಭಾವಿಸುವ, ಒಟ್ಟಿನಲ್ಲಿ ಬದುಕನ್ನು ಅರ್ಥಮಾಡಿಕೊಳ್ಳುವ ಬಗೆಗಳ ಮೇಲೆ ಪರೋಕ್ಷವಾಗಿ ಭೌಗೋಳಿಕ ಸತ್ಯಗಳು ಪ್ರಭಾವ ಬೀರುವುದರಿಂದ ಅವು ಮುಖ್ಯವಾಗಿವೆ".[1] ಯಾವುದೇ ಒಂದು ಸೃಜನಶೀಲ ಕೃತಿಯಲ್ಲಿ ಭೌಗೋಳಿಕ ಅಂಶಗಳು ಅಲ್ಲಿನ ಜನ ಸಮುದಾಯದ ಸಂಸ್ಕೃತಿ ಅಚಾರ ವಿಚಾರ ಸಂಬಂಧಗಳ ಮೇಲೆ ಪ್ರಭಾವ ಹೊಂದಿರುತ್ತವೆ. ಈ ಅಂಶಗಳೇ ದೇಸಿಯತೆಯನ್ನು ಪೋಷಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

3.1 ಭೌಗೋಳಿಕ ಪರಿಸರ

ಕುವೆಂಪುರವರು ತಮ್ಮ ಅರಿಕೆಯಲ್ಲಿ ಹೀಗೆ ಹೇಳುತ್ತಾರೆ "ಇಲ್ಲಿ (ಕಾನೂರು ಹೆಗ್ಗಡತಿ) ಚಿತ್ರಿತವಾಗಿರುವುದು ಮಲೆನಾಡಿನ ಬಾಳಿನ ಕಡಲಿನಲ್ಲಿ ಒಂದು ಹನಿ. ಅನೇಕರಿಗೆ ಅದು ಸಂಪೂರ್ಣವಾಗಿ ಹೊಸ ಪ್ರಪಂಚವಾಗಿರುತ್ತದೆ. ಹೊಸ ಊರಿಗೆ ಹೋಗುವವರು ಅಲ್ಲಿಯ ಜನ ಮತ್ತು ಜೀವನದ ವಿಚಾರವಾಗಿ ತಟಕ್ಕನೆ ಯಾವ ನಿರ್ಣಯಗಳನ್ನು ಮಾಡಿಕೊಳ್ಳದೆ ಸ್ವಲ್ಪಕಾಲ ತಾಳ್ಮೆಯಿಂದಿದ್ದು ಕ್ರಮೇಣ ಬಳಕೆಯಿಂದ ಜನರನ್ನು ಪರಿಚಯ ಮಾಡಿಕೊಳ್ಳುವಂತೆ ಈ ಕಾದಂಬರಿಯ ಅರಣ್ಯಜಗತ್ತನ್ನು ಪ್ರವೇಶಿಸುವ ವಾಚಕರು ವರ್ತಿಸಬೇಕಾಗುತ್ತದೆ".[2] ಸಹಜವಾಗಿಯೇ ಅವರ ಕೃತಿಗಳಲ್ಲಿ ದಟ್ಟವಾಗಿ ಬೆಳೆದ ತೆರೆ ತೆರೆಯಾಗಿ ಹಬ್ಬಿದ್ದ ಸಹ್ಯಾದ್ರಿ ಶ್ರೇಣಿಗಳಿಂದ ರಚಿತವಾದ ಮಲೆನಾಡಿನ ಭೌಗೋಳಿಕ ಪ್ರದೇಶ, ಆ ಪ್ರದೇಶದ ಜನ ಜೀವನ, ಸಾಮಾಜಿಕ ಜೀವನ, ಸಂಸ್ಕೃತಿ ಮುಂತಾದ ಜೀವನ ಸಂಬಂಧಿ ವಿಷಯಗಳು ಸ್ವಾಭಾವಿಕವಾಗಿ ಮೂಡಿಬಂದಿರುವುದನ್ನು ಕಾಣುತ್ತೇವೆ. ಹಾಗೆಯೇ ಮಲೆನಾಡಿನ ಭೌಗೋಳಿಕ ಪರಿಸರ ಅಲ್ಲಿನ ದೇಸಿಯ ಬದುಕಿನ ಕನ್ನಡಿಯಾಗಿ ಅವರ ಕಾದಂಬರಿಗಳಲ್ಲಿ ಪ್ರತಿಬಿಂಬಿತವಾಗಿರುವುದನ್ನು ಕಾಣಬಹುದು.

ಥಾಮಸ್ ಹಾರ್ಡಿಯವರ ಕಾದಂಬರಿಗಳಲ್ಲಿ ಬಿಂಬಿತವಾಗಿರುವ ವೆಸೆಕ್ಸ್ ಜಿಲ್ಲೆಯ ಎಗ್ಡನ್ ಹೀತ್‌ನ ಭೌಗೋಳಿಕ ಪರಿಸರ ಅಲ್ಲಿಯ ಜನರ ನೈಜವಾದ ಬದುಕನ್ನು ನಿರ್ದೇಶಿಸುತ್ತಿತ್ತು. ಅಲ್ಲಿಯ ಭೌಗೋಳಿಕ ಪರಿಸರ ನಾಡಿ–ಮಿಡಿತವಾಗಿ ಗ್ರಾಮೀಣರ ಬದುಕಿನ ಭಾಗವಾಗಿ, ಅವರ ಬದುಕಿನ ನಾಟಕದ ಪಾತ್ರಧಾರಿಯಾಗಿ ಅವರ ಬದುಕಿನಲ್ಲಿ ಬೆರೆತು ಹೋಗಿತ್ತು. ಎಗ್ಡನ್ನಿನ ದೇಸಿಯ ಬದುಕಿಗೆ ಅಲ್ಲಿಯ ಜನರೇ ಹಿಮ್ಮೇಳದವರು, ಎಗ್ಡನ್ನಿನ ಮುಗ್ಧ ಜನರ ಜೀವನ ವಿಧಾನ, ಅವರ ಆಲೋಚನಾ ಲಹರಿ, ಹಬ್ಬ ಹರಿದಿನಗಳು, ನೋವು ನಲಿವುಗಳು, ಆಚಾರ ವಿಚಾರಗಳು, ಆ ಮಣ್ಣಿನ ಉತ್ಪತ್ತಿಯಾಗಿ ಮತ್ತು ಕುರುಚಲು ಗಿಡಗಳ ಹಾಗೂ ಹಳ್ಳಕೊಳ್ಳಗಳ ಭಾಗವಾಗಿ ಹೊರಹೊಮ್ಮಿದೆ.[3] ಎಗ್ಡನ್ ಹೀತ್‌ನ ಭೌಗೋಳಿಕ ಪರಿಸರದ ವಿವರಣೆಯನ್ನು ಗಮನಿಸಿದರೆ ಗತಕಾಲದಿಂದಲೂ ಯಾವ ಬದಲಾವಣೆಯೂ ಇಲ್ಲದೆ ಜೀವಸಂಕುಲ ಬೆಳೆದು ಬಂದ ರೀತಿಯನ್ನು ಹಾಗೂ ಅದು 19ನೇ ಶತಮಾನದವರೆಗೂ ಉಳಿದು ಕೊಂಡಿರುವ ಬಗೆಯನ್ನು ಕಾಣುತ್ತೇವೆ. ಎಗ್ಡನ್ನಿನಲ್ಲಿ ಕಾಲವೆನ್ನುವುದು ನಿಶ್ಚಲವಾಗಿದ್ದು ಅನಂತವಾದದ್ದು ಮತ್ತು ನಿಂತಲ್ಲೆ ನಿಂತಿರುವಂತಹದ್ದು, ನಿಮಿಷ, ಗಂಟೆಗಳಿಂದ ಅಳೆಯಲಾಗದ್ದು ಆದರೆ ಭೌಗೋಳಿಕವಾಗಿ ವಿಶಾಲವಾಗಿರುವಂತಹದ್ದು. 'ದಿ ರಿಟರ್ನ್ ಆಫ್ ದಿ ನೇಟಿವ್' ಕಾದಂಬರಿಯ ನಾಯಕ ಕ್ಲಿಮ್ ಅಲ್ಲಿನ ವಿಶಾಲವಾಗಿ ಹಬ್ಬಿರುವ ರೆಕ್ಕೆಯಂತಹ ಎಲೆಗಳುಳ್ಳ ಸಸ್ಯವರ್ಗದ ಕಣಿವೆಯನ್ನು, ಎಗ್ಡನ್ನಿನ

ಬೆಟ್ಟಗುಡ್ಡಗಳಿಂದಾವೃತವಾದ ದೃಷ್ಟಿಪಥ ಪ್ರದೇಶದ ಗತಕಾಲದಿಂದ ಮಧ್ಯಯುಗದ ಮೂಲಕ ರೋಮನ್ನರ ಯುಗದಿಂದ ಇಂದಿನವರೆಗೆ ಉಳಿದು ಬಂದಿರುವ ಆ ಭೂಪ್ರದೇಶದ ಗುಣಗಾನ ಮಾಡುತ್ತಾನೆ. ಹಾಗೆಯೇ ಅವನ ತಾಯಿ ಶ್ರೀಮತಿ ಯೋಬ್ರೈಟ್ "ಪೀಳಿಗೆಯಿಂದ ಪೀಳಿಗೆಗೆ ಇರುವೆಗಳ ಸಾಲು ಆ ಎಗ್ಡನ್ನಿನ ಭೂಪ್ರದೇಶದಲ್ಲಿ ಬೆಳೆದುಕೊಂಡು ಬಂದಿರುವುದನ್ನು, ಆ ಮಣ್ಣಿನೊಡನೆ ಜೀವ ಸಂಕುಲ ಬೆಸೆದುಕೊಂಡಿರುವುದನ್ನು ಕಾಣುತ್ತಾರೆ".[4] ಎಗ್ಡನ್ ಹೀತ್‌ನ ಮಣ್ಣಿನಲ್ಲಿ ವೈವಿಧ್ಯಮಯ ಜೀವಸಂಕುಲ ಸಸ್ಯ ವರ್ಗದ ಜೊತೆಗೆ ಮಾನವನ ಬದುಕಿನಲ್ಲಿ ಸಮಾನಾಂತರವಾಗಿ, ಸಾಮರಸದಿಂದ ಬೆರೆತಿರುವುದನ್ನು ಮನಗಾಣುತ್ತಾರೆ. ಜೊತೆಗೆ ಎಗ್ಡನ್ನಿನಲ್ಲಿ ವೈವಿಧ್ಯತೆಯಿಂದ ಕೂಡಿದ ಆ ಮಣ್ಣಿನಲ್ಲಿ ಭಾವೋದ್ದೀಪ್ತತೆಯ ಜೊತೆಗೆ ಇಂದ್ರಿಯೋತ್ತೇಜಕ ಗುಣವಿದೆ ಎಂದು ಹೇಳುತ್ತಾರೆ. ಅಲ್ಲಿನ ಕಪ್ಪಾದ, ಗಾಢವಾದ, ಅಗಾಧವಾದ ಮತ್ತು ಒರಟಾದ ಮಣ್ಣು ಪ್ರಾಚೀನಕಾಲದ ಗುಣಲಕ್ಷಣಗಳು, ಅಲ್ಲಿ ವಾಸಿಸುತ್ತಿರುವ ಜನರ ಬದುಕಿನಲ್ಲಿ ಹಾಸುಹೊಕ್ಕಾಗಿದೆ ಎಂದೆಲ್ಲಾ ಆಲೋಚಿಸುತ್ತಾರೆ. ಇಂತಹ ಭೌಗೋಳಿಕ ಲಕ್ಷಣಗಳನ್ನೊಳಗೊಂಡ ಮಣ್ಣಿನ ಸಂಬಂಧವನ್ನು ಬಯಸಿ ಕ್ಲಿಮ್ ಪ್ಯಾರಿಸ್ಸಿನಿಂದ ತನ್ನ ಹುಟ್ಟೂರಿಗೆ ಮರಳಿ ಬರುತ್ತಾನೆ, ತನ್ನ ಮತ್ತು ತನ್ನ ಹುಟ್ಟೂರಿನ ಮಣ್ಣಿನ ಸಂಬಂಧದ ದೂರವನ್ನು ಹೋಗಲಾಡಿಸುತ್ತಾನೆ. ತನ್ನನ್ನೇ ತಾನು ಆ ಮಣ್ಣಿಗೆ ಅರ್ಪಿಸಿಕೊಳ್ಳುತ್ತಾನೆ.[5]

'ದಿ ರಿಟರ್ನ್ ಆಫ್ ದಿ ನೇಟಿವ್' ಕಾದಂಬರಿಯ ಕ್ಲಿಮ್ ಯೋಬ್ರೈಟ್ ಪ್ಯಾರಿಸ್ಸಿನ ರತ್ನಪಡಿ ಅಂಗಡಿಯಲ್ಲಿ ಮ್ಯಾನೇಜರ್ ಪದವಿಯನ್ನು ತ್ಯಾಗಮಾಡಿ ಅಲ್ಲಿನ ಕೃತಕ, ಉಸಿರು ಕಟ್ಟಿಸುವ ನಗರದ ಬದುಕಿಗೆ ಬೆನ್ನು ತಿರುಗಿಸಿ ತನ್ನ ಹುಟ್ಟೂರಿನ ನಿಸರ್ಗದತ್ತವಾದ ನಿರ್ಮಲವಾದ ಬದುಕಿಗೆ ಮರಳುತ್ತಾನೆ. ಎಗ್ಡನ್ ಹೀತ್‌ನ ದೇಸಿಯ ಬದುಕಿನ ಹಿಮ್ಮೇಳದವರೆಂದರೆ ಅಲ್ಲಿನ ನಿವಾಸಿಗಳು, ಗ್ರಾಮೀಣರು ಮುಗ್ಧ ಜೀವಿಗಳು, ನಿಷ್ಕಲ್ಮಶ ಮನಸ್ಸಿನವರು ಮತ್ತು ಆ ಮಣ್ಣಿನೊಡನೆ ಸಾಮರಸ್ಯವಾದ ಬದುಕನ್ನು ಕಟ್ಟಿಕೊಂಡವರು. ಎಗ್ಡನ್ನಿನ ದೇಸಿಯ ಬದುಕನ್ನು ಅಲ್ಲಿಯ ಗಾಳಿಬೀಸುವುದರಲ್ಲಿಯೂ ಕಾಣಬಹುದು. ಗಾಳಿಯ ಏರಿಳಿತಗಳು, ಆ ಕಾಡು ಭೂಮಿಯ ಭಾಷೆ, ಧ್ವನಿಗಳ ವಿಲಕ್ಷಣತೆ ಅಲ್ಲಿಯ ಪರಿಸರದಲ್ಲಿತ್ತು. ಎಗ್ಡನ್ನಿನ ಸ್ಥಳೀಯರು ಪರಿಸರದ ವರ್ಣನೆಗೆ ತಕ್ಕಂತೆ ಲಯಬದ್ಧವಾದ ಬದುಕನ್ನು ಆಯ್ದುಕೊಂಡಿದ್ದರು ಆ ನೆಲದ ನಿಗೂಢತೆಯ ಬಗ್ಗೆ, ಅದರ ಶಕ್ತಿಯ ಬಗ್ಗೆ ಯಾವ ಪ್ರಶ್ನೆಯನ್ನು ಮಾಡದೆ ಆ ಮಣ್ಣಿನಲ್ಲಿ ಒಂದಾಗಿದ್ದರು. ಸಾಮಾಜಿಕ ಅಂತಸ್ತು, ಆಡಂಬರದ ಬದುಕಿನ ಬಗ್ಗೆ ಮೋಹಕ್ಕೊಳಗಾಗದೆ ನೈಜ ಬದುಕಿಗೆ ತಮ್ಮ ಜೀವನವನ್ನು ಮುಡುಪಾಗಿಸಿದ್ದರು. ಎಗ್ಡನ್ನಿನ ಭೌಗೋಳಿಕ ಪ್ರದೇಶದ ಗಿರಿವನಗಳಲ್ಲಿ ಕುರುಚಲು ಗಿಡಗಳ

ಮಧ್ಯದಲ್ಲಿ, ಕಪ್ಪು ಕಂದು ಬಣ್ಣದಿಂದ ಕೂಡಿದ ಮಣ್ಣಿನ ಭಾಗವಾಗುವ ಮೂಲಕ ಅಲ್ಲಿನ ಜನರು ದೇಸಿಯ ಬದುಕಿನ ವಕ್ತಾರರಾಗಿದ್ದರು ಎನ್ನಬಹುದು.

ಕುವೆಂಪುರವರ ಕಾದಂಬರಿಗಳಲ್ಲಿ ಚಿತ್ರಿತವಾಗಿರುವ ಭೌಗೋಳಿಕ ಪರಿಸರದ ಬಗ್ಗೆ ದೇ. ಜ. ಗೌ. ರವರು ಹೇಳುವ ಮಾತುಗಳು ಪ್ರಸ್ತುತವೆನಿಸುತ್ತವೆ: "ಮಲೆನಾಡೆಂದರೆ ಕರ್ನಾಟಕದ ಕಾಶ್ಮೀರ, ಪ್ರಕೃತಿಯ ಪರ್ಣ ಶಾಲೆ, ಅರಣ್ಯರಮಣೀಯ ವಿಲಾಸ ಕ್ಷೇತ್ರ, ದಿಗಂತದ ಮಹಾಸ್ವಪ್ನಗಳಂತೆ ಧೀರವಾಗಿ ಹಬ್ಬಿರುವ ಪರ್ವತ ಶ್ರೇಣಿಗಳು, ನಿಬಿಡ ನಿರಂತರ ತರುಚ್ಛಾಯಮಯವಾದ ಗಿರಿಶಿಖರಗಳಲ್ಲಿ ಆವಿರ್ಭವಿಸಿ ಅರೆ ಬಂಡೆಗಳ ವಕ್ರಪಥಗಳಲ್ಲಿ ಎಡೆಬಿಡದೆ ಪ್ರವಹಿಸುವ ಹೊಳೆತೊರೆಗಳು; ಗಿರಿಕಂದರಗಳಲ್ಲಿ ಕಂಗೊಳಿಸುವ ಅಡಕೆ ತೋಟಗಳು, ಬತ್ತದ ಗದ್ದೆಗಳು... ಪ್ರೇಮಲ ಸ್ವಭಾವದವರೂ ಶಾಂತಜೀವಿಗಳು, ಉದಾರಿಗಳು ಆಗಿರುವ ಸರಳ ಹೃದಯದ ಒಕ್ಕಲು ಮಕ್ಕಳು; ಇವೆಲ್ಲದವರ ಸಾನ್ನಿಧ್ಯದಿಂದ ಮಲೆನಾಡು ಅತ್ಯಂತ ರಮಣಿಯವೂ ಕಮನೀಯವೂ ಆಗಿದೆ".[6] ಮಲೆನಾಡಿನ ಭೌಗೋಳಿಕ ಪ್ರದೇಶದ ವರ್ಣನೆಯ ಮೂಲಕ ಅಲ್ಲಿನ ಜನಸಮುದಾಯದ ಬದುಕು ನಿಸರ್ಗದ ಭಾಗವಾಗಿ ಹೊರಹೊಮ್ಮಿ ನಿಸರ್ಗದ ಮಡಿಲಲ್ಲಿ ಸಮ್ಮಿಳಿತಗೊಂಡಿರುವುದನ್ನು ಕುವೆಂಪುರವರ ಕಾದಂಬರಿಗಳಲ್ಲಿ ಕಾಣಬಹುದು. ಅಲ್ಲಿನ ಸೌಂದರ್ಯ ಒಂದೊಂದು ಋತುವಿನಲ್ಲಿ ಒಂದೊಂದು ತೆರನಾಗಿ ರೂಪುಗೊಂಡಿದೆ; ಭಾದ್ರಪದದ ಉದಯಾಸ್ತವೊಂದು ತೆರನಾದರೆ, ಫಾಲ್ಗುಣದ ಉದಯಾಸ್ತ ಮತ್ತೊಂದು ತೆರ; ಚೈತ್ರಮಾಸದ ವನರಾಜಿಯೇ ಬೇರೆ, ಶ್ರಾವಣ ಮಾಸದ ವನರಾಜಿಯೇ ಬೇರೆ; ವಸಂತದ ಸೌಂದರ್ಯವೆಷ್ಟು ಆಕರ್ಷಕವೋ, ಮಾಗಿಯ ಸೌಂದರ್ಯವೂ ಅಷ್ಟೇ ನಯನ ಮನೋಹರ.[7]

ಹಾರ್ಡಿಯವರ ಕಾದಂಬರಿಯಲ್ಲಿ ಬರುವ ಎಗ್ಡನ್ ಹೀತ್‌ನ ಹಾಗೆ ಮಲೆನಾಡಿನ ಸೌಂದರ್ಯವೇನೋ ಸಾವಿರ ವರ್ಷದ ಹಿಂದೆ ಇದ್ದಂತೆಯೇ ಇದೆ. ಅದರ ಸೌಭಾಗ್ಯಕ್ಕೆ ಮಾತ್ರ ಇಳಿಗಾಲ ಬಂದಂತಿದೆ. ಪ್ರಕೃತಿಯ ಸೌಂದರ್ಯ ಮನುಷ್ಯ ಪ್ರಜ್ಞೆಯ ರಸಸ್ವಾದನೆಗೆ ವಿಷಯವಾದಂದು, ನೈಸರ್ಗಿಕವಾದ ಸಂಪತ್ತು ಮನುಷ್ಯಾಕೃತಿಯ ಅಭ್ಯುದಯಕ್ಕೆ ಅಧೀನವಾದಂದು, ಅಂತಹ ಅಭ್ಯುದಯವು ಸಂಸ್ಕೃತಿಗೂ ನಿಃಶ್ರೇಯಸಕ್ಕೂ ಕೈಂಕರ್ಯವೆಸಗಿದಂದು ಅದು 'ಸೌಭಾಗ್ಯ'ವಾಗುತ್ತದೆ. ಅಂತಹ ಸೌಭಾಗ್ಯದ ಪರಿವರ್ತನೆಗೆ ತಪಸ್ಸು ಮಾಡುತ್ತಿರುವಂತಿದೆ ಮಲೆನಾಡಿನ ಸೌಂದರ್ಯ".[8] ಮಲೆನಾಡಿನ ಪ್ರಕೃತಿ ಸೌಂದರ್ಯ ಅಲ್ಲಿನ ಪಕ್ಷಿಸಂಕುಲ, ಪ್ರಾಣಿಗಳು ಕುವೆಂಪು ಕಾದಂಬರಿಗಳ ಪಾತ್ರಧಾರಿಗಳ ಜೊತೆ ಜೊತೆಯಾಗಿ ಮಲೆನಾಡಿನ

ಬದುಕಿಗೆ ಪ್ರೇರಕ ಶಕ್ತಿಗಳಾಗಿವೆ, ಸಂಗಾತಿಗಳಾಗಿವೆ, ಮತ್ತು ಕಾದಂಬರಿಯ ಪಾತ್ರಗಳಂತೆಯೆ ಪ್ರಕೃತಿಯೂ ಜೀವಂತ ಪಾತ್ರವಾಗಿ ಚಿತ್ರಿತವಾಗಿದೆ.

ಹಾರ್ಡಿಯವರ ವೆಸೆಕ್ಸ್ ಪ್ರದೇಶದ ಎಗ್ಡನ್ ಹೀತ್ ದೇಸಿಯ ಸಂಸ್ಕೃತಿಯ ಕೇಂದ್ರವಾಗಿದ್ದಂತೆ, ಕುವೆಂಪುರವರ ಕಾದಂಬರಿಗಳಲ್ಲಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಮಲೆನಾಡಿನ ದೇಸಿಯ ಸಂಸ್ಕೃತಿಗೆ ಕೇಂದ್ರಸ್ಥಾನವಾಗಿದೆ. ಆಧುನಿಕ ಆಡಂಬರದ ನವನಾಗರಿಕತೆಯ ಸೋಂಕಿಲ್ಲದ, ನಿರುದ್ವಿಗ್ನ ಬದುಕು ಮಲೆನಾಡಿನದಾಗಿತ್ತು. ಅಂತಹ ಬದುಕಿಗೆ '<u>ಕಾನೂರು ಹೆಗ್ಗಡತಿ</u>'ಯ ಹೂವಯ್ಯ ತನ್ನ ವಿದ್ಯಾಭ್ಯಾಸ ಮುಕ್ತಾಯಗೊಳ್ಳುವ ಮೊದಲೆ ವಾಪಸ್ಸಾಗುತ್ತಾನೆ. ತನ್ನೂರಿಗೆ, ತನ್ನ ಹುಟ್ಟೂರಿಗೆ ಮರಳಿ ಬರುವ ಹೂವಯ್ಯ ಮತ್ತೆ ಮೈಸೂರಿಗೆ ಹೋಗುವುದಿಲ್ಲ. ತನ್ನೆಲ್ಲ ಬದುಕನ್ನು ಹಳ್ಳಿಯ ಮುಗ್ಧ ಜನರ ಒಳಿತಿಗಾಗಿ, ವಿದ್ಯೆ ಕಲಿಸುವುದಕ್ಕಾಗಿ ಮೀಸಲಿಡುತ್ತಾ, ಪ್ರಕೃತಿಯ ಭಾಗವಾಗಿ ಹೋಗುತ್ತಾನೆ. ಹಾರ್ಡಿಯವರ '<u>ದಿ ರಿಟರ್ನ್ ಆಫ್ ದಿ ನೇಟಿವ್</u>' ಕಾದಂಬರಿಯ ನಾಯಕ ಕ್ಲಿಮ್ ಯೋಬ್ರೈಟ್ ಕೂಡ ಹೂವಯ್ಯನಂತೆ ಥಳುಕು ಬಳುಕಿನ, ಕೃತಕ ಬದುಕಿನ ಕೇಂದ್ರವಾಗಿದ್ದ ಪ್ಯಾರಿಸ್ಸಿನಿಂದ ತನ್ನ ಹುಟ್ಟೂರಿಗೆ ಮರಳುತ್ತಾನೆ. ತನ್ನ ಹುಟ್ಟೂರಿನ ಮಣ್ಣಿನ ಮಕ್ಕಳಿಗಾಗಿ ಶಾಲೆಯನ್ನು ತೆರೆದು ವಿದ್ಯಾದಾನ ಮಾಡುತ್ತಾ ನೆಲೆನಿಲ್ಲುತ್ತಾನೆ ಮತ್ತೆ ಎಂದೂ ಪ್ಯಾರಿಸ್ಸಿಗೆ ಹೋಗುವುದಿಲ್ಲ. ಹೀಗೆ ಕ್ಲಿಮ್ ಮತ್ತು ಹೂವಯ್ಯ ಭೌಗೋಳಿಕ ಪರಿಸರಕ್ಕೆ ಮತ್ತು ದೇಸಿಯ ಬದುಕಿಗೆ ತಮ್ಮ ಜೀವನವನ್ನು ಅರ್ಪಿಸಿಕೊಳ್ಳುವುದನ್ನು ಕಾಣುತ್ತೇವೆ.

ಕುವೆಂಪುರವರ ಕಾದಂಬರಿಗಳ ಪಾತ್ರಗಳಲ್ಲೆವೂ ಮಲೆನಾಡಿನ ಮರಗಿಡ ಕಾಡು ಮಳೆಗಳಂತೆಯೇ ಅಲ್ಲಿಂದ ಬೇರ್ಪಡಿಸಿ ನೋಡಲಾರದಂತಹ ಅಸ್ತಿತ್ವವನ್ನು ಅಲ್ಲಿನ ಪರಿಸರದೊಂದಿಗೆ ಪಡೆದುಕೊಂಡಿವೆ. ಈ ಪರಿಸರದ ವಿಶಿಷ್ಟ ಪ್ರತಿಮೆಗಳಾಗಿ ಬೈರ, ಜಾಕಿ, ಮಾರ್ಕ, ಸೋಮ, ನಿಂಗ, ಪುಟ್ಟಣ್ಣ, ತಿಮ್ಮಿ, ಗುತ್ತಿ, ನಾಯಿ ನಿಲ್ಲುವುದರಿಂದ ಪ್ರಾದೇಶಿಕತೆ ಅರ್ಥ ಪಡೆದುಕೊಳ್ಳುತ್ತದೆ ಎಂದು ಶಿವರಾಮು ಕಾಡನಕಪ್ಪೆ ಹೇಳುತ್ತಾರೆ.[9] ಹಾರ್ಡಿಯವರ ಕಾದಂಬರಿಗಳ ಪಾತ್ರಗಳಾದ ಕ್ಲಿಮ್ ಮತ್ತು ಅವರ ತಾಯಿ, ತೋಮಸಿನ್, ಡಿಗೊರಿ ವೆನ್, ಟಿಮೊತಿ ಫೇರ್‌ವೇ, ಹಂಫ್ರಿ, ಕ್ರಿಶ್ಚಿಯನ್, ಕ್ಯಾಂಟಲ್ ತಾತ, ಚಾರ್ಲಿ, ಟೆಸ್ಸ್, ಏಂಜಲ್ ಕ್ಲೇರ್, ಕ್ರಿಕ್, ಮರಿಯನ್, ಇಜ್ ಮುಂತಾದ ಪಾತ್ರಗಳು ಎಗ್ಡನ್ನಿನ ಪರಿಸರದೊಡನೆ ಅಸ್ತಿತ್ವವನ್ನು ಪಡೆದುಕೊಂಡಿವೆ. ಎಗ್ಡನ್ನಿನ ಭೌಗೋಳಿಕ ಪರಿಸರದ ಜೊತೆ ಆ ಪ್ರದೇಶದ ಜನರು ಅವಿನಾಭಾವ ಸಂಬಂಧವಿರಿಸಿಕೊಂಡಿದ್ದರು. ಎಗ್ಡನ್ನಿನ ಪ್ರತಿಯೊಂದು ಋತುವಿನೊಡನೆ ಹಳ್ಳಿಗರು ಅನೋನ್ಯವಾದ ಸಂಬಂಧವಿಟ್ಟುಕೊಂಡಿದ್ದರು.

ಅದು ಚಳಿಗಾಲವಾಗಲಿ, ಬೇಸಿಗೆಯ ಬಿಸಿಲಾಗಲಿ, ಮಳೆಗಾಲವಾಗಲಿ ಅವುಗಳಲ್ಲಿ ಒಂದಾಗಿ ಬಾಳುತ್ತಿದ್ದರು.[10]

'ದಿ ರಿಟರ್ನ್ ಆಫ್ ದಿ ನೇಟಿವ್' ಕಾದಂಬರಿಯ ತೋಮಸಿನ್ ಎಗ್ಡನ್ನಿನ ಬಗ್ಗೆ ಅತಿಯಾದ ಹೆಮ್ಮೆಪಡುವುದನ್ನು ಕಾಣುತ್ತೇವೆ: "ಅಲ್ಲಿ ವಾಸಿಸುವುದಕ್ಕೆ ಬಹಳ ಇಷ್ಟಪಡುತ್ತಾಳೆ, ಏಕೆಂದರೆ ಆಕೆ ಆ ಮಣ್ಣಿನ ಹೆಮ್ಮೆಯ ಪುತ್ರಿ. ಅಲ್ಲಿಯೇ ಹುಟ್ಟಿ ಬೆಳೆದು ಬದುಕನ್ನು ಕಟ್ಟಿಕೊಂಡವಳು. ಅಲ್ಲಿನ ಒರಟಾದ ಕುರುಚಲು ಗಿಡಗಳಿಂದಾವೃತವಾದ ಕಂದು ಮಿಶ್ರಿತ ಮಣ್ಣಿನ ಕಂಪನ್ನು ಮೆಚ್ಚುಗೆಯಿಂದ ಪ್ರೀತಿಸುತ್ತಾಳೆ, ಆದರೆ ಯುಸ್ಟೇಷ್ಯ ಅದಕ್ಕೆ ವಿರುದ್ಧವಾಗಿದ್ದಳು. ಅವಳ ಪಾಲಿಗೆ ಎಗ್ಡನ್ ನರಕವಾಗಿತ್ತು. ಆ ಪ್ರದೇಶದಿಂದ ಸಮಯ ಸಿಕ್ಕರೆ ಓಡಿಹೋಗಲು ಕಾಯುತ್ತಿದ್ದಳು.[11]

'ದಿ ರಿಟರ್ನ್ ಆಫ್ ದಿ ನೇಟಿವ್' ಕಾದಂಬರಿಯ ನಾಯಕ ಕ್ಲಿಮ್ ಎಗ್ಡಿನ್ನಿನ ಮಣ್ಣಿನ ಮಗ, ಪ್ಯಾರಿಸ್ಸಿನ ಕೃತಕ ಬದುಕಿಗೆ ವಿದಾಯ ಹೇಳಿ ಬಂದವನು ತನ್ನ ಹುಟ್ಟೂರಿನಲ್ಲಿಯೇ ಉಳಿಯುತ್ತಾನೆ ಮತ್ತು ನಗರ ಜೀವನವನ್ನು ದ್ವೇಷಿಸುತ್ತಾನೆ. ತನ್ನ ಸಹೋದರಿ ತೋಮಸಿನ್ ಡಿಗೊರಿವೆನ್‌ನ್ನು ಮದುವೆಯಾಗುವುದಾಗಿ ಹೇಳಿದಾಗ ವಿರೋಧಿಸುತ್ತಾನೆ. ಆಕೆಯನ್ನು ಮನವೊಲಿಸಿ ಬೇರೊಬ್ಬ ವೃತ್ತಿಯವನನ್ನು ಮದುವೆಯಾಗಿ ಪಟ್ಟಣಕ್ಕೆ ಹೋಗಲು ಹೇಳಿದಾಗ ಆಕೆ ಹೇಳುವ ಮಾತುಗಳು ಆಕೆಯ ಬದುಕಿನಲ್ಲಿ ಎಗ್ಡನ್ನಿನ ಭೌಗೋಳಿಕ ಪರಿಸರ ಯಾವ ಪ್ರಭಾವವನ್ನು ಬೀರಿತ್ತು ಎಂಬುದನ್ನು ಕಾಣುತ್ತೇವೆ: "ತಾನು ಪಟ್ಟಣದ ಬದುಕಿಗೆ ತಕ್ಕವಳಲ್ಲ ಬದಲಾಗಿ ತಾನು ಹುಟ್ಟಿ ಬೆಳೆದ ಎಗ್ಡನ್ ಹೀತ್‌ನಲ್ಲಿಯೇ ಉಳಿಯುವುದಾಗಿ ಹೇಳುತ್ತಾಳೆ, ಹಳ್ಳಿಯ ಬದುಕು, ಅಲ್ಲಿನ ಸಂಸ್ಕೃತಿ, ಸಂಪ್ರದಾಯಕ್ಕೆ ಹೇಳಿಮಾಡಿಸಿದ ಹಳ್ಳಿಯ ಹುಡುಗಿ ತಾನೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾಳೆ. ಬೇರೆಯವರ ದೃಷ್ಟಿಯಲ್ಲಿ ಎಗ್ಡನ್ ಹೀತ್‌ನಲ್ಲಿ ಬದುಕುವುದು ಹಾಸ್ಯಾಸ್ಪದವೆನಿಸಬಹುದು, ಪುರಾತನವಾದ ಪ್ರದೇಶವಾಗಿರಬಹುದು, ಆದರೆ ತಾನು ಆ ಮಣ್ಣಿನ ದೇಸಿಯ ಪರಿಸರಕ್ಕೆ ಹೊಂದಿಕೊಂಡಿದ್ದೇನೆ, ಇಲ್ಲಿ ಬಿಟ್ಟರೆ ಬೇರೆ ಎಲ್ಲಿಯೂ ತಾನು ಸಂತೋಷವಾಗಿರಲಾರೆ".[12] ಹೀಗೆ ಹೇಳುವಾಗ ದೇಸಿಯ ಬದುಕಿನಲ್ಲಿ, ಭೌಗೋಳಿಕ ಪರಿಸರದ ಪಾತ್ರ ಮತ್ತು ಪ್ರಭಾವವನ್ನು ಕಾಣಬಹುದು.

ಹಾರ್ಡಿಯವರ ಟೆಸ್ ಕಾದಂಬರಿಯ ದುರಂತ ನಾಯಕಿ, ಟೆಸ್ 19ನೇ ಶತಮಾನದ ಇಂಗ್ಲೆಂಡಿನ ವೆಸೆಕ್ಸ್ ಪ್ರದೇಶದ ಮುಗ್ಧ ಮಣ್ಣಿನ ಮಗಳು. ನಿಷ್ಕಪಟ, ನಿಷ್ಕಳಂಕಿತ ಗ್ರಾಮೀಣ ಪ್ರದೇಶದ ಮುಗ್ಧ ಜನರು ಆ ಮಣ್ಣಿನ ಮಕ್ಕಳು ಎಂದು ಕೃತಿಕಾರರು ವರ್ಣಿಸುತ್ತಾರೆ. ವೆಸೆಕ್ಸ್‌ನ ಭೌಗೋಳಿಕ ಪ್ರದೇಶದಲ್ಲಿ ವಿಲಕ್ಷಣವಾದ, ಅಪರಿಚಿತವಾದ, ಪ್ರಕೃತಿಯ ವೈಲಕ್ಷಣಗಳನ್ನು ಜೊತೆ

ಜೊತೆಯಾಗಿ ಚಿತ್ರಿಸಿದ್ದಾರೆ. ಹಳ್ಳಿಗರಿಗೆ ತಮ್ಮ ಹಳ್ಳಿಯೇ ಒಂದು ಪುಟ್ಟ ಪ್ರಪಂಚವಾಗಿತ್ತು. ತಮ್ಮ ಊರಿನ ಹೊರಗೆ ಹೋಗುವುದೆಂದರೆ ಅನ್ಯ ದೇಶಗಳಿಗೆ ಹೋದ ಅನುಭವವಾಗುತ್ತಿತ್ತು. ಹಳ್ಳಿ ಜನರು ತಾವು ಹುಟ್ಟಿ ಬೆಳೆದ ನೆಲದ ಜೊತೆಗೆ ಬಿಡಿಸಲಾರದ ಸಂಬಂಧವನ್ನಿಟ್ಟುಕೊಂಡಿದ್ದರು. ಅಲ್ಲಿನ ಕೃಷಿ ಕಾರ್ಮಿಕರು ತಮ್ಮ ವಾರಾಂತ್ಯವನ್ನು ಸಂತೋಷಕೂಟಗಳಲ್ಲಿ ಕಳೆಯುವ ದೃಶ್ಯವನ್ನು 'ಬಯಲಿನ ಮಕ್ಕಳು' ಎಂದು ವರ್ಣಿಸುವಾಗ ಎಗ್ಡನ್ಸ್‌ನ ಜನ ಮತ್ತು ಭೌಗೋಳಿಕ ಸಂಬಂಧಗಳನ್ನು ಕಾಣಬಹುದು.[13] ಹೀಗೆ ಹಾರ್ಡಿಯವರ ಕಾದಂಬರಿಗಳಲ್ಲಿ ಭೌಗೋಳಿಕ ಪರಿಸರ ಮತ್ತು ಜನ ಸಮುದಾಯದವರ ಬಿಡಿಸಲಾರದ, ಮತ್ತು ಬೇರ್ಪಡಿಸಲಾಗದ ಸಂಬಂಧಗಳನ್ನು ಕಾಣುವುದರ ಜೊತೆಗೆ ಭೌಗೋಳಿಕ ಪರಿಸರ ದೇಸಿಯ ಬದುಕಿನ ಪೋಷಕ ಪಾತ್ರವಾಗಿರುವುದನ್ನು ಕಾಣುತ್ತೇವೆ.

3.2 ಪ್ರಕೃತಿ ಮತ್ತು ಪಾತ್ರಗಳು:

ಕುವೆಂಪುರವರ ಕಾದಂಬರಿಗಳ ನಿಜವಾದ ಸ್ವರೂಪ ತಿಳಿದುಕೊಳ್ಳಬೇಕೆಂದರೆ ಆ ಕಾದಂಬರಿಗಳ ಹಿಂದಿರುವ ಮುಖ್ಯ ಪ್ರೇರಣೆಯೆಂದರೆ ಮಲೆನಾಡಿನ, ಅದರ ಪಾಕೃತಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ವಿವರಣೆಗಳು ಜಿ.ಎಸ್. ಆಮೂರರು ಹೇಳುವಂತೆ: "ಪರಿಸರದ ಪ್ರತಿಸೃಷ್ಟಿಯಲ್ಲಿ ಪುಟ್ಟಪ್ಪನವರು ಕಾನೂರು ಹೆಗ್ಗಡತಿಯಲ್ಲಿ ಸ್ಥಾಪಿಸಿದ ಯಶಸ್ಸು ಅವರಿಗಿಂತ ಮೊದಲಿನ ಯಾವ ಕಾದಂಬರಿಕಾರನಿಗೂ ಸಾಧ್ಯವಾಗಿರಲಿಲ್ಲ. ಮುತ್ತಳ್ಳಿ, ಕಾನೂರು, ಕೆಳಕಾನೂರು. ಸೀತೆಮನೆ, ನೆಲ್ಲುಹಳ್ಳಿ, ಈ ಪಂಚಗ್ರಾಮಗಳನ್ನು ಕೇಂದ್ರವಾಗಿಟ್ಟುಕೊಂಡು ಒಂದು ಕಾಲದ ಮಲೆನಾಡಿನ ಪ್ರಾಕೃತಿಕ, ಕೌಟುಂಬಿಕ ಮತ್ತು ಗ್ರಾಮ ಜೀವನದ ದೊಡ್ಡ ಪ್ರಪಂಚವನ್ನೇ ಅವರು ನಮ್ಮೆದುರು ತೆರೆದಿಟ್ಟಿದ್ದಾರೆ".[14] ಮಲೆನಾಡಿನ ಪ್ರಕೃತಿಯ ಭಾಗವಾಗಿ ಬರುವ ಬೇಟೆ, ವ್ಯವಸಾಯ, ಒಕ್ಕಲುತನ, ವಿವಿಧ ಜಾತಿಗಳು, ಅವರ ನಂಬಿಕೆ, ಆಚರಣೆ ಮುಂತಾದವು ದೇಸಿಯ ಚಿತ್ರಣವನ್ನು ನೀಡುತ್ತವೆ. ಈ ಪ್ರಕೃತಿಯ ಅವಿಭಾಜ್ಯ ಅಂಗಗಳಾಗಿ ಗಿರಿ, ಕಾನನಗಳು, ವನ್ಯಜೀವಿ, ಪಕ್ಷಿಗಳು, ಮೀನಿನ ಬೇಟೆ, ಕಾಡು ಹಂದಿಗಳ ಬೇಟೆ, ಹೊಂಡ ತೋಣಕುವುದು, ಏಡಿ ಶಿಕಾರಿ, ಕಳ್ಳು ಕಟ್ಟುವುದು, ಗದ್ದೆ ಉಳುವುದು ಮುಂತಾದ ವ್ಯವಹಾರಗಳಲ್ಲಿ ಮಲೆನಾಡಿನ ಪ್ರಕೃತಿಯು ಸಹಜ ಬದುಕಿಗೆ ವೇದಿಕೆಯಾಗಿದೆ.

ಕುವೆಂಪುರವರ ಎರಡೂ ಕಾದಂಬರಿಗಳಲ್ಲಿ ಮಲೆನಾಡಿನ ತೀರ್ಥಹಳ್ಳಿ ಪ್ರಾಂತ್ಯದ ಅರಣ್ಯ ಪ್ರದೇಶದಲ್ಲಿ ಅಂತರ್ಗತವಾಗಿರುವ ಹಳ್ಳಿಗಾಡಿನ ಜನಜೀವನ, ಆ ಜೀವನದ ಹಿನ್ನಲೆಯಲ್ಲಿ ವಿಪುಲವಾದ ಪ್ರಕೃತಿಯ ಆವರಣವನ್ನು ಕಾಣುತ್ತೇವೆ. ಈ ಕಾದಂಬರಿಗಳಲ್ಲಿ 'ಪ್ರಕೃತಿ' ಮನುಷ್ಯ

ಪಾತ್ರಗಳಷ್ಟೇ ಜೀವಂತವಾಗಿ ಕಥೆಗೆ ಪ್ರೇರಕವಾಗಿ ಕಾರಣ ಕರ್ತೃವಾಗಿರುವುದನ್ನು ಕಾಣುತ್ತೇವೆ. ಒಂದು ರೀತಿಯಲ್ಲಿ ಪ್ರಕೃತಿಯು ಈ ಕಾದಂಬರಿಗಳಿಗೆ ದೇಸಿಯತೆಯ ವೈಶಿಷ್ಟವನ್ನು ನೀಡಿದೆ. ಕಾದಂಬರಿಕಾರರೇ ಹೇಳಿರುವಂತೆ: "ಆ ಮಲೆನಾಡಿನ ಮೂಲೆಯಲ್ಲಿ ಗಗನ ಚುಂಬಿಗಳಾದ ಪರ್ವತಾರಣ್ಯ ಶ್ರೇಣಿಗಳಿಂದ ಪರಿವೃತವಾಗಿ, ಪ್ರಪಂಚಕ್ಕೆ ಸೇರದ ಬೇರೊಂದು ಪ್ರಪಂಚವದು,[15] ಸುಂದರವೂ, ಭವ್ಯವೂ, ಕ್ರೂರವೂ, ಭಯಂಕರವೂ, ಆದ ಮನುಷ್ಯನ ಸ್ಪರ್ಶ ಸಂಪರ್ಕದಿಂದ ಸ್ವಲ್ಪವೂ ಕುಂಠಿತವಾಗದ ಈ ಗಿರಿವನ ಸಾಮ್ರಾಜ್ಯದ ವಿವಿಧ ಮುಖಗಳ ಚಿತ್ರಗಳು, ಕಾದಂಬರಿಗಳಿಗೆ ತಮ್ಮದೇ ಆದ ಗುಣ ವೈಶಿಷ್ಟ್ಯವನ್ನು ನೀಡಿವೆ. ನಡುಹಗಲಿನಲ್ಲೂ ಕತ್ತಲೆಯನ್ನು ನೆಲಕ್ಕೆ ಬಿಡದಿರುವ ಹೆಮ್ಮರಗಳು, ಅರಣ್ಯಾವೃತ ಸಹ್ಯಾದ್ರಿಶ್ರೇಣಿಗಳ ಗಿರಿಕಂದರಗಳು, ಅರಣ್ಯದ ಮೃಗ ಪಕ್ಷಿಗಳ ವರ್ಣ ವೈಖರಿ, ಕಾದಂಬರಿಗಳಿಗೆ ಜೀವತುಂಬಿವೆ. ಪ್ರಕೃತಿಯ ಒಡಲಾಳದಲ್ಲಿ ನಡೆಯುವ ಮಾನವರ ಜಂಜಾಟಗಳನ್ನು, ಬದುಕಿನ ವಹಿವಾಟನ್ನು ಕುವೆಂಪುರವರು ಸೂಕ್ಷ್ಮಾತಿಸೂಕ್ಷ್ಮವಾಗಿ, ಸಮಾಜದ ಎಲ್ಲಾ ಮಟ್ಟಗಳಲ್ಲೂ ಎಲ್ಲಾ ವಯೋಮಾನದವರಲ್ಲೂ ರೂಪಿಸಿದ್ದಾರೆ.[16]

ಕುವೆಂಪುರವರು ತಮ್ಮೆರಡು ಕಾದಂಬರಿಗಳಲ್ಲಿ ಮಾನವನ ಬದುಕು ಮತ್ತು ಪ್ರಕೃತಿಯ ಬದುಕು ಹೇಗೆ ಒಂದಕ್ಕೊಂದು ಬೆಸೆದುಕೊಂಡಿವೆ ಮತ್ತು ಪೂರಕವಾಗಿವೆ ಎಂದು ವರ್ಣಿಸುತ್ತಾರೆ. <u>ಕಾನೂರು ಹೆಗ್ಗಡತಿ</u> ಕಾದಂಬರಿಯ ಆರಂಭದಲ್ಲಿಯೇ ಪ್ರಕೃತಿ ಮಾನವ ಸಂಬಂಧದ ಚಿತ್ರಣವನ್ನು ಕಾಣುತ್ತೇವೆ. ಪ್ರಕೃತಿಯ ಸಾನ್ನಿಧ್ಯದಲ್ಲಿ ಕಾದಂಬರಿಯ ಕಾನೂರಿನ ಬದುಕಿನ ಕಥೆಯು ಬೇಸಿಗೆಯ ಬಿಸಿಲಿನ ಮಧ್ಯಾಹ್ನದಲ್ಲಿ ಅನಾವರಣಗೊಳ್ಳುವುದು. ಹೂವಯ್ಯ ಮತ್ತು ರಾಮಯ್ಯ ಮೈಸೂರಿನಿಂದ ತಮ್ಮೂರಿಗೆ ಬರುವಾಗ ತುಂಗಾನದಿಯ ಕಲ್ಲುಸಾರವನ್ನು ದಾಟುವಾಗ: "ಕೆಲವು ಹುಡುಗರು ಅಲ್ಲಿ ಈಜುತ್ತಿದ್ದುದನ್ನು ನೋಡಿ ತಾನೂ (ಹೂವಯ್ಯ) ಹಾಗೆಯೆ ಹಿಂದೆ ಈಜಾಡಿದ್ದುದನ್ನು ನೆನೆದನು. ಪರ್ವತಗಳ ಸಂದಿಯಲ್ಲಿ ಕಾಣಿಸಿಕೊಂಡು ಹರಿದು ಬಂದ ಹೊಳೆ ಅಂದಿನಂತೆಯೆ ಇಂದೂ ಪರ್ವತಗಳ ಇಡುಕಿನಲ್ಲಿ ಕಣ್ಮರೆಯಾಗುತ್ತಿತ್ತು. ತುಂಗೆಯ ಇಕ್ಕೆಲದ ದಡಗಳಲ್ಲಿ ಅಂದಿನಂತೆಯೆ ಅರಣ್ಯಗಳು ಮಾಲೆಮಾಲೆಯಾಗಿ ನಿಂತಿದ್ದುವು. ಆಗಿದ್ದ ಮರಗಳಲ್ಲಿ ಈಗಲೂ ಅನೇಕವಿವೆ! ನದಿಯ ನಡುವೆ ಮಲಗಿದ್ದ ಆ ಹೆಬ್ಬಂಡೆಯ ರಾಶಿಗಳೂ ಈಗಲೂ ಅಂದಿನಂತೆಯೆ ಇವೆ, ಬಂಡೆಯಿಂದ ಬಂಡೆಗೆ ಧುಮುಕುತಿದ್ದ ಜಲರಾಶಿ ಸಂಮಥಿತವಾಗಿ ನೊರೆನೊರೆಯಾಗಿ, ತುಂತುರುತುಂತುರಾಗಿ, ಘೂರ್ಣಾಯಮಾನವಾಗಿ, ಕಡೆಗೆ ತೆರೆತೆರೆಯಾಗಿ, ಬಿಸಿಲಿನಲ್ಲಿ, ಮಿರುಗಿ ಮಿರುಗಿ ಅಂದಿನಂತೆಯೆ ಇಂದೂ ಲೀಲಾಮಗ್ನವಾಗಿರುವಂತೆ ತೋರುತ್ತಿದೆ".[17] ಕಾದಂಬರಿಯ ಈ ಸಾಲುಗಳು ಬಾಲ್ಯದಿಂದ ಮುಪ್ಪಿನವರೆಗೆ ಪ್ರಕೃತಿ ಹೇಗೆ ಮಾನವನ ವಿಕಾಸದಲ್ಲಿ, ಭಾವ-ಭಾವನೆಗಳ ಬೆಳವಣಿಗೆಯಲ್ಲಿ ಪ್ರಭಾವ ಬೀರುತ್ತವೆ ಎಂದು ತಿಳಿಸುತ್ತದೆ.

ಕಾನೂರು ಹೆಗ್ಗಡಿತಿಯ ಪಾತ್ರಗಳು ಪ್ರಕೃತಿಯೊಡನೆ ಎಂತಹ ಭಾವನಾತ್ಮಕ ಸಂಬಂಧವನ್ನಿಟ್ಟುಕೊಂಡಿದ್ದವು ಎಂಬುದಕ್ಕೆ ಕಾದಂಬರಿಯಲ್ಲಿ ಹೂವಯ್ಯ ಮತ್ತು ಉಳಿದ ಪಾತ್ರಗಳು ಸಾಕ್ಷಿಯಾಗಿದ್ದವು: "ಹೂವಯ್ಯನಾದಿಯಾಗಿ ಬೈರ ಸಿದ್ದರಿಗೂ ಕೂಡ ಗಿರಿವನಗಳ ರಮಣೀಯತೆಯಲ್ಲಿ ಜೀವನವು ಗರಿಯಂತೆ ಹಗುರವಾಗಿ ಹಕ್ಕಿಯಂತೆ ಹಾರಾಡತೊಡಗಿತು. ಸಂಸಾರದ ನೂರಾರು ಕೋಟಲೆಗಳ ಕಣಿವೆಗಳ ನಿಮ್ನತೆಯಿಂದ ಸ್ವಚ್ಛತರವೂ ಸ್ವಾತಂತ್ರಪೂರ್ಣವೂ ಆಗಿರುವ ಗಿರಿವನಗಳ ಔನ್ನತ್ಯಕ್ಕೇರಿದರೆ ಯಾವ ಜೀವಿಯ ಆತ್ಮತಾನೆ ಗಗನಸ್ಪರ್ಶಿಯಾಗುವುದಿಲ್ಲ? ಹೂವಯ್ಯ ತಿಳಿದು ಆನಂದಪಡುತ್ತಿದ್ದನು; ಸಿದ್ದ ತಿಳಿಯದೆ ಆನಂದಪಡುತ್ತಿದ್ದನು".[18] ಈ ಸಾಲುಗಳಲ್ಲಿ ಪ್ರಕೃತಿ–ಮಾನವ ಸಂಬಂಧ ಕೇವಲ ಬಾಹ್ಯರೂಪದಲ್ಲಷ್ಟೆ ಅಲ್ಲದೆ ಆಂತರಿಕವಾಗಿಯು ಬೆಸೆದುಕೊಂಡಿರುವುದನ್ನು ಕಾಣಬಹುದು.

ಕುವೆಂಪುರವರ ಮತ್ತೊಂದು ಕಾದಂಬರಿ ಮಲೆಗಳಲ್ಲಿ ಮದುಮಗಳು ಪ್ರಾರಂಭವಾಗುವುದು ಮುಂಗಾರಿನ ಆರಂಭದ 'ಧನಗೋಳಾಗಿ ಸುರಿವ ಮಳೆಯಲ್ಲಿ. ನಾಯಿಗುತ್ತಿ ಕೈಯಲ್ಲಿ ಸಂದೇಶವನ್ನು ತಲೆಯಲ್ಲಿ ಸಂಚೊಂದನ್ನು ಹೊತ್ತುಕೊಂಡು ಸಿಂಬಾವಿಯಿಂದ ಹೊರಡುತ್ತಾನೆ. ಗುತ್ತಿ ತನ್ನ ಪ್ರಯಾಣದ ಮಧ್ಯೆ ಮುಂಗಾರು ಮಳೆಗೆ ಸಿಕ್ಕುತ್ತಾನೆ. ಸೀತೂರು ಗುಡ್ಡದ ಹಳುವಿಡಿದ ಕಾಡುದಾರಿಯಲ್ಲಿ ಅಡ್ಡವಾದ ಹೊಳೆಯ ದಂಡೆಯಲ್ಲಿ ನಿಂತಾಗ "ಅವನು ಪ್ರಕೃತಿಯ ಒಂದು ಭಾಗವಾಗಿದ್ದನು, ನಾಗರಿಕರಿಗೆ ಭೀಕರವಾಗಿ ಕಾಣುವ ವರ್ಷಕಾಲದ ಆ ಭಯಂಕರ ಪರ್ವತಾರಣ್ಯದ ರುದ್ರ ಪ್ರಕೃತಿ ಅವನಿಗೆ ಬಹುಕಾಲದ ಪರಿಚಯದಿಂದ ಸಾಧಾರಣವಾಗಿತ್ತು. ಅವನು ಆ ಪ್ರಕೃತಿಯ ಒಂದಂಶವಾಗಿದ್ದನು; ಬೆಟ್ಟದಲ್ಲಿ ಬಂಡೆಯಂತೆ, ಕಾಡಿನಲ್ಲಿ ಮರದಂತೆ ಅದರ ಒಂದಂಗವಾಗಿದ್ದನು... ಶೂನ್ಯ ಮನಸ್ಸಿನಿಂದ ತೊರೆಯ ಮೊರೆಯನ್ನು ಆಲಿಸುತ್ತ, ತಾನೇ ತೊರೆಯ ಮೊರೆಯಾದನೋ ಎಂಬಂತೆ ಕುಳಿತಿದ್ದ ಗುತ್ತಿ".[19] ಈ ನಿರೂಪಣೆಯಲ್ಲಿ ಗುತ್ತಿ 'ಪ್ರಕೃತಿಯ ಒಂದಂಶವಾಗಿದ್ದನು,' 'ತೊರೆಯ ಮೊರೆಯಾಗಿದ್ದನು' ಇವು ಪ್ರಕೃತಿ ಮತ್ತು ಕಾದಂಬರಿಯ ಪಾತ್ರಗಳ ನಡುವಿನ ಅನನ್ಯ ಸಂಬಂಧವನ್ನು ತಿಳಿಸುವುದಲ್ಲದೆ ಪ್ರಕೃತಿಯೇ ಜೀವತಳೆದ ಮಾಂಸಖಂಡಗಳಿಂದ ತುಂಬಿದ ಪಾತ್ರಧಾರಿಯಾಗಿ ರೂಪಿತಗೊಂಡಿರುವುದನ್ನು ಕಾಣಬಹುದು.

ಕುವೆಂಪುರವರು ತಮ್ಮೆರಡೂ ಕೃತಿಗಳ ಕಥೆಗಳನ್ನು ಸಹ್ಯಾದ್ರಿಯ ಬೆಟ್ಟ ಸಾಲುಗಳ ಮಡಿಲಲ್ಲಿಯೆ ಚಿತ್ರಿಸಿದ್ದಾರೆ. ತೀರ್ಥಹಳ್ಳಿಯ ಪೂರ್ವಕ್ಕೆ ಕಾನೂರು, ಮುತ್ತಳ್ಳಿ, ಸೀತೆಮನೆಗಳು, ಕಾನೂರು ಹೆಗ್ಗಡತಿಯಲ್ಲಿ ಮತ್ತು ತೀರ್ಥಹಳ್ಳಿ, ಮೇಗರವಳ್ಳಿಯ ಭಾಗವು ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಚಿತ್ರಿತವಾಗಿವೆ. ಸಹ್ಯಾದ್ರಿಯ ಕತ್ತಿಲಗಿರಿಯಲ್ಲಿ ಬೆಳೆದ ದಟ್ಟವಾದ ಬೆಟ್ಟಕಾಡುಗಳ

ವರ್ಣನೆ ಹೆಸರಿಗೆ ತಕ್ಕ ಅನ್ವರ್ಥವಾಗಿದೆ: "ಕಾನೂರಿನ ಸಮೀಪದಲ್ಲಿ ಕತ್ತಲಗಿರಿ... ಅದರ ಹೆಸರೇ ಸ್ಥಿತಿಸೂಚಕವಾಗಿದೆ. ಕತ್ತಲಗಿರಿಯ ಮೇಲೆ ಮಟಮಟ ಮಧ್ಯಾಹ್ನದಲ್ಲಿ ಮಾತ್ರ ಬಿಸಿಲು ಬೀಳುತ್ತಿತ್ತು. ಆ ಬಿಸಿಲಿಗೂ ಮರಗಳ ನೆತ್ತಿಯ ಮೇಲಲ್ಲದೆ ಒಳಗೆ ಪ್ರವೇಶಮಾಡಲು ಅವಕಾಶ ವಿರಲಿಲ್ಲ. ಅಷ್ಟು ನಿಬಿಡವಾಗಿ, ಅಷ್ಟು ಉನ್ನತವಾಗಿ ಬೆಳೆದಿದ್ದವು ಅಲ್ಲಿಯ ಮರಗಳು, ಆ ಮರಗಳ ಬುಡದಲ್ಲಿ ಎರಡು ಗಿರಿಪಂಕ್ತಿಗಳ ಸಂಧಿಯಲ್ಲಿ ಯಾವಾಗಲೂ ನೀರು ಸ್ರವಿಸುತ್ತಿದ್ದು ಕಿರುಹಳ್ಳ ಹರಿಯುತ್ತಿತ್ತು... ಆ ಸುರುವಿನಲ್ಲಿ ಲಕ್ಷೋಪಲಕ್ಷ ಜಾತಿಯ ಜೊಂಡುಹುಲ್ಲೂ, ಮುಂಡಗ, ಕೇದಗ, ಬೆತ್ತ, ವಾಟೆ, ಕೆಸು ಮುಂತಾದ ನೂರಾರು ವಿಧವಾದ ಜಲಪ್ರಿಯ ಸಸ್ಯಗಳು ಅಸ್ತವ್ಯಸ್ತವಾಗಿ ಕೊಬ್ಬಿ ಬೆಳೆದು ನಿಂತಿದ್ದುವು".[20]

ಭೀಷಣ ಸಹ್ಯಾದ್ರಿಯ ಪ್ರಕೃತಿಯ ಮಡಿಲಲ್ಲಿ ಗಿಡಮರಗಳಲ್ಲದೆ ಅನೇಕ ವಿಧದ ಕ್ರಿಮಿ ಕೀಟಗಳು, ನುಸಿ, ನೊಣ, ಹಾವುಗಳು, ಕಾಡು ಹಂದಿಗಳು, ಮತ್ತು ಇನ್ನಿತರ ಪ್ರಾಣಿ ಪಕ್ಷಿಗಳೂ ಆಶ್ರಯ ಪಡೆದಿದ್ದವು ಎಂಬುದನ್ನು <u>ಕಾನೂರು ಹೆಗ್ಗಡಿತಿ</u> ಕಾದಂಬರಿಯಲ್ಲಿ ಕಾಣಬಹುದು. ಹಾಗೆಯೇ <u>ಮಲೆಗಳಲ್ಲಿ ಮದುಮಗಳು</u> ಕೃತಿಯಲ್ಲಿ ಇದಕ್ಕಿಂತಲೂ ಪುರಾತನವಾದ ಕಡಿದಾದ ಬೆಟ್ಟದ ಭಾಗವಾಗಿದ್ದ 'ಹುಲಿಕಲ್ಲುಗುಡ್ಡ' ಅಸಾಮಾನ್ಯವಾದ ಪ್ರಕೃತಿಯ ಭಾಗವಾಗಿದೆ: "ಹುಲಿಕಲ್ಲುಗುಡ್ಡದ ಸುತ್ತಲೂ ದಟ್ಟವಾದ ಅರಣ್ಯದಿಂದ ಪರಿವೃತವಾಗಿದ್ದು, ಅದರ ಮೇಲೆ ಕುಳಿತವರಿಗೆ ಬಹುದೂರ ಕೆಳಗೆ ಕಣಿವೆಯಲ್ಲಿ ಕೋಣೂರು, ಹೂವಳ್ಳಿಗಳ ಗದ್ದೆ ತೋಟಗಳು ಆಡವಿಯ ಅಂಚಿಗೆ ಸೇರಿಕೊಂಡಂತಿದ್ದ ಆಡಿಕೆ ಬಾಳೆ ತೋಟಗಳು ಸಣ್ಣಗೆ ಚಿತ್ರದಲ್ಲಿ ಬರೆದಂತೆ ಕಾಣುತ್ತಿದ್ದವು. ಹುಲಿ ಅಲ್ಲಿ ಯಾವಾಗಲೂ ಕುಳಿತು ಕಣಿವೆಯಲ್ಲಿ ದನಕರು ಮೇಯುವುದನ್ನು ಗೊತ್ತು ಹಚ್ಚುತ್ತಿತ್ತೆಂದೂ, ಇಲ್ಲವೆ ಕಾಡಿನಲ್ಲಿ ತಿರುಗುವ ಮಿಗ, ಹಂದಿ, ಕಡ, ಕಾಡುಕುರಿ, ಮೊದಲಾದ ಪ್ರಾಣಿಗಳಿಗಾಗಿ ಕಂಡಿ ಕಾಯುತ್ತಿತ್ತೆಂದು ಪ್ರತೀತಿ".[21] ಹುಲಿಕಲ್ಲುಗುಡ್ಡದಲ್ಲಿ ಅನಿವಾರ್ಯ ಸಂದರ್ಭಗಳಲ್ಲಿ ತಿರುಗಾಡುವಾಗ ಬೇಟೆಯಾಡುವಾಗ ಜನರು ಹಿಂಜರಿಯುತ್ತಿದ್ದರು ಇದರಿಂದಲೇ ಆ ಪ್ರದೇಶದ ಪ್ರಕೃತಿಯ ಬಗ್ಗೆ ಭಯಮಿಶ್ರಿತ ಗೌರವವನ್ನು ಆ ಪರಿಸರದಲ್ಲಿ ವಾಸಿಸುವವರು ವ್ಯಕ್ತಪಡಿಸುತ್ತಿದ್ದರು.

ಪ್ರಕೃತಿಯ ಮಡಿಲಿನಲ್ಲಿ ದೇಸಿಯ ಬದುಕು ಅರಳುವುದು ಎಂದರೆ ತಪ್ಪಾಗಲಾರದು. ದೇಸಿಯ ಬದುಕಿನ ಚಟುವಟಿಕೆಗಳು ಪ್ರಕೃತಿಯ ತೊಟ್ಟಿಲಿನಲ್ಲಿ ರೂಪ ಪಡೆಯುತ್ತವೆ. ಪ್ರಕೃತಿಯ ಒಲವು, ಕರುಣೆ, ಭೀಕರತೆ, ಸಮೃದ್ಧಿಗಳಲ್ಲಿ, ಬದುಕಿನ ಸುಖದುಃಖಗಳು, ಕಷ್ಟಕಾರ್ಪಣ್ಯಗಳು, ನೋವು-ನಲಿವುಗಳು ಸಮ್ಮಿಳಿತವಾಗುತ್ತವೆ. ತಲೆತಲಾಂತರಗಳಿಂದ ಬಾಳಿ ಬದುಕಿದ ಜನರು ಇಂತಹ ವೈವಿಧ್ಯಮಯ ಪ್ರಕೃತಿಯ ಒಡನಾಟದಲ್ಲಿ ತಮ್ಮ ಸಾಂಸ್ಕೃತಿಕ ಅಸ್ತಿತ್ವವನ್ನು

ಕಾಪಾಡಿಕೊಂಡು ಬಂದಿದ್ದಾರೆ. ಜನರ ದೈನಂದಿನ ಬದುಕಿನ ವ್ಯಾಪಾರ, ಉದ್ಯೋಗ, ಕಸುಬು, ಹವ್ಯಾಸ, ಉತ್ಪತ್ತಿ ಮುಂತಾದ ಚಟುವಟಿಕೆಗಳಲ್ಲಿ ಪ್ರಕೃತಿಯ ಸಂಬಂಧವನ್ನು ಪಡೆದುಕೊಂಡಿವೆ. ಮಲೆನಾಡಿನ ಪ್ರದೇಶದಲ್ಲಿನ ಜನರ ಬದುಕಿನ ಮುಖ್ಯ ಉದ್ಯೋಗವೆಂದರೆ ವ್ಯವಸಾಯ ಮತ್ತು ಬೇಟೆ ಎನ್ನಬಹುದು. ಇವೆರಡು ಅಲ್ಲಿನ ಜನರನ್ನು ಪ್ರಕೃತಿಯೊಡನೆ ಅವಿನಾಭಾವ ಸಂಬಂಧ ಬೆಳೆಸಿಕೊಳ್ಳಲು ಕಾರಣವಾಗಿವೆ. ಜನರು ಬೆಳೆಯುತ್ತಿದ್ದ ಭತ್ತ, ಅಡಕೆ, ಬಾಳೆ, ತೆಂಗು ಮುಂತಾದ ಬೆಳೆಗಳಿಗೆ ಪ್ರಕೃತಿಯೇ ಆಸರೆಯಾಗಿತ್ತು. ವ್ಯವಸಾಯದ ಕೆಲಸ ಕಾರ್ಯಗಳು ಪ್ರಾರಂಭವಾಗುವುದು ಮುಂಗಾರಿನ ಮೊದಲ ಮಳೆಯಿಂದ. 'ಆರು ಕಟ್ಟುವ' ಕಾರ್ಯದಿಂದ ಹಿಡಿದು 'ಕೊಯ್ಲು' ಮಾಡುವವರೆಗೆ ನಿರಂತರವಾಗಿ ಪ್ರಕೃತಿಯ ಮಡಿಲಿನಲ್ಲಿ ಮಾನವನ ಚಟುವಟಿಕೆಗಳು ನಡೆಯುತ್ತವೆ. "ಮಳೆಗಾಲ ಹಿಡಿದಿದ್ದುದರಿಂದ ಬೇಸಾಯಗಾರರ ಗಮನವೆಲ್ಲ ಅಗೋಡಿಯ ಮೇಲೆಯೂ, ಉಳುವುದು, ಬಿತ್ತುವುದು, ಅಂಚು ಕಡಿಯುವುದು, ಗೊಬ್ಬರ ಹರಡುವುದು, ಬೇಲಿಕಟ್ಟುವುದು, ಬಡ್ಡು ಹಾಕುವುದು ಇತ್ಯಾದಿ ರೈತ ಕರ್ತವ್ಯಗಳ ಮೇಲೆಯೂ, ಕೂಣಿ ತಯಾರಿಸುವುದು, ಕೂಣಿಹಾಕುವುದು, ಹಳ್ಳಕ್ಕೆ ಯಾಪೆ ಕಟ್ಟುವುದು, ಹತ್ತು ಮೀನು ಕಡಿಯುವುದು, ಮೊದಲಾದ ಮೀನುಬೇಟೆಯ ಮೃಗಯಾವ್ಯಸನದಲ್ಲಿಯೂ ಆಸಕ್ತವಾಗಿತ್ತು".[22] ಕಾದಂಬರಿಕಾರರ ಈ ಮಾತುಗಳು ಮಲೆನಾಡಿನಲ್ಲಿ ಮೊದಲ ಮಳೆಯ ಪ್ರಾರಂಭದಲ್ಲಿ ಮಾನವನ ಬದುಕಿನ ಚಟುವಟಿಕೆಗಳು ಹೇಗೆ ಗರಿಗೆದರಿಕೊಳ್ಳುತ್ತವೆ ಮತ್ತು ಬೇಸಿಗೆಯ ಜಡತ್ವದ ದಿನಗಳಿಗೆ ವಿದಾಯ ಹೇಳಿ ರೈತ ವರ್ಗ ತಮ್ಮನ್ನು ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುತ್ತಾರೆ ಎಂಬುದಕ್ಕೆ ನಿದರ್ಶನವಾಗಿದೆ. ಬೇಸಾಯದ ಜೊತೆಗೆ ಬೇಟೆ ಕೂಡ ಮುಖ್ಯವಾಗಿತ್ತು ಎನ್ನುವುದನ್ನು ಸಹ ಕಾಣಬಹುದು. ಹೀಗೆ ಬೇಟೆ ಮತ್ತು ವ್ಯವಸಾಯ ಮಾನವ ಮತ್ತು ಪ್ರಕೃತಿಯ ಸಂಬಂಧದ ಪ್ರತೀಕವಾಗಿದ್ದವು ಎನ್ನುವುದು ತಿಳಿದುಬರುತ್ತದೆ.

ಮುಕುಂದಯ್ಯ ಮತ್ತು ಪ್ರಕೃತಿಯ ನಡುವಿನ ಸಂಬಂಧದ ಬಗ್ಗೆ ಕುವೆಂಪುರವರ ವಿವರಣೆಯಂತು ಬಹಳ ವಿಶಿಷ್ಟವಾಗಿದೆ. "ಮುಕುಂದಯ್ಯ ಶೈಶವ ಪ್ರಜ್ಞೆ ಬಹಿರ್ವಸ್ತುಗಳನ್ನು ಗ್ರಹಿಸಲೂ ಗುರುತಿಸಲೂ ಕಲಿತಂದಿನಿಂದಲೂ ಅವನ ಚಿತ್ತವನ್ನೆಲ್ಲ ಆಕ್ರಮಿಸಿ ತುಂಬಿ ಬಿಟ್ಟಿದ್ದ ಮಹದ್ ವಸ್ತುವೆಂದರೆ ಮಲೆ ಕಾಡು! ಅರಣ್ಯಚ್ಛಾದಿತವಾಗಿ ಮೇಘಚುಂಬಿಗಳಾಗಿ ನಿಂತಿರುವ ಗಿರಿಶಿಖರ ಶ್ರೇಣಿಗಳ ಮಲೆನಾಡಿನಲ್ಲಿ ಎಲ್ಲಿಯೋ ಕೆಳಗೆ ಒಂದು ಕಣಿವೆಯ ಮೂಲೆಯಲ್ಲಿ ಹೆದರಿ ಹುದುಗಿದಂತೆ ಮರಗಳ ನಡುವೆ ಹುದುಗಿರುವ ಮನೆಗಳಲ್ಲಿ ಹುಟ್ಟಿ ಕಣ್ಣುಬಿಡುವ ಮಕ್ಕಳ ಪಾಲಿಗೆ ಆಕಾಶಕೂಡ ಕಾಡಿನಷ್ಟೆ ವಿಸ್ತಾರಭೂಮವಾಗಿ ಕಾಣಿಸುವುದಿಲ್ಲ. ಆಕಾಶಕ್ಕಿಂತಲೂ ಕಾಡೆ ಸರ್ವವ್ಯಾಪಿಯಾಗಿ ತನ್ನ ಅಧಿಕಾರವನ್ನು ಸ್ಥಾಪಿಸಿ ಭೂಮಂಡಲವನ್ನೆಲ್ಲ

ವಶಪಡಿಸಿಕೊಂಡಂತಿರುತ್ತದೆ".[23] ಇಲ್ಲಿ ಕಾಡೆಂದರೆ ಪ್ರಕೃತಿ, ಮಾನವನ ಹುಟ್ಟಿನಿಂದ ಸಾಯುವವರೆಗೆ ದೇಸಿಯ ಬದುಕಿನಲ್ಲಿ ಪ್ರಕೃತಿಯ ಪ್ರಭಾವವನ್ನು ಕಾಣಬಹುದು. ಮಾನವನ ದೈಹಿಕ, ಮಾನಸಿಕ, ಭಾವನಾತ್ಮಕ ಅಂಶಗಳ ಬೆಳವಣಿಗೆಯಲ್ಲಿ ಪ್ರಕೃತಿಯ ಕೊಡುಗೆಯನ್ನು ಮರೆಯಲಾಗದು. ಅದರಲ್ಲೂ ಮಲೆನಾಡಿನ ಪರಿಸರದಲ್ಲಿ ಆಕಾಶಕ್ಕಿಂತಲೂ ಕಣ್ಣು ಬಿಡುವ ಮಕ್ಕಳ ಪಾಲಿಗೆ ಕಾಡೆ ಸರ್ವವ್ಯಾಪಿಯಾದ ಸೃಷ್ಟಿಯ ಸಂಕೇತವಾಗಿತ್ತು ಎನ್ನುವುದನ್ನು ಕಾಣುತ್ತೇವೆ.

ಮುಕುಂದಯ್ಯನಿಗಂತೂ ಕಾಡು ಎಂದರೆ ದೇವರಿಗೆ ಸರಿಸಮಾನವಾಗಿತ್ತು. ಅಷ್ಟೊಂದು ಭಯ ಮಿಶ್ರಿತ ಭಕ್ತಿ ಅದರಲ್ಲಿ ಅವನಿಗೆ. ಅದರ ಮುಳ್ಳು, ಕಲ್ಲು, ಕೊರಕಲು, ಏರು, ಇಳಿತ, ಹುಲಿ, ಹಂದಿ, ಹಾವು, ಚೇಳು, ನುಸಿ, ಇಂಬಳ ಇವೆಲ್ಲದರಿಂದ ಒದಗುವ ತೊಂದರೆಯ ಅನುಭವವಿತ್ತು. ಹಾಗೆಯೇ ಹಕ್ಕಿ, ಹೂವು, ಹಣ್ಣು, ಚಿಟ್ಟೆ, ಜೇನು, ಬೇಟೆ ಇತ್ಯಾದಿಗಳಿಂದ ಒದಗುವ ಆನಂದದ ಅರಿವೂ ಇತ್ತು. ಮಲೆಕಾಡಿನ ಭವ್ಯತೆಯ ಅವನ ಅನುಭವವನ್ನು ಹೆದರಿಕೆ ಎಂದು ವರ್ಣಿಸಲಾಗುತ್ತಿರಲ್ಲಿಲ್ಲ.[24] ಮಲೆನಾಡಿನ ಪರಿಸರದಲ್ಲಿ ಪಾತ್ರಗಳು ಯಾವ ಜಾತಿ ವರ್ಗ, ವರ್ಣದವರೇ ಇರಲಿ ಪ್ರಕೃತಿಯೊಡನೆ ಬೆರೆತು ಒಂದಾಗಿದ್ದರು ಎನ್ನುವುದನ್ನು ಕಾಣುತ್ತೇವೆ. ಅಂತೆಯೇ ಪ್ರಕೃತಿಯ ಇತರ ಜೀವಿಗಳೊಡನೆ ಮಾನವರ ಸಂಬಂಧವನ್ನು ಮತ್ತು ಪರಿಚಯವನ್ನು ಕಾಣಬಹುದು.

<u>ಮಲೆಗಳಲ್ಲಿ ಮದುಮಗಳು</u> ಕಾದಂಬರಿಯ ಪಾತ್ರಧಾರಿ ನಾಯಿಗುತ್ತಿ ಒಂದು ರೀತಿಯಲ್ಲಿ ಮಲೆನಾಡಿನ ದೇಸಿಯ ಸಂಸ್ಕೃತಿಯ ರಾಯಭಾರಿ ಎಂದು ಕರೆಯಬಹುದು. ಈತನ ಮೂಲಕ ಪ್ರಕೃತಿ ಮತ್ತು ಪ್ರಕೃತಿಯ ವ್ಯಾಪಾರಗಳ ಪ್ರಪಂಚ ಅನಾವರಣಗೊಳ್ಳುತ್ತ ಸಾಗುತ್ತದೆ. ಆತ ಸಿಂಬಾವಿಯಿಂದ ಹೊರಟು ಸೀತೂರ ಗುಡ್ಡವೇರಿ ಇಳಿದು, ಗುಡ್ಡದಂಚಿನ ಹಳ್ಳದ ಮಹಾಪೂರ ಇಳಿಯುವವರೆಗೆ ಕೂತು ಕಾಯುವನು. ನೀರು ಕಡಿಮೆಯಾದಾಗ ನಡೆದು ಕಾಡು ದಾಟಿ ಬೆಟ್ಟದ ಮೂಲಕ ಹಳೆಮನೆಗೆ ಬರುವನು, ಮುಂದೆ ಕೂಡ ಕಾಡಿನ ಪ್ರಯಾಣ ಪೂರೈಸಿ ಬೆಟ್ಟಳ್ಳಿ ತಲುಪುವನು. ಆತನ ಈ ಪ್ರಯಾಣದಲ್ಲಿ ಕಾಡು, ಹಳ್ಳ, ಪ್ರವಾಹ, ಕಾಡು ಪ್ರಾಣಿಗಳು, ಹಾವು, ಪಕ್ಷಿಗಳು, ಬೇಟೆ, ಹತ್ತು ಮೀನು ಕಡಿಯುವುದು, ಉರುಳು ಬೇಟೆ ಇತ್ಯಾದಿ ಪ್ರಕೃತಿ ಮತ್ತು ಬೇಟೆಗೆ ಸಂಬಂಧಪಟ್ಟ ಹತ್ತಾರು ವಿವರಗಳು ತುಂಬಿಕೊಂಡಿವೆ ಎಂದು ಡಾ.ಮರಿಗುದ್ದಿಯವರು ಹೇಳುವ ಮಾತುಗಳು ಈ ಸಂದರ್ಭದಲ್ಲಿ ಒಪ್ಪುವಂತಹವು.[25]

3.3 ಪ್ರಕೃತಿ ಮತ್ತು ಮಾನವ ಸಂಬಂಧಗಳು:

ಮಾನವನ ಪ್ರಕೃತಿ ಜೊತೆಗಿನ ಸಂಬಂಧವನ್ನು ಅವನ ಆಚಾರ ವಿಚಾರ ನಂಬಿಕೆ ಹರಕೆಗಳಲ್ಲೂ, ರೋಗ ರುಜಿನಗಳು ಬಂದಾಗ ಪ್ರಕೃತಿಗೆ ಮೊರೆ ಹೋಗುವುದರಲ್ಲೂ ಕಾಣಬಹುದು. ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಸಾಂಪ್ರದಾಯಿಕ, ಆರೋಗ್ಯಕರವಾದ ಪಾನೀಯಗಳಾಗಿ ಗಿಡಮೂಲಿಕೆಗಳಿಂದ ಮಾಡಲ್ಪಟ್ಟ ಕಷಾಯ ಕುಡಿಯುವುದು ರೂಢಿಯಲ್ಲಿತ್ತು. ಕುರ್ನೇಲು ಕುಡಿ ಕಷಾಯ, ಕೊತ್ತಂಬ್ರಿ ಬೀಜದ ಕಷಾಯ, ಸೊಗದೆ ಬೇರಿನ ಕಷಾಯ ಮುಂತಾದ ಪಾನೀಯಗಳನ್ನು ಕುಡಿಯುವುದರ ಮೂಲಕ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುತ್ತಿದ್ದರು. ಹಾಗೆಯೇ ಅದೇ ಕೃತಿಯಲ್ಲಿ ಬರುವ ಕಣ್ಣಾ ಪಂಡಿತರು ಒಬ್ಬ ನಾಟಿ ವೈದ್ಯರಾಗಿದ್ದರು. ಕಾಡಿನಲ್ಲಿ ಸಿಗುವ ಗಿಡ ಮೂಲಿಕೆ, ಸೊಪ್ಪು, ಬೇರು ಮುಂತಾದವುಗಳಿಂದ ಕಷಾಯ, ಚೂರ್ಣ, ಮಾಡಿ ರೋಗಿಗಳಿಗೆ ನೀಡುತ್ತಿದ್ದರು. ಮರ್ಮರೋಗಕ್ಕೆ ತಾಜಾ ತೆಂಗಿನ ಕಳ್ಳು ಸೇವಿಸುವುದು, ಹಾವು ಕಚ್ಚಿದರೆ ಹೊಂಡದ ಕೊಳಕು ನೀರು ಕುಡಿಸುವುದರಿಂದ ವಿಷ ಕಡಿಮೆಯಾಗುತ್ತದೆ ಎಂಬ ನಂಬಿಕೆಯಿತ್ತು. ಪ್ರಕೃತಿಯಲ್ಲಿ ಸಿಗುವ ಅನೇಕ ರೀತಿಯ ಗಿಡಮೂಲಿಕೆಗಳು ದೇಸಿಗರ ರೋಗರುಜಿನೆಗಳಿಗೆ ಔಷಧಿಯಾಗಿ ಬಳಕೆಯಾಗುತ್ತಿದ್ದವು.

ಮಾನವನ ಸಮಸ್ತ ವಿಕಾಸಕ್ಕೆ ಪ್ರಕೃತಿ ಹೇಗೆ ಕಾರಣವೋ, ಹಾಗೆಯೇ ಅವನ ಎಲ್ಲಾ ಚಟುವಟಿಕೆಗಳನ್ನು ನಿರ್ದೇಶಿಸುವಲ್ಲಿಯೂ ಅಷ್ಟೇ ಮುಖ್ಯವಾಗುತ್ತದೆ. "ಯಾರು ಬದುಕಲಿ, ಯಾರು ಸಾಯಲಿ, ಯಾರು ಹುಟ್ಟಲಿ, ಹುಟ್ಟದೆ ಹೋಗಲಿ ಮಳೆಗಾಲ ನಿಲ್ಲುತ್ತದೆಯೇ?. ತನ್ನ ದುರ್ದಮ್ಯ ವ್ಯಾಪಾರಗಳನ್ನು ನಿರ್ಲಕ್ಷ್ಯವಾಗಿ ನಿರ್ದಾಕ್ಷಿಣ್ಯವಾಗಿ ಸಾಗಿಸಿತ್ತು ಬೃಹತ್ ಪ್ರಕೃತಿ. ಆ ಪ್ರಕೃತಿಯ ಪ್ರತಿರೂಪವಾದ ಸಹ್ಯಾದ್ರಿ ಪರ್ವತ ಕಾನನ ಶ್ರೇಣಿ ಮನುಷ್ಯರ ಅಲ್ಪ ಸುಖ ದುಃಖಗಳಿಗೆ ಸಂಪೂರ್ಣ ನಿಸ್ಸಂಗಿಯಾಗಿ ಭೀಷಣ ವರ್ಷ ಧಾರೆಯಲ್ಲಿ ತೊಪ್ಪನೆ ತೋಯುತ್ತಾ ಹಬ್ಬಿ ಕೊಬ್ಬಿ ನಿಂತಿತ್ತು".[26] ಆ ಸಹ್ಯಾದ್ರಿಯ ಮಲೆಕಾಡು ಮಳೆ ಮಲೆನಾಡಿನ ಜನರನ್ನು ಗದ್ದೆಯ ಕೆಲಸಕ್ಕೆ ಪ್ರೇರೇಪಿಸುವ ಮೂಲಕ, ಅವರಲ್ಲಿ ಬದುಕಿನ ಚಟುವಟಿಕೆಗಳಿಗೆ ಸ್ಫೂರ್ತಿಯನ್ನು ನೀಡುವ ಮೂಲಕ ಜೀವನೋತ್ಸಾಹದ ಸಂಕೇತವಾಗಿದ್ದವು. ಪ್ರಕೃತಿಯ ಶಕ್ತಿ ಅನಂತವಾದದ್ದು, ಜೀವನ್ಮುಖಿಯಾದುದ್ದು ಮತ್ತು ಮಾನವನ ಬದುಕಿನ ಜಂಜಾಟಗಳಿಗೆ ವೇದಿಕೆಯಾಗಿ ಬದುಕಿನ ಪಾತ್ರಗಳಲ್ಲೊಂದಾಗಿ ಹೊರಹೊಮ್ಮುವುದನ್ನು ಕುವೆಂಪುರವರ ಕಾದಂಬರಿಗಳಲ್ಲಿ ಕಾಣಬಹುದು.

ಥಾಮಸ್ ಹಾರ್ಡಿಯಯವರ ಕಾದಂಬರಿಗಳಲ್ಲಿಯೂ ಸಹ ವೆಸೆಕ್ಸ್ ಪ್ರದೇಶದ ಭೌಗೋಳಿಕ ಪರಿಸರದ ಹಿನ್ನೆಲೆಯಲ್ಲಿ ಪ್ರಕೃತಿ ಮತ್ತು ಮಾನವನ ಸಂಬಂಧಗಳನ್ನು ಅತ್ಯಂತ

ನೈಜವಾಗಿ ಮತ್ತು ಸ್ವಾಭಾವಿಕವಾಗಿ ಅಭಿವ್ಯಕ್ತಗೊಳಿಸಿರುವುದನ್ನು ಕಾಣಬಹುದು. ವೆಸೆಕ್ಸ್‌ನ ಅತ್ಯಂತ ರಮಣೀಯವಾದ ಪ್ರಕೃತಿ, ಅಲ್ಲಿನ ಬೆಟ್ಟಗುಡ್ಡ, ಕಣಿವೆಗಳಲ್ಲಿ ಕಾಣಬಹುದು. ಅದಕ್ಕಿಂತ ಮುಖ್ಯವಾಗಿ ವೆಸೆಕ್ಸ್‌ನ ಪ್ರಕೃತಿಯ ಮಕ್ಕಳು ಅಂದರೆ ಅಲ್ಲಿನ ನಿವಾಸಿಗಳು ಎಷ್ಟೇ ಕಷ್ಟಕಾರ್ಪಣ್ಯದಲ್ಲಿಯೇ ಇದ್ದರೂ ಸಹಿಷ್ಣುತಾಭಾವದ ಜೀವಿಗಳಾಗಿದ್ದರು. ಪ್ರಕೃತಿಯ ಜೊತೆ ಜೊತೆಗೆ ಕಾದಂಬರಿಯ ಪಾತ್ರಗಳು ಭಾವನಾತ್ಮಕವಾಗಿ ಬೆಸೆದುಕೊಂಡಿರುವುದನ್ನು ಕಾಣುತ್ತೇವೆ.[27] ವೆಸೆಕ್ಸ್‌ನ ದೇಸಿಯ ಪರಿಸರದ ಜನರು ಅಲ್ಲಿನ ಪ್ರಕೃತಿಯ ಭಾಗವಾಗಿದ್ದರು. ಆದರೆ ಋತುಗಳಲ್ಲಿ ಪ್ರಕೃತಿ ಬದಲಾದರೂ ಆ ಜನ ಮಾತ್ರ ಬದಲಾಗದೆ ನಿಶ್ಚಲವಾಗಿದ್ದರು ಎನ್ನುವುದನ್ನು ಕಾಣುತ್ತೇವೆ. ಅಸಂಸ್ಕೃತವಾದ, ಒರಟಾದ, ಪುರಾತನವಾದ, ಮಂದಮತಿಯ ಹಳ್ಳಿಗರು ರಮಣೀಯ ಪ್ರಕೃತಿಯಲ್ಲಿ ಲೀನವಾಗಿದ್ದರು. ತಮ್ಮ ಬದುಕಿನ ನಾಟಕದಲ್ಲಿ ಪ್ರಕೃತಿಯನ್ನು ಭಾಗಿಯನ್ನಾಗಿ ಮಾಡಿಕೊಂಡಿದ್ದರು. ಅನೇಕ ವೃತ್ತಿಯ, ಕಸುಬಿನ ಹಳ್ಳಿಗರು, ಜಮೀನ್ದಾರರು, ಹೊರಗಿನಿಂದ ಬಂದು ಎಗ್ಡನ್ನಿನಲ್ಲಿ ನೆಲೆಸಿದ್ದವರು ವೆಸೆಕ್ಸ್‌ನ ಜೀವನಾಡಿಯಾಗಿದ್ದರು ಮತ್ತು ಆ ಮಣ್ಣಿಗೆ ಹತ್ತಿರವಾಗಿದ್ದು ಎಲ್ಲಕ್ಕಿಂತ ಮಿಗಿಲಾಗಿ ಆ ಮಣ್ಣಿನ ಭಾಗವಾಗಿದ್ದರು.[28]

ಹಾರ್ಡಿಯವರ ಕಾದಂಬರಿಗಳ ಪಾತ್ರಗಳನ್ನು ಅವರು ಪ್ರಕೃತಿಯೊಡನೆ ಬೆಳೆಸಿಕೊಂಡಿರುವ ಸಂಬಂಧಕ್ಕನುಗುಣವಾಗಿ ವಿಂಗಡಿಸಬಹುದು. <u>'ದಿ ರಿಟರ್ನ್ ಆಫ್ ದಿ ನೇಟಿವ್'</u> ಕಾದಂಬರಿಯಲ್ಲಿ ಕ್ಲಿಮ್, ಶ್ರೀಮತಿ ಯೋಬ್ರೈಟ್, ತೋಮಸಿನ್ ಮತ್ತು ವೆನ್ನ್ ಒಂದು ಗುಂಪಾಗಿ ಎಗ್ಡನ್ ಹೀತ್‌ನ ಉತ್ಪನ್ನಗಳಾಗಿದ್ದರು. ಅವರಷ್ಟು ಎಗ್ಡನ್ನಿನ ಪ್ರಕೃತಿಯನ್ನು ಕಾದಂಬರಿಯ ಬೇರೆ ಪಾತ್ರಗಳು ಪ್ರೀತಿಸುವುದಿಲ್ಲ, ಅದರಲ್ಲಿ ಬೆರೆಯುವುದಿಲ್ಲ ಮತ್ತು ಅರ್ಥಮಾಡಿಕೊಳ್ಳುವುದಿಲ್ಲ, ಬದಲಾಗಿ ಆ ಪ್ರದೇಶದಿಂದಲೆ ಹೊಂಚು ಹಾಕಿ ಪಲಾಯನ ಮಾಡಲು ಕಾಯುತ್ತಿರುತ್ತಾರೆ. ಈ ವರ್ಗದಲ್ಲಿ ಯುಸ್ಟೇಷಿಯ ಮತ್ತು ವೈಲ್ಡೀವ್ ಇಬ್ಬರು ಸೇರುತ್ತಾರೆ.[29]

ಕ್ಲಿಮ್ ಯೋಬ್ರೈಟ್‌ನಂತೆಯೇ ಎಗ್ಡನ್ನಿನ ಪ್ರಕೃತಿಯ ಮತ್ತೊಂದು ಜೀವವೆಂದರೆ ತೋಮಸಿನ್, ಆಕೆಯ ಸರಳತೆ, ಮುಗ್ಧತೆ ಸ್ವಭಾವ ಆ ಎಗ್ಡನ್ನಿನ ಪ್ರಕೃತಿಗೆ ಒಪ್ಪುವಂತವು. ಮಣ್ಣಿನ ಮನೋಧರ್ಮಕ್ಕೆ ಅನುಗುಣವಾದ ಅಕೆಯ ಚೆಲುವು, ನಿಷ್ಠೆ ಮೆಚ್ಚುವಂತಹದ್ದಾಗಿದೆ. ಆಕೆಯ ವಿಶಿಷ್ಟವಾದ ವ್ಯಕ್ತಿತ್ವವನ್ನು ವರ್ಣಿಸಲು "ಆಕೆಯನ್ನು ಹಳ್ಳಿ, ಗೂಡು, ಅರಳುವ ಹೂ ಚೆಸ್ಟ್‌ನಟ್, ಕಡುಗೆಂಪು ಬಣ್ಣ" ಮುಂತಾದ ವಿಶೇಷಣಗಳನ್ನು ಬಳಸಿರುವುದನ್ನು ಗಮನಿಸಿದರೆ ತೋಮಸಿನ್ ಪ್ರಕೃತಿಯ ಭಾಗವಾಗಿದ್ದಳು ಎನ್ನಬಹುದು. ಕಾದಂಬರಿಯಲ್ಲಿ ಯಾವ ಪಾತ್ರಗಳು ಪ್ರಕೃತಿಯ ಜೊತೆಗೆ ಸೌಹಾರ್ದಯುತವಾದ ಸಂಬಂಧವನ್ನಿಟ್ಟುಕೊಂಡಿದ್ದರೋ ಅವರು ಕೊನೆಯವರೆಗೂ

ಎಗ್ಡನ್ ಹೀತ್‌ನ ಪರಿಸರದಲ್ಲಿ ತಮ್ಮ ಅಸ್ತಿತ್ವನ್ನುಳಿಸಿಕೊಂಡಿದ್ದರು, ಆದರೆ ಯಾರು ಪ್ರಕೃತಿಯ, ನಿಸರ್ಗ ಸಹಜ ಧರ್ಮದ ವಿರುದ್ಧ ನಡೆದರೆ ಅವರು ಅಕಾಲಿಕ ಅಂತ್ಯವನ್ನು ಪಡೆಯುವುದನ್ನು ಕಾಣುತ್ತೇವೆ, ಅಂತಹವರಲ್ಲಿ ಯುಸ್ಟೇಷಿಯ ಮತ್ತು ವೈಲ್ಡಿವ್ ಅವರನ್ನು ಕಾಣಬಹುದು.

ಥಾಮಸ್ ಹಾರ್ಡಿಯವರು 'ದಿ ರಿಟರ್ನ್ ಆಫ್ ದಿ ನೇಟಿವ್' ಕಾದಂಬರಿಯ ಪ್ರಾರಂಭದಲ್ಲಿ ಯುಸ್ಟೇಷ್ಯಳನ್ನು ಪ್ರಕೃತಿಗಿಂತ ಮೇಲುಸ್ತರದ, ಅತಿಮಾನುಷ ಶಕ್ತಿಯುಳ್ಳ ದೇವತೆಯಂತೆ ವರ್ಣಿಸುತ್ತಾರೆ.[30] ಯುಸ್ಟೇಷ್ಯ ಎಗ್ಡನ್ನಿನ ಮೇಲ್ಮಟ್ಟದ ಗಾಳಿಯ ಜೊತೆಗೆ ಪ್ರಕೃತಿಯನ್ನು ಅವಲೋಕಿಸುವ ರೀತಿ, ಸೂರ್ಯಾಸ್ತದ ನಂತರ ಪ್ರಕೃತಿಗೆ ಜೊತೆಯಾಗಿ, ರಾತ್ರಿಯ ರಾಣಿಯಾಗಿ, ನಿಶಾಚರ ಪಾತ್ರಧಾರಿಯಾಗಿ, ಕತ್ತಲೆಗೆ ಅರ್ಥವನ್ನು ತುಂಬುವ ವ್ಯಕ್ತಿತ್ವ ಆಕೆಯದು. ಆಕೆಯ ಅಸ್ತಿತ್ವ ಎಗ್ಡನ್ನಿನ ಕುರುಚಲು ಗುಡ್ಡಗಳಿಗೆ ಪರಿಪೂರ್ಣತೆಯನ್ನು, ನಯ-ನಾಜುಕನ್ನು ಮತ್ತು ಸಂಪೂರ್ಣತೆಯನ್ನು ತುಂಬಿಕೊಟ್ಟಿದೆ. ಯುಸ್ಟೇಷ್ಯ ನಿಜವಾಗಿಯೂ ಪ್ರಕೃತಿಯ ಭಾಗವಾಗಿದ್ದಳು ಎಂದು ಮೊದಮೊದಲು ಹೇಳುವ ಕೃತಿಕಾರರು ನಂತರ ಆಕೆ ಪ್ರಕೃತಿಯ ವಿರುದ್ಧ ಸೆಟೆದು ನಿಂತಾಗ ಅವನತಿಗೆ ಹತ್ತಿರವಾದಳು ಎಂಬುದನ್ನು ಕಾದಂಬರಿಯ ಕೊನೆಯಲ್ಲಿ ಕಾಣಬಹುದಾಗಿದೆ.

ಎಗ್ಡನ್ನಿನ ಕಾಡಿನಲ್ಲಿ ಯುಸ್ಟೇಷ್ಯಳ ನಡಿಗೆ ವಿಚಿತ್ರವಾಗಿತ್ತು. ಆಕೆಯ ವಿಚಿತ್ರ ನಡಿಗೆಯಿಂದ ಪ್ರಕೃತಿಯ ಪ್ರಶಾಂತತೆಗೆ ಭಂಗವುಂಟಾಗುತ್ತಿತ್ತು, ಏಕೆಂದರೆ ಆಕೆ ತನ್ನ ಚೆಲುವಿನಿಂದ ಪ್ರಕೃತಿಯ ಚಲುವನ್ನು ಮರೆಯಾಗಿಸುತ್ತಿದ್ದಳು ಎಂದು ಕಾದಂಬರಿಕಾರರು ವರ್ಣಿಸುತ್ತಾರೆ. ಆಕೆಯ ವಿಚಿತ್ರ ಹೆಜ್ಜೆಗಳು ಸಾಂಕೇತಿಕವಾಗಿ ಆಕೆಯ ಮನದಾಳದಲ್ಲಿ ಎಗ್ಡನ್ ಹೀತ್‌ನ ಬಗ್ಗೆ ಪುಟಿದೇಳುತ್ತಿದ್ದ ದ್ವೇಷವನ್ನು ಸೂಚಿಸುತ್ತವೆ. ಎಗ್ಡನ್ನಿನ ರಾತ್ರಿಯ ರಾಣಿಯಾಗಿದ್ದವಳು, ಪ್ರೇಮದ ರಾಣಿಯಾಗಿದ್ದವಳು, ಪ್ರಕೃತಿಯ ರಾಣಿಯಾಗಿರಬೇಕಾಗಿದ್ದವಳು, ಪ್ರಕೃತಿಯ ಶತ್ರುವಾಗುವುದು ನಿಜಕ್ಕೂ ಕ್ರೂರ ವ್ಯಂಗ್ಯವೇ ಸರಿ. ಆಕೆಯ ಜೀವನವನ್ನು ಬದಲಾಯಿಸಿದ ಆ ಕ್ರೂರ ವ್ಯಂಗ್ಯವೇ ವಿಧಿಯಿರಬಹುದೇ, ಏಕೆಂದರೆ ಎಗ್ಡನ್ ಹೀತ್‌ನ ಸ್ವಭಾವವೆಂದರೆ, ಯಾರಿಗೂ ಅಲ್ಲಿನ ಪ್ರಕೃತಿಯ ವಿಧಿಯ ವಿರುದ್ಧ ಹೋಗಲು ಅವಕಾಶ ಕೊಡುತ್ತಿರಲಿಲ್ಲ, ಒಂದು ವೇಳೆ ಆ ವಿಧಿಯ ವಿರುದ್ಧ ಹೋದರೆ ಅದು ಅವರ ಅಂತ್ಯವೇ ಸರಿ. ಯುಸ್ಟೇಷ್ಯಳಲ್ಲಿ ಮನೆಮಾಡಿದ್ದ ಅಹಂಕಾರ, ತಾನು ಪ್ರಕೃತಿಗಿಂತ, ಆ ಪರಿಸರದಲ್ಲಿ ವಾಸವಾಗಿದ್ದ ಇತರರಿಗಿಂತ, ಶ್ರೇಷ್ಠಳು ಎಂಬ ಭಾವನೆ, ತನ್ನ ಸೌಂದರ್ಯದ ಬಗ್ಗೆ ಅತಿಯಾದ ಅಹಂ, ತನ್ನ ಅಪರಿಮಿತ ಸಾಮರ್ಥ್ಯ, ಧೈರ್ಯ ಆಕೆ ಪ್ರಕೃತಿಯ ವಿರುದ್ಧ ಹೋಗಲು ಪ್ರೇರೇಪಣೆಯಾಯಿತು, ಇದು ಆಕೆಯ ದುರಂತ ಸಾವಿಗೆ ಕಾರಣವಾಯಿತು ಎನ್ನಬಹುದು.

ಥಾಮಸ್ ಹಾರ್ಡಿಯವರ ಕಾದಂಬರಿಗಳಲ್ಲಿ ಎಗ್ಡನ್ ಹೀತ್‌ನ ಪರಿಸರ ಮಾನವ ಪಾತ್ರಗಳಂತೆಯೇ ಬಹುಮುಖ್ಯ ಪಾತ್ರವಾಗಿ ಚಿತ್ರಿತವಾಗಿದೆ. ಎಗ್ಡನ್ನಿನ ಭೌತಪರಿಸರ ಕಾದಂಬರಿಯ ಪಾತ್ರಗಳ ಮನೋಭಿಲಾಷೆಯ ಮೇಲೆ ಗಾಢವಾದ ಪ್ರಭಾವ ಬೀರುವುದನ್ನು ಕಾಣಬಹುದು. ವಿಶೇಷವಾಗಿ ಕ್ಲೀಮ್ ಮತ್ತು ಯುಸ್ಟೇಷ್ಯರ ಬದುಕಿನಲ್ಲಿ ಎಗ್ಡನ್ನಿನ ಪ್ರಕೃತಿ ಅವರ ಬದುಕಿನ ದಿಕ್ಕನ್ನೇ ಬದಲಾಯಿಸಿತು. ಇಬ್ಬರೂ ಪ್ರೇಮಿಗಳು ಆ ಪರಿಸರದಿಂದ ಮಾನಸಿಕವಾಗಿ ಭ್ರಾಂತಿಗೊಳಗಾಗುತ್ತಾರೆ. ಒಬ್ಬರು ಆ ಪ್ರದೇಶದ ಸೌಂದರ್ಯಕ್ಕೆ ಮಾರುಹೋದರೆ, ಮತ್ತೊಬ್ಬರು ಅದರ ಕುರೂಪತನಕ್ಕೆ ಬೇಸತ್ತುಕೊಳ್ಳುತ್ತಾರೆ. ಇಬ್ಬರ ಸಾಮಾಜಿಕ, ಸಾಂಸಾರಿಕ ಬದುಕು ಬಿರುಕುಗೊಳ್ಳಲು ಅವರು ಜೀವಿಸಿದ್ದ ಪರಿಸರವೇ ಕಾರಣವಾಗುತ್ತದೆ, ಹೀಗೆ ಅವರ ಉಳಿವಿಗೆ ಮತ್ತು ಅಳಿವಿಗೆ ಎಗ್ಡನ್ ಹೀತ್ ಪರಿಸರವೇ ಕಾರಣವಾಗುವುದನ್ನು ಗುರುತಿಸಬಹುದಾಗಿದೆ.[31]

ಹಾರ್ಡಿಯವರ ಕಾದಂಬರಿಗಳಲ್ಲಿ ಪ್ರಕೃತಿ ಮತ್ತು ಪಾತ್ರಗಳನ್ನು ಕುರಿತು ಡೇವಿಡ್ ಕೆಲ್ಲಿಯವರ ಹೇಳಿಕೆ ವಾಸ್ತವತೆಯಿಂದ ಕೂಡಿದೆ ಎನ್ನಬಹುದು. ಅವರ ಪ್ರಕಾರ "ಹಾರ್ಡಿಯವರು, ‘ದಿ ರಿಟರ್ನ್ ಆಫ್ ದಿ ನೇಟಿವ್' ಕಾದಂಬರಿಯ ಪ್ರಾರಂಭದಲ್ಲಿ ಎಗ್ಡನ್ ಹೀತ್ ಪರಿಸರದ ರಮಣೀಯ ದೃಶ್ಯಗಳನ್ನು ಪರಿಚಯಿಸಿ ಕೊಟ್ಟ ನಂತರ ಇನ್ನಿತರ ಪಾತ್ರಗಳ ವಿವರಣೆ ನೀಡುವುದರ ಮೂಲಕ ಆ ಕಾದಂಬರಿಯಲ್ಲಿ ಪ್ರಕೃತಿಯ ಪಾತ್ರ ಎಷ್ಟು ಮಹತ್ತರವಾಗಿದೆ ಎನ್ನುವುದು ಅರ್ಥವಾಗುತ್ತದೆ. ಆ ಕಾದಂಬರಿಯಲ್ಲಿ ಮೂಡಿಬರುವ ನೈಸರ್ಗಿಕ ದೃಶ್ಯಗಳು ಸಾಂಕೇತಿಕವಾಗಿ ಅಲ್ಲಿನ ನಿವಾಸಿಗಳ ಬದುಕಿನ ಚಿತ್ರಣವಾಗಿದೆ. ಅಲ್ಲಿನ ಅಷ್ಟೇನೂ ಭಯಂಕರವಾಗಿರದ, ದ್ವೇಷಿಸಲು ಕಾರಣವಿಲ್ಲದ, ಕುರೂಪಿಯಲ್ಲದ, ಆದರೆ ಸಾಮಾನ್ಯವಾದ, ಸಹಜವೆನಿಸುವ ಅರ್ಥಮಾಡಿಕೊಳ್ಳಬಹುದಾದ, ಮನುಷ್ಯರ ಸ್ವಭಾವದಂತಿರುವ ಪರಿಸರವದು. ಅಲ್ಲಿನ ನಿವಾಸಿಗಳು ಎಗ್ಡನ್ನಿನ ಪರಿಸರವನ್ನೆ ಬಾಹ್ಯರೂಪದಲ್ಲಿ ಮತ್ತು ಆಂತರಿಕವಾಗಿ ಹೋಲುವಂತವರು.[32] ಶ್ರೀಮತಿ ಯೋಬ್ರೈಟ್ ಮಗನ ಮನೆಯಿಂದ ತಿರಸ್ಕರಿಸಲ್ಪಟ್ಟು ವಾಪಸ್ಸಾಗುತ್ತಿದ್ದಾಗ ಆಕೆಯ ಮನದ ಬೇಗುದಿ ಮತ್ತು ಆಗಸ್ಟ್ ತಿಂಗಳ ತೀಕ್ಷಣವಾದ ಸುಡುಬಿಸಿಲು ಒಂದಕ್ಕೊಂದು ಬೆಸೆದು ಕೊಂಡಿರುವುದನ್ನು ಕಾಣಬಹುದು. ಹಾಗೆಯೇ ಯುಸ್ಟೇಷ್ಯ ಜೀವನದ ಬಗ್ಗೆ ಮತ್ತು ಎಗ್ಡನ್ನಿನ ಪರಿಸರದ ಬಗ್ಗೆ ಜಿಗುಪ್ಸೆಗೊಂಡು ಮನೆಯಿಂದ ಹೊರಗೆ ನಡೆದಾಡುವಾಗ ತನ್ನ ಮನಸ್ಸಿನ ಉದ್ವೇಗ, ಗಲಿಬಿಲಿ, ಮನಃಕ್ಷೋಭೆಯನ್ನು ಸಾಂಕೇತಿಕವಾಗಿ ಅಸ್ತವ್ಯಸ್ತವಾಗಿ ಇರುವ ಆ ಪರಿಸರದಲ್ಲಿ ಕಾಣುತ್ತಾಳೆ. ಆಕೆಯ ಮನಸ್ಸು ಮತ್ತು ಹೊರಗಿನ ಪರಿಸ್ಥಿತಿ ಒಂದೇ ರೀತಿಯಲ್ಲಿ ಕಾಣುತ್ತದೆ. ಆದರೆ ಸುತ್ತಮುತ್ತಲ ನಿವಾಸಿಗಳ ನಿರುದ್ವಿಗ್ನ ಮನಸ್ಥಿತಿ ಮತ್ತು ಎಗ್ಡನ್ ಪ್ರಕೃತಿ

ಪ್ರಶಾಂತವಾಗಿ ಕಾಣುತ್ತದೆ. ಇದರ ಪ್ರಕಾರ ಎಗ್ಡನ್ ಹೀತ್ ಮತ್ತು ಅಲ್ಲಿನ ನಿವಾಸಿಗಳ ಮನೋಭಾವ ಒಂದೇ ರೀತಿಯಾಗಿರುವುದು ತಿಳಿಯುವುದು.[33]

'ದಿ ರಿಟರ್ನ್ ಆಫ್ ದಿ ನೇಟಿವ್' ಕಾದಂಬರಿಯ ಮತ್ತೊಂದು ಪ್ರಮುಖ ಪಾತ್ರ ಡಿಗೊರಿ ವೆನ್. ಈ ಪಾತ್ರ ಎಲ್ಲಾ ರೀತಿಯಲ್ಲಿಯೂ ಎಗ್ಡನ್ನಿನ ಪ್ರತಿರೂಪವೇ ಆಗಿದೆ. ಕಾವಿಬಣ್ಣ ಮಾರುವ ವೆನ್‌ನ ಮೈ ಬಣ್ಣ, ಕೂದಲು ಎಲ್ಲವೂ ಕಾವಿಮಯವಾಗಿದ್ದು, ಹೊರಗಿನ ನೋಟಕ್ಕೆ ಮನುಷ್ಯನಂತೆಯೇ ಕಾಣದಿರುವ ಪಾತ್ರ. ಆ ಪ್ರಕೃತಿಯ ಒಂದಂಶವಾಗಿ, ಅದರ ಭಾಗವಾಗಿ, ಎಗ್ಡನ್ನಿನ ಮಣ್ಣಿನಲ್ಲೇ ಬೆಸೆದುಕೊಂಡಿರುವ ಮನುಷ್ಯಾಕೃತಿ ಎನ್ನಬಹುದು. ಹೀಗೆ ಈ ಕಾದಂಬರಿಯಲ್ಲಿ ಪ್ರತಿಯೊಂದು ಪಾತ್ರವೂ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿಯಾದರೂ ಎಗ್ಡನ್ನಿನ ಪರಿಸರದಲ್ಲಿ ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳುವುದರ ಮೂಲಕ ಆ ಪ್ರಕೃತಿಯ ಜೊತೆಗೆ ತಮ್ಮ ಬದುಕನ್ನು ಬೆಸೆದುಕೊಂಡಿದ್ದವು.

ಹಾರ್ಡಿಯವರ 'ಟೆಸ್ ಆಫ್ ದಿ ಡಿ ಅರ್ಬರ್‌ವಿಲ್ಲೆ' ಕಾದಂಬರಿಯ ಪ್ರಾರಂಭದಲ್ಲಿ ಟೆಸ್‌ಳ ಚಿತ್ರಣವನ್ನು ನೀಡಿದ ನಂತರ ವೆಸೆಕ್ಸ್‌ನ ಭೌಗೋಳಿಕ ಹಿನ್ನೆಲೆ, ಅಲ್ಲಿನ ಪರಿಸರ, ಅಲ್ಲಿನ ಬದುಕು ಮತ್ತು ಪ್ರಕೃತಿಯ ಸಂಬಂಧಗಳನ್ನು ನಿರೂಪಿಸಿರುವುದನ್ನು ಕಾಣಬಹುದು. ಈ ಕಾದಂಬರಿಯಲ್ಲೂ ಸಹ ವೆಸೆಕ್ಸ್‌ನ ಪರಿಸರ ಅಲ್ಲಿನ ಪಾತ್ರಗಳ ಮೇಲೆ ಗಾಢವಾದ ಪ್ರಭಾವ ಬೀರಿರುವುದನ್ನು ಕಾಣುತ್ತೇವೆ. ವೆಸೆಕ್ಸ್‌ನ ಗ್ರಾಮೀಣ ಪ್ರದೇಶದ ಮುಗ್ಧ ಜನ ಮತ್ತು ಪ್ರಕೃತಿಯ ಹೆಸರಿಲ್ಲದ ಪಾತ್ರಗಳ ಕಥೆಯನ್ನು ಕಾದಂಬರಿ ಒಳಗೊಂಡಿದೆ. ಟೆಸ್ ಮತ್ತು ಇತರ ಪಾತ್ರಗಳ ಮನಃಸ್ಥಿತಿಯನ್ನು, ಜೀವನ ವಿಧಾನವನ್ನು, ಮನೋಭಾವವನ್ನು, ಅಲ್ಲಿನ ಪ್ರಕೃತಿ ಸಾಂಕೇತಿಕವಾಗಿ ಪ್ರತಿಬಿಂಬಿಸುವುದರ ಮೂಲಕ ಪ್ರಕೃತಿ ಮತ್ತು ಪಾತ್ರಗಳ ಮಹತ್ವವನ್ನು ಮತ್ತು ಸಂಬಂಧವನ್ನು ಅರಿಯಬಹುದು.[34] ವೆಸೆಕ್ಸ್‌ನ ಪ್ರಕೃತಿ ಅಲ್ಲಿನ ಪಾತ್ರಗಳಿಗೆ ಕನ್ನಡಿ ಹಿಡಿದಂತಿದೆ. ಟೆಸ್‌ಳ ಸಂತೋಷದ ದಿನಗಳನ್ನು ಟಾಲ್‌ಬೋತಿಯ ಸುಂದರವಾದ, ಸಮೃದ್ಧವಾದ, ಫಲವತ್ತಾದ ಪ್ರಕೃತಿ ಪ್ರತಿಬಿಂಬಿಸಿದರೆ, ಆಕೆಯ ನಿರಾಸೆಯ ಮಾನಸಿಕ ಯಾತನೆಯನ್ನು, ಮನಃಕ್ಷೋಬೆಯನ್ನು ಫ್ಲಿಂಟ್ ಕೊಂಬ್ ಆ್ಯಶ್ ಬಂಜರು ಪ್ರದೇಶ ಪ್ರತಿಬಿಂಬಿಸುತ್ತದೆ.

ಟೆಸ್ ಕಾದಂಬರಿಯ ದುರಂತ ನಾಯಕಿಯನ್ನು ವರ್ಣಿಸಲು ಬಳಸಿರುವ ನುಡಿಗಟ್ಟುಗಳಾದ, 'ನಿಷ್ಕಳಂಕ' 'ನಿಷ್ಕಲ್ಮಶ' 'ಪ್ರಕೃತಿಯ ಅಕ್ಷತ ಕನ್ಯೆ', 'ವೆಸೆಕ್ಸ್‌ನ ಮಣ್ಣಿನ ಮಗಳು' ಮುಂತಾದವು ಟೆಸ್ ಮತ್ತು ಪ್ರಕೃತಿ ನಡುವಿನ ಅನ್ಯೋನ್ಯ ಸಂಬಂಧವನ್ನು ನಿರೂಪಿಸುತ್ತವೆ.[35] ಏಂಜಲ್ ಕ್ಲೇರ್ ಆಧುನಿಕ ನಗರದ ಬದುಕಿಗೆ ಬೇಸತ್ತು ಹಳ್ಳಿಯ ಬದುಕಿಗೆ ಮನಸೋತು ಟಾಲ್

ಬೋತಿಗೆ ಬರುವುದು, ಅಲ್ಲಿ ಹೈನುಗಾರಿಕೆ ಮತ್ತು ಕೃಷಿಯ ಬಗ್ಗೆ ಅಧ್ಯಯನ ಮಾಡುವುದು ಅವನಿಗೆ ಪ್ರಕೃತಿಯ ಬಗ್ಗೆ ಇದ್ದ ಒಲವನ್ನು ಸೂಚಿಸುತ್ತದೆ. ಈ ಕಾದಂಬರಿಯ ಅನೇಕ ಪಾತ್ರಗಳು ತಾವು ವಾಸಿಸುವ ಪ್ರಕೃತಿಯ ಜೊತೆಗೆ ಸಂಬಂಧವನ್ನಿಟ್ಟುಕೊಂಡಿರುವುದನ್ನು ಕಾಣಬಹುದು. ವೆಸೆಕ್ಸ್‌ನ ಹವಾಮಾನ, ಋತುಗಳ ಜೊತೆಗೆ ಬದಲಾಗುವ ನೈಸರ್ಗಿಕ ಚಹರೆಗಳಂತೆ ಅಲ್ಲಿನ ಪಾತ್ರಗಳಲ್ಲೂ ಬದಲಾವಣೆಯನ್ನು ಕಾಣುತ್ತೇವೆ. 19ನೇ ಶತಮಾನದ ವೆಸೆಕ್ಸ್‌ನ ಗ್ರಾಮೀಣ ಪ್ರದೇಶದ ಜನರ ನೈಜವಾದ, ಪ್ರಕೃತಿದತ್ತವಾದ ಬದುಕಿನ ಜಂಜಾಟವನ್ನು ಟೆಸ್ಸ್ ಕಾದಂಬರಿ ಪ್ರತಿನಿಧಿಸುತ್ತದೆ. ವೆಸೆಕ್ಸ್‌ನ ಜನರು ಯಾವುದೇ ಆಧುನಿಕ ನಾಗರಿಕತೆಯ ಸೋಂಕಿಲ್ಲದ ನಿರುಪದ್ರವಿ ಮುಗ್ಧ ಮಣ್ಣಿನ ಮಕ್ಕಳು".[36] ಈ ವಿವರಣೆಯಿಂದಲೆ ವೆಸೆಕ್ಸ್‌ನ ಪರಿಸರ ಮತ್ತು ಅಲ್ಲಿನ ಪಾತ್ರಗಳ ಬಿಡಿಸಲಾರದ ಸಂಬಂಧವನ್ನು ತಿಳಿಯಬಹುದು.

ಕುವೆಂಪು ಮತ್ತು ಥಾಮಸ್ ಹಾರ್ಡಿಯವರ ಕಾದಂಬರಿಗಳನ್ನು ವಿಶ್ಲೇಷಿಸಿದಾಗ ತಿಳಿಯುವುದೇನಂದರೆ ಇಬ್ಬರೂ ಕೃತಿಕಾರರು ತಮ್ಮ ಕೃತಿಗಳಲ್ಲಿ ದೇಸಿಯತೆಯನ್ನು ಅಭಿವ್ಯಕ್ತಗೊಳಿಸಲು ಭೌಗೋಳಿಕ ಪರಿಸರ, ಸನ್ನಿವೇಶಗಳು, ಜೀವಸಂಕುಲ, ಮಾನವ ಮತ್ತು ಪ್ರಕೃತಿಯ ಸಂಬಂಧ ಮುಂತಾದ ವಿಷಯಗಳ ವೈವಿಧ್ಯತೆಯನ್ನು ಮತ್ತು ವಿಶಿಷ್ಟತೆಯನ್ನು ವಿವರಿಸಿರುವುದು. ಕುವೆಂಪುರವರ ಕಾದಂಬರಿಗಳಲ್ಲಿ ಮಲೆನಾಡಿನ ಪರಿಸರ, ಆ ಪರಿಸರದಲ್ಲಿನ ದೇಸಿಯ ಬದುಕು ಮತ್ತು ಪ್ರಕೃತಿಯೊಂದಿಗಿನ ಒಡನಾಟವನ್ನು ವಿವರಿಸಿದರೆ, ಥಾಮಸ್ ಹಾರ್ಡಿಯವರು ತಮ್ಮ ಕಾದಂಬರಿಗಳಲ್ಲಿ 19ನೇ ಶತಮಾನದ ದಕ್ಷಿಣ ಇಂಗ್ಲೆಂಡಿನ ವೆಸೆಕ್ಸ್ ಪ್ರದೇಶದ ಡಾರ್ಸೆಟ್ ಮತ್ತು ಎಗ್ಡನ್ ಹೀತ್‌ನ ದೇಸಿಯ ಬದುಕು ಮತ್ತು ಪ್ರಕೃತಿ ಮತ್ತು ಪಾತ್ರಗಳ ಸಂಬಂಧಗಳನ್ನು ಪರಿಚಯಿಸಿಕೊಟ್ಟಿದ್ದಾರೆ.

ಜಾಗತೀಕರಣದ ಹಿನ್ನೆಲೆಯಲ್ಲಿ ನೋಡಿದಾಗ ಆಧುನಿಕ ನಾಗರಿಕತೆಯ ಬೆಳವಣಿಗೆಯಿಂದ ನಗರೀಕರಣ, ಕೈಗಾರಿಕೀಕರಣ, ವಾಣಿಜ್ಯೀಕರಣಗೊಳ್ಳುತ್ತಿರುವ ಕಾರಣದಿಂದ ಮಾನವನ ಸಂಬಂಧಗಳು ಮತ್ತು ದೇಸಿಯ ಬದುಕು ನಿಧಾನವಾಗಿಯಾದರೂ, ಆದರೆ ಸ್ಪಷ್ಟವಾಗಿ ಕಣ್ಮರೆಯಾಗುತ್ತಿದೆ. ಜನಸಂಖ್ಯೆ ಬೆಳೆದಂತೆಲ್ಲಾ ಆಧುನಿಕ ಜೀವನ ಶೈಲಿಯ ಪರಿಕರಗಳು, ವಸತಿ ಮತ್ತು ಅವಶ್ಯ ವಸ್ತುಗಳನ್ನು ಪೂರೈಸಲು ಪ್ರಕೃತಿಯ ನಾಶ ಸಾಮಾನ್ಯವಾಗಿದೆ. ಇದರಿಂದ ಸಸ್ಯ ಮತ್ತು ಪ್ರಾಣಿಸಂಕುಲಗಳ ನಾಶವನ್ನು ಕಾಣುತ್ತಿದ್ದೇವೆ. ಕುವೆಂಪುರವರ ಕಾದಂಬರಿಗಳಲ್ಲಿ ಬರುವ ವೈವಿಧ್ಯಮಯ ಪ್ರಾಣಿ ಪಕ್ಷಿಗಳ ಜಗತ್ತು, ಕಾಡು ಕಣಿವೆ ಬೆಟ್ಟ ಗುಡ್ಡಗಳು ಇಂದು ಬರಿಯ ನೆನಪಷ್ಟೆ, ಅವುಗಳನ್ನು ಕೇವಲ ಕಾದಂಬರಿಯಲ್ಲಿ ಮಾತ್ರ ಓದಬಹುದಷ್ಟೆ ಏಕೆಂದರೆ ಅವುಗಳೆಲ್ಲ

ಇಂದು ಮಾನವನ ದುರಾಸೆಗೆ ಬಲಿಯಾಗುತ್ತಿವೆ. ಹಾಗೆಯೇ ಹಾರ್ಡಿಯವರ ಕಾದಂಬರಿಯಲ್ಲಿ ಬರುವ ವೆಸೆಕ್ಸ್‌ನ ಗ್ರಾಮೀಣ ಪರಿಸರ ಮತ್ತು ದೇಸಿಯ ಬದುಕು ಕೈಗಾರಿಕೇಕರಣ ಮತ್ತು ನಗರೀಕರಣದಿಂದ ಕಣ್ಮರೆಯಾಗಿದೆ.

ಅತಿಯಾದ ಗ್ರಾಹಕ ಸಂಸ್ಕೃತಿಯಿಂದ ದೇಸಿಯ ಬದುಕು ಅತಂತ್ರವಾಗಿದೆ. ಸಾಂಪ್ರದಾಯಿಕ ಉಡುಗೆ-ತೊಡುಗೆ, ಆಹಾರ ಪದ್ಧತಿ, ಆಚಾರ ವಿಚಾರಗಳಲ್ಲಿ ಕ್ರಾಂತಿಯಾಗಿದೆ. ದೇಸಿಯ ಸಂಸ್ಕೃತಿಯ ಮೇಲೆ ಜಾಗತೀಕರಣದ ಪ್ರಭಾವ ಎದ್ದು ಕಾಣುತ್ತಿದೆ. ನೆಲ, ಜಲ, ನೈಸರ್ಗಿಕ ಸಂಪತ್ತು ಇಂದು ಅಪವಿತ್ರಗೊಂಡು ಕಲ್ಮಶಗೊಂಡು ಈ ಭೂಮಿಯನ್ನು ಭ್ರಷ್ಟಗೊಳಿಸಲಾಗುತ್ತಿದೆ. ದೇಸಿಯ ಸಂಸ್ಕೃತಿಯ ಕೇಂದ್ರಗಳಾಗಿದ್ದ ಸಾಂಪ್ರದಾಯಿಕ ಹಳ್ಳಿಗಳು ಇಂದು ಜಾಗತಿಕ ಹಳ್ಳಿಗಳಾಗಿವೆ. ಅಂದು ಹಳ್ಳಿಗರಿಗೆ ತಮ್ಮ ನೆರೆಹೊರೆಯ ಊರುಗಳೇ ಪರದೇಶಗಳಾಗಿದ್ದವು, ಇಂದು ಪರದೇಶಗಳು ನೆರೆಹೊರೆಯ ಹಳ್ಳಿಗಳಾಗಿವೆ. 19ನೇ ಶತಮಾನದ ಗ್ರಾಮೀಣ ಇಂಗ್ಲೆಂಡಿನ ಬದುಕು ರೈಲುಗಾಡಿಗಳ ಆಗಮನದಿಂದ, ಯಾಂತ್ರಿಕ ಕೃಷಿ ಪರಿಕರಗಳಿಂದ ದೇಸಿಯ ಸಂಸ್ಕೃತಿಗೆ ಮಾರಕವಾಗಿ, ಕೈಗಾರಿಕೀರಣಗೊಂಡು ದೇಸಿಗರು ನಗರ ಪಟ್ಟಣಗಳಿಗೆ ವಲಸೆಹೋಗುವುದನ್ನು ಕಾಣುತ್ತೇವೆ. ಯಂತ್ರ ನಾಗರೀಕತೆಯು ದೇಸಿಯ ಜನರ ಬದುಕನ್ನು ನರಕವಾಗಿಸುವುದನ್ನು ಹಾರ್ಡಿಯವರು ತಮ್ಮ ಕಾದಂಬರಿಗಳಲ್ಲಿ ವಿವರಿಸಿ ಹೇಳಿದ್ದಾರೆ. ಅಂದಿನ ಸಾಂಪ್ರದಾಯಿಕ ಆಚರಣೆಗಳಲ್ಲೊಂದಾದ ವಿವಾಹಗಳು ಇಂದು ಆಡಂಬರದ, ಪ್ರತಿಷ್ಠೆಯ ಸಂಕೇತಗಳಾಗಿವೆ. ಧಾರ್ಮಿಕ, ನೈತಿಕ, ಸಾಮಾಜಿಕ, ಸಾಂಪ್ರದಾಯಿಕ ನೆಲೆಗಟ್ಟಿನಲ್ಲಿ ನಡೆಯುತ್ತಿದ್ದ ವಿವಾಹಗಳು ಗಂಡು ಹೆಣ್ಣಿನ ಅನ್ಯೋನ್ಯ ಸಂಬಂಧಗಳಿಗೆ ಸಾಕ್ಷಿಯಾಗಿದ್ದವು, ಆದರೆ ಇಂದು ಅಂತಹ ಸಂಬಂಧಗಳು ನಶಿಸಿ ಹೋಗಿ, ಇಂದು ವಿವಾಹಗಳು ಕೇವಲ ಯಾಂತ್ರಿಕ ಬದುಕಿನಲ್ಲಿ ಲೀನವಾಗಿ ಸಂಬಂಧಗಳು ಜೊಳ್ಳಾಗುತ್ತಿವೆ. ಹೀಗೆ ಸಾಂಪ್ರದಾಯಿಕ, ಸಾಮಾಜಿಕ, ನೈತಿಕತೆಯ ಪ್ರತಿರೂಪವಾಗಿದ್ದ ದೇಸಿಯ ಬದುಕು ಜಾಗತೀಕರಣದಿಂದ ನಾಶವಾಗುತ್ತಿರುವುದನ್ನು ಕಾಣುತ್ತಿದ್ದೇವೆ.

3.4 ಸಾಮಾಜಿಕ ಪರಿಸರ:

ಒಂದು ಶ್ರೇಷ್ಠ ಸಾಹಿತ್ಯ ಮೂಲಭೂತವಾಗಿ ಕಾಲಬದ್ಧವಾಗಿರುತ್ತದೆ ಅಥವಾ ಸ್ಥಳೀಯವಾಗಿರುತ್ತದೆ. ಒಂದು ನಿರ್ದಿಷ್ಟ ಪ್ರದೇಶದ ವೈಶಿಷ್ಟ್ಯತೆಯನ್ನು ಆ ಪ್ರದೇಶದ ಮಣ್ಣಿನ ಸೊಗಡನ್ನು ಒಂದು ಕಲೆಯಾಗಿ ಅಭಿವ್ಯಕ್ತಪಡಿಸುತ್ತದೆ. ದೇಸಿಯತೆಯನ್ನು ವ್ಯಕ್ತಪಡಿಸುವ ನಿಟ್ಟಿನಲ್ಲಿ

ಪ್ರಾದೇಶಿಕತೆಯು ಒಂದು ನಿರ್ದಿಷ್ಟ ಭೌಗೋಳಿಕ, ಸಾ0ಸ್ಕೃತಿಕ ಮತ್ತು ಸಾಮಾಜಿಕ ಅಂಶಗಳ ಮೂಲಕ ಅಭಿವ್ಯಕ್ತಗೊಳ್ಳುವುದನ್ನು ಕಾಣುತ್ತೇವೆ. ದೇಸಿಯತೆಯ ತಿರುಳು ಪ್ರಾದೇಶಿಕತೆಯಲ್ಲಿ ಅಡಗಿರುವುದು ಸಹಜವಾಗಿದೆ.

ದೇಸಿಯತೆಯನ್ನು ಅಭಿವ್ಯಕ್ತಿಗೊಳಿಸುವಾಗ ಯಾವುದೇ ಲೇಖಕ ತನ್ನ ನೆಲದ ಸಾಮಾಜಿಕ, ಭೌಗೋಳಿಕ ಪರಿಸರದ ಸಂಬಂಧಗಳನ್ನು ಹಾಗೂ ಈ ಸಂಬಂಧಗಳು ಸ್ಥಳೀಯರ ಜೀವನ ವಿಧಾನವನ್ನು ರೂಪಿಸುವಲ್ಲಿ ಹೇಗೆ ಸಹಕಾರಿಯಾಗಿವೆ ಎಂಬುದನ್ನು ನಿರೂಪಿಸುತ್ತಾನೆ. ಕುವೆಂಪು ಮತ್ತು ಹಾರ್ಡಿಯವರ ಕಾದಂಬರಿಗಳಲ್ಲಿ ನಿರೂಪಿತವಾಗಿರುವ ಸಾಮಾಜಿಕ ಪರಿಸರ ಕೌಟುಂಬಿಕ ಚಿತ್ರಣ ದೇಸಿಯತೆಯನ್ನು ನಿರ್ದೇಶಿಸುವ ಮುಖ್ಯ ಅಂಶಗಳಾಗಿರುವುದನ್ನು ಕಾಣಬಹುದು.

ದೇಸಿಯತೆಯನ್ನು ಪ್ರತಿಬಿಂಬಿಸುವಲ್ಲಿ ಸಾಮಾಜಿಕ ಪರಿಸರ ವ್ಯವಸ್ಥೆ ಕೂಡ ಬಹಳ ಮಹತ್ತರವಾದ ಪಾತ್ರವಹಿಸುತ್ತದೆ. ಮಾನವನ ವಿಕಾಸದಂತೆ ಸಮಾಜದ ಕಲ್ಪನೆಯೂ ಸಹ ಅತ್ಯಂತ ಪ್ರಾಚೀನವಾಗಿದೆ. ಮಾನವ ಸಮಾಜ ಜೀವಿ, ಅವನು ತಾನು ಹುಟ್ಟಿ ಬೆಳೆದ ಮಣ್ಣಿನ ಸಮಾಜದ ಜೊತೆಗೆ ಅನ್ಯೋನ್ಯ ಸಂಬಂಧವನ್ನು ಹೊಂದಿರುತ್ತಾನೆ. ಮಾನವನ ಸಾಮಾಜಿಕ ಬದುಕನ್ನು ಚಿತ್ರಿಸುವಲ್ಲಿ ಒಬ್ಬ ಸೃಜನಶೀಲ ಸಾಹಿತಿಯೂ ಸಮಾಜಶಾಸ್ತ್ರಜ್ಞನ ಕೆಲಸವನ್ನೂ ಸಹ ನಿರ್ವಹಿಸುತ್ತಾನೆ. ಕಾದಂಬರಿಯಲ್ಲಿ ಬರುವ ಕಥಾ ವಸ್ತು, ಪಾತ್ರ ಘಟನೆಗಳಂತೆಯೇ ಅವುಗಳನ್ನು ಪೋಷಿಸುವ ಸಮಾಜವೂ ಕೂಡ ಮುಖ್ಯವಾಗಿರುತ್ತದೆ.[37]

ಭಾರತದಂತಹ ಸಾಮಾಜಿಕ ವ್ಯವಸ್ಥೆಯಲ್ಲಿ ವರ್ಗ ವರ್ಣ ಜಾತಿಗಳು ಪ್ರಧಾನ ಪಾತ್ರವಹಿಸಿವೆ. ಈ ಬಗೆಯ ವ್ಯವಸ್ಥೆಯಿಂದ ಭಾರತವಲ್ಲದೆ ಯಾವ ಸಮಾಜವು ಮುಕ್ತವಾಗಲು ಸಾಧ್ಯವಾಗಿಲ್ಲ. ಎಲ್ಲಾ ಸಮಾಜಗಳಲ್ಲೂ ಎಲ್ಲಾ ಕಾಲಕ್ಕೂ ಈ ಸ್ತರ ವಿನ್ಯಾಸವನ್ನು ಕಾಣಬಹುದು.[38] ಭಾರತದ ಸಾಮಾಜಿಕ ಪರಿಸರದಲ್ಲಿ ಜಾತಿ ವ್ಯವಸ್ಥೆಯು ಸಾ0ಪ್ರದಾಯಿಕವಾಗಿ ಬೆಳೆದು ಬಂದಿರುವುದರಿ0ದ ಇದರ ಉಗಮ, ಆಚರಣೆ ಮತ್ತು ವಿವರಣೆ ಬಹಳ ಕ್ಲಿಷ್ಟಕರವಾದ ವಿಷಯವಾಗಿದೆ. 'ಜಾತಿ' ಎಂಬ ಪದವು ಆಂಗ್ಲ ಪದದ 'ಕಾಸ್ಟ್'ಗೆ ಸಮಾನ ಪದವಾಗಿ ಬಳಸಲಾಗಿದೆ. 'Caste'ನ್ನು ಪ್ರಥಮವಾಗಿ ಪೋರ್ಚುಗೀಸರು ಕಾಸ್ಟ (casta) ಎಂಬ ಪದವಾಗಿ ಬಳಸಿದರು. ಇದರ ಅರ್ಥ 'ಜನಾಂಗ', 'ತಳಿ' ಮತ್ತು 'ವಂಶ'.[39] ಎಸ್.ಸಿ ದುಬೆ ಅವರ ಪ್ರಕಾರ "ಭಾರತದ ಸಾಮಾಜಿಕ ವ್ಯವಸ್ಥೆ"ಯಲ್ಲಿ ವರ್ಣ ಎನ್ನುವುದು ಅನೇಕ ಜಾತಿಗಳ ಸ್ಥಾನಮಾನವನ್ನು ಗುರುತಿಸಲು ಬಳಸುವ ಶಬ್ದ. ವರ್ಣವು ಜಾತಿಗಳನ್ನೊಳಗೊಂಡ ಶ್ರೇಣಿಕೃತ ವ್ಯವಸ್ಥೆ. ಇವು

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಹಾಗೂ ಶೂದ್ರ ಎಂದು ಗುರುತಿಸುತ್ತಾರೆ. ವ್ಯಕ್ತಿ ತಾನು ನಿರ್ವಹಿಸುವ ಕುಲ ಕಸುಬು, ವೃತ್ತಿಯ ಆಧಾರದ ಮೇಲೆ ಜಾತಿಯನ್ನು ಗುರುತಿಸಲಾಗುತ್ತಿತ್ತು ಎನ್ನವುದನ್ನು ವಿವರಿಸುತ್ತಾರೆ.[40]

'ಪರಿಶುದ್ಧತೆ' ಎಂಬ ಪದವು ಸಮಾಜವನ್ನು ಧಾರ್ಮಿಕವಾಗಿ ವಿಂಗಡಿಸುವಂತದ್ದು. ಇದರ ಆಧಾರದ ಮೇಲೆ ಬ್ರಾಹ್ಮಣರು ಸಮಾಜದಲ್ಲಿ ಉನ್ನತ ಸ್ಥಾನದಲ್ಲಿಯೂ ಮತ್ತು ಕೊನೆಯ ಸ್ಥಾನದಲ್ಲಿ ಅಸ್ಪೃಶ್ಯರನ್ನು ನಿಲ್ಲಿಸುವಂತದ್ದು. ಇವೆರಡು ಸ್ತರಗಳಲ್ಲಿ ಸರಕು-ಸೇವೆ ವಿನಿಮಯ ಮಾಡಬಹುದಾದರೂ ವ್ಯಕ್ತಿಗತವಾದ ಸಾಮಾಜಿಕ ಸಂಬಂಧಗಳನ್ನು ನಿಷೇಧಿಸಿರುವುದನ್ನು ಕಾಣಬಹುದು. ಪರಿಶುದ್ಧತೆಯ ಮಟ್ಟವನ್ನು ವ್ಯಕ್ತಿ ತಾನು ಕೈಗೊಳ್ಳುವ ವೃತ್ತಿಯ ಆಧಾರದ ಮೇಲೆ ಪರಿಗಣಿಸಲಾಗುತ್ತಿತ್ತು. ಆ ವ್ಯಕ್ತಿ ಎಂದಾದರೂ ಆಸ್ಪೃಶ್ಯರ ಸಂಬಂಧ, ಸಂಪರ್ಕದಿಂದ ಮಲಿನಗೊಂಡರೆ ಅವನನ್ನು ವರ್ಣಗಳ ವ್ಯವಸ್ಥೆಯಿಂದಲೆ ಹೊರಹಾಕಲಾಗುತ್ತಿತ್ತು. ಹೀಗೆ ಸಂಪ್ರದಾಯಸ್ಥ ದೇಸಿಯ ಹಿಂದೂ ಸಮಾಜವು ವರ್ಣವ್ಯವಸ್ಥೆಯಲ್ಲಿ ಅನೇಕ ಕಟ್ಟುಪಾಡುಗಳನ್ನು ನಿರ್ಬಂಧ, ನಿಷೇಧಗಳನ್ನು ಅನುಸರಿಸುವುದರ ಮೂಲಕ ಪರಿಶುದ್ಧತೆಯನ್ನು ಕಾಪಾಡಿಕೊಳ್ಳಬೇಕಿತ್ತು.

ಬ್ರಿಟಿಷರು ಭಾರತಕ್ಕೆ ಬಂದಾಗ ಇದ್ದಂತಹ ಧರ್ಮಾಧಾರಿತ ಶ್ರೇಣಿಕೃತ ವ್ಯವಸ್ಥೆಯನ್ನು ಸರಿಪಡಿಸುವ ಬದಲು ಅದನ್ನು ನಿರ್ಲಕ್ಷಿಸಲು ಪ್ರಾರಂಭಿಸಿದರು. ಆದರೆ ಪಾಶ್ಚಾತ್ಯ ಮಾದರಿಯ ಶಿಕ್ಷಣದ ಮೂಲಕ ಭಾರತದ ಸಾಮಾಜಿಕ ವ್ಯವಸ್ಥೆಯನ್ನು ಪರೋಕ್ಷವಾಗಿ ಟೀಕಿಸಿ ಬದಲಾವಣೆಯನ್ನುಂಟು ಮಾಡುವುದನ್ನು ಕಾಣಬಹುದು.[40] ನಂತರದ ದಿನಗಳಲ್ಲಿ ಬ್ರಿಟಿಷರ ವಸಾಹತುಶಾಹಿಯು ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಸಾಕಷ್ಟು ಬದಲಾವಣೆಯನ್ನು ತರಲಾರಂಭಿಸಿತು. ಸಂಸ್ಕೃತೀಕರಣದ ಸ್ಥಾನವನ್ನು ಪಾಶ್ಚಾತ್ಯೀಕರಣ, ನಂತರ ಆಧುನೀಕರಣವು ಆಕ್ರಮಿಸಿಕೊಳ್ಳಲಾರಂಭಿಸಿತು. ಪಾಶ್ಚಾತ್ಯ ಮಾದರಿಯ ಶಿಕ್ಷಣ ದೇಶದ ಶ್ರೇಣಿಕೃತ ವ್ಯವಸ್ಥೆಯನ್ನು ಚಲನಶೀಲವನ್ನಾಗಿ ಮಾರ್ಪಾಡು ಮಾಡುವುದನ್ನು ಕಾಣುತ್ತೇವೆ, ಈ ದಿಕ್ಕಿನಲ್ಲಿ ಅವರು ಕೈಗೊಂಡ 'ಜನಗಣತಿ' ಕ್ರಾಂತಿಯನ್ನುಂಟು ಮಾಡುತ್ತದೆ. ದೇಶದಲ್ಲಿ ಪ್ರಾಚೀನ ಕಾಲದಿಂದಲೂ ಬೇರು ಬಿಟ್ಟಿದ್ದ ಜಾತಿಯಾಧಾರಿತ ಸಾಮಾಜಿಕ ವ್ಯವಸ್ಥೆಯನ್ನು ಅರ್ಥಮಾಡಿಕೊಂಡು ಸುಧಾರಣೆಗೊಂಡ ರೀತಿಯಲ್ಲಿ ದೇಶವ್ಯಾಪಿ ಜನಗಣತಿಯನ್ನು 19ನೇ ಶತಮಾನದಲ್ಲಿ ಪ್ರಾರಂಭಿಸುತ್ತಾರೆ. ಕೇವಲ ಜನರನ್ನು ಎಣಿಸುವ ಬದಲು ಜನರ ಜೊತೆಗೆ ಲಿಂಗ, ಜೀವನಮಟ್ಟ, ರಾಷ್ಟ್ರೀಯತೆ, ಜನಾಂಗ, ಪಂಗಡ, ಧರ್ಮ ಮತ್ತು ಜಾತಿ ಮುಂತಾದ ವಿಷಯಗಳನ್ನೊಳಗೊಂಡ ಪ್ರಶ್ನಾವಳಿಯ ಮೂಲಕ

ವೈಜ್ಞಾನಿಕ ರೀತಿಯಲ್ಲಿ ಗಣತಿ ಕಾರ್ಯವನ್ನು ಭಾರತದ ಇತಿಹಾಸದಲ್ಲಿಯೇ ಪ್ರಥಮವಾಗಿ ಜಾರಿಗೆ ತಂದರು.[41]

ಭಾರತದಂತಹ ಸಾಮಾಜಿಕ ವ್ಯವಸ್ಥೆಯಲ್ಲಿ ಸೂಕ್ಷ್ಮಗಳನ್ನು ಅರ್ಥೈಸಬೇಕಾದರೆ 'ವರ್ಣ' ವ್ಯವಸ್ಥೆಯ ಪರಿಕಲ್ಪನೆಗಿಂತ 'ಜಾತಿ-ಉಪಜಾತಿ' ಎನ್ನುವ ಪರಿಕಲ್ಪನೆಗಳೇ ಹೆಚ್ಚು ಸೂಕ್ತವೆನಿಸುತ್ತದೆ. ಏಕೆಂದರೆ ಪ್ರಾದೇಶಿಕ ಮಟ್ಟದಲ್ಲಿ ಸಮಾಜದ ಆಂತರಿಕ ಚಲನೆಗಳನ್ನು ವಿಶ್ಲೇಷಿಸುವುದಕ್ಕೆ ತಳಮಟ್ಟದಲ್ಲಿದ್ದ ಜಾತಿ-ಉಪಜಾತಿಗಳು ವ್ಯಕ್ತಿಗಳ ವೃತ್ತಿ-ಪ್ರವೃತ್ತಿಗಳನ್ನು ನಿರ್ದೇಶಿಸುತ್ತಿದ್ದವು ಎನ್ನುವುದನ್ನು ತಿಳಿಯಬಹುದಾಗಿದೆ.[42] ಕುವೆಂಪು ಮತ್ತು ಹಾರ್ಡಿಯವರ ಕಾದಂಬರಿಗಳಲ್ಲಿ ಬಿಂಬಿತವಾಗಿರುವ ಜಾತಿಪದ್ಧತಿ, ಸಾಮಾಜಿಕ ಪ್ರತಿಷ್ಠೆ, ತಾರತಮ್ಯ ಮುಂತಾದ ಅಂಶಗಳು ದೇಸಿ ಬದುಕಿನ ಭಾಗವಾಗಿದ್ದವು ಎನ್ನುವುದು ಸ್ಪಷ್ಟವಾಗುತ್ತದೆ.

3.5 ಕುವೆಂಪು ಕಾದಂಬರಿಗಳಲ್ಲಿ ಜಾತಿ, ವರ್ಗವ್ಯವಸ್ಥೆ ಹಾಗೂ ಮಡಿ-ಮೈಲಿಗೆ:

ಕುವೆಂಪುರವರು ತಮ್ಮೆರಡೂ ಕಾದಂಬರಿಗಳಲ್ಲಿ ಮಲೆನಾಡಿನ ದೇಸಿ ಬದುಕಿನಲ್ಲಿದ್ದ ನಾಲ್ಕು ಜಾತಿಗಳನ್ನು ಪ್ರಧಾನವಾಗಿ ಚಿತ್ರಿಸಿದ್ದಾರೆ. ಅವುಗಳೆಂದರೆ:

1. ಬ್ರಾಹ್ಮಣರು
2. ಒಕ್ಕಲಿಗರು
3. ಮುಸ್ಲಿಮರು
4. ಕ್ರಿಶ್ಚಿಯನ್ನರು

ಈ ನಾಲ್ಕು ಪ್ರಮುಖ ಜಾತಿಗಳನ್ನು ಹೊರತುಪಡಿಸಿ ಶ್ರೇಣಿಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಅತ್ಯಂತ ಕಟ್ಟಕಡೆಯ ಜಾತಿ ಎಂದರೆ ದಲಿತರು ಎನ್ನುವುದನ್ನು ಕುವೆಂಪುರವರ ಕಾದಂಬರಿಗಳಲ್ಲಿ ಕಾಣುತ್ತೇವೆ.

ಬ್ರಾಹ್ಮಣರು ದುಡಿಯುವ ವರ್ಗವಲ್ಲ, ಅವರ ಉದ್ಯೋಗಗಳಲ್ಲಿ ಮುಖ್ಯವಾದವುಗಳೆಂದರೆ ದೇವರ ಪೂಜೆ, ನಿಮಿತ್ತ ನೋಡುವುದು, ಭವಿಷ್ಯ ಹೇಳುವುದು, ಜಾತಕ ಬರೆಯುವುದು, ಲಗ್ನಕ್ಕೆ ಮಹೂರ್ತ ಇಟ್ಟುಕೊಡುವುದು, ಶೂದ್ರ ಭಕ್ತಾದಿಗಳಿಗೆ ಪ್ರಾಣಿ ಬಲಿಕೊಡುವ ಮೊದಲು ಹಣ್ಣುಕಾಯಿ ಮಾಡುವುದು, ವಿಭೂತಿ ಕೊಡುವುದು, ಸತ್ಯನಾರಾಯಣ ವ್ರತ ಮಾಡಿಸುವುದು, ಖಾಯಿಲೆಗಳಿಗೆ

ಬೂದಿಕೊಡುವುದು, ಮಂತ್ರಹಾಕುವುದು, ತಾಯಿತ ಕಟ್ಟುವುದು ಮುಂತಾದವು. ಈ ವೃತ್ತಿಗಳಿಂದಲೆ ಇವರ ಜೀವನ. ಇವರು ಜಾತಿ ಶ್ರೇಣಿಯಲ್ಲಿ ಉತ್ತುಂಗದಲ್ಲಿದ್ದು, ಇವರನ್ನು ಉಳಿದ ಜಾತಿಯವರು ಬಹುವಚನದಲ್ಲಿಯೇ ದೂರದಿಂದಲೇ ಮಾತನಾಡಿಸಬೇಕು. ಕಾನೂರು ಹೆಗ್ಗಡತಿಯ ವೆಂಕಪ್ಪಯ್ಯ ಜೋಯಿಸರು, ಮಲೆಗಳಲ್ಲಿ ಮದುಮಗಳು ಕಾದಂಬರಿಯ ಮಂಜಭಟ್ಟರು ಉಳಿದೆಲ್ಲಾ ಜಾತಿಯವರಿಗಿಂತ ತಾವು ಶ್ರೇಷ್ಠರೆಂದು, ಇತರ ಜಾತಿಯವರನ್ನು ಹೀನಾಯವಾಗಿ ಕಾಣುವುದನ್ನು ಗಮನಿಸಬಹುದು: "ಗೌಡರು ಜೋಯಿಸರಿಗಿಂತ 15–20 ವರ್ಷಗಳು ಹೆಚ್ಚು ವಯಸ್ಸಿನವರಾಗಿದ್ದರೂ, ಬ್ರಾಹ್ಮಣನು ಶೂದ್ರನನ್ನು ಬಹುವಚನದಲ್ಲಿ ಮಾತನಾಡಿಸುವುದು ಶಾಪಕ್ಕೆ ಸಮಾನವೆಂದೂ ಭಾವಿಸಿ ಏಕವಚನದಲ್ಲಿ ಮಾತನಾಡಿಸುವುದು ಅನುಗ್ರಹಕ್ಕೆ ಸಮಾನವೆಂದೂ ಭಾವಿಸಿ ವೇದಮೂರ್ತಿಗಳೆಲ್ಲ ಮ.ರಾ.ಶ್ರೀಗಳನ್ನು 'ಅವನು' 'ನೀನು' ಎಂದೆ ಸಂಬೋಧಿಸುತ್ತಿದ್ದುದು ಆ ನಾಡಿನ ವಾಡಿಕೆಯಾಗಿತ್ತು"[43]

ಬ್ರಾಹ್ಮಣರು ಉಳಿದವರ ದೃಷ್ಟಿಯಲ್ಲಿ ತಾವು ಶ್ರೇಷ್ಠ ಜಾತಿಯವರೆಂದು ಸಾಬೀತುಪಡಿಸಲು ಇತರೆ ಜಾತಿಯವರೊಡನೆ ಮಾತನಾಡುವಾಗ ದೂರ ನಿಂತು ಮಾತನಾಡಬೇಕಾಗಿತ್ತು. ಅವರು ಒಕ್ಕಲಿಗ ಗೌಡರ ಮನೆಗೆ ಬಂದರೆ ಇತರರು ಕೂಡುವ ಜಾಗದಲ್ಲಿ ಕೂಡದೆ ಕಟ್ಟಿಗೆ ಅಟ್ಟಣೆಗಳನ್ನು ಉಪಯೋಗಿಸುತ್ತಿದ್ದರು, ದೇವರ ಪ್ರಸಾದವನ್ನು ನೀಡುವಾಗ ಕೈತಾಗದಂತೆ ಮೇಲಿನಿಂದ ಎಸೆಯುತ್ತಿದ್ದರು, ಮತ್ತು ಆಶೀರ್ವಾದ ಹರಕೆಗಳನ್ನು ದೂರದಿಂದಲೆ ನೀಡುತ್ತಿದ್ದರು.[44]

ಬ್ರಾಹ್ಮಣರ ನಂತರದ ಪ್ರಮುಖ ಸ್ಥಾನ ಒಕ್ಕಲಿಗ ಗೌಡರದು, ಇವರನ್ನು ಹೆಗ್ಗಡೆ ಅಥವಾ ನಾಯ್ಕ ಎಂದು ಮಲೆನಾಡಿನ ಪ್ರದೇಶದಲ್ಲಿ ಕರೆಯುತ್ತಿದ್ದರು. ಇವರು ಭೂಮಾಲಿಕರಾಗಿದ್ದು, ಸಾಮಾಜಿಕ ಪ್ರತಿಷ್ಠೆಯುಳ್ಳವರಾಗಿದ್ದು, ಅರ್ಥಿಕವಾಗಿ ಸಬಲರಾಗಿದ್ದರು. ಹಳ್ಳಿಯ ಭೂಮಿಯ ಒಡೆಯರಾಗಿ ಊಳಿಗಮಾನ್ಯ ವ್ಯವಸ್ಥೆಯ ವಾರಸುದಾರರಾಗಿದ್ದರು. ಕಾನೂರು ಹೆಗ್ಗಡಿತಿ ಕಾದಂಬರಿಯಲ್ಲಿ ಬರುವ ಕಾನೂರಿನ ಚಂದ್ರಯ್ಯಗೌಡ, ಮುತ್ತಳ್ಳಿಯ ಶ್ಯಾಮಯ್ಯಗೌಡ, ಬಾಳೂರು ಸಿಂಗೇಗೌಡರು, ಸೀತೆಮನೆ ಸಿಂಗಪ್ಪಗೌಡ ಮುಂತಾದವರು, ಹಾಗೆಯೇ ಮಲೆಗಳಲ್ಲಿ ಮದುಮಗಳು ಕಾದಂಬರಿಯ ಸಿಂಭಾವಿ ಭರಮೈಹೆಗ್ಗಡೆ, ಹಳೇಮನೆ ದೊಡ್ಡಣ್ಣಹೆಗ್ಗಡೆ, ಸುಬ್ಬಣಹೆಗ್ಗಡೆ, ಬೆಟ್ಟಳ್ಳಿಯ ಕಲ್ಲಯ್ಯಗೌಡ, ದೇವಯ್ಯಗೌಡ, ಕೋಣೂರು ರಂಗಪ್ಪಗೌಡ, ಹೂವಳ್ಳಿ ವೆಂಕಟಣ್ಣ, ಮುಂತಾದವರು ಭೂಮಾಲೀಕರಾಗಿದ್ದರು. ಭೂಮಾಲಿಕತ್ವ ಒಕ್ಕಲಿಗ ಗೌಡರಿಗೆ ಮಾತ್ರ ಮೀಸಲು ಇತರರು ಭೂಮಾಲಿಕರಾಗಕೂಡದೆಂದು ಇವರ ಕಟ್ಟಪ್ಪಣೆಯಾಗಿತ್ತು. ಇವರ ಇಚ್ಚೆಗೆ ವಿರುದ್ಧವಾಗಿ ಭೂಸಾಗುವಳಿ ಮಾಡಹೊರಟ ಹಳೇಪೈಕದ ಸೇಸನಾಯ್ಕರ ಮೇಲೆ ಅವರಿಗೆ ಸಿಟ್ಟು: "ಹಳೇಪೈಕದವರು ಸ್ವಂತ ಜಮೀನು ಮಾಡುವುದು ನಿಷಿದ್ಧವಾಗಿತ್ತು ಮತ್ತು ಒಕ್ಕಲಿಗ ಆಚರಣೆಗಳನ್ನು

ಅನುಸರಿಸಕೂಡದೆಂದು ಕಟ್ಟಾಗಿತ್ತು. ಸರ್ಕಾರದ ಕಾನೂನು ಕೂಡ ಅವರ ಪರವಾಗಿದುದನ್ನು ಕಾಣುತ್ತೇವೆ.[45]

ಬ್ರಾಹ್ಮಣರನ್ನು ಬಿಟ್ಟರೆ ಒಕ್ಕಲಿಗರೆ ಮಲೆನಾಡಿನ ಸೀಮೆಯಲ್ಲಿ ಉತ್ತಮ ಜಾತಿಯವರು ಮತ್ತು ಬಹುಸಂಖ್ಯಾತರು. ಇವರು ತಲತಲಾಂತರವಾಗಿ ಕೃಷಿಯನ್ನು ಕಾಯಕವನ್ನಾಗಿ ಮಾಡುತ್ತಿದ್ದು, ಬೇಟೆಯನ್ನು ತಮ್ಮ ಪ್ರವೃತ್ತಿಯನ್ನಾಗಿ ಮಾಡಿಕೊಂಡಿದ್ದರು. ಇವರ ಹೊಲಗದ್ದೆ ಮತ್ತು ತೋಟಗಳಲ್ಲಿ ದುಡಿಯುವವರೆಲ್ಲ ಹಳೇಪೈಕದವರು, ಬಿಲ್ಲವರು, ಹಸಲರು, ಘಟ್ಟದ ಕೆಳಗಿನಿಂದ ಬಂದವರು ಮತ್ತು ಅಸ್ಪೃಶ್ಯರು. ಬ್ರಾಹ್ಮಣರು ಬೌದ್ಧಿಕವಾಗಿ ಸಮಾಜದ ಎಲ್ಲಾ ವರ್ಗಗಳ ಮೇಲೆ ಹಿಡಿತವನ್ನಿಟ್ಟುಕೊಂಡಿದ್ದರೆ, ಗೌಡರು ಆರ್ಥಿಕವಾಗಿ ಆದಕ್ಕಿಂತಲೂ ಬಿಗಿ ಹಿಡಿತವನ್ನಿಟ್ಟುಕೊಂಡಿದ್ದರು. ಅಷ್ಟೆ ಅಲ್ಲದೆ ಒಕ್ಕಲಿಗ ಗೌಡನು ಆರ್ಥಿಕವಾಗಿ ದುರ್ಬಲನಾದ ಸಮಾನ ಜಾತಿಯವನನ್ನು ನೋಡುವ ಬಗೆ ನಿಕೃಷ್ಟವಾಗಿರುತ್ತದೆ. <u>ಕಾನೂರು ಹೆಗ್ಗಡಿತಿ</u>ಯಲ್ಲಿ ಬರುವ ಚಂದ್ರಯ್ಯಗೌಡರು ಕಾನೂರಿನಲ್ಲಿ ಪ್ರತಿಷ್ಠಿತ ಸ್ಥಾನ ಹೊಂದಿದ್ದು ಅವರ ಜಾತಿಯವನೇ ಆದ ಅಣ್ಣಯ್ಯ ಗೌಡನು ಸಾಲ ಕೇಳಲು ಬಂದಾಗ "ಇಲ್ಲಿ ನೋಡು ಬಡ್ಡಿ ಕೂಡಿ ಸಾವಿರದ ಐನೂರು ಮುಕ್ಕಾಲು ವೀಸ ಬೇಳೆ ಆರು ಪೈ ಆಗ್ತದೆ ಬಾಕಿ ಎಂದು ಪುಸ್ತಕವನ್ನು ಮುಂದಕ್ಕೆ ಚಾಚಿ ತೋರಿಸಿದರು". ಅದಕ್ಕೆ ಅಣ್ಣಯ್ಯ ಗೌಡರು ತಾಂಬೂಲ ತುಂಬಿದ್ದ ಬಾಯನ್ನು ಎತ್ತಿ "ಹೌದು ಣಾಣೇಣು ಅಳ್ಳ ಅಂಟೀಣೆ?"[46] ಎಂದರು. ಚಂದ್ರಯ್ಯಗೌಡ ಅಣ್ಣಯ್ಯಗೌಡರಲ್ಲಿ ಕಠಿಣವಾಗಿ ನಡೆದುಕೊಳ್ಳುವ ವರ್ತನೆಗೆ ಆರ್ಥಿಕ ಮೂಲವೇ ಕಾರಣವಾಗಿದೆ. ಸಾಲ ವಸೂಲಾತಿಯಲ್ಲಿ ಒಕ್ಕಲಿಗ ಗೌಡರು ನಡೆದುಕೊಳ್ಳುವ ರೀತಿ ಮತ್ತು ತಮ್ಮ ಜೀತದಾಳುಗಳನ್ನು ಹಾಗೂ ಕೂಲಿಯಾಳುಗಳನ್ನು ಹಿಡಿತದಲ್ಲಿಟ್ಟುಕೊಳ್ಳಲು ಮುಸ್ಲಿಮರನ್ನು ಬಳಸಿಕೊಂಡು "ಹೊನ್ನಾಳಿ ಹೊಡೆತ"ದ ಮೂಲಕ ತಮ್ಮ ಇಚ್ಛೆಯಂತೆ ನಡೆದುಕೊಳ್ಳಲು ಕ್ರೂರವಾದ ಮಾರ್ಗವನ್ನೆ ಅನುಸರಿಸುತ್ತಿದ್ದರು.

ಒಕ್ಕಲಿಗ ಒಡೆಯರನ್ನು ಕಂಡಾಗ ಕೆಳಜಾತಿಯ ಗಂಡಸರೆಲ್ಲ ನೆಲಮುಟ್ಟಿ ನಮಸ್ಕಾರ ಮಾಡಬೇಕಿತ್ತು ಮತ್ತು ಹೆಂಗಸರು ಹಳುವಿನಲ್ಲಿ ಮರೆಯಾಗಿ ನಿಲ್ಲುವುದು ವಾಡಿಕೆಯಾಗಿತ್ತು. ಬಿ. ಕೃಷ್ಣಪ್ಪ ಅವರು ಹೇಳುವ ಮಾತು ಇಲ್ಲಿ ಪ್ರಸ್ತುತವೆನಿಸುತ್ತದೆ: "ದಲಿತರ ಬದುಕು-ಬಾಳು, ಆಗು-ಹೋಗು, ಜನನ-ಮರಣ, ಮದುವೆ-ಹಬ್ಬ, ಸಾಲ-ಸೋಲ ಎಲ್ಲಕ್ಕೂ ಬ್ರಹ್ಮ-ವಿಷ್ಣು-ಮಹೇಶ್ವರರಾಗಿದ್ದರು ಹೆಗ್ಗಡೆಯವರು".[47] ಒಕ್ಕಲಿಗ ಒಡೆಯರು ತಮ್ಮ ಮನೆ ಹಿಸ್ಸೆಯಾಗುವಾಗ ಆಸ್ತಿಯಂತೆ ತಮ್ಮ ಜೀತದಾಳುಗಳನ್ನು ಭಾಗಮಾಡಿಕೊಳ್ಳುತ್ತಿದ್ದರು. <u>ಕಾನೂರು ಹೆಗ್ಗಡತಿ</u>ಯಲ್ಲಿ ಸ್ಥಿರ-

ಚರ ಸ್ವತ್ತುಗಳನ್ನು ಪಾಲುಮಾಡಿಕೊಂಡ ನಂತರ ಮನೆಯ ಜೀತಾದಾಳುಗಳನ್ನು ಹಂಚಿಕೊಂಡು, ಬೈರ ಮತ್ತು ಅವನ ಸಂಸಾರ, ಹೆಂಡತಿ ಸೇಸಿ ಮಗ ಗಂಗ ಹುಡುಗ ಹೊರತುಪಡಿಸಿ ಎಲ್ಲ ಬೇಲರು ಚಂದ್ರಯ್ಯಗೌಡರ ಪಾಲಿಗೆ ಬಂದರು.[48] ಹೀಗೆ ಆರ್ಥಿಕವಾಗಿ ಸಬಲರಾದ ಗೌಡರು ತಮ್ಮ ಜೀತದಾಳುಗಳನ್ನು ವಸ್ತುಗಳೆಂಬಂತೆ ಪಾಲುಮಾಡಿಕೊಳ್ಳುವ ರೀತಿ ಅಮಾನವೀಯವಾಗಿದ್ದುದನ್ನು ಕಾಣುತ್ತೇವೆ.

ಮೇಲ್ಜಾತಿಯವರು ದಲಿತರ ಕೇರಿಗಳನ್ನು ಅಥವಾ ಹೊಲಗೇರಿಗಳನ್ನು ಪ್ರವೇಶಮಾಡಬಾರದು ಎಂಬ ನಂಬಿಕೆ ಎಷ್ಟೊಂದು ಕ್ರೂರವಾಗಿತ್ತು ಎನ್ನವುದನ್ನು <u>ಮಲೆಗಳಲ್ಲಿ ಮದುಮಗಳು</u> ಕಾದಂಬರಿಯಲ್ಲಿ ಕಾಣುತ್ತೇವೆ. ತಿಮ್ಮಯ್ಯಹೆಗ್ಗಡೆ ತಮ್ಮ ಕೂಲಿಯಾಳುಗಳನ್ನು ಕರೆಯಲು ಅವರ ಕೇರಿಗಳಿಗೆ ಹೋಗಬೇಕಾದಾಗ ಕೇರಿಯ ಸಮೀಪದಲ್ಲಿದ್ದ ದಿಬ್ಬದ ಮೇಲೆ ನಿಂತು ಕೂಗುತ್ತಿದ್ದರು. ಅದು ಕಾಲಕ್ರಮೇಣ "ಒಡೆಯರ ದಿಬ್ಬ" ಎಂಬ ಹೆಸರು ಪಡೆಯಿತು.[49] ಮೇಲ್ಜಾತಿಯವರು ಹೊಲೆಯರ ಕೇರಿಗೆ ಒಂದು ವೇಳೆ ಪ್ರವೇಶ ಮಾಡಿದರೆ ಪಾಪಕ್ಕೆ ಸಮಾನವೆಂಬ ನಂಬಿಕೆ ಇತ್ತು. ಆ ಕೇರಿಯ ಕುಳವಾಡಿ ಹೇಳುವ ಮಾತುಗಳು "ಒಂದು ವೇಳೆ ಒಡೆಯರು ಕೇರಿ ಪ್ರವೇಶಿಸಿದರೆ ತಮ್ಮ ಕೇರಿ ಸುಟ್ಟು ನಾಶವಾಗುವುದು ಎಂಬ ನಂಬಿಕೆ ದಲಿತ ವರ್ಗದವರಲ್ಲಿತ್ತು."[50]

ಮಲೆನಾಡಿನಲ್ಲಿ ಒಕ್ಕಲಿಗರ ನಂತರದ, ಆದರೆ ಮುಸ್ಲಿಮರು ಕ್ರಿಶ್ಚಿಯನ್ನರಿಗಿಂತ ಮತ್ತು ದಲಿತರಿಗಿಂತ, ಮೇಲಿನ ಸ್ಥಾನದಲ್ಲಿ ಹಳೇಪೈಕದವರು, ಸೆಟ್ಟರು ಅಥವಾ ಸೇರೆಗಾರರು ಬರುತ್ತಾರೆ. ಹಳೇಪೈಕದವರು ಬಗಿನಿ ಹೆಂಡ ಇಳಿಸಿ ಮಾರಾಟ ಮಾಡುವರು. ಸೆಟ್ಟರು ಸಾಮಾನ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಅಥವಾ ಘಟ್ಟದ ಕೆಳಗಿನಿಂದ ಕೂಲಿಯಾಳುಗಳನ್ನು ಕರೆತಂದು ಮಲೆನಾಡಿನ ಒಕ್ಕಲಿಗ ಒಡೆಯರ ಜಮೀನಿನಲ್ಲಿ ಕೆಲಸಮಾಡಿಸುತ್ತಿದ್ದರು. <u>ಕಾನೂರು ಹೆಗ್ಗಡಿತಿ</u>ಯಲ್ಲಿ ಬರುವ ರಂಗಪ್ಪಶೆಟ್ಟಿ ಮತ್ತು <u>ಮಲೆಗಳಲ್ಲಿ ಮದುಮಗಳು</u> ಕಾದಂಬರಿಯ ಚೀಂಕ್ರ ಸೇರೆಗಾರ ಮುಂತಾದವರು ಘಟ್ಟದ ಕೆಳಗಿನಿಂದ ಬಂದು ಮಲೆನಾಡಿನಲ್ಲಿ ಮೇಸ್ತ್ರಿಯಾಗಿದ್ದರು.

ಮುಸ್ಲಿಮರು: ಹಳ್ಳಿಗರಿಗೆ ಬೇಕಾದ ಸಾಮಾನು ಸರಂಜಾಮುಗಳನ್ನು ಕೇರಳದಿಂದ ಬ್ಯಾರಿ ಮುಸ್ಲಿಮರು ವಸ್ತು ವಿನಿಮಯ ಪದ್ಧತಿಯಲ್ಲಿ ಮಾರುತ್ತಿದ್ದರು. ಮಲೆನಾಡಿನ ಮಕ್ಕಳಿಗೆ ಮುಸ್ಲಿಮರ ಮೂಲಕವೇ ಕುದುರೆಯ ಪರಿಚಯವಾದುದು: "ಆ ಮಲೆನಾಡಿನ ಕೊಂಪೆಯ ಕಾಡು ಹಳ್ಳಿಯ ಹುಡುಗರಿಗೆ ಮೇಗರವಳ್ಳಿಯ ಕರ್ಮೀನ ಸಾಬರ ಕುದುರೆಯ ಆಗಮನ ಒಂದು ಮಹತ್ವದ ಐತಿಹಾಸಿಕ ಘಟನೆ."[51] ಮೇಲು-ವರ್ಣದದವರ ದೃಷ್ಟಿಯಲ್ಲಿ ಮುಸ್ಲಿಮರು ಹೀನರಾಗಿಯೇ

ಕಾಣಿಸುತ್ತಾರೆ. 19ನೇ ಶತಮಾನದ ಕೊನೆಯಲ್ಲಿ ಮಲೆನಾಡಿನ ಪ್ರಾಂತ್ಯದಲ್ಲಿ ಶ್ರೀಮಂತರು, ಸಾಹುಕಾರರು ಸಾಲ ವಸೂಲಿ ಮಾಡಲು ಹೊನ್ನಾಳಿಯಿಂದ ಪುಂಡ ಸಾಬರನ್ನು ಕರೆಸಿ ಸಾಲ ವಸೂಲಿ ಮಾಡಿಸುತ್ತಿದ್ದರು. ಅವರನ್ನು 'ವಸೂಲಿಸಾಬರು' ಎಂದು ಕರೆಯುತ್ತಿದ್ದರು ಅವರು ಸಾಲಪಡೆದವರನ್ನು ಹೆದರಿಸಿ, ಬೆದರಿಸಿಯೋ ಮತ್ತು ಹೊಡೆದೋ ಸಾಲ ವಸೂಲಿ ಮಾಡುತ್ತಿದ್ದರು. ಆದುದರಿಂದಲೆ ಮಲೆನಾಡಿನಲ್ಲಿ ಗ್ರಾಮ್ಯರೂಪವಾಗಿ 'ಹೊನ್ನಾಳಿ ಹೊಡೆತ' ಎಂಬುದು ಕುಪ್ರಸಿದ್ಧಿ ಪಡೆದಿತ್ತು.[52] ಮುಸ್ಲಿಮರು ತಮ್ಮ ಮೋಸ, ವಂಚನೆ, ಕಳ್ಳತನ, ದರೋಡೆ, ಕ್ರೌರ್ಯ ಮುಂತಾದ ದುರ್ಗುಣಗಳಿಂದ ಮಲೆನಾಡಿನ ಪ್ರದೇಶದಲ್ಲಿ ಅಷ್ಟೊಂದು ಗೌರವ ಸ್ಥಾನ ಹೊಂದಿರಲಿಲ್ಲ. ಅವರವರ ವೃತ್ತಿ ಮತ್ತು ಅವರ ವೇಷಭೂಷಣಗಳಿಗನುಗುಣವಾಗಿ ಅಜ್ಜಿಸಾಬು, ಪುಡಿಸಾಬು, ಲುಂಗಿಸಾಬು, ಕರ್ಮಿನುಸಾಬು ಮುಂತಾದ ಗ್ರಾಮ್ಯ ರೂಪಗಳಲ್ಲಿ ಅವರನ್ನು ಕರೆಯುತ್ತಿದ್ದರು.

ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಕ್ರಿಶ್ಚಿಯನ್ನರು ತಮ್ಮ ಧರ್ಮ ವಿಸ್ತರಣೆಯಲ್ಲಿ ತೊಡಗಿದ್ದು ಅನೇಕ ಆಮಿಷಗಳನ್ನೊಡ್ಡಿ ಕೆಳಜಾತಿಯವರನ್ನು ಆಕರ್ಷಿಸುತ್ತಿದ್ದರು. ಆಧುನಿಕ ಪರಿಕರಗಳಾದ ಲ್ಯಾಂಪು, ಗಡಿಯಾರ, ಬೈಸಿಕಲ್ಲು, ಕಾಫಿ, ಔಷಧಿ, ಮುಂತಾದ ವಸ್ತುಗಳ ಆಮಿಷದಿಂದ ಮಲೆನಾಡಿನ ಸ್ಥಳೀಯರನ್ನು ತಮ್ಮ ಧರ್ಮಕ್ಕೆ ಮತಾಂತರಗೊಳಿಸುವುದನ್ನು ಕುವೆಂಪುರವರ ಕಾದಂಬರಿಗಳಲ್ಲಿ ಕಾಣಬಹುದು. ಸ್ಕೂಲು ಆಸ್ಪತ್ರೆಗಳನ್ನು ತೆರೆಯುವ ಮೂಲಕ ಮತ್ತು ಹೆಣ್ಣುಗಳ ಆಮಿಷದಿಂದ ಮತಾಂತರಗೊಳಿಸುವುದು ಸುಲಭ ಎಂದು ನಂಬಿದ್ದರು. ಮತಪ್ರಚಾರಕ್ಕೆ ಬೈಬಲ್ ಮತ್ತು ಏಸುಕ್ರಿಸ್ತನಿಗಿಂತಲೂ "ಬೈಸಿಕಲ್ಲೇ ಹೆಚ್ಚು ಪ್ರಭಾವಶಾಲಿಯಾಗಿತ್ತು."[53] ಮಲೆಗಳಲ್ಲಿಮದುಮಗಳು ಕಾದಂಬರಿಯಲ್ಲಿ ಬರುವ ತೀರ್ಥಹಳ್ಳಿಯ ಕ್ರೈಸ್ತ ಪಾದ್ರಿ ಜೀವರತ್ನಯ್ಯ ಬೆಟ್ಟಳ್ಳಿ ಸಣ್ಣಗೌಡರಿಗೆ (ದೇವಯ್ಯಗೌಡ) "ಬೈಸಿಕಲ್ಲಿನ ಸವಾರಿ ಮಾಡಿಸಿ ಮತಾಂತರಗೊಳಿಸಲು ಹುನ್ನಾರ ನಡೆಸುವುದು ಹಾಗೆಯೇ "ಹೊಗೆ ಬತ್ತಿ ಸೇದೋದು, ಮುಂಜುಟ್ಟು ಬಿಡುವುದು, ಯಕ್ಷಿಣಿ ಮಾಡಿಸಿ ಜಾತಿ ಕೆಡಿಸಿ ಕಿಲಸ್ತರ ಮತಕ್ಕೆ ಸೇರಿಸುವ ಹುನ್ನಾರ"[54] ಎಂದು ಆ ಕಾದಂಬರಿಯ ಸುಬ್ಬಣ್ಣಹೆಗ್ಗಡೆ ಹೇಳುವುದು ಸತ್ಯವೆನ್ನಿಸುತ್ತದೆ.

ಮಲೆಗಳಲ್ಲಿಮದುಮಗಳು ಕಾದಂಬರಿಯಲ್ಲಿ ಬರುವ ನೇಟಿವ್ ಪಾದ್ರಿ ಜೀವರತ್ನಯ್ಯನ ಸಹವಾಸದಿಂದ ದೇವಯ್ಯ ಜುಟ್ಟು ಬೋಳಿಸಿ ಕ್ರಾಪು ಬಿಟ್ಟಿದ್ದನ್ನು ದೇಸಿ ಸಂಸ್ಕೃತಿಯ ನಾಶವೆಂದೇ ಹೇಳಬಹುದು. ಮಲೆನಾಡಿನ ಅಂದಿನ ದೇಸಿಯ ಸಂಪ್ರದಾಯದಂತೆ ಜುಟ್ಟು ಬೋಳಿಸುವುದು ಅಪ್ಪ ಅಮ್ಮ ಸತ್ತಾಗ ಮಾತ್ರ, ಆದರೆ ಕ್ರೈಸ್ತ ಮಿಶನರಿಗಳ ಸಹವಾಸದಿಂದ ದೇವಯ್ಯ ರೂಢಿ

ಸಂಪ್ರದಾಯದ ವಿರುದ್ದ ಸಾಗುವುದನ್ನು ಕಾಣಬಹುದು. ಹಣೆಗೆ ನಾಮ ಇಟ್ಟುಕೊಳ್ಳುವುದನ್ನು ಬಿಟ್ಟದ್ದು, ತುಳಸಿಕಟ್ಟೆ ಸುತ್ತುವುದನ್ನು ತ್ಯಜಿಸಿದ್ದು, ದೆಯ್ಯ, ದ್ಯಾವರು, ಸತ್ಯನಾರಾಯಣ ವ್ರತಗಳನ್ನು ಹೀಯಾಳಿಸುವುದು, ಎಲ್ಲವುದಕ್ಕೂ ಪಾದ್ರಿಯ ಮಂಕುಬೂದಿಯೆ ಕಾರಣವೆಂದು ಭಾವಿಸುತ್ತಿದ್ದರು.[55]

ಕ್ರೈಸ್ತ ಮಿಶನರಿಗಳು ಹಿಂದೂ ಧರ್ಮದ ಜಾತಿ ವ್ಯವಸ್ಥೆಯನ್ನು, ಮೇಲ್ಜಾತಿಯ ಬ್ರಾಹ್ಮಣ-ಪುರೋಹಿತರಿಂದ ನಡೆಯುತ್ತಿದ್ದ ಅಮಾನವೀಯ ದೌರ್ಜನ್ಯ, ಮೂಢನಂಬಿಕೆ, ಸಂಪ್ರದಾಯ ಮತ್ತು ಕಂದಾಚಾರಗಳನ್ನು ನಿಂದಿಸುವುದರ ಮೂಲಕ ಕೆಳಜಾತಿಯವರನ್ನು, ಅಸ್ಪೃಶ್ಯರನ್ನು ಮತಾಂತರಗೊಳಿಸುತ್ತಿದ್ದರು. ಹಾಗೆಯೇ ಮಲೆಗಳಲ್ಲಿ ಮದುಮಗಳು ಕಾದಂಬರಿಯ ಪಾದ್ರಿ ಜೀವರತ್ನಯ್ಯ ಪ್ರಕಾರ ಒಬ್ಬ ಉತ್ತಮ ಜಾತಿಯ ಗೌಡನೊಬ್ಬನನ್ನು ಮತಾಂತರಗೊಳಿಸಿದರೆ ಉಳಿದವರನ್ನು ಮತಾಂತರಗೊಳಿಸುವುದು ಸುಲಭವೆಂದು ದೇವಯ್ಯಗೌಡರಿಗೆ ಬೈಸಿಕಲ್ಲು, ಕಾಫಿ, ಔಷಧೋಪಚಾರ ನೀಡಿ ಮತ್ತು ತನ್ನ ಮಗಳನ್ನು ಅನೈತಿಕವಾಗಿ ಬಳಸಿ ಮತಾಂತರಗೊಳಿಸಲು ಪ್ರಯತ್ನಿಸುವುದನ್ನು ಕಾಣುತ್ತೇವೆ. ಅದೇ ಕಾದಂಬರಿಯ ಅಸ್ಪೃಶ್ಯನಾದ ಬಚ್ಚನನ್ನು ಮತಾಂತರಗೊಳಿಸಿ, "ನೀನು ಹೊಲೇರವ ಅಲ್ಲ, ಬಿರಾಂಬ್ರ ಮನೆಗಾಗ್ಲಿ, ಗೌಡ್ರ ಮನಿಗಾಗ್ಲಿ ಹೋದ್ರೆ ಅಂಗಳದಾಗೆ ನಿಂತ್ಗೂಗ್ಬ್ಯಾಡ ಜಗಲೀಗೆ ಹೋಗಿ ಕೂತ್ಗ" ಎಂದೂ ಧೈರ್ಯ ತುಂಬುತ್ತಾನೆ ಜೀವರತ್ನಯ್ಯ.[56]

ಸಮಾಜದ ಜಾತಿ ಶ್ರೇಣಿಯಲ್ಲಿ ಅತ್ಯಂತ ಕೆಳಮಟ್ಟದಲ್ಲಿರುವ ದಲಿತರ ಜೀವನ ಚಿತ್ರಣವನ್ನು ಕುವೆಂಪುರವರ ಎರಡೂ ಕಾದಂಬರಿಗಳು ನೀಡುತ್ತವೆ. ಬಿ. ಕೃಷ್ಣಪ್ಪನವರು ಹೇಳುವಂತೆ, ಬ್ರಾಹ್ಮಣನ ಕೆಳಗೆ ಗೌಡ, ಗೌಡನ ಕೆಳಗೆ ದಲಿತರು. ಜಾತಿಯ ಈ ಪಿರಮಿಡ್ ರಚನೆಯಲ್ಲಿ ಬ್ರಾಹ್ಮಣನ ಪಾದ ಶೂದ್ರನ ತಲೆಯ ಮೇಲಿದ್ದರೆ, ಶೂದ್ರನ ಪಾದಗಳು ದಲಿತನ ತಲೆಯ ಮೇಲಿವೆ.[57] ಕುವೆಂಪುರವರ ದಲಿತ ಚಿತ್ರಣವನ್ನು ಬಿ. ಕೃಷ್ಣಪ್ಪನವರು ಒಪ್ಪಿಕೊಂಡರೂ ಕುವೆಂಪುರವರು ಬ್ರಾಹ್ಮಣರ ವಿರೋಧಿಯಾಗಿದ್ದರೇ ಹೊರತು ದಲಿತರ ಪರವಾಗಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಆದರೆ ಒಬ್ಬ ಸೃಜನಶೀಲ ಲೇಖಕ 19ನೇ ಶತಮಾನದ ಉತ್ತರಾರ್ಧದ ಸಾಮಾಜಿಕ ಜೀವನ, ಅಲ್ಲಿ ಬರುವ ದಲಿತರ, ಜೀತದಾಳುಗಳ, ಶೋಷಣೆಯನ್ನು ನಿಷ್ಪಕ್ಷಪಾತವಾಗಿ ತಮ್ಮ ಕೃತಿಗಳಲ್ಲಿ ಪ್ರತಿಬಿಂಬಿಸುವ ಮೂಲಕ ಬ್ರಾಹ್ಮಣೇತರ ಯಾವೊಬ್ಬ ಲೇಖಕ ಆ ದಿನಗಳಲ್ಲಿ ಮಾಡದೆ ಇದ್ದ ಕೆಲಸವನ್ನು ಇವರು ಮಾಡಿರುವುದನ್ನು ಕಾಣಬಹುದು. ದಲಿತರ ಬದುಕು ಎಷ್ಟೊಂದು ಅಸಹನೀಯವಾಗಿತ್ತು ಎನ್ನುವುದಕ್ಕೆ ಅವರು ವಾಸಿಸುವ ಬಿಡಾರಗಳೇ ಸಾಕ್ಷಿ. ಗುಡಿಸಲು ಮತ್ತು ಬಿಡಾರಗಳು ಹೊಲೆಯರು, ಮಾದಿಗರು, ಬಿಲ್ಲವರು, ಹಸಲರು, ಇತ್ಯಾದಿ

'ಕೀಳುಜನರ' ನಿವಾಸಗಳಾಗಿದ್ದವು. 'ಮನೆ ಏನಿದ್ದರೂ ಒಕ್ಕಲಿಗ ಜಮೀನುದಾರರು, ಹೆಗ್ಗಡೆಯವರು, ಗೌಡರಿಗೆ ಮಾತ್ರ ಮೀಸಲು.[58] ಅದೂ ಅಲ್ಲದೆ ಈ ಬಿಡಾರಗಳು ಮತ್ತು ಗುಡಿಸಲುಗಳು ಊರಿನ ಹೊರಗೆ ಇದ್ದು ಅವುಗಳನ್ನು 'ಹೊಲಗೇರಿ' ಎಂದು ಕರೆಯುತ್ತಿದ್ದರು.

ಬೇಲರು, ಎಡಗೈಯವರು, ಬಲಗೈಯವರು, ಮಾದಿಗರು, ಹೊಲೆಯರು, ಬಂಟರು ಮುಂತಾದ ಸಮಾಜದ ಕೆಳಸ್ತರದವರ ವಾಸಸ್ಥಾನಗಳು ಅವರವರ ಜಾತಿಯನ್ನು ಪರಿಚಯಿಸುವುದನ್ನು ಕಾಣಬಹುದು. ಹಾಗೆಯೇ ವ್ಯಕ್ತಿಗಳ ಹೆಸರುಗಳು ಅವರವರ ಜಾತಿಯನ್ನು ಸೂಚಿಸುತ್ತಿದ್ದವು. ಬೇಲರ ಕೇರಿಯ ಆಳುಗಳಲ್ಲಿ ಸಿದ್ದ, ಬೈರ, ಮಂಜ, ಕೆಂಚ, ಗುತ್ತಿ, ದೊಡ್ಡರುದ್ರ, ಸಣ್ಣರುದ್ರ, ಮುಂತಾದವರು, ಕೋಣೂರಿನ ರಂಗಪ್ಪಗೌಡರ ಗಟ್ಟದಾಳುಗಳಲ್ಲಿ ಚೀಂಕ್ರ, ಪಿಜಿಣ, ಐತ, ಮೊಡಂಕಿಲ, ದೇಯಿ, ಅಕ್ಕಣಿ, ಪೀಂಚಲು, ಬಾಗಿ ಇತ್ಯಾದಿ, ಕಲ್ಲೇಗೌಡರ ಜೀತದಾಳುಗಳಾದ ಬೀರ, ಸಣ್ಣ ಬೀರ, ದೊಡ್ಡ ಬೀರ, ತಿಮ್ಮ, ಬಚ್ಚ, ಸೇಸಿ, ಮುಂತಾದವರು ಅವರವರ ಜಾತಿಯ ಸೂಚಕ ಹೆಸರುಗಳನ್ನು ಹೊಂದಿದ್ದರು.

ಕುವೆಂಪುರವರ ಎರಡೂ ಕಾದಂಬರಿಗಳಲ್ಲಿ ದಲಿತರ ಶೋಷಣೆಯ ಜೊತೆಗೆ, ಮಡಿ ಮೈಲಿಗೆಯ ಚಿತ್ರಣವನ್ನು ಸಹ ಕಾಣಬಹುದು. ಊರಿನ ಒಕ್ಕಲಿಗ ಗೌಡರು ತಮ್ಮ ಜಮೀನುಗಳಲ್ಲಿ ದುಡಿಯುವ ದಲಿತರನ್ನು ಯಾವುದೇ ಕಾರಣಕ್ಕೂ ಮುಟ್ಟಬಾರದಾಗಿತ್ತು. <u>ಮಲೆಗಳಲ್ಲಿ ಮದುಮಗಳು</u> ಕಾದಂಬರಿಯ ಅಂತಕ್ಕ ಸೆಟ್ತಿಯ ಮನೆಯಲ್ಲಿ ಮೇಲುಜಾತಿಯರಿಗೆ ಕುಳಿತುಕೊಳ್ಳಲು ಚಾಪೆ, ಕಂಬಳಿ, ಬೆಂಚಿನ ಆಸನವಾದರೆ ಹೊಲೆಯನಾದ ಗುತ್ತಿಯಂಥ ಕೆಳಜಾತಿಯವರಿಗೆ ಹಿತ್ತಲು ಕಡೆಯ ಕೊಳಕಾದ ಅಂಗಳವೆ ಗತಿ.[59] ಕೀಳು ಜಾತಿಯ ಹೊಲೆಯರು ಮನೆಯ ಪ್ರಾಣಿಗಳಿಗಿಂತಲೂ ಕಡೆಯಾಗಿದ್ದರು. <u>ಮಲೆಗಳಲ್ಲಿ ಮದುಮಗಳು</u> ಕಾದಂಬರಿಯಲ್ಲಿ ಬರುವ ವಾಕ್ಯ "ಹಂದಿಯ ಹೇಲನ್ನು ತುಳಿದು ನಿಲ್ಲಬಹುದು, ಆದರೆ ಅಸ್ಪೃಶ್ಯರಾದ ತಮ್ಮ ಬಿಡಾರದ ಆಳುಗಳನ್ನು ಮುಟ್ಟಬಾರದು..., ಹೊಲೇರು ಹೋಗಬಾರದ ಜಾಗಕ್ಕೆ ಹಂದಿ ಹೋಗಬಹುದು ಆದರೆ ಅಸ್ಪೃಶ್ಯರಲ್ಲ."[60] <u>ಕಾನೂರು ಹೆಗ್ಗಡಿತಿ</u> ಕಾದಂಬರಿಯಲ್ಲಿ ಚಂದ್ರೇಗೌಡರ ಕಿರಿಯ ಮಗ ವಾಸು ಹೊಲೆಯರ ಭೈರನ ಮಗ ಗಂಗ ಗಿಜಗಾರ್ಲು ಹಕ್ಕಿಯನ್ನು ಕದ್ದನೆಂದು ಕೋಪದಿಂದ, ಬೇಲರವನನ್ನು ಮುಟ್ಟಬಾರದೆಂದು ಗೊತ್ತಿದ್ದರೂ ಒನಕೆಯಿಂದ ಹಿಟ್ಟು ಕುಟ್ಟುವಂತೆ ಗಂಗನ ಮೈಗೆ ಗುದ್ದಿ, ದಾರಿಯಲ್ಲಿ ಬೇಲರವನನ್ನು ಮುಟ್ಟಿದ್ದಕ್ಕೆ ಪ್ರಾಯಶ್ಚಿತ್ತವಾಗಿ ಹಟ್ಟಿಗೆ ಹೋಗಿ ಸೆಗಣಿಯನ್ನು ಮೆಟ್ಟಿ ಹಿತ್ತಲುಕಡೆಯ ಬಾಗಿಲಿನಿಂದ ಪ್ರವೇಶಿಸುತ್ತಾನೆ.[61] ಹಾಗೆಯೇ ಚಿನ್ನಮ್ಮನ ಮದುವೆ ಸಂದರ್ಭದಲ್ಲಿ ಹೊಲಗೇರಿಯ ಮಂಜ, ಬೈರ, ಸಿದ್ದ, ತಿಮ್ಮ, ಮದುವೆಯಂತಹ ಶುಭ

ಕಾರ್ಯದಲ್ಲಿ ವಾಲಗ ಊದುವುದು ಒಕ್ಕಲಿಗ ಗೌಡರ ಮಕ್ಕಳನ್ನು ಕೆರಳಿಸುವುದು. ಆಗ ಒಬ್ಬ "ಥೂ! ಹೊಲೇರ ಕೈಲಿ ಯಾರಾದರೂ ಮದುವೆಮನೆ ವಾಲಗ ಊದಿಸ್ತಾರೇನೋ?." ಇದರಿಂದ ತಿಮ್ಮಗೆ ಅವಮಾನವಾದಂತಾಗಿ 'ಕೀಳುಜಾತಿಯ ಹೊಲೆಯನಾಗಿ, ದನಕಾಯುವವನಾಗಿ, ಗೊಬ್ಬರ-ಗಿಬ್ಬರ ಹೊತ್ತು ಗದ್ದೆ ತೋಟಗಳಲ್ಲಿ ತಾವು ಹೇಳಿದಂತೆ ಕೆಲಸ ಮಾಡಿಕೊಂಡಿರುವ 'ಬಡುತಿನ್ನುವ' ಜೀತದಾಳೊಬ್ಬನ ಮುಂದೆ, ಅವನು ಊದುತ್ತಿದ್ದ ವಾಲಗವನ್ನು ಬೆರಗಾಗಿ ಮೆಚ್ಚಿ ಆಲಿಸುತ್ತಿದ್ದುದು ತನ್ನ ಗೌಡಿಕೆಯ ಗೌರವಕ್ಕೇ ಮಸಿ ಬಳಿದುಕೊಂಡಂತಾಯ್ತಲ್ಲಾ ಎಂದು ಮುಖ ಸಣ್ಣಗೆ ಮಾಡಿಕೊಂಡನು; ಥೂ, ಬನ್ರೋ! ಈ ಬಡು ತಿನ್ನೋರ ವಾಲಗ ಏನು ಕೇಳಾದು!" ಎಂದು ಅಲ್ಲಿಂದ ಹೊರಟು ಹೋದರು.[62] ಜಾತಿಯ ತಾರತಮ್ಯ ಕೇವಲ ಬ್ರಾಹ್ಮಣ-ಗೌಡರ-ದಲಿತರ ನಡುವೆ ಮಾತ್ರವೇ ಅಲ್ಲದೆ ಅದು ಅವರ ಮಕ್ಕಳಲ್ಲೂ ಆ ಭಾವನೆ ಬಂದಿರುತ್ತದೆ ಎನ್ನಬಹುದು.

ಅಸ್ಪೃಶ್ಯರು ಮದುವೆಯಂತಹ ಶುಭಕಾರ್ಯಗಳನ್ನಷ್ಟೆ ಅಲ್ಲದೆ ತಮ್ಮ ಒಡೆಯರ ಮನೆಗಳಲ್ಲಿ ಸಂಭವಿಸುವ ಸಾವು, ಶವಸಂಸ್ಕಾರ ಮುಂತಾದ ವಿಧಿ ಕ್ರಿಯೆಗಳನ್ನು ದೂರದಿಂದಲೇ ವೀಕ್ಷಿಸಬೇಕಾಗಿತ್ತು. ಸುಡುಗಾಡಿಗೆ ಕಟ್ಟಿಗೆ ಕಡಿಯುವ ಆಳುಗಳು ಹೊಲೆಯರು ಮತ್ತು ಮುಟ್ಟಾಳುಗಳು. ಆದರೆ ಶವ ಬರುವ ದಾರಿಯಲ್ಲಿ ಅವರಿರಬಾರದು, ಅವರು ಗಿಡಬಳ್ಳಿಗಳ, ಪೊದೆಗಳ ಮರೆಯಲ್ಲಿ ನಿಂತು ನೋಡಬೇಕಾಗಿತ್ತು.[63] ಬ್ರಾಹ್ಮಣರು ಮತ್ತು ದಲಿತರ ನಡುವೆಯೂ ಇದೇ ರೀತಿಯ ಅಸ್ಪೃಶ್ಯತೆಯನ್ನು ಕಾಣುತ್ತೇವೆ. ಮಲೆಗಳಲ್ಲಿ ಮದುಮಗಳು ಕಾದಂಬರಿಯ ಗುತ್ತಿ ಮತ್ತು ತಿಮ್ಮಿ ತೀರ್ಥಹಳ್ಳಿಗೆ ಬಂದು ದೋಣಿಗಂಡಿಯಲ್ಲಿ ಹೊಳೆದಾಟಲು ಕಾಯುತ್ತಿರುವಾಗ, ದೋಣಿಗೆ ಗಟ್ಟದಾಳುಗಳೆಲ್ಲ ಹತ್ತಿದ್ದರು, ಅಷ್ಟರಲ್ಲಿ ನಾಲ್ಕು ಜನ ಹಾರುವರು, ಓಡಿ ಬಂದು ಅಂಬಿಗನನ್ನು ದೋಣಿ ಬಿಡಬೇಡ ಮಠದಲ್ಲಿ ಸತ್ಯನಾರಾಯಣ ವ್ರತ, ಬೇಗ ಹೋಗಬೇಕಾಗಿದೆ ಸಮಾರಾಧನೆಗೆ. ನಮ್ಮನ್ನು ಮೊದಲು ದಾಟಿಸಿಬಿಡು ಎನ್ನುತ್ತಾರೆ. ಆಗ ಅಂಬಿಗ: "ಜನಿವಾರದವರು ಹತ್ತುತ್ತಾರೋ, ಇಳಿರೋ ಎಲ್ಲ!" ಎಂದು ಆಜ್ಞೆಮಾಡಿದಾಗ ಎಲ್ಲರೂ ಅವರವರ ಸಾಮಾನುಗಳೊಡನೆ ಇಳಿಯುತ್ತಾರೆ. ದೋಣಿ ಪೂರ್ತಿ ಖಾಲಿಯಾದ ನಂತರ ಹಾರುವರು ಊಟಕ್ಕೆ ಅವಸರವಾಗಿ ದೋಣಿ ಹತ್ತಿನಿಂತರು. ತಕ್ಕಮಟ್ಟಿಗೆ ದೊಡ್ಡದಾಗಿಯೆ ಇದ್ದ ಆ ದೋಣಿಯಲ್ಲಿ ಇಪ್ಪತ್ತು-ಇಪ್ಪತ್ತೈದು ಜನರು ಧಾರಾಳವಾಗಿ ಹತ್ತಬಹುದಾಗಿತ್ತು, ಆದರೆ ಇತರ ಮುಟ್ಟಾಳುಗಳು ಹತ್ತಿದರೆ ಮೈಲಿಗೆಯಾಗುತ್ತದೆ ಎಂಬ ಭಾವನೆ. ಇದರಿಂದ ತನ್ನ ದೋಣಿಗೂ ತನ್ನ ಅಂಬಿಗನ ಕಸುಬಿಗೂ ಕೇಡಾಗುತ್ತದೆ ಎಂಬ ನಂಬಿಕೆ ಅಂಬಿಗನಲ್ಲಿತ್ತು".[64]

ಮಲೆನಾಡಿನ ಪ್ರದೇಶದಲ್ಲಿ ಮಾನವೀಯ ಗುಣಗಳನ್ನು ಮೀರಿ ಅಸ್ಪಶ್ಯತೆ ರೂಢಿಯಲ್ಲಿತ್ತು ಎನ್ನುವುದಕ್ಕೆ ಮಲೆಗಳಲ್ಲಿ ಮದುಮಗಳು ಕಾದಂಬರಿಯ ಗುತ್ತಿ ಮತ್ತು ಅಂತಕ್ಕ ಸೆಟ್ತಿಯ ಮಗಳು ಕಾವೇರಿಯ ವರ್ಣನೆಯೆ ಸಾಕು. ಗುತ್ತಿ ಭರಮೈ ಹೆಗ್ಗಡೆಯವರ ಪತ್ರವನ್ನು ಸುಬ್ಬಣ್ಣ ಹೆಗ್ಗಡೆಗೆ ತಲುಪಿಸಲು ಹೊಗುವಾಗ ಅಂತಕ್ಕ ಸೆಟ್ಟಿಯ ಮನೆಯ ಹಿತ್ತಲಿಗೆ ಬರುತ್ತಾನೆ, ಅಂತಕ್ಕನ ಮಗಳು ಕಾವೇರಿ ವಯಸ್ಸಿಗೆ ಬಂದ ಹುಡುಗಿ ಗುತ್ತಿಯನ್ನು ನೋಡಿ; "ಇದೇನೋ ಗುತ್ತೀ ಇಷ್ಟು ಹೊತ್ತಾರೆ? ಎಂದು ಪ್ರಾಯದ ಹೆಣ್ಣಿನ ಇನಿದನಿಯಿಂದ ಕೇಳಿದಳು. ತನಗಿಂತಲೂ ಕುಳ್ಳಗಿದ್ದರೂ ಗುತ್ತಿ ಹೊಲೆಯನಾದರು ಕೆಂಪಗಿದ್ದ, ಜಟ್ಟಿಯಂತೆ ದೃಢಕಾಯನಾಗಿ ಲಕ್ಷಣವಾಗಿದ್ದವನನ್ನು ಪ್ರಶಂಸನೀಯ ದೃಷ್ಟಿಯಿಂದ ಈಕ್ಷಿಸಿದಳು. ಹಾಗೆ ವೀಕ್ಷಿಸುವುದರಲ್ಲಿ ಕಾವೇರಿಗೆ ಅಭ್ಯಂತರವೇನು ಕಾಣಲಿಲ್ಲ. ತನ್ನ ವರ್ಗಕ್ಕೆ ಸೇರದಿರುವ ಮತ್ತೊಂದು ಸ್ಫುರದ್ರೂಪಿ ಗಂಡು ಪ್ರಾಣಿಯನ್ನು ನೋಡುವುದರಲ್ಲಿ ತಪ್ಪೇನು? ಅಸ್ಪೃಶ್ಯನಾದ ಹೊಲೆಯ ಮನುಷ್ಯ ಜಾತಿಯವನಾಗಿದ್ದರೂ ತನ್ನ ಜಾತಿಯು ಅಲ್ಲದೆ, ತನ್ನ ಸರಿಸಮಾನ ಜಾತಿಯೂ ಅಲ್ಲದೆ, ಅತ್ಯಂತ ಕೊನೆಯ ಕೀಳುಜಾತಿಯವನಾಗಿದ್ದುದರಿಂದ ಹರೆಯದ ಕೊಂಬಿನ ಚೆಲುವಿನ ಹೋರಿ ಮಿಗವನ್ನು ಮೆಚ್ಚಿ ನೋಡುವಂತೆ ನೋಡಿದಳು. ತನಗೂ ಅವನಿಗೂ ಮಾನವೀಯವಾದ ಗಂಡು ಹೆಣ್ಣಿನ ಸಂಬಂಧ ಭಾವನೆಯ ಸುಳಿವು ಸರ್ವಥಾ ಅಸಂಭವ, ನಿಸರ್ಗ ವಿರುದ್ಧ, ಅಸ್ವಾಭಾವಿಕ ಅಸಾಧ್ಯ ಎಂಬ ಭಾವನೆ ಅವಳಿಗೆ ಬರುತ್ತದೆ. ಇಲ್ಲಿ ಅಸ್ಪೃಶ್ಯತೆ ಎನ್ನುವುದು ಸ್ವಾಭಾವಿಕ ಮತ್ತು ಮಾನವೀಯ ಗುಣಗಳನ್ನು ಮೀರಿತ್ತು ಎನ್ನುವುದನ್ನು ಸೂಚಿಸುತ್ತದೆ.[65] ಮೇಲ್ಜಾತಿಯ ಹೆಣ್ಣೊಬ್ಬಳು ಹೊಲೆಯನನ್ನು ನೋಡುವುದು, ಸಂಬಂಧ ಬೆಳೆಸುವುದು ಅಸ್ವಾಭಾವಿಕ ನಿಸರ್ಗ ವಿರೋಧವಾಗಿತ್ತು ಎಂಬ ಜಾತಿತಾರತಮ್ಯ ಮತ್ತು ಅಸ್ಪೃಶ್ಯಾಚರಣೆ ಮಲೆನಾಡಿನ ದೇಸಿಯ ಬದುಕಿನ ಅವಿಭಾಜ್ಯ ಅಂಗವಾಗಿತ್ತು ಎಂಬುದನ್ನು ಕಾಣಬಹುದು.

ಸಾಮಾಜಿಕ ಜಾತಿವ್ಯವಸ್ಥೆಯಲ್ಲಿ ಅಸ್ಪೃಶ್ಯತೆ ಮತ್ತು ಮೈಲಿಗೆ ಎಂಬುದು ಮೇಲ್ಜಾತಿ ಮತ್ತು ಕೆಳಜಾತಿಯವರ ನಡುವೆ ಅಷ್ಟೆ ಅಲ್ಲದೆ, ಕೆಳಜಾತಿಯ ಅನೇಕ ಉಪಜಾತಿ ಮತ್ತು ಪಂಗಡಗಳಲ್ಲಿಯೂ ಆಚರಣೆಯಲ್ಲಿತ್ತು. ಮೇಲ್ಜಾತಿಯವರು ಹೇಗೆ ಕೆಳಜಾತಿಯವರನ್ನು ಮುಟ್ಟಕೂಡದು, ಮಡಿ, ಮೈಲಿಗೆ ಎಂದು ದೂರವಿರುತ್ತಿದ್ದರೋ ಹಾಗೆಯೇ ಕೆಳಜಾತಿಯವರು ಮೇಲ್ಜಾತಿಯವರು ತಮ್ಮ ಕೇರಿಗೆ ಬಂದರೆ ಮುಟ್ಟುಚಿಟ್ಟಾಗುತ್ತದೆ ಮತ್ತು ಕೇಡಾಗುತ್ತದೆ ಎಂಬ ಭಾವನೆ ಅವರಲ್ಲಿತ್ತು.

ಅವರವರ ಜಾತಿಯವರಿಗೆ ಅವರ ಜಾತಿಯೇ ಶ್ರೇಷ್ಠವಾಗಿತ್ತು ಮತ್ತು ಸ್ವತಂತ್ರವಾಗಿದ್ದವು ಎನ್ನುವುದನ್ನು ಕಾಣುತ್ತೇವೆ. ದಲಿತರಿಗೆ ತಮ್ಮ ಜಾತಿಯೇ ಕ್ರಿಶ್ಚಿಯನ್ ಮತ್ತು ಮುಸ್ಲಿಮರಿಗಿಂತ ಶ್ರೇಷ್ಠವಾದುದೆಂಬ ನಂಬಿಕೆಯಿದ್ದು ಮಡಿ ಮೈಲಿಗೆಯ ಆಚರಣೆಯನ್ನು ಮಾಡುತ್ತಿದ್ದರು. ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಬೆಟ್ಟಳ್ಳಿ ಕಲ್ಲಯ್ಯಗೌಡರ ಜೀತದಾಳುಗಳು, ದೇವಯ್ಯ ತನ್ನ ಗಾಡಿ ಹೊಡೆಯೋಕೆ ಕ್ರಿಶ್ಚಿಯನ್‌ಗೆ ಮತಾಂತರಗೊಂಡಿದ್ದ ಬಚ್ಚನನ್ನು ಇಟ್ಟುಕೊಂಡಿರುವುದಕ್ಕೆ ಆಸಹ್ಯಪಟ್ಟುಕೊಳ್ಳುತ್ತಾರೆ. ಅವರ ಪ್ರಕಾರ "ಗೌಡರ ಮನೆಯಲ್ಲಿ ಹೊಲೆಯರನ್ನ ಒಳಾಂಗಳಕ್ಕೆ ಕಾಲಿಡೊಕ್ಕೆ ಬಿಡಾದಿಲ್ಲ. ಅಂತಲ್ಲಿ ಇವರು ಅವನ್ನ (ಬಚ್ಚನನ್ನು) ಗಾಡಿ ಹೊಡೆಯೋಕೆ ಇಟ್ಟುಕೊಂಡು, ಅವನ ಕೈಲಿ ಮುಟ್ಟಿಸಿಕೊಂಡು..., ಥೂ ಥೂ ಥೂ ಕಿಲಸ್ತರು ಮಾಡಿದ್ದಾಂಗ ಮಾಡ್ತಿದಾರಲ್ಲೋ.[66] ಹಾಗೆಯೇ ತಿಮ್ಮಿಯ ತಾಯಿ ಸೇಸಿ ತನ್ನ ಮಗಳನ್ನು ಕ್ರಿಶ್ಚಯನ್‌ಗೆ ಮತಾಂತರಗೊಂಡಿರುವ ಬಚ್ಚನಿಗೆ ಮದುವೆ ಮಾಡಿಕೊಡಲು ಹಿಂಜರಿಯುತ್ತಾಳೆ. ಸೇಸಿ ಹೇಳುವುದು "ಜಾತಿಕೆಟ್ಟೋನಿಗೆ ಕೊಡಾಕೆ ಬದಲಾಗಿ ಬಾವಿಗೆ ಹಾಕಾದು ಲೇಸು".[67] ತಮ್ಮ ಜಾತಿ ಎಷ್ಟೊಂದು ಶ್ರೇಷ್ಠವಾದುದು, ಜೀವಕ್ಕಿಂತ ಜಾತೀನೆ ಮುಖ್ಯವಾದುದು, ಅದು ಮೇಲಾಗಲಿ ಕೀಳಾಗಲಿ ಅದೇ ಸರ್ವಸ್ವವೂ ಅಗಿತ್ತು, ಮುಗ್ಧ ಹಳ್ಳಿಯ ಜನರಿಗೆ. ಇದಕ್ಕೆ ಕಾರಣವನ್ನು ಆ ಕಾದಂಬರಿಯಲ್ಲಿಯೇ ಪ್ರಸ್ತಾಪಿಸುತ್ತಾ "ಕಿಲಸ್ತರ ಜಾತಿಗೆ ಹೆಣ್ಣು ಕೊಟ್ರೆ ಮುಟ್ಟು-ಚಿಟ್ಟು, ಆಗ್ದೆ ಬಿಡ್ತದೆಯೆ... ಕೇರಿಗೆ?."[68] ಎಂಬ ನಂಬಿಕೆ ದೇಸಿಯ ಸಮಾಜದಲ್ಲಿತ್ತು.

ಸಮಾಜದ ಏಣಿ-ಶ್ರೇಣಿ ವ್ಯವಸ್ಥೆಯಲ್ಲಿ ಮುಟ್ಟು ಚಿಟ್ಟು ಮೈಲಿಗೆ ಎಂಬ ತಾರತಮ್ಯ ಮೇಲುಜಾತಿ ಮತ್ತು ಕೆಳಜಾತಿಯವರ ನಡುವೆ ಅಲ್ಲದೇ, ಕೆಳಜಾತಿಯವರಲ್ಲಿಯೂ ಕಾಣುತ್ತೇವೆ. ಮುಸ್ಲಿಮರು ಹೊಲಗೇರಿಗೆ ಪ್ರವೇಶ ಮಾಡುವಂತಿರಲಿಲ್ಲ. ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ, "ಅಜೀಜು ಸಾಬರು ಕುದುರೆ ತಟ್ಟು ತೆಗೆದುಕೊಂಡು ಇವರ ಕೇರಿಗೆ ಹೋದರೆ, "ನೀವು ಕೇರಿ ಒಳಗೆಲ್ಲ ಬರಬಾರದು ನಮಗೂ ದೇವರು ದಿಂಡರು ಇದಾವೆ, ನಮ್ಮ ಜಾತಿ ಕೆಟ್ಟುಹೋಗ್ತದೆ. ಎಂದು ದೊಡ್ಡಬೀರ ಹೇಳುತ್ತಾನೆ.[69] ಪಾದ್ರಿ ಜೀವರತ್ನಯ್ಯ ಬೆಟ್ಟಳ್ಳಿ ದೇವಯ್ಯನ ಜೊತೆ ಮನೆಗೆ ಬಂದಾಗ ಪಾದ್ರಿಯನ್ನು ಎಲ್ಲಿ ಕೂರಿಸಿ ಊಟಕ್ಕೆ ಹಾಕುವುದು ಎಂಬ ವಿಚಾರದಲ್ಲಿ "ಥೂ ಥೂ ಥೂ! ಹೊಲೇರಿಗಿಂತಲೂ ಅತ್ತತ್ತ, ಆ ಕಿಲಸ್ತರನ್ನ ಒಳಗೆ ಕೂರಿಸೋದೇ ಸೈ? ಏನೋ ಬಟ್ಟೆಬರಿ ಹಾಕ್ಕೊಂಡು ಬಂದನಲ್ಲಾ ಅಂತ ಜಗಲಿ ಹತ್ತಿಸಿದ್ದು!"[70] ಊಟ ಬಡಿಸುವ ಸಮಯದಲ್ಲಂತೂ ಮನೆಯ ಹೆಂಗಸರಿರಲಿ, ಆಳುಗಳೂ ಸಹ ಕಿಲಸ್ತರನಿಗೆ ಕೈಯಾರ ಬಡಿಸಲು ಒಪ್ಪಲಿಲ್ಲ; "ದನ ತಿನ್ನುವ ಕೀಳುಜಾತಿಗೆ ಕೈಯಿಂದಲೆ ಅನ್ನ ಇಕ್ಕಿ ಅವರ ಎಂಜಲಿನಿಂದ ಮೈಲಿಗೆಯಾಯಿತೆಂದರೆ ಜಾತಿಯವರಾರು ತಮ್ಮನ್ನು ಒಳಕ್ಕೆ ಸೇರಿಸುವುದಿಲ್ಲ" ಎಂದು ಬಿಟ್ಟರು.[71]

ಹೀಗೆ ಶ್ರೇಣೀಕೃತ ಜಾತಿ ವ್ಯವಸ್ಥೆಯಲ್ಲಿ ಕಟ್ಟಕಡೆಯದಾದ ಅಸ್ಪೃಶ್ಯರು ತಮ್ಮ ಜಾತಿಯೇ ಶ್ರೇಷ್ಠ ಎಂದು ಕೊಂಡಿರುವುದು ಮತ್ತು ಮೇಲ್ಜಾತಿಯವರ ಆಚರಣೆಗಳನ್ನು ಅನುಕರಿಸುವುದರ ಮೂಲಕ ತಮ್ಮ ಜಾತಿಯ ಆಸ್ತಿತ್ವವನ್ನು ಸಾಬೀತುಪಡಿಸುತ್ತಾರೆ.

3.6 ಹಾರ್ಡಿಯವರ ಕಾದಂಬರಿಗಳಲ್ಲಿ ವರ್ಗವ್ಯವಸ್ಥೆ, ಸಾಮಾಜಿಕ ಪ್ರತಿಷ್ಠೆ ಮತ್ತು ತಾರತಮ್ಯ

ಥಾಮಸ್ ಹಾರ್ಡಿಯವರ 'ದಿ ರಿಟರ್ನ್ ಆಫ್ ದಿ ನೇಟಿವ್' ಮತ್ತು 'ಟೆಸ್ ಆಫ್ ದಿ ಡಿ ಅರ್ಬರ್‌ವಿಲ್ಲೆ' ಕಾದಂಬರಿಗಳಲ್ಲಿ ಚಿತ್ರಿಸ್ಪಟ್ಟಿರುವ ವೆಸೆಕ್ಸ್‌ನ ಪ್ರದೇಶದಲ್ಲಿ ನಮ್ಮ ದೇಸಿಯ ಸಾಮಾಜಿಕ ವ್ಯವಸ್ಥೆಯಲ್ಲಿದ್ದ ಜಾತಿ, ಉಪಜಾತಿ, ಪಂಗಡ, ಉಪಪಂಗಡಗಳ ವ್ಯವಸ್ಥೆ ಇಲ್ಲದಿದ್ದರೂ ವರ್ಗ ತಾರತಮ್ಯವನ್ನು ಕಾಣಬಹುದು. ಸಮಾಜದಲ್ಲಿ ವ್ಯಕ್ತಿ ತಾನು ಹೊಂದಿರುವ ಸ್ಥಾನಮಾನ, ಅಧಿಕಾರ, ಕೈಗೊಳ್ಳುವ ವೃತ್ತಿ, ಕಸುಬುಗಳ, ಆಧಾರದ ಮೇಲೆ ವರ್ಗೀಕರಣ ಮಾಡಿರುವುದನ್ನು ಕಾಣುತ್ತೇವೆ.

ಹಾರ್ಡಿಯವರ ಕಾದಂಬರಿಗಳಲ್ಲಿ ಮೂರು ವರ್ಗಗಳನ್ನು ಕಾಣುತ್ತೇವೆ:

1. ಮೇಲ್ವರ್ಗ
2. ಮಧ್ಯಮ ವರ್ಗ
3. ಕೆಳವರ್ಗ

'ಟೆಸ್ ಆಫ್ ದಿ ಡಿ ಅರ್ಬರ್‌ವಿಲ್ಲೆ' ಕಾದಂಬರಿಯಲ್ಲಿ ಕಾದಂಬರಿಕಾರರೆ ಮೂರು ಸಾಮಾಜಿಕ ವರ್ಗಗಳನ್ನು ಮಾಡಿದ್ದಾರೆ. ಮೊದಲನೆಯ ವರ್ಗದಲ್ಲಿ ಹಳ್ಳಿಯ ಶ್ರೀಮಂತ ಜಮಿನುದಾರರು (ಲಾರ್ಡ್ಸ್), ಎರಡನೆಯ ವರ್ಗದಲ್ಲಿ ಹಳ್ಳಿಯ ಸ್ವತಂತ್ರ ಜಮೀನ್ದಾರರು ಮತ್ತು ಮೂರನೆಯ ವರ್ಗದಲ್ಲಿ ರೆಸಿಡೆಂಟರ ಆಳ್ವಿಕೆಗೆ ಒಳಪಟ್ಟ ಜಮೀನ್ದಾರರು. ಈ ಮೂರು ವರ್ಗಗಳ ಕೆಳಗೆ ನಾಲ್ಕನೆಯ ವರ್ಗವನ್ನು ಕಾಣಬಹುದು. ಅದರಲ್ಲಿ ಶ್ರಮಿಕ ವರ್ಗದವರು, ಕೂಲಿಕಾರ್ಮಿಕರು ಮತ್ತು ಕರಾರಿನ ಮೇಲೆ ಬಂದ ಕೃಷಿಕಾರ್ಮಿಕರು ಬರುತ್ತಾರೆ. ಸಾಮಾನ್ಯವಾಗಿ ಮೇಲಿನ ಮೊದಲ ಮೂರು ವರ್ಗಗಳಲ್ಲಿ ಹೆಚ್ಚು ಕಡಿಮೆ ಒಂದೇ ವ್ಯವಸ್ಥೆಯನ್ನು ಕಾಣುತ್ತೇವೆ. ಅದೇನೆಂದರೆ ಮೂರೂ ವರ್ಗದವರಿಗೂ ಸಾಕಷ್ಟು ಭೂಮಿ ಇದ್ದು ಅದರಲ್ಲಿ

ದುಡಿಯುವವರೆಲ್ಲರೂ ನಾಲ್ಕನೆಯ ವರ್ಗದವರು. ಟೆಸ್ ಕಾದಂಬರಿಯ ಅಲೆಕ್ ಡರ್ಬರ್‌ವಿಲ್ಲೆ, ಟಾಲ್ ಬೋತಿಯ ಡೈರಿಯ ಒಡೆಯ, ಫ್ಲಿಂಟ್ ಕೊಂಬ್ ಆ್ಯಶ್‌ನ ಜಮೀನ್ದಾರ ಮುಂತಾದವರು ಸಾಕಷ್ಟು ಶ್ರೀಮಂತರಾಗಿದ್ದು ತಮ್ಮ ಹಳ್ಳಿಯ ಭೂಒಡೆತನವನ್ನೆಲ್ಲ ಇವರೇ ಅನುಭವಿಸುತ್ತಿರುತ್ತಾರೆ. ಇವರ ಹತ್ತಿರ ಟೆಸ್ಸ್, ಮರಿಯನ್, ಇಜ್ ಮುಂತಾದ ಕೂಲಿಕಾರ್ಮಿಕರು ಕೆಲಸ ಮಾಡುತ್ತಿದ್ದರು.[72]

ಹಾರ್ಡಿಯವರ <u>'ಟೆಸ್'</u> ಕಾದಂಬರಿಯಲ್ಲಿ ಬಡವರು ಮತ್ತು ಶ್ರೀಮಂತ ಜಮೀನ್ದಾರರ ನಡುವೆ ಇದ್ದ ಅಂತರವನ್ನು ಮತ್ತು ಅವರ ನಡುವಿನ ಸಂಘರ್ಷವನ್ನು ಕಾಣಬಹುದು. <u>'ಟೆಸ್'</u> ಕಾದಂಬರಿಯ ದುರಂತ ನಾಯಕಿ ಟೆಸ್ ಅತ್ಯಂತ ಬಡಕುಟುಂಬದಿಂದ ಬಂದ ಮುಗ್ಧ ಮಣ್ಣಿನ ಮಗಳು, ತನ್ನ ಸಹೋದರ ಸಹೋದರಿಯರ ಮತ್ತು ಮನೆಯ ನಿರ್ವಹಣೆಗೆ ಅಲೆಕ್ಸ್ ಡರ್ಬರ್‌ವಿಲ್ಲೆ ಎಂಬ ಶ್ರೀಮಂತನ ಮನೆಯಲ್ಲಿ ಕೆಲಸ ಮಾಡುವುದು. ಅಲೆಕ್ಸ್‌ನಿಂದ ಅಲ್ಲಿ ಅತ್ಯಾಚಾರಕ್ಕೊಳಗಾಗಿ ಆ ಕೆಲಸ ಬಿಟ್ಟು ಮನೆಗೆ ಬರುವುದನ್ನು ಕಾಣುತ್ತೇವೆ. ಹೀಗೆ ಉಳ್ಳವರು ಮತ್ತು ನಿರ್ಗತಿಕರ ನಡುವಿನ ಕಂದಕವನ್ನು ಕಾದಂಬರಿ ಪರಿಚಯಿಸುತ್ತದೆ. ಹಾಗೆಯೇ 19ನೇ ಶತಮಾನದ ಇಂಗ್ಲೆಂಡಿನ ದೇಸಿಯ ಗ್ರಾಮೀಣ ಪರಿಸರದಲ್ಲಿದ್ದ ಊಳಿಗಮಾನ್ಯ ವ್ಯವಸ್ಥೆಯ ಮೇಲೆ ಬೆಳಕು ಚೆಲ್ಲುತ್ತದೆ.[73] ಟೆಸ್ ಮತ್ತು ಅಲೆಕ್ಸ್ ಅವರ ಎರಡೂ ಮನೆತನಗಳು ವಂಶಾವಳಿಯಲ್ಲಿ ಒಂದೇ ಆದರೂ ಪ್ರಸ್ತುತ ಬಡತನ ಮತ್ತು ಶ್ರೀಮಂತಿಕೆಯ ದೃಷ್ಟಿಯಿಂದ ಎರಡು ವರ್ಗಗಳಾಗಿರುವುದನ್ನು ಕಾಣಬಹುದು. ಇದೇ ರೀತಿಯ ತಾರತಮ್ಯವನ್ನು ಕುವೆಂಪುರವರ <u>ಕಾನೂರು ಹೆಗ್ಗಡಿತಿ</u>ಯಲ್ಲಿ ಬರುವ ಒಂದೇ ಜಾತಿಯ ಚಂದ್ರಯ್ಯಗೌಡ ಮತ್ತು ಅಣ್ಣಯ್ಯಗೌಡರ ನಡುವೆ ಕಾಣಬಹುದು. ಹೀಗೆ ದೇಸಿಯ ಬದುಕಿನಲ್ಲಿ ಜಾತಿ ಮತ್ತು ವರ್ಗ ತಾರತಮ್ಯಗಳಿಗೆ ಆರ್ಥಿಕ ಮೂಲವೂ ಕಾರಣವಿರಬಹುದು ಎನ್ನಬಹುದು.

ಹಳ್ಳಿಯ ಜಮೀನುದಾರರು ತಮ್ಮ ಹೊಲಗಳಲ್ಲಿ ದುಡಿಯುವ ಆಳುಗಳನ್ನು ದೈಹಿಕವಾಗಿ, ಆರ್ಥಿಕವಾಗಿ ಹಾಗೂ ಮಾನಸಿಕವಾಗಿ ಶೋಷಣೆ ಮಾಡುವುದನ್ನು ಹಾರ್ಡಿಯವರ ಎರಡು ಕಾದಂಬರಿಗಳಲ್ಲಿ ಕಾಣುತ್ತೇವೆ. ಟೆಸ್‌ಳನ್ನು ಅಲೆಕ್ಸ್ ಲೈಂಗಿಕವಾಗಿ ಮತ್ತು ಮಾನಸಿಕವಾಗಿ ಹಿಂಸಿಸುವುದು, ಮ್ಯಾರ್ಲಾಟ್‌ನ ಊರಿನವರು ಟೆಸ್‌ಳು ಲಜ್ಜೆಗೆಟ್ಟವಳು ಎಂದು ಊರು ಬಿಡಿಸುವುದು ಆಮಾನವೀಯತೆಯಿಂದ ಕೂಡಿದೆ. ಕೆಲಸ ಹುಡುಕುತ್ತ ಟಾಲ್-ಬೋತೆ ಮತ್ತು ಫ್ಲಿಂಟ್‌ಕೊಂಬ್ ಆ್ಯಶ್‌ಗೆ ವಲಸೆ ಹೊಗುವುದು, ಕೃಷಿ ಕಾರ್ಮಿಕರ ಸಾಮಾಜಿಕ ಜೀವನವನ್ನು ಪ್ರತಿಬಿಂಬಿಸುತ್ತದೆ. ಫ್ಲಿಂಟ್‌ಕೊಂಬ್ ಆ್ಯಶ್‌ನ ಜಮೀನ್ದಾರ ಗ್ರೋಬಿ, ಟೆಸ್ ಮತ್ತು ಇತರ ಕೃಷಿ ಕಾರ್ಮಿಕರನ್ನು ಅಮಾನವೀಯವಾಗಿ ದುಡಿಸಿಕೊಳ್ಳುತ್ತಿರುತ್ತಾನೆ. ಚಳಿ, ಮಳೆ ಎನ್ನದೆ ಕೂಲಿಕಾರ್ಮಿಕರು

ದುಡಿಯಬೇಕಾಗಿತ್ತು ಎನ್ನುವುದನ್ನು ಕಾದಂಬರಿ ಚಿತ್ರಿಸುತ್ತದೆ.[74] ಕೂಲಿಕಾರ್ಮಿಕರು ಸಮಯದ ಪರಿವೆಯಿಲ್ಲದೆ ದುಡಿದರೂ ಅವರ ಆರ್ಥಿಕ ಬದುಕು ಶೋಚನೀಯವಾಗಿತ್ತು. ಜಮೀನ್ದಾರರ ದಬ್ಬಾಳಿಕೆಗೆ, ಶೋಷಣೆಗೆ 'ಟೆಸ್' ಕಾದಂಬರಿ ಕನ್ನಡಿ ಹಿಡಿಯುತ್ತದೆ.

ಇಂಗ್ಲೆಂಡಿನ ದೇಸಿಯ ಪರಿಸರದಲ್ಲಿ ಶ್ರೇಷ್ಠಮಟ್ಟದ ಜೀವನವನ್ನು ನಡೆಸುವವರಲ್ಲಿ ಚರ್ಚಿನ ಪಾದ್ರಿಗಳು, ಪ್ರವಾಚಕರು ಮುಖ್ಯವಾಗಿದ್ದರು. ಇಲ್ಲಿ ಜಾತಿ–ಪಂಗಡಗಳ ಅನಿಷ್ಟ ಪದ್ಧತಿ ಇಲ್ಲದಿದ್ದರೂ, ಒಂದು ರೀತಿಯ ಸಾಮಾಜಿಕ ಪ್ರತಿಷ್ಠೆಯನ್ನು ಅವರಲ್ಲಿ ಕಾಣಬಹುದು. ಭಾನುವಾರದಂದು ಚರ್ಚ್‌ಗಳಲ್ಲಿ ಪ್ರಾರ್ಥನೆ ಸಲ್ಲಿಸುವುದು, ಹಳ್ಳಿಯ ಮುಗ್ಧ ಜನರಿಗೆ ಬೈಬಲ್ಲಿನ ಸಾರವನ್ನು ಕುರಿತು ಪ್ರವಚನ ನೀಡುವುದು ಇವರ ವೃತ್ತಿಯಾಗಿತ್ತು. ಇವರು ಹೊಲಗದ್ದೆಗಳಲ್ಲಿ ದುಡಿಮೆ ಮಾಡದಿದ್ದರೂ ಸರಕಾರದಿಂದ ಬರುವ ವರಮಾನದಿಂದಲೇ ಜೀವನ ನಡೆಸುತ್ತಿದ್ದರು. ಮಲೆನಾಡಿನ ಪ್ರದೇಶದಲ್ಲಿದ್ದ ಬ್ರಾಹ್ಮಣರಿಗೆ ಸರಿಸಮಾನವಾಗಿ ಚರ್ಚಿನ ಪಾದ್ರಿಗಳು ಧಾರ್ಮಿಕ ಆಚರಣೆಗಳನ್ನು ನಿರ್ವಹಿಸುತ್ತಿದ್ದರೂ ವೆಸೆಕ್ಸ್‌ನಲ್ಲಿದ್ದ ಪಾದ್ರಿಗಳು ಇತರರ ಶೋಷಣೆಯಂತಹ ಕೃತ್ಯಗಳಲ್ಲಿ ಭಾಗಿಯಾಗಿದ್ದ ಉಲ್ಲೇಖಗಳನ್ನು ಕಾಣಲಾಗುವುದಿಲ್ಲ.

ವಾಸ್ತವವಾಗಿ ದೇಸಿಯ ಬದುಕಿನ ಚಿತ್ರಣವನ್ನು ಗ್ರಾಮೀಣ ಪ್ರದೇಶದ ಕೂಲಿಕಾರ್ಮಿಕರಲ್ಲಿ, ಶ್ರಮಿಕವರ್ಗದವರಲ್ಲಿ ಮತ್ತು ಅತ್ಯಂತ ಬಡವರಲ್ಲಿ ಕಾಣಬಹುದು. ಟೆಸ್ ಮತ್ತು ಅವಳ ಕುಟುಂಬದಲ್ಲಿ ಎಷ್ಟೊಂದು ಅನ್ಯೋನ್ಯವಾದ ಸಂಬಂಧವಿತ್ತೆಂದರೆ ಟೆಸ್ ಕೆಲಸವನ್ನರಸಿ ಬೀಳ್ಕೊಳ್ಳುವಾಗ ಮನೆಯಲ್ಲಿದ್ದ ಆಕೆಯ ಸಹೋದರ–ಸಹೋದರಿಯರೆಲ್ಲ ಕಣ್ಣೀರುಗರೆಯುವ ದೃಶ್ಯ ಮನಕಲಕುವಂತಿತ್ತು.[75] ಇದು ನಿಜವಾದ ದೇಸಿಯ ಸಂಸ್ಕೃತಿಯ ಪ್ರತೀಕವಾಗಿತ್ತು. ದೇಸಿಯ ಬದುಕಿನಲ್ಲಿ ಮಾನವ ಸಂಬಂಧಗಳ ಬೇರುಗಳು ಎಷ್ಟೊಂದು ಆಳವಾಗಿ ವಿಶಾಲವಾಗಿ ನೆಲೆಗೊಂಡಿರುತ್ತವೆ ಮತ್ತು ಸ್ವಲ್ಪ ಘಾಸಿಗೊಂಡರೂ ಎಂತಹ ನೋವನ್ನುಂಟು ಮಾಡುತ್ತವೆ ಎನ್ನುವುದನ್ನು ಗಮನಿಸಬಹುದು. ಆದರೆ ಸಮಾಜದಲ್ಲಿ ಪ್ರತಿಷ್ಠಿತ ಸ್ಥಾನಮಾನ ಹೊಂದಿರುವ ಒಂದೇ ಕುಟುಂಬದಲ್ಲಿ ಅಣ್ಣತಮ್ಮಂದಿರ ನಡುವೆ ಯಾವುದೇ ಭಾವನಾತ್ಮಕ ಸಂಬಂಧವಿಲ್ಲದಿರುವುದನ್ನು ಏಂಜೆಲ್ ಕ್ಲೇರ್ ಮನೆಯಲ್ಲಿ ಕಾಣುತ್ತೇವೆ. ಬಡತನವನ್ನು ಮೈದುಂಬಿಕೊಂಡಿದ್ದ ಟೆಸ್ ಮನೆಯಲ್ಲಿದ್ದ ಭಾವನಾತ್ಮಕ ಸಂಬಂಧ ಏಂಜಲ್ ಕ್ಲೇರ್‌ನ ಮನೆಯಲ್ಲಿರುವುದಿಲ್ಲ. ಒಂದೇ ಮನೆಯಲ್ಲಿ ವೃತ್ತಿ ಮತ್ತು ಶೈಕ್ಷಣಿಕ ಹಾಗೂ ಧಾರ್ಮಿಕಶಾಸ್ತ್ರದ ಅರ್ಹತೆಯ ಮೇಲೆ ತಾರತಮ್ಯವಿರುದನ್ನು ಕಾಣುತ್ತೇವೆ.[76] ತಂದೆ ತಾಯಿ ಹೊರತುಪಡಿಸಿ ಏಂಜೆಲ್ ಕ್ಲೇರ್‌ನ ಸಹೋದರರು ಲಂಡನ್ನಿನ ವಿಶ್ವವಿದ್ಯಾನಿಲಯದಲ್ಲಿ ಧರ್ಮಶಾಸ್ತ್ರವನ್ನು

ಅಧ್ಯಯನ ಮಾಡುತ್ತಿದ್ದು ತಮ್ಮ ಸಹೋದರ ಏಂಜಲ್‌ನ ಬಗ್ಗೆ ಒಂದು ರೀತಿಯ ತಾತ್ಸಾರವನ್ನು ವ್ಯಕ್ತಪಡಿಸುತ್ತಾರೆ. ಏಕೆಂದರೆ ಏಂಜಲ್ ಕ್ಲೇರ್ ಗ್ರಾಮೀಣ ಪ್ರದೇಶದಲ್ಲಿ ಬೇಸಾಯ ಕ್ರಮದ ಅನುಭವವನ್ನು ಪಡೆಯಬೇಕೆಂದು ಉದ್ಯೋಗಾರ್ಥಿಯಾಗಿ ಟಾಲ್ ಬೋತೆಗೆ ಬರುವುದು, ಹೈನುಗಾರಿಕೆ, ಕೃಷಿಯ ಬಗ್ಗೆ ಅಧ್ಯಯನ ಮಾಡುವುದು, ಗ್ರಾಮೀಣ ಬದುಕಿನ ಬಗ್ಗೆ ಅವನ ಕಾಳಜಿ ಮತ್ತು ಅಂದಿನ ಧಾರ್ಮಿಕಶಾಸ್ತ್ರದ ಕಂದಾಚಾರದ ಬಗ್ಗೆ ಅಸಹನೆ ಇದಕ್ಕೆ ಕಾರಣವಾಗುತ್ತದೆ.[77] ತನ್ನ ಸಹೋದರರು ಆಧುನಿಕ ಬದುಕಿನ ಬಗ್ಗೆ ಒಲವನ್ನು ತೋರಿದರೆ ಏಂಜಲ್ ಕ್ಲೇರ್ ಹಳ್ಳಿಗಾಡಿನ ದೇಸಿಯ ಸರಳ, ನಿಷ್ಕಳಂಕ ಬದುಕನ್ನು ಆರಿಸುವುದರ ಮೂಲಕ ಆ ಮಣ್ಣಿನ ಮಗನಾಗಿ ಹೊರಹೊಮ್ಮುತ್ತಾನೆ. ಹೀಗೆ ಒಂದೇ ಕುಟುಂಬದ ಸದಸ್ಯರಲ್ಲಿ ಸಾಮಾಜಿಕ ತಾರತಮ್ಯ ಮತ್ತು ವರ್ಗ ವೈಷಮ್ಯವನ್ನು, ವೃತ್ತಿಯಲ್ಲಿ ಮೇಲು-ಕೀಳೆಂಬ ಭೇದ ಭಾವನೆಗಳನ್ನು ಕಾಣುತ್ತೇವೆ.

ಥಾಮಸ್ ಹಾರ್ಡಿಯವರ 'ದಿ ರಿಟರ್ನ್ ಆಫ್ ದಿ ನೇಟಿವ್' ಕಾದಂಬರಿಯೂ ಸಹ ದೇಸಿಯ ಗ್ರಾಮೀಣ ಪರಿಸರದ ಸಾಮಾಜಿಕ ಬದುಕಿನ ಚಿತ್ರಣವನ್ನು ನೀಡುತ್ತದೆ. ಈ ಕಾದಂಬರಿಯಲ್ಲಿ ಮೂರು ವಿಧದ ಸಾಮಾಜಿಕ ವರ್ಗ ಶ್ರೇಣಿಯನ್ನು ಕಾಣಬಹುದು. ಮೊದಲನೆಯ ವರ್ಗ ವೆಸೆಕ್ಸ್ ಜಿಲ್ಲೆಯ ಗ್ರಾಮೀಣ ಪರಿಸರದಲ್ಲಿದ್ದ ಸ್ವತಂತ್ರ ಜಮೀನ್ದಾರರು. ಇವರಿಗೆ ಸ್ವಂತ ಜಮೀನು ಇದ್ದು ಹಳ್ಳಿಯಲ್ಲಿದ್ದ ಇತರರಿಗಿಂತ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಪ್ರಬಲರಾಗಿದ್ದರು. ಎರಡನೆಯ ವರ್ಗದಲ್ಲಿ ಸರ್ಕಾರಿ ಸೇವೆಯಲ್ಲಿದ್ದವರು, ವರ್ತಕರು ಮತ್ತು ಹೊರಗಿನಿಂದ ಬಂದವರು. ಮೂರನೆಯ ವರ್ಗದಲ್ಲಿ ವಿವಿಧ ದೇಸಿಯ ಕಸುಬುಗಳನ್ನು ಮಾಡುವವರು ಮತ್ತು ಕೂಲಿಕಾರ್ಮಿಕರು. ಶ್ರೀಮತಿ ಯೋಬ್ರೈಟ್ ಪರಂಪರಾಗತವಾಗಿ ಬಂದಿದ್ದ ಸ್ವಲ್ಪ ಮಟ್ಟಿನ ಶ್ರೀಮಂತಿಕೆಯಿಂದ ಕೂಡಿದ ಸಾಂಪ್ರದಾಯಿಕ ಬದುಕನ್ನು ಪ್ರತಿನಿಧಿಸುವವರು. ಸಾಮಾಜಿಕ ಪ್ರತಿಷ್ಠೆ ಮತ್ತು ಗೌರವಕ್ಕೆ ಪಾತ್ರರಾದವರು. ಕ್ಯಾಪ್ಟನ್ ವೈ ಸರ್ಕಾರಿ ಸೇವೆಯಲ್ಲಿದ್ದು ನಿವೃತ್ತ ಜೀವನ ನಡೆಸಲು ವೆಸೆಕ್ಸ್‌ನ ಎಗ್ಡನ್ ಹೀತ್ ಪ್ರದೇಶವನ್ನು ಆಯ್ಕೆಮಾಡಿಕೊಂಡು ತನ್ನ ಮೊಮ್ಮಗಳು ಯುಸ್ಟೇಷ್ಯಳ ಜೊತೆ ವಾಸವಾಗಿರುತ್ತಾನೆ. ಸಾಮಾಜಿಕ ಪ್ರತಿಷ್ಠೆ ಮತ್ತು ಆರ್ಥಿಕ ಸ್ವಾವಲಂಬನೆಯನ್ನು ಇಂತವರಲ್ಲಿ ಕಾಣಬಹುದು. ಶ್ರೀಮತಿ ಯೋಬ್ರೈಟ್ ಮತ್ತು ಕ್ಯಾಪ್ಟನ್ ವೈ ಇಬ್ಬರೂ ಸಾಮಾಜಿಕವಾಗಿ ಶ್ರೇಷ್ಠ ಮಟ್ಟದಲ್ಲಿದ್ದರೂ, ಶ್ರೀಮತಿ ಯೋಬ್ರೈಟ್ ಪ್ರಕಾರ ಕ್ಯಾಪ್ಟನ್ ವೈ ಕುಲೀನರಾಗಿರಲಿಲ್ಲ. ಡಿಗೋರಿವೆನ್ ಸಾಂಪ್ರದಾಯಿಕ ದೇಸಿಯ ವೃತ್ತಿಯಾದ ಕಾವಿ ಮಾರಲು ಹಳ್ಳಿಯಿಂದ ಹಳ್ಳಿಗೆ ಹೋಗುವ ಅಲೆಮಾರಿ. ಇಂತಹ ದೇಸಿಯ ಕಸುಬು ಆರ್ಥಿಕವಾಗಿ ಲಾಭದಾಯಕವಾಗಿದ್ದರೂ, ಸಾಮಾಜಿಕವಾಗಿ ಕೀಳುದರ್ಜೆಯ ವ್ಯಾಪಾರವಾಗಿದ್ದು

ಮತ್ತು ಸಾಮಾಜಿಕ ಪ್ರತಿಷ್ಠೆಯ ದೃಷ್ಟಿಯಿಂದ ಹೇಳಿಕೊಳ್ಳುವಂತದಾಗಿರಲಿಲ್ಲ ಎಂಬ ಭಾವನೆ ಮೇಲ್ವರ್ಗದವರದಾಗಿತ್ತು.

ಹೀಗೆ ವೃತ್ತಿಯಲ್ಲಿ ಮೇಲು ಕೀಳೆಂಬ ಭಾವನೆಯನ್ನು ಕಾದಂಬರಿ ಚಿತ್ರಿಸುತ್ತದೆ. ಅವನನ್ನು, ಅವನ ವೃತ್ತಿಯನ್ನು ಕೀಳುಭಾವನೆಯಿಂದ ಕಾಣುವ ಪರಿಯನ್ನು ಥೋಮಸಿನ್‌ಳ ಪತ್ರದಲ್ಲಿ ಉಲ್ಲೇಖಿಸಲಾಗಿದೆ. ಡಿಗೊರಿವೆನ್ ತನ್ನನ್ನು ಮದುವೆಯಾಗುವಂತೆ ಥೋಮಸಿನ್‌ಳಿಗೆ ಕೇಳಿಕೊಂಡು ಪತ್ರ ಬರೆಯುತ್ತಾನೆ. ಪ್ರತಿಯಾಗಿ ಥೋಮಸಿನ್ ತನ್ನ ಸಾಮಾಜಿಕ ಸ್ಥಾನಮಾನ ಮತ್ತು ತನ್ನ ಚಿಕ್ಕಮ್ಮ ಶ್ರೀಮತಿ ಯೋಬ್ರೈಟ್ ಅಕ್ಷೇಪಣೆಯ ಕಾರಣವೊಡ್ಡಿ ನಿರಾಕರಿಸುತ್ತಾಳೆ.[78] ಶ್ರೀಮತಿ ಯೋಬ್ರೈಟ್ ಮತ್ತು ಥೊಮಸಿನ್ ತಮ್ಮ ಸಾಮಾಜಿಕ ಪ್ರತಿಷ್ಠೆಗೆ ಎಲ್ಲಿ ಕಳಂಕ ಬರುತ್ತದೋ ಎಂಬ ಕಾರಣದಿಂದ ಡಿಗೊರಿವೆನ್‌ನನ್ನು ತಿರಸ್ಕಾರ ಭಾವದಿಂದ ನೋಡುತ್ತಾರೆ. ದೊಡ್ಡವರ ಮನೆಗೆ ಸಮಾಜದಲ್ಲಿ ಕೆಳಸ್ತರದ ಜನರು ಹೋಗುವುದು ಒಂದು ದೊಡ್ಡ ಸಾಹಸವೇ ಆಗಿತ್ತು. ಡಿಗೊರಿವೆನ್ ಒಮ್ಮೆ ಕ್ಯಾಪ್ಟನ್ ವೈ ಮನೆಗೆ ಯುಸ್ಟೇಷ್ಯಳನ್ನು ಭೇಟಿಯಾಗಲು ಬಹಳ ಕಷ್ಟದಿಂದ ಹೋಗುತ್ತಾನೆ, ಆದರೆ ಯುಸ್ಟೇಷ್ಯ ಅವನ ಜೊತೆಗೆ ಮಾತನಾಡಿದ್ದರಿಂದ ತನ್ನ ಗೌರವವೆಲ್ಲಾ ಹಾಳಾಯಿತು ಎಂದುಕೊಳ್ಳುತ್ತಾಳೆ. ಇದರಿಂದ 19ನೇ ಶತಮಾನದ ಇಂಗ್ಲೆಂಡಿನ ಗ್ರಾಮೀಣ ಪರಿಸರದಲ್ಲಿದ್ದ ವರ್ಗತಾರತಮ್ಯವನ್ನು ಕಾಣಬಹುದು.[79]

ಶ್ರೇಣೀಕರಣಗೊಂಡ ವರ್ಗ ವ್ಯವಸ್ಥೆಯಲ್ಲಿ ಸಾಮಾಜಿಕ ಪ್ರತಿಷ್ಠೆ ವೈವಾಹಿಕ ಸಂಬಂಧಗಳಿಗೂ ವಿಸ್ತರಿಸಿತ್ತು. ಯುಸ್ಟೇಷ್ಯಳ ಪ್ರಕಾರ ತಾನು ವೈಲ್ಡೀವ್‌ಗಿಂತ ಸಾಮಾಜಿಕ ಅಂತಸ್ತಿನಲ್ಲಿ ಮೇಲ್ಪಟ್ಟವಳು ಎನ್ನುವ ಭಾವನೆ ಬಲವಾಗಿತ್ತು. ಅದೂ ಅಲ್ಲದೆ "ವೈಲ್ಡೀವ್ ಬೇರೊಬ್ಬ ಹೆಂಗಸಿಗೆ ಬೇಡವಾಗಿರುವವನು, ಆಕೆಯಿಂದ ನಿರಾಕರಿಸಲ್ಪಟ್ಟವನು ಇತರರಿಗೆ ಬೇಡವಾದುದನ್ನು ಬಯಸದೇ ಇರುವ ಪ್ರವೃತ್ತಿ ಎಲ್ಲಾ ಜೀವಿಗಳಲ್ಲೂ ಸಾಮಾನ್ಯವಾಗಿ ಇದ್ದೇ ಇರುತ್ತದೆ. ಆದ್ದರಿಂದ ತಾನು ಅವನನ್ನು ಇಷ್ಟಪಟ್ಟರೆ, ಪ್ರೇಮಿಸಿದರೆ, ಮದುವೆಯಾದರೆ ತನ್ನ ಅಂತಸ್ತು, ಘನತೆ ಗೌರವ-ಪ್ರತಿಷ್ಠೆ ಕುಸಿಯುತ್ತದೆ ಎಂಬ ಭಾವನೆ ಯುಸ್ಟೇಷ್ಯಳದು".[80] ಯುಸ್ಟೇಷ್ಯ ಮತ್ತು ಕ್ಲಿಮ್ ಅವರ ವೈವಾಹಿಕ ಜೀವನಕ್ಕೆ ಸಂಬಂಧಪಟ್ಟಂತೆ ಮೇಲು ಕೀಳು ಎಂಬ ಭಾವನೆಯೇ ಬೇರೆಯದು. ಕ್ಲಿಮ್ ಪ್ರಕಾರ ತಾನು ಪ್ರೀತಿಸಿರುವ ಯುಸ್ಟೇಷ್ಯ ಕುಲೀನೆ. ಆದರೆ ಅವನ ತಾಯಿ ಶ್ರೀಮತಿ ಯೋಬ್ರೈಟ್ ಆಕೆಯನ್ನು ಇಷ್ಟಪಡುವುದಿಲ್ಲ. "ಏಕೆಂದರೆ ಯುಸ್ಟೇಷ್ಯ ಅಂತಸ್ತಿನಲ್ಲಿ ತನಗಿಂತ ಕೀಳು. ಅವಳ ಹೆಸರೂ ಕ್ರಿಶ್ಚಿಯನ್ ಅಲ್ಲ. ಯಾವನೋ ಬ್ಯಾಂಡ್ ಮೇಷ್ಟ್ರ ಮಗಳು. ಸುಸಂಸ್ಕೃತಳಲ್ಲ, ಅಂತಸ್ತಿಲ್ಲ ಮತ್ತು ಲಂಪಟಳಾದ ಹೆಣ್ಣು"[81] ಎಂದು ಮೂದಲಿಸುತ್ತಾಳೆ.

ಇಲ್ಲಿ ಸಾಮಾಜಿಕ ಅಂತಸ್ತನ್ನು, ವ್ಯಕ್ತಿ ತಾನು ಕೈಗೊಳ್ಳುವ ಕಸುಬು, ಧರ್ಮ, ವಂಶ ಮತ್ತು ಮನೆಯ ಸಂಸ್ಕೃತಿ ಮುಂತಾದವುಗಳ ಮೇಲೆ ಸಮಾಜದಲ್ಲಿ ವ್ಯಕ್ತಿಯನ್ನು ವರ್ಗೀಕರಿಸುವುದನ್ನು ಕಾಣುತ್ತೇವೆ.

ಪ್ಯಾರಿಸ್‌ನಲ್ಲಿ ತನ್ನ ಮಗ ರತ್ನಪಡಿ ಅಂಗಡಿಯ ಮ್ಯಾನೇಜರ್ ಆಗಿದ್ದವನು, ಅದನ್ನು ತೊರೆಯುವುದು ಶ್ರೀಮತಿ ಯೋಬ್ರೈಟ್‌ಗೆ ಇಷ್ಟವಾಗುವುದಿಲ್ಲ. ಏಕೆಂದರೆ ಪ್ಯಾರಿಸ್ಸಿನಲ್ಲಿ ತನ್ನ ಮಗನ ವೃತ್ತಿ ಆಕೆಗೆ ಪ್ರತಿಷ್ಠೆಯಾಗಿತ್ತು ಆದರೆ ಕ್ಲಿಮ್ ಮದುವೆಯ ನಂತರ ಪ್ಯಾರಿಸ್ಸಿಗೆ ಮರಳದೆ ತನ್ನ ಊರಿನಲ್ಲಿ ಶಾಲೆ ತೆರೆದು ಒಬ್ಬ ಉಪಾಧ್ಯಾಯನಾಗಿ ಬಡವರ, ಏನೂ ಅರಿಯದವರಿಗೆ ಬೋಧಿಸುವ ವೃತ್ತಿಯನ್ನು ಆರಂಭಿಸಬೇಕೆಂದು ಹಳ್ಳಿಯಲ್ಲಿಯೇ ಉಳಿಯುತ್ತಾನೆ. ಅತಿಯಾದ ಓದಿನಿಂದ ಕ್ಲಿಮ್‌ನ ಕಣ್ಣುಗಳು ಮಂದವಾಗುತ್ತಾ ಕೊನೆಗೆ ದೃಷ್ಟಿಕಳೆದುಕೊಳ್ಳುತ್ತಾನೆ. ಅದರಿಂದ ನಿರಾಶೆಯಾದರೂ ಜೀವನ ನಿರ್ವಹಣೆಗೆ ಹೊದರು ಕತ್ತರಿಸುವ ಕೆಲಸಮಾಡಲು ನಿರ್ಧರಿಸಿ ಕಾರ್ಯಪ್ರವೃತ್ತನಾಗುತ್ತಾನೆ. ಇದರಿಂದ ಯುಸ್ಟೇಷ್ಯಳಿಗೆ ಬಹಳ ನೋವಾಗುತ್ತದೆ. ಆಕೆಯ ಪ್ರಕಾರ ಹೊದರು ಕತ್ತರಿಸುವ ಕೆಲಸ ಅತಿ ಕೀಳಾದದ್ದು, ಅದನ್ನು ಜವಾನರು, ಜೀತದವರು, ಮಾಡುವುದು ಮಾತ್ರವಾಗಿತ್ತು. ಇಲ್ಲಿಯೂ ವ್ಯಕ್ತಿ ತಾನು ಕೈಗೊಳ್ಳುವ ವೃತ್ತಿ ಕಸುಬಿನ ಆಧಾರದ ಮೇಲೆ ಅವನ ಸ್ಥಾನಮಾನ ಪ್ರತಿಷ್ಠೆ ಅವಲಂಬಿತವಾಗುವುದನ್ನು ಕಾಣುತ್ತೇವೆ.[82] ಶ್ರೀಮತಿ ಯೋಬ್ರೈಟ್ ತಾನು ಸಾಕಿಬೆಳೆಸಿದ ಥೊಮಸಿನ್‌ಗೆ ಡಿಗೊರಿವೆನ್‌ನನ್ನು ಮದುವೆಯಾಗಲು ಬಿಡುವುದಿಲ್ಲ. ಏಕೆಂದರೆ ಅವನ ಕಾವಿ ವ್ಯಾಪಾರ ಸಾಮಾಜಿಕವಾಗಿ ಕೀಳುಮಟ್ಟದ್ದು. ಆದ್ದರಿಂದ ಒಬ್ಬ ಮೇಲ್ಮಟ್ಟದ ವೃತ್ತಿಯಲ್ಲಿರುವವನನ್ನು ಮದುವೆಯಾಗಲು ಉಪದೇಶಿಸುತ್ತಾಳೆ. ಯುಸ್ಟೇಷ್ಯ ಯಾರನ್ನು ಸಾಮಾಜಿಕ ಅಂತಸ್ತಿನ ದೃಷ್ಟಿಯಿಂದ ಮದುವೆಯಾಗಲು ನಿರಾಕರಿಸುತ್ತಾಳೋ ಅವನನ್ನು ಅಂದರೆ ವೈಲ್ಡೀವ್‌ನನ್ನು ಮದುವೆಯಾಗಲು ಥೊಮಸಿನ್‌ಗೆ ಹೇಳುತ್ತಾಳೆ. ಆದರೆ ತನ್ನ ಮಗ ಯುಸ್ಟೇಷ್ಯಳನ್ನು ಮದುವೆಯಾಗಲು ಇಷ್ಟಪಡುವುದಿಲ್ಲ. ಅಲ್ಲಿಯೂ ಇದೇ ಸಾಮಾಜಿಕ ಅಂತಸ್ತಿನ ಪ್ರತಿಷ್ಠೆಯು ಕಾರಣವಾಗುತ್ತದೆ.

ಥಾಮಸ್ ಹಾರ್ಡಿಯವರು 19ನೇ ಶತಮಾನದ ಇಂಗ್ಲೆಂಡಿನ ಗ್ರಾಮೀಣ ಪ್ರದೇಶದಲ್ಲಿದ್ದ ವರ್ಗ-ಸಂಘರ್ಷಗಳ ಜೊತೆಗೆ ಒಂದೇ ಪ್ರದೇಶದಲ್ಲಿದ್ದ ನಿವಾಸಿಗಳಲ್ಲಿ ತಾವೇ ಮೇಲು, ಬೇರೆಯವರು ಅಂತಸ್ತಿನಲ್ಲಿ ಕೀಳು ಎಂಬ ಭಾವನೆ ಸಾಮಾನ್ಯವಾಗಿತ್ತು ಎಂಬುದನ್ನು ಚಿತ್ರಿಸಿದ್ದಾರೆ. ಈ ವರ್ಗ ವೈರುಧ್ಯಗಳನ್ನು 'ದಿ ರಿಟರ್ನ್ ಆಫ್ ದಿ ನೇಟಿವ್' ಕಾದಂಬರಿಯು ವಾಸ್ತವಿಕ ನೆಲೆಗಟ್ಟಿನಲ್ಲಿ ಚಿತ್ರಿಸುತ್ತದೆ. ಶ್ರೀಮತಿ ಯೋಬ್ರೈಟ್ ಪ್ರಕಾರ ಯುಸ್ಟೇಷ್ಯ ವೈ ಸಾಮಾಜಿಕವಾಗಿ ಕೀಳು ಮಟ್ಟದ ಮನೆತನದವಳು ಎಂದು ಭಾವಿಸಿದರೆ, ಯುಸ್ಟೇಷ್ಯಳ ಅಜ್ಜ ಕ್ಯಾಪ್ಟನ್ ವೈಗೆ ಶ್ರೀಮತಿ

ಯೋಬ್ರೈಟ್ ಮನೆಯವರನ್ನು ನೋಡುವ ಧಾಟಿಯೇ ಬೇರೆಯಾಗಿರುತ್ತದೆ. ಯೋಬ್ರೈಟ್ ಮನೆತನದವರು ಹಳ್ಳಿಯ ಗಮಾರರು, ಕೊಳಕಿನ ಜನ, ಕೀಳು ಮಟ್ಟದ ಅಭಿರುಚಿಯುಳ್ಳವರು, ಒಬ್ಬ ಸಾಮಾನ್ಯ ಕಾರಭಾರಿಯ ಮಗಳು, ಸಾಮಾಜಿಕವಾಗಿ ಕೀಳುಸ್ತರದವಳು, ಎಂದು ಮೂದಲಿಸುತ್ತಾನೆ.[83] ಆದರೆ ಶ್ರೀಮತಿ ಯೋಬ್ರೈಟ್ ಕ್ಯಾಪ್ಟನ್ ಮತ್ತು ಅವನ ಮೊಮ್ಮಗಳು ಯುಸ್ಟೇಷ್ಯಳನ್ನು ಬಹುವಾಗಿ ಹೀಯಾಳಿಸುವುದಕ್ಕೆ ಕಾರಣ ಸಾಮಾಜಿಕ ಅಂತಸ್ತಿನ ಪ್ರತಿಷ್ಠೆಯಾಗಿರುವುದನ್ನು ಕಾಣುತ್ತೇವೆ. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ ವ್ಯಕ್ತಿ ತಾನು ಮತ್ತೊಬ್ಬರ ಬಗ್ಗೆ ಯೋಚಿಸುವಾಗ ತಾನು ಮಾತ್ರ ಶ್ರೇಷ್ಠ ಉಳಿದವರು ತನಗಿಮತ ಕೀಳು ಮಟ್ಟದವರು ಎನ್ನುವ ವ್ಯಕ್ತಿಗತ ಭಾವನೆ ಇರುವುದನ್ನು ವೆಸೆಕ್ಸ್‌ನ ಸಮಾಜದಲ್ಲಿ ಕಾಣುತ್ತೇವೆ.

ಮಲೆನಾಡಿನ ದೇಸಿ ಪರಿಸರದಲ್ಲಿ ಮಡಿ–ಮೈಲಿಗೆ ಮತ್ತು ಆರ್ಥಿಕ ಅಂಶಗಳು ಸಾಮಾಜಿಕ ಬದುಕಿನ ಭಾಗವಾಗಿದ್ದರೆ, ವೆಸೆಕ್ಸ್‌ನ ಗ್ರಾಮೀಣ ಪರಿಸರದಲ್ಲಿಯೂ ಸಹ ಮಡಿ ಮೈಲಿಗೆಯ ಆಚರಣೆಗಿಂತ ಸಾಮಾಜಿಕ ಪ್ರತಿಷ್ಠೆ ಮುಖ್ಯವಾಗುತ್ತದೆ. ವೈಲ್ಡೀವ್ ನೀರಿನಲ್ಲಿ ಮುಳುಗಿ ಸತ್ತು ಹೋದಾಗ ಅವನ ಪತ್ನಿ ತೋಮಸಿನ್‌ಳನ್ನು ಸಂತೈಸಲು ಡಿಗೊರಿವೆನ್ ಮುಂದಾಗುತ್ತಾನೆ ಆದರೆ ವೃತ್ತಿಯಲ್ಲಿ ತಾನು ಕೀಳೆಂಬ ಭಾವನೆ ಅದಕ್ಕೆ ತಡೆಯೊಡ್ಡುತ್ತದೆ. ಇದೇ ಡಿಗೊರಿವೆನ್ ಯುಸ್ಟೇಷ್ಯಳ ಮನೆಗೆ ಹೋದಾಗಲೂ ಆಕೆ ಅವನೊಡನೆ, ಮಾತನಾಡಲು ಹಿಂಜರಿಯುತ್ತಾಳೆ, ಅವನ ಜೊತೆ ಮಾತನಾಡಿದರೆ ತನ್ನ ಗೌರವ ಹಾಳಾಗುತ್ತದೆ ಎಂದು ಕೊಳ್ಳುತ್ತಾಳೆ. ಶ್ರೀಮತಿ ಯೋಬ್ರೈಟ್ ಅವನನ್ನು ದೂರದಿಂದಲೇ ಮಾತನಾಡಿಸುತ್ತಾಳೆ ಇದಕ್ಕೆ ಕಾರಣ ಸಾಮಾಜಿಕ ಪ್ರತಿಷ್ಠೆಯ ಜೊತೆಗೆ ಮಡಿ ಮೈಲಿಗೆಯ ಪ್ರಶ್ನೆಯಾಗಿರುತ್ತದೆ.

ಕುವೆಂಪು ಮತ್ತು ಹಾರ್ಡಿಯವರ ಕಾದಂಬರಿಗಳನ್ನು ವಿಶ್ಲೇಷಿಸಿದಾಗ ಗ್ರಾಮೀಣ ಪ್ರದೇಶದಲ್ಲಿ ದೇಸಿಯ ಸಾಮಾಜಿಕ ಬದುಕು ಸಮಾನಂತರವಾಗಿ ಚಿತ್ರಿತವಾಗಿರುವುದನ್ನು ಕಾಣುತ್ತೇವೆ. ಭಾರತದಂತಹ ಸಾಮಾಜಿಕ ವ್ಯವಸ್ಥೆಯಲ್ಲಿ ವರ್ಣ, ವರ್ಗ, ಜಾತಿ, ಉಪಜಾತಿ, ಪ್ರಮುಖ ಪಾತ್ರವಹಿಸಿದರೆ ಇಂಗ್ಲೆಂಡಿನ ಗ್ರಾಮೀಣ ದೇಸಿಯ ಬದುಕಿನಲ್ಲಿ ವ್ಯಕ್ತಿ ತಾನು ಅನುಸರಿಸುವ ವೃತ್ತಿ, ಕಸುಬು, ತಾನು ಪ್ರತಿನಿಧಿಸುವ ಸಮಾಜ, ಬೆಳೆದು ಬಂದ ಪರಿಸರ, ಹಣ, ಐಶ್ವರ್ಯ, ವಿದ್ಯೆ ಮುಂತಾದವು ವರ್ಗ ವ್ಯವಸ್ಥೆಯನ್ನು ಪ್ರತಿನಿಧಿಸುತ್ತವೆ. ಭಾರತದಲ್ಲಿರುವ ಅನಿಷ್ಟ ಜಾತಿ, ಉಪಜಾತಿ, ಪಂಗಡ, ಒಳಪಂಗಡಗಳು ಇಂಗ್ಲೆಂಡಿನ ದೇಸಿಯ ಪರಿಸರದಲ್ಲಿ ಕಂಡುಬರದೆ ಇದ್ದರೂ ವರ್ಗ ಸಂಘರ್ಷಗಳನ್ನು ಕಾಣಬಹುದು. ಸಾಮಾಜಿಕ ಅಂತಸ್ತು, ಪ್ರತಿಷ್ಠೆ, ಅಧಿಕಾರ ಹೊಂದಿರುವ ವ್ಯಕ್ತಿಗಳು ತಮ್ಮ ಆಳುಗಳನ್ನು, ಜೀತದಾಳುಗಳನ್ನು ಶೋಷಿಸುವುದನ್ನು, ಇಬ್ಬರೂ

ಕೃತಿಕಾರರು ತಮ್ಮ ಕಾದಂಬರಿಗಳಲ್ಲಿ ಸಮಾನಾಂತರವಾಗಿ ವರ್ಣಿಸಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಚಾಲ್ತಿಯಲ್ಲಿದ್ದ ಊಳಿಗಮಾನ್ಯ ಪದ್ಧತಿ, ಕೃಷಿಕಾರ್ಮಿಕರು ಮತ್ತು ಜೀತಾದಾಳುಗಳ ನರಕಮಯವಾದ ಬದುಕನ್ನು ಅವರ ಕೃತಿಗಳು ವಿವರಿಸುತ್ತವೆ. ಉಳ್ಳವರು ಮತ್ತು ಉಳ್ಳದವರ ನಡುವಿನ ಸಂಘರ್ಷ ಮಡಿ ಮೈಲಿಗೆ ಉಚ್ಚ-ನೀಚ, ಶ್ರೇಷ್ಠ-ಕನಿಷ್ಠ ಮತ್ತು ಪರಿಶುದ್ಧತೆಯ ಆಧಾರದ ಮೇಲೆ ಮನುಷ್ಯರನ್ನು ಮೃಗೀಯ ರೀತಿಯಲ್ಲಿ ಕಾಣುವುದನ್ನು ಇಬ್ಬರೂ ಕಾದಂಬರಿಕಾರರ ಕೃತಿಗಳಲ್ಲಿ ಕಾಣುತ್ತೇವೆ.

3.7 ಸಾಂಸ್ಕೃತಿಕ ಪರಿಸರ:

ದೇಸಿಯತೆಯನ್ನು ಪ್ರತಿಬಿಂಬಿಸುವ ಸಾಮಾಜಿಕ ಬದುಕಿನಲ್ಲಿ ಬಹುಕಾಲದಿಂದಲೂ ಕಾಲ, ಧರ್ಮ, ಜಾತಿಗನುಗುಣವಾಗಿ ವಿವಾಹ, ಸಂಸ್ಕಾರ, ಉಡುಗೆ, ತೊಡುಗೆ, ಆಹಾರಪದ್ಧತಿ ಮುಂತಾದವು ಜನರ ಬದುಕಿನಲ್ಲಿ ಮಹತ್ತರವಾದ ಸ್ಥಾನ ಪಡೆದುಕೊಂಡಿವೆ. ಇವುಗಳ ಆಚರಣೆ, ಅನುಕರಣೆ ಆಯಾ ಪ್ರದೇಶದ ರೂಢಿ ಸಂಪ್ರದಾಯಕ್ಕನುಗುಣವಾಗಿ ನಡೆಯುತ್ತಿರುತ್ತವೆ. ಯಾವುದೇ ನಾಗರಿಕ ಸಮಾಜ ಇಂಥಹ ರೂಢಿ ಸಂಪ್ರದಾಯ ಮತ್ತು ಆಚರಣೆಗಳಿಂದ ಮುಕ್ತವಾಗಿರದೆ ಬದುಕಿನ ಅವಿಭಾಜ್ಯ ಅಂಗವಾಗಿ ಆಳವಡಿಸಿಕೊಂಡಿರುತ್ತದೆ.

ವಿವಾಹ ಪದ್ಧತಿ: ಯಾವುದೇ ಒಂದು ಸಮಾಜದಲ್ಲಿ, ಧರ್ಮದಲ್ಲಿ ವಿವಾಹವು ಬಹಳ ಮುಖ್ಯವಾದ ಸಂಸ್ಕಾರವೆನಿಸಿಕೊಂಡಿದೆ. ವಿವಾಹವೆಂಬುದು ಒಂದು ಭಾವನಾತ್ಮಕವಾದ ಮತ್ತು ಸಾಮಾಜಿಕ ಸಂಬಂಧಗಳ ವಿಸ್ತರಣೆಯ ಮತ್ತು ವಂಶಾಭಿವೃದ್ದಿಯ ಪ್ರತೀಕವಾಗಿದೆ. ಮದುವೆಯ ಆಶಯ ಒಂದೇ ರೀತಿಯಾಗಿದ್ದರೂ ಅವುಗಳ ಆಚರಣೆ ಎಲ್ಲಾ ಕಾಲದಲ್ಲಿಯೂ ವೈವಿಧ್ಯಮಯವಾಗಿದೆ. ಭಾರತದಂತಹ ದೇಸಿಯ ಪರಿಸರದಲ್ಲಿ ಅನೇಕ ರೀತಿಯ ವಿವಾಹ ಪದ್ಧತಿಗಳನ್ನು ಕಾಣುತ್ತೇವೆ. ಅವುಗಳಲ್ಲಿ ಬಾಲ್ಯ ವಿವಾಹ, ವಿಧವಾ ವಿವಾಹ, ಅಂತರ್ಜಾತೀಯ ವಿವಾಹ, ಅಂತರಧರ್ಮೀಯ ವಿವಾಹ ಮತ್ತು ಬಹುಪತ್ನಿತ್ವ ವಿವಾಹಗಳನ್ನು ಕಾಣುತ್ತೇವೆ. ವಿವಾಹಗಳು ಆಯಾ ಸಮಾಜದಲ್ಲಿ ರೂಢಿಯಲ್ಲಿರುವ ಸಂಪ್ರದಾಯ, ಧರ್ಮ, ವಯೋಮಾನ, ಜಾತಿ ಪಂಗಡ ಮುಂತಾದ ಅಂಶಗಳ ಆಧಾರದ ಮೇಲೆ ನಡೆಯುತ್ತವೆ. ಕುವೆಂಪುರವರ

ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ವಿವಾಹದ ವಯಸ್ಸಿನ ಬಗ್ಗೆ ವಿವರಣೆ ಇದೆ. ಮದುವೆಯಲ್ಲಿ ಹೆಣ್ಣಿನ ವಯಸ್ಸಿನ ಬಗ್ಗೆ ಹೆಚ್ಚಿನ ಪ್ರಾಮುಖ್ಯತೆ ನೀಡುವುದನ್ನು ಕಾಣುತ್ತೇವೆ. ವಿವಾಹದ ವಯಸ್ಸು ಮೀರಿದ ಹೆಣ್ಣಿಗೂ ಮತ್ತು ಆಕೆಯ ಕುಟುಂಬದವರಿಗೂ ಸಮಾಜದಲ್ಲಿ ಗೌರವವಿರುತ್ತಿರಲಿಲ್ಲ. ಅದರಲ್ಲೂ ಬ್ರಾಹ್ಮಣ ಹೆಣ್ಣಿಗೆ ಮದುವೆಯಾಗದಿದ್ದರೆ ಮನೆಯಿಂದ ಹೊರಹಾಕುತ್ತಿದ್ದ ಸಂಗತಿಯನ್ನು ಕಾಣಬಹುದು. ಸುಬ್ಬಣ್ಣ ಹೆಗ್ಗಡೆಗೆ ನೆರೆಹೊರೆಯವರು ಮಗಳಿಗೆ ಮದುವೆ ವಯಸ್ಸು ಮೀರಿ ಹೋಯಿತೆಂದು ಹೇಳುತ್ತಿದ್ದಾಗ: "ಅವಳೇನು ಹಾರುವರ ಮನೆಯ ಹೆಣ್ಣೇ? ಮದುವೆಯಾಗುವುದಕ್ಕೆ ಮೊದಲೆ ದೊಡ್ಡವಳಾಗಿ ಬಿಟ್ಟರೆ ಕಾಡಿಗಟ್ಟಬೇಕೆಂಬ ಹೆದರಿಕೆಯೇನು ತಮಗೆ?"[84] ಇಲ್ಲಿ ಬ್ರಾಹ್ಮಣ ಮತ್ತು ಬ್ರಾಹ್ಮಣೇತರ ಸಮಾಜದಲ್ಲಿ ವಿವಾಹವನ್ನು ವಯಸ್ಸು ನಿರ್ಧರಿಸಲ್ಪಡುತ್ತಿದ್ದುದನ್ನು ಕಾಣುತ್ತೇವೆ.

ದೇಸಿಯ ಸಂಸ್ಕೃತಿಯಲ್ಲಿ ವಿವಾಹಗಳು ಶಾಸ್ತ್ರೋಕ್ತವಾಗಿ ನಡೆಯುತ್ತವೆ. ಜ್ಯೋತಿಷ್ಯರಿಂದ ಶಾಸ್ತ್ರ ಕೇಳಿಸಿ, ಗಂಡು ಹೆಣ್ಣಿನ ಹೆಸರುಗಳ ಆಧಾರದ ಮೇಲೆ ಜಾತಕ ನೋಡಿ ವೇಳೆ, ದಿನಾಂಕ, ನಿಗಧಿಪಡಿಸಿ ಮದುವೆಗಳನ್ನು ಏರ್ಪಡಿಸುತ್ತಿದ್ದರು. ಕುವೆಂಪುರವರ ಎರಡೂ ಕಾದಂಬರಿಗಳಲ್ಲಿ ಬ್ರಾಹ್ಮಣೇತರ ಮದುವೆಯ ವಿವರಗಳನ್ನು ಚಿತ್ರಿಸಲಾಗಿದೆ. ಬಹುಪತ್ನಿತ್ವ ವಿವಾಹವು ಮಲೆನಾಡಿನ ದೇಸಿಯ ಸಮಾಜದಲ್ಲಿ ಪ್ರಚಲಿತದಲ್ಲಿದ್ದುದನ್ನು ಕಾಣುತ್ತೇವೆ. ಕಾನೂರು ಹೆಗ್ಗಡಿತಿ ಕಾದಂಬರಿಯಲ್ಲಿ ಚಂದ್ರಯ್ಯಗೌಡರು ಮೊದಲನೆಯ ಹೆಂಡತಿ ಸತ್ತ ನಂತರ ಮರು ವಿವಾಹವಾಗುತ್ತಾರೆ. ಎರಡನೆಯ ಹೆಂಡತಿ ಸತ್ತ ನಂತರ ಮೂರನೆಯ ಬಾರಿಗೆ ಮತ್ತೆ ಮರು ಮದುವೆಯಾಗುತ್ತಾರೆ. ಅದೇ ಕಾದಂಬರಿಯಲ್ಲಿ ಬರುವ ಅಣ್ಣಯ್ಯಗೌಡ ಮೊದಲನೆಯ ಹೆಂಡತಿ ಸತ್ತ ನಂತರ ಎರಡನೆಯ ಮದುವೆ ಮತ್ತು ಎರಡನೆಯ ಹೆಂಡತಿ ಸತ್ತನಂತರ ಮೂರನೆಯ ಬಾರಿಗೆ ಮರುಮದುವೆಯಾಗುವುದನ್ನು ಮತ್ತು ಆಕೆ ಸತ್ತ ನಂತರ ನಾಲ್ಕನೆಯ ಬಾರಿಗೆ ಮದುವೆಯಾಗುವುದನ್ನು ಕಾಣಬಹುದು. ಕೆಲವೊಂದು ಸಂದರ್ಭದಲ್ಲಿ ಮೊದಲನೆಯ ಹೆಂಡತಿ ಬದುಕಿದ್ದಾಗಲೂ ಮರುವಿವಾಹವಾಗುವುದನ್ನು ಕಾಣುತ್ತೇವೆ.

ಕುವೆಂಪುರವರ ಕಾನೂರು ಹೆಗ್ಗಡಿತಿಯಲ್ಲಿ ಮದುವೆಗೆ ಮೊದಲು ಸಂಪ್ರದಾಯದಂತೆ ಹೆಣ್ಣು ಹುಡುಕುವುದು, ನಂತರ ಜಾತಕ ನೋಡಿಸಿ ಹೆಣ್ಣಿಗೆ ಹೂವು ಮುಡಿಸುವುದು, ನಂತರ ವೀಳ್ಯಶಾಸ್ತ್ರ, ಮದುವೆಯ ಪೂರ್ವಭಾವಿ ಕೆಲಸಗಳನ್ನು ಚಪ್ಪರಕ್ಕೆ ಅಂದರೆ ಮದುವೆಯ ಹಿಂದಿನ ದಿನದ ಹೊತ್ತಿಗೆ ಹೊಂದಿಸಿಕೊಳ್ಳುವುದು ಸಂಪ್ರದಾಯವಾಗಿತ್ತು. ನೆಂಟರಿಷ್ಟರಿಗೆ, ಸ್ನೇಹಿತರಿಗೆ, ಊರಿನವರಿಗೆ, ಲಗ್ನ ಪತ್ರಿಕೆಯನ್ನು ಹಂಚುವುದು ಊರಿನ ಶ್ರೀಮಂತ ಜಮೀನ್ದಾರರಲ್ಲಿ

ರೂಢಿಯಲ್ಲಿತ್ತು. ಲಗ್ನ ಪತ್ರಿಕೆ ಕೊಡುವುದರ ಜೊತೆಗೆ ನೆಂಟರನ್ನು, ಹತ್ತಿರದವರನ್ನು ವ್ಯಕ್ತಿಗತವಾಗಿ ಹೋಗಿ ಕರೆಯಬೇಕೆಂಬ ಸಂಪ್ರದಾಯವಿತ್ತು, ಹಾಗೆಯೇ ವಿವಾಹಗಳು ಹೆಚ್ಚಾಗಿ ಹೆಣ್ಣಿನ ಮನೆಯಲ್ಲಿ ನಡೆಯುತ್ತಿದ್ದವು. ಗಂಡಿನ ಮನೆಯವರು ಹೆಣ್ಣಿನ ಮನೆಗೆ ದಿಬ್ಬಣ ತೆಗೆದುಕೊಂಡು ಹೋಗುವ ಪದ್ಧತಿ ಕಾನೂರು ಹೆಗ್ಗಡಿತಿ ಕಾದಂಬರಿಯಲ್ಲಿ ಬರುತ್ತದೆ: "ರಾಮಯ್ಯನ ಮದುವೆ ದಿಬ್ಬಣ ಮುತ್ತಳ್ಳಿಗೆ ಬರುವುದು, ಮದುವೆಯ ದಿಬ್ಬಣದಲ್ಲಿ ನೂರಾರು ಜನರು ನೆರೆದಿದ್ದರು. ಗರ್ನಾಲು, ಕದಿನಿ, ಬಾಣಬಿರುಸು, ಕೊಂಬು, ಕಹಳೆ, ವಾಲಗ, ಮೊದಲಾದವುಗಳ ಸದ್ದಿಗಿಂತಲೂ ಅತಿಶಯವಾಗಿ ಅವಿಚ್ಛಿನ್ನವಾಗಿ ಮನುಷ್ಯ ಸಮೂಹದ ತುಮುಲನಾದ ಮನೆಯನ್ನೆಲ್ಲ ತುಂಬಿ ತುಳುಕುತ್ತಿದ್ದಿತು. ಮನೆಯಂಗಳದಲ್ಲಿ ರಚಿಸಿದ್ದ ಚಪ್ಪರದಡಿ, ಧಾರೆಯ ಮಂಟಪದ ಬಳಿ, ಜಗಲಿಯಲ್ಲಿ, ಮನೆಯ ಮೂಲೆ ಮೂಲೆಗಳಲ್ಲಿ ಲ್ಯಾಂಪು, ತೂಗುಲ್ಯಾಂಪು, ಲಾಟೀನು, ಲಾಂದ್ರ, ಚಿಮಿನಿ, ಕಕ್ಕಡ, ದೊಂದಿ, ಹಣತೆ, ಮೊದಲಾದ ತರತರದ ದೀಪಾವಳಿ ರಂಜಿಸುತ್ತಿತ್ತು. ದಿಬ್ಬಣದ ಜನರೆಲ್ಲರೂ ಅವರವರ ಅಂತಸ್ತಿಗೆ ತಕ್ಕ ಸ್ಥಾನಗಳಲ್ಲಿ ಕುಳಿತು ಸಲ್ಲಾಪಿಸುತ್ತಿದ್ದರು."[85] ಇಂತಹ ಆಚರಣೆ ಆಡಂಬರ ಪ್ರತಿಷ್ಠಿತರ ಮದುವೆಯ ವೈಭವವನ್ನು ತಿಳಿಸುತ್ತದೆ. ಧಾರೆಗೆ ಮೊದಲು ಮದುಮಗಳಿಗೆ ಶೃಂಗರಿಸುವ ಶಾಸ್ತ್ರ, ಮುತ್ತೈದೆಯರಿಂದ ಅರಿಶಿಣ ಗಂಧಗಳನ್ನು ಬಳಿದು ಎಣ್ಣೆ ಸ್ನಾನ ಮಾಡಿಸುವರು, ನಂತರ ಉಡಿಗೆ ತೊಡಿಗೆಗಳಿಂದ ಅಲಂಕರಿಸಿ ಹಸೆ ಮಣೆಗೆ ಕರೆತರುವರು, ಆ ನಂತರ ಜೋಯಿಸರು ಬಂದು ಧಾರೆ ಮಾಡಿಸುತ್ತಿದ್ದರು.

ಸಾಮಾನ್ಯವಾಗಿ ಮಲೆನಾಡಿನ ದೇಸಿಯ ಸಂಸ್ಕೃತಿಯಲ್ಲಿ ಬ್ರಾಹ್ಮಣೇತರರ ಮದುವೆಗಳು ರಾತ್ರಿಯ ವೇಳೆಯಲ್ಲಿಯೇ ನಡೆಯುತ್ತಿದ್ದವು. ಕಾನೂರು ಹೆಗ್ಗಡಿತಿ ಕಾದಂಬರಿಯಲ್ಲಿ ರಾಮಯ್ಯ ಸೀತೆಯರ ಧಾರೆಯ ಮಹೂರ್ತ ರಾತ್ರಿ ಹತ್ತುಗಂಟೆಯ ಮೇಲೆಯೇ ನಡೆಯುವುದು. ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಸಿಂಬಾವಿ ಭರಮೈ ಹೆಗ್ಗಡೆಯವರು ಹೂವಳ್ಳಿ ಚಿನ್ನಮ್ಮನನ್ನು ದ್ವಿತೀಯ ಪತ್ನಿಯನ್ನಾಗಿ ವಹಿಸಿಕೊಡುವ ಧಾರೆಯ ಸಮಯ ರಾತ್ರಿ ಹನ್ನೆರಡು ಗಂಟೆಗೆ, ಏಕೆಂದರೆ ಕಾದಂಬರಿಕಾರರೆ ಹೇಳುವಂತೆ:-ಶೂದ್ರರ ಧಾರೆಯಾಗುವಾಗಲು ನಿಶಾ ಲಗ್ನದಲ್ಲಿ ತಾನೆ?"[86]"ಎನ್ನುವ ಮಾತು ಅಂದಿನ ಮಲೆನಾಡಿನ ಗ್ರಾಮೀಣ ಪರಿಸರದಲ್ಲಿನ ಸಂಪ್ರದಾಯ ಹಾಗೂ ವ್ಯಂಗ್ಯದ ದ್ಯೋತಕವಾಗಿದೆ. ಮದುವೆಗೆ ಮುನ್ನ ಮನೆಯಲ್ಲಿ ಹಸೆಗೋಡೆಯನ್ನು ಬರೆಯಿಸುವ ಪದ್ಧತಿ ಇದ್ದು ಅದಕ್ಕೆ ಎಲೆಗಳಿಂದ ಬಣ್ಣವನ್ನು ತಯಾರುಮಾಡಿ ಚಿತ್ರಬಿಡಿಸುತ್ತಿದ್ದರು. ಹೆಣ್ಣಿನ ತಂದೆತಾಯಿ ಮಗಳನ್ನು ಧಾರೆಯೆರೆದು ಕೊಡುತ್ತಿದ್ದರು. ಧಾರೆಯ ನಂತರ ಊಟದ ಸಮಾರಾಧನೆ ನಡೆಯುತ್ತಿತ್ತು. ಮದುವೆಗೆ ಸೇರಿದ್ದ ಶೂದ್ರರಿಗೆ ಒಂದು ಕಡೆ ಊಟದ ವ್ಯವಸ್ಥೆಯಾದರೆ ಹಳ್ಳಿಯ ಪ್ರಮುಖರಿಗೆ, ಮೇಲ್ಜಾತಿಯವರಿಗೆ ಮತ್ತೊಂದು ಕಡೆ

ವ್ಯವಸ್ಥೆಮಾಡಿರುತ್ತಿದ್ದರು. ಅಲ್ಲಿ ಕೊಡಪಾನಗಟ್ಟಲೆ ಬಗನಿಕಳ್ಳು, ಹಂಡೆಗಟ್ಟಲೆ ಅಕ್ಕಿಹೆಂಡ, ಶೀಸೆಗಟ್ಟಲೆ ಸರಾಯಿ, ಬೇಕಾದಷ್ಟು ಕಂಬಳಿಕುರಿ, ಸೊಪ್ಪು ಕುರಿಗಳ ಬಾಡು ಮುಂತಾದ ಭಕ್ಷ್ಯಗಳನ್ನು ಉಪಚಾರ ಮಾಡುತ್ತಿದ್ದರು.[87]

ವಿವಾಹಗಳಲ್ಲಿ ವರೋಪಚಾರ ಮತ್ತು ವರದಕ್ಷಿಣೆಗಳು ಪ್ರಮುಖ ಅಂಶಗಳಾಗಿರುತ್ತವೆ. ಮಲೆನಾಡಿನ ಸಾಮಾಜಿಕ ಪರಿಸರದಲ್ಲಿ ವರದಕ್ಷಿಣೆಗೆ ಬದಲಾಗಿ ತೆರ ಕೊಡುವ ಪದ್ಧತಿ ರೂಢಿಯಲ್ಲಿತ್ತು. ವಿವಾಹದ ಕಾಲಕ್ಕೆ ಮದುವೆಯಾಗುವ ಗಂಡು ಹೆಣ್ಣಿನ ತಂದೆ–ತಾಯಿಗೆ ಹಣ, ಒಡವೆವಸ್ತುಗಳನ್ನು ಕೊಡಬೇಕಾಗಿತ್ತು. <u>ಕಾನೂರು ಹೆಗ್ಗಡಿತಿ</u>ಯ ಅಣ್ಣಯ್ಯಗೌಡರು ಹೆಣ್ಣುಗಳಿಗಾಗಿ ತೆರವನ್ನು ತೆತ್ತು ತೆತ್ತು ಈಚೆಗೆ ಬಹಳ ದರಿದ್ರಾವಸ್ಥೆಗೆ ಇಳಿದಿದ್ದರು. ಅವರ ಮೂವರು ಹೆಂಡಿರೂ ಸತ್ತು ನಾಲ್ಕನೆಯ ಹೆಂಡತಿಯೂ ರೋಗದಿಂದ ನರಳುತ್ತಿದ್ದಳು.[88] ಹಾಗೆಯೇ <u>ಮಲೆಗಳಲ್ಲಿ ಮದುಮಗಳು</u> ಕಾದಂಬರಿಯಲ್ಲಿ ಸಿಂಬಾವಿ ಹೆಗ್ಗಡೆಗೆ ಮೊದಲ ಹೆಂಡತಿಯಲ್ಲಿ ಮಕ್ಕಳಾಗಲಿಲ್ಲ ಎಂದು ಹೆಣ್ಣು ಹುಡುಕುತಿದ್ದಾಗ ಅವರ ಆಳು ಗುತ್ತಿ ಹೇಳಿದ ಮಾತು ಇಲ್ಲಿ ಪ್ರಸ್ತುತವೆನಿಸುತ್ತದೆ: "ಏನ್ರಯ್ಯ ಹೆಣ್ಣು ಕೊಡೋರಿಗೇನು ಬರಾಗಾಲ? ದುಡ್ಡೊಂದಿದ್ರೆ? ಕೈತುಂಬಾ ತೆರಾ ಕೊಟ್ರೆ ದಮ್ಮಯ್ಯ ಅಂತ ಕೊಡ್ತಾರೆ?"[89] ಹೀಗೆ ತೆರಾ ಕೊಟ್ಟು ಮದುವೆಯಾಗುವ ರೂಢಿ ಅಂದಿನ ದೇಸಿಯ ಸಮಾಜದಲ್ಲಿತ್ತು ಎಂದು ತಿಳಿಯುತ್ತದೆ.

ಮಲೆನಾಡಿನ ಸಮಾಜದಲ್ಲಿ ವಿವಾಹಕ್ಕೆ ಸಂಬಂಧಿಸಿದ ಮತ್ತೊಂದು ವಿಚಾರವೆಂದರೆ ಬಹುಪತ್ನಿತ್ವ ಪದ್ಧತಿ. ಬ್ರಾಹ್ಮಣೇತರರಲ್ಲಿ ಒಂದಕ್ಕಿಂತ ಹೆಚ್ಚು ಹೆಣ್ಣುಗಳನ್ನು ಮದುವೆಯಾಗುವುದು ರೂಢಿಯಲ್ಲಿತ್ತು. ಮೊದಲನೆಯ ಹೆಂಡತಿ ಬದುಕಿದ್ದಾಗಲೆ ಮತ್ತೊಂದು ಮದುವೆಯಾಗುವುದು ಅಥವಾ ಮೊದಲನೆಯ ಹೆಂಡತಿ ಸತ್ತ ನಂತರ ಮರು ಮದುವೆಯಾಗುವುದು ಸಾಮಾನ್ಯವಾಗಿತ್ತು. ಕಾನೂರು ಹೆಗ್ಗಡಿತಿಯ ಚಂದ್ರಯ್ಯಗೌಡರು ಮೊದಲ ಮತ್ತು ಎರಡನೆಯ ಹೆಂಡತಿ ಸತ್ತ ನಂತರ ಸುಬ್ಬಮ್ಮಳನ್ನು ಮೂರನೆಯ ಹೆಂಡತಿಯಾಗಿ ಮದುವೆಯಾಗುತ್ತಾರೆ. ಇದೆ ಕಾದಂಬರಿಯಲ್ಲಿ ಅಣ್ಣಯ್ಯಗೌಡರು ಮೂವರು ಹೆಂಡಿರು ಸತ್ತ ನಂತರ ನಾಲ್ಕನೆಯ ಹೆಂಡತಿಯನ್ನು ಮದುವೆಯಾಗಿದ್ದುದನ್ನು ಕಾಣುತ್ತೇವೆ. ಹಾಗೆಯೇ ಬ್ರಾಹ್ಮಣೇತರ ಸ್ತ್ರೀಯರಿಗೆ ಮರು ಮದುವೆಗೆ ಅವಕಾಶವಿದ್ದುದನ್ನು <u>ಮಲೆಗಳಲ್ಲಿ ಮದುಮಗಳು</u> ಕಾದಂಬರಿಯಲ್ಲಿ ಕಾಣುತ್ತೇವೆ. ಸ್ತ್ರೀಯು ಮೊದಲನೆಯ ಗಂಡನನ್ನು ಕಳೆದುಕೊಂಡು ವಿಧವೆಯಾಗಿ ಮರುಮದುವೆ ಮಾಡಿಕೊಳ್ಳುವುದಕ್ಕೆ 'ಸೀರುಡಿಕೆ' ಎಂದು ಕರೆಯುತ್ತಾರೆ. ಈ ಕಾದಂಬರಿಯಲ್ಲಿ ಹೂವಳ್ಳಿ ವೆಂಕಟಪ್ಪ ನಾಯಕ ವಿಧವೆ ನಾಗಕ್ಕನನ್ನು ಸೀರುಡಿಕೆ ಮಾಡಿಕೊಳ್ಳುವುದನ್ನು ಚಿತ್ರಿಸಲಾಗಿದೆ.

ಥಾಮಸ್ ಹಾರ್ಡಿಯವರ ಕಾದಂಬರಿಗಳಲ್ಲೂ ಸಹ ವಿವಾಹವೆನ್ನವುದು ದೇಸಿಯ ಸಮಾಜದ ಪ್ರಧಾನ ವಿಷಯವಾಗಿರುವುದನ್ನು ಕಾಣಬಹುದು. ಭಾರತದಂತಹ ಸಮಾಜದಲ್ಲಿ ಜಾತಿ, ವರ್ಗ, ಜಾತಕ, ವಯಸ್ಸು ಮುಂತಾದವು ವಿವಾಹವನ್ನು ನಿರ್ಧರಿಸುವ ಅಂಶಗಳಾದರೆ, ಇಂಗ್ಲೆಂಡಿನ ಗ್ರಾಮೀಣ ಸಮಾಜದಲ್ಲಿ ಸಾಮಾಜಿಕ ಪ್ರತಿಷ್ಠೆ, ಆರ್ಥಿಕ ಸ್ಥಿತಿ, ಅಂತಸ್ತು, ವೃತ್ತಿ, ಮುಂತಾದ ಅಂಶಗಳು ಪ್ರಮುಖ ಪಾತ್ರವಹಿಸುತ್ತವೆ. ಜಾತಿಪಂಗಡಗಳ ಬದಲಾಗಿ ವರ್ಗಶ್ರೇಣಿ ವಿವಾಹದ ಅಳತೆಗೋಲಾಗಿತ್ತು ಎನ್ನಬಹುದು. <u>'ದಿ ರಿಟರ್ನ್ ಆಫ್ ದಿ ನೇಟಿವ್'</u> ಕಾದಂಬರಿಯ ಕಾವಿ ಮಾರುವ ಡಿಗೊರಿವೆನ್ ತೋಮಸಿನ್‌ಳನ್ನು ಮದುವೆಯಾಗಲು ಪ್ರಸ್ತಾಪಿಸಿದಾಗ ಶ್ರೀಮತಿ ಯೋಬ್ರೈಟ್ ಅದನ್ನು ವಿರೋಧಿಸುತ್ತಾಳೆ, ಕಾರಣ ಡಿಗೋರಿವೆನ್ ಸಾಮಾಜಿಕ ಅಂತಸ್ತಿನಲ್ಲಿ, ವೃತ್ತಿಯಲ್ಲಿ ಕೆಳಮಟ್ಟದವನು ಎಂಬುದೇ ಮುಖ್ಯವಾಗಿರುತ್ತದೆ.[90] ಹಾಗೆಯೇ ಇದೇ ಕಾದಂಬರಿಯಲ್ಲಿ ಕ್ಲಿಮ್ ಯೋಬ್ರೈಟ್ ಯುಸ್ಟೇಷ್ಯಳನ್ನು ಪ್ರೀತಿಸಿ ಮದುವೆಯಾಗುವುದನ್ನು ಅವನ ತಾಯಿ ಶ್ರೀಮತಿ ಯೋಬ್ರೈಟ್ ವಿರೋಧಿಸುತ್ತಾಳೆ. ಆಕೆಯ ಪ್ರಕಾರ "ಯೋಸ್ಟೇಷ್ಯ ಕುಲೀನ ಮನೆತನದವಳಲ್ಲ, ಯಾವನೊ ಒಬ್ಬ ಬ್ಯಾಂಡ್ ಮಾಸ್ಟರ್‌ನ ಮಗಳು ಸುಸಂಸ್ಕೃತಳಲ್ಲ, ಅಂತಸ್ತಿಲ್ಲ, ಲಂಪಟಳಾದ ಹೆಣ್ಣು"[91] ಎಂದು ಅಂತಸ್ತಿನ ಬಗ್ಗೆ ಮಾತನಾಡುತ್ತಾಳೆ. ಹೀಗೆ ಅಂದಿನ ದೇಸಿಯ ಬದುಕಿನಲ್ಲಿ ಸಾಮಾಜಿಕ ತಾರತಮ್ಯ, ಅಂತಸ್ತಿನ ಮೇಲು-ಕೀಳೆಂಬ ಭಾವನೆ, ಆರ್ಥಿಕ ಪರಿಸ್ಥಿತಿ, ವೃತ್ತಿ ಮುಂತಾದ ಆಂಶಗಳು ವಿವಾಹ ಸಂಬಂಧಗಳ ಮೇಲೆ ಪ್ರಭಾವಬೀರುವುದನ್ನು ಕಾಣುತ್ತೇವೆ. ಆದರೆ ಸಾಂಪ್ರದಾಯಿಕ ವಿವಾಹಗಳಲ್ಲಿ ಪ್ರೇಮ ವಿವಾಹವು ಮೇಲಿನ ಅಂಶಗಳನ್ನು ಮೀರಿ ನಡೆಯುತ್ತಿದ್ದವು ಎನ್ನುವುದನ್ನು ಕಾಣಬಹುದು. ತೋಮಸಿನ್ ವೈಲ್ಡೀವ್‌ಗಿಂತ ಸಾಮಾಜಿಕ ಅಂತಸ್ತಿನಲ್ಲಿ ಮೇಲಾಗಿದ್ದರೂ ಪ್ರೇಮಿಸಿ ಅವನನ್ನು ಮದುವೆಯಾಗುವುದು ಮತ್ತು ಕ್ಲಿಮ್ ತನ್ನ ತಾಯಿಯ ವಿರೋಧದ ನಡುವೆಯೂ ಯುಸ್ಟೇಷ್ಯಳನ್ನು ಮದುವೆಯಾಗುವ ಸನ್ನಿವೇಶವು <u>ದಿ ರಿಟರ್ನ್ ಆಫ್ ದಿ ನೇಟಿವ್</u> ಕಾದಂಬರಿಯಲ್ಲಿ ಚಿತ್ರಿತವಾಗಿದೆ.

ಕುವೆಂಪುರವರ ಕಾದಂಬರಿಗಳಲ್ಲಿ ಚಿತ್ರಿತವಾಗಿರುವ ಸಾಂಪ್ರದಾಯಿಕ, ಧಾರ್ಮಿಕ ಮತ್ತು ಆಡಂಬರದ ಪ್ರತಿಷ್ಠಿತರ ಮದುವೆಗಳಿಗಿಂತ ಸರಳವಾದ ಆದರೆ ಸಾಂಪ್ರದಾಯಿಕ ಧಾರ್ಮಿಕ ಕಟ್ಟುಕಟ್ಟಳೆಗಳ ಒಳಗೆ ನಡೆಯುವ ವಿವಾಹಗಳನ್ನು ಹಾರ್ಡಿಯವರ ಕಾದಂಬರಿಗಳಲ್ಲಿಯೂ ಕಾಣುತ್ತೇವೆ. ಮಲೆನಾಡಿನ ಪರಿಸರದಲ್ಲಿ ಜ್ಯೋತಿಷಿಗಳು ಜಾತಕ ನೋಡಿ ಮದುವೆ ನಿಶ್ಚಯಿಸಿದರೆ ಇಂಗ್ಲೆಂಡಿನ ಸಮಾಜದಲ್ಲಿ ಮದುವೆಯಾಗುವ ಗಂಡು ಹೆಣ್ಣು ಇಬ್ಬರು ಚರ್ಚಿನಲ್ಲಿ ತಮ್ಮ ಹೆಸರುಗಳನ್ನು ಮೊದಲೇ ನೊಂದಾಯಿಸುವುದರ ಮೂಲಕ ಮದುವೆಯಾಗುತ್ತಿದ್ದರು. ಹೀಗೆ ಚರ್ಚಿನಲ್ಲಿ ಮದುವೆಯಾಗುವ ವಧು-ವರರು ಹೆಸರು ನೋಂದಾಯಿಸುವುದಕ್ಕೆ 'ಬಾನ್' ಪ್ರಕಟಣೆ

ಎಂದು ಕರೆಯಲಾಗುತ್ತಿತ್ತು. ಇದರಂತೆ ಮೂರು ಭಾನುವಾರಗಳಂದು ಮದುವೆಯಾಗುವವರ ಹೆಸರುಗಳನ್ನು ಪ್ರಕಟಿಸಲಾಗುತ್ತಿತ್ತು. ಈ ಮೂರು ವಾರಗಳ ಒಳಗೆ ಯಾವುದೇ ತಕರಾರು ಬಂದರೆ ಮದುವೆ ನಿಂತು ಹೋಗುತ್ತಿತ್ತು.[92]

ಮಲೆನಾಡಿನ ಪರಿಸರದಲ್ಲಿದ್ದ ಮರುವಿವಾಹ, ಬಹುಪತ್ನಿತ್ವ, ಬಾಲ್ಯವಿವಾಹ ಮುಂತಾದವು ಹಾರ್ಡಿಯವರ ಕಾದಂಬರಿಗಳಲ್ಲಿ ಕಂಡುಬರುವುದಿಲ್ಲ. ಇದು ಇಂಗ್ಲೆಂಡಿನ ದೇಸಿಯ ಸಂಸ್ಕೃತಿ. ಕುವೆಂಪುರವರ ಮಲೆನಾಡಿನ ದೇಸಿಯ ಸಂಸ್ಕೃತಿಗಿಂತ ಭಿನ್ನವಾಗಿರುವುದನ್ನು ಕಾಣುತ್ತೇವೆ. ನೈತಿಕ ಮೌಲ್ಯಗಳು, ಸಾಮಾಜಿಕ ಪ್ರತಿಷ್ಠೆ, ಶಿಕ್ಷಣದ ಪ್ರಭಾವ ಮುಂತಾದ ಅಂಶಗಳು ವಿವಾಹೇತರ ಸಂಬಂಧಗಳಿಗೆ ಮತ್ತು ಬಹುಪತ್ನಿತ್ವಕ್ಕೆ ತಡೆಯೊಡ್ಡಿರಬಹುದು ಎನ್ನಬಹುದು. ಆದರೆ ಗಂಡ ಸತ್ತ ನಂತರ ಹೆಂಡತಿ ಮತ್ತು ಹೆಂಡತಿ ಸತ್ತ ನಂತರ ಗಂಡ ಮತ್ತೊಮ್ಮೆ ಮದುವೆಯಾಗಲು ಯಾವ ಅಡೆತಡೆಯೂ ಇರಲಿಲ್ಲವೆಂಬುದು ಹಾರ್ಡಿಯವರ ಕಾದಂಬರಿಗಳಲ್ಲಿ ಕಾಣಬಹುದು. ವೈಲ್ಡಿವ್ ಸತ್ತ ನಂತರ ತೋಮಸಿನ್ಳ್ ಕಾವಿ ವ್ಯಾಪಾರಿ ಡಿಗೊರಿವೆನ್‌ನ್ನು ಮರು ಮದುವೆಯಾಗುತ್ತಾಳೆ.[93] ಒಂದು ಹೆಣ್ಣಿನಿಂದ ನಿರಾಕರಿಸಲ್ಪಟ್ಟ ಗಂಡನ್ನು ಮದುವೆಯಾಗುವುದು ಘನತೆ ಗೌರವಗಳಿಗೆ ಕುಂದುಂಟಾಗುತ್ತದೆ ಎನ್ನುವ ಭಾವನೆ ಇಂಗ್ಲೆಂಡಿನ ದೇಸಿಯ ಸಂಸ್ಕೃತಿಯಲ್ಲಿತ್ತು. ಅದೂ ಅಲ್ಲದೆ "ವೈಲ್ಡೀವ್ ಬೇರೊಬ್ಬ ಹೆಂಗಸಿಗೆ ಬೇಡವಾಗಿರುವವನು, ಆಕೆಯಿಂದ (ತೋಮಸಿನ್) ನಿರಾಕರಿಸಲ್ಪಟ್ಟವನು. ಇತರರಿಗೆ ಬೇಡವಾದುದನ್ನು ಬಯಸದೆ ಇರುವ ಪ್ರವೃತ್ತಿ ಎಲ್ಲ ಜೀವಿಗಳಲ್ಲಿ ಸಾಮಾನ್ಯವಾಗಿ ಇದ್ದೇ ಇರುತ್ತದೆ. ಆದ್ದರಿಂದ ತಾನು ಅವನನ್ನು ಇಷ್ಟಪಟ್ಟರೆ, ಪ್ರೇಮಿಸಿದರೆ, ಮದುವೆಯಾದರೆ ತನ್ನ ಅಂತಸ್ತು, ಘನತೆ, ಗೌರವ, ಪ್ರತಿಷ್ಠೆ ಕುಸಿಯುತ್ತದೆಂಬ ಭಾವನೆ ಅವಳದು".[94]

ಕುಲೀನ ಮನೆತನಗಳಲ್ಲಿ ನೈತಿಕ ಮೌಲ್ಯಗಳಿಗೆ, ಸದ್ಗುಣಗಳಿಗೆ, ಪತಿವ್ರತಾ ಧರ್ಮಕ್ಕೆ ಮತ್ತು ಕನ್ಯಾತ್ವಕ್ಕೆ ಬಹಳ ಪ್ರಾಮುಖ್ಯತೆ ನೀಡುತ್ತಿದ್ದುದನ್ನು ಹಾರ್ಡಿಯವರ ಕಾದಂಬರಿಗಳಲ್ಲಿ ಕಾಣುತ್ತೇವೆ. 19ನೇ ಶತಮಾನದ ಬದುಕು ಎಷ್ಟೊಂದು ಮೌಲ್ಯಯುತವಾಗಿತ್ತು ಎಂಬುದನ್ನು ಅವರ ಕಾದಂಬರಿಗಳು ಚಿತ್ರಿಸುತ್ತವೆ. ಮದುವೆಯಾಗುವ ಹೆಣ್ಣು ಪತಿವ್ರತೆಯಾಗಿರಬೇಕು, ಕನ್ಯಾತ್ವವನ್ನು ಕಾಪಾಡಿಕೊಂಡಿರಬೇಕೆಂದು ಗಂಡಿನ ಮನೆಯವರು ಅಪೇಕ್ಷಿಸುವುದು ಅಂದಿನ ಸಾಮಾಜಿಕ ಜೀವನಕ್ಕೆ ಹಿಡಿದ ಕನ್ನಡಿಯಾಗಿದೆ. 'ಟೆಸ್' ಕಾದಂಬರಿಯಲ್ಲಿ ಏಂಜಲ್ ಕ್ಲೇರ್‌ನ ತಂದೆ-ತಾಯಿಯರು ಟೆಸ್‌ಳಲ್ಲಿ ಈ ಗುಣಗಳನ್ನು ಅಪೇಕ್ಷಿಸುತ್ತಾರೆ.[95] ಹಾಗೆಯೇ ಮದುವೆಯಾಗಿರುವ ಗಂಡಸಿನೊಡನೆ ಓಡಿಹೋಗುವುದು ಸಾಮಾಜಿಕವಾಗಿ ಮತ್ತು ನೈತಿಕವಾಗಿ ಪವಿತ್ರ ಸಾಂಪ್ರದಾಯಿಕ

ವಿವಾಹ ಸಂಸ್ಕೃತಿಗೆ ಕಳಂಕ ತರುವಂತಹದ್ದು ಎಂಬ ಭಾವನೆ 'ಟೆಸ್' ಕಾದಂಬರಿಯಲ್ಲಿ ವ್ಯಕ್ತವಾಗಿದೆ. ಕೂಲಿಕಾರ್ಮಿಕಳಾದ ಇಜ್ಜ್, ಏಂಜಲ್ ಕ್ಲೇರ್‌ನ ಜೊತೆ ಹೋಗಲು ಮನಸ್ಸು ಮಾಡಿದರೂ ಸಾಮಾಜಿಕ ಕಟ್ಟುಪಾಡುಗಳು ಅವಳನ್ನು ಹಾಗೆ ಮಾಡಲು ಅವಕಾಶ ನೀಡುವುದಿಲ್ಲ. ಹೀಗೆ ಸಾಮಾಜಿಕ ಕಟ್ಟುಕಟ್ಟಳೆಗಳು, ರೂಢಿ ಸಂಪ್ರದಾಯಗಳನ್ನು ಹಾಳುಗೆಡುವುದಕ್ಕೆ ಅಂದಿನ ಪಾಶ್ಚಿಮಾತ್ಯ ದೇಸಿಯ ಸಂಸ್ಕೃತಿ ನಿರ್ಬಂಧ ಹಾಕಿದ್ದುದನ್ನು ಹಾರ್ಡಿಯವರ ಕಾದಂಬರಿಗಳಲ್ಲಿ ಕಾಣಬಹುದು.[96]

ಆಹಾರ ಪದ್ಧತಿ: ಮಾನವನ ಮೂಲ ಅವಶ್ಯಕತೆಗಳಲ್ಲಿ ಆಹಾರ ಪದ್ಧತಿ ಬಹುಮುಖ್ಯವಾಗಿದ್ದು ಸಾಂಪ್ರದಾಯಿಕ ಮತ್ತು ಪ್ರಾದೇಶಿಕ ವೈಶಿಷ್ಟ್ಯಗಳನ್ನು ಹೊಂದಿರುತ್ತದೆ. ಪ್ರದೇಶದಿಂದ ಪ್ರದೇಶಕ್ಕೆ ಆಹಾರ ಪದ್ಧತಿ, ರುಚಿ-ಅಭಿರುಚಿಗೆ ತಕ್ಕಂತೆ ನೆಲದ ಗುಣಧರ್ಮಕ್ಕನುಗುಣವಾಗಿ ವಿಶಿಷ್ಟವಾಗಿಯೂ, ಭಿನ್ನವಾಗಿಯೂ ಇರುತ್ತದೆ. ಆಹಾರ ಪದ್ಧತಿಗಳಲ್ಲಿ ಶಾಕಾಹಾರ ಮತ್ತು ಮಾಂಸಾಹಾರಗಳೆಂದು ವರ್ಗೀಕರಣ ಮಾಡಲಾಗುತ್ತದೆ. ಕೆಲವರು ಶುದ್ಧ ಶಾಕಾಹಾರಿಗಳಾಗಿದ್ದರೆ ಇನ್ನು ಕೆಲವರು ಎರಡನ್ನೂ ಹೊಂದಿದವರಾಗಿರುತ್ತಾರೆ. ಜಿ.ಎಸ್ ಜಯದೇವ ಅವರು ದೇಸಿಯ ಆಹಾರ ಪದ್ಧತಿಯ ಬಗ್ಗೆ ನೀಡುವ ವಿವರಣೆ ನೈಜತೆಯಿಂದ ಕೂಡಿದೆ ಎನ್ನಬಹುದು: "ಆಹಾರ ಪದ್ಧತಿ ಒಂದು ಜನ ಸಮುದಾಯ ತನ್ನ ಭೌಗೋಳಿಕ ಪರಿಸರ ಹವಾಮಾನಗಳ ಹಿನ್ನಲೆಯಲ್ಲಿ ಬೆಳಸಿಕೊಂಡು ಬಂದ ಸಂಸ್ಕೃತಿ. ಭಾರತದಂತಹ ವೈವಿಧ್ಯಮಯವಾದ ಬಹು ದೊಡ್ಡ ದೇಶದಲ್ಲಿ ವೈವಿಧ್ಯಮಯವಾದ ಆಹಾರ ಪದ್ಧತಿಗಳಿವೆ. ಈ ಪದ್ಧತಿಗೂ ವ್ಯವಸಾಯ ಬೆಳೆಗಳ ವೈವಿಧ್ಯತೆಗೂ ಸಂಬಂಧವಿದೆ"[97] ಎನ್ನುತ್ತಾರೆ. ಕುವೆಂಪುರವರ ಕಾದಂಬರಿಗಳಲ್ಲಿ ಚಿತ್ರಿತವಾಗಿರುವ ಮಲೆನಾಡಿನ ಪ್ರದೇಶದಲ್ಲಿ ಅಲ್ಲಿನ ಹವಾಮಾನ ಭೌಗೋಳಿಕ ಪರಿಸರ ಮತ್ತು ಮಣ್ಣಿನ ಗುಣಕ್ಕೆ ಅನುಗುಣವಾಗಿ ವಿವಿಧ ರೀತಿಯ ದವಸಧಾನ್ಯಗಳನ್ನು ಬೆಳೆಯುತ್ತಿದ್ದರು. ಅವುಗಳಲ್ಲಿ ಮುಖ್ಯವಾಗಿ ಭತ್ತ, ಬಾಳೆ, ಅಡಿಕೆ ರೈತರ ಜೀವನಾಧಾರವಾಗಿದ್ದವು.

ಸಾಮಾನ್ಯವಾಗಿ ಮೇಲ್ಜಾತಿಯ ಬ್ರಾಹ್ಮಣರು ಶುದ್ಧ ಶಾಕಾಹಾರಿಗಳಾಗಿದ್ದರು. ಅನ್ನ, ಉಪ್ಪಿನಕಾಯಿ, ಹಾಲು, ಮೊಸರು, ಮಜ್ಜಿಗೆ, ಹಪ್ಪಳ ದಿನ ನಿತ್ಯದ ಆಹಾರವಾಗಿದ್ದವು. ಬ್ರಾಹ್ಮಣೇತರರಲ್ಲಿ ಕೆಲವರು ಮಾಂಸಾಹಾರಿಗಳಾಗಿದ್ದರು. ಮಲೆನಾಡಿನ ಒಕ್ಕಲಿಗರು, ಹಳೆಪೈಕದವರು, ಕ್ರೈಸ್ತರು, ಮುಸಲ್ಮಾನರು, ಇತರ ಶೂದ್ರವರ್ಗದವರು ಮಾಂಸಾಹಾರವನ್ನು ತಮ್ಮ ಆಹಾರ ಪದ್ಧತಿಯಲ್ಲಿ ಹೊಂದಿರುತ್ತಾರೆ. ಮಲೆನಾಡಿನ ಒಕ್ಕಲಿಗ ಗೌಡರು ಮಾಂಸಕ್ಕಾಗಿ ಕುರಿ, ಕೋಳಿ, ಹಂದಿಗಳನ್ನು ಸಾಕುತ್ತಿದ್ದರು. ಮಾಂಸಾಹಾರಕ್ಕಾಗಿ ಬೇಟೆಯಾಡುವುದು ಸಾಮಾನ್ಯವಾಗಿತ್ತು. ಬೇಟೆ ದೇಸಿಯ

ಬದುಕಿನ ಬಹುಮುಖ್ಯ ಭಾಗವಾಗಿತ್ತು. ಕುವೆಂಪುರವರ ಕಾನೂರು ಹೆಗ್ಗಡತಿಯಲ್ಲಿ ಬೇಟೆ ಒಂದು ಕಸುಬಾಗಿತ್ತು ಎನ್ನುವುದನ್ನು ವಿವರಿಸಲಾಗಿದೆ.[98] ಗೌಡರ ಆಳುಗಳು ಹಕ್ಕಿ ಪಕ್ಷಿಗಳನ್ನು, ಶಿಕಾರಿ ಮಾಡುವುದು, ಹೊಂಡ ತೋಣಕಿ ಮೀನು ಹಿಡಿಯುವುದು, ಬೇಸಿಗೆಯಲ್ಲಿ ಏಡಿ ಶಿಕಾರಿ ಮಾಡುವುದು, ಶೂದ್ರರ ಆಹಾರ ಪದ್ಧತಿಯ ಭಾಗವಾಗಿತ್ತು. ಮಲೆನಾಡಿನ ಹುಡುಗರಿಗೆ ಬೇಟೆ ಎಂದರೆ ಪ್ರಾಣವಾಗಿತ್ತು"[99] ಎನ್ನುವುದನ್ನು ಆ ಪ್ರದೇಶದಲ್ಲಿ ಬೇಟೆಯ ಪ್ರಾಮುಖ್ಯತೆಯನ್ನು ಸೂಚಿಸುತ್ತದೆ.

ಕಾನೂರು ಹೆಗ್ಗಡತಿ ಕಾದಂಬರಿಯಲ್ಲಿ ಕೃತಿಕಾರರು ಹೇಳುವಂತೆ "ಆ ನಾಡಿನ ಒಕ್ಕಲಿಗರಲ್ಲಿ ಬಹುಪುರಾತನ ಕಾಲದಿಂದಲೂ ಹೆಂಡ ಕಳ್ಳು ಮೊದಲಾದ ಮಾದಕ ಪದಾರ್ಥಗಳನ್ನು ಸೇವಿಸುವುದು ಅತಿ ಸಾಮಾನ್ಯವಾದ ರೂಢಿಯಾಗಿತ್ತು. ಬ್ರಿಟಿಷರ ಆಳ್ವಿಕೆಯಿಂದುಂಟಾದ ನಾಗರಿಕತೆಯ ಆಗಮನದಿಂದ ಕಾಫಿ, ವೈನು, ವಿಸ್ಕಿ ಇತ್ಯಾದಿಯಾಗಿ ಆಹಾರ ಪದ್ಧತಿಯ ಭಾಗವಾಗಿದ್ದವು".[100] ಮಲೆನಾಡಿನ ದೇಸಿಯ ಬದುಕಿನಲ್ಲಿ ಅತಿಥಿ ಸತ್ಕಾರ ಮಾಡುವ ರೀತಿಯೂ ಕೂಡ ಅಂದಿನ ಆಹಾರ ಪದ್ಧತಿಗೆ ಪೂರಕವಾಗಿದೆ. ಆಗ ಮಲೆನಾಡಿನಲ್ಲಿ ನೆಂಟರ ಮನೆಗೆ ಹೋದರೆ ಮೊದಲು ಕೈ ಕಾಲು ತೊಳೆಯಲು ನೀರು ಕೊಡುತಿದ್ದರು. ಆ ಮೇಲೆ ತಾಂಬೂಲ ನಿವೇದನವಾಗುತ್ತಿತ್ತು. ತರುವಾಯ ಹುರಿಮಾಂಸ ಅಥವಾ ಉಪ್ಪು ಮೀನು ಅಥವಾ ಉಪ್ಪಿನಕಾಯಿ ಇತ್ಯಾದಿ ಯಾವುದಾದರೊಂದು ವ್ಯಂಜನದ ಸಮೇತವಾಗಿ ಬಾಯಿ ಲೊಚಗುಟ್ಟುವಷ್ಟರ ಮಟ್ಟಿಗೆ ಹುಳಿಹುಳಿಯಾದ ಹೆಂಡ ಕಳ್ಳುಗಳನ್ನು ಆದರ ಪೂರ್ವಕವಾಗಿ ವಿನಿಯೋಗಿಸಿ ಅತಿಥಿ ಸತ್ಕಾರ ಮಾಡುತ್ತಿದ್ದರು.[101]

ಸಾಮೂಹಿಕ ಭೋಜನಗಳಲ್ಲಿ ವಿವಿಧ ರೀತಿಯ ಭಕ್ಷ್ಯಗಳ ಸಮಾರಾಧನೆಯಾಗುತ್ತಿತ್ತು. ಜಾತ್ರೆ, ಉತ್ಸವ, ಹರಕೆ ಕೊಡುವ ಸಂದರ್ಭಗಳಲ್ಲಿ ವಿಶೇಷ ಊಟದ ವ್ಯವಸ್ಥೆ ಮಾಡಲಾಗುತ್ತಿತ್ತು. ಕಾನೂರು ಹೆಗ್ಗಡತಿಯಲ್ಲಿ ದೆಯ್ಯದ ಹರಕೆಯಲ್ಲಿ ಹುಗ್ಗಿ, ಪಾಯಸ, ಹೋಳಿಗೆಗಿಂತ ಮುಖ್ಯವಾದ ಆಹಾರ ಮಾಂಸಾಹಾರವೇ ಆಗಿತ್ತು. ಅವರವರ ಜಾತಿ ಮತ್ತು ಅಂತಸ್ತಿಗನುಗುಣವಾಗಿ ಕುಳ್ಳಿರಿಸಿ ಊಟ ಹಾಕಲಾಗುತ್ತಿತ್ತು. ಹೆಂಡ ಸಾರಾಯಿ, ಕಳ್ಳು ಪಾನೀಯಗಳನ್ನು ಬಳಸುತ್ತಿದ್ದರು. ಮದುವೆಗಳಂತಹ ವಿಶೇಷ ಸಮಾರಂಭಗಳಲ್ಲಿ ಬಾಡಿನೂಟ, ಕಳ್ಳಿನ ಸಮಾರಾಧನೆ ಸಾಮಾನ್ಯವಾಗಿತ್ತು. ಕಾನೂರು ಹೆಗ್ಗಡತಿಯ ರಾಮಯ್ಯನ ಮದುವೆಗೆ ಮಾಂಸದ ಅಡುಗೆಯನ್ನು ಮಾಡಿಸಲಾಗಿತ್ತು. ದೊಡ್ಡ ದೊಡ್ಡ ಗೌಡರುಗಳಿಗಾಗಿ ಪ್ರತ್ಯೇಕವಾದ ಉಪಚಾರಗಳನ್ನು

ಏರ್ಪಡಿಸಿದ್ದರು. ಅದಕ್ಕಾಗಿ ಕೊಡಪಾನಗಟ್ಟಲೆ ಬಗನಿಕಳ್ಳು, ಹಂಡೆಗಟ್ಟಲೆ ಅಕ್ಕಿ ಹೆಂಡ, ಶೀಸೆಗಟ್ಟಲೆ ಸರಾಯಿ ಸಿದ್ಧವಾಗಿತ್ತು, ಬೇಕಾದಷ್ಟು ಕಂಬಳಿಕುರಿ, ಸೊಪ್ಪುಕುರಿಗಳು ಹತವಾಗಿದ್ದವು.[102]

ಕೇವಲ ಸಮಾಜದ ಕೆಳವರ್ಗದವರಷ್ಟೇ ಅಲ್ಲದೆ ಮೇಲ್ಜಾತಿಯ ಹೆಂಗಸರೂ ಕೂಡ ಹೆಂಡ ಅಥವಾ ಕಳ್ಳನ್ನು ಸೇವಿಸುತ್ತಿದ್ದರು. ಮಲೆನಾಡಿನ ಭಾಗದಲ್ಲಿ ಹಳೆಪೈಕದವರು ಹೆಂಡ ತಯಾರಿಸುವುದನ್ನು ಮತ್ತು ಬಗನಿಕಳ್ಳು ಇಳಿಸುವುದನ್ನು ಒಂದು ಕುಲಕಸುಬನ್ನಾಗಿ ಮಾಡಿಕೊಂಡಿದ್ದರು. ಕಾನೂರು ಹೆಗ್ಗಡತಿಯ ಹಳೆಪೈಕದ ತಿಮ್ಮ ಚಂದ್ರಯ್ಯ ಗೌಡರಿಗೆ ಮತ್ತು ಇತರ ಒಕ್ಕಲುಗಳವರಿಗೆ ಕಳ್ಳು ಕಾಯಿಸಿಕೊಡುತ್ತಿದ್ದನು. ಹೆಚ್ಚಾಗಿ ಉಳಿದರೆ ಅದನ್ನು ಕಳ್ಳಂಗಡಿಗೆ ಕದ್ದು ಮಾರುತ್ತಿದ್ದನು.[103] ಹಾಗೆಯೇ ಕಾನೂರಿನ ಸುಬ್ಬಮ್ಮ ಗಂಗೆಗೆ ಮನೆಯಲ್ಲಿಯೇ ತಯಾರಿಸಿದ ಹೆಂಡವನ್ನು ಕೊಟ್ಟು ಸತ್ಕರಿಸುತ್ತಾಳೆ. ಹೂವಯ್ಯನ ತಾಯಿ ಕೂಡ ರಾತ್ರಿಯ ಹೊತ್ತು ಕಳ್ಳು ಕುಡಿಯುವ ಅಭ್ಯಾಸವಿಟ್ಟುಕೊಂಡಿರುತ್ತಾರೆ. ಹೀಗೆ ಮಲೆನಾಡಿನ ಪರಿಸರದಲ್ಲಿ ಹೆಂಡವು ಗಂಡು ಹೆಣ್ಣುಗಳ ಪಾನೀಯವಾಗಿತ್ತೆಂದು ಕಾಣಬಹುದು.

ಹೆಂಡದಷ್ಟೆ ಮುಖ್ಯವಾಗಿ ಎಲೆ, ಅಡಿಕೆ, ಹೊಗೆಸೊಪ್ಪು, ಮತ್ತು ನಶ್ಯ ಬಳಸುವುದನ್ನು ಕಾಣುತ್ತೇವೆ. ಜೀತದಾಳುಗಳಾಗಿ ದುಡಿಯುವವರಿಗೆ ರಾತ್ರಿ ಪಡಿಕೊಡುವಾಗ ಎಲೆ ಅಡಿಕೆ ಹೊಗೆಸೊಪ್ಪನ್ನು ಸೇರಿಸಿ ಕೊಡುವ ವಾಡಿಕೆಯನ್ನು ಕಾನೂರುಹೆಗ್ಗಡತಿ ಮತ್ತು ಮಲೆಗಳಲ್ಲಿ ಮದುಮಗಳು ಕಾದಂಬರಿಗಳಲ್ಲಿ ಕಾಣುತ್ತೇವೆ. ನಶ್ಯದ ಬಳಕೆ ಸಾಮಾನ್ಯವಾಗಿ ಎಲ್ಲಾ ವರ್ಗದವರಲ್ಲೂ ಇತ್ತು. ಕಾನೂರು ಹೆಗ್ಗಡತಿಯ ಅಗ್ರಹಾರದ ವೆಂಕಪ್ಪಯ್ಯ ಜೋಯಿಸರು, ಚಂದ್ರಯ್ಯಗೌಡರು ಮತ್ತು ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಕೋಣೂರಿನ ರಂಗಪ್ಪಗೌಡ ನಶ್ಯ ಸೇದುತ್ತಿದ್ದರು, ಮತ್ತು ಅದೇ ಕಾದಂಬರಿಯಲ್ಲಿ ನಶ್ಯ ತಯಾರಿಸಿ ಮಾರುತ್ತಿದ್ದ ಮುಸ್ಲಿಮನನ್ನು ಪುಡಿಸಾಬರು ಎಂತಲೆ ಕರೆಯುತ್ತಿದ್ದರು.[104]

ಮಲೆನಾಡಿನ ಪ್ರದೇಶದಲ್ಲಿ ಕಳ್ಳಂಗಡಿಗಳು ರಸ್ತೆಬದಿಯಲ್ಲಿ, ಊರಿನಹೊರಗೆ ಸ್ಥಾಪಿತವಾಗಿದ್ದು, ಹಳ್ಳಿಗರಿಗೆ ಬೇಕಾದ ಹೆಂಡ ಮತ್ತು ಕಳ್ಳುಗಳನ್ನು ಸರಬರಾಜು ಮಾಡುತ್ತಿದ್ದವು. ಇಂತಹ ಕಳ್ಳಂಗಡಿಗಳಿಗೆ ಬರುತ್ತಿದ್ದ ಗಿರಾಕಿಗಳಿಗಾಗಿಯೇ ಪ್ರತ್ಯೇಕವಾದ ಆಸನ ವ್ಯವಸ್ಥೆಗಳನ್ನು, ಅವರ ಸ್ಥಾನಮಾನಗಳಿಗೆ ಅನುಗುಣವಾಗಿ ಮಾಡಿರುತ್ತಿದ್ದರು. ಕಾನೂರು ಹೆಗ್ಗಡಿತಿಯಲ್ಲಿ ಮುತ್ತಳ್ಳಿ ಮತ್ತು ಕಾನೂರಿಗೆ ಮಧ್ಯೆ ಒಂದು ಕಳ್ಳಂಗಡಿ ಇದ್ದು ಇಲ್ಲಿಗೆ ಕಾನೂರು ಚಂದ್ರಯ್ಯಗೌಡರ ಆಳುಗಳು, ಮುತ್ತಳ್ಳಿಯ ಶ್ಯಾಮಯ್ಯಗೌಡರ ಆಳುಗಳು, ಸೀತೆಮನೆ ಸಿಂಗಪ್ಪಗೌಡರ ಆಳುಗಳು, ಮತ್ತು ಅನೇಕ ಒಕ್ಕಲುಗಳವರು ಸಹ ಬರುತ್ತಿದ್ದರು. ಅಂಗಡಿಯ ಒಳಗೆ ಮೇಲುಜಾತಿಯವರು

ಮತ್ತು ಹೊರಗೆ ಕೀಳುಜಾತಿಯವರಿಗಾಗಿ ಮೀಸಲಿರಿಸಿದ ಆಸನಗಳಿದ್ದವು.[105] ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಬರುವ ಮೇಗರವಳ್ಳಿಯ ಅಂತಕ್ಕ ಸೆಟ್ತಿಯ ಮನೆ ಒಂದು ರೀತಿಯಲ್ಲಿ ಅರವಟ್ಟಿಗೆ, ಅನ್ನಸತ್ರ, ಭೋಜನಗೃಹ, ಕಳ್ಳಂಗಡಿ, ಜೂಜಿನಕಟ್ಟೆ, ಆಟದ ಮನೆ ಎಲ್ಲವು ಆಗಿತ್ತು.[106] ಇದನ್ನು ಅಂತಕ್ಕನ 'ಓಟ್ಲುಮನೆ' ಎಂದು ಕರೆಯುತ್ತಿದ್ದರು. ತೀರ್ಥಹಳ್ಳಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ನಡುವೆ ಇದ್ದ ಅಂತಕ್ಕನಮನೆ ಊಟ, ಪಾನೀಯಗಳನ್ನು ಸರಬರಾಜು ಮಾಡುವ ವ್ಯಾಪಾರ ಕೇಂದ್ರವಾಗಿದ್ದು ನಂತರ ನಾಗರಿಕತೆಯ ಕುರುಹಾಗಿ ಮಾರ್ಪಾಟುಗೊಳ್ಳುವುದನ್ನು ಕಾಣುತ್ತೇವೆ.

ಥಾಮಸ್ ಹಾರ್ಡಿಯವರು ತಮ್ಮ ಕಾದಂಬರಿಗಳಲ್ಲಿ 19ನೇ ಶತಮಾನದ ಇಂಗ್ಲೆಂಡಿನ ದೇಸಿಯ ಆಹಾರ ಪದ್ಧತಿಯನ್ನು ವಿವರಿಸಿದ್ದಾರೆ. ವೆಸೆಕ್ಸ್‌ನ ಗ್ರಾಮೀಣ ಪ್ರದೇಶದ ಜನರು ಸಸ್ಯಾಹಾರ ಮತ್ತು ಮಾಂಸಾಹಾರವನ್ನು ತಮ್ಮ ದಿನನಿತ್ಯ ಆಹಾರದಲ್ಲಿ ಉಪಯೋಗಿಸುತ್ತಿದ್ದರು. ಕಾಳು ಕಡ್ಡಿಗಳು, ಸಿಹಿ ಮೂಲಂಗಿ, ಆಲೂಗೆಡ್ಡೆ ಮತ್ತು ಗೋಧಿ ಪ್ರಮುಖ ಆಹಾರವಾಗಿತ್ತು. ಕುರಿ, ಕೋಳಿ ಹಂದಿಯ ಮಾಂಸದ ಬಳಕೆಯನ್ನು ಮಾಡುತ್ತಿದ್ದರು. 'ಟೆಸ್ ಆಫ್ ದಿ ಡಿ ಅರ್ಬರ್‌ವಿಲ್ಲೆ'ಯಲ್ಲಿ ಟೆಸ್ ಮತ್ತು ಮರಿಯನ್ ಫ್ಲಿಂಟ್‌ಕೋಂಬ್ ಆ್ಯಶ್‌ನಲ್ಲಿ ಕಾಳುಕಡ್ಡಿಗಳ ಜೊತೆ ಸಿಹಿಮೂಲಂಗಿಯನ್ನು ಕೀಳುವುದು ಮತ್ತು ಸಂಸ್ಕರಿಸಿ ದಾಸ್ತಾನು ಮಾಡುವುದನ್ನು ಕಾಣುತ್ತೇವೆ. ಸಾಮೂಹಿಕ ಭೋಜನಗಳಲ್ಲಿ ವಿವಿಧ ಬಗೆಯ ಭಕ್ಷ್ಯಗಳ ಮತ್ತು ಪಾನೀಯಗಳ ಸಮಾರಾಧನೆಯಾಗುತ್ತಿತ್ತು. ಮದುವೆಯ ಸಂದರ್ಭದಲ್ಲಿ, ಸಂತೋಷಕೂಟಗಳಲ್ಲಿ ತಿಂಡಿ ತಿನಿಸುಗಳಿಗಿಂತ ಪಾನೀಯಗಳ ಸೇವನೆಯೇ ಹೆಚ್ಚಾಗಿರುತ್ತಿತ್ತು. 'ದಿ ರಿಟರ್ನ್ ಆಫ್ ದಿ ನೇಟಿವ್' ಕಾದಂಬರಿಯಲ್ಲಿ ವೈಲ್ಡಿವ್ ಮತ್ತು ತೋಮಸಿನ್‌ಳ ಮದುವೆ ಸಂದರ್ಭದಲ್ಲಿ ಎಗ್ಡನ್ನಿನ ಹಳ್ಳಿಗರು ಕ್ಯಾಂಟಲ್ ತಾತನ ಮುಂದಾಳತ್ವದಲ್ಲಿ ವೈಲ್ಡಿವ್ ಮನೆಗೆ ಹೋಗಿ ಶುಭವಾಗಲಿ ಎಂದು ಹರಸಿ ನೃತ್ಯಮಾಡುತ್ತಾ ಸಾಮುಹಿಕವಾಗಿ ಪಾನಸೇವನೆ ಮಾಡುವುದನ್ನು ಕಾಣಬಹುದು.[107]

'ದಿ ರಿಟರ್ನ್ ಆಫ್ ದಿ ನೇಟಿವ್' ಕಾದಂಬರಿಯಲ್ಲಿ ತನ್ನ ಮಗ ಪ್ಯಾರಿಸ್ಸಿನಿಂದ ಊರಿಗೆ ಬಂದ ಸಂದರ್ಭದಲ್ಲಿ ಶ್ರೀಮತಿ ಯೊಬ್ರೈಟ್ ಔತಣ ಕೂಟವನ್ನು ಏರ್ಪಡಿಸಿ ಹಳ್ಳಿಯ ಪ್ರತಿಷ್ಠಿತರನ್ನು ಆಹ್ವಾನಿಸಿರುತ್ತಾರೆ. ಹಾಗೆಯೇ ಮನರಂಜನೆ ಕಾರ್ಯಕ್ರಮ ನೀಡಲು ಬಂದಿದ್ದ ನಟರಿಗೂ ಊಟದ ವ್ಯವಸ್ಥೆಯನ್ನು ಮಾಡಿರುತ್ತಾರೆ. ಅಂದಿನ ಔತಣದಲ್ಲಿ ದನದ ಮಾಂಸ, ಬ್ರೆಡ್ಡು, ಕೇಕು, ಹಿಟ್ಟಿನಿಂದ ಮಾಡಿದ ಪಾಯಸ, ಜೇನಿನಿಂದ ಮಾಡಿದ ಹೆಂಡ, ಎಲ್ಡರ್ ವೈನ್ ಮುಂತಾದ ಭಕ್ಷ್ಯ ಪಾನೀಯಗಳಿಂದ ಉಪಚರಿಸುತ್ತಾರೆ.[108]

ಮಲೆನಾಡಿನಲ್ಲಿದ್ದ ಕಳ್ಳಂಗಡಿಯ ಹಾಗೇ ಹಾರ್ಡಿಯವರು ಚಿತ್ರಿಸುವ ವೆಸೆಕ್ಸ್‌ನ ಗ್ರಾಮೀಣ ಪ್ರದೇಶದಲ್ಲಿದ್ದ <u>ಪ್ರಶಾಂತಿ ಹೋಟೆಲ್</u> ಪ್ರಯಾಣಿಕರಿಗೆ ಬೇಕಾದ ಆಹಾರ, ವಸತಿ ಮತ್ತು ಪಾನೀಯಗಳನ್ನು ಸರಬರಾಜು ಮಾಡುವ ತಾಣವಾಗಿತ್ತು.[109] ಅಲ್ಲಿಯೂ ಸಹ ವ್ಯಕ್ತಿಗಳ ಸಾಮಾಜಿಕ ಸ್ಥಾನಮಾನ ಪ್ರತಿಷ್ಠೆಗೆ ಅನುಗುಣವಾಗಿ ಆಸನಗಳ ವ್ಯವಸ್ಥೆಯನ್ನು ಮಾಡಿರುತ್ತಿದ್ದರು. ಸಾಮಾನ್ಯವಾಗಿ ಹಳ್ಳಿಯ ಕೂಲಿಕಾರ್ಮಿಕರು, ಕೃಷಿ ಕಾರ್ಮಿಕರು ತಮ್ಮ ಬಿಡುವಿನ ವೇಳೆಯಲ್ಲಿ ಸೇರಿ ಪಾನ ಸೇವನೆ ಮಾಡುತ್ತಿದ್ದರು.

ದೇಸಿಯ ಆಹಾರ ಪದ್ಧತಿಯ ಬಗ್ಗೆ ಹಾರ್ಡಿಯವರ ಮತ್ತು ಕುವೆಂಪುರವರ ಕಾದಂಬರಿಗಳಲ್ಲಿ ಹೆಚ್ಚಿನ ಭಿನ್ನತೆಯಿಲ್ಲದೆ ಸಾಮ್ಯತೆಯಿಂದ ಕೂಡಿದ ಚಿತ್ರಣವನ್ನು ಕಾಣುತ್ತೇವೆ. ದೇಸಿಯ ಆಹಾರ ಪದ್ಧತಿ ಅಂದಿನ ಸಾಮಾಜಿಕ ಭೌಗೋಳಿಕ ಪರಿಸರದ ಹಿನ್ನಲೆಯಲ್ಲಿ ಮತ್ತು ಆರ್ಥಿಕ ಸ್ಥಿತಿಗತಿಗಳ ಜೊತೆಗೆ ಜನರ ಸಂಸ್ಕೃತಿಯ ಭಾಗವಾಗಿ ಅಭಿವ್ಯಕ್ತಗೊಂಡಿರುವುದನ್ನು ಕಾಣುತ್ತೆವೆ.

<u>**ಉಡುಗೆ ತೊಡುಗೆ:**</u> ಮಾನವನ ಸಾಮಾಜಿಕ, ಆರ್ಥಿಕ, ಧಾರ್ಮಿಕ ಸ್ಥಾನಮಾನಗಳನ್ನು ಅವನ ಆಹಾರ, ವೃತ್ತಿ, ವೇಷಭೂಷಣಗಳಿಂದ ನಿರ್ಧರಿಸಲಾಗುತ್ತಿತ್ತು. ದೇಸಿಯ ಪರಿಸರದಲ್ಲಿ ವೈವಿಧ್ಯಮಯವಾದ ಸಾಂಪ್ರದಾಯಿಕ ರೀತಿಯ ಉಡುಗೆ ತೊಡುಗೆಗಳನ್ನು ಅವುಗಳ ವೈಶಿಷ್ಟ್ಯವನ್ನು ಕಾಣುತ್ತೇವೆ. ವಿಶೇಷ ಸಂದರ್ಭಗಳಲ್ಲಿ ಮತ್ತು ದಿನನಿತ್ಯದ ಬದುಕಿನಲ್ಲಿ ಸ್ತ್ರೀ, ಪುರುಷ, ಮಕ್ಕಳಲ್ಲಿ ಮತ್ತು ವಿವಿಧ ಜಾತಿ–ವರ್ಗಗಳಲ್ಲಿ ವೈವಿಧ್ಯಮಯವಾದ ವೇಷಭೂಷಣಗಳನ್ನು ಕಾಣಬಹುದು.[110] ಭಾರತದ ಸಾಮಾಜಿಕ ಪರಿಸರದಲ್ಲಿ ವ್ಯಕ್ತಿ ತಾನು ತೊಡುವ ವೇಷಭೂಷಣಗಳಿಂದಲೇ ಅವನ ಸಾಮಾಜಿಕ ಸ್ಥಾನಮಾನ, ವರ್ಗ, ಜಾತಿಯನ್ನು ಸುಲಭವಾಗಿ ಹೇಳಬಹುದಾಗಿತ್ತು. ಕುವೆಂಪುರವರ ಎರಡೂ ಕಾದಂಬರಿಗಳಲ್ಲಿ ಮೇಲ್ಜಾತಿಯ ಬ್ರಾಹ್ಮಣ, ಒಕ್ಕಲಿಗ ಗೌಡ, ಜೀತದಾಳುಗಳ ವೇಷ ಭೂಷಣಗಳು ವೈವಿಧ್ಯಮಯವಾಗಿ ಚಿತ್ರಿತವಾಗಿರುವುದನ್ನು ಕಾಣಬಹುದು.

ಕುವೆಂಪುರವರ ಕಾದಂಬರಿಗಳಲ್ಲಿ ಸಾಮಾಜಿಕವಾಗಿ ಮೇಲ್ಜಾತಿ ಅಥವಾ ಮೇಲ್ವರ್ಗದಲ್ಲಿರುವ ಬ್ರಾಹ್ಮಣರು ವಿಶೇಷ ಸಂದರ್ಭಗಳಲ್ಲಿ ಮಡಿವಂತಿಕೆಯನ್ನು ಕಾಯ್ದುಕೊಳ್ಳಲು ಶುಭ್ರವಾದ ವೇಷಭೂಷಣಗಳನ್ನು ತೊಡುತ್ತಿದ್ದರು. ಸಾಮಾನ್ಯ ದಿನಗಳಲ್ಲಿ ಸೊಂಟಕ್ಕೊಂದು

ಪಂಚೆಯುಟ್ಟು, ಮೊಳಕಾಲಿನವರೆಗೆ ಕಚ್ಚೆ ಹಾಕುತ್ತಿದ್ದರು. ಕಾನೂರು ಹೆಗ್ಗಡತಿಯ ವೆಂಕಪ್ಪಯ್ಯ ಜೋಯಿಸರು, "ಅಗಲವಾದ ಒಂದು ಮಣೆಯ ಮೇಲೆ ಪದ್ಮಾಸನ ಹಾಕಿ ಕುಳಿತಿದ್ದರು. ಏಕೆಂದರೆ ಶೂದ್ರರ ಮನೆಯ ಜಮಖಾನ, ಮೊದಲಾದ ವಸ್ತ್ರಾದಿಗಳನ್ನು ಮುಟ್ಟುವುದು, ಸಾಂಪ್ರದಾಯಿಕ ಬ್ರಾಹ್ಮಣರಾಗಿದ್ದ ಅವರ ಮಡಿಗೆ ಮೈಲಿಗೆಯಾಗುತ್ತದೆಂದು ಅವರ ಮತವಾಗಿತ್ತು. ಅವರು ಅಂಗಿ ಮೊದಲಾದ ನವೀನ ವಸನಗಳನ್ನು ತೊಡುತ್ತಿರಲಿಲ್ಲ; ಆರ್ಷೇಯವಾಗಿ ಬಂದಿದ್ದ ಮೈಚರ್ಮವೇ ಅವರಿಗೆ ವಸನವಾಗಿತ್ತು. ಆದರೆ ಗೌರವಾರ್ಥವಾಗಿ ಒಂದು ಬಿಳಿಯ ಬಟ್ಟೆಯನ್ನು ಹೊದೆಯುತ್ತಿದ್ದರು. ಅವರ ಉಡುಗೆಯಲ್ಲವು ಶುಭ್ರವಲ್ಲದಿದ್ದರೂ ಧೌತವಾಗಿತ್ತು.[111] ಬ್ರಾಹ್ಮಣ ಗಂಡಸರಂತೆಯೇ ಹೆಂಗಸರೂ ಕಚ್ಚೆ ಹಾಕಿದಂತೆ ಸೀರೆ ಉಡುತ್ತಿದ್ದುದು ಮಲೆನಾಡಿನ ಬ್ರಾಹ್ಮಣ ಸಂಪ್ರದಾಯವಾಗಿತ್ತು.

ಮಲೆನಾಡಿನ ಬ್ರಾಹ್ಮಣೇತರ ಜನರು ಸರಳವಾದ ಉಡುಪು ಧರಿಸುತ್ತಿದ್ದರು. ಒಕ್ಕಲಿಗ ಗೌಡರು ಮೊಳಕಾಲು ಮುಚ್ಚುವ ಕಚ್ಚೆ ಪಂಚೆ, ಮೊಳಕೈ ಮುಚ್ಚುವಂತೆ ಉದ್ದನೆಯ ತೋಳುಗಳುಳ್ಳ ಅಂಗಿ ತೊಡುತ್ತಿದ್ದರು. ಆರ್ಥಿಕವಾಗಿ ಹಿಂದುಳಿದ ಆದರೆ ಒಂದೇ ಜಾತಿಯವರು ಕಚ್ಚೆ ಪಂಚೆಗೆ ಬದಲಾಗಿ ಅಡ್ಡ ಪಂಚೆ ಸುತ್ತಿ ಕಸೆಯ ಅಂಗಿ ಹಾಕುತ್ತಿದ್ದರು. ಕಾನೂರು ಹೆಗ್ಗಡತಿಯ ಚಂದ್ರಯ್ಯ ಗೌಡರ ಉಡುಗೆ ತೊಡುಗೆಗಳು ಅವರ ಅಂತಸ್ತು ಮತ್ತು ಶ್ರೀಮಂತಿಕೆಯನ್ನು ತೋರಿದರೆ ಒಕ್ಕಲಿಗನಾದ ಅಣ್ಣಯ್ಯಗೌಡನು ಗುಂಡಿಗಳೆ ಇಲ್ಲದ ಕಸೆ ಅಂಗಿ ಹಾಕಿ ಮೊಳಕಾಲಿನವರೆಗೆ ಅಡ್ಡ ಪಂಚೆ ಸುತ್ತಿದ್ದನು. ಬಟ್ಟೆಯೊಗೆಯದೆ ಎಷ್ಟು ವರ್ಷಗಳಾಗಿದ್ದವೋ ಏನೋ, ಷರ್ಟು ಅವರ ಭಾಗಕ್ಕೆ ಮೊಲದ ಕೊಂಬಾಗಿತ್ತು.[112] ಇಲ್ಲಿ ಇಬ್ಬರು ಗೌಡರು ಒಂದೇ ಜಾತಿಯವರಾದರೂ ಅವರ ವೇಷ ಭೂಷಣಗಳಲ್ಲಿ ವ್ಯತ್ಯಾಸವನ್ನು ಕಾಣುತ್ತೇವೆ. ಕೃತಿಕಾರರು ಹೇಳುವ ಮಾತು: "ಪ್ರತಿಯೊಬ್ಬರ ವೇಷವೂ ಅವರವರ ಸಂಸ್ಕೃತಿ ಸಂಪತ್ತುಗಳಿಗೆ ಸಾಕ್ಷಿಯಾಗಿತ್ತು"[113] ಆರ್ಥಿಕ, ಸಾಮಾಜಿಕ, ಸಾಂಪ್ರದಾಯಿಕ ಅಂಶಗಳು ಉಡುಗೆ-ತೊಡುಗೆಗಳ ಭಿನ್ನತೆಗೆ ಕಾರಣವಾಗಿದ್ದವು. ಮಲೆಗಳಲ್ಲಿ ಮದುಮಗಳು ಕಾದಂಬರಿಯ ಹಳೇಮನೆ ಸುಬ್ಬಣ್ಣ ಹೆಗ್ಗಡೆಯವರು "ಮುಂಡಾಸು ಸುತ್ತಿ ಕಸೆಯ ನಿಲುವಂಗಿ ತೊಟ್ಟು, ಕೆಂಪಂಚಿನ ಕಚ್ಚೆಪಂಚೆಯುಟ್ಟು, ಬೆತ್ತದ ದೊಣ್ಣೆಯಿಡಿದು ಹಳೆಯದೊಂದು ಮೆಟ್ಟಿನ ಜೊತೆಯನ್ನು ಕಾಲಿಗೆ ಹಾಕಿಕೊಂಡು ನಡೆಯ ತೊಡಗಿದರು".[114] ಇದು ಅವರ ವೇಷಭೂಷಣವಾಗಿದ್ದು ಮಲೆನಾಡಿನ ದೇಸಿಯ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ.

ಕುವೆಂಪುರವರ ಎರಡೂ ಕಾದಂಬರಿಗಳಲ್ಲಿ ಮಲೆನಾಡಿನ ಹೆಣ್ಣು ಮಕ್ಕಳು ಗೊಬ್ಬೆ ಸೆರಗಿನ ಸೀರೆಯನ್ನು ಉಡುತ್ತಿದ್ದರು ಎಂದು ವಿವರಿಸುತ್ತಾರೆ. ಮಲೆಗಳಲ್ಲಿ ಮದುಮಗಳು ಕಾದಂಬರಿಯ ಹಳೇಮನೆ ಸುಬ್ಬಣ್ಣಹೆಗ್ಗಡೆಯವರ ಮಗಳು ಮಂಜಮ್ಮ ಉಟ್ಟಿದ್ದ ಗೊಬ್ಬೆ ಸೆರಗಿನ ಸೀರೆಯ ವರ್ಣನೆಯನ್ನು ಕಾಣಬಹುದು: "ಮಂಜಮ್ಮ ಗೊಬ್ಬೆ ಸೆರಗು ಬಿಗಿದು ಕಟ್ಟಿ ಸೀರೆಯ ಬಹುಭಾಗದ ವಿಸ್ತೀರ್ಣವನ್ನೆಲ್ಲಾ ಸೊಂಟಕ್ಕೆ ಸುತ್ತಿ ಉಳಿದಿದ್ದನ್ನು ಆದಷ್ಟು ಕೃಪಣತೆಯಿಂದ ನಿರಿಮಾಡಿ ಹರಡಿಗೆ ಮೇಲೆ ಮೊಳಾಕಾಲಿನ ನಡುವರೆಗೆ ನೀಡಿ ಉಟ್ಟಿದ್ದಳು".[115] ಮಲೆನಾಡಿನ ಕೃಷಿ ಕಾರ್ಮಿಕರು ಒಕ್ಕಲು ಮಕ್ಕಳು ತೋಟ ಗದ್ದೆ ಮತ್ತು ಕಾಡುಗಳಲ್ಲಿ ಕೆಲಸ ಮಾಡಬೇಕಾದ ಸಂದರ್ಭದಲ್ಲಿ ತಲೆಗೆ ಹಾಳೆಗಳನ್ನು ಧರಿಸುತ್ತಿದ್ದರು ಮತ್ತು ಹೆಂಗಸರು ವಲ್ಲಿಯನ್ನು ಕಟ್ಟುತ್ತಿದ್ದರು. ಮಳೆ ಹನಿಯುವಾಗ, ನಾಟಿ ಮಾಡುವಾಗ, ಗೊರಬು ಸೂಡಿ ಅಥವಾ ಕಂಬಳಿಕೊಪ್ಪೆಯನ್ನು ಧರಿಸುತ್ತಿದ್ದರು. ಶ್ರೀಮಂತರ ಮನೆತನದ ಹೆಂಗಸರು ಮಳೆಗಾಲದಲ್ಲಿ ಕೊಡೆಗಳನ್ನು ಬಳಸುತ್ತಿದ್ದರು. ಹೀಗೆ ಹೆಂಗಸರು ಗೊರಬುಸೂಡಿ, ಹಾಳೆತೋಪಿಯನ್ನು ಮತ್ತು ಗಂಡಸರು ಕಂಬಳಿಕೊಪ್ಪೆಯನ್ನು ಸಾಮಾನ್ಯವಾಗಿ ಮಳೆಗಾಲದಲ್ಲಿ ಬಳಸುತ್ತಿದ್ದರು.

ಮದುವೆ ಜಾತ್ರೆ ಹಬ್ಬ ಮುಂತಾದ ವಿಶೇಷ ಸಂದರ್ಭಗಳಲ್ಲಿ ಮಲೆನಾಡಿನ ಜನರ ಉಡುಗೆ ತೊಡುಗೆಗಳಲ್ಲಿ ವೈವಿಧ್ಯತೆಯನ್ನು ಮತ್ತು ದೇಸಿಯ ಬದುಕಿನ ವೈಶಿಷ್ಟ್ಯವನ್ನು ಕಾಣಬಹುದು. ವೇಷಭೂಷಣಗಳು ದೇಸಿಯ ಸಂಸ್ಕೃತಿಯ ಪ್ರತೀಕವಾಗಿದ್ದವು. ಕಾನೂರು ಹೆಗ್ಗಡಿತಿಯಲ್ಲಿ ಪುಟ್ಟಮ್ಮನ ದಿಬ್ಬಣದ ಸಂದರ್ಭದಲ್ಲಿ ನೆರದಿದ್ದ: "ಲಲನೆಯರ ಒಡವೆಗಳ ಉಲಿಯೂ ಅದಕ್ಕೆ ಸಮಶ್ರುತಿಯಾಗಿದ್ದ ಅವರ ಕೊರಳ ದನಿಯೂ ಅವರ ಉಟ್ಟುಕೊಂಡಿದ್ದ ಜಡ್ಡು ಸೀರೆ, ಕಾಗಿನ ಸೀರೆ, ಜರತಾರಿಯ ಸೀರೆ, ತರತರದ ವಲ್ಲಿಗಳು, ಕುಪ್ಪಸಗಳು, ರವಿಕೆಗಳು, ಮೊದಲಾದವುಗಳಿಂದ ಉಗುತ್ತಿದ್ದ ಹೊಸಬಟ್ಟೆಯ ವಾಸನೆಯು..."[116] ಮತ್ತು ಅದೇ ಕಾದಂಬರಿಯ ರಾಮಯ್ಯನ ಮದುವೆಯಲ್ಲಿ ಅವನ ವೇಷಭೂಷಣ ಮತ್ತು ಮಲೆನಾಡಿನ ಪ್ರದೇಶದಲ್ಲಿ ಮದುವೆಯಂತಹ ಸಮಾರಂಭಗಳಲ್ಲಿ ಜನರು ತೊಡುತಿದ್ದ ವಿಶೇಷ ಉಡುಪು ಒಡವೆ, ಅಲಂಕಾರಿಕ, ಗಾಜಿನ ಬಳೆಗಳು, ದೇಸಿಯ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತಿದ್ದವು.

ಥಾಮಸ್ ಹಾರ್ಡಿಯವರ ಕಾದಂಬರಿಗಳಲ್ಲಿ ಆಧುನಿಕ ನಾಗರಿಕತೆಯ ಆಗಮನದ ಪ್ರಾರಂಭದಲ್ಲಿ ಸಾಮಾಜಿಕ ಸ್ಥಾನಮಾನ, ಅಂತಸ್ತು, ವೃತ್ತಿ, ಆರ್ಥಿಕ ಸ್ಥಿತಿಗನುಗುಣವಾಗಿ ವೇಷಭೂಷಣಗಳಲ್ಲಿ ವೈವಿಧ್ಯತೆಯನ್ನು ಕಾಣುತ್ತೇವೆ. ಗಂಡಸರು ಸಾಮಾನ್ಯವಾಗಿ ಕೋಟು ಪ್ಯಾಂಟು ಧರಿಸಿ ತರಾವರಿ ಟೋಪಿಗಳನ್ನು, ಬೂಟುಗಳನ್ನು ಧರಿಸುವುದು ರೂಢಿಯಾಗಿತ್ತು.

ಹೆಂಗಸರು ತಲೆಗೆ ವಲ್ಲಿಯನ್ನು ಕಟ್ಟುತ್ತಿದ್ದುದು ಸಂಪ್ರದಾಯವಾಗಿತ್ತು. ಹೊಲದಲ್ಲಿ ಕೆಲಸ ಮಾಡುವ ಕೃಷಿ ಕಾರ್ಮಿಕರು ಸಾಮಾನ್ಯವಾಗಿ ಮೇಲು ಹೊದಿಕೆಯನ್ನು ತೊಟ್ಟಿರುತ್ತಿದ್ದರು. ಟೆಸ್ ಕಾದಂಬರಿಯಲ್ಲಿ ಟೆಸ್ ಮತ್ತು ಮರಿಯನ್ ಹೊಲದಲ್ಲಿ ಕೆಲಸ ಮಾಡುವಾಗ ತುಂಬುತೋಳಿನ ಮೇಲಂಗಿಯನ್ನು, ಕುತ್ತಿಗೆಯ ಭಾಗದಿಂದ ಕಾಲಿನವರೆಗೆ ಇಳಿಯಾಗಿಬಿಟ್ಟು ಹಿಂದುಗಡೆ ಕಟ್ಟಲ್ಪಡುತ್ತಿದ್ದರು; ಕಾಲಿಗೆ ಧರಿಸಿದ ಒರಟಾದ ಬೂಟುಗಳು ಪಾದದಿಂದ ಮಂಡಿಯವರೆಗೆ ಮುಚ್ಚುತ್ತಿದ್ದವು, ಕೈಗಳಿಗೆ ಕುರಿಯ ಉಣ್ಣೆಯಿಂದ ಮಾಡಿದ ಕೈಗವಚವನ್ನು ಧರಿಸುತ್ತಿದ್ದರು.[117]

ಶ್ರೀಮಂತ ಜಮೀನುದಾರರು ಕೋಟು ನಿಲುವಂಗಿಯ ಜೊತೆಗೆ ಕೈಗವಚ, ಚರ್ಮದ ಬೂಟ್ಸುಗಳನ್ನು ಧರಿಸುತ್ತಿದ್ದರು. ಮದುವೆಯಂತಹ ವಿಶೇಷ ಸಂದರ್ಭಗಳಲ್ಲಿ ಶ್ವೇತವರ್ಣದ ವೇಷಭೂಷಣಗಳು ಸಾಮಾನ್ಯವಾಗಿತ್ತು. ಟೆಸ್ ಕಾದಂಬರಿಯಲ್ಲಿ ಟೆಸ್ ಮತ್ತು ಏಂಜಲ್ ಕ್ಲೇರ್‌ರವರ ಮದುವೆಗೆ ಏಂಜಲ್‌ನ ತಂದೆ ಒಡವೆಗಳನ್ನು ಉಡುಗೊರೆಯಾಗಿ ನೀಡುವರು. ಅವುಗಳಲ್ಲಿ ಕಂಠಿಹಾರ, ಲೋಲಕ, ಓಲೆ, ಕೈಬಳೆ, ಮುಂತಾದವು ಕುವೆಂಪುರವರ ಕಾದಂಬರಿಗಳಲ್ಲಿ ಬರುವ ಪ್ರತಿಷ್ಠಿತರ ಮದುವೆಯ ವೇಷಭೂಷಣದ ಚಿತ್ರಣದಂತಿದೆ. ಮಲೆನಾಡಿನ ಮದುವೆಯ ದಿಬ್ಬಣವನ್ನು ನೆನಪಿಸುವ ಶೃಂಗಾರಗೊಂಡ ಕುದುರೆಗಾಡಿಯನ್ನು ಟೆಸ್ ಕಾದಂಬರಿಯಲ್ಲಿಯೂ ಸಹ ಕಾಣುತ್ತೇವೆ.

ಇಂಗ್ಲೆಂಡಿನ ಸಾಂಪ್ರದಾಯಿಕ ಉತ್ಸವಗಳಲ್ಲಿ ಸಾಂಪ್ರದಾಯಿಕ ವೇಷಭೂಷಣ ವಿಶೇಷವಾಗಿತ್ತು. ಮೇಪೋಲ್ ಆಚರಣೆ ಅಥವಾ ಮೇ ಹಬ್ಬದ ಆಚರಣೆಗಾಗಿ ಎಗ್ಡನ್ನಿನ ಸ್ಥಳೀಯರು ವೈವಿಧ್ಯಮಯವಾದ ಉಡುಪುಗಳಲ್ಲಿ ಕಂಗೊಳಿಸುತ್ತಾರೆ. ಡಿಗೋರಿವೆನ್ ಬಿಳಿಅಂಗಿ ತೊಟ್ಟು, ತಿಳಿ ಹೂವಿನ ವರ್ಣದ ಒಳಅಂಗಿ, ನೀಲಿಮಿಶ್ರಿತ ಕಂಠವಸ್ತ್ರ, ತಿಳಿ ಹಸಿರು ಬಣ್ಣದ ಕೋಟು ಧರಿಸಿ ಉತ್ಸವದಲ್ಲಿ ತೊಡಗಿದ್ದನು. ಒಬ್ಬ ಸಾಮಾನ್ಯ ಕಾವಿ ಮಾರುವ ಡಿಗೋರಿ ವೃತ್ತಿ ಬದಲಿಸಿದ ನಂತರ ತನ್ನ ಉಡುಪಿನಲ್ಲೂ ಬದಲಾಗುತ್ತಾನೆ.[118] ಇದರಿಂದ ತಿಳಿಯುವುದೇನೆಂದರೆ ವೇಷಭೂಷಣಗಳು ವ್ಯಕ್ತಿ ತಾನು ಕೈಗೊಳ್ಳುವ ವೃತ್ತಿ, ಕಸುಬು ಮತ್ತು ಆರ್ಥಿಕ ಸ್ಥಿತಿಯನ್ನು ಪ್ರತಿಬಿಂಬಿಸುತ್ತಿದ್ದವು ಎನ್ನವುದು.

ಹೀಗೆ ಕುವೆಂಪು ಮತ್ತು ಹಾರ್ಡಿಯವರ ಕಾದಂಬರಿಗಳಲ್ಲಿ ಆಧುನಿಕ, ಆಡಂಬರದ ನವನಾಗರೀಕತೆಯ ಪೂರ್ವದಲ್ಲಿದ್ದ ಸಾಂಪ್ರದಾಯಿಕ ವೇಷಭೂಷಣಗಳು ದೇಸಿಯ ಸಂಸ್ಕೃತಿಯ ಭಾಗವಾಗಿದ್ದುದನ್ನು ಕಾಣುತ್ತೇವೆ. ಸಾಮಾಜಿಕ ಸ್ಥಾನಮಾನ ಆರ್ಥಿಕ ಸ್ಥಿತಿ ಸಂಪ್ರದಾಯ ಮತ್ತು ಭೌಗೋಳಿಕ ಸನ್ನಿವೇಶಗಳು ಜನರ ವೇಷಭೂಷಣದ ಮೇಲೆ ಪ್ರಭಾವ ಬೀರಿದ್ದವು ಎಂಬುದನ್ನು ಕಾಣುತ್ತೇವೆ.

ಕೊನೆಟಿಪ್ಪಣಿ

1. ರಾಜೇಂದ್ರ ಚೆನ್ನಿ: ದೇಶಿವಾದ, ಪುಟ–02
2. ಕುವೆಂಪು: ಕಾನೂರು ಹೆಗ್ಗಡಿತಿ, ಅರಿಕೆ
3. Thomas Hardy: Introduction, The Return of the Native Page – XVII
4. ನಾಗರಾಜ ರಾವ್ ವಿ.: ಊರಿಗೆ ಮರಳಿದಾಗ, ಅನುವಾದ ಕೃತಿ (The Return of the Native) ಪುಟ–375
5. Thomas Hardy : Introduction, The Return of the Native, Page – XIX
6. ದೆ.ಜ.ಗೌ.: ಸಹ್ಯಾದ್ರಿಯಲ್ಲಿ ಶ್ರೀ ಗುರುಕೃಪೆ, ರಾಷ್ಟ್ರಕವಿ ಕುವೆಂಪು, ಪುಟ–01
7. ಅದೇ, ಪುಟ–03
8. ಅದೇ, ಪುಟ–03
9. ಶಿವರಾಮ ಕಾಡನಕುಪ್ಪೆ: ಕುವೆಂಪು ಕಾದಂಬರಿಗಳಲ್ಲಿ ಪ್ರಾದೇಶಿಕತೆ, ಪುಟ–219
10. Thomas Hardy: Introduction, The Return of the Native Page-187
11. Ibid, Page-287
12. Ibid, Page-327
13. Thomas Hardy: Tess of the D' Urbervilles' Page-83
14. ಅಮೂರ ಜಿ.ಎಸ್.: ಕುವೆಂಪು ಕಾದಂಬರಿಗಳಲ್ಲಿ ಪ್ರಕೃತಿ ಹಾಗೂ ಸಂಸ್ಕೃತಿ, ಪುಟ–73
15. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ–125
16. ರಾಮರಾವ್ ಎಂ.: ಕನ್ನಡ ಕಾದಂಬರಿಗಳಲ್ಲಿ ಪ್ರಾದೇಶಿಕತೆ, ಪುಟ– 170
17. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ–03
18. ಅದೇ, ಪುಟ–353
19. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ– 04
20. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ– 126
21. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ– 64
22. ಅದೇ, ಪುಟ– 612
23. ಅದೇ ಪುಟ– 125

24. ಅದೇ, ಪುಟ- 125

25. ಗುರುಪಾದ ಮರಿಗುದ್ದಿ: ಕುವೆಂಪು ಕಾದಂಬರಿಗಳಲ್ಲಿ ಪರಿಸರ, ಪುಟ–297

26. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ- 472

27. Joyce Kilmer : The Rustic chorus in the Novels of Thomas Hardy page-42

28. Ibid, Page –16

29. Reader's Guide to Thomas Hardy, Page- 101

30. Thomas Hardy : Introduction, The Return of the Native, Page –49

31. Reader's Guide to Thomas Hardy, Page –117

32. David Kelly: Criticism of Thomas Hardy & Writing Page-128

33. Ibid, Page –129

34. Reader's Guide Critical Analysis of "Tess of the D' Urbervilles', Page-140

35. Thomas Hardy: Tess of the D' Urbervilles, Page-143

36. Thomas Hardy: Introduction,Tess of the D' Urbervilles, Page-15

37. ಖಂಡೋಬಾ ಪಿ. ಕೆ.: ಸಾಮಾಜಿಕ ವ್ಯವಸ್ಥೆ, ಪುಟ–01

38. ಅದೇ, ಪುಟ –01

39. Hobson, Kevin: The Indian cast system and the British, http:// www.btinternet.com/- british empire/article /caste system, Page-4

40. Louis Dumont: Homo Hierarchies The Caste System and Its Implicatiom, Page-12

41. Hobson Kevin: The Indian Caste System and The British,Page-03

42. Srinivas M .N.: Social change in Modern India, Page-05

43. ಕುವೆಂಪು: ಕಾನೂರು ಹೆಗ್ಗಡತಿ, ಪುಟ- 66

44. ಅದೇ, ಪುಟ- 62

45. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ- 8

46. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ- 64

47. ಕೃಷ್ಣಪ್ಪ ಬಿ.: ಕುವೆಂಪು ಕಾದಂಬರಿಗಳಲ್ಲಿ ದಲಿತ ಜೀವನಚರಿತ್ರೆ, ಪುಟ-199

48. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ- 320

49. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ- 91

50. ಅದೇ, ಪುಟ- 92

51. ಅದೇ, ಪುಟ- 370

52. ಅದೇ, ಪುಟ- 236

53. ಅದೇ, ಪುಟ- 156

54. ಅದೇ, ಪುಟ- 110

55. ಅದೇ, ಪುಟ- 202

56. ಅದೇ, ಪುಟ- 421

57. ಕೃಷ್ಣಪ್ಪ ಬಿ.: ಕುವೆಂಪು ಕಾದಂಬರಿಗಳಲ್ಲಿ ದಲಿತ ಜೀವನಚರಿತ್ರೆ, ಪುಟ-200

58. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ- 9

59. ಅದೇ, ಪುಟ- 51

60. ಅದೇ, ಪುಟ- 103

61. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ- 61

62. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ- 536

63. ಅದೇ, ಪುಟ- 467

64. ಅದೇ, ಪುಟ- 600

65. ಅದೇ, ಪುಟ- 53

66. ಅದೇ, ಪುಟ- 151

67. ಅದೇ, ಪುಟ- 164

68. ಅದೇ, ಪುಟ- 170

69. ಅದೇ, ಪುಟ- 373

70. ಅದೇ, ಪುಟ- 199

71. ಅದೇ, ಪುಟ- 200

72. Thomas Hardy : Tess of the D' Urbervilles, Page -302

73. Readers Guide to Thomas Hardy, Page- 138

74. Thomas Hardy : Tess of the D' Urbervilles, Page- 344

75. Ibid, Page – 62

76. Readers Guide to Thomas Hardy, Page- 139

77. Ibid, Page –176

78. Thomas Hardy : The Return of the Native, Page- 72

79. ನಾಗರಾಜರಾವ್ ವಿ. : ಊರಿಗೆ ಮರಳಿದಾಗ, ಪುಟ- 84

80. ಅದೇ, ಪುಟ–98

81. ಅದೇ, ಪುಟ–170

82. ಅದೇ, ಪುಟ–208

83. ಅದೇ, ಪುಟ- 98

84. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ- 41

85. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ- 438

86. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ- 539

87. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ- 439

88. ಅದೇ, ಪುಟ- 63

89. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ- 131

90. Thomas Hardy: The Return of the Native, Page – 66

91. Ibid, Page –171

92. Thomas Hardy: Tess of the D' Urbervilles, Page –222

93. Thomas Hardy : The Return of the Native, Page- 330

94. ನಾಗರಾಜರಾವ್ ವಿ. : ಊರಿಗೆ ಮರಳಿದಾಗ, ಪುಟ–98

95. Thomas Hardy: Tess of the D' Urbervilles' Page – 281

96. Ibid, Page – 287

97. ಜಯದೇವ. ಜಿ.ಎಸ್.: ಕೃಷಿ ವೈವಿದ್ಯತೆ ಮತ್ತು ಆಹಾರ ಭದ್ರತೆ (ಹಳ್ಳಿ ಹಾದಿ) ಅಭಿಮತ– ಪ್ರಜಾವಾಣಿ– 2ನೇ ಸೆಪ್ಟೆಂಬರ್ 2010.

98. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ- 206

99. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ- 419

100. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ- 191

101. ಅದೇ, ಪುಟ- 192

102. ಅದೇ, ಪುಟ- 439

103. ಅದೇ, ಪುಟ- 96

104. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ- 236

105. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ- 91

106. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ- 51

107. Thomas Hardy: Tess of the D' Urbervilles, Page –300

108. Thomas Hardy : The Return of the Native, Page –40

109. Ibid, Page –117

110. ಖಂಡೋಬಾ ಪಿ.ಕೆ.: ವೇಷಭೂಷಣಗಳು, ಪುಟ–19

111. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ- 62

112. ಅದೇ, ಪುಟ- 62

113. ಅದೇ, ಪುಟ- 62

114. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ- 288

115. ಅದೇ, ಪುಟ- 41

116. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ- 434

117. Thomas Hardy: Tess of the D' Urbervilles' Page – 303

118. Thomas Hardy: The Return of the Native Page – 317

ಅಧ್ಯಾಯ – 4

ದೇಸಿ ಭಾಷೆ

4.1 ಸಾಮಾಜಿಕ, ಭೌಗೋಳಿಕ ಮತ್ತು ಆರ್ಥಿಕ ಅಂಶಗಳ ಹಿನ್ನಲೆಯಲ್ಲಿ ದೇಸಿ ಭಾಷೆ

4.2 ಕುವೆಂಪು ಕಾದಂಬರಿಗಳಲ್ಲಿ ಜಾತಿ–ವರ್ಗ ಆಧಾರಿತ ಹಾಗೂ ಅನಕ್ಷರಸ್ಥರ ಭಾಷೆ

4.3 ವಲಸೆ ಬಂದವರ ಭಾಷೆ

4.4 ಮಲೆನಾಡಿನಲ್ಲಿ ಪ್ರಚಲಿತದಲ್ಲಿದ್ದ ನುಡಿಗಟ್ಟುಗಳು, ಪಡಿನುಡಿಗಳು ಸ್ಥಳನಾಮಗಳು ಗಾದೆಗಳು ಮತ್ತು ಅಡ್ಡ ಹೆಸರುಗಳು

4.5 ಪ್ರಾಣಿ–ಪಕ್ಷಿಗಳ ಅನುಕರಣೆಯ ಭಾಷೆ

4.6 ಥಾಮಸ್ ಹಾರ್ಡಿಯವರ ಕಾದಂಬರಿಗಳಲ್ಲಿ ದೇಸಿ ಮತ್ತು ಗ್ರಂಥಭಾಷೆಗಳ ವ್ಯತ್ಯಾಸ

4.7 ವರ್ಗಾಧಾರಿತ ಭಾಷೆ

4.8 ರಿಟರ್ನ್ ಆಫ್ ದಿ ನೇಟಿವ್ ಕಾದಂಬರಿಯಲ್ಲಿ ದೇಸಿ ಮತ್ತು ಗ್ರಂಥ ಭಾಷೆಗಳು

4.9 ಟೆಸ್ ಆಫ್ ದಿ ಡಿ ಅರ್ಬರ್ ವಿಲ್ಲೆ' ಕಾದಂಬರಿಯಲ್ಲಿ ದೇಸಿ ಮತ್ತು ಗ್ರಂಥ ಭಾಷೆಗಳು

ಅಧ್ಯಾಯ – 4

ದೇಸಿ ಭಾಷೆ

ದೇಸಿಯತೆಗೆ ಸಾಹಿತ್ಯ ಅಭಿವ್ಯಕ್ತಿ ಮಾಧ್ಯಮವಾದರೆ, ಆ ದೇಸಿ ಭಾಷೆ ಸಾಹಿತ್ಯದ ಅಭಿವ್ಯಕ್ತಿ ಮಾಧ್ಯಮವಾಗುತ್ತದೆ. ದೇಸಿಯತೆಯನ್ನು ನಿರೂಪಿಸುವ ಹಲವು ಅಂಶಗಳಲ್ಲಿ ಭಾಷೆ ಪ್ರಧಾನ ಪಾತ್ರ ವಹಿಸುತ್ತದೆ. ಸಾಹಿತ್ಯದಲ್ಲಿ ಬಳಸಿರುವ ಭಾಷೆಯಿಂದ ದೇಸಿಯತೆಯನ್ನು ಗುರುತಿಸಬಹುದು ಎಂದರೆ ತಪ್ಪಾಗಲಾರದು, ಭಾಷೆಗೂ ಮತ್ತು ದೇಸಿಯ ಬದುಕಿಗೂ ಅವಿನಾಭಾವ ಸಂಬಂಧವಿದ್ದು, ಸಾಹಿತ್ಯ ಕೃಷಿಗೆ ದೇಸಿಯ ಭಾಷೆ ಪೋಷಕವಾಗಿರುತ್ತದೆ. ಒಂದು ನಿರ್ದಿಷ್ಟ ಸಾಮಾಜಿಕ, ಭೌಗೋಳಿಕ ಪರಿಸರದ ವೈವಿಧ್ಯಮಯ ಚಿತ್ರಣವನ್ನು ಒಂದು ಸಾಹಿತ್ಯ ನಿರೂಪಿಸುವುದು ಮತ್ತು ಅಭಿವ್ಯಕ್ತಪಡಿಸುವುದು. ಆ ಪ್ರದೇಶದ ನೆಲದ ಭಾಷೆಯಿಂದಲೇ ಎನ್ನಬಹುದು. ಯಾವುದೇ ಸಾಹಿತ್ಯದ ನೈಸರ್ಗಿಕ ಆವರಣದ ಕಲ್ಪನೆ, ಜನಜೀವನದ ವಾಸ್ತವ ಚಿತ್ರಣ, ಇವುಗಳಷ್ಟೇ ಪರಿಣಾಮಕಾರಿಯಾಗಿ ಕೃತಿಗೆ ಗಟ್ಟಿ ನೆಲದ ಸಂಪರ್ಕವನ್ನು ಕೊಡುವ ಸಾಧನವೆಂದರೆ ದೇಸಿ ಭಾಷೆ ಅಥವಾ ಗ್ರಾಮ್ಯ ಭಾಷೆ.

ದೇಸಿ ಭಾಷೆಯ ಬಗೆಗೆ ರಾಘವೇಂದ್ರರಾವ್ ಹೇಳಿರುವ ಮಾತು ಪ್ರಸ್ತುತವೆನಿಸುತ್ತದೆ. ಅವರ ಪ್ರಕಾರ "ಸಾಹಿತ್ಯ ಜೀವನದ ಪ್ರತಿಸೃಷ್ಟಿಯಾಗಿರುವುದರಿಂದ ಲೇಖಕನು ವಿಶಿಷ್ಟ ಸಾಂಸ್ಕೃತಿಕ ಪರಿಸರದಲ್ಲಿ ಜೀವನವನ್ನು ಪ್ರತಿಸೃಷ್ಟಿಸುವಾಗ ಕೃತಿಗೆ ಆ ನೆಲದ ಭಾಷೆ ದ್ರವ್ಯವಾಗಿ ಬರುತ್ತದೆ. ಆದ್ದರಿಂದ ಕೃತಿಯ ವಸ್ತು, ಕಥಾ ಸಂವಿಧಾನ, ಪಾತ್ರ ಚಿತ್ರಣ, ಜೀವನದರ್ಶನದಷ್ಟೇ ಭಾಷೆಯೂ ಮುಖ್ಯವಾಗುತ್ತದೆ. ಲೇಖಕ ಭಾಷೆಯನ್ನು ಸಮರ್ಥವಾಗಿ ದುಡಿಸಿಕೊಂಡಷ್ಟು ಕೃತಿಯ ಉದ್ದೇಶ ಪರಿಣಾಮಕಾರಿಯಾವುದು. ಆದ್ದರಿಂದ ಸಾಹಿತ್ಯ ಕೃತಿಯನ್ನು ಕುರಿತಾದ ಯಾವುದೇ ಆಲೋಚನೆಯು ಅದರ ಭಾಷಿಕ ನೆಲೆಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲು ಸಾಧ್ಯವಿಲ್ಲ"[1] ಲೇಖಕರಲ್ಲಿ ಪರಿಸರದ ಭಾಷಾ ಪ್ರಜ್ಞೆ, ನೆಲದ ವಾಸನೆಯನ್ನು ಸಂವಹನಕರಿಸುವ ನುಡಿಗಟ್ಟುಗಳು, ಗಾದೆ, ಆಡುನುಡಿಯ ಸ್ವರೂಪ, ಶೈಲಿ, ಸಾಂಸ್ಕೃತಿಕ ಹಿನ್ನಲೆ, ಮುಂತಾದವುಗಳನ್ನು ಅರ್ಥೈಸಿಕೊಂಡು ತಮ್ಮ ಕೃತಿಗಳಲ್ಲಿ ಬಳಸುವ ಸೂಕ್ಷ್ಮ ಪ್ರಜ್ಞೆ ಇರಬೇಕು ದೇಸಿಯತೆಯ ಸಾರವಿರುವುದು ಆ ನೆಲದ ಭಾಷೆಯಲ್ಲಿ ಅಥವಾ ಪ್ರಾದೇಶಿಕ ಭಾಷೆಯಲ್ಲಿ ಎನ್ನಬಹುದು. ಪ್ರಾದೇಶಿಕತೆಯೇ ದೇಸಿಯತೆ ಎನ್ನಲಾಗದಿದ್ದರೂ, ದೇಸಿಯತೆಯ ಪ್ರತಿಸೃಷ್ಟಿಯಾಗುವುದು ಪ್ರಾದೇಶಿಕ ಭಾಷೆ ಮತ್ತು ಉಪಭಾಷೆಗಳ ಮೂಲಕವೆ ಎಂದರೆ ತಪ್ಪಲ್ಲ.

ಪ್ರಾದೇಶಿಕ ನೆಲೆಗಟ್ಟಿನಲ್ಲಿ ಪ್ರಕೃತಿಯೊಡನೆ ಸ್ವಾಭಾವಿಕವಾಗಿ ರೂಪುಗೊಂಡು, ನೆಲದ ಸೊಗಡನ್ನು, ಮಣ್ಣಿನ ಕಂಪನ್ನು ಅಭಿವ್ಯಕ್ತಗೊಳಿಸಲು ಲೇಖಕರು ದೇಸಿ ಭಾಷೆ ಬಳಸಿರುವುದನ್ನು ಕಾಣಬಹುದು.

4.1 ಸಾಮಾಜಿಕ, ಭೌಗೋಳಿಕ ಮತ್ತು ಆರ್ಥಿಕ ಅಂಶಗಳ ಹಿನ್ನಲೆಯಲ್ಲಿ ದೇಸಿ ಭಾಷೆ

ಯಾವುದೇ ಒಂದು ಭಾಷೆಯ ಬೆಳವಣಿಗೆಗೆ ನೈಸರ್ಗಿಕ, ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ, ರಾಜಕೀಯ ಮುಂತಾದವುಗಳ ಪ್ರಭಾವಗಳು ಕಾರಣವಾಗುತ್ತವೆ. ಕುವೆಂಪು ಮತ್ತು ಹಾರ್ಡಿಯವರ ಕಾದಂಬರಿಗಳನ್ನು ಅಧ್ಯಯನ ಮಾಡುವಾಗ ಸುಮಾರು ನೂರು ವರ್ಷಗಳ ಹಿಂದಿನ ಸಾಮಾಜಿಕ, ಭೌಗೋಳಿಕ, ಧಾರ್ಮಿಕ ಸಾಂಸ್ಕೃತಿಕ ಅಂಶಗಳು ಅವರ ಕೃತಿಗಳಲ್ಲಿ ಬಳಸಿರುವ ದೇಸಿ ಭಾಷೆಯಿಂದಲೇ ಅಭಿವ್ಯಕ್ತಗೊಂಡಿವೆ. ಕುವೆಂಪುರವರ ಕಾದಂಬರಿಗಳಲ್ಲಿ ಬಳಸಲ್ಪಟ್ಟಿರುವ ಭಾಷೆಯನ್ನು ಅವಲೋಕಿಸಿದರೆ ನೈಸರ್ಗಿಕವಾಗಿ ದಟ್ಟವಾಗಿ ಬೆಳೆದಿದ್ದ ದಟ್ಟಡವಿಗಳು, ಬೆಟ್ಟ-ಗುಡ್ಡ, ನದಿ-ಕೊಳ್ಳಗಳಿಂದ ಹಳ್ಳಿ-ಹಳ್ಳಿಗಳ ನಡುವಿನ ಸಂಪರ್ಕದ ಕೊರತೆಯಿಂದ ಭಾಷಾ ವ್ಯತ್ಯಾಸಗಳನ್ನು ಕಾಣುತ್ತೇವೆ. ಇದರಿಂದ ಒಂದೇ ಭಾಷೆಯಲ್ಲಿ ಅನೇಕ ಉಪಭಾಷೆಗಳು ನಿರ್ಮಾಣಗೊಳ್ಳುತ್ತವೆ. ಇಲ್ಲಿ ನೈಸರ್ಗಿಕ ಕಾರಣಗಳು ಭಾಷಾ ಪ್ರಭೇದಗಳಿಗೆ ಕಾರಣವಾಗುತ್ತವೆ. ಎಲ್ಲಿ ಏಕರೂಪವಾದ ಭೌಗೋಳಿಕ ಪರಿಸರವಿರುವುದಿಲ್ಲವೋ ಅಲ್ಲಿ ಏಕರೂಪವಾದ ಭಾಷೆಯನ್ನು ಕಾಣಲು ಕಷ್ಟವಾಗುತ್ತದೆ. ಆ ಪ್ರದೇಶದ ಭೌಗೋಳಿಕ ಸ್ಥಿತಿ-ಗತಿಗಳು ಹಾಗೂ ಸಂಪರ್ಕ-ಸಾಧನಗಳು ನೈಸರ್ಗಿಕ ಅಂಶಗಳು ಅವರ ಭಾಷೆಯನ್ನು ರೂಪಿಸುವುದು. ಕುವೆಂಪುರವರ ಕಾದಂಬರಿಗಳಲ್ಲಿ ಚಿತ್ರಿತವಾಗಿರುವ ಮಲೆನಾಡಿನ ಪ್ರದೇಶದಲ್ಲಿ ಇಂತಹ ಪ್ರಾದೇಶಿಕ ಭಾಷೆ ಮತ್ತು ಉಪಭಾಷೆಗಳನ್ನು ಕಾಣಬಹುದು, ಹಾಗೆಯೇ ಹಾರ್ಡಿಯವರ ಕಾದಂಬರಿಗಳಲ್ಲೂ ಸಹ ಇದೇ ರೀತಿಯ ಭಾಷಾ ಪ್ರಭೇದಗಳನ್ನು ಮತ್ತು ಭಾಷಾ ವೈವಿಧ್ಯತೆಯನ್ನು ಕಾಣಬಹುದು. ಗ್ರಾಮೀಣ ಪರಿಸರದ ಜನರ ಜೀವನ, ಸಂಸ್ಕೃತಿಯನ್ನು ಪ್ರಾದೇಶಿಕ ಭಾಷೆಗಳು ಒಳಗೊಂಡಿದ್ದು ಅವುಗಳ ಮೂಲಕ ದೇಸಿಯ ಬದುಕಿನ ಚಿತ್ರಣವನ್ನು ಕಾಣಬಹುದು. ಒಂದು ದೇಸಿಯ ಬದುಕನ್ನು ಆ ಬದುಕಿನ ಭಾಷೆಯಿಂದಲೇ ಅಭಿವ್ಯಕ್ತಿಸಿದಾಗ ಆ ಬದುಕಿನ ಸತ್ವ ಸಹಜವಾಗಿ ರೂಪುಗೊಳ್ಳುತ್ತದೆ. ದೇಸಿ ಭಾಷೆಯ ಮೂಲಕ ಲೇಖಕನ ಸ್ಥಾನ, ಮತ್ತು ಕಾದಂಬರಿಯಲ್ಲಿ ಬರುವ ಪಾತ್ರಗಳ ಸಾಮಾಜಿಕ,

ಶೈಕ್ಷಣಿಕ, ಸಾಂಸ್ಕೃತಿಕ ಹಿನ್ನಲೆ, ಐತಿಹಾಸಿಕ ಕಾಲಘಟ್ಟಗಳು ಮುಂತಾದ ವಿಷಯಗಳು ಅನಾವರಣಗೊಳ್ಳುತ್ತವೆ.

ಸಾಮಾನ್ಯವಾಗಿ ದೇಸೀಯ ಭಾಷೆಯೆಂದರೆ ಗ್ರಾಮ್ಯ ಭಾಷೆ ಅಥವಾ ಪ್ರಾದೇಶಿಕ ಭಾಷೆಯಾಗಿದ್ದು, ಆ ಪ್ರದೇಶದ ಸ್ಥಳೀಯರು ಅಥವಾ ಹಳ್ಳಿಗರು ತಮ್ಮ ದೈನಂದಿನ ವ್ಯವಹಾರಗಳಲ್ಲಿ ಬಳಸಲ್ಪಡುವ ಸರಳವಾದ, ಮುಗ್ಧತೆಯಿಂದ ಕೂಡಿದ, ಕಪಟವಿಲ್ಲದ ನಾಗರೀಕತೆಯ ಆಡಂಬರದ ಸೋಂಕಿಲ್ಲದ ಪರಿಸರದ ಸ್ವಾಭಾವಿಕ ಭಾಷೆ ಎನ್ನಬಹುದು. ದೇಸಿ ಭಾಷೆಯ ಸೊಗಡಿರುವುದು ಗ್ರಾಮ್ಯ ಭಾಷೆಯಲ್ಲಿ ಎಂದರೆ ತಪ್ಪಾಗಲಾರದು, ದೇಸಿ ಸಂಸ್ಕೃತಿಯ ಪ್ರತಿಬಿಂಬ ಎಂದರೆ ದೇಸಿಯ ಭಾಷೆ ಎನ್ನಬಹುದು ಏಕೆಂದರೆ ಜನರಾಡುವ ಭಾಷೆಯಲ್ಲಿ ಅವರ ಸಂಸ್ಕೃತಿ, ಸಂಸ್ಕಾರ, ಸ್ಥಾನಮಾನಗಳು, ಮನೋಭಿಲಾಷೆಗಳು ವ್ಯಕ್ತಗೊಳ್ಳುತ್ತವೆ. ಜನರಾಡುವ ಭಾಷೆಯಿಂದಲೇ ಅವರ ಸಾಮಾಜಿಕ, ಭೌಗೋಳಿಕ ಹಿನ್ನೆಲೆಯನ್ನು ಗುರುತಿಸಬಹುದು.

ಕುವೆಂಪು ತಮ್ಮ ಎರಡೂ ಕಾದಂಬರಿಗಳಲ್ಲಿ ಮಲೆನಾಡಿನ ಪರಿಸರದ ಭಾಷೆಯನ್ನು ಬಳಸುವ ಮೂಲಕ, ದೇಸಿಯ ಸಂಸ್ಕೃತಿಯನ್ನು ಅನಾವರಣಗೊಳಿಸಿದ್ದಾರೆ. ಅವರು ತಮ್ಮ ಕಾದಂಬರಿಗಳಲ್ಲಿ ಮುಖ್ಯವಾಗಿ ಎರಡು ಬಗೆಯ ಭಾಷೆಗಳನ್ನು ಬಳಸಿದ್ದಾರೆ. ಒಂದು ಸುಸಂಸ್ಕೃತ ಭಾಷೆ, ಎರಡನೆಯದು ಶೂದ್ರಾತಿಶೂದ್ರ ದಲಿತರ ಭಾಷೆ ಇಲ್ಲಿ ನಿರೂಪಕನ ಭಾಷೆ ಸುಸಂಸ್ಕೃತವಾಗಿದೆ. ಕೃತಿಕಾರನ ವಿವರಣೆ, ವ್ಯಾಖ್ಯಾನ, ಸುಸಂಸ್ಕೃತವಾಗಿರುವುದು ಸಹಜವಾಗಿದೆ. ಆದರೆ ತನ್ನ ಕೃತಿಯ ಪಾತ್ರಧಾರಿಗಳ ಭಾಷೆ ಅವರ ಸಾಮಾಜಿಕ ಸ್ಥಾನಮಾನ, ಶೈಕ್ಷಣಿಕ, ಆರ್ಥಿಕ, ಧಾರ್ಮಿಕ ಮುಂತಾದ ಅಂಶಗಳ ಹಿನ್ನೆಲೆಯಿಂದ ರೂಪುಗೊಂಡಿರುತ್ತದೆ. ಭಾಷೆಯಲ್ಲೂ ಜಾತಿ–ವರ್ಗ–ವರ್ಣಕ್ಕನುಗುಣವಾಗಿ ಅನೇಕ ಭಾಷಾ ಪ್ರಭೇದಗಳನ್ನು ಗುರುತಿಸಬಹುದು.

ಅದರಲ್ಲೂ ಕುವೆಂಪುರವರು ತಮ್ಮ ಕಾದಂಬರಿಗಳಲ್ಲಿ ಚಿತ್ರಿಸಿರುವ ಮಲೆನಾಡಿನ ಪ್ರದೇಶದ ಭಾಷೆಗೆ ಅನುಗುಣವಾಗಿ ಗುರುತಿಸಲಾಗಿದೆ.

1. ಮೊದಲನೆಯದಾಗಿ ಜಾತಿ–ಮತ ಆಧಾರಿತ ಭಾಷೆ: ಬ್ರಾಹ್ಮಣರು, ಒಕ್ಕಲಿಗರು, ಸೆಟ್ಟರು, ದಲಿತರು, ಕ್ರಿಶ್ಚಿಯನ್ನರು, ಮುಸಲ್ಮಾನರು ಇತ್ಯಾದಿ.
2. ವರ್ಗ ಆಧಾರಿತ ಭಾಷೆ: ಶ್ರೀಮಂತರು, ಜಮೀನುದಾರರು, ಕೃಷಿಕರು, ವಿದ್ಯಾವಂತರು,

ಅವಿದ್ಯಾವಂತರು ಇತ್ಯಾದಿ.

3. ವೃತ್ತಿ ಆಧಾರಿತ ಭಾಷೆ: ಪುರೋಹಿತ, ಕೃಷಿ, ವ್ಯಾಪಾರ, ಸೇರೆಗಾರರು, ಜೀತದಾಳುಗಳು, ಬ್ಯಾರಿಗಳು, ಮೇಸ್ತ್ರಿಗಳು ಅಧಿಕಾರಿಗಳು, ಪೊಲೀಸರು ಇತ್ಯಾದಿ.

4. ಲಿಂಗ–ಆಧಾರಿತ ಭಾಷೆ: ಸ್ತ್ರೀಯರು, ಪುರುಷರು, ಮಕ್ಕಳು, ತರುಣ–ತರಣಿಯರು ಮತ್ತು ವೃದ್ಧರು

5. ಭೌಗೋಳಿಕ ಪ್ರದೇಶವನ್ನಾಧರಿಸಿದ ಭಾಷೆ: ಬಯಲು ಸೀಮೆ, ಘಟ್ಟದ ಮೇಲಿನವರು, ಘಟ್ಟದ ಕೆಳಗಿನವರು, ವಲಸಿಗರು, ಇತ್ಯಾದಿ.

ಹೀಗೆ ದೇಸಿಯ ಕಾದಂಬರಿಗಳಲ್ಲಿ ಭಾಷೆಯ ವಿವಿಧ ಸ್ತರಗಳನ್ನು ಕಾಣಬಹುದು ವಿ.ಕೆ. ಖಂಡೋಬಾ ಅವರ ಮಾತಿನಲ್ಲಿ: ಭಾಷಾ ಪ್ರಭೇದಗಳನ್ನು ಸಾಮಾನ್ಯವಾಗಿ ವ್ಯಕ್ತಿ ಭಾಷೆ, ಪ್ರಭೇದ ಭಾಷೆ, ಮತ್ತು ಉಪಭಾಷೆಗಳೆಂದು ಪರಿಗಣಿಸುತ್ತಾರೆ. ವ್ಯಕ್ತಿ–ವ್ಯಕ್ತಿಗಳ ನಡುವಿನ ಭಾಷೆಯ ಬಳಕೆ ಧ್ವನಿ ಉಚ್ಛಾರಗಳಲ್ಲಿ ಕಾಣುವ ವ್ಯತ್ಯಾಸಗಳು ವ್ಯಕ್ತಿ ಭಾಷೆಯಾದರೆ,[1] ಪ್ರದೇಶ–ಪ್ರದೇಶಗಳ ನಡುವೆ ಗುರುತಿಸುವಷ್ಟು ಹಲವು ಸಾಮಾಜಿಕ ಪಂಗಡ (ಉಪಸಂಸ್ಕೃತಿ)ಗಳಲ್ಲಿ ಉಂಟಾಗುವ ವ್ಯತ್ಯಾಸಗಳು ಪ್ರಭೇದ ಭಾಷೆ ಎನಿಸಿಕೊಳ್ಳುತ್ತದೆ. ಪ್ರದೇಶ–ಪ್ರದೇಶಗಳ ನಡುವೆ ಗುರುತಿಸುವಷ್ಟು ಪ್ರಮಾಣದ ವ್ಯತ್ಯಾಸಗಳಾಗಿ ಉಪಭಾಷೆ ಅಥವಾ ಪ್ರಾದೇಶಿಕ ಭಾಷೆಗಳೆಂದು ಕರೆಯಿಸಿಕೊಳ್ಳುತ್ತವೆ.[3] ಭಾಷೆಯ ಏರಿಳಿತಗಳನ್ನು, ಧ್ವನಿ ಮತ್ತು ಸ್ವರ ವ್ಯತ್ಯಾಸಗಳನ್ನು, ಪದ ವ್ಯತ್ಯಾಸಗಳನ್ನು ಭಾಷೆಯ ನಯ, ವಿನಯ, ಬಿರುಸು, ಕರ್ಕಶಗಳ ವಿವಿಧ ಶೈಲಿಗಳನ್ನು ದೇಸಿ ಭಾಷೆಯಲ್ಲಿ ಗುರುತಿಸಬಹುದು. ಕಾದಂಬರಿಯಲ್ಲಿ ಬರುವ ಪಾತ್ರಗಳ ಸಂಭಾಷಣೆಯಿಂದ ಅವರ ಅಂತರಂಗ ಅನಾವರಣವಾಗುವುದನ್ನು ಕಾಣಬಹುದು.

4.2 ಕುವೆಂಪು ಕಾದಂಬರಿಗಳಲ್ಲಿ ಜಾತಿ–ವರ್ಗ ಆಧಾರಿತ ಹಾಗೂ ಅನಕ್ಷರಸ್ಥರ ಭಾಷೆ,

ಕುವೆಂಪು ತಮ್ಮ ಕಾದಂಬರಿಗಳಲ್ಲಿ ಪ್ರಮುಖವಾಗಿ ಚಿತ್ರಿಸಿರುವ ನಾಲ್ಕು ಜಾತಿಗಳ ಆಡು ಭಾಷೆಯನ್ನು ಗಮನಿಸಿದಾಗ, ಭಾಷೆಯ ವಿಭಿನ್ನ ಶೈಲಿ, ಉಚ್ಚಾರಣೆ, ಪದ ವ್ಯತ್ಯಾಸಗಳ ಜೊತೆಗೆ

ಭಾಷಾ ವೈವಿಧ್ಯತೆಯನ್ನು ಗುರುತಿಸಬಹುದಾಗಿದೆ. ಸಾಮಾಜಿಕವಾಗಿ ವರ್ಣ ಶ್ರೇಣಿಗಳಲ್ಲಿ ಮೊದಲ ಸ್ಥಾನದಲ್ಲಿರುವ ಬ್ರಾಹ್ಮಣರು ಬಳಸುವ ಭಾಷೆ ಶಿಷ್ಟ, ಸಂಸ್ಕೃತ ಮತ್ತು ಪ್ರೌಢ ಭಾಷೆಯಾಗಿದೆ. ಅವರ ಮಾತುಗಳಲ್ಲಿ ಸಂಸ್ಕೃತದ ಪ್ರಭಾವವನ್ನು ಸುಲಭವಾಗಿ ಗುರುತಿಸಬಹುದು. ಕಾನೂರು ಹೆಗ್ಗಡತಿಯ ವೆಂಕಪ್ಪಯ್ಯ ಜೋಯಿಸರು ಬ್ರಾಹ್ಮಣ ಪ್ರತಿನಿಧಿಯಾಗಿ ಬಳಸುವ ಭಾಷೆ ಉಳಿದ ಜಾತಿಯವರು ಬಳಸುವುದಕ್ಕಿಂತ ಭಿನ್ನವಾಗಿದೆ. ಹಾಗೆಯೇ ಬ್ರಾಹ್ಮಣರು ಬ್ರಾಹ್ಮಣೇತರರೊಂದಿಗೆ ಮಾತನಾಡುವಾಗ ಏಕವಚನ ಪ್ರಯೋಗ ಸಾಮಾನ್ಯವಾಗಿದೆ. ಈ ಕಾದಂಬರಿಯ ಚಂದ್ರಯ್ಯಗೌಡರು ಜೋಯಿಸರಿಗಿಂತ ಹದಿನೈದು ಇಪ್ಪತ್ತು ವರ್ಷಗಳು ಹೆಚ್ಚು ವಯಸ್ಸಿನವರಾಗಿದ್ದರೂ, ಬ್ರಾಹ್ಮಣನು ಶೂದ್ರರನ್ನು ಬಹುವಚನದಲ್ಲಿ ಮಾತನಾಡಿಸುವುದು ಶಾಪಕ್ಕೆ ಸಮಾನವೆಂದೂ, ಏಕವಚನದಲ್ಲಿ ಮಾತನಾಡಿಸುವುದು ಅನುಗ್ರಹಕ್ಕೆ ಸಮಾನವೆಂದೂ ಭಾವಿಸಿ ವೇದಮೂರ್ತಿಗಳೆಲ್ಲ ಮ॥ರಾ॥ಶ್ರೀಗಳನ್ನು 'ಅವನು', 'ನೀನು' ಎಂದೇ ಸಂಬೋಧಿಸುತ್ತಿದ್ದುದು ಆ ನಾಡಿನ ವಾಡಿಕೆಯಾಗಿತ್ತು"[4] ಇದರಿಂದ ಭಾಷೆಯನ್ನು ಬಳಸುವವರ ಸಾಮಾಜಿಕ ಸ್ಥಾನಮಾನ ಮತ್ತು ಭಾಷೆಯ ಸ್ವರೂಪ ವ್ಯಕ್ತವಾಗುತ್ತದೆ. ಹಾಗೆಯೇ ಹೂವಯ್ಯ ಮತ್ತು ರಾಮಯ್ಯ ವಿದ್ಯಾವಂತರಾಗುವುದನ್ನು ಸಹಿಸದ ಜೋಯಿಸರು ಚಂದ್ರಯ್ಯಗೌಡರಲ್ಲಿ ಶೂದ್ರರಿಗೆ ಓದು ಸಲ್ಲದು ಎಂದು ಬೋಧಿಸುತ್ತಾರೆ; ಇಲ್ಲಿ ಹೂವಯ್ಯ, ರಾಮಯ್ಯ ಅವರ ಸುಧಾರಿತ ಭಾಷೆಯೂ ಅವರನ್ನು ಹೀಗೆ ಹೇಳುವಂತೆ ಪ್ರೇರಿಸಿದೆ ಎನ್ನಬಹುದು. ಏಕೆಂದರೆ ವಿದ್ಯಾಭ್ಯಾಸ ಭಾಷೆಯನ್ನು ಸುಸಂಸ್ಕೃತಗೊಳಿಸುವುದಷ್ಟೆ!

ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಮಂಜಭಟ್ಟರು ಇತರ ಬೆಟ್ಟಳ್ಳಿ ಬ್ರಾಹ್ಮಣೇತರರೊಂದಿಗೆ ಮತ್ತು ಶ್ರೀಮಂತ ಜಮೀನುದಾರರೊಂದಿಗೂ ಏಕವಚನದಲ್ಲಿಯೇ ಮಾತನಾಡುವುದನ್ನು ಕಾಣುತ್ತೇವೆ. "ಓಹೋಹೋ! ಏನು ದ್ಯಾವಣ್ಣನ ಸವಾರಿ ದೇವಸ್ಥಾನದವರೆಗೂ ಚಿತ್ತೈಸಿದೆಯಲ್ಲ!..... ಕಲ್ಲಯ್ಯ ಬಂದಿಲ್ಲೇನೋ? ಹುಷಾರಾಗಿದ್ದಾನಷ್ಟೆ?" ಪ್ರತಿಯಾಗಿ ಆತ್ಮಗೌರವದಿಂದ ದೇವಯ್ಯ "ಯಾರು? ಹಳೇಪೈಕದ ಕಲ್ಲನಾ?–ಅಂವ ಕಳ್ಳ ಬಗನಿ ಇಳಿಸಾಕೆ ಕಾಡಿಗೆ ಹೋಗಿರಬೇಕು!"[7] ಎಂದು ಉತ್ತರಿಸುತ್ತಾನೆ. ಇದರಿಂದ ಹಳೇಪೈಕದವರು ಒಕ್ಕಲಿಗರಿಗಿಂತಲೂ ಕೀಳೆಂಬುದು ಈ ಮಾತಿನಿಂದ ವ್ಯಕ್ತವಾದರೂ ಬ್ರಾಹ್ಮಣರಿಗಿಂತ ತಾವು ಏನೂ ಕೀಳಲ್ಲ ಎಂಬ ಭಾವನೆಯನ್ನು ವ್ಯಕ್ತಪಡಿಸುತ್ತಾನೆ.

ಆಗ ಮಂಜಭಟ್ಟರು "ಅಲ್ಲ ಮಾರಾಯ; 'ನಿನ್ನ ಅಪ್ಪಯ್ಯ ಕಲ್ಲಯ್ಯಗೌಡರು ಹುಷಾರಾಗಿದ್ದಾರೆಯೆ?' ಅಂತ ಕೇಳಿದ್ದು... ಏನೋ ಹುಡುಗರಾಗಿದ್ದಾಗಿನಿಂದ ನಮ್ಮಿಬ್ಬರದ್ದು ಪರಿಚಯ; ಏಕವಚನದಲ್ಲೇ ಮಾತಾಡಿಸೋದು ರೂಢಿಯಾಗಿ ಬಿಟ್ಟಿದೆ..."[8] ಎಂದು ಸಮರ್ಥನೆ ನೀಡಲು ಪ್ರಯತ್ನಿಸುತ್ತಾರೆ.

ಮೇಲೆ ತಿಳಿಸಿರುವ ಎರಡೂ ಕಾದಂಬರಿಗಳ ಸಂಭಾಷಣೆಗಳಲ್ಲಿ ಬ್ರಾಹ್ಮಣರಿಗೆ ಶೂದ್ರರ ಬಗ್ಗೆ ಇದ್ದ ತಿರಸ್ಕಾರವನ್ನು ವ್ಯಕ್ತಪಡಿಸುವಾಗ ಅಧಿಕಾರವಾಣಿಯ ಜೊತೆಗೆ ವ್ಯಂಗ್ಯವೂ ಸೇರಿಕೊಂಡಿರುವುದನ್ನು ಕಾಣುತ್ತೇವೆ. ಅವರ ಮಾತುಗಳಲ್ಲಿ ವ್ಯಕ್ತವಾಗಿರುವ ಕೋಪ, ದಯಾಸಾಗರ, ಕರುಣಾಶಾಲಿ, ಋಣ, ಹಾಗೆ ಚಿತ್ತೈಸು, ಹುಷಾರುಗಳಲ್ಲಿ ಶಿಷ್ಟಭಾಷೆಯ ಪ್ರಯೋಗವನ್ನು ಕಾಣುತ್ತೇವೆಯಾದರೂ ಧ್ವನಿಯಲ್ಲಿ ವ್ಯಂಗ್ಯತೆ ಸ್ವಾರ್ಥ ಮತ್ತು ಮಾತಿನ ಒಳ ಮರ್ಮವನ್ನು ಗುರುತಿಸಬಹುದಾಗಿದೆ. ಇದರಿಂದ ಒಕ್ಕಲಿಗರು ಬಳಸುವ ಕನ್ನಡಕ್ಕೂ ಬ್ರಾಹ್ಮಣರ ಕನ್ನಡಕ್ಕೂ ಇರುವ ವ್ಯತ್ಯಾಸವನ್ನು ಗುರುತಿಸಬಹುದು.

ಒಂದೇ ಜಾತಿಯ ಆದರೆ ಭಿನ್ನ ಸ್ಥಾನಮಾನಕ್ಕನುಗುಣವಾಗಿಯೂ ಭಾಷೆಯ ವ್ಯತ್ಯಾಸವನ್ನು ಕಾಣುತ್ತೇವೆ. ಶ್ರೀಮಂತ ಚಂದ್ರಯ್ಯಗೌಡರ ಬಳಿಗೆ ಬರುವ ದಟ್ಟ ದಾರಿದ್ರ್ಯದಿಂದ ನರಳುತ್ತಿರುವ ಅಣ್ಣಯ್ಯಗೌಡ ಬಾಯಲ್ಲಿ ತಾಂಬೂಲವನ್ನು ತುಂಬಿಕೊಂಡು ಆಡುವ ಮಾತಿನಲ್ಲಿ ವಿಚಿತ್ರ ಉಚ್ಚಾರಣೆಯನ್ನು ಗುರುತಿಸಬಹುದು.

"ಏಣು ಮಾಡೋಡು ಹೇಳಿ, ಅವಣೆಗೊಂಡು ಲಗ್ಣ ಮಾಡ್ಬೇಕೋ ಬೇಡೋ..... ಣಿಮ್ಮ ಸಾಳ ಣಾಣೇಣ ಋಂಗಾದಿಳ್ಳ....... ಣಾಣೊಂಡು ಯಾಳೇ ಸಟ್ರೂ ಅವಣಿದ್ದಾಣಲ್ಲ ಟೀರ್ಸ್ಲೋಕೆ......."[9] ಒಕ್ಕಲಿಗ ಜಾತಿಯ ಚಂದ್ರಯ್ಯಗೌಡರ ಭಾಷೆಗೂ ಅದೇ ಜಾತಿಯ ಅಣ್ಣಯ್ಯಗೌಡರ ಭಾಷೆಗೂ ಎಷ್ಟೊಂದು ವ್ಯತ್ಯಾಸವಿದೆಯೆಂದರೆ, ಅಣ್ಣಯ್ಯಗೌಡರ ನಾಲಿಗೆಯಲ್ಲಿ ದಂತ್ಯಾಕ್ಷರಗಳ ಬದಲು ಮೂರ್ಧನ್ಯಾಕ್ಷರಗಳೇ ಹೊರಡುತ್ತವೆ. ಇಲ್ಲಿ ಪದ ವ್ಯತ್ಯಾಸ, ಸ್ವರ ವ್ಯತ್ಯಾಸ ಜೊತೆಗೆ ಉಚ್ಚಾರಣೆಯ ವಿಕೃತತೆಯನ್ನು ಕಾಣುತ್ತೇವೆ.

ಸಮಾನ ಸ್ಥಾನಮಾನ ಹೊಂದಿದ ಒಂದೇ ಜಾತಿಯ ಒಕ್ಕಲಿಗ ಗೌಡರಲ್ಲಿ ಗ್ರಾಮ್ಯಭಾಷೆಯ ಮತ್ತು ಮಲೆನಾಡಿನ ಪರಿಸರಕ್ಕೆ ತೀರ ಸ್ವಾಭಾವಿಕವಾದ ನೆಲದ ಭಾಷೆಯನ್ನು ಅವರ ಸಂವಾದ ಸಂಭಾಷಣೆಯಲ್ಲಿ ಕಾಣಬಹುದು; ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಹಳೇಮನೆ ಸುಬ್ಬಣ್ಣ ಮತ್ತು ಹೂವಳ್ಳಿ ವೆಂಕಣ್ಣರ ಸಂಭಾಷಣೆ ಹೀಗೆ ಬರುತ್ತದೆ.

ಸುಬ್ಬಣ್ಣ : ನೀ ಒಳ್ಳೆ ಗಿರಾಸ್ತ ಕಣೋ! ಅಲ್ಲಾ.....ನಿನ್ನೆ ಬತ್ತೀನಿ ಅಂದಾಂವ......!

ವೆಂಕಟಣ್ಣ : ನಾ ಏನ್ ಮಾಡದ್ರಾ? ಹಾಂಗ್ಯಾರೆ, ಆ ಸನಿ ಮುಂಡೇ ಮಕ್ಳು ಬತ್ತೀನಿ ಅಂದೋರು ಬರ್ಲೆ ಇಲ್ಲ. ಕಾದೆ, ಕಾದೆ......ಹೊತ್ತಾಗಿ ಹೋತು. ಇನ್ನೇನ್ ಮಾಡಾದು...... ನಾಳೆ ಬೆಳಿಗ್ಗೆ ಹೋಗಾನ ಅಂತ ಹೇಳಿ ನಿಂತು ಬಿಟ್ಟೆ".

ಸುಬ್ಬಣ್ಣ : "ಯಾರಿಗೆ ಹೇಳಿದ್ಯೋ?"

ವೆಂಕಟಣ್ಣ : "ನಿಮ್ಮ ಹೊಲೇರಿಗೆ ಹೇಳಿದ್ದೆ".

ಸುಬ್ಬಣ್ಣ : "ನೀ ಒಳ್ಳೆ ಗಿರಾಸ್ತ. ಅವರು ತ್ವಾಟದ ಬೇಲಿ ಮಾಡಾದ್ ಬಿಟ್ಕುಂಡು ನಿನ್ನ ಹಂದಿ ಹೊರಾಕೆ ಬತ್ತಾರೆ? ನೀ ಬೇಕಾರೆ ಒಳ್ಳೆ ಗಿರಾಸ್ತ!"

ವೆಂಕಟಣ್ಣ : ಹಾಂಗ್ಯಾರೆ ಏನ್ ಮಾಡ್ಲಿ ಹೇಳಿ? ಇನ್ ನಾನೆ ಹೊತ್ಕೊಂಡು ಹೋಬೇಕು.... ಅದಕ್ಕೂ ಸೈ ಅಂತಿದ್ದೆ ಕಾಲುಂದ್ ಹೀಂಗಾತಲ್ಲ ಹೇಳಿ......"[10]

ಈ ಸಂಭಾಷಣೆಯಲ್ಲಿ ಬರುವ ಗಿರಾಸ್ತ, ಬತ್ತಿನಿ, ಮಾಡದ್ರಾ? ಅಂದಾಂವ, ಹೇಳಿದ್ಯೋ, ಪದಗಳಲ್ಲಿ ಮಲೆನಾಡಿನ ದೇಸಿಭಾಷೆಯ ಸೊಗಡನ್ನು ಅಥವಾ ಗ್ರಾಮ್ಯ ಭಾಷೆಯ ಕಂಪನ್ನು ಗುರುತಿಸಬಹುದು. ಮಲೆನಾಡಿನ ಜನಸಮುದಾಯದವರು ಆಡುವ ಮಾತು ಹೊರನೋಟಕ್ಕೆ ಬಿರುಸಾಗಿ ಕಂಡರೂ ಆ ಮಾತುಗಳ ಅಂತರಂಗದಲ್ಲಿ ನಿಷ್ಕಪಟ, ನಿಷ್ಕಲ್ಮಶವಾದ ಭಾವನೆಗಳು ವ್ಯಕ್ತಗೊಳ್ಳುತ್ತವೆ.

ಅವಿದ್ಯಾವಂತ ಒಕ್ಕಲಿಗ ಮನೆತನದ ಹೆಂಗಸರು ಸಣ್ಣಪುಟ್ಟ ವಿಷಯಗಳಿಗೂ ಸಿಡುಕು ದುಡುಕಿನಿಂದ ಮಾತನಾಡುವಾಗ, ಜಗಳವಾಡುವಾಗ ಅವರ ಭಾವೋದ್ರೇಕಗಳ ಜೊತೆಗೆ ಗ್ರಾಮೀಣ ಪರಿಸರದಲ್ಲಿ ಸಾಮಾನ್ಯವಾಗಿ ಬಳಸುವ ಬೈಗುಳಗಳನ್ನು ಕಾಣಬಹುದು. ಕಾನೂರು ಹೆಗ್ಗಡತಿಯಲ್ಲಿ ಹೂವಯ್ಯನ ತಾಯಿ ನಾಗಮ್ಮ ಮತ್ತು ಚಂದ್ರಯ್ಯಗೌಡರ ಮೂರನೆಯ ಹೆಂಡತಿ ಸುಬ್ಬಮ್ಮ ಬೈಯ್ದಾಡುವ ರೀತಿ ಹೀಗಿದೆ:

ಸುಬ್ಬಮ್ಮ: "ಗಂಡನ್ನ ಕಳಕೊಂಡ ಮುಂಡೇರ ಹಣೇಬರವೇ ಹೀಗೆ..... ಅವರ ಕಣ್ಣು ಇಂಗೇ ಹೋಗಲಿ ಸುಳ್ಳು ಸುಳ್ಳು ಹೇಳಾದು, ಚಾಡಿ ಹೇಳಾದು...... ಅವರ ನಾಲಿಗೆ ಬಿದ್ದೇ ಹೋಗಲಿ...... ನಾನೀ ಹಾಳು ಮನೆಗೆ ಯಾಕೆ ಬಂದೆನೋ ದೇವರ ಕಣ್ಣಿಗೆ ಒರಲೆ ಹಿಡಿದು ಹೋಗಾಕೆ? ಗಂಜಿಕುಡ್ಕುಂಡಿರ್ತಿದ್ದೆ...... ಅವರ ಬಾಯಿಗೆಲ್ಲ ಹುಳ ಬಿದ್ದು ಹೋಗಾಕೆ...... ಏನು ಉರಿಸ್ತಾರೋ......

ಏನು ಉರಿತಾರೋ........ ಇಬ್ಬರನ್ನು ತಿಂದ ಮಾರಿ ಮೂರ್ನೇಯವಳನ್ನು ತಿನ್ನಾಕೆ ನೋಡ್ತದೆ...... ಮುಖಕ್ಕೆ ಬೆಂಕಿ ಹಾಕ........ ಹುಡುಗರು ಮಕ್ಕಳ್ನೆಲ್ಲಾ ನನ್ನ ಮೇಲೆ ಎತ್ತಿಕಟ್ಟಿ ಬಾಯಿಗೆ ಬಂದ್ಹಂಗೆ ಬಯ್ಸೋದೆ!......."

ನಾಗಮ್ಮ: ಯಾರೇ ಎತ್ತಿ ಕಟ್ಟಿದ್ದು? ಯಾವಾಗ್ಲೆ?

ಸುಬ್ಬಮ್ಮ: ಅವನ ಕಡೆಗೆ ಕಣ್ಣು ಮಿಸುಗಿದ್ದು ನನಗೆ ಕಾಣಲಿಲ್ಲೇನೋ?

ನಾಗಮ್ಮ: ಬಾಯಿಗೆ ಬಂದ್ಹಂಗೆ ಬಯ್ತಿಯಾ? ದಿಂಡೆ ಬಸವಿ!

ಸುಬ್ಬಮ್ಮ: ಯಾರೇ ದಿಂಡೆ ಬಸವಿ? ಹಾದರಗಿತ್ತಿ! ನಾಗಮ್ಮನವರಿಗೆ ಸಹಿಸಲಸಾಧ್ಯವಾಯಿತು... ಮುಂದೇನು ಮಾಡುತ್ತಿದ್ದರೋ ಏನೋ? ಅಷ್ಟರಲ್ಲಿ ಎಲ್ಲವನ್ನು ಆಲಿಸುತ್ತಿದ್ದ ಪುಟ್ಟಮ್ಮ" ದೊಡ್ಡಮ್ಮ, ಸುಮ್ಮನಿರೆ! ಆ ನಾಯಿ ಕೈಲಿ ಏನು ಮಾತು?" ಎಂದಳು ಆಗ ಸುಬ್ಬಮ್ಮ "ಯಾರೇ ನಾಯಿ? ಬಜಾರಿ!" ಎಂದು ಸೌಟಿನೊಡನೆ ಮುಂದೆ ಬಂದಳು........ ಅಷ್ಟರಲ್ಲಿ ಕಲ್ಲುಗಡಿಗೆಯಲ್ಲಿದ್ದ ಪಲ್ಯ ಹೊತ್ತಿ ಹೋಗಿತ್ತು. ಈ ಸಿಟ್ಟಿನಲ್ಲಿ ಪುಟ್ಟಮ್ಮ ಸುಮ್ಮನಿರಲಾರದೆ:

"ಅದರ ಓಡಿನಲ್ಲೇ ತಲೇ ಕೆರೀಬೇಕು ಹಿಡ್ಕೊಂಡು" ಎಂದು ಹಲ್ಲು ಕಡಿದಳು.

ಸುಬ್ಬಮ್ಮ : "ನಿನ್ನಜ್ಜ ಬರ್ಬೇಕು"

ಪುಟ್ಟಮ್ಮ: ನನ್ನಜ್ಜ ಹೇತು ಬಂದಲ್ಲಿ ನಿಂಗೆ ಕೂತು ಬರಾಕೆ ಯೋಗ್ಯತೆಯಿಲ್ಲೇ!....... ತಡೀ.... ಅಪ್ಪಯ್ಯನಿಗೆ ಹೇಳಿ ಮಾಡಿಸ್ತೀನಿ".

ಸುಬ್ಬಮ್ಮ: ಅಪ್ಪಗಾರು ಹೇಳು ಅಜ್ಜಗಾರೂ ಹೇಳು"....... [8]

ಇದೇ ರೀತಿಯ ಬೈಯ್ದಾಟದ ಸಂಭಾಷಣೆ <u>ಮಲೆಗಳಲ್ಲಿ ಮದುಮಗಳು</u> ಕಾದಂಬರಿಯಲ್ಲಿ ಬರುತ್ತದೆ. ಸುಬ್ಬಣ್ಣಹೆಗ್ಗಡೆಯವರ ಹೆಂಡತಿ ಜಟ್ಟಮ್ಮ ಮತ್ತು ಹೆಗ್ಗಡೆಯವರ ತಂಗಿ ಲಕ್ಕಮ್ಮರ ನಡುವಿನ ಒಳಮನೆಯ ಜಗಳ ಹೀಗೆ ಸಾಗುತ್ತದೆ:

ಜಟ್ಟಮ್ಮ: "ನಿನ್ನ ಕೊಡ್ತಾರಲ್ಲಾ ಆ ಹಂದಿ ಒಡ್ಡಿಗೆ!"

ಲಕ್ಕಮ್ಮ : "ಬರ್ತಾಳಲ್ಲಾ ನಿನ್ನ ಸವ್ತಿ ಹಂದಿ ಒಡ್ಡಿಯಿಂದ್ಲೆ!"

ಜಟ್ಟಮ್ಮ : ನನ್ನ ಹೆಣ ಬೀಳ್ಬೇಕು ಆ ತಾಟಗಿತ್ತಿ ಈ ಮನೆಗೆ ಕಾಲಿಡಬೇಕಾದ್ರೆ, ನಾನು ಮಾಡಾದ್ನೆಲ್ಲಾ ಮಾಡೀನಲ್ಲ; ಇನ್ನೆಲ್ಲಿ ಬರ್ತಾಳೆ ಅವ್ಳು..?"

ಲಕ್ಕಮ್ಮ: "ಬರದಿದ್ರೇ.... ಈ ಬಂಜೆ ಮುಂಡೇನ ಕಟ್ಟಿಕೊಂಡೂ.... ಗುಂಡಿ ಹಾರ್ತನೇನು ಅಣ್ಣಯ್ಯ?"

ಜಟ್ಟಮ್ಮ: ನಿನ್ನ ಮಿಂಡನ ತಂಗಿ ಅಲ್ಲದಿದ್ರೆ ಇನ್ಯಾರೂ ಇಲ್ಲೇನು ಹೆಣ್ಣು? ನಿನ್ನ ಮಂಜಿ ನಿನ್ನ ಏನು ರತಿ ಅಂತಾ ಮಾಡಿಯಾ? ಏನೂ ಇಲ್ಲ ಯತ್ಯಾಸ? ಆ ಹೂವಳ್ಳಿ ಹೆಣ್ಣು ಚಿನ್ನದಂಥಾ ಹೆಣ್ಣು, ಚಿನ್ನಮ್ಮನ್ನೇ ತರ್ತೀನಿ?' ಅದಕ್ಕೆ

ಲಕ್ಕಮ್ಮ: "ತಂದ್ಕಾ ಆ ದದ್ದುಹಿಡುಕ ಕುನ್ನೀನೆ! ಯಾರು ಬ್ಯಾಡ ಅಂತಾರೆ?"

ಜಟ್ಟಮ್ಮ: ಥೂ ನಿನ್ನ ಬಾಯಲ್ಲಿ ಹುಳು ಬಿದ್ದು ಹೋಗ! ಅವಳು ಹೇತು ಬಂದಲ್ಲಿ ನಿಂಗೆ ಕೂತು ಬರಾ ಯೋಗ್ತೇ ಇದ್ಯೇನೆ".[12]

ಕುವೆಂಪುರವರ ಎರಡೂ ಕಾದಂಬರಿಗಳಲ್ಲಿ ಬರುವ ಮೇಲಿನ ಎರಡು ಸಂಭಾಷಣೆಗಳು ಶ್ರೀಮಂತ ಒಕ್ಕಲಿಗ ಗೌಡರ ಮನೆಯ ಹೆಂಗಸರು ಬಳಸುವ ಮಾತುಗಳು, ಬಯ್ಗುಳಗಳು ಗ್ರಾಮ್ಯ ಭಾಷೆಗೆ ಹಿಡಿದ ಕನ್ನಡಿಯಾಗಿದೆ. ಹಾಗೆಯೇ ಅವರ ಬಯ್ಗುಳಗಳಲ್ಲಿ 'ಮುಂಡೆ' 'ಬಾಯಿಗೆ ಹುಳ ಬೀಳಲಿ', 'ದಿಂಡೆಬಸವಿ', 'ಹಾದರಗಿತ್ತಿ', 'ಬಜಾರಿ', 'ತಲೆಕೆರೀಬೇಕು ಹಿಡ್ಕೊಂಡು', 'ಸವ್ತಿ', 'ತಾಟಗಿತ್ತಿ', 'ಬಂಜೆ ಮುಂಡೆ', 'ನಿನ್ನ ಮಿಂಡನ ತಂಗಿ', 'ದದ್ದು ಹಿಡುಕ ಕುನ್ನಿ', ಮುಂತಾದವುಗಳ ಪದಗಳು ಲಿಂಗಾಧಾರಿತ ಭಾಷೆಯನ್ನಬಹುದು ಏಕೆಂದರೆ ಗ್ರಾಮೀಣ ಪ್ರದೇಶದಲ್ಲಿ ಹೆಂಗಸರು ಸಾಮಾನ್ಯವಾಗಿ ಬೇರೆ ಹೆಂಗಸರನ್ನು ಬೈಯಲು ಬಳಸುವ ಪದಗಳೇ ಆಗಿವೆ. ಎರಡೂ ಕಾದಂಬರಿಗಳ ಈ ಸಂಭಾಷಣೆ ಏಕರೂಪವಾಗಿದೆ ಎನ್ನಬಹುದು. ಅಲ್ಲಿ ಬಳಸಿರುವ ಪದಗಳು ಮತ್ತು ವಾಕ್ಯಗಳು ಭಿನ್ನವಾಗಿ ಕಾಣುವುದಿಲ್ಲ ಮೇಲಿನ ಎರಡೂ ಸಂಭಾಷಣೆಗಳ ಕೊನೆಯ ವಾಕ್ಯಗಳು "..... ಹೇತು ಬಂದಲ್ಲಿ ನಿನಗೆ ಕೂತು ಬರಾಯೋಗ್ತೇ ಇದ್ಯೇನೆ" ಎರಡೂ ಕಾದಂಬರಿಗಳಲ್ಲಿ ಒಂದೇ ರೀತಿಯಾಗಿದ್ದು, ಸಾಮಾಜಿಕವಾಗಿ ಉನ್ನತ ಸ್ಥಾನಮಾನ ಹೊಂದಿದ್ದರೂ ಹಸಿ ಹಸಿಯಾದ ಶಿಷ್ಟವಲ್ಲದ ಬೈಗುಳವನ್ನು ಗಮನಿಸಿದರೆ ಇಂತಹ ಬೈಗುಳ ಪದಗಳು ದೇಸಿ ಭಾಷೆಯ ಭಾಗವಾಗಿದ್ದವು ಎನ್ನಬಹುದು.

ಮಲೆನಾಡಿನಲ್ಲಿ ಬ್ರಾಹ್ಮಣ ಮತ್ತು ಒಕ್ಕಲಿಗ ಜಮೀನುದಾರರ ನಂತರದ ಸ್ಥಾನದಲ್ಲಿ ಕೆಳವರ್ಗದವರ ಭಾಷೆ ನಿಜವಾಗಿಯೂ ಪ್ರಕೃತಿಗೆ ಹತ್ತಿರವಾಗಿರುವಂತದ್ದು. ನಾಗರಿಕತೆಯ ಬೆಡಗು ಬಿನ್ನಾಣದ ಸೋಂಕಿಲ್ಲದ ನೆಲದ ಭಾಷೆಯೆನ್ನಬಹುದು. ಅವರಾಡುವ ಆಡುಮಾತಿನಲ್ಲಿ ಮುಗ್ಧತೆಯಿದ್ದು, ನಿಷ್ಕಪಟವಾಗಿದೆ, ಆಧುನಿಕತೆಯ ಆಡಂಬರವಿಲ್ಲದಿದ್ದರೂ ನೈಜತೆಯಿದೆ ಎನ್ನಬಹುದು. ಅದರಲ್ಲೂ ಶ್ರೇಣೀಕೃತ ಜಾತಿ ವ್ಯವಸ್ಥೆಯಲ್ಲಿ ಅತ್ಯಂತ ಕೆಳಗಿನ ಸ್ತರದಲ್ಲಿರುವ ಗುತ್ತಿ–ತಿಮ್ಮಿಯರ ನಿರ್ಮಲ ಮನಸ್ಸಿನ ಸರಳವಾದ ಪ್ರೇಮ ಸಂವಾದ, ಐತ–ಪೀಂಚಲುರವರ ದಾಂಪತ್ಯ ಸುಖದ ಸಂಭಾಷಣೆ ಪ್ರಕೃತಿಯ ಭಷೆಯೆಂದೇ ಹೇಳಬಹುದು. ಮಲೆಗಳಲ್ಲಿ ಮದುಮಗಳು ಕಾದಂಬರಿಯ ಐತ ತನ್ನ ಹೆಂಡತಿ ಪಿಂಚಲು ಜೊತೆ ಸಂಭಾಷಿಸುವಾಗ ಅವಳ ನಡೆ, ಉಡುಗೆ, ತೊಡುಗೆ, ಭಂಗಿ, ಚಲನವಲನ, ಹಾವಭಾವ ಋಜುತೆ, ಮುಗ್ಧತೆ ಒಂದೊಂದು ಚೀಂಕ್ರ ಒಡ್ಡಿದ್ದ ಸಂಶಯ ಪಿಶಾಚಕ್ಕೆ ಬೆಂಬಡಿಗೆಯಾಗಿತ್ತು.

ಐತ: ಎಲ್ಲಿತ್ತೇ ಈ ಹೊಂಬಾಳೆ?"

ಪೀಂಚಲು: "ಹೊತ್ತಾರೆ ತ್ವಾಟದಾಗೆ ಸಿಕ್ಕಿತಲ್ಲಾ ಅದೇ".

ಐತ: ಮಜ್ಜಾನ ಉಂಡಿರಲಿಲ್ವೇನೆ ಅದರಲ್ಲಿ?"

ಪೀಂಚಲು: ಅದನ್ನೇ ತೊಳೆದು ಇಟ್ಟಿದ್ದೆ. ಎಷ್ಟು ಚಂದ ಅದೇ ಅಲ್ಲಾ?.......

ಐತ: "ಹೊಸ ಸೀರೆ ಎಲ್ಲಿತ್ತೇ? ಯಾರು ಕೊಟ್ಟಿದ್ದೇ?"

ಪೀಂಚಲು: ಎಲ್ಲಿಯೋ ಇತ್ತು, ಯಾರೋ ಕೊಟ್ಟರು

ಐತ: ಇದೆಲ್ಲಾ ತಿನ್ನಾಕೆ ತಂದೀಯಲ್ಲಾ ಯಾರು ಕೊಟ್ಟದ್ದು?

ಪೀಂಚಲು: "ಯಾರೋ ಕೊಟ್ಟರು. ಅದೆಲ್ಲ ಈಗ ಯಾಕೆ?"

ಐತ: "ಹೂ ಮುಡಿದಿದ್ದಿಯಾ?"

ಪೀಂಚಲು: "ಮುಡಿಬಾರದಾ?"

ಐತ : "ನಾ ಊಟ ಮಾಡಾದಿಲ್ಲ!"

ಪೀಂಚಲು: "ಅಯ್ಯೋ! ಯಾಕೆ? ಸಿಟ್ಟು ಮಾಡಿಕೊಂಡಿರಾ?" ಎಂದಳು ಬಹುವಚನದಲ್ಲಿ ಐತ ಮಾತಾಡಲಿಲ್ಲ, ತಿರುಗಲೂ ಇಲ್ಲ, ಅವನು ಯಾವುದೋ ದುಃಖದಿಂದ ಬಿಕ್ಕುವಂತೆ ತೋರಿತು. ಪೀಂಚಲು ಅವನ ಮುಖದ ಮೇಲೆ ಕೈಯಾಡಿಸಿದಾಗ ಅದು ಒದ್ದೆಯಾಯಿತು! ಐತ ಅಳುತ್ತಿದ್ದಾನೆ! ಪೀಂಚಲುಗೆ ಮರುಕ ಉಕ್ಕಿತು. ತನ್ನ ಐತ ಅಳುತಿದ್ದಾನೆ. "ಯಾಕೆ? ತಾನೇನು ಮಾಡಿದೆ? ಹೆಣ್ಣಿನಲ್ಲಿದ್ದ ಹೆಂಡತಿಯ ಕರುಳು ಮರುಗಿ ತಾಯ್ತನಕ್ಕೇರಿತು, ಐತನೊಂದು ರಚ್ಚೆ ಹಿಡಿದ ಅರಿಯದ ಮಗುವೋ ಎಂಬಂತೆ ಅವನನ್ನು ಮುದ್ದು ಮಾಡಿ ಲಲ್ಲಯ್ಸಿದಳು"[13] ಐತ-ಪೀಂಚಲುರವರ ಮುಗ್ಧ ಸ್ನಿಗ್ದ ದಾಂಪತ್ಯ, ಸರಳ-ಸುಂದರ ಶಿಷ್ಟ ಮಾತುಗಳು ದೇಸಿಯ ಬದುಕಿನ ಪ್ರತಿಸೃಷ್ಟಿಯಾಗಿವೆ, ಹಾಗೆಯೇ ಅದೇ ಕಾದಂಬರಿಯ ಒಕ್ಕಲಿಗ ಗೌಡತಿಯರು ಬಳಸುವ ಭಾಷೆಗಿಂತ ಭಿನ್ನವಾಗಿದೆ ಎಂದು ಗುರುತಿಸಬಹುದು. ಇದರಿಂದ ಸಾಮಾಜಿಕವಾಗಿ ಜಾತಿ ವ್ಯವಸ್ಥೆಯಲ್ಲಿ ಕೆಳಸ್ತರದಲ್ಲಿದ್ದರೂ ಭಾಷೆ-ಸಂಸ್ಕೃತಿಯಲ್ಲಿ ಮೇಲ್ಜಾತಿಯ ಒಕ್ಕಲಿಗ ಗೌಡ-ಗೌಡತಿಯರಿಗಿಂತ ಶ್ರೇಷ್ಠಮಟ್ಟದಲ್ಲಿದ್ದಾರೆ ಐತ-ಪೀಂಚಲು ಎನ್ನಬಹುದು.

ಮಲೆಗಳಲ್ಲಿ ಮದುಮಗಳು ಕಾದಂಬರಿಯ ಮತ್ತೊಂದು ಆದರ್ಶ ಜೋಡಿಯಾದ ಗುತ್ತಿ-ತಿಮ್ಮಿಯರ ಸಂಭಾಷಣೆಯಲ್ಲಿ ಸರಳವಾದ, ಪ್ರಕೃತಿಯ ಸೊಬಗಿನ ಭಾಷೆಯಲ್ಲಿ ಕಾಣಬಹುದು. ಶ್ರೇಣೀಕೃತ ಜಾತಿ ವ್ಯವಸ್ಥೆಯಲ್ಲಿ ಕೆಳಸ್ತರದಲ್ಲಿದ್ದರೂ ಇವರಿಬ್ಬರ ನಡುವಿನ ಪ್ರೀತಿ, ಆತ್ಮೀಯತೆ, ಭಾವನೆಗಳನ್ನು ಅವರ ಮುಗ್ಧ ಭಾಷೆಯನ್ನು ಕಾಣುತ್ತೇವೆ.

ತಿಮ್ಮಿ : "ಬೆಳಕು ಬಿದ್ದಲ್ಲಾ? ಹಂಗಾರೆ ಇನ್ನು ಹೊಲ್ಡಾನಾ?

ಗುತ್ತಿ : ಎಲ್ಲಿಗೆ?

ತಿಮ್ಮಿ: ಮಾವನ ಮನಿಗೆ

ಗುತ್ತಿ: ಯಾರ ಮಾವನ ಮನಿಗೆ?

ತಿಮ್ಮಿ: ನನ್ನ ಮಾವನ ಮನಿಗೆ!"

ಗುತ್ತಿ: "ನನ್ನ ಮಾವನ ಮನೀಗೆನೋ ಅಂತಾ ಮಾಡಿದ್ದ...."

ತಿಮ್ಮಿ: "ನಿನ್ನ ಮಾವನ ಮನಿಗೆ ಹೋದ್ರೆ ಆಗ್ತದೆ ನಿಂಗೆ, ಚೆನ್ನಾಗಿ ಮದ್ವೆ!"

ಗುತ್ತಿ: ಅಲೆಲೆಲೆಲೆ ಹುಡುಗಿ! ಒಂದು ರಾತ್ರೀಲೆ ಏಟು ಬದಲಾಯಿಸಿ ಬಿಟ್ಯೇ? ನಿನ್ನೆ ನೀನೆ ಅಲ್ಲೇನೆ ಹೇಳಿದ್ದೂ ಮನೀಗೆ ಹೋಗಾನ ಅಂತಾ?"...... ತಿಮ್ಮಿ ಮಲೆಯ ಕಣಿವೆಗಳ ಕಡೆ ಕಣ್ಣು ಹಾಯಿಸಿ ಕಣ್ಣರಳಿಸಿ, ಹಿಗ್ಗಿ ವಿಸ್ಮಯದಿಂದ ಕೂಗಿಕೊಂಡಳು.

ತಿಮ್ಮಿ: "ಅಯ್ಯೋ ಅಯ್ಯೋ ಅಯ್ಯೋ! ಅದೇನು ಭಾವ, ಅದೂ? ನೊರೆ, ನೊರೆ, ನೊರೆ ಹಾಲು! ಕಡ್ಳು ನಿಂತಾಂಗೆ ಅದೆಯಲ್ಲಾ?"

ಗುತ್ತಿ: ಕಾವಣ ಕಣೇ, ಕಣಿವೆ ಕಾಡನೆಲ್ಲ ಮುಚ್ಚಿಬಿಟ್ಟಿದೆ.

ತಿಮ್ಮಿ: 'ಏನು ಚೆಂದಾಗಿ ಕಾಣ್ತದೆ ಭಾವ! ನಾನು ನೋಡೇ ಇರ್ಲಿಲ್ಲ.

ಗುತ್ತಿ: ಕೆಳೂಗೆ ಬಿಡಾರದಾಗೇ ಕೂತುಕೊಂಡಿದ್ರೆ ಹೆಂಗ ಕಾಣ್ತದೆ ಇದೆಲ್ಲ? ನೋಡಿದ್ಯಾ? ನನ್ನ ಜೊತೆ ಬಂದಿದ್ದಕ್ಕೆ ಏನೆನೆಲ್ಲ ಕಂಡ್ತು ನಿಂಗೆ?........."[14]

ಗುತ್ತಿ–ತಿಮ್ಮಿಯರ ಭಾಷೆಯಲ್ಲಿ ಮಲೆನಾಡಿನ ಮಣ್ಣಿನ ಸೊಗಡನ್ನು ಕಾಣಬಹುದು ಏಕೆಂದರೆ ಅವರು ಆ ಮಣ್ಣಿನ ಮಕ್ಕಳು, ಅವರಾಡುವ ಮಾತುಗಳು ಸರಳ, ಸ್ಪಷ್ಟ, ಮುಗ್ಧ ಮತ್ತು ನಿಷ್ಕಲ್ಮಶವಾಗಿದೆ ಎಂದು ತಿಳಿಯುತ್ತದೆ. ಅವರ ಭಾವನೆಯಷ್ಟೇ ಭಾಷೆ ಹೊರಹೊಮ್ಮಿದೆ. ಐತ–ಪೀಂಚಲು ಮತ್ತು ಗುತ್ತಿ–ತಿಮ್ಮಿಯರ ಸಂಭಾಷಣೆಯಲ್ಲಿ ತಿಳಿಹಾಸ್ಯವಿದೆ ಹುಸಿಕೋಪವಿದೆ, ಪ್ರಣಯದ ಸವಿಯಿದೆ. ಅವರ ಸಂವಾದ ಮುಗ್ಧ ಪ್ರೇಮಿಗಳ ಪ್ರೇಮೋಪನಿಷತ್ತಿನ ಮಂತ್ರಗಳ ಭಾಷ್ಯದಂತಿದೆ. 'ಬೆಳಕು ಬಿಡ್ತಾಲ್ಲಾ', 'ಹಂಗಾರೆ', ಹೊಲ್ಡಾನಾ', ಆಗ್ತದೆ ಮದ್ವೆ', 'ಕಾವಣ', 'ಕೆಳೂಗೆ"ಇದೇ ಮೊದಲಾದ ಭಾಷಾರೂಪಗಳು ಮತ್ತು ಪಡೆನುಡಿಗಳು ಗಮನಾರ್ಹವಾಗಿವೆ. ಕಾವಳ ಆ ಹಳ್ಳಿಗರ ಮನಸ್ಸಿಗೂ ಆಹ್ಲಾದವುಂಟು ಮಾಡುತ್ತದೆ. ಆಹ್ಲಾದದ ಕಟ್ಟೆಯೊಡೆದಾಗ 'ನೊರೆ, ನೊರೆ, ನೊರೆ ಹಾಲು!" "ಕಡ್ಳು ನಿಂತ್ಹಾಂಗೆ ಅದೆಯಲ್ಲಾ!" ಎಂಬ ಉದ್ಗಾರ ಯಾವ ಕಾವ್ಯ ಕಲ್ಪನೆಗೂ ಕಡಮೆಯಿಲ್ಲ, ಸರಳವಾದ ಬಿಡಿಬಿಡಿಯಾದ ಮಾತುಗಳಲ್ಲಿ ಎಂಥ ಮಹತ್ ಕಲ್ಪನೆ ಹೊರಹೊಮ್ಮಿದೆ. ಭಾಷೆಯ ಸಾರ್ಥಕತೆ ಇರುವುದೇ ಇಂಥಲ್ಲಿ"[15] ಮೇಲಿನ ಪಾತ್ರಗಳು ಸಾಮಾಜಿಕವಾಗಿ ಕೆಳಸ್ತರದವರಾಡಿದ ಭಾಷೆ. ಅವರಾಡುವ ಶಿಷ್ಟತೆ–ಬೆರೆತ ಭಾಷೆ ಗ್ರಾಮ್ಯ ರೀತಿಯದು ಎಂದು ಸ್ಪಷ್ಟವಾಗಿ ಹೇಳಬಹುದು.

4.3 ವಲಸೆ ಬಂದವರ ಭಾಷೆ:

ದಕ್ಷಿಣಕನ್ನಡ ಜಿಲ್ಲೆಯಿಂದ ಮಲೆನಾಡಿಗೆ ವಲಸೆ ಬಂದವರು ಮಾತನಾಡುವ ಕನ್ನಡ ತುಳು ಮಿಶ್ರಿತವಾಗಿದೆ. ಅವರ ಭಾಷೆ ದಕ್ಷಿನಕನ್ನಡ ಜಿಲ್ಲೆಗೆ ಸೀಮಿತವಾದ ದೇಸಿ ಭಾಷೆ ಮಲೆನಾಡಿಗೆ ವಲಸೆ ಬಂದರೂ ಅವರ ಭಾಷೆಯಲ್ಲಿ ಅವರ ಮೂಲ ದೇಸಿಯತೆಯ ಸೊಗಡಿರುವುದು ಗೋಚರಿಸತ್ತದೆ, ಇದೇ ದೇಸಿ ಭಾಷೆಯ ವಿಶೇಷತೆ. ಉದ್ಯೋಗವನ್ನರಸಿ ಬೇರೆ ಬೇರೆ ಸ್ಥಳಗಳಿಗೆ ವಲಸೆ ಹೋದರೂ ಮೂಲ ದೇಸಿಯತೆ ಭಾಷೆಯಲ್ಲಿ ಅಭಿವ್ಯಕ್ತಗೊಳ್ಳುತ್ತದೆ ಎನ್ನುವುದನ್ನು ಮಲೆನಾಡಿಗೆ ವಲಸೆ ಬಂದ ದಕ್ಷಿಣಕನ್ನಡ ಜಿಲ್ಲೆಯವರಲ್ಲೂ, ಕೇರಳದಿಂದ ಬಂದ ಬ್ಯಾರಿ ಮುಸಲ್ಮಾನರಲ್ಲೂ ಕಾಣುತ್ತೇವೆ. ದಕ್ಷಿಣಕನ್ನಡದವರನ್ನು ಘಟ್ಟದ ಕೆಳಗಿನವರು ಅಂತಲೂ ಕರೆಯುತ್ತಾರೆ. ಅವರಾಡುವ ಭಾಷೆ ತುಳು ಉಚ್ಚಾರಣೆಯ ಕನ್ನಡವಾದ್ದರಿಂದ, ಅವರ ಭಾಷೆಯಲ್ಲಿ ಸ್ವರ ವ್ಯತ್ಯಾಸ, ಪದ ವ್ಯತ್ಯಾಸಗಳನ್ನು ಗುರುತಿಸಬಹುದು. ಸೇರೆಗಾರ ರಂಗಪ್ಪಶೆಟ್ಟರ ಕನ್ನಡದಲ್ಲಿ ಈ ಅಂಶವನ್ನು ಕಾಣುತ್ತೇವೆ. ಕಾನೂರು ಹೆಗ್ಗಡತಿಯ ಸುಬ್ಬಮ್ಮನನ್ನು ತನ್ನ ಕುಯುಕ್ತಿಯ ಬಲೆಗೆಹಾಕಿಕೊಳ್ಳಲು ಬಳಸುವ ಮಾತುಗಳನ್ನು ಗಮನಿಸಬೇಕು. ಅವಳ ತಂದೆ ಬೈಗಾಗಿದ್ದರಿಂದ ಮಗಳನ್ನು ಮರುದಿನ ಬೆಳಗ್ಗೆ ಕಳುಹಿಸುವುದಾಗಿ ಹೇಳುವಾಗ:

ಸೇರೆಗಾರರು: "ಈವತ್ತೇ ಕಳಿಸಬೇಕೆಂಬ್ರೂ! ಕಳಿಸಿನಿ–ಬಿಡಿನಿ! ನಾ ಹೋತೆ! ನಮ್ಮ ಗೌಡರಿಗೆ ತಲೆ ಕೆಟ್ಟಿತಂಬ್ರು! ಈವತ್ತು ಇದ್ದ ಬುದ್ಧಿ ನಾಳೆ ಇರಲಿಕ್ಕಿಲ್ಲ! ನೀವು ಕಳಿಸಿದರೆ ಕಳಿಸಿನಿ! ಬಿಟ್ಟರೆ ಬಿಡಿನಿ! ನಾನು ಹೋಗಿಬತ್ತೆ!"[16]

ಇದೇ ಸೇರೆಗಾರರು ಕೆಲವು ಸಂದರ್ಭಗಳಲ್ಲಿ ಘಟ್ಟದ ಮೇಲಿನವರಂತೆಯೇ ಮಾತನಾಡುವುದನ್ನು ಕಾಣಬಹುದು. "ಸುಮ್ಮನೆ ಅತ್ತರೆ ಏನು ಪ್ರಯೋಜನ ಅಮ್ಮ? ಭಗವಂತ ಕೊಟ್ಟಿದ್ದು ಭಗವಂತ ತೆಗೆದುಕೊಂಡು ಹೋಗ್ತಾನೆ, ನಾವ್ಯಾರು ಕೇಳೋಕೆ? ಎಲ್ಲ ಅವನ ಲೀಲೆ. ಅವನು ಕೊಟ್ಟಿದ್ದನ್ನು ನಾವು ಅನುಭವಿಸಬೇಕು.... ಸಾವು ಯಾರಿಗೂ ತಪ್ಪಿದ್ದಲ್ಲ."[17] ಒಬ್ಬ ಸುಸಂಸ್ಕೃತ, ವಿದ್ಯಾವಂತ ಮಾತನಾಡಿದ ಹಾಗೆ ಮಾತನಾಡುವ ಸೇರೆಗಾರರು ತಾನೂ ಗಟ್ಟದ ಮೇಲಿನವರ ಹಾಗೆ ಮಾತನಾಡುವಾಗ ಅವನು ತುಳುವನೆಂದು ಹೇಳುವುದು ಕಷ್ಟವಾಗುತ್ತದೆ. ಹಾಗೆಯೇ ದಕ್ಷಿಣ ಕನ್ನಡದ ಭಾಷೆಯ ತುಳು ಉಚ್ಚಾರಣೆಯ ಕನ್ನಡವನ್ನು ಸೋಮನ ಮಾತಿನಲ್ಲಿ ಕಾಣುತ್ತೇವೆ. "ಅಯ್ಯಾ, ಅವರ ಮಾತು ಕೇಳಿ ನನ್ನ ಬಾಯಿಗೆ ಮಣ್ಣಾಯಿತು! ಕಲ್ಲಸೂಲೇ ಮಕ್ಕಳು.... ನನ್ನ ಕಳಿಸಿ ಅಡಗಿ

ನಿಂತಿದ್ದಾಲ್ದಾ ಹಿಂದೆ! ಅವರ ತಾಯಿ ರಂಡೆ ಆಪೂಕೆ!"[18] ಘಟ್ಟದ ಕೆಳಗಿನವರು ಬಳಸುವ ಪದಗಳು 'ಕಳಿಸಬೇಕೆಂಬ್ರ', 'ಕಳಿಸಿನಿ', 'ಬಿಡಿನಿ', 'ಹೋತೇ', 'ಕೆಟ್ಟತಂಬ್ರು', 'ಹೋಗಿಬತ್ತೆ', 'ನಿಂತದ್ದಲ್ದಾ' ಮುಂತಾದವು ಕುಂದಾಪುರದ ಕನ್ನಡ ಪ್ರಭಾವ ಉಚ್ಚಾರಣೆಯಿಂದ ಕೂಡಿದ ಕನ್ನಡ ಪದಗಳು. ಹೀಗೆ ದಕ್ಷಿಣಕನ್ನಡ ಜಿಲ್ಲೆಯಿಂದ ಮಲೆನಾಡಿಗೆ ವಲಸೆ ಬಂದವರಲ್ಲಿ ಅವರ ಮೂಲ ದೇಸಿ ಭಾಷೆಯ ಸೊಗಡಿರುವುದನ್ನು ಕಾಣುತ್ತೇವೆ ಮತ್ತು ಅವರು ಮಾತನಾಡುವ ಕನ್ನಡದಲ್ಲಿ ಪದ ವ್ಯತ್ಯಾಸದ ಜೊತೆಗೆ ಧ್ವನಿ, ಸ್ವರಗಳ ವ್ಯತ್ಯಾಸವನ್ನು ಗುರುತಿಸಬಹುದು.

ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿಯೂ ದಕ್ಷಿಣಕನ್ನಡ ಜಿಲ್ಲೆಯ ಆಳುಗಳು ಮಾತನಾಡುವ ತುಳು ಮಿಶ್ರಿತ ಕನ್ನಡ ಉಚ್ಚಾರವನ್ನು ಕಾಣಬಹುದು. ಹೌದಂಬ್ರ ಕಾಣಿ, ನಮ್ಮ ಕಾನೂರು ಸೇರಿಗಾರ್ರು ಒಂದು ತಿಂಗಳ ಹಿಂದೆಯ ಆಳುಗಳನ್ನೆಲ್ಲ ಕರೆದುಕೊಂಡು ಹೋದ್ರಂಬ್ರಲ್ಲಾ ಎಂದು ಗಟ್ಟದಾಳು ಗುತ್ತಿಗೆ ಹೇಳಿದಳು ಹಾಳೆ ಟೋಪಿಯ ಗಟ್ಟದವನು "ನಾವು ಮುತ್ತಳ್ಳಿಗೆ ಹ್ವೋಯ್ಕು.... ನೀವ್ವೋ?... "ಹೌದು, ಮಾರಾಯ್ರ, ಅವರೇ! ನಮ್ಮ ಒಡೆಯರಲ್ದಾ"[19] ಇದು ಕುವೆಂಪುರವರ ಎರಡೂ ಕಾದಂಬರಿಗಳಲ್ಲಿ ಪ್ರಸ್ತಾಪಿಸಿರುವ ದಕ್ಷಿಣಕನ್ನಡ ಜಿಲ್ಲೆಯ ಕೆಲಸದಾಳುಗಳು ಮಾತನಾಡುವ ತುಳು ಉಚ್ಚಾರಣೆ ಶೈಲಿಯಾಗಿದ್ದು, ಘಟ್ಟದ ಮೇಲಿನವರ ಕನ್ನಡದ ಉಚ್ಚಾರಣೆಗಿಂತ ಭಿನ್ನವಾಗಿರುವುದನ್ನು ಸುಲಭವಾಗಿ ಗುರುತಿಸಬಹುದು.

ದಕ್ಷಿಣಕನ್ನಡ ಜಿಲ್ಲೆಯವರ ಹಾಗೆಯೇ ಮಲೆನಾಡಿಗೆ ವ್ಯಾಪಾರ ಮಾಡಲೋ, ಇನ್ನಿತರ ಕಸುಬುಗಳಿಂದ ಜೀವನ ನಡೆಸಲೊ ವಲಸೆ ಬಂದು ಆ ಪ್ರದೇಶದಲ್ಲಿ ಉಳಿದು ಕನ್ನಡ ಕಲಿತು ತಮ್ಮ ಮಾತೃಭಾಷೆಯ ಅಥವಾ ಅವರ ಮೂಲ ದೇಸಿಯ ಉಚ್ಚಾರಣೆಯಿಂದಲೇ ಮಾತನಾಡುವವರಲ್ಲಿ ಮಲಯಾಳಿ ಕಣ್ಣಾಪಂಡಿತರು, ಮುಸಲ್ಮಾನರು ಮುಖ್ಯವಾದವರು. ಕೇರಳದಿಂದ ಬಂದು ನಾಟಿ ವೈದ್ಯನಾಗಿರುವ ಕಣ್ಣಾ ಪಂಡಿತರ ಭಾಷೆಯನ್ನು ಗಮನಿಸಬೇಕು!; "ಏನೋ ಕುತ್ತಿ, ಮತುವೆ ಮಕನ ಹಾಂಗೆ ಬಟ್ಟೆಯುಟ್ಟು ಹೊರಟಿದ್ದೀಯಲ್ಲವ್ವೋ" ಇಲ್ಲಿ ಮಲೆಯಾಳದ ದೇಸಿಯ ಉಚ್ಚಾರಣೆ ಕನ್ನಡದ ಪ್ರಯೋಗದಲ್ಲಿರುವುದನ್ನು ಕಾಣಬಹುದು, 'ಗುತ್ತಿ'ಗೆ ಬದಲಾಗಿ 'ಕುತ್ತಿ', 'ಗ'ಕಾರ 'ಕ'ಕಾರವಾಗಿದೆ. 'ಮತುವೆ' ಪದದಲ್ಲಿ 'ದ'ಕಾರಕ್ಕೆ ಬದಲಾಗಿ 'ತ'ಕಾರ ಬಂದಿದೆ. ಮುಂದೇ ಇದೇ ಕಣ್ಣಾ ಪಂಡಿತ ಮೇಗರವಳ್ಳಿಯ ಮಿಶನ್ ಇಸ್ಕೂಲು ಕಟ್ಟಡದ ಕಂತ್ರಾಟುದಾರನಾಗಿ ಪಾದ್ರಿಯೊಡನೆ ನಡೆಸುವ ಅವನ ಸಂವಾದದಲ್ಲಿ ಎಂಥ ವೈಚಿತ್ರಗಳಿವೆ ಎನ್ನುವುದನ್ನು ಕಾಣಬಹುದು.

ಪಾದ್ರಿ : ಇದು ಏನು ಕಣ್ಣಾ ಪಂಡಿತರೆ? ಏಕೆ ಹೀಗೆ ಅಗೆಯಿಸಿದ್ದೀರಲ್ಲಾ?

ಕಣ್ಣಾಪಂಡಿತ: ಅತು ಅಗೆಯಿಸಿತಲ್ಲ, ಪಾತ್ರಿಗಳೆ, ರಾತ್ರಿ ಕಾಲತ್ತಲ್ಲಿ ಹಂತಿ ಉತ್ತಿತ್ತಲಾ್ದ?

ಪಾದ್ರಿ : ಏನಂದರಿ? ಪಾದ್ರಿಗೆ ಪಂಡಿತನ ಮಾತು ಅರ್ಥವಾಗಲಿಲ್ಲ.

ಕಣ್ಣಪಂಡಿತ: ಹಂತಿ ಉತ್ತಿತ್ತು! ಹಂತಿ! ಹಂತಿ! ತುಸು ದೂರದಲ್ಲಿದ್ದು ಅವರ ಕಡೆ ನೋಡುತ್ತಿದ್ದ ಚೀಂಕ್ರ ನಡುವೆ ಬಾಯಿ ಹಾಕಿ 'ಹಂದಿ ಉತ್ತಿತ್ತು ಅಂಬ್ರು' ಪಂಡಿತರು! ಎಂದು ಸ್ಪಷ್ಟಪಡಿಸಿದನು. ಹೊರಭಾಗದ ಪರಿಶೀಲನೆಯನ್ನು ಮುಗಿಸಿ ಪಾದ್ರಿ ಒಳಗೆ ಬಂದನು, ಒಳಗೆ ದಾಟಲೆಂದು, ನೋಡುತ್ತಾನೆ, ಒಳಗೆಲ್ಲ ಸಗಣಿ, ಕುರಿಹಿಕ್ಕೆ!

ಪಾದ್ರಿ: ಇದೇನು, ಪಂಡಿತರೆ, ಸ್ಕೂಲೋ ಕೊಟ್ಟಿಗೆಯೋ?

ಕಣ್ಣಪಂಡಿತ: ಹಾಳು ತನಕಾಯುವ, ಕುರೀಕಾಯುವ ಮುಂಡೇ ಮಕ್ಕಳಿಂತ ಸುಕಾ ಇಲ್ಲ!.... ಹೇಳಿ ಹೇಳಿ ಸಾಕಾಯಿತು ಈ ಸೂಲ ಮಕ್ಕಳಿಗೆ! ಈ ಬಾಕಿಲಿಗೆ ಒಂದು ಸರಪಣಿ ಚಿಲಕ ಮಾಡಿ ಹಾಕುತ್ತೇನೆ. ಆಮೇಲೆ ಈ ಲವಡಿ ಮಕ್ಕಳು ಹ್ಯಾಂಗೆ ಒಳಗೆ ತನಾ ಕುರೀ ಬಿಡುತ್ತಾರೆ? ನೋಡುವಾ?"[21]

ಕಣ್ಣಾಪಂಡಿತರ ಮಾತುಗಳಲ್ಲಿ 'ಗ'ಕಾರ ಸ್ಥಾನದಲ್ಲಿ 'ಕ' ಕಾರವಾಗಿರುವುದು 'ದ' ಕಾರ 'ತ' ಕಾರವಾಗಿರುವುದರ ಜೊತೆಗೆ ಕನ್ನಡ ಪದಗಳ ಉಚ್ಚಾರಣೆ ಬಹಳ ವಿಚಿತ್ರವಾಗಿರುವುದನ್ನು ಕಾಣಬಹುದು. ಇವರು ತಮ್ಮ ಮಾತಿನ ಮಧ್ಯೆ ಬಳಸುವ ಬೈಗುಳ ಪದಗಳಾದ 'ಸೂಲೆ'(ಸೂಳೆ) ಮಕ್ಕಳು, ಲವಡಿ, ಮುಂಡೆ ಮುಂತಾದವು ಪಂಡಿತರ ಸಂಸ್ಕೃತಿಯ ಅಭಿವ್ಯಕ್ತಿಯಾಗಿರಬಹುದು. ಆದರೆ ಮುಂಡೆ ಎನ್ನುವ ಬೈಗುಳ ಪದ ಮಲೆನಾಡಿನ ಪ್ರದೇಶದಲ್ಲಿಯೂ ಪ್ರಚಾರದಲ್ಲಿತ್ತು ಎಂದು ತಿಳಿಯುತ್ತದೆ. ಸಾಮಾನ್ಯವಾಗಿ ಹೆಂಗಸರು ಬೈಯುವಾಗ ಹೆಚ್ಚಾಗಿ ಈ ಪದ ಬಳಸಲ್ಪಡುತ್ತದೆ.

ಕಣ್ಣಾಪಂಡಿತರಂತೆಯೇ ಮಲೆನಾಡಿಗೆ ಘಟ್ಟದ ಕೆಳಗಿನಿಂದ ವ್ಯಾಪಾರಕ್ಕೆ ಬಂದ ಬ್ಯಾರಿಗಳು (ಮುಸ್ಲಿಂ) ಆಡುವ ಮಾತಿನಲ್ಲಿಯೂ ಸಹ ಭಾಷಾ ವೈಚಿತ್ರತೆಯನ್ನು ಕಾಣುತ್ತೇವೆ. ಅವರಾಡುವ ಮಾತುಗಳು ಅವರು ಬೆಳೆದು ಬಂದ ದೇಸಿ ಪರಿಸರ ಮತ್ತು ಸಂಸ್ಕೃತಿಯ ಪ್ರತೀಕವಾಗಿರಬಹುದು ಎಂದೆನಿಸುತ್ತದೆ. ಮುಸ್ಲಿಮರ ಮಾತುಗಳಲ್ಲಿ ಅಶಿಕ್ಷಿತ, ಅಶ್ಲೀಲ, ಅಸಹ್ಯವೆನಿಸುವ ದ್ವಂದ್ವಾರ್ಥಗಳನ್ನು ಕಾಣುತ್ತೇವೆ. <u>ಮಲೆಗಳಲ್ಲಿ ಮದುಮಗಳು</u> ಕಾದಂಬರಿಯಲ್ಲಿ ಬರುವ ಕೇರಳದ ಮುಸ್ಲಿಮರು ಇವರನ್ನು

ಮಾಪಿಳ್ಳೆ, ಲಬ್ಬೆ, ಬ್ಯಾರಿ, ಎಂದೂ ಕರೆಯಲಾಗುತ್ತಿತ್ತು. ಇವರಿಗೆ ಮುಸಲ್ಮಾನ ಭಾಷೆ ಬರುತ್ತಿರಲಿಲ್ಲ, ಹೊನ್ನಾಳಿ ಕಡೆಯ ಸಾಬರಿಗೆ ಮಲೆಯಾಳಿ ಅರ್ಥವಾಗುತ್ತಿರಲಿಲ್ಲ. ಹೀಗೆ ಎರಡೂ ಕಡೆಯವರು ಮಾತನಾಡುವ ಭಾಷೆ ಕನ್ನಡವಾಗಿತ್ತು. ಹೊನ್ನಾಳಿ ಕಡೆಯ ಮುಸಲ್ಮಾನರಾದ ಅಜ್ಜೀಸಾಬು ಮತ್ತು ಇಜಾರದ ಸಾಬರ ಮಾತುಗಳಲ್ಲಿ 'ಹರಾಮ್' ಬಾಂಚೋತ್! ಏನು ಉಡಾಪಿ ಮಾತು ಆಡಿದ ಅವನು....? ಲೌಡಿಮಗ ಪರಾರಿಯಾಗಿ ಬಿಟ್ಟ![22] ಈ ಮಾತುಗಳಲ್ಲಿ ಬರುವ 'ಹರಾಮ್ ಬಾಂಚೋತ್', ಲೌಡಿಮಗ' ಮುಂತಾದ ಪದಗಳು ಅಶ್ಲೀಲವಾಗಿರುವುದು ಮತ್ತು ಅವುಗಳನ್ನು ಬಳಸುವವರ ಜಾತಿಯನ್ನು ಸುಲಭವಾಗಿ ಗುರುತಿಸಬಹುದು. ಇಂತಹ ಪದಗಳನ್ನು ಗ್ರಾಮೀಣ ಪ್ರದೇಶದ ಮುಸಲ್ಮಾನರು ಸಾಮಾನ್ಯವಾಗಿ ಬೈಗುಳದಲ್ಲಿ ಬಳಸುವ ಪದಗಳೆಂದು ತಿಳಿಯುತ್ತದೆ. ಇಜಾರದ ಸಾಬರ ಮತ್ತು ಹಮ್ಮೀರ ನಾಯಕರ ಸಂಭಾಷಣೆಯಲ್ಲಿ ಇರುವ ದ್ವಂದ್ವಾರ್ಥವನ್ನು ಗಮನಿಸಬೇಕು: "ಕುದರೇನೇ ನಿಕಾ ಮಾಡಿಕೊಳ್ತಾನೇನೋ?" ಇಜಾರದ ಸಾಬ್ರು ಗಹಗಹಿಸಿ ನಗುತ್ತಾ ಕೇಳಿದನು: "ಅವನು ಮಾಡಿಕೊಳ್ತೇನೆ ಅಂದ್ರೂ ಕುದುರೆ ಒಪ್ಪಬೇಕಲ್ಲಾ? ಅದಕ್ಕಾಗಲೇ ಗಂಡು ಸಿಕ್ಕಯ್ತೆ, ಅಲ್ಲಿ ನೋಡಿ ಕಾಣ್ತರಲ್ಲಾ! ಭರ್ಜರಿ ಗಂಡು! ಇವನ ಹಾಗೆ ಬಡಕಲಲ್ಲ!" ಎಂದು ಲುಂಗಿಸಾಬು ಹೇಳಿದನು. ಮತ್ತೆ ಇಜಾರದ ಸಾಬಿ ಹಮ್ಮೀರ ನಾಯಕನಿಗೆ "ಅದೆಲ್ಲಾ ಸೈ ನೀನು ಕುದುರೆ ಮೇಲೆ ಯಾವಾಗಲಾದರೂ ಹತ್ತಿದ್ದಿಯೊ?" ಅದಕ್ಕೆ ಹಮ್ಮೀರನ ಉತ್ತರ, "ಕುದುರೆ ಮೇಲೆ ಹತ್ತದಿದ್ರೆ ಏನಂತೆ?.... ನಾ ಹುಡುಗನಾಗಿದ್ದಾಗ ದನಾಕಾಯಕೆ ಹೋಗ್ತಿದ್ದಾಗ ದನದ ಮೇಲೆ ಎಮ್ಮೆ ಮೇಲೆ ಎಷ್ಟು ಸಾರಿ ಹತ್ತಿಲ್ಲ?...... "ಹಾಂಗಾದ್ರೆ ನೀ ಅದನ್ನು ಮಾಡಿದ್ದೀಯಾ...... ಅನ್ನು, ಹೋರಿ ಕೆಲಸಾನ?......[13] ಹೀಗೆ ಗ್ರಾಮೀಣ ಪ್ರದೇಶದ ಮುಸ್ಲಿಮರ ಮಾತುಕತೆಗಳಲ್ಲಿ ನಾನಾರ್ಥವನ್ನು ಕೊಡುವ ಪದಗಳನ್ನು ಬಳಸಿರುವುದು ಮತ್ತು ಅವುಗಳ ಮೂಲಕ ಅವರ ವಿಚಿತ್ರ ಅಭಿರುಚಿಯನ್ನು ಭಾಷೆಯ ವೈಶಿಷ್ಟ್ಯತೆಯನ್ನು ಕಾಣಬಹುದು. ವಿಶೇಷವೆಂದರೆ ಮಲೆನಾಡಿಗೆ ವಲಸೆ ಬಂದ ಘಟ್ಟದ ಕೆಳಗಿನವರು, ಮಲೆಯಾಳಿ ಬ್ಯಾರಿಗಳು, ಮತ್ತು ಹೊನ್ನಾಳಿ ಕಡೆಯ ಮುಸಲ್ಮಾನರು ಬಾಯಿ ತೆರೆದರೆ ಸಾಕು; 'ಲವಡಿ, ಬಾಂಚತ್, ಸೂವರ್, ಮಾದರ್‌ಚಿತ್, ಸೂಲೆಮಕ್ಕಳು, ಮುಂಡೇಮಕ್ಕಳು, ಇತ್ಯಾದಿ ಬೈಗುಳದ ಪದಗಳನ್ನು ಹೆಚ್ಚಾಗಿ ಬಳಸುವುದನ್ನು ಕಾಣುತ್ತೇವೆ.

ಹೀಗೆ ಮಲೆನಾಡಿನ ದೇಸಿಯ ಸಂಸ್ಕತಿಯನ್ನು ಅರಿಯಲು ಅಲ್ಲಿಯ ಪರಿಸರ, ನಂಬಿಕೆ, ಆಚಾರ, ವೃತ್ತಿ, ವೇಷಭೂಷಣಗಳಂತೆಯೇ ದೇಸಿ ಭಾಷೆಯೂ ಅಷ್ಟೇ ಮುಖ್ಯವಾಗಿದೆ. ದೇ.ಜ.ಗೌ. ಅವರು ಹೇಳುವಂತೆ; ಒಂದು ಭಾಷೆಯ ನಿಸರ್ಗ ಸೌಂದರ್ಯವನ್ನು; ಶಕ್ತಿ ಸಾಮರ್ಥ್ಯ,

ವ್ಯಾಪಕತೆಗಳನ್ನು, ಅದರ ಎತ್ತರ ಬಿತ್ತರಗಳನ್ನು, ಅದರ ಸ್ಥಿತಿಸ್ಥಾಪಕ ಸ್ವಭಾವವನ್ನು ಅದರ ರುದ್ರರಮಣೀಯತೆಯನ್ನು, ಅನ್ಯಭಾಷೆಯನ್ನು ಜೀರ್ಣಿಸಿಕೊಂಡು ತನ್ನದನ್ನಾಗಿ ಮಾಡಿಕೊಳ್ಳುವ ರೂಪ ಪರಾವರ್ತನ ರಹಸ್ಯವನ್ನು, ಅದರ ಗಾರುಡಿಗತನವನ್ನು ನೋಡಬೇಕಾದರೆ ಗ್ರಾಮೀಣ ಭಾಷೆಯ ಕಡೆಗೆ ಹೊರಳಬೇಕು"[24] ಕುವೆಂಪುರವರು ಮಲೆನಾಡಿನ ದೇಸಿಯ ಬದುಕಿನಲ್ಲಿ ಎಲ್ಲಾ ಬಗೆಯ ಭಾಷೆಗಳನ್ನು ದುಡಿಸಿಕೊಂಡಿರುವುದರಿಂದ ಕಾದಂಬರಿಯ ಭಾಷೆ ಮತ್ತು ಅಲ್ಲಿನ ಬದುಕಿನ ವೈವಿಧ್ಯತೆ ಇಮ್ಮಡಿಗೊಂಡಿರುವುದನ್ನು ಕಾಣುತ್ತೇವೆ. ಮಲೆನಾಡಿನ ಪರಿಸರದಲ್ಲಿ ರೂಢಿಯಲ್ಲಿದ್ದ ಆಡುನುಡಿಗಳು ದೇಸಿ ಭಾಷೆಯ ಮತ್ತು ಬದುಕಿನ ಸೌದರ್ಯವನ್ನು ಅನಾವರಣಗೊಳಿಸಿರುವುದನ್ನು ಕಾಣಬಹುದು. ಸಂಸ್ಕೃತದ ಅನೇಕ ಪದಗಳು ಕನ್ನಡದಲ್ಲಿ ಗ್ರಾಮ್ಯ ಅಥವಾ ದೇಸಿ ಪದಗಳಾಗಿ ರೂಪಾಂತರಗೊಂಡಿರುವುದನ್ನು ಕುವೆಂಪುರವರ ಎರಡೂ ಕಾದಂಬರಿಗಳಲ್ಲಿ ಕಾಣಸಿಗುತ್ತೇವೆ. ಕಾನೂರು ಹೆಗಡಿತಿಯಲ್ಲಿ ಬರುವ: ಇಂತಹ ಪದಗಳ ಸಂಗ್ರಹವನ್ನು ಗಮನಿಸಬಹುದು: 'ರುಸಿ'(ಋಷಿ), 'ಗಿರಾಚಾರ'(ಗ್ರಹಚಾರ), 'ಮಖಾ'(ಮುಖ), 'ಕಣಸು'(ಕನಸು), 'ಯೇಚ್ನೆ(ಯೋಚನೆ), 'ಸೊಡ್ಡಿಗೆ' (ಸೂಡಿಗೆ), 'ಮದ್ವೆ' (ಮದುವೆ), 'ಪಸ್ತಾಪ'(ಪ್ರಸ್ತಾಪ), 'ಜಾತ್ಕ'(ಜಾತಕ), 'ಹೋದರ್ಸ' (ಹೋದವರ್ಷ), 'ಮನೆ'(ಮೊನ್ನೆ), 'ಹೋದ್ವೊ' (ಹೋದವು), 'ದೋಯಿಸ್ರು'(ಜೋಯಿಸರು), 'ಈಬೂತಿ'(ವಿಭೂತಿ), 'ಪರ್ಸಾದ'(ಪ್ರಸಾದ), 'ಮಜ್ಜಾನ' (ಮಧ್ಯಾಹ್ನ), 'ಆಯಾರ'(ಆಹಾರ), 'ಸೊಂತ'(ಸ್ವಂತ), 'ಸನ್ನೇಸಿ' (ಸನ್ಯಾಸಿ), 'ಈಕ್ಷಿಸು'(ವೀಕ್ಷಿಸು), 'ಯತ್ವಾಸ'(ವ್ಯತ್ಯಾಸ), 'ಮದೆ'(ಮದುವೆ), 'ಅರ್ತ'(ಅರ್ಥ), 'ಪರ್ಜ್ಞೆ(ಪ್ರಜ್ಞೆ), ಲ್ಲವ'(ಅವನು), 'ಹೋದಾವ್ನ'(ಹೋದಾವ)[25] ಮುಂತಾದ ಪದಗಳು ದೇಸಿ ಭಾಷೆಯ ಪ್ರತಿಸೃಷ್ಟಿಯಾಗಿವೆ. ಆವರಣದಲ್ಲಿ ಸುಸಂಸ್ಕೃತರು ಪ್ರಯೋಗಿಸುವ ಪದಗಳನ್ನು ಕೊಡಲಾಗಿದೆ. ಕನ್ನಡಕ್ಕೆ ರೂಪಾಂತರಗೊಳ್ಳುವಾಗ ಅವುಗಳ ಪದರಚನೆ, ಉಚ್ಚಾರಣೆ ಮತ್ತು ಸ್ವರವಿನ್ಯಾಸಗಳಲ್ಲಿ ಭಿನ್ನತೆಯನ್ನು ಕಾಣಬಹುದು.

ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿಯೂ ಸಹ ಸಮೃದ್ಧವಾಗಿ ಬಳಸಿರುವ ದೇಸಿ ಭಾಷೆಯ ಅಥವಾ ಗ್ರಾಮ್ಯ ಪದಗಳನ್ನು ಕಾಣಬಹುದು. 'ಚಣ'(ಕ್ಷಣ), 'ದರೋಬಸ್ತಾಗಿ' (ಜಬರ್‌ದಸ್ತಾಗಿ), 'ಈಟ್ಹೊತ್ತನಾಗೆ' (ಇಷ್ಟುಹೊತ್ತಿನಾಗೆ), 'ಚಿಳ್ರೆ'(ಚಿಲ್ಲರೆ), 'ಔಂಸ್ತಿ'(ಔಷಧಿ), 'ಇಚಾರ'(ವಿಚಾರ), 'ಪರಾಣ' (ಪ್ರಾಣ), 'ಹಾರ್ರು' (ಹಾರವರು), 'ಬಿರಾಂಬರು'(ಬ್ರಾಹ್ಮಣರು), 'ಬಿರಾಂತು'(ಬ್ರಾಂತಿ), 'ಜಲ್ಮ'(ಜನ್ಮ), 'ಮನಿಸ್ಯ'(ಮನುಷ್ಯ), 'ಅಂದಾಂವ' (ಅಂದವನು), 'ಸನಿ'(ಶನಿ), 'ಹ್ಯಾಂಗ್ಯಾರೆ' (ಹಾಗಾದರೆ), 'ನೆತ್ರೂ' (ನೆತ್ತರು), 'ಗಾಂಯ'(ಗಾಯ), 'ಮಜ್ಜಾನ'(ಮಧ್ಯಾಹ್ನ), 'ಎಂಗ್ಟಣ್ಣ'(ವೆಂಕಟಣ್ಣ), 'ಪರಾಂತದಾಗೆ'

(ಪ್ರಾಂತ್ಯದಾಗೆ), 'ಈಟು'(ಇಷ್ಟು), 'ಧ್ಯಾನವೇ' (ಜ್ಞಾನವೇ), 'ಅಮರಸರ'(ಅವಸರ), 'ಬೆಣಕು'(ಬೆಳಕು), 'ಬೀಸೆಕಲ್ಲು(ಬೈಸಿಕಲ್ಲು), ಬೂಟೀಸು(ಬೂಟ್ಸ್), 'ಅಂವ'(ಅವನು), 'ವೇಚ್ನೆ'(ಯೋಚನೆ), 'ಇಲಾಜು' (ವಾಸಿಮಾಡು), 'ನೆಪ್ಪು'(ನೆನಪು), 'ಆಚ್ಚರ್ಯ'(ಆಶ್ಚರ್ಯ), 'ಆಮ್ಯಾಲೆ'(ಆಮೇಲೆ), 'ಜರ'(ಜ್ವರ), 'ಸೊಸಲ್ಪ', 'ಸೊಲೂಪ'(ಸ್ವಲ್ಪ), 'ಸಿಕಾರಿ'(ಶಿಖಾರಿ), 'ಸಂತೋಸ'(ಸಂತೋಷ), 'ಸರೀರ'(ಶರೀರ), 'ಗಳಾಸು'(ಗ್ಲಾಸು/ಲೋಟ), 'ಬಾಂವಿ'(ಬಾವಿ), 'ಪರಾಯ'(ಪ್ರಾಯ), 'ಯಾವಹರ'(ವ್ಯವಹಾರ), 'ಪಿರೀತಿ'(ಪ್ರೀತಿ), 'ನಿಚ್ಚೆಯ್ಸಿಕೊಂಡು' (ನಿಶ್ಚಯಿಸಿಕೊಂಡು), 'ಸಾಸ್ತ್ರ'(ಶಾಸ್ತ್ರ),'ಮದೋಳ್ಗೀಗೆ' (ಮದುಮಗಳಿಗೆ), 'ಪರಾಣಿ'(ಪ್ರಾಣಿ), 'ಸಂಗ್ತಿ'(ಸಂಗತಿ), 'ಇಚಾರ್ಸಿ'(ವಿಚಾರಿಸಿ) ಮುಂತಾದವು ಇಲ್ಲಿ ಕಂಸದ ಹೊರಗಿನ ಅನೇಕ ಪದಗಳು ಸಂಸ್ಕೃತದಿಂದ ಬಂದು ಕನ್ನಡದಲ್ಲಿ ಗ್ರಾಮ್ಯ ಅಥವಾ ದೇಸಿ ಪದಗಳಾಗಿವೆ. ಹಾಗೇಯೇ ಬೇರೆ ಬೇರೆ ಭಾಷೆಗಳಿಂದ ಬಂದು ಮಲೆನಾಡಿನ ದೇಸಿ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಪಾರಿಭಾಷಿಕ ಶಬ್ದಗಳನ್ನು ಗಮನಿಸಬಹುದು. ಆಂಗ್ಲಭಾಷೆಯಿಂದ ಬಂದಿರುವ 'ಓಟ್ಲು' (ಹೋಟೆಲು), 'ಗಳಾಸು'(ಗ್ಲಾಸು), 'ಬೀಸೆಕಲ್ಲು'(ಬೈಸಿಕಲ್), 'ರೂಲೀಸು'(ರೂಲ್ಸು), 'ಕಂತ್ರಾಟು' (ಕಾಂಟ್ರಾಕ್ಟ್), ಕಿರಾಪು(ಕ್ರಾಪ್) ಮುಂತಾದವು ಆಂಗ್ಲ ಭಾಷೆಯಿಂದ ಬಂದು ಮಲೆನಾಡಿನ ದೇಸಿ ಭಾಷೆಯಲ್ಲಿ ಲೀನವಾಗಿವೆ. ಕಾದಂಬರಿಕಾರರೇ ಹೇಳುವುಂತೆ ಮುಸಲ್ಮಾನರ ಆಳ್ವಿಕೆ ಕೊನೆಗೊಂಡು ಇಂಗ್ಲೀಷರ ಆಳ್ವಿಕೆ ಬಂದ ಮೇಲೆ ದೇಸಿ ಭಾಷೆಗೆ ಅನೇಕ ಆಂಗ್ಲಪದಗಳ ಆಗಮನ ಸಂಕ್ರಮಣ ಕಾಲದ ಸಂಕೇತವಾಗಿದೆ.[26] 'ರಸ್ತೆ' ಎಂಬ ಪದಕ್ಕೆ ಬದಲಾಗಿ 'ರೋಡು', 'ಲಾಂದ್ರ'ಕ್ಕೆ, 'ಲಾಟೀನು', 'ಲ್ಯಾಂಪು', ಬಂದು 'ದೊಂದಿ'ಯ ಸ್ಥಾನಪಲ್ಲಟಗೊಳಿಸುವುದು ಹೀಗೆ ಪಾರಿಭಾಷಿಕ ಶಬ್ದಗಳು ಗ್ರಾಮ್ಯರೂಪ ಪಡೆಯುವುದನ್ನು ಕಾಣಬಹುದು.

4.4 ಮಲೆನಾಡಿನಲ್ಲಿ ಪ್ರಚಲಿತದಲ್ಲಿದ್ದ ನುಡಿಗಟ್ಟುಗಳು, ಪಡಿನುಡಿಗಳು, ಸ್ಥಳನಾಮಗಳು, ಗಾದೆಗಳು ಮತ್ತು ಅಡ್ಡ ಹೆಸರುಗಳು

ದೇಸಿ ಭಾಷೆಯ ವೈಶಿಷ್ಟ್ಯವನ್ನು ಮಲೆನಾಡಿನ ಪ್ರದೇಶದಲ್ಲಿ ಹಾಸುಹೊಕ್ಕಾಗಿರುವ ನುಡಿಗಟ್ಟುಗಳು, ಪಡೆನುಡಿಗಳು, ಆಡು ನುಡಿಗಳು ಮತ್ತು ಗಾದೆಗಳಲ್ಲಿ ಗುರುತಿಸಬಹುದಾಗಿದೆ. "ಹೊಟ್ಟೆಗೆ ಬೆಂಕಿ ಬಿದ್ದಾಂಗೆ'(ಕಾ.ಹೆ.7), 'ದನಗೋಳು ಮಳೆ'(ಕಾ.ಹೆ.502), 'ಸೊಡ್ಡಿಗೆ ಬೆಂಕಿ ಹಾಕ' (ಕಾ.ಹೆ.202), 'ಬಾಯಿಗೆ ಬೆಂಕಿಹಾಕ"(ಕಾ.ಹೆ.203), "ಸುಬ್ಬಣ್ಣಹೆಗ್ಗಡೆಯವರ ಸಿಟ್ಟು ಜುಟ್ಟಿಗೂ ಏರಿತು".

(ಮ.ಮ.99), "ಕುದಿ ನೀರು ಎರಚಿದಂತಾಗು"(ಕಾ.ಹೆ.61), "ಮೀನು ಕಡಿಯಾಕೆ" "ಪಂಚಾಯ್ತಿ ಹೊಡೆ", ಅಡಕೆ ಅಗಿಯೋದ್ರೊಳಗೆ" "ಕೊಟ್ಟಿಗೆಯೊಳಗೆ ಹುಲಿ ಬಿದ್ದಿರಬೇಕು" (ಕಾ.ಹೆ.99), ಮೊದಲಾದ ಪದಗುಚ್ಛಗಳನ್ನು ಕುವೆಂಪುರವರ ಎರಡೂ ಕಾದಂಬರಿಗಳಲ್ಲಿ ಕಾಣಬಹುದು.

ದೇಸಿಯ ಸಂಸ್ಕೃತಿಯ ಅನುಭವಸಾರವನ್ನು, ಸರ್ವಕಾಲಕ್ಕೂ ಸಮಕಾಲೀನತೆಯನ್ನು ಸಾರುವ ಭಾಷೆಯ ದ್ರವ್ಯವೆಂದರೆ ಗಾದೆಗಳು. ದೇಸಿ ಭಾಷೆಯಲ್ಲಿ ಆಡುನುಡಿಗಳ ನಡುವೆ ಮತ್ತು ಸಂಭಾಷಣೆಗಳಲ್ಲಿ ಬಳಸಲ್ಪಡುವ ಗಾದೆಗಳು ದೇಸಿಯ ಸಂಸ್ಕೃತಿಯ ಪ್ರತಿಸೃಷ್ಟಿಯಾಗಿವೆ ಎಂದರೆ ತಪ್ಪಾಗಲಾರದು. <u>ಮಲೆಗಳಲ್ಲಿ ಮದುಮಗಳು</u> ಕಾದಂಬರಿಯಲ್ಲಿ ಬಳಸಿರುವ ಕೆಲವು ಗಾದೆಗಳು ಹೀಗಿವೆ:

- ಕಾವಲಿಲ್ಲದ ಕೋಟೆಗೆ ನುಗ್ಗಲು ಶತ್ರುವಿಗೆ ಸೈನ್ಯಬೇಕೆ? (ಪುಟ.197)
- ಅಂಬಲಿ ತಿನ್ನಾಂವ ಅಂಬರಕ್ಕೆ ಹಾರಿದ್ಯಾಂಗೆ....(ಪುಟ.358)
- ಹಸಿದು ಹಲಸಿನ ಹಣ್ಣು ಉಂಡು ಬಾಳೆಹಣ್ಣು.... (ಪುಟ.364)
- ಸತ್ಕೀರ್ತಿ ಹಬ್ಬುವುದು ನಿಧಾನ, ದುಷ್ಕೀರ್ತಿ ಕಾಡುಕಿಚ್ಚಿನಂತೆ ಹರಡಿಕೊಳ್ಳುತ್ತದೆ. (ಪುಟ.10)
- ಹಾರುವರು ಹಾರ್ದಾಂಗೆ ತುದೀ ಬೆಳ್ಳಾಗೆ ಹಾರ್ಕೊಂಡು ಬತ್ತಿಯಲ್ಲೊ. (ಪುಟ.138)
- ತಿರುಪತಿಗೆ ಹೋದೋರು ಹಿಂದಕ್ಕೆ ಬರಾದ್ರೂ ಉಂಟೆ, ನೆರೆ ಹೊಳೀಗೆ ಬಿದ್ದೋರು ದಡ ಹತ್ತಾದು ಉಂಟೆ. (ಪುಟ.87)
- ಹಗಲು ಹನ್ನೆರಡು ಗಂಟೆಗೆ ರಾಜ್ಯ ಕಳಕೊಂಡವರ ಜಾತಿ .... (ಪುಟ.364)
- ಆರಿದ್ರ ಮಳೆಗೆ ಆದವನೆ ಗಂಡ. (ಪುಟ.480)
- ಕೈಯಲ್ಲಿ ಶರಣಾರ್ತಿ, ಬಗಲಲ್ಲಿ ದೊಣ್ಣೆ. (ಪುಟ.50)
- ಆಯಸ್ಸು ಕಾಡಿದೋರ ಸಂಗಡ ದೋಣಿಗೆ ಹತ್ತಿದ್ರೆ ಆಳಿಗೊಂದು ಗುಟುಕು ನೀರಂತೆ.

  (ಪು.609)

- ಕಾನೂರುಹೆಗ್ಗಡತಿಯಲ್ಲಿ ಕಾಣ ಸಿಗುವ ಗಾದೆಗಳು :
- ಸಾಲವನು ಕೊಂಬಾಗ ಹಾಲೋಗರುಂಡಂತೆ, ಸಾಲಿಗನು ಬಂದು ಎಳೆವಾಗ ಕಿಬ್ಬದಿಯ ಕೀಲು ಮುರಿದಂತೆ ಸರ್ವಜ್ಞ. (ಪುಟ.65)
- ವೇದ ಸುಳ್ಳಾದರೂ ಗಾದೆ ಸುಳ್ಳಾಗದು. (ಪುಟ.79)
- ಕಳ್ಳು ದೇವರಿಗಿಂತ ಸುಳ್ಳು ದೇವರೆ? (ಪುಟ.194)
- ಸಲುಗೆ ಕೊಟ್ಟ ನಾಯಿ ಸಟ್ಟುಗ ನೆಕ್ಕಿತಂತೆ. (ಪುಟ.79)
- ಕೆಲವರಿಗೆ ತಮ್ಮ ಅಭ್ಯುದಯಕ್ಕಿಂತಲೂ ಮತ್ತೊಬ್ಬರ ಅವನತಿಯಲ್ಲಿ ಹೆಚ್ಚು ಸುಖವಿರುತ್ತದೆ. (ಪುಟ.320)
- ಅನಿಷ್ಟಕ್ಕೆ ಶನಿಗುರಿ. (ಪುಟ.374)
- ಅಕ್ಷಯ ಪಾತ್ರೆಯೋ ದ್ರೌಪದಿಯ ಸೀರೆಯೋ? (ಪುಟ.56)
- ಈಗಿನ ವಿದ್ಯಾಭ್ಯಾಸ ಹುಡುಗರನ್ನು ಹಾಳುಮಾಡಿ ಬಿಡುತ್ತದೆ. (ಪುಟ.67)
- ಶೂದ್ರ ಮಕ್ಕಳಿಗೆಲ್ಲ ಉಪನಿಷತ್ತು ಭಗವದ್ಗೀತೆ ಗಂಧವಾದರೂ ಗೊತ್ತಾಗುತ್ತದೆಯೇ? (ಪುಟ.67)
- ಸನ್ನಿವೇಶದಿಂದ ದುರಾತ್ಮನು ಮಹಾತ್ಮನಾಗಬಹುದು, ಮಹಾತ್ಮನು ದುರಾತ್ಮನಾಗಬಹುದು. (ಪುಟ.383)
- ವಿಧಿ ಬರೆದಿದ್ದನ್ನು ತಿದ್ದಲು ಯಾರಿಗೂ ಸಾಧ್ಯವಿಲ್ಲ. (ಪುಟ.406)
- ಗೋಹತ್ಯೆ ಮಾಡಿದವನು ಪುರಾಣ ಹೇಳಿದರ ಕೇಳಿದವರೆಲ್ಲರೂ ನರಕಕ್ಕೆ ಹೋಗಬೇಕಾಗುತ್ತದೆ. (ಪುಟ.448)
- ಹಣೆಯ ಬರಹವನ್ನು ಅಳಿಸುವುದು ಯಾರಿಂದ ತಾನೆ ಸಾಧ್ಯ? (ಪುಟ.450)
- ಸಂಸ್ಕೃತಿಯಿಲ್ಲದ ಮತ್ತು ಸಂಸ್ಕೃತಿಗಾಗಿಯಲ್ಲದ ವಿರಾಮ ನರಕಕ್ಕೆ ದಾರಿ. (ಪುಟ.563)

- ಊರಿಗೆ ಬರೋಳು, ಕೇರಿಗೆ ಬರೋದಿಲ್ಲವೇ? (ಪುಟ.68)
- ಹಳೆಯದ್ಕೆ ಹೊಸದಾದುದೆಲ್ಲವೂ ಸೌಂದರ್ಯವೇ. (ಪುಟ.36)
- ಕೊಟ್ಟವನು ಕೋಡಂಗಿ ತೆಗೆದುಕೊಂಡವ ವೀರಭದ್ರ. (ಪುಟ.422)
- ಯೌವನದಲ್ಲಿ ಪಟ್ಟ ಅತಿಸುಖಕ್ಕೆ ವೃದ್ಯಾಪದಲ್ಲಿ ಪ್ರಾಯಶ್ಚಿತ್ತವಾಗಿ ಕಷ್ಟಪಡಬೇಕಾದುದು ಅವರ ಕರ್ಮ! (ಪುಟ.69)

ಹೀಗೆ ಗಾದೆಗಳು, ಸುಭಾಷಿತಗಳು ದೇಸಿಭಾಷೆಯ ತಿರುಳಾಗಿ ಸಾಹಿತ್ಯದಲ್ಲಿ, ಜಾನಪದದಲ್ಲಿ, ಜನರ ದೈನಂದಿನ ಆಡುನುಡಿಗಳಲ್ಲಿ ಅಭಿವ್ಯಕ್ತಗೊಳ್ಳುವುದನ್ನು ಕಾಣಬಹುದು.

ದೇಸಿ ಭಾಷೆಯ ಮತ್ತೊಂದು ವಿಶೇಷವೆಂದರೆ ನಾಮ ವಿಶೇಷಗಳು, ಅಡ್ಡ ಹೆಸರುಗಳು ಮತ್ತು ಸ್ಥಳನಾಮಗಳು. ಅಡ್ಡ ಹೆಸರುಗಳು ಸಾಮಾನ್ಯವಾಗಿ ಪೂರ್ವಿಕವಾಗಿ ಬಂದ ಮನೆತನ, ಊರು, ಉದ್ಯೋಗ, ಪ್ರದೇಶಗಳನ್ನು ಅವಲಂಬಿಸಿ ಬಂದಿರುತ್ತದೆ.[27] ಒಕ್ಕಲಿಗರಲ್ಲಿ 'ಗೌಡ', 'ಹೆಗ್ಗಡೆ', ದಕ್ಷಿಣಕನ್ನಡ ಜಿಲ್ಲೆಯಿಂದ ಬಂದವರಲ್ಲಿ 'ಸೇರೆಗಾರಸೆಟ್ಟರು', 'ಸೆಟ್ಟರು', ಅಂತಕ್ಕ 'ಸೆಟ್ಟಿ' 'ಕಣ್ಣಾಪಂಡಿತರು' ಮುಂತಾದವು. ವ್ಯಕ್ತಿಗಳ ಗುಣ, ಸ್ವಭಾವ, ಆಕಾರ, ಸ್ಥಾನಮಾನ, ವೇಷಭೂಷಣಕ್ಕನುಗುಣವಾಗಿ ವಿಶೇಷ ನಾಮಗಳಾಗಿ ಕರೆಯಲ್ಪಡುವುದು. ನಿಜನಾಮವೊಂದು ಬೇರೆಯಿದ್ದರೆ, ಅಂಕಿತವಾಗಿ ಬಂದ ನಾಮ ಬೇರೆಯಾಗಿರುತ್ತದೆ. ಮೂಲನಾಮ ಹಿಂದೆ ಸರಿದು ಅಂಕಿತನಾಮಗಳೇ ಪ್ರಚಾರದಲ್ಲಿ ಬರುತ್ತವೆ. <u>ಮಲೆಗಳಲ್ಲಿ ಮದುಮಗಳು</u> ಕಾದಂಬರಿಯ 'ನಾಯಿಗುತ್ತಿ' ಹೊಲೆಯರ ಗುತ್ತಿಯ ಜೊತೆಯಲ್ಲಿ ಅವನು ಸಾಕಿದ ನಾಯಿ ಯಾವಾಗಲೂ ಇರುವುದರಿಂದ ಅವನ ಹೆಸರಿಗೆ ವಿಶೇಷವಾಗಿ 'ನಾಯಿಗುತ್ತಿ' ಎಂಬ ಹೆಸರೇ ಹೆಚ್ಚು ಪ್ರಚಾರದಲ್ಲಿತ್ತು. ಹಾಗೆಯೇ 'ಹೊಟ್ಟೆ ಲಕ್ಷ್ಮಿ' ಬೆಟ್ಟಳ್ಳಿಕೇರಿಯ ಲಕ್ಷ್ಮಿ ಮತ್ತು ಅವಳ ಊಟದ ಹಂಬಲವನ್ನು ಸೂಚಿಸುತ್ತದೆ. 'ಹೊನ್ನಾಳಿ ಹೊಡ್ತ' ಮಲೆನಾಡಿನ ಸಾಹುಕಾರರು ಸಾಲವಸೂಲಿ ಮಾಡಲು ಹೊನ್ನಾಳಿಯಿಂದ ಪುಂಡಸಾಬರನ್ನು ಕರೆಸಿ ಸಾಲಪಡೆದವರನ್ನು ಹೆದರಿಸಿ ಸಾಲ ವಸೂಲು ಮಾಡುತ್ತಿದ್ದರು. ಅದಕ್ಕೆ ಹೊನ್ನಾಳಿಗೂ ಸಾಬರಿಗೂ ಸಂಬಂಧ ಕಲ್ಪಿಸಿರುವುದು ಭಯದ ಸಂಕೇತವಾಗಿ ಸಾಬರ ಹೊಡೆತ (ಗ್ರಾಮ್ಯರೂಪ) ಬಳಸಲ್ಪಡುವುದು. 'ಹಳೇಮನೆ' ಸುಬ್ಬಣ್ಣ ಹೆಗ್ಗಡೆ, ಬೆಟ್ಟಳ್ಳಿ ಕಲ್ಲಯ್ಯಗೌಡ, ಸಿಂಭಾವಿ ಭರಮೈ ಹೆಗ್ಗಡೆ,

ಹಳೇಪೈಕದ ಸೇಸನಾಯಕ, ಮುಂತಾದ ಹೆಸರುಗಳು ಅವರ ಸ್ಥಳಗಳು, ಮನೆಗಳು, ಜಾತಿಗಳ ಜೊತೆಗೆ ಬಂದು ನಾಮವಿಶೇಷಣಗಳಾಗಿ ಬಂದಿರುವುದನ್ನು ಕಾಣಬಹುದು.

ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಬರುವ ಮುಸ್ಲಿಮರ ಐದು ಹೆಸರುಗಳು ಮಲೆನಾಡಿನ ಪ್ರದೇಶದಲ್ಲಿ ಪ್ರತಿಯೊಬ್ಬರಿಗೂ ಚಿರಪರಿಚಿತವಾಗಿತ್ತು. ಲೇಖಕರೇ ಅವರ ಹೆಸರುಗಳ ಜನಪ್ರಿಯತೆಯ ಗುಟ್ಟನ್ನು ಹೇಳುತ್ತಾರೆ; ಕರಿಮೀನುಸಾಬು, ಪುಡಿಸಾಬು, ಅಜ್ಜೀಸಾಬು, ಲುಂಗಿಸಾಬು, ಇಜಾರದಸಾಬು ಕರೀಂ ತದ್ಭವವಾಗಿ ಕರಿಮೀನು ಆಗಿದ್ದ...... ಅವನ ತಮ್ಮ ನಶ್ಯ ತಯಾರಿಸಿ ಮಾರುತ್ತಿದ್ದವನಾದ್ದರಿಂದ ಅವನ್ನು ಪುಡಿಸಾಬು ಎಂದೇ ಕರೆಯುತ್ತಿದ್ದರು. ಎತ್ತರವಾಗಿ ದಾಂಡಿಗನಾಗಿ ಕ್ರೂರಿಯಾಗಿ ಕಾಣುತ್ತಿದ್ದ ಇಜಾರದ ಸಾಬುವಿಗೆ ಅವನು ಹಾಕಿಕೊಳ್ಳುತ್ತಿದ್ದ ದೊಗಳೆ ಷರಾಯಿಯಿಂದಲೇ ಆ ಹೆಸರು ಬಂದಿತ್ತು. ಇನ್ನು ಕುಳ್ಳಾಗಿ ಗುಜ್ಜಾಗಿದ್ದ ಸಿಂಡಮೂಗಿನ ಸಾಬು ಯಾವಾಗಲೂ ಸಣ್ಣ ಸಣ್ಣ ಚೌಕದ ಕಣ್ಣಿನ ಕೆಂಗಪ್ಪಿನ ಪಂಚೆಯನ್ನು ಸೊಂಟಕ್ಕೆ ಸುತ್ತಿರುತ್ತಿದ್ದನಾದ್ದರಿಂದ ಅವನಿಗೆ ‘ಲುಂಗಿಸಾಬು’ ಎಂದು ಹೆಸರು ಬಂದಿತ್ತು. ತೆಳ್ಳಗೆ ಕಠ್ರಗಿದ್ದು ಹೋತದ ಗಡ್ಡ ಬಿಟ್ಟಿದ್ದವನ ನಿಜವಾದ ಹೆಸರು ‘ಅಜೀಜ್’ ಎಂದು ಆದರೆ ಅವರ ಉಚ್ಚಾರಣೆ ಹಳ್ಳಿಗರ ಬಾಯಲ್ಲಿ ‘ಅಜ್ಜೀಸಾಬು’ ಎಂದೇ ಆಗಿಹೋಗಿತ್ತು”.[28] ಹೀಗೆ ಹೊರಗಿನಿಂದ ಬಂದ ಹೆಸರುಗಳು ಗ್ರಾಮ್ಯ ರೂಪ ಪಡೆದು ದೇಸಿಭಾಷೆಯಲ್ಲಿ ವಿಲೀನಗೊಳ್ಳುವುದನ್ನು ಕಾಣುತ್ತೇವೆ.

ಸ್ಥಳನಾಮಗಳು ಅಂದರೆ ಗ್ರಾಮಗಳ ಅಥವಾ ಹಳ್ಳಿಗಳ ಹೆಸರುಗಳು, ಸಾಮಾನ್ಯವಾಗಿ ಯಾವುದೇ ಊರು, ಹಳ್ಳಿ, ಗ್ರಾಮ, ದೇಸಿಯವಾಗಿ ವಿಭಿನ್ನ ಸಾಂಸ್ಕೃತಿಕ, ಐತಿಹಾಸಿಕ ಹಾಗೂ ಪ್ರಾಕೃತಿಕ, ಹಿನ್ನೆಲೆಯನ್ನು ಹೊಂದಿರುತ್ತದೆ. ಕುವೆಂಪುರವರ ತಮ್ಮ ಎರಡೂ ಕಾದಂಬರಿಗಳಲ್ಲಿ ಮಲೆನಾಡಿನ ಸುಂದರ ಪ್ರಕೃತಿ ನಡುವಿನ ಬೆಟ್ಟಗುಡ್ಡಗಳ ಮಧ್ಯೆ ತಲೆ ಎತ್ತಿ ನಿಂತಿರುವ ಊರುಗಳನ್ನು ಕಾಣುತ್ತೇವೆ. ತೀರ್ಥಹಳ್ಳಿ ಸೀಮೆಯ ಕಾನೂರು, ಮುತ್ತಳ್ಳಿ, ಮಂಡಗದ್ದೆ, ಆಗುಂಬೆ, ಸೀತೆಮನೆ, ಕೊಪ್ಪ, ಕೆಳಕಾನೂರು, ನೆಲ್ಲುಹಳ್ಳಿ, ದೇವಂಗಿ, ಸಿಂಬಾವಿ, ಹಳೇಮನೆ, ಹೂವಳ್ಳಿ, ಹೊನ್ನಳ್ಳಿ, ಬಾವಿಕೊಪ್ಪ, ಕಲ್ಲೂರು, ಕೋಣೂರು, ಸಿದ್ದರಮಠ, ಕಾಗಿನಹಳ್ಳಿ ಮುಂತಾದವುಗಳಲ್ಲಿ ಪ್ರಾದೇಶಿಕ ಪಾತ್ರಗಳು ಮತ್ತು ಸನ್ನಿವೇಶಗಳು ದೇಸಿಯ ವೈಶಿಷ್ಟ್ಯತೆಗಳನ್ನು ಅನಾವರಣಗೊಳಿಸುವುದನ್ನು ಕಾಣಬಹುದು.

4.5 ಪ್ರಾಣಿ-ಪಕ್ಷಿಗಳ ಅನುಕರಣೆಯ ಭಾಷೆ

ದೇಸಿ ಭಾಷೆ ಎಂಬುದು ಮಾನವರಾಡುವ ಆಡುನುಡಿಗಳಿಗೆ ಅಷ್ಟೇ ಅಲ್ಲದೆ ದೇಸಿ ಬದುಕಿನಲ್ಲಿ ಅವಿಭಾಜ್ಯ ಅಂಗವಾಗಿರುವ ಪ್ರಾಣಿ ಪಕ್ಷಿಗಳ ಭಾಷೆಯನ್ನು ಒಳಗೊಂಡಿದೆ. ಕುವೆಂಪುರವರ ಸೂಕ್ಷ್ಮ ದೃಷ್ಟಿ ಮಾನವನ ಜೊತೆಗೆ ಸಹಬಾಳ್ವೆ ನಡೆಸುತ್ತಿರುವ ನಾಯಿ, ಬೆಕ್ಕು, ಕೋಳಿ, ಕುರಿ, ದನ, ಎಮ್ಮೆ ಮುಂತಾದವುಗಳ ಸಂವಹನವನ್ನು ಅವುಗಳ ಶಬ್ದವನ್ನು ಗ್ರಹಿಸಿ ಅರ್ಥೈಸಿಕೊಂಡು ಸೃಷ್ಟಿಸಿರುವ ಪದಗಳಲ್ಲಿ ಕಾಣಬಹುದು. ಗುತ್ತಿ ತಿಮ್ಮಿಯ ಬಗ್ಗೆ ಯೋಚಿಸುತ್ತಾ ಕಾಡಿನ ನಡುವೆ ನಡೆಯುತ್ತಿದ್ದಾಗ ಯಾವುದೋ ಒಂದು ಜಂತು ಸದ್ದು ಮಾಡಿದ ಹಾಗಾಯ್ತು, ಆಗ ಅವನು ದೊಣ್ಣೆ ಬೀಸುತ್ತಾ "ಹಡ್ಡಿಡ್ಡಿಡ್ಡಿಡ್ಡಿ" ಎಂದು ಕೂಗುವುದು[29]. ಹಳೇಪೈಕದ ಸೇಸನಾಯ್ಕ ಕಳ್ಳು ಸೇವಿಸುತ್ತಾ ನಾಯಿಯನ್ನು ಓಡಿಸಲು 'ಹಚಾ; ಹಚಾ; ಹಚಾ; ಎಂದು ಗದರಿಸುವುದು, ಹಾಗೆಯೇ ಹಳೇಪೈಕದ ಹೂವಿ 'ಹಛಾ; ಹಛಾ; ಎಂದು ಗದರಿಸುವುದು[30] ಗ್ರಾಮ್ಯರೂಪದ ಶಬ್ದಗಳು ಪದಗಳಾಗಿ ಭಾಷೆಯ ವಿಸ್ತರಣೆಗೆ ಮತ್ತು ವೈಶಿಷ್ಟ್ಯತೆಗೆ ಕಾರಣವಾಗಿದೆ.

ಹಳೇಮನೆ ಸುಬ್ಬಣ್ಣ ಹೆಗ್ಗಡೆ ಸರಸರನೆ ಮುಂದರಿದು ಕೋಳಿಯ ಒಡ್ಡಿಯ ಬಾಗಿಲು ತೆರೆದರು. ಹುಂಜಗಳು, ಹೇಟೆಗಳು, ಮರಿಗಳು, ಸಳಗಗಳು, ಕೆಂಪು, ಬಿಳುಪು, ಕಪ್ಪು ಹಂಡ ಹಂಡ, ಕಡ್ಲೆ, ಕಡ್ಲೆ, ಚ್ಞಿಯ್ಞೊ, ಪ್ಞಿಯ್ಞೊ, ಕೊಕ್, ಕೊಕ್, ಕೊಕ್ಕೋ! ಕೋಳಿಗಳೆಲ್ಲ ಒಂದರ ಮೇಲೊಂದು ನುಗ್ಗಿ ಹೊರಬಂದವು[31] ಕೋಳಿ, ಹಂದಿ, ನಾಯಿ, ಕುರಿಗಳು, ಹಸು, ಬೆಕ್ಕು, ಮುಂತಾದವುಗಳು ದೇಸಿ ಬದುಕಿನಲ್ಲಿ ಪ್ರಮುಖವಾದ ಪಾತ್ರಧಾರಿಗಳು, ಅವುಗಳ ಭಾಷೆಯನ್ನು ನಿರೂಪಕರು ಎಷ್ಟೊಂದು ಸೂಕ್ಷ್ಮವಾಗಿ ಪದಗಳಲ್ಲಿ ಸೆರೆಹಿಡಿದ್ದಾರೆ ಎನ್ನುವುದನ್ನು ಕಾಣಬಹುದು. ತೋಟದಲ್ಲಿ ಕೆಲಸ ಮಾಡುವ ಕೂಲಿಯವರು ಮರ ಕಡಿಯುವಾಗ ಠಾಪ್! ಠಾಪ್! ಠಾಪ್! ಠಾಪ್! ಎಂದು ಶಬ್ದವಾಗುವುದು ಎತ್ತಿನ ಕೊಳ್ಳಿಗೆ ಹಾಕಿರುವ ಗಂಟೆಯ ಶಬ್ದ 'ಗೈಲ್, ಗೈಲ್, ಗೈಲ್, ಗೈಲ್.... ಅಂತ ಹೊರಹೊಮ್ಮುವುದು ಬೈಸಿಕಲ್ಲಿನ ಗಂಟೆ ಟ್ರಿಣ್, ಟ್ರಿಣ್, ಟ್ರಿಣ್ ಅಂತ ಶಬ್ದವಾಗುವುದು ಐತ ದೊಡ್ಡಣ್ಣಹೆಗ್ಗಡೆಯವರ ಜೊತೆ ಮರಸಿಗೆ ಕುಳಿತಾಗ ಐತನಿಗೆ ತೊಳ್ಳೆ ನುಡುಗಾಕೆ ಸುರುವಾಯ್ತು, ಅದೇನು ಹುಲಿ ಅಬ್ಬರ! ಅದೇನು ಹಂದಿ ಅಬ್ಬರ! ಆ ಆ ಮ್ಮ್, ಡವ್ ಡವ್ ಡವ್.... ಅವೆರಡೂ ಜಗಳ ಆಡ್ತಾ ಹತ್ತತ್ರ ಹತ್ತ್ಹುತ್ರ ಬಂದ ಹಾಂಗಾಯ್ತು, ಹೀಗೆ ಪದಗಳಿಗೂ ನಿಲುಕದ ಪ್ರಾಣಿಗಳ ಶಬ್ದವನ್ನು ಸೆರೆಹಿಡಿದಿರುವುದು ಲೇಖಕರ ಭಾಷಾ ಪ್ರೌಢಿಮೆಗೆ ಸಾಕ್ಷಿಯಾಗಿದೆ.[32] ಹಾಗೆಯೇ ಮದುವೆ ಮನೆಯ

ವಾಲಗ ಮದ್ದಳೆಗಳ "ಪೇಂ ಪೇಂ ಪೇಂ ಪೇಂ ಡುಬ್ ಡುಬ್ ಡುಬ್ ಸದ್ದು, ಚಿನ್ನಮ್ಮನಿಗೆ ಮದುವೆ ಮನೆಯಿಂದ ತಪ್ಪಿಸಿಕೊಂಡು ಹೋಗಲು 'ತಾಮ್ರದ ಹಂಡೆಗೆ ಸೌದೆ ತುಂಡಿನಿಂದ ಹೊಡೆವಾಗ 'ಡಣ್ ಡಣ್ ಡಣಕು ಡಣಕು! ಡಣಕು ಡಣಕು ಡಣ್ ಡಣ್! ಡಣಕು ಡಣಕು ಡಣಕು ಡಣಕು.... ಎಂಬ ಲೋಹದ ಶಬ್ದವನ್ನು ಉಚ್ಚಾರಣೆ ಮಾಡಿದಾಗ ಶಬ್ದದ ನೈಜತೆ ಸೃಷ್ಟಿಯಾಗುತ್ತದೆ.[33] ಮಳೆ 'ಜಂಯ್ಯೋ' ಎಂದು ಹೊಡೆಯುತ್ತಿದೆ, ಮಿಂಚು 'ಫಳ್ಳೆಂದಿತು' ಮುಂತಾದವು ಪ್ರಕೃತಿಯ ಭಾಷೆಯನ್ನು ಸೂಚಿಸುತ್ತವೆ.

ಮಲೆನಾಡಿನ ಗದ್ದೆಯಲ್ಲಿದ್ದ ಕೋಟಿ ಕೋಟಿ ಕಪ್ಪೆ ಕೀಟ ಕ್ರಿಮಿಗಳೂ ಚಿತ್ರ ವಿಚಿತ್ರ ಕಂಠಸ್ವರಗಳಿಂದ ಟ್ರಕ್ ಟ್ರಕ್? ವಟಕ್, ವಟಕ್, ವಟಕ್, ವಟಕ್! ಗ್ರೀಂ ಗ್ರೀಂ ಗ್ರೀಂ! ಡೊಂಯ್ಕ್ ಡೊಯ್ಕ್ ಡೊಂಯ್ಕ್! ತೆಲೆಗೆ ಚಿಟ್ಟು ಹಿಡಿಸುವಂತೆ ಸದ್ದಿನ ಬಲೆಯನ್ನೆ ನೆಯ್ದು ಬಿಟ್ಟಿದ್ದವು......"[34] ದೇಸಿಯ ಬದುಕಿನ ಸಾಕುಪ್ರಾಣಿಗಳಲ್ಲದೆ ಕಾಡಿನಲ್ಲಿರುವ ಮೃಗಗಳಷ್ಟೆ ಅಲ್ಲದೆ, ಪ್ರಕೃತಿಯ ಭಾಗವಾಗಿರುವ ಸಣ್ಣ ಸಣ್ಣ ಕ್ರಿಮಿ ಕೀಟಗಳ ಭಾಷೆಯನ್ನು ಪದಗಳಲ್ಲಿ ಸಂಹವನೀಕರಿಸುವ ಮೂಲಕ ಕುವೆಂಪುರವರು ಭಾಷೆಯ ನೈಜತೆಯನ್ನು ಪದಗಳಲ್ಲಿ ವ್ಯಕ್ತಪಡಿಸಿದ್ದಾರೆ.

<u>ಕಾನೂರುಹೆಗ್ಗಡತಿ</u>ಯಲ್ಲಿ ವರ್ಣಿಸಲಾಗಿರುವ ವನ್ಯಪಕ್ಷಿಗಳ ಧ್ವನಿ ಪ್ರದರ್ಶನವನ್ನು ಗಮನಿಸಬಹುದು. ಕಾಡುಕೋಳಿಯ ಹುಂಜ ಮತ್ತು ಹೇಂಟೆಯ ಸಂಭಾಷಣೆಯನ್ನು ಕಾದಂಬರಿಕಾರರು ಬಹಳ ನೈಜವಾಗಿ ಪದಗಳಲ್ಲಿ ಹಿಡಿದಿಟ್ಟಿದ್ದಾರೆ. ಹುಂಜ ತಾನು ಗಂಡು ಎಂಬುದನ್ನು ಕಾಡಿಗೆಲ್ಲ ಸಾರಲು ಕೇಕೆ ಹಾಕತೊಡಗಿತು ಸ್ವಲ್ಪ ಹೊತ್ತಿನಲ್ಲಿಯೇ ಹೇಂಟೆಯೊಂದು ದೂರದಲ್ಲಿ 'ತೆಕೋ ತೆಕ್ ತೆಕ್ ತೆಕ್' ತೆಕೋ ತೆಕ್ ತೆಕ್.... ಎಂದು ಬೇಟದ ಧ್ವನಿ ಮಾಡಿತು. ಹುಂಜವು ತಲೆಯನ್ನು ಸ್ವಲ್ಪ ಒಲೆದು, ಒಕ್ಕಣ್ಣಿನಿಂದಲೆ.... ಒಂಟಿಗಾಲಲ್ಲಿ ನಿಂತು ಕುತೂಹಲಾವಿಷ್ಟವಾಗಿ ನಿಷ್ಪಂದವಾಗಿ ಆಲಿಸಿತು ಜೊತೆಯಲ್ಲಿ ಹೇಂಟೆಯಿದ್ದರೂ ಮತ್ತೊಂದು ಹೇಂಟೆಗೆ ಮಾರು ಹೋಯಿತು ಅದನ್ನು ಬಳಿಗೆ ಕರೆಯಲೆಂದು ಸ್ವಲ್ಪ ದೂರ ಹೋಗಿ ಕೇಕೆ ಹಾಕಿತು! ಆ ಕೂಗು ಮರುದನಿಯಾಯಿತು. ಆದರೆ ಆ ಹೇಂಟೆ ಬಳಿಗೆ ಬಾರದೆ ಮೊದಲಿದ್ದ ಜಾಗದಿಂದಲೇ ತೆಕೋ ತೆಕ್ ತೆಕ್ ತೆಕ್ ಎಂದು ಕರೆಯತೊಡಗಿತು. ಹುಂಜದ ಮನಸು ಕಾಣದ ಹೆಣ್ಣಿಗೆ ಹಳಪಿತು....[35] ಎರಡು ಕಾಡು ಕೋಳಿಗಳ ಸಂಭಾಷಣೆಯನ್ನು ಸಾಮಾನ್ಯವಾಗಿ ಪಕ್ಷಿಶಾಸ್ತ್ರಜ್ಞರನ್ನು ಬಿಟ್ಟರೆ ಸಾಹಿತಿಗಳು ತಮ್ಮ ಕೃತಿಗಳಲ್ಲಿ ಬಳಸಿರುವುದು ವಿರಳವೆಂದೇ ಹೇಳಬಹುದು. ಆದರೆ ಕುವೆಂಪುರವರು ಆ ಕಾಡುಕೋಳಿಗಳ ಪ್ರಣಯ ಚೇಷ್ಠೆಯನ್ನು ಆಹ್ವಾನ, ತಿರಸ್ಕಾರ, ಭಯ, ಸಂಶಯವನ್ನು ಪದಗಳಲ್ಲಿ ಬಳಸಿರುವುದು ವಿಶಿಷ್ಟವಾಗಿದೆ.

ಗರುಡ ಹಠಾತ್ತಾಗಿ ಕೋಳಿಯ ಹೂಮರಿಗಳ ಮೇಲೆ ಎರಗಿದಾಗ ಮರಿಗಳು "ಚ್ಣಿಯ್ಣೋ, ಪ್ಣಿಯ್ಣೋ" ಎಂದು ಕೂಗುತ್ತಾ ಚೆಲ್ಲಾಪಿಲ್ಲಿಯಾದವು ಇಲ್ಲಿ ಲೇಖಕ ಶಬ್ದವನ್ನು ಗ್ರಹಿಸಿ ಪದಗಳಲ್ಲಿ ಅಭಿವ್ಯಕ್ತಗೊಳಿಸಿರುವುದನ್ನು ಕಾಣಬಹುದು.

ಹೊಂಡ ತೋಣಕುವಾಗ 'ಸೋಸಲು ಮೀನು' ತಣಕ್ ಪಣಕ್ ಚಿಣಕ್ ಮಿಣಕ್ಕನೆ' (ಕಾ.ಹೆ.209) ಹಾರಾಡುತ್ತಿದ್ದವು ಹಸು, ಎತ್ತು, ಕರು, ಕೋಣ, ಎಮ್ಮೆಗಳ ಹಿಂಡೊಂದು ಹೊಳೆಗಿಳಿಯಲೆಂದು ದೇವಸ್ಥಾನದ ಮುಂದೆ ಬಂದಿತು. ನೂರಾರು ಗೊರಸುಗಳ ಗುಂಪು ಸದ್ದಿಲ್ಲದೆ ದನಗಳ 'ಅಂಬಾ' ಕರುಗಳ 'ಅಂಬೆ' ಗೂಳಿಗಳ ಗುಟುರು, ಎಮ್ಮೆ, ಕೋಣಗಳ 'ವ್ಣಾಯ್' ಮುಂತಾದ ಪದಗಳ ರೂಪದಲ್ಲಿ ಉಚ್ಚಾರಣೆ, ಸ್ವರವಿನ್ಯಾಸ, 'ಇ'ಕಾರ 'ಯ್'ಕಾರ ''ಅರಕಾವತ್ತು ಇತ್ಯಾದಿಗಳಲ್ಲಿ ವಿಶಿಷ್ಟವಾಗಿ ಮೂಡಿಬಂದಿವೆ. ಹೀಗೆ ಕುವೆಂಪುರವರು ತಮ್ಮ ಕಾದಂಬರಿಗಳಲ್ಲಿ ಬಳಸಿರುವ ಭಾಷೆ ಮಲೆನಾಡಿನ ಪ್ರದೇಶದ ಗ್ರಾಮೀಣ ಬದುಕಿನಲ್ಲಿ ಹಾಸುಹೊಕ್ಕಾಗಿದ್ದ ದೇಸಿ ಸಂಸ್ಕತಿಯ ಪ್ರತಿಸೃಷ್ಟಿಯಾಗಿದೆ, ಆ ಪ್ರದೇಶದ ಜನರ ಆಡುನುಡಿಗಳು, ಪಡೆನುಡಿಗಳು, ಗ್ರಾಮ್ಯಭಾಷೆ ಅಲ್ಲಿನ ಮಣ್ಣಿನ ಸೊಗಡಿನಲ್ಲಿ ಸಮ್ಮಿಳಿತಗೊಂಡಿರುವುದನ್ನು ಕಾಣಬಹುದು.

4.6 ಥಾಮಸ್ ಹಾರ್ಡಿಯವರ ಕಾದಂಬರಿಗಳಲ್ಲಿ ದೇಸಿ ಮತ್ತು ಗ್ರಂಥ ಭಾಷೆಗಳ ವ್ಯತ್ಯಾಸ:

ಹಾರ್ಡಿಯವರು ತಮ್ಮ ಕಾದಂಬರಿಗಳಲ್ಲಿ 19ನೇ ಶತಮಾನದ ಇಂಗ್ಲೇಡಿನ ಗ್ರಾಮೀಣ ಪ್ರದೇಶದಲ್ಲಿ ಅಸ್ತಿತ್ವದಲ್ಲಿದ್ದ ಭಾಷೆಯನ್ನು ಬಳಸಿದ್ದಾರೆ. ಅವರ ಎಲ್ಲಾ ಕಾದಂಬರಿಗಳು ಮೂಲತಃ ದೇಸಿಯ ಬದುಕಿನ ಹಿನ್ನಲೆಯಲ್ಲಿ ರೂಪುಗೊಂಡಿರುವುದರಿಂದ ದೇಸಿ ಭಾಷೆಯ ವೈಶಿಷ್ಟವನ್ನು ಕಾಣುತ್ತೇವೆ. ಹಾರ್ಡಿಯವರ ಕಾದಂಬರಿಗಳಲ್ಲಿ ಬರುವ ವೆಸೆಕ್ಸ್ ಪ್ರದೇಶ ಒಂದು ಪುರಾತನವಾದ ಸ್ಥಳವಾಗಿದ್ದು ಅಲ್ಲಿಯ ಜನರ ಸುಂದರವಾದ ವಾಸ ಸ್ಥಳದಷ್ಟೇ ಪುರಾತನವಾದ ಆಡುಭಾಷೆಯು ದೇಸಿ ಸಂಸ್ಕೃತಿಯನ್ನು ಅಭಿವ್ಯಕ್ತಗೊಳಿಸಿರುವುದು ಸಹಜವೆನಿಸುತ್ತದೆ. ದೇಸಿಯ ಕಾದಂಬರಿಗಳು ದೇಸಿ ಭಾಷೆಯಿಂದಲೇ ರೂಪಿತಗೊಂಡಿರುವುದನ್ನು ಹಾರ್ಡಿಯವರ ಕಾದಂಬರಿಗಳಿಂದ ತಿಳಿಯುತ್ತದೆ.

ರೇಮಂಡ್ ಚಾಪ್‌ಮನ್ ಅವರ ಪ್ರಕಾರ "ಥಾಮಸ್ ಹಾರ್ಡಿಯವರ ಭಾಷಾ ಪ್ರಯೋಗವು ಸಾಹಿತ್ಯ ಕೃತಿಗಳನ್ನು ಅರ್ಥೈಸಿಕೊಳ್ಳಲು ಮತ್ತು ಪ್ರತಿಕ್ರಿಯಿಸಲು ನಮ್ಮ ಅಂತರ್‌ದೃಷ್ಟಿಗೆ ಸಹಕಾರಿಯಾಗಿದೆ ಅವರು ಬಳಸಿರುವ ಭಾಷೆ ಜ್ಞಾನದ ಜೊತೆಗೆ ವಿಶೇಷ ಆಸಕ್ತಿಯನ್ನು ಮತ್ತು ಕುತೂಹಲವನ್ನು ಕೆರಳಿಸುತ್ತದೆ ಎನ್ನುತ್ತಾರೆ. ಹಾರ್ಡಿಯವರ ದೇಸಿಭಾಷೆಯು ಜೀವನಾನುಭವದಿಂದ ಮೂಡಿಬಂದ ಭಾಷೆಯಾಗಿದೆ ಎನ್ನುವ ಮಾತೂ ಕೂಡ ಇದೆ.[36] ಆಧುನಿಕ ಪ್ರಗತಿಶೀಲ ಮತ್ತು ನಗರದ ಸುಧಾರಿಸಿದ ಕೃತಕ ಭಾಷೆಗೆ ಭಿನ್ನವಾಗಿರುವ ಭಾಷೆಯೆಂದರೆ ದೇಸಿಭಾಷೆಯಾಗಿದ್ದು ಶ್ರೇಷ್ಠ ಸಂಸ್ಕೃತಿಯ ಪ್ರತಿರೂಪವಾಗಿದೆ ಎನ್ನುವುದನ್ನು ಹಾರ್ಡಿ ಬಳಸಿರುವ ಭಾಷೆಯಿಂದ ತಿಳಿಯಬಹುದು, ಹಾರ್ಡಿಯವರ ಭಾಷೆಯಲ್ಲಿ ವಿಭಿನ್ನವಾದ, ವಿಶಿಷ್ಟವಾದ ಪದವಿನ್ಯಾಸ ಅದರಲ್ಲೂ ಪ್ರಾದೇಶಿಕ ವೈಶಿಷ್ಟ್ಯದಿಂದ ಕೂಡಿರುವ ಆಡುನುಡಿ ಅಥವಾ ನಾಡಭಾಷೆ ಮತ್ತು ವಿಶಿಷ್ಟ ಉಚ್ಚಾರಣೆ ಬಹಳ ಮುಖ್ಯವಾಗಿವೆ. ಸಾಮಾನ್ಯವಾಗಿ ಹಾರ್ಡಿಯವರು ತಮ್ಮ ಕೃತಿಗಳಲ್ಲಿ ಪದಗಳ ವಿನ್ಯಾಸಕ್ಕೆ ಮತ್ತು ಆ ಪದಗಳನ್ನು ಆಯ್ಕೆ ಮಾಡುವುದಕ್ಕೆ ಹೆಚ್ಚಿನ ಗಮನಹರಿಸಿರುವುದು ಮತ್ತು ಪಾರಿಭಾಷಿಕ ಪದಗಳಿಗಿಂತ, ಶೈಲಿಗೆ ಹೆಚ್ಚಿನ ಒತ್ತು ನೀಡಿರುವುದು ಗಮನಾರ್ಹವಾಗಿದೆ. ಹಾರ್ಡಿಯವರ ಭಾಷೆಯ ಮತ್ತೊಂದು ವೈಶಿಷ್ಟ್ಯವೆಂದರೆ ಪದಗಳಿಗಿಂತ ಶ್ರವ್ಯಕ್ಕೆ ಅಥವಾ ಪದ ರಚನೆಗಳ ಶಬ್ದಕ್ಕೆ ಹೆಚ್ಚಿನ ಮಹತ್ವ ನೀಡಿರುವುದು. ಅವರು ಬಳಸಿರುವ ಪದವಿನ್ಯಾಸಗಳ ಮೂಲವಿರುವುದು ಅಶಿಕ್ಷಿತ ಗ್ರಾಮೀಣ ಪರಿಸರದಲ್ಲಿ ಅಂದರೆ ದೇಸಿಯ ಬದುಕಿನಲ್ಲಿ ಎನ್ನಬಹುದು. ಕಾದಂಬರಿಯ ಪಾತ್ರಗಳ ಸಾಮಾಜಿಕ ಸ್ಥಾನಮಾನಗನುಗುಣವಾಗಿ ಪದಗಳ ಆಯ್ಕೆ ಮತ್ತು ಉಚ್ಚಾರಣೆಯಲ್ಲಿ ಭಿನ್ನತೆಯನ್ನು ಕಾಣುತ್ತೇವೆ.

ಥಾಮಸ್ ಹಾರ್ಡಿಯವರು ತಮ್ಮ ಕಾದಂಬರಿಗಳಲ್ಲಿ ಪದ ವಿನ್ಯಾಸಕ್ಕೆ ಮತ್ತು ಸ್ವರ ವ್ಯತ್ಯಾಸಕ್ಕೆ ಹೆಚ್ಚಿನ ಒತ್ತು ನೀಡಿರುವುದನ್ನು ಎಫ್. ಬಿ. ಪಿನಿಯನ್‌ರವರೂ ಸಹ ಉಲ್ಲೇಖಿಸಿದ್ದಾರೆ.[37] ಎಗ್ಡನ್ನಿನ ಗ್ರಾಮೀಣ ಪರಿಸರದ ಜನರು ಸರಳ ಜೀವಿಗಳು, ಮುಗ್ದರು, ತಮ್ಮ ದೈನಂದಿನ ಬದುಕಿನ ಜಂಜಾಟದಲ್ಲಿ, ವ್ಯವಹಾರದಲ್ಲಿ ಮತ್ತು ಬದುಕಿನ ಹೋರಾಟದಲ್ಲಿ ಬಳಸುವ ಭಾಷೆ ಸರಳವಾದ ಸ್ವರ ಉಚ್ಛಾರಣೆಯಿಂದ ಕೂಡಿದ ಆಡುನುಡಿಗಳಾಗಿದ್ದು ಸ್ವಾಭಾವಿಕವಾಗಿತ್ತು. ಅವರಾಡುವ ಭಾಷೆಯಿಂದಲೇ ದೇಸಿಯ ಬದುಕಿನ ಚಿತ್ರಣವನ್ನು ಕಾಣಬಹುದು.[38] ಕುವೆಂಪುರವರ ಕಾದಂಬರಿಗಳಲ್ಲಿ ಕಾಣುವ ದೇಸಿ ಭಾಷೆಯ ಪರಿಸರವನ್ನು ಹಾರ್ಡಿಯವರ ಕಾದಂಬರಿಗಳಲ್ಲಿಯೂ ಸಹ ಕಾಣುತ್ತೇವೆ. ಸಾಮಾಜಿಕ ಸ್ಥಾನಮಾನ, ವರ್ಗ, ಶೈಕ್ಷಣಿಕ ಮಟ್ಟ, ಧಾರ್ಮಿಕ ಮತ್ತು ಆರ್ಥಿಕ ಅಂಶಗಳು ದೇಸಿಯ ಭಾಷೆಯನ್ನು ನಿರ್ದೇಶಿಸುತ್ತವೆ ಎನ್ನಬವುದನ್ನು ಇಬ್ಬರೂ ಕಾದಂಬರಿಕಾರರು ನಿರೂಪಿಸಿದ್ದಾರೆ.

4.7 ವರ್ಗಾಧಾರಿತ ಭಾಷೆ :

ಹಾರ್ಡಿಯವರ ಕಾದಂಬರಿಗಳಲ್ಲಿ ಮುಖ್ಯವಾಗಿ ಮೂರು ವರ್ಗಗಳ ಜನರಾಡುವ ಭಾಷೆಯಲ್ಲಿ ವ್ಯತ್ಯಾಸವನ್ನು ಗುರುತಿಸಬಹುದು. ಮೊದಲನೆಯದಾಗಿ ಸಾಮಾಜಿಕವಾಗಿ ಮೇಲು ಸ್ತರದಲ್ಲಿರುವ, ಆರ್ಥಿಕವಾಗಿ ಸದೃಢವಾಗಿರುವ ಜನಸಮುದಾಯದವರು ಬಳಸುವ ಭಾಷೆಯು ಗ್ರಾಂಥಿಕವಾಗಿದ್ದ ಶಿಕ್ಷಿತ ಭಾಷೆಯನ್ನಬಹುದು. ಅವರ 'ದಿ ರಿಟರ್ನ್ ಆಫ್ ದಿ ನೇಟಿವ್' ಕಾದಂಬರಿಯಲ್ಲಿ ಬರುವ ಶ್ರೀಮತಿ ಯೋಬ್ರೈಟ್, ಕ್ಲಿಮ್, ವೈಲ್ಡೀವ್, ತೋಮಸಿನ್ ಮತ್ತು 'ಟೆಸ್ ಆಫ್ ದಿ ಡಿ ಅರ್ಬರ್ ವಿಲ್ಲೆ' ಕಾದಂಬರಿಯ ಏಂಜೆಲ್‌ಕ್ಲೇರ್ ಮತ್ತು ಅವನ ಸಹೋದರರು, ತಂದೆ–ತಾಯಿ, ಅಲೆಕ್ ಡಿ ಅರ್ಬರ್‌ವಿಲ್ಲೆ, ಡೈರಿಯ ಮಾಲೀಕ ಮತ್ತು ಜಮೀನ್ದಾರರು ಹಳ್ಳಿಗರಾದರೂ ಅವರು ಬಳಸುವ ಭಾಷೆ ಸ್ವರ ವಿನ್ಯಾಸದಲ್ಲಿ, ಉಚ್ಚಾರಣೆಯಲ್ಲಿ ಬಹಳ ವಿಶಿಷ್ಟವಾಗಿರುವುದನ್ನು ಕಾಣುತ್ತೇವೆ. ಅವರು ಬಳಸುವ ಭಾಷೆ ಸಾಹಿತ್ಯಿಕವಾಗಿ ಶಿಷ್ಟ ಭಾಷೆಯೆನಿಸಿಕೊಳ್ಳುತ್ತದೆ. ಈ ವರ್ಗದ ಜನರು ಸಾಮಾನ್ಯವಾಗಿ ಅಲ್ಪಮಟ್ಟಿಗಾದರೂ ವಿದ್ಯಾವಂತರಾಗಿದ್ದು, ಸಾಮಾಜಿಕ ಆರ್ಥಿಕ ಸಂದರ್ಭ, ಸನ್ನಿವೇಶಗಳಲ್ಲಿ ಮತ್ತು ಚಟುವಟಿಕೆಗಳಲ್ಲಿ ಬೇರೆ ಬೇರೆ ಸ್ಥಳಗಳ ಪರಿಚಯವಿದ್ದುದ್ದರಿಂದ ಅವರಾಡುವ ಭಾಷೆ ದೇಸಿಯಾದರೂ ಸ್ವಲ್ಪಮಟ್ಟಿಗೆ ನಗರ ಭಾಷೆಯ ಕೃತಕತೆಯ ಛಾಯೆಯನ್ನು ಹೊಂದಿರುವುದನ್ನು ಗುರುತಿಸಬಹುದು.

ಎರಡನೆಯ ವರ್ಗದವರು ಎಗ್ಡನ್ ಪರಿಸರದಾಚೆಗೆ ಉದ್ಯೋಗ ನಿಮಿತ್ತ ಮತ್ತು ವ್ಯಾಪಾರ ಸಂಬಂಧದ ಸಲುವಾಗಿ ದೂರದ ನಗರ, ಪಟ್ಟಣ ಮತ್ತು ಹೊರದೇಶಗಳಿಗೆ ಹೋಗಿ ಅಲ್ಲಿ ವ್ಯವಹರಿಸಿ ಮತ್ತೆ ಗ್ರಾಮೀಣ ಪರಿಸರಕ್ಕೆ ಬಂದವರು ಹೊರಗಿನ ಪ್ರಪಂಚದ ಪರಿಚಯದಿಂದ ಪ್ರಭಾವದಿಂದ ಇವರಾಡುವ ಭಾಷೆಯು ದೇಸಿಯ ಪರಿಸರದ ಭಾಷೆಗಿಂತ ಭಿನ್ನವಾಗಿರುವುದನ್ನು ಕಾಣುತ್ತೇವೆ. 'ದಿ ರಿಟರ್ನ್ ಆಫ್ ದಿ ನೇಟಿವ್' ಕಾದಂಬರಿಯ ಕ್ಲಿಮ್ ಯೋಬ್ರೈಟ್ ಪ್ಯಾರಿಸ್ಸಿಗೆ ಹೋಗಿ ಉದ್ಯೋಗದಲ್ಲಿದ್ದು ಮರಳಿ ಊರಿಗೆ ಬಂದವನು. ಯುಸ್ಟೇಷ್ಯ ವೈ ಮತ್ತು ಆಕೆಯ ಅಜ್ಜ ಕ್ಯಾಪ್ಟನ್ ವೈ ಬಡ್ಮತ್ ನಗರದಿಂದ ಬಂದು ಎಗ್ಡನ್ನಿನಲ್ಲಿ ನೆಲೆಸಿರುವವರು. ಅವರ ಭಾಷಾ ಶೈಲಿ ಮತ್ತು ಸ್ವರ ವಿನ್ಯಾಸದಲ್ಲಿ ಸಾಕಷ್ಟು ಸುಧಾರಣೆಯನ್ನು ಕಾಣುತ್ತೇವೆ.

ಮೂರನೆಯ ವರ್ಗವೆಂದರೆ ಹಾರ್ಡಿಯವರ ಕಾದಂಬರಿಗಳಲ್ಲಿ ಪ್ರಮುಖ ಪಾತ್ರಗಳನ್ನು ವಹಿಸಿರುವ ಶ್ರಮಿಕ ವರ್ಗದವರು. ಇವರು ಗ್ರಾಮೀಣ ಪರಿಸರದಲ್ಲಿ ವಿವಿಧ ಕಸುಬುಗಳನ್ನು

ಮಾಡಿಕೊಂಡು ದೇಸಿಯ ಬದುಕಿನ ವಕ್ತಾರರಾಗಿರುವವರು. ಕೃಷಿ ಕಾರ್ಮಿಕರು, ಸೇವಕರು, ಹೋದರು ಕಡಿದು ಮಾರುವವರು ಮುಂತಾದವರು ಕಾವಿ ಬಣ್ಣ ಮಾರುವ ಡಿಗೋರಿವೆನ್, ಟಿಮೋತಿ ಫೇರ್‌ವೇ, ಹಂಫ್ರಿ, ಕ್ಯಾಂಟಲ್ ತಾತ, ಕ್ರಿಶ್ಚಿಯನ್, ಚಾರ್ಲಿ, ಸೂಸನ್‌ನನ್‌ಸಚ್ ಮುಂತಾದವರು 'ದಿ ರಿಟರ್ನ್ ಆಫ್ ದಿ ನೇಟಿವ್' ಕಾದಂಬರಿಯಲ್ಲಿ ಮತ್ತು ಟೆಸ್, ಇಜ್ಜ್, ಮರಿಯನ್ ಮುಂತಾದವರು ಟೆಸ್ ಕಾದಂಬರಿಯಲ್ಲಿ ಮಾತನಾಡುವ ಭಾಷೆ ಎಗ್ಡನ್ ಪರಿಸರದ ದೇಸಿ ಭಾಷೆಯಾಗಿತ್ತು. ಹಾಗೆಯೇ ಎಗ್ಡನ್ನಿನ ಹಳ್ಳಿಗಮಾರರ ಮುಗ್ಧ ಮಾತುಗಳು, ದೊಡ್ಡವರ ಅಂದರೆ ಮೇಲ್ವರ್ಗದವರ ಬಗೆಗಿನ ದೃಷ್ಟಿಕೋನ ಮತ್ತು ತಲೆಬುಡವಿಲ್ಲದ ಕಟ್ಟುಕಥೆಗಳನ್ನು ಅವರ ಸಂಭಾಷಣೆಯಲ್ಲಿ ಕಾಣಬಹುದು.[39] ಸಂದರ್ಭ–ಸನ್ನಿವೇಶಗಳ ಪರಿವೆಯಿಲ್ಲದೆ ಮಾತನಾಡುವುದು ಮತ್ತು ಆ ಮಾತಿನ ಮೂಲಕ ಮೂಢನಂಬಿಕೆಗಳನ್ನು ವ್ಯಕ್ತಪಡಿಸುವ ರೀತಿ ದೇಸಿಯ ಬದುಕಿಗೆ ಕನ್ನಡಿಯಂತಿದೆ ಎನ್ನಬಹುದು. ದೇಸಿ ಭಾಷೆಯ ನೈಜವಾದ ಸೊಗಡಿರುವುದು ಎಗ್ಡನ್ನಿನ ಅನಕ್ಷರಸ್ಥ ಸ್ಥಳೀಯ ನಿವಾಸಿಗಳಲ್ಲಿ ಎಂದರೆ ತಪ್ಪಾಗಲಾರದು. ಸಾಮಾಜಿಕವಾಗಿ ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಕೆಳಸ್ತರದಲ್ಲಿದ್ದು ಅಶಿಕ್ಷಿತ, ನಿಷ್ಕಪಟ, ಸರಳ ಜೀವಿಗಳಾದ ಶ್ರಮಿಕವರ್ಗದವರು ತಮ್ಮ ದೈನಂದಿನ ವ್ಯವಹಾರಗಳಲ್ಲಿ ಬಳಸುವ ಭಾಷೆ ಅವರು ವಾಸಿಸುವ ನೆಲದ ಭಾಷೆಯಾಗಿದೆ. ಅವರಾಡುವ ಭಾಷೆಯಲ್ಲಿ ಮುಗ್ಧತೆ ಎದ್ದು ಕಾಣುವುದರ ಜೊತೆಗೆ ಸ್ವರವಿನ್ಯಾಸದಲ್ಲಿ, ಪದಗಳ ಉಚ್ಚಾರಣೆಯಲ್ಲಿ ಮತ್ತು ಪದಪ್ರಯೋಗದಲ್ಲಿ ದೇಸಿಯ ಸ್ಪರ್ಶವನ್ನು ಕಾಣಬಹುದು. ಹಾರ್ಡಿಯವರೇ ಹೇಳುವಂತೆ ಎಗ್ಡನ್ನಿನ ಸ್ಥಳೀಯ ಭಾಷಾ ವಿಶಿಷ್ಟತೆಯನ್ನು ಅಲ್ಲಿಯ ಗಾಳಿ ಬೀಸುವುದರಲ್ಲಿಯೂ ಕಾಣಬಹುದು. ಗಾಳಿಯ ಏರಿಳಿತಗಳಲ್ಲಿ ಆ ಕಾಡು ಭೂಮಿಯ ಭಾಷೆ, ಧ್ವನಿಗಳ ವಿಲಕ್ಷಣತೆ ಅಲ್ಲಿತ್ತು.[40] ಈ ಹೇಳಿಕೆಯಿಂದಲೇ ಹಾರ್ಡಿಯವರ ಕಾದಂಬರಿಗಳ ಭಾಷಾ ಶೈಲಿ ಎಷ್ಟೊಂದು ನೈಜವಾದ ದೇಸಿಭಾಷೆಯಾಗಿದೆ ಎಂದು ತಿಳಿಯುವುದು.

ಥಾಮಸ್ ಹಾರ್ಡಿಯವರು ವೆಸೆಕ್ಸ್‌ನ ಗ್ರಾಮೀಣ ಪ್ರದೇಶದ ಬದುಕನ್ನು ನೈಜವಾಗಿ ಚಿತ್ರಿಸಲು ಬಹಳ ಕೌಶಲ್ಯದಿಂದಲೇ ದೇಸಿಭಾಷೆಯನ್ನು ದುಡಿಸಿಕೊಂಡಿದ್ದಾರೆ. ದೇಸಿ ಭಾಷೆಯಿಂದಲೇ ದೇಸಿಯತೆಯನ್ನು ಅನಾವರಣಗೊಳಿಸಿದ್ದಾರೆ. ಅಶಿಕ್ಷಿತ ನಯನಾಜೂಕಿಲ್ಲದ ಎಗ್ಡನ್ನಿನ ಜನರಾಡುವ ಭಾಷೆ, ಅವರ ಸಮಾಜದ ಮೇಲ್ವರ್ಗದವರೊಡನೆ ಸಂಭಾಷಿಸಲು ಬಳಸುವ ಒರಟೊರಟಾದ ಪದಗಳು, ಜೀವಂತಿಕೆಯಿಂದ ಕೂಡಿದ ಪಡಿನುಡಿಗಳು ಶಿಕ್ಷಿತರ ಕೃತಕ ಭಾಷೆಗಿಂತ ವಿಶಿಷ್ಟವಾಗಿರುವುದನ್ನು ಕಾಣಬಹುದು. ಶಿಕ್ಷಿತರ ಮತ್ತು ಅಶಿಕ್ಷಿತರ ಸಂಭಾಷಣೆಯಲ್ಲಿ ಯಾವುದು ಕೃತಕ ಮತ್ತು ನೈಜ ಎನ್ನುವುದನ್ನು ಸಹ ಕಾದಂಬರಿಕಾರರು ಅತ್ಯಂತ ಜಾಣ್ಮೆಯಿಂದ ನಿರೂಪಿಸಿದ್ದಾರೆ.

ಹಾರ್ಡಿಯವರು ತಮ್ಮ ಕೃತಿಗಳಲ್ಲಿ ಬಳಸಿರುವ ದೇಸಿ ಭಾಷೆಯನ್ನು 'ಡಾರ್ಸೆಟ್ ಡಯಲೆಕ್ಟ್' (Dorset Dialect) ಎಂದು ವಿಶೇಷವಾಗಿ ಕರೆಯುವುದನ್ನು ಕಾಣುತ್ತೇವೆ.[41] 19ನೇ ಶತಮಾನದ ಪಶ್ಚಿಮದ ಇಂಗ್ಲೇಂಡಿನ ಗ್ರಾಮೀಣ ಪ್ರದೇಶದಲ್ಲಿ ಬಳಕೆಯಲ್ಲಿದ್ದ ಪ್ರಾದೇಶಿಕ ಉಪಭಾಷೆಯನ್ನು ಈ ರೀತಿ ಕರೆಯುತ್ತಿದ್ದುದು ರೂಢಿಯಾಗಿತ್ತು ಮತ್ತು ಆ ಭಾಷೆ ಕ್ರಮೇಣ ನಶಿಸಿ ಹೋಗುತ್ತಿರುವುದನ್ನು ಅನೇಕ ಭಾಷಾಶಾಸ್ತ್ರಜ್ಞರು ಗುರುತಿಸಿದ್ದಾರೆ.[42] ಆ ಭಾಷೆಯ ಜೊತೆಗೆ ಅಂದಿನ ದೇಸಿಯ ಸಂಸ್ಕೃತಿಯೂ ಕೂಡ ಕಣ್ಮರೆಯಾಗುವುದನ್ನು ಕಾಣುತ್ತೇವೆ.

'ದಿ ರಿಟರ್ನ್ ಆಫ್ ದಿ ನೇಟಿವ್' ಕಾದಂಬರಿಯಲ್ಲಿ ಹಳ್ಳಿಯ ಕೆಳವರ್ಗದ ಜನರ ವಿಶಿಷ್ಟವಾದ ಭಾಷಾ ಶೈಲಿಯನ್ನು ಕಾದಂಬರಿಯ ಪ್ರಾರಂಭದಿಂದಲೂ ಕಾಣಬಹುದು. ವೈಲ್ಡೀವ್ ಮತ್ತು ತೋಮಸಿನ್ ವಿವಾಹದ ಪ್ರಯುಕ್ತ ಶುಭಹಾರೈಸಲು ಹೋಗುವಾಗ ಕ್ಯಾಂಟಲ್ ತಾತ ಮತ್ತು ಸಂಗಡಿಗರ ಮಾತುಗಳು: "It is a worthy thing to be married, Mr. Wildeve; and the woman you've got is a dimont so says I......"[43] ಇಲ್ಲಿ ವೈಲ್ಡಿವ್ ಮದುವೆಯಾಗಿರುವ ಹುಡುಗಿ 'ಡೈಮಂಡ್' ಅಂತಹವಳು ಎನ್ನಲು 'ಡೈಮಂಟ್' ಎನ್ನುವುದು, ಅವರ ಉಚ್ಚಾರಣೆಯಲ್ಲಿನ ವ್ಯತ್ಯಾಸ ವಿಶಿಷ್ಟವಾಗಿರುವುದನ್ನು ಕಾಣಬಹುದು. ಎಗ್ಡನ್ ಹೀತ್‌ನ ಹಳ್ಳಿಗರು ಸಮಾಜದ ಮೇಲ್ವರ್ಗದವರ ಬಗ್ಗೆ ಮಾತನಾಡುವಾಗ ಅವರ ಭಾಷೆಯಲ್ಲಿ ದೇಸಿಯ ಸ್ಪರ್ಶವನ್ನು ಹಾಗೂ ಮಣ್ಣಿನ ಸೊಗಡನ್ನು ಗುರುತಿಸಬಹುದು/ ಕ್ಲಿಮ್ ಯೋಬ್ರೈಟ್ ಕುಟುಂಬದ ಬಗ್ಗೆ ಟಿಮೋತಿ ಹೇಳುವ ಮಾತುಗಳು: "'Tis his mother's side where Master clym's figure comes from, bless ye', 'I knowd" her brothers well ....[44] ಈ ವಾಕ್ಯದಲ್ಲಿ ಬಳಸಿರುವ 'ye' ಮತ್ತು 'Know'd' ಪದಗಳು ಹಳೆಯ ಅಂಗ್ಲೋಸ್ಯಾಕ್ಷನ್ ಭಾಷೆಯಲ್ಲಿರುವುದನ್ನು ಕಾಣಬಹುದು. ಕ್ಲಿಮ್ ಪ್ಯಾರಿಸ್ಸಿನಿಂದ ಊರಿಗೆ ಮರಳಿ ಮತ್ತೆ ಅಲ್ಲಿಯೇ ಉಳಿದಾಗ ಅವನ ಬಗ್ಗೆ ಹಳ್ಳಿಗರ ಅಭಿಪ್ರಾಯ; Master yoebright, I'll own that we was talking about'ee'[45] ಆಧುನಿಕ ಶಿಷ್ಟ ಭಾಷೆಯಲ್ಲಿ ಈ ವಾಕ್ಯ ವ್ಯಾಕರಣ ಬದ್ಧವಾಗಿಲ್ಲ ಆದರೆ ದೇಸಿಭಾಷೆಯಲ್ಲಿ ಯವುದೇ ತಪ್ಪನ್ನು ಕಾಣಲು ಸಾಧ್ಯವಿಲ್ಲ ಏಕೆಂದರೆ ದೇಸಿ ಭಾಷೆಯನ್ನಾಡುವ ಮುಗ್ಧ ಜನರಿಗೆ ಸ್ವರವ್ಯತ್ಯಾಸ, ಪದ ವ್ಯತ್ಯಾಸದ ಜೊತೆಗೆ ವ್ಯಾಕರಣಬದ್ಧವಾಗಿಲ್ಲದ ವಾಕ್ಯಗಳು ಸಹಜವಾಗಿದ್ದವು.

ಹಾರ್ಡಿಯವರ ಮತ್ತೊಂದು ಕಾದಂಬರಿ 'ಟೆಸ್ ಆಫ್ ದಿ ಡಿ ಅರ್ಬರ್‌ವಿಲ್ಲೆ' ದೇಸಿಭಾಷೆಯ ಪ್ರತಿರೂಪವಾಗಿದೆ. ಕಾದಂಬರಿಯ ಪ್ರಾರಂಭದಿಂದ ಅಂತ್ಯದವರೆಗೆ ಟೆಸ್ ಮತ್ತು ವೆಸೆಕ್ಸ್‌ನ ಕೂಲಿಕಾರ್ಮಿಕರು, ಕೃಷಿಕಾರ್ಮಿಕರು ತಮ್ಮ ದೈನಂದಿನ ಬದುಕಿನ ವ್ಯವಹಾರದಲ್ಲಿ ಬಳಸುವ ಭಾಷೆ ದೇಸಿಯಾಗಿದೆ. ಟೆಸ್ ಮತ್ತು ಆಕೆಯ ಕುಟುಂಬ ಸದಸ್ಯರು ಸಂಭಾಷಿಸುವುದು ದೇಸಿ ಭಾಷೆಯಲ್ಲಿಯೇ 'ಟೆಸ್ ಕೆಲಸವನ್ನರಸಿ ಹೊರಡುವಾಗ ಆಕೆಯ ತಾಯಿ ತನ್ನ ತಂದೆಗೆ ಹೇಳಿದ ಮಾತುಗಳು: "I tell' ee what 'tis, Durbey field' he'll never have the heart not to love her But whatever you do, don't zay too much to Tess...... she is such an odd mid that it miad zet her against him......"[೪೬] ಈ ಮಾತಿನಲ್ಲಿ ಬರುವ 'thee' 'zay' 'mid' ಮತ್ತು 'zet' ಪದಗಳ ರಚನೆಯಲ್ಲಿ ವ್ಯತ್ಯಾಸವಿರುವುದನ್ನು ಕಾಣುತ್ತೇವೆ. 'you'ಗೆ ಬದಲಾಗಿ 'thee', 's' ಅಕ್ಷರಕ್ಕೆ ಬದಲಾಗಿ 'z' ಬಳಸಿರುವುದನ್ನು ಮತ್ತು 'ಟ್' ಕಾರಕ್ಕೆ ಬದಲಾಗಿ 'ಡ್' ಕಾರವನ್ನು ಬಳಸಿರುವುದು ಗಮನಾರ್ಹವಾಗಿದೆ. ಕೂಲಿ ಕಾರ್ಮಿಕರಲ್ಲದೆ ವಿವಿಧ ಕಸುಬುಗಳನ್ನು ಮಾಡುವ ಹಳ್ಳಿಗರ ಭಾಷೆಯಲ್ಲಿಯೂ ಸಹ ಆಡುನುಡಿಗಳ ಬಳಕೆಯನ್ನು ಕಾಣಬಹುದು. ಡೈರಿಯ ಮಾಲೀಕ ಕ್ರಿಕ್‌ನ ಮಾತುಗಳು: 'Oh, if ye can swaller that, be it so,... its what I hain't touched for year, Not I...".[47] ಇಲ್ಲಿ 'you'ಗೆ ಬದಲಾಗಿ 'ye', 'have'ಗೆ 'hai' ಬಳಸಿರುವುದು ಮತ್ತು ಅವುಗಳ ಉಚ್ಚಾರಣೆಯಲ್ಲಿ ವ್ಯತ್ಯಾಸವಿರುವುದನ್ನು ಗುರುತಿಸಬಹುದು.

4.8 ರಿಟರ್ನ್ ಆಫ್ ದಿ ನೇಟಿವ್ ಕಾದಂಬರಿಯಲ್ಲಿ ದೇಸಿ ಮತ್ತು ಗ್ರಂಥ ಭಾಷೆಗಳು:

'ದಿ ರಿಟರ್ನ್ ಆಫ್ ದಿ ನೇಟಿವ್' ಕಾದಂಬರಿಯಲ್ಲಿ ಹಳ್ಳಿಗರು ತಮ್ಮ ಸಂಭಾಷಣೆಯಲ್ಲಿ ಬಳಸಿರುವ ಕ್ರಿಯಾಪದಗಳ ವೈಶಿಷ್ಟ್ಯವನ್ನು ಹಾಗೂ ದೇಸಿ ಭಾಷೆ ಮತ್ತು ಗ್ರಂಥ ಭಾಷೆಯ ವ್ಯತ್ಯಾಸವನ್ನು ವೈಶಿಷ್ಟ್ಯದ ಈ ಕೆಳಕಂಡಂತೆ ಗುರುತಿಸಬಹುದಾಗಿದೆ:

ಪುಟಸಂಖ್ಯೆ	ದೇಸಿ ಭಾಷೆ	ಗ್ರಂಥ ಭಾಷೆ
17	'she might hae' the man after all	she might have the man after all

20	as we was called	as we were called
		Iam n't fit for it
	I bain't fit for father	I zid thy I saw your father
22	Mother know'd......	mother knew
28	It 'gied' me a turm	It gave me a turn
30	he've several acres of	he has several acres of
	heath graumd	heath ground
41	every one in church 'feeled	every one in church 'felt'
	he sawed 'en al most	he even almost 'saw'
42	I baint afeared at all	I am n't afeared at all
43	But we'll'gie' em.....	But we'll 'give' them....
62	'who be ye?	Who are you?
108	It don't matter	It doesn't matter
116	It was thoughted	It was thought
117	I 'knowe'd' her brother well	I 'knew' her brother well
	but have 'jined' us	but have 'joined' us
	Hav the ghost of one to	'Has' the ghost of one ...
	appeared anybody?	appeared to anybody?
143	we was tolking about thee	we 'were' talking about you
149	She 've waited for this	she has waited for this
	She don't come very often	she doesn't come very often
251	I had 'seed' her	I had 'seen' her
255	Do he rave about his mother	Does he rave about his Mother?
262	I be going to see him	I am going to see him

267	At your house was where Iseed first	At your house where I saw her her first
329	Beds'be do be dear to fokes' that don't keep gees bain't they?	Beds are dear to 'folks' that 'don't' keep geees 'aren't they?

ಇದೇ ಕಾದಂಬರಿಯಲ್ಲಿ ಬಳಸಿರುವ ಸರ್ವನಾಮಗಳು ದೇಸಿಭಾಷೆಯ ದ್ಯೋತಕವಾಗಿವೆ ಉದಾಹರಣೆಗೆ 'ye' for 'you', 'thee'(you) 'thou'(you) 'thy'(your) 'yerself'(yourself) ಮುಂತಾದವುಗಳನ್ನು ಸಂಭಾಷಣೆಯಲ್ಲಿ ಹೀಗೆ ಬಳಸಿದ್ದಾರೆ. 'who be ye? (who are you) (ಪುಟ 62) 'I barnt' (I am n't) (ಪುಟ 41) 'If yu be not too young' (If your are not too young) (ಪುಟ 108) 'hisself' for (himself) (ಪುಟ 119), 'what I be? (what am I) (ಪುಟ 111) ಮುಂತಾದವು ದೇಸಿ ವಾಕ್ಯಗಳಾಗಿವೆ. ಹಾಗೆಯೇ ನಾಮಪದಗಳಲ್ಲಿಯೂ ದೇಸಿ ಭಾಷೆಯನ್ನು ಕಾಣುತ್ತೇವೆ. 'Dimont' for Diamond (ಪುಟ90), 'natty' for naughty, 'sheening' for Shining (ಪುಟ116), 'chiel' for child (ಪುಟ120), 'fokes' for folk, 'gad' for god ಮುಂತಾದ ಪದಗಳಲ್ಲಿ ದೇಸಿಭಾಷೆಯ ವೈವಿಧ್ಯತೆಯನ್ನು ಗ್ರಾಮ್ಯಶೈಲಿಯ ಉಚ್ಚಾರಣೆಯನ್ನು ಗುರುತಿಸಬಹುದು.

ಪದವ್ಯತ್ಯಾಸ, ಸ್ವರ ವ್ಯತ್ಯಾಸ, ಸರ್ವನಾಮಗಳಲ್ಲಿನ ವ್ಯತ್ಯಾಸವಲ್ಲದೆ ಹಳ್ಳಿಗರ ಆಡುಮಾತಿನಲ್ಲಿ ವಾಕ್ಯರಚನೆ ಮತ್ತು ವ್ಯಾಕರಣ ಪ್ರಯೋಗದಲ್ಲಿಯೂ ಭಿನ್ನತೆಯನ್ನು ಕಾಣುತ್ತೇವೆ. 'he've several acres of heth ground'[48] ಇಲ್ಲಿ ಸರ್ವನಾಮವಾದ 'he' ಏಕವಚನದಲ್ಲಿದ್ದು ಕ್ರಿಯಾಪದವು ಬಹುವಚನದಲ್ಲಿದೆ. 'we was talking about thee"[೪೯] they was married (ಪುಟ329) ಇಲ್ಲಿ ಸರ್ವನಾಮ 'we' ಬಹುವಚನದಲ್ಲಿದೆ ಆದರೆ ಏಕವಚನದ ಸಹಾಯಕ ಕ್ರಿಯಾಪದ 'was' ಬಂದಿದೆ ಹಾಗೆಯೇ, "we was al standing up"(50), ಈ ವಾಕ್ಯದಲ್ಲಿಯೂ ಏಕವಚನದ ಸಹಾಯಕ ಕ್ರಿಯಾಪದ 'was' ಎನ್ನುವುದು, 'were'ಗೆ ಬದಲಾಗಿ ಬಳಕೆಯಾಗಿದೆ. ಅದೇ ರೀತಿ "she don't come", "She have waited", ಏಕವಚನದ ಸರ್ವನಾಮಕ್ಕೆ ಬಹುವಚನದ ಕ್ರಿಯಾರೂಪಗಳು ಬಳಕೆಯಾಗಿರುವುದು ಎಗ್ಲಿನ್ನಿನ ದೇಸಿಭಾಷೆಯ ಆಂಗ್ಲೋ ಸ್ಯಾಕ್ಷನ್ ಮೂಲದ್ದಾಗಿದೆ. ಶಿಷ್ಟ

ಭಾಷೆಯಲ್ಲಿ 'she don't' ಬದಲು 'she doen't' ಆಗಿ ಮತ್ತು 'she'have' ಬದಲಾಗಿ 'she has waited', ವಾಕ್ಯಗಳು ವ್ಯಾಕರಣ ಬದ್ಧವಾಗಿವೆ.

ದೇಸಿ ಭಾಷೆಯಲ್ಲಿ ಕ್ರಿಯೆಯ ಕಾಲವನ್ನು ವ್ಯಕ್ತಪಡಿಸಲು ಬಳಸಿರುವ ಪದಗಳ ಮೂಲದಲ್ಲಿಯೇ ವ್ಯತ್ಯಾಸವಿರುವುದನ್ನು ಗಮನಿಸಬಹುದು ಉದಾಹರಣೆಗೆ 'Zeed' ಎನ್ನುವುದು 'see' ಎನ್ನುವ ಕ್ರಿಯಾಪದದ ಭೂತಕಾಲವನ್ನು ಸೂಚಿಸುತ್ತದೆ. ಶಿಷ್ಟ ಭಾಷೆಯಲ್ಲಿ 'see'ಗೆ ಭೂತಕಾಲವನ್ನು ಸೂಚಿಸಲು 'saw' ಎನ್ನುವ ಪದವನ್ನು ಬಳಸಬೇಕಾಗುತ್ತದೆ. ಇಂಥಹ ಅನೇಕ ಪದಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ, ಆವರಣದಲ್ಲಿ ಶಿಷ್ಟ ಭಾಷೆಯನ್ನು ಕೊಡಲಾಗಿದೆ.

'seed'(saw ಪುಟ14), 'thoughted'(thought ಪುಟ116), 'knowed'(knew ಪುಟ28), 'mid' (might ಪುಟ149), 'gied' (gave ಪುಟ28), 'feeled'(felt ಪುಟ41), 'chokt'(choked ಪುಟ329), swallered (swallowed ಪುಟ 329)

ಹೀಗೆ ಇನ್ನೂ ಮುಂತಾದ ಭಾಷಾ ವೈವಿಧ್ಯತೆಯನ್ನು, ಗ್ರಾಮ್ಯ ಶೈಲಿಯ ಭಾಷಾ ಪ್ರಯೋಗವನ್ನು 'ದಿ ರಿಟರ್ನ್ ಆಫ್ ದಿ ನೇಟಿವ್' ಕಾದಂಬರಿಯಲ್ಲಿ ಕಾಣಬಹುದು. ಈ ರೀತಿಯ ಭಾಷಾ ಶೈಲಿಯನ್ನು ಎಗ್ಡನ್ ಹೀತ್‌ನ ಪರಿಸರದಲ್ಲಿ ಹೊರತುಪಡಿಸಿ ಬೇರೆಲ್ಲೂ ಕೇಳಲು ಸಾಧ್ಯವಿಲ್ಲ ಎನ್ನುವ ಮಾತಿನಲ್ಲಿ ಎಷ್ಟೊಂದು ಸತ್ಯಾಂಶವಿದೆ ಎನ್ನುವುದು ತಿಳಿಯುತ್ತದೆ. ನಿರಕ್ಷರ, ಅಶಿಕ್ಷಿತ, ಮುಗ್ಧ ಹಳ್ಳಿಗರ ಆಡುನುಡಿಗಳು ಸ್ವಾಭಾವಿಕವಾಗಿ ಕಾದಂಬರಿಯಲ್ಲಿ ಅಭಿವ್ಯಕ್ತಗೊಂಡಿರುವುದನ್ನು ಕಾಣಬಹುದು.

4.9 ಟೆಸ್ ಆಫ್ ದಿ ಡಿ ಅರ್ಬರ್ ವಿಲ್ಲೆ' ಕಾದಂಬರಿಯಲ್ಲಿ ದೇಸಿ ಮತ್ತು ಗ್ರಂಥ ಭಾಷೆಗಳು:

ಥಾಮಸ್ ಹಾರ್ಡಿಯವರ ಮತ್ತೊಂದು ಕಾದಂಬರಿ 'ಟೆಸ್ ಆಫ್ ದಿ ಡಿ ಅರ್ಬರ್ ವಿಲ್ಲೆ'ಯಲ್ಲಿಯೂ ಸಹ ದೇಸಿಭಾಷೆಯ ಪ್ರಯೋಗವನ್ನು ಕಾಣುತ್ತೇವೆ. ಹತ್ತೊಂಬತ್ತನೆಯ ಶತಮಾನದ ದಕ್ಷಿಣ ಇಂಗ್ಲೆಂಡಿನ ಗ್ರಾಮೀಣ ಪರಿಸರದಲ್ಲಿದ್ದ ಮುಗ್ಧ ಜನರ ದೇಸಿಯ ಸಂಸ್ಕೃತಿಯು

ಅನಾವರಣಗೊಂಡಿರುವುದು ಆ ಮಣ್ಣಿನ ಭಾಷೆಯಿಂದಲೇ ಎನ್ನಬಹುದು. ಭಾಷೆ ಮತ್ತು ಭಾಷಾ ಪರಿಸರದ ದೃಷ್ಟಿಯಿಂದ ನೋಡಿದರೆ 'ದಿ ರಿಟರ್ನ್ ಆಫ್ ದಿ ನೇಟಿವ್' ಮತ್ತು 'ಟೆಸ್ ಆಫ್ ದಿ ಡಿ ಅರ್ಬರ್ ವಿಲ್ಲೆ' ಕಾದಂಬರಿಗಳಲ್ಲಿ ಅಭಿವ್ಯಕ್ತಗೊಂಡಿರುವ ಭಾಷೆ ಒಂದೇ ರೀತಿಯಾಗಿದೆ. ಟೆಸ್ಸ್ ಮತ್ತು ಅವಳ ತಾಯಿಯ ಸಂಭಾಷಣೆಯಲ್ಲಿ ದೇಸಿ ಭಾಷೆಯು ಉಚ್ಚಾರಣೆಯನ್ನು ಗಮನಿಸಬಹುದು. "In saint charles's day we was made knights of the Royal oak, our real name being d' urberville'..... it's thoughted that great things may come of it"[51] ಇಲ್ಲಿ ಬಳಸಲ್ಪಟ್ಟಿರುವ ಪದಗಳಾದ 'we was' ಮತ್ತು 'thouhted' ದೇಸಿ ಭಾಷೆಯಲ್ಲಿದ್ದು ಸ್ವರ ವ್ಯತ್ಯಾಸ, ಉಚ್ಚಾರಣೆ ಪದ ವ್ಯತ್ಯಾಸದ ಜೊತೆಗೆ ವ್ಯಾಕರಣದಲ್ಲಿಯೂ ವ್ಯತ್ಯಾಸವನ್ನು ಗುರುತಿಸಬಹುದಾಗಿದೆ.

ಕೃಷಿ ಕಾರ್ಮಿಕರು ತಮ್ಮ ದಿನನಿತ್ಯದಲ್ಲಿ ಸಂಭಾಷಿಸುವಾಗ ಅವರ ಸರಳವಾದ ಆಡುನುಡಿಗಳು ದೇಸಿ ಭಾಷೆಯ ಪ್ರತಿರೂಪವಾಗಿವೆ. ಟೆಸ್ಸ್‌ಳನ್ನು ನೋಡಲು ಅಲೆಕ್ ಡಿ ಅರ್ಬರ್‌ವಿಲ್ಲೆ ಬಂದಾಗ ಮರಿಯನ್‌ಳ ಮಾತುಗಳು ಹೀಗಿವೆ: ಮರಿಯನ್: 'Do you konow that the gentleman who follows thee–coame to ask for thee at flint comb after you had gone. We didn't tell'n where you was,.....

ಟೆಸ್ಸ್: "Ah, but I did see him! He found me"

ಮರಿಯನ್: And do he know where you be going?"[೫೨]

ಮೇಲಿನ ಸಂಭಾಷಣೆಯಲ್ಲಿ 'thee'(you), 'where you was(were) ಮುಂತಾದವು ಗ್ರಾಮ್ಯ ಭಾಷೆ ಅಥವಾ ದೇಸಿ ಭಾಷೆಯ ಉಚ್ಚಾರಣೆಯಾಗಿವೆ. ಟೆಸ್ ಆಫ್ ದಿ ಡಿ ಅರ್ಬರ್ ವಿಲ್ಲೆ ಕಾದಂಬರಿಯಲ್ಲಿ ಬರುವ ಕೆಲವು ದೇಸಿ ಪದಗಳನ್ನು ಮತ್ತು ಆ ಪದಗಳ ಗ್ರಂಥ ರೂಪಗಳನ್ನು ಅವುಗಳ ಮುಂದೆ ನೀಡಲಾಗಿದೆ. ಅದೇ ರೀತಿ ದೇಸಿ ಭಾಷೆಗಳು ಗ್ರಂಥ ಭಾಷೆ ಹೇಗೆ ಭಿನ್ನವಾಗಿವೆ ಎನ್ನುವುದನ್ನು ಕಾಣಬಹುದು.

ಪುಟಸಂಖ್ಯೆ	ದೇಸಿ ಭಾಷೆ	ಶಿಷ್ಟ ಭಾಷೆ
19	knowed	knew
19	'wold' silver spoon	old silver spoon

32	on his way 'hwome'	on his way 'home'
37	licends	licence
38	I 'zeed' her	'I saw' her
56	you zid somebody	'you saw somebody'
61	don't 'zay' too much	'don't 'say' too much
61	it 'mid' 'zet' her against him	It might 'set' her against him
64	is 'dat' the gentleman kinsman?	Is that the gentelman–kinsman!
96	how be ye?	How are you?
123	as a lad I 'knowed' your part the of the country	as a lad I 'Knew' your part of country
126	as he 'runned'	as he 'ran'
149	'continnys'	contiues
150	that would ha 'felled'	that would have 'fallen'
152	I zid you	I saw you
163	hwome	'home'
196	who 'mid' 'ye' think	who 'might' 'you' think
215	you be going to marry him?	Are you going to marry him?
273	I thought you was married ! Where is thy husband	I thought you were married? where is your husband.
275	they 'was' formerly styled,	they 'were' formerly styled/called
270	how onnatural……….	how unnatural
270	sommat…….	Somewhat ……
346	he 'have' left off his block coat	he has left off his black coat
370	he 'don't'	he 'does' not
381	And do 'he' know where you	And does he know where you

	be going?	are going?
382	you be the woman they call Mrs – Durbeyfield?	Are you the woman they call Mrs. Durbeyfield?

‘ಟೆಸ್ ಆಫ್ ದಿ ಡಿ ಅರ್ಬರ್‌ವಿಲ್ಲೆ’ ಕಾದಂಬರಿಯಲ್ಲಿನ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗದವರ ಭಾಷೆಗಿಂತ ಕೃಷಿ ಕಾರ್ಮಿಕರ ಸಂಭಾಷಣೆಯಲ್ಲಿ ಅವರ ಮುಗ್ಧತೆಯನ್ನು ಕಾಣಬಹುದು. ಏಂಜೆಲ್ ಕ್ಲೇರ್ ಟೆಸ್‌ಳ ಬಗ್ಗೆ ಹೇಳುವ ಮಾತುಗಳು: “ಟೆಸ್‌ಳ ಏಕಾಂಗಿ ಬದುಕು, ಆಕೆಯ ಭಾವನೆಗಳೆಲ್ಲವೂ ಆ ಕಾಲದ ದೇಸಿಯ ಬದುಕಿನ ಸಾರವಾಗಿದೆ ಮತ್ತು ಆಧುನಿಕ ಆಡಂಬರದ ಬದುಕಿನ ವಿರೋಧಿಯಾಗಿವೆ”[53] ಈ ಮಾತುಗಳಲ್ಲಿ ಹೇಗೆ ದೇಸಿ ಭಾಷೆಯ ದೇಸಿ ಬದುಕನ್ನು ಅನಾವರಣಗೊಳಿಸುತ್ತದೆ ಎನ್ನುವುದನ್ನು ಕಾಣಬಹುದು. ಟೆಸ್‌ಳ ಹಾಗೆಯೇ ಅವಳೊಂದಿಗೆ ವ್ಯವಹರಿಸುವ ಶ್ರಮಿಕ ವರ್ಗದವರ ಭಾಷೆ, ಭಾಷಾ ಶೈಲಿ, ಉಚ್ಚಾರಣೆ, ಪದವ್ಯತ್ಯಾಸ ಎಲ್ಲವೂ ದೇಸಿ ಭಾಷೆಯ ತಿರುಳಾಗಿವೆ.

ಈ ಕಾದಂಬರಿಯಲ್ಲಿ ಬರುವ ಮೇಲ್ವರ್ಗದವರಾದ ಅಲೆಕ್ಸ್ ಡಿ ಅರ್ಬರ್‌ವಿಲ್ಲೆ, ಏಂಜೆಲ್‌ಕ್ಲೇರ್ ಮತ್ತು ಅವನ ಕುಟುಂಬ ವರ್ಗದವರು, ಕೆಲವು ಜಮೀನ್ದಾರರು ಮಾತನಾಡುವ ಭಾಷೆ ಅವರಿಗಿಂತ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಕೆಳವರ್ಗದವರ ಭಾಷೆಗಿಂತ ಭಿನ್ನವಾಗಿದೆ. ಹೀಗೆ ದೇಸಿಭಾಷೆಯು ಸಾಮಾಜಿಕ, ಆರ್ಥಿಕ ಸ್ಥಾನಮಾನಗಳಿಗನುಗುಣವಾಗಿ ಬಳಸಲ್ಪಟ್ಟಿರುವುದನ್ನು ಕಾಣುತ್ತೇವೆ.[54] ಟಾಲ್‌ಬೋತಿ ಮತ್ತು ಟ್ಯಾಂಟ್ರಡ್ಜ್‌ನ ಹಳ್ಳಿಗಮಾರರು ಸಂಭಾಷಿಸುವಾಗ ಗ್ರಾಮ್ಯಭಾಷೆಯೊಂದೇ ಅವರಿಗೆ ತಿಳಿದಿರುವುದನ್ನು ಕಾಣುತ್ತೇವೆ. ಉದಾಹರಣೆಗೆ ‘knoed’(knew), ‘wold’(old), ‘Ees’(yes), ‘hwome’(home), ‘goo’(go), ‘dat’(that), ‘zay’(say), ‘zet’(set), ‘tex’(test) ಮುಂತಾದ ಪದಗಳಲ್ಲಿ ಅನಕ್ಷರಸ್ಥರ ದೇಸಿ ಸ್ವರಗಳನ್ನು ಗುರುತಿಸಬಹುದು. ಆವರಣದಲ್ಲಿ ಗ್ರಂಥಭಾಷೆಯನ್ನು ದೇಸಿ ಭಾಷೆಗೆ ತತ್ಸಮವಾಗಿ ನೀಡಲಾಗಿದೆ.

ಕುವೆಂಪು ಮತ್ತು ಹಾರ್ಡಿಯವರ ಕಾದಂಬರಿಗಳಲ್ಲಿ ಬರುವ ವಿವಿಧ ಜಾತಿ, ವರ್ಗಗಳ ಜನರು ತಮ್ಮ ದೈನಂದಿನ ಬದುಕಿನಲ್ಲಿ ವ್ಯವಹರಿಸಲು ಬಳಸುವ ‘ಆಡುಮಾತು’ ಅಂದಿನ ಅವರ ಗುಣ–ಸ್ವಭಾವ ವ್ಯಕ್ತಿತ್ವ, ಅಭಿರುಚಿ ಮುಂತಾದವುಗಳನ್ನು ತಿಳಿದುಕೊಳ್ಳಲು ಸಹಾಯ ಮಾಡುತ್ತದೆ. ಅವರಾಡುವ ಮಾತುಗಳಲ್ಲಿ ಅಂದಿನ ದೇಸಿಯ ಚಿಂತನೆಗಳು ಸಂಸ್ಕೃತಿಯ ವೈಶಿಷ್ಟ್ಯಗಳು

ಪ್ರತಿಬಿಂಬಿತವಾಗಿವೆ. ಕುವೆಂಪುರವರ ಕಾದಂಬರಿಗಳಲ್ಲಿ ಚಿತ್ರಿತವಾಗಿರುವ ಮಲೆನಾಡಿನ ಭಾಷೆ ಅಲ್ಲಿನ ಜನರ ಬದುಕಿನ ಸತ್ವವನ್ನು, ಆ ನೆಲದ ಮಣ್ಣಿನ ವಾಸನೆಯನ್ನು ಪ್ರತಿಫಲಿಸುವುದರ ಜೊತೆಗೆ ದೇಸಿಯ ಬದುಕನ್ನು ಅನಾವರಣಗೊಳಿಸುತ್ತದೆ. ಹಾಗೆಯೇ ಹಾರ್ಡಿಯವರ ಕಾದಂಬರಿಗಳಲ್ಲಿ ಚಿತ್ರಿತವಾಗಿರುವ ಎಗ್ಡನ್ನಿನ ಪರಿಸರದ ಜನರ ಸಂಭಾಷಣೆ, ಮಾತುಕಥೆ, ಭಾಷಾ ವೈವಿಧ್ಯತೆ ಅಲ್ಲಿನ ಜನರ ಮಣ್ಣಿನ ಸಂಸ್ಕೃತಿಯ ಪ್ರತೀಕವಾಗಿದೆ. ಇಬ್ಬರೂ ಕೃತಿಕಾರರ ನಿರೂಪಣಾ ಶೈಲಿ ಸುಸಂಸ್ಕೃತವಾಗಿದ್ದರೆ ಅವರ ಕೃತಿಗಳ ಪಾತ್ರಗಳ ಭಾಷೆ ಸಾಮಾನ್ಯ ಜನವರ್ಗಕ್ಕೆ ಸೇರಿರುವುದು ವಿಶೇಷವಾಗಿದೆ.

ಕುವೆಂಪುರವರ ಎರಡೂ ಕಾದಂಬರಿಗಳಲ್ಲಿ ಬರುವ ಪಾತ್ರಗಳ ಗ್ರಾಮ್ಯ ಭಾಷೆಯ ಮೂಲಕ ಗ್ರಾಮೀಣ ಬದುಕಿನ ಸತ್ವಪೂರ್ಣ ಸಂಸ್ಕೃತಿಯ ಪರಿಚಯವಾಗುತ್ತದೆ. ಕೃತಿಕಾರರ ಸುಸಂಸ್ಕೃತ ನಿರೂಪಣಾ ಶೈಲಿಗಿಂತ ಶೂದ್ರಾತಿಶೂದ್ರರ ಆಡುನುಡಿಗಳು ದೇಸಿಯ ಬದುಕಿನ ಚೆಲುವನ್ನು ಮಣ್ಣಿನ ಸೊಗಡನ್ನು ಅತ್ಯಂತ ಸ್ವಾಭಾವಿಕವಾಗಿ ಹೊರಹೊಮ್ಮಿಸಿರುವುದು ವಿಶೇಷವಾಗಿದೆ. ಕುವೆಂಪುರವರಂತೆಯೇ ಹಾರ್ಡಿಯವರೂ ಸಹ ತಮ್ಮ ಕಾದಂಬರಿಗಳ ಪಾತ್ರಗಳಲ್ಲಿ ಅದರಲ್ಲಿಯೂ ಸಮಾಜದ ವರ್ಗ ವ್ಯವಸ್ಥೆಯಲ್ಲಿ ಕೆಳವರ್ಗದವರೆನಿಸಿರುವ ಕೂಲಿಕಾರ್ಮಿಕರು, ಜೀತದಾಳುಗಳು ಸಂಭಾಷಿಸುವ ಆಡುನುಡಿಗಳಲ್ಲಿ, ಸಂಭಾಷಣೆಯಲ್ಲಿ ದೇಸಿ ಭಾಷೆಯನ್ನು ಕಾಣುತ್ತೇವೆ. ಹೀಗೆ ಇಬ್ಬರೂ ಕಾದಂಬರಿಕಾರರು ತಮ್ಮ ಕೃತಿಗಳಲ್ಲಿ ಬಳಸಿರುವ ದೇಸಿಭಾಷೆಯ ಮೂಲಕ ದೇಸಿಯ ಬದುಕನ್ನು ಚಿತ್ರಿಸಿರುವುದನ್ನು ಕಾಣುತ್ತೇವೆ.

ಕೊನೆ ಟಿಪ್ಪಣಿ

1. ರಾಘವೇಂದ್ರ ರಾವ್ ಹೆಚ್.ಎಸ್.: ಕನ್ನಡ ಸಾಹಿತ್ಯ ಮತ್ತು ಭಾಷಾಶಾಸ್ತ್ರ, ಪುಟ– 334
2. ಶಿವರಾಮ ಕಾಡನ ಕುಪ್ಪೆ: ಕುವೆಂಪು ಕಾದಂಬರಿಯಲ್ಲಿ ಪ್ರಾದೇಶಿಕತೆ, ಪುಟ–220
3. ಖಂಡೋಬಾ ಪಿ.ಕೆ.: ಕನ್ನಡ ಪ್ರಾದೇಶಿಕ ಕಾದಂಬರಿಗಳ ಜಾನಪದೀಯತೆ, ಪುಟ–54
4. ಕುವೆಂಪು: ಕಾನೂರು ಹೆಗ್ಗಡಿತಿ ಪುಟ– 66
5. ಅದೇ, ಪುಟ– 67, 68
6. ಕುವೆಂಪು: ಕಾನೂರು ಹೆಗ್ಗಡಿತಿ, ಕುವೆಂಪು, ಪುಟ– 68
7. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ– 432

8. ಅದೇ, ಪುಟ– 432

9. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ– 64

10. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ– 46

11. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ– 49. 50

12. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ –131

13. ಅದೇ, ಪುಟ– 180

14. ಅದೇ, ಪುಟ– 221

15. ದೇಜಗೌ: ಕುವೆಂಪು ಕಾಡಿನ ಶೈಲಿ, ಪುಟ– 149

16. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ– 398

17. ಅದೇ, ಪುಟ– 547

18. ಅದೇ, ಪುಟ– 395

19. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ– 597

20. ಅದೇ, ಪುಟ– 25

21. ಅದೇ, ಪುಟ– 280, 282

22. ಅದೇ, ಪುಟ– 360

23. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ– 364

24. ದೇಜಗೌ: ಕುವೆಂಪು ಕಥನ ಶೈಲಿ, ಪುಟ– 150

25. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ– 395

26. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ– 453

27. ಖಂಡೋಬಾಪಿ.ಕೆ.: ಕನ್ನಡ ಪ್ರಾದೇಶಿಕ ಕಾದಂಬರಿಗಳ ಜಾನಪದೀಯತೆ ಭಾಷೆ ಹಾಗೂ ಸಾಹಿತ್ಯ, ಪುಟ– 65

28. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ– 237

29. ಅದೇ, ಪುಟ– 3

30. ಅದೇ, ಪುಟ- 35

31. ಅದೇ, ಪುಟ- 45

32. ಅದೇ, ಪುಟ- 258

33. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ- 539

34. ಅದೇ, ಪುಟ- 637

35. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ- 39

36. Raymond Chapman: The Languge of Thomas Hardy, Page- 87

37. Pinion F.B.: Hardy the writer, Page-157

38. Reader's Guide to Thomas Hardy: Page- 99

39. ನಾಗರಾಜರಾವ್ ರಾವ್: ಊರಿಗೆ ಮರಳಿದಾಗ, ಪುಟ- 102

40. Thomas Hardy : The Return of the Native, Page- 45

41. Taneja G.R.: Hardy's Rustics Reconsidered, Page - 49

42. Willian Barnes : Hardy the countryman, Page- 42

43. Thomas Hardy: The Return of the Native, Page- 40.

44. Ibid, Page- 117.

45. Ibid, Page- 142.

46. Thomas Hardy: Tess of the D' Urbervilles, Page- 61

47. Ibid, Page- 124

48. Ibid, Page- 30

49. Ibid, Page- 143

50. Ibid, Page- 149

51. Ibid, Page- 46

52. Ibid, Page- 32

53. Ibid, Page- 381

54. Ibid, Page- 149

ಅಧ್ಯಾಯ – 5

ಧಾರ್ಮಿಕ ಆಚರಣೆ, ರೂಢಿ–ಸಂಪ್ರದಾಯ ಮತ್ತು ನಂಬಿಕೆಗಳು

5.1 ಮಲೆನಾಡಿನ ಪ್ರದೇಶದಲ್ಲಿದ್ದ ಧಾರ್ಮಿಕ ಕೇಂದ್ರಗಳು ಹಾಗೂ ಅನ್ಯಧರ್ಮಗಳ ಪ್ರಭಾವ

5.2 ಕುವೆಂಪು ಕಾದಂಬರಿಗಳಲ್ಲಿ ಚಿತ್ರಿಸಿರುವ ಹಬ್ಬ, ಜಾತ್ರೆ, ಉತ್ಸವಗಳು ಮತ್ತು ತೀರ್ಥಯಾತ್ರೆ

5.3 ರೂಢಿ, ಪದ್ಧತಿ ಮತ್ತು ನಂಬಿಕೆಗಳು

5.4 ಮಾಟ, ಮಂತ್ರ, ಹರಕೆ ಮತ್ತು ಬಲಿ

5.5 ದೇಸಿ ವೈದ್ಯ ಪದ್ಧತಿ

5.6 ಥಾಮಸ್ ಹಾರ್ಡಿಯವರ ಕಾದಂಬರಿಗಳಲ್ಲಿ ಧಾರ್ಮಿಕ ಆಚರಣೆ, ನಂಬಿಕೆ ಮತ್ತು ರೂಢಿ ಸಂಪ್ರದಾಯ

5.7 ಕ್ರೈಸ್ತ ಧರ್ಮದ ಪೂರ್ವದಲ್ಲಿದ್ದ ಪೇಗನ್ ಸಂಸ್ಕೃತಿ

5.8 ವೆಸೆಕ್ಸ್‌ನ ಪ್ರದೇಶದಲ್ಲಿ ಪ್ರಚಲಿತದಲ್ಲಿದ್ದ ದೆವ್ವ, ಪಿಶಾಚಿ, ಮತ್ತು ಮಾಟ–ಮಂತ್ರದ ಬಗೆಗಿನ ನಂಬಿಕೆಗಳು

ಅಧ್ಯಾಯ – 5

ಧಾರ್ಮಿಕ ಆಚರಣೆ, ರೂಢಿ–ಸಂಪ್ರದಾಯ ಮತ್ತು ನಂಬಿಕೆಗಳು

ಮಾನವನ ವಿಕಾಸದಲ್ಲಿ ಧರ್ಮ ಬಹುಮುಖ್ಯವಾದ ಪಾತ್ರವಹಿಸಿದೆ. ಮಾನವ ತನ್ನ ಜೀವನದಲ್ಲಿ ಕೆಲವೊಂದು ವಿಧಿ–ವಿಧಾನಗಳನ್ನು ರೂಪಿಸಿಕೊಂಡಿದ್ದು, ತನ್ನ ಮೂಲಭೂತ ಅವಶ್ಯಕತೆಗಳ ಪೂರೈಕೆಗಾಗಿ, ಸಾಮಾಜಿಕ, ಆರ್ಥಿಕ, ನೈತಿಕ, ಕೌಟುಂಬಿಕ ಸಂಬಂಧಗಳ ಏಳಿಗೆಗಾಗಿ, ಮನಃಶಾಂತಿಗಾಗಿ ಅಲೌಕಿಕ, ಅಮೂರ್ತ ಶಕ್ತಿಗಳನ್ನು ಆರಾಧಿಸುವುದರ ಮೂಲಕ ತನ್ನ ಬದುಕನ್ನು ಸಾರ್ಥಕಪಡಿಸಿಕೊಳ್ಳುತ್ತಾನೆ. 'ಮಾನವನ ವಿಕಾಸದ ಚರಿತ್ರೆಯಲ್ಲಿ 'ಧರ್ಮದ ಸೇರ್ಪಡೆಯು ಆತನ ಲೌಕಿಕ, ಅಲೌಕಿಕ, ಆಚರಣೆ ಚಿಂತನೆ ವರ್ತನೆಗಳನ್ನು ರೂಪಿಸಿ ನಿಯಂತ್ರಿಸಿ ಸಂಸ್ಕಾರ ನೀಡಿದ್ದರಿಂದ, ಅದೊಂದು ಬಹುಮುಖ್ಯವಾದ ಘಟ್ಟವೆನಿಸುತ್ತದೆ. ಒಂದು ಧರ್ಮದ ಕಲ್ಪನೆ ಯಾವಾಗಲೂ ಮೂರ್ತವಾಗಿ 'ಇದೇ, ಮತ್ತು 'ಇಷ್ಟೇ' ಧರ್ಮ ಎಂಬ ಖಚಿತತೆ ಇರುವುದಿಲ್ಲ. ಆದರೆ ಅದು ತನ್ನ ಆಶಯ ಆದರ್ಶ ಬೋಧನೆಯ ತತ್ವಪ್ರಣಾಳಿಕೆಯಿಂದ ತಾತ್ವಿಕ ಸ್ವರದಲ್ಲಿ ಪ್ರಕಟವಾಗಬಲ್ಲುದು. ಇನ್ನೊಂದು ಕಡೆಗೆ ಧಾರ್ಮಿಕ ಆಚರಣೆ ಅನುಕರಣೆಗಳಿಂದ ಕ್ರಿಯಾತ್ಮಕ ಸ್ತರದಲ್ಲಿ ಕಾಣಿಸಿಕೊಳ್ಳಬಲ್ಲುದು.[1] ಧರ್ಮದ ಉಗಮದ ಬಗ್ಗೆ ನಿರ್ದಿಷ್ಟವಾಗಿ ಹೇಳಲಾಗದಿದ್ದರೂ, ಧರ್ಮದಲ್ಲಿ ನಂಬಿಕೆ ಮಾನವನ ವಿಕಾಸದೊಂದಿಗೆ ಬೆಳೆದು ಬಂದಿರುವುದು ಸ್ಪಷ್ಟವಾಗಿದೆ. ತನ್ನ ಮತ್ತು ತನ್ನವರ ಒಳಿತಿಗಾಗಿ, ಶ್ರೇಯಸ್ಸಿಗಾಗಿ, ಅಲೌಕಿಕ ಶಕ್ತಿಗಳನ್ನು ಆರಾಧಿಸುತ್ತಾ ಬಂದಿರುವುದು ಧರ್ಮದ ಉದಯಕ್ಕೆ ಕಾರಣವಾಗಿರಬಹುದು. ಮಾನವನ ದೈನಂದಿನ ಚಟುವಟಿಕೆಗಳನ್ನು, ಬೇಕು–ಬೇಡಗಳನ್ನು, ಒಳಿತು–ಕೆಡುಕುಗಳನ್ನು, ನೀತಿ–ಅನೀತಿ ಮುಂತಾದವುಗಳನ್ನು ನಿರ್ಧರಿಸುವುದರಲ್ಲಿ ಧರ್ಮ ಬಹುಮುಖ್ಯ ಪಾತ್ರವಹಿಸುತ್ತದೆ.

ಮಾನವ ಮತ್ತು ಧರ್ಮದ ನಡುವಿನ ಸಂಬಂಧ ಅನಾದಿಕಾಲದಿಂದಲೂ ಬೆಳೆದು ಬಂದಿರುವಂತಹದು. ಮಾನವನ ಶಕ್ತಿಯನ್ನು ಮೀರಿ ಯಾವುದೋ ಒಂದು ಅಗೋಚರ ಶಕ್ತಿಯಿದೆ, ಅದನ್ನು ಆರಾಧಿಸುತ್ತಾ ಬಂದು ಮುಂದೆ ಒಂದು ಧರ್ಮದ ಉದಯಕ್ಕೆ ಕಾರಣವಾಗಿರಬಹುದು ಎಂದು ಹೇಳಬಹುದು. "ಅಲೌಕಿಕ ಶಕ್ತಿಯ ಮಹತ್ವವನ್ನು ಮನಗಂಡ ಮಾನವ ಭಾವನಾತ್ಮಕ ಹಾಗೂ ನೈತಿಕ ತಳಹದಿಯ ಮೇಲೆ ನಂಬಿಕೆಗೆ ತಕ್ಕಂತೆ ಕೆಲವು ಆಚರಣೆಗಳು ಧರ್ಮ ಬದ್ಧವಾದ ಕ್ರಿಯೆಗಳನ್ನು–ಪೂಜೆ–ಪುನಸ್ಕಾರಗಳನ್ನು ಪ್ರಾರ್ಥನೆ, ಧ್ಯಾನ, ಜಪತಪಗಳನ್ನು ಹಬ್ಬಹರಿದಿನಗಳನ್ನು, ಉತ್ಸವಗಳನ್ನು ಸಂಪ್ರದಾಯ ಸಂಸ್ಕಾರಗಳನ್ನು ಹೊಂದುತ್ತ

ಬಂದನು".[2] ಹೀಗೆ ಮಾನವನ ಸಾಮಾಜಿಕ, ನೈತಿಕ, ಮಾನಸಿಕ ಮತ್ತು ಭಾವನಾತ್ಮಕ ಬದುಕಿನಲ್ಲಿ ಧಾರ್ಮಿಕ ಆಚರಣೆಗಳು ಬಹುಮುಖ್ಯ ಪಾತ್ರವಹಿಸುತ್ತವೆ.

ಧರ್ಮರಹಿತ ಸಮಾಜವನ್ನು ಊಹಿಸುವುದೂ ಕಷ್ಟವೆನಿಸುತ್ತದೆ. ಧಾರ್ಮಿಕ ನಂಬಿಕೆಗಳಲ್ಲಿ, ಆಚರಣೆಗಳಲ್ಲಿ ಭಿನ್ನತೆಯಿರಬಹುದು ಆದರೆ ಎಲ್ಲಾ ಧರ್ಮಗಳ ಆಶಯ ಮಾತ್ರ ಒಂದೇ ಆಗಿರುತ್ತದೆ ಎನ್ನಬಹುದು. ವ್ಯಕ್ತಿಯಲ್ಲಿ ಪರಿಪೂರ್ಣತೆಯನ್ನು ಜೀವನಮೌಲ್ಯವನ್ನು ಮನೋಸ್ಥೈರ್ಯವನ್ನು ಧಾರ್ಮಿಕ ನಂಬಿಕೆಗಳು ನೀಡುತ್ತವೆ ಎಂಬ ನಂಬಿಕೆ ಜನಜನಿತವಾಗಿದೆ. ಯಾವುದೇ ಪರಿಸರದಲ್ಲಿ ಜಾತಿ, ವರ್ಗ, ವರ್ಣಗಳ ನಡುವೆ ವ್ಯತ್ಯಾಸವಿದ್ದರೂ ಧಾರ್ಮಿಕ ನಂಬಿಕೆ ಮತ್ತು ಆಚರಣೆಗಳಲ್ಲಿ ಏಕರೂಪತೆಯನ್ನು ಕಾಣಬಹುದು. ಆದ್ದರಿಂದ ಮಾನವನ ನೈತಿಕ, ಸಾಮಾಜಿಕ, ಮಾನಸಿಕ ಸ್ವಾಸ್ಥ್ಯವನ್ನು ಕಾಪಾಡುವಲ್ಲಿ ಧಾರ್ಮಿಕ ನಂಬಿಕೆಗಳ ಪಾತ್ರ ಮುಖ್ಯವಾಗುತ್ತದೆ ಎನ್ನಬಹುದು. ಜನರ ನಂಬಿಕೆ, ಶ್ರದ್ಧೆ, ಭಕ್ತಿಗಳ ದ್ಯೋತಕವಾಗಿ ದೇವಾಲಯಗಳು, ಗುಡಿ, ಗೋಪುರಗಳು ಸ್ಥಾಪಿಸಲ್ಪಡುತ್ತಿದ್ದವು. ಇಂಥಹ ದೇವಾಲಯಗಳು ಮತ–ಧರ್ಮಗಳ ಸಂಕೇತವಾಗಿದ್ದವು. ಕುವೆಂಪುರವರ ಕಾದಂಬರಿಗಳಲ್ಲಿ ಬರುವ 'ಅಗ್ರಹಾರ', 'ಸಿದ್ದರಮಠ' ಮತ್ತು ಚರ್ಚು ಅಲ್ಲಿನ ಸ್ಥಳೀಯರ ಧಾರ್ಮಿಕ ಕೇಂದ್ರಗಳಾಗಿದ್ದವು.

5.1 ಮಲೆನಾಡಿನ ಪ್ರದೇಶದಲ್ಲಿದ್ದ ಧಾರ್ಮಿಕ ಕೇಂದ್ರಗಳು ಹಾಗೂ ಅನ್ಯಧರ್ಮಗಳ ಪ್ರಭಾವ:

ಕುವೆಂಪುರವರ ಎರಡೂ ಕಾದಂಬರಿಗಳ ದೇಸಿಯ ಬದುಕು ಮಲೆನಾಡಿನಲ್ಲಿ ಅಸ್ತಿತ್ವದಲ್ಲಿದ್ದ ಧಾರ್ಮಿಕ ನಂಬಿಕೆಗಳ ಹಿನ್ನಲೆಯಲ್ಲಿ ರೂಪಿತವಾಗಿರುವುದನ್ನು ಕಾಣುತ್ತೇವೆ. ಸಮಾಜದ ಜಾತಿ ವ್ಯವಸ್ಥೆಯ ಮೇಲ್ಪಂಕ್ತಿಯಲ್ಲಿದ್ದ ಬ್ರಾಹ್ಮಣರಿಂದ ಹಿಡಿದು ಇತರ ಜಾತಿಗಳಲ್ಲಿ ಒಕ್ಕಲಿಗರಾದ ಹೆಗ್ಗಡೆ, ಗೌಡರು, ಹಳೇಪೈಕದವರು, ಬೇಲರು, ಹಸಲರು, ದಲಿತರೆಲ್ಲ ಯಾವ ಪೂರ್ವಪ್ರಜ್ಞೆಯಿಲ್ಲದೆ ಹಬ್ಬ ಹರಿದಿನಗಳಲ್ಲಿ, ಜಾತ್ರೆ, ಆರಾಧನೆ, ಉತ್ಸವ ಮುಂತಾದ ಧಾರ್ಮಿಕ ಆಚರಣೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು ಎನ್ನುವುದು ಉಲ್ಲೇಖಿತವಾಗಿದೆ. ಇಂತಹ ಧಾರ್ಮಿಕ ಆಚರಣೆಗಳ ಮೂಲಕ ತಮ್ಮ ಬದುಕಿನ ಸಾರ್ಥಕತೆಯನ್ನು ಕಂಡುಕೊಂಡಿದ್ದಾರೆ.

ಅಗ್ರಹಾರ ಮತ್ತು ಸಿದ್ದರಮಠ: ಕುವೆಂಪುರವರ ಕಾದಂಬರಿಗಳಲ್ಲಿ ಬರುವ ಧಾರ್ಮಿಕ ಕ್ಷೇತ್ರಗಳಲ್ಲಿ ಅಗ್ರಹಾರ ಮಲೆನಾಡಿನ ಧಾರ್ಮಿಕ ಕೇಂದ್ರವಾಗಿತ್ತು. ಅಗ್ರಹಾರಗಳು ಸಾಮಾನ್ಯವಾಗಿ

ಬ್ರಾಹ್ಮಣರು ವಾಸಿಸುವ, ದೇವಾಲಯಕ್ಕೆ ಹೊಂದಿಕೊಂಡಿರುವ ಪ್ರದೇಶವೆನ್ನಬಹುದು. ಇಲ್ಲಿ ಬೇರೆ ಜಾತಿಯವರು ವಾಸಿಸುವಂತಿರಲಿಲ್ಲ, ಕಾನೂರು ಹೆಗ್ಗಡಿತಿಯಲ್ಲಿ ವರ್ಣಿಸಲ್ಪಟ್ಟಿರುವ ಅಗ್ರಹಾರ ತುಂಗಾತೀರದಲ್ಲಿದ್ದು, ನೋಡಲು ಒಂದು ರಮಣೀಯ ಸ್ಥಾನವಾಗಿತ್ತು. ಹೊಳೆಯ ದಂಡೆಯಲ್ಲಿಯೆ ಚಂದ್ರಮೌಳೇಶ್ವರನ ಗುಡಿಯೂ ಅದಕ್ಕೆ ಸಮೀಪದಲ್ಲಿಯೇ ಕೈ ಹೆಂಚು ಹೊದ್ದಿಸಿದ್ದ ವೆಂಕಪ್ಪಯ್ಯ ಜೋಯಿಸರ ಮನೆಯೂ, ಮತ್ತು ಇತರ ಬ್ರಾಹ್ಮಣರ ಮನೆಯೂ ಇದ್ದವು. ಮೆನಯ ಹೊರಭಾಗ ಚೊಕ್ಕಟವಾಗಿಯೂ, ರಂಗವಲ್ಲಿಯಿಂದ ಶೋಭಿತವಾಗಿಯೂ, ಬ್ರಾಹ್ಮಣರ ಮನೆ ಎಂದೆನಿಸಿಕೊಳ್ಳುವುದಕ್ಕೆ ಯೋಗ್ಯವಾಗಿಯೂ ಇತ್ತು".[3] ಸುತ್ತಮುತ್ತಲಿನ ಇತರ ಜಾತಿಯ ಜನರು ಪೂಜೆ-ಆರಾಧನೆಗಾಗಿ ಇಲ್ಲಿಗೆ ಬಂದು ಹೋಗುತ್ತಿದ್ದರು. ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಕೂಡ ಕಲ್ಲೂರಿನ ಅಗ್ರಹಾರವಿದ್ದು, ಅಲ್ಲಿಯ ಮಂಜಭಟ್ಟರು ದಕ್ಷಿಣಕನ್ನಡ ಜಿಲ್ಲೆಯಿಂದ ಬಂದು ಅಲ್ಲಿನ ದೇವಸ್ಥಾನದಲ್ಲಿ ಪೂಜಾರಿಯಾಗಿದ್ದರು. ಬೆಟ್ಟಳ್ಳಿಯ ಕಲ್ಲಯ್ಯಗೌಡರ ಮಗ ದೇವಯ್ಯಗೌಡ, ಮುಕುಂದ ಮುಂತಾದವರೆಲ್ಲ ಪೂಜೆಗಾಗಿ ಬರುತ್ತಾರೆ. ದೇವಸ್ಥಾನದ ಒಳಗೆ ಬ್ರಾಹ್ಮಣ ಮತ್ತು ಇನ್ನಿತರ ಜಾತಿಯವರು ಪ್ರತ್ಯೇಕವಾಗಿ ಕುಳಿತುಕೊಳ್ಳಬೇಕಾಗಿತ್ತು.[4]

ಡಾ. ಮರಿಗುದ್ದಿಯವರ ಪ್ರಕಾರ "ಈ ಎರಡು ಅಗ್ರಹಾರಗಳು ಒಂದು ಕಾಲಕ್ಕೆ ವಿದ್ಯಾಬ್ಯಾಸದ ಕೇಂದ್ರಗಳಾಗಿದ್ದು, ಈ ಸ್ಥಳಗಳು ಕಾದಂಬರಿಗಳ ಕಥಾನಕದ ಕಾಲಕ್ಕೆ ಆ ವಿಚಾರದಲ್ಲಿ ಏನನ್ನೂ ತಿಳಿಸುವುದಿಲ್ಲ. ಆ ಅಂಶವೇ ಅವುಗಳಿಂದ ದೂರವಾಗಿತ್ತೆಂದು ತೋರುತ್ತದೆ. ಬ್ರಾಹ್ಮಣರು ಒಂದೆಡೆ ವಾಸಿಸುವ ಮತ್ತು ಪೂಜೆ ಪೌರೋಹಿತ್ಯ ನಡೆಸಲು ಅನುಕೂಲವಾಗುವ ವಾತಾವರಣವನ್ನು ಅವು ಹೊಂದಿದ್ದವು. ನದಿ ಮತ್ತು ನೀರಿರುವ ಅನುಕೂಲಕರ ವಾತಾವರಣದಲ್ಲಿ ದೇವಾಲಯಗಳನ್ನು ಹೊಂದಿದ್ದವು. ಸುತ್ತಲ ಪ್ರದೇಶದ ಜನರ ಧಾರ್ಮಿಕ ಭಾವನೆಗೆ ಅವು ಆಶ್ರಯತಾಣವಾಗಿದ್ದವು. ಜನರು ಪೂಜೆ, ರಥೋತ್ಸವಗಳಿಗಾಗಿ ಅಲ್ಲಿಗೆ ಬರುತ್ತಿದ್ದರು"[5] ಹೀಗೆ ವಿದ್ಯಾಕೇಂದ್ರಗಳಾಗಿ, ಧಾರ್ಮಿಕ ಕೇಂದ್ರಗಳಾಗಿ ಒಂದು ಸೀಮಿತ ಜಾತಿಗೆ ಮೀಸಲಾಗಿದ್ದ ಅಗ್ರಹಾರಗಳು, ಮುಂದೆ ಇತರ ಜಾತಿಯವರು ಪೂಜೆ-ಪುನಸ್ಕಾರ ಜಾತ್ರೆ, ಉತ್ಸವಗಳಿಗೆ ಹೋಗಿ ಬರುವ ಮೂಲಕ ಸಾಮಾನ್ಯವಾಯಿತು.

ಕುವೆಂಪುರವರ ಕಾದಂಬರಿಗಳಲ್ಲಿ ಸಿದ್ಧರಮಠದ ಉಲ್ಲೇಖವಿದೆ. ಈ ಮಠದಲ್ಲಿ ಸಿದ್ದೇಶ್ವರಮೂರ್ತಿ ಹಾಗೂ ಶಿವಲಿಂಗ ಎರಡೂ ಪೂಜೆಗೊಳ್ಳುತ್ತಿವೆ. ಬ್ರಾಹ್ಮಣ ಅರ್ಚಕರನ್ನು ಹೊಂದಿರುವ ಸಿದ್ಧರಮಠದಲ್ಲಿ ಕಾರ್ತಿಕದಲ್ಲಿ ದೀಪೋತ್ಸವ ಮತ್ತು ಹೋಳಿಹುಣ್ಣಿಮೆಯಲ್ಲಿ ರಥೋತ್ಸವಗಳು ನಡೆಯುತ್ತವೆ."[6] ಎಂದು ಡಾ. ಮರಿಗುದ್ದಿರವರು ಹೇಳಿದ್ದಾರೆ. ಮಲೆಗಳಲ್ಲಿ

ಮದುಮಗಳು ಕಾದಂಬರಿಯ ಶಂಕರಪ್ಪ ಹೆಗ್ಗಡೆ ತನ್ನ ಚಿಕ್ಕಮಗುವಿಗೆ ಆರೋಗ್ಯವಿರುವುದಿಲ್ಲ. ಅದನ್ನು ಗಮನಿಸಿ ಹೂವಳ್ಳಿ ವೆಂಕಟಣ್ಣ ಸಿದ್ದರಮಠದಿಂದ ಚೀಟಿಬೂತಿನಾದ್ರೂ ತರಿಸಿ ಕಟ್ಟಲು ಹೇಳಿದಾಗ, ಶಂಕರ ಹೆಗ್ಗಡೆ ತನ್ನ ಮಗನ ಸೊಂಟದಲ್ಲಿ ನೇತಾಡುವ ಸಿದ್ಧರಮಠದ ತಾಯಿತಿಯನ್ನು ತೋರಿಸುತ್ತಾನೆ.[7] ಹಾಗೆಯೇ ಕಾನೂರು ಹೆಗ್ಗಡಿತಿಯಲ್ಲಿ ಬರುವ ಮುತ್ತಳ್ಳಿಯ ಸೀತೆ ಅನಾರೋಗ್ಯ ಪೀಡಿತಳಾಗಿ ಸೊರಗಿ ಹೋಗಿರುವುದನ್ನು ಗಮನಿಸಿ ಕೂಳೂರಿನ ಸಿದ್ಧರಮಠಕ್ಕೆ ಆಳು ಕಳುಹಿಸಿ ಪ್ರಸಾದ ತರಿಸಿ ಕೊಡಿಸಲು ವೆಂಕಪ್ಪಯ್ಯ ಜೋಯಿಸರು ಸಲಹೆ ನೀಡುತ್ತಾರೆ.[8] ಹೀಗೆ ಮಲೆನಾಡಿನ ದೇಸಿಯ ಬದುಕಿನಲ್ಲಿ ಅಗ್ರಹಾರ ಮತ್ತು ಸಿದ್ಧರಮಠ ಧಾರ್ಮಿಕ ಕ್ಷೇತ್ರಗಳಾಗಿ, ಜನರ ಧಾರ್ಮಿಕ ನಂಬಿಕೆಗಳನ್ನು ಪ್ರೋತ್ಸಾಹಿಸುತ್ತಾ ಪ್ರಭಾವ ಬೀರಿದ್ದವು ಎನ್ನುವುದನ್ನು ಕಾಣುತ್ತೇವೆ.

ಜನರಿಗೆ ತೊಂದರೆಯಾದರೆ, ಕಷ್ಟನಷ್ಟಗಳು ಸಂಭವಿಸಿದರೆ ಸತ್ಯನಾರಾಯಣವ್ರತ ಮಾಡಿಸುವುದು ವಾಡಿಕೆಯಾಗಿತ್ತು. ಮಲೆಗಳಲ್ಲಿ ಮದುಮಗಳು ಕಾದಂಬರಿಯ ಶಂಕರಹೆಗ್ಗಡೆ ತನ್ನ ಮಗನ ಖಾಯಿಲೆ ಗುಣವಾಗಲೆಂದು ಜೋಯಿಸರು ಹೇಳಿದಂತೆ ಕಲ್ಲೂರ ದೇವಸ್ಥಾನದಲ್ಲಿ ಸತ್ಯನಾರಾಯಣ ವ್ರತವನ್ನು ಮಾಡಿಸುತ್ತಾನೆ.[9] ಕಾನೂರು ಹೆಗ್ಗಡಿತಿಯಲ್ಲಿ ಮುತ್ತಳ್ಳಿಯ ಶ್ಯಾಮಯ್ಯಗೌಡ ಮಗಳು ಸೀತೆ ಹಾಸಿಗೆ ಹಿಡಿದಾಗ ಜೋಯಿಸರು ನಿಮಿತ್ತ ನೋಡುತ್ತಾರೆ. ತಾಯಿತಿ ಕಟ್ಟಿ ಸತ್ಯನಾರಾಯಣ ವ್ರತ ಮಾಡಿಸುತ್ತಾರೆ.[10]

ಮಲೆನಾಡಿನ ಸ್ಥಳೀಯರ ಧಾರ್ಮಿಕ ಜೀವನದ ಮೇಲೆ ಜೈನಧರ್ಮದ ಪ್ರಭಾವವನ್ನು ಸಹ ಕಾಣಬಹುದು. ಕುವೆಂಪು ಕಾಂದಬಂರಿಗಳಲ್ಲಿ ಜೈನ ಮತದ ಉಲ್ಲೇಖವಿದೆ. ಕಾನೂರು ಹೆಗ್ಗಡಿತಿ ಕಾದಂಬರಿಯಲ್ಲಿ ದೆಯ್ಯದ ಹರಕೆಗೆ "ಶೂದ್ರರಿಂದ ರಕ್ತಬಲಿಯಗುವ ಮುನ್ನ ಬ್ರಾಹ್ಮಣರಿಂದ ಭೂತಗಳಿಗೆ ಪೂಜೆ ಮಾಡಿಸಿ 'ಜೈನೆಡೆ' ಹಾಕಿಸುವುದು ವಾಡಿಕೆ;(ಜೈನೆಡೆ ಎಂದರೆ ಜೈನರ ಎಡೆ ಎಂದರ್ಥ, ಎಂದರೆ ನಿರಾಮಿಷ ನೈವೇದ್ಯ!)[11] ಡಾ. ಮರಿಗುದ್ದಿಯವರು ಹೇಳುವಂತೆ ಜೈನೆಡೆ ಎಂಬುದು ಜಾತ್ರೆ ಉತ್ಸವ ಬಲಿ ಹರಕೆ ಹಬ್ಬ ಹುಣ್ಣಿಮೆಗಳಲ್ಲಿ ತೆಗೆದಿರಿಸುತ್ತಿದ್ದ ನೈವೇದ್ಯ ಮಡಿಯಿಂದ ಮಾಡಿದ ಅಪ್ಪಟ ಶಾಕಾಹಾರ ಇದನ್ನು ತುಲಸಿಯ ಕಟ್ಟೆಯ ಮೇಲಾಗಲಿ ಮನೆಯ ಮಾಳಿಗೆಯ ಮೇಲಾಗಲಿ 'ದೈವ'ಕ್ಕಾಗಿ ಇರಿಸುತ್ತಿದ್ದರು.[12] ಇದರಿಂದ ಮಲೆನಾಡಿನ ಅಂದಿನ ಸ್ಥಳೀಯರ ಮೇಲೆ ಜೈನ ಮತದ ಪ್ರಭಾವವನ್ನು ಕಾಣಬಹುದು. ಪ್ರಾರಂಭದಲ್ಲಿ ಮೇಲ್ವರ್ಗದವರ ಧಾರ್ಮಿಕ ಪ್ರಭಾವ, ನಂತರದಲ್ಲಿ ಜೈನಧರ್ಮ ಮತ್ತೆ ವೀರಶೈವ ಧರ್ಮ ಮಲೆನಾಡಿನ ಒಕ್ಕಲಿಗರ ಮೇಲೆ ಪ್ರಭಾವ ಬೀರಿರುವುದನ್ನು ಕುವೆಂಪುರವರ ಕಾದಂಬರಿಗಳಲ್ಲಿ ಕಾಣಬಹುದು. ಧಾರ್ಮಿಕ

ಆಚರಣೆ, ನಂಬಿಕೆ, ಅನುಕರಣೆಯು ಕಾಲಬದ್ಧವಾಗಿದೆ, ಆಯಾಕಾಲಕ್ಕೆ ತಕ್ಕಂತೆ ಸ್ಥಳೀಯರ ಆಚಾರ–ವಿಚಾರಗಳಲ್ಲಿ ಬದಲಾವಣೆಯನ್ನು ಕಾಣಬಹುದಾಗಿದೆ.

ಮಲೆನಾಡಿನ ಒಕ್ಕಲಿಗ, ದಲಿತ ಮತ್ತು ಇನ್ನಿತರ ಜಾತಿಯವರ ಮೇಲೆ ಹಿಂದೂ, ಜೈನ, ವೀರಶೈವ ಧರ್ಮಗಳಂತೆಯೇ ಕ್ರಿಶ್ಚಿಯನ್ ಮತದ ಪ್ರಭಾವವಾಗಿರುವುದನ್ನು ಕುವೆಂಪುರವರ ಕಾದಂಬರಿಗಳಲ್ಲಿ ಕಾಣುತ್ತೇವೆ. ಧರ್ಮ ಪ್ರಚಾರಕ್ಕಾಗಿ ಕ್ರೈಸ್ತ ಮಿಷನರಿಗಳು ಮಲೆನಾಡಿನ ಸ್ಥಳೀಯ ಪರಿಸರಕ್ಕೆ ಕಾಲಿಟ್ಟ ಸಂದರ್ಭವನ್ನು ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಉಲ್ಲೇಖಿಸಲಾಗಿದೆ. "1893ನೆಯ ಇಸವಿ ಸೆಪ್ಟೆಂಬರ್ 11ನೆಯ ತೇದಿ ಸೋಮವಾರ ತೀರ್ಥಹಳ್ಳಿಯ ಪಾದ್ರಿ ಅಥವಾ ಉಪದೇಶಿ ಜೀವರತ್ನಯ್ಯ ಕಾಡು ದಾಟಿ ಆಗ ತಾನೆ ಕಳೆಕಿತ್ತು ತೆವರು ಕೂಯ್ಲಾಗಿದ್ದ ಗದ್ದೆ ಕೋಗಿನ ಅಂಚುಗಳನ್ನು ಹತ್ತಿ, ಹಾರಿ, ತೋಟದ ಬೇಲಿಯ ತಡಬೆಯನ್ನು ಎಚ್ಚರಿಕೆಯಿಂದ ಏರಿ ಇಳಿದು, ಅಡಕೆ ಮರದ ಸಾರದ ಮೇಲೆ ಅಡ–ಹಳ್ಳವನ್ನು ಉತ್ತರಿಸಿ ಮನೆಯಡೆಯ ಕಣದ ಬೇಲಿಯೊಡ್ಡಿಗೆ ಹಾಕಿದ್ದ ಉಣುಗೋಲನ್ನು ಸರಿಸಿ, ಸಿಂಧುವಳ್ಳಿ ಮನೆಗೆ ಪ್ರವೇಶಿಸಿದಂದು ತಾನು ಎಂತಹ ಲೋಕಪ್ರಸಿದ್ಧವಾಗಲಿರುವ ಜಗದ್ ಭವ್ಯ ಮಹಾ ಘಟನೆಯೊಂದರೊಡನೆ ಪ್ರತಿಸ್ಪರ್ಧಿಯಾಗಿದ್ದೇನೆ ಎಂಬುದನ್ನು ಅರಿತಿರಲಿಲ್ಲ"[13] ಪಾದ್ರಿ ಜೀವರತ್ನಯ್ಯ ವಿದೇಶದಿಂದ ಬಂದವನಲ್ಲ, ಅವನೊಬ್ಬ ನೇಟಿವ್ ಪಾದ್ರಿಯಾಗಿದ್ದ. ಆ ಭಾಗದ ಪರಿಚಯವಿದ್ದ ಅವನು ಅಲ್ಲಿನ ಒಕ್ಕಲಿಗರನ್ನು ಆಮಿಷಗಳನ್ನೊಡ್ಡಿ ಮತಾಂತರಗೊಳಿಸಿದರೆ ಸಮಾಜದಲ್ಲಿದ್ದ ಕೆಳವರ್ಗದವರನ್ನು ಸುಲಭವಾಗಿ ಕ್ರೈಸ್ತಮತಕ್ಕೆ ಮಾತಾಂತರಗೊಳಿಸಬಹುದು ಎಂಬುದು ಅವನ ನಂಬಿಕೆಯಾಗಿರುತ್ತದೆ. ಅದರಂತೆಯೇ ಸಿಂದುವಳ್ಳಿಯ ಚಿನ್ನಪ್ಪನೆ ಪಾದ್ರಿಯ ಮೊತ್ತಮೊದಲ ಬೇಟೆಯಾಗಿದ್ದನು.[14]

ಸ್ಥಳೀಯ ಸಮಾಜದಲ್ಲಿದ್ದ ಜಾತಿ ವ್ಯವಸ್ಥೆಯಿಂದ ಬೇಸತ್ತು ಅನ್ಯಧರ್ಮವನ್ನು ಅನುಸರಿಸುವುದು ಒಂದಾದರೆ, ಕ್ರೈಸ್ತ ಧರ್ಮ ಪ್ರಚಾರಕರಿಂದ ತಮಗೆ ಒಲಿದು ಬರುತ್ತಿದ್ದ ಆಧುನಿಕ ವಿಲಾಯಿತಿ ವಸ್ತುಗಳಾದ ಲಾಟೀನು, ಬೈಸಿಕಲ್ಲು, ತೋಟಾಕೋವಿ, ಸೀಮೆ ಬಿಸ್ಕತ್ತು, ಹ್ಯಾಟು, ಬೂಟು, ಇತ್ಯಾದಿ ಅನಕ್ಷರಸ್ಥ ಮಲೆನಾಡಿನ ಮಕ್ಕಳಿಗೆ ಶಿಕ್ಷಣದ ಸೌಲಭ್ಯ ಆಸ್ಪತ್ರೆ ಮುಂತಾದ ಸೇವೆ ಸಹಾಯಗಳಿಂದ ಜನರನ್ನು ಮತಾಂತರಗೊಳಿಸುವುದು ಸಾಮಾನ್ಯವಾಗಿತ್ತು ಎಂಬುದನ್ನು ಕುವೆಂಪುರವರ ಕಾದಂಬರಿಗಳು ಬಿಂಬಿಸುತ್ತವೆ. ತೀರ್ಥಹಳ್ಳಿ ಮಲೆನಾಡಿನಲ್ಲಿ ಕ್ರಿಶ್ಚಿಯನ್ನರ ಧಾರ್ಮಿಕ ಕೇಂದ್ರವಾಗಿದ್ದು ಮತಪ್ರಚಾರಕ್ಕೆ ಹಾಗೂ ಮತಾಂತರಕ್ಕೆ ಉತ್ತೇಜನ ನೀಡುವ ಕೇಂದ್ರವಾಗಿತ್ತು ಎನ್ನಬಹುದು.

ಮತಾಂತರದಿಂದ ಸಾಮಾಜಿಕ ಮತ್ತು ಸಾಂಸ್ಕೃತಿಕ ಪಲ್ಲಟಗಳಾಗುವುದನ್ನು ಕುವೆಂಪುರವರ ಕಾದಂಬರಿಗಳು ವಿವರಿಸುತ್ತವೆ. ಸಮಾಜದಲ್ಲಿ ಪ್ರತಿಷ್ಠಿತ ಸ್ಥಾನ ಹೊಂದಿದ್ದ ಒಕ್ಕಲಿಗರನ್ನು ಮತಾಂತರಗೊಳಿಸುವುದರಿಂದ ಇತರೆ ಜಾತಿಯವರು ಕ್ರೈಸ್ತಮತವನ್ನು ಸೇರುತ್ತಾರೆ ಎನ್ನುವ ಭಾವನೆ ಪಾದ್ರಿ ಜೀವರತ್ನಯ್ಯನದು. ಆದರೆ ನೂರಾರು ವರ್ಷಗಳಿಂದ ಜನಮನದಲ್ಲಿ ಆಳವಾಗಿ ಬೇರುಬಿಟ್ಟಿದ್ದ ಧಾರ್ಮಿಕ ಭಾವನೆ ನಂಬಿಕೆಗಳು ಅಷ್ಟು ಸುಲಭವಾಗಿ ಬದಲಾಯಿಸಲು ಸಾಧ್ಯವಿಲ್ಲ ಎನ್ನುವ ವಿಚಾರವನ್ನು ಕುವೆಂಪುರವರ ಕಾದಂಬರಿಗಳಲ್ಲಿ ಕಾಣುತ್ತೇವೆ. ಪಾದ್ರಿ ಜೀವರತ್ನಯ್ಯ ದೇವಯ್ಯಗೌಡನಿಗೆ ಏನೆಲ್ಲಾ ಆಸೆ-ಆಮಿಷಗಳನ್ನು, ಆಧುನಿಕ ಜೀವನ ಶೈಲಿಯ ಪರಿಕರಗಳನ್ನು ನೀಡಿದರೂ ಅವನವನ್ನು ಮತಾಂತರಗೊಳಿಸುವಲ್ಲಿ ವಿಫಲನಾಗುತ್ತಾನೆ. ಮತಾಂತರ ಸಾಮಾಜಿಕ ಸ್ಥಿತ್ಯಂತರಗಳಿಗಲ್ಲದೆ, ಕೌಟುಂಬಿಕ ಕಲಹಕ್ಕೂ ಕಾರಣವಾಗುವುದನ್ನು ಕಾಣುತ್ತೇವೆ. ದೇವಯ್ಯಗೌಡ ಮತ್ತು ಅವನ ಹೆಂಡತಿ ದೇವಮ್ಮ ಮೊದಲು ಅನ್ಯೋನ್ಯವಾಗಿ ಸುಖಸಂಸಾರ ನಡೆಸುತ್ತಿದ್ದರು. "ಪಾದ್ರಿಯ ಪ್ರಭಾವಕ್ಕೆ ತಾನು ಒಳಗಾಗುವವರೆಗೂ ಅವರಿಬ್ಬರಲ್ಲಿ ಎಷ್ಟು ಹೊಂದಾಣಿಕೆಯಿತ್ತೆಂದರೆ ಅದನ್ನು ಕಂಡು ಅತ್ತೆಗೆ ಒಮ್ಮೊಮ್ಮೆ ಕರುಬು ಮೂಡಿತ್ತು"[15] ಆದರೆ ಕ್ರೈಸ್ತ ಮತದ ಪ್ರಭಾವಕ್ಕೊಳಗಾಗಿ ದೇವರು, ನಂಬಿಕೆ, ಆಚರಣೆ, ಹರಕೆ ವ್ರತ ಮುಂತಾದವುಗಳನ್ನು ಧಿಕ್ಕರಿಸುತ್ತಾನೆ. ಇದರಿಂದ ಗಂಡ-ಹೆಂಡಿರಲ್ಲಿ ಸಾಂಸಾರಿಕ ಅಶಾಂತಿಯುಂಟಾಗುತ್ತದೆ. ಹಾಗೆಯೇ ದೇವಯ್ಯಗೌಡರ ಜೀತದಾಳು ಬಚ್ಚ ಕ್ರೈಸ್ತ ಮತಕ್ಕೆ ಸೇರಿದ್ದಾನೆ ಎಂದು ಸೇಸಿ ತನ್ನ ಮಗಳನ್ನು ಮದುವೆ ಮಾಡಿಕೊಡಲು ಒಪ್ಪುವುದಿಲ್ಲ. ಹೀಗೆ ಮತಾಂತರ ಸಾಮಾಜಿಕವಾಗಿ ಮತ್ತು ಕೌಟುಂಬಿಕವಾಗಿ ಅನೇಕ ಸಮಸ್ಯೆಗಳಿಗೆ ಕಾರಣವಾಗುತ್ತಿತ್ತು. ಆದರೆ ಕ್ರೈಸ್ತಮತದ ಪ್ರಭಾವದಿಂದ ಮಲೆನಾಡಿನ ದೇಸಿಯ ಬದುಕಿನಲ್ಲಿ ಸಾಮಾಜಿಕ ಪರಿವರ್ತನೆಗೆ ಕಾರಣವಾಗುವುದನ್ನು ಸಹ ಕುವೆಂಪುರವರ ಕಾದಂಬರಿಗಳೂ ವಿವರಿಸುತ್ತವೆ. ಅನಕ್ಷರಸ್ಥ ಮಲೆನಾಡಿನ ಜನರಿಗೆ ಶಿಕ್ಷಣ ಆರೋಗ್ಯ ಸೇವೆಗಳಿಂದ ಪ್ರಯೋಜನವಾಗುತ್ತಿತ್ತು ಎನ್ನುವುದನ್ನು ಕಾಣುತ್ತೇವೆ.

ದೇಶೀಯ ಧರ್ಮಗಳಾದ ಹಿಂದೂ ವೀರಶೈವ, ಜೈನ ಧರ್ಮಗಳಿಂದ ಕಾಣದ ಸಾಮಾಜಿಕ ಬದಲಾವಣೆಗಳನ್ನು ಅನ್ಯಮತವಾದ ಕ್ರೈಸ್ತ ಧರ್ಮದ ಪ್ರಭಾವದಿಂದ ಮಲೆನಾಡಿನ ದೇಸಿಯ ಬದುಕಿನಲ್ಲಿ ಕಾಣುತ್ತೇವೆ. ಇಷ್ಟೆಲ್ಲಾ ಪ್ರಭಾವಗಳಿದ್ದರೂ, ಮತಧರ್ಮಗಳು, ಜಾತಿ-ವರ್ಗಗಳು ಭಿನ್ನವಾದರೂ ಮಲೆನಾಡಿನ ಸ್ಥಳೀಯ ಪರಿಸರದಲ್ಲಿ ಧಾರ್ಮಿಕ ಸಾಮರಸ್ಯವಿದ್ದುದನ್ನು, ಸಹಬಾಳ್ವೆ ನಡೆಸುತ್ತಿದ್ದ ಜನರನ್ನು ಮತ್ತು ಆಧುನಿಕ ವೈಚಾರಿಕ ಜಗತ್ತಿಗೆ ಹತ್ತಿರವಾಗುತ್ತಿದ್ದುದನ್ನು ಕುವೆಂಪುರವರ ಕಾದಂಬರಿಗಳು ವಿವರಿಸುವುದನ್ನು ಕಾಣುತ್ತೇವೆ.

5.2 ಕುವೆಂಪು ಕಾದಂಬರಿಗಳಲ್ಲಿ ಚಿತ್ರಿಸಿರುವ ಹಬ್ಬ, ಜಾತ್ರೆ, ಉತ್ಸವಗಳು ಮತ್ತು ತೀರ್ಥಯಾತ್ರೆ:

ಮಲೆನಾಡಿನ ದೇಸಿಯ ಸಂಸ್ಕೃತಿಯ ಭಾಗವಾಗಿ ಹಬ್ಬಗಳು ವಿಶಿಷ್ಟ ಸ್ಥಾನ ಪಡೆದುಕೊಂಡಿವೆ. ವರ್ಷವಿಡೀ ದುಡಿಯುವ ಮನಗಳಿಗೆ ಹಬ್ಬಗಳು ಧಾರ್ಮಿಕ ಮತ್ತು ಸಾಂಸ್ಕೃತಿಕ ಉತ್ಸವಗಳು ಮುದನೀಡಿ ದುಡಿಯುವ ಜನರಲ್ಲಿ ಭಾವನಾತ್ಮಕ ಹಾಗೂ ನೈತಿಕ ಶಕ್ತಿಯನ್ನು ನೀಡುವುದರ ಜೊತೆಗೆ ಜನರಲ್ಲಿ ಧಾರ್ಮಿಕ ಸಾಮರಸ್ಯವನ್ನು ಉಂಟುಮಾಡುತ್ತಿದ್ದವು. ಯಾವುದೇ ತೆರನಾದ ಹಬ್ಬ-ಹರಿದಿನಗಳು ಒಂದು ಪ್ರಾದೇಶಿಕ ವೈಶಿಷ್ಟ್ಯವನ್ನು ಅಭಿವ್ಯಕ್ತಗೊಳಿಸುವ ಆಚರಣೆಗಳಾಗಿದ್ದವು ಎಂದರೆ ತಪ್ಪಾಗಲಾರದು. ಕೆಲವೊಂದು ಹಬ್ಬಗಳು ಸಾರ್ವತ್ರಿಕವಾಗಿ ದೇಶದೆಲ್ಲೆಡೆ ಆಚರಣೆಗೊಂಡರೆ ಮತ್ತೆ ಕೆಲವು ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶಕ್ಕೆ ಮತ್ರ ಸೀಮಿತವಾಗಿರುತ್ತವೆ. ಅಂತಹ ದೇಸಿಯ ಹಬ್ಬಗಳಲ್ಲಿ ಭೂಮಿ ಹುಣ್ಣಿಮೆ, ಎಳ್ಳಅಮಾವಾಸ್ಯೆ, ಗ್ರಾಮದೇವತೆ, ಕಾರಹುಣ್ಣಿಮೆ, ಹೋಳಿಹುಣ್ಣಿಮೆ, ಮುಂತಾದವು ಪ್ರಾದೇಶಿಕ ವೈಶಿಷ್ಟ್ಯವನ್ನು ಅನಾವರಣಗೊಳಿಸುವ ಹಬ್ಬಗಳಾಗಿದ್ದವು ಎನ್ನಬಹುದು.

ಕುವೆಂಪುರವರ ಕಾನೂರು ಹೆಗ್ಗಡಿತಿ ಕಾದಂಬರಿಯಲ್ಲಿ ಭೂಮಿಹುಣ್ಣಿಮೆಯ ವಿವರಣೆ ನಿಜವಾಗಿಯೂ ಅಂದು ಮಲೆನಾಡಿನ ಪರಿಸರದಲ್ಲಿ ಆಚರಣೆಗೊಳ್ಳುತ್ತಿದ್ದ ಸಾಂಸ್ಕೃತಿಕ ಧಾರ್ಮಿಕ ಆಚರಣೆಗೆ ಸಾಕ್ಷಿಯಾಗಿದೆ. "ಭೂಮಿ ಹುಣ್ಣಿಮೆಯ ಹಬ್ಬ ದೀಪಾವಳಿ ಹಬ್ಬಕ್ಕೆ ಹದಿನೈದು ದಿನಗಳ ಹಿಂದೆ ಬರುತ್ತದೆ. ಕೊಬ್ಬಿ ಬೆಳೆದು ನಿಂತ ಹಸುರಾದ ಭತ್ತದ ಗದ್ದೆಗಳಲ್ಲಿ ಆಗತಾನೆ ಹೊಡೆ ಹೊರಡಲು ಮೊದಲಾಗುತ್ತದೆ"[16] ಎನ್ನುವ ವಿವರಣೆ ಮಲೆನಾಡಿನ ಬದುಕಿನಲ್ಲಿ ಸಮೃದ್ಧಿಯ ಹಾಗೂ ಚೈತನ್ಯದ ಸಂಕೇತವಾಗಿತ್ತು. ಈ ಹಬ್ಬದ 'ಕಳಮಶ್ರೀಯ' ಪೂಜೆ ಮುಖ್ಯವಾದುದು. ಹಬ್ಬದ ಹಿಂದಿನ ದಿನವೇ ಕಾಡುಗಳಿಗೆ ಹೋಗಿ ಅರವತ್ತು ಬಗೆಯ ಸೊಪ್ಪುಗಳನ್ನು, ನೂಲೆ ಗೆಣಸುಗಳನ್ನು ತರುತ್ತಾರೆ. ಸೊಪ್ಪುಗಳನ್ನೆಲ್ಲ ಸೇರಿಸಿ ಮಾಡಿದ ಪಲ್ಯಕ್ಕೆ 'ಬೆರಕೆ ಸೊಪ್ಪಿನ ಪಲ್ಯ' ಎಂದು ಹೆಸರು. ಹಾಗೆಯೇ ಅಣಂಬಲಿ, ಕೆಸುವಿನ ಕೊಟ್ಟೆ ಹಿಟ್ಟು, ಕೊಚ್ಚು ಮೀನಿನ ಪಲ್ಯ ಇತ್ಯಾದಿಯಾಗಿ ಅನೇಕ ಭಕ್ಷ್ಯ ಭೋಜನಗಳನ್ನು ಮಾಡುತ್ತಾರೆ. ಜೊತೆಗೆ ಹಬ್ಬದ ಹಿಂದಿನ ದಿನ ಎಂದಿನಂತೆ 'ದೊಡ್ಡ ಬೇಟೆ ಸೇರಿದಾಗ 'ಶಿಕಾರಿಯಾಗಿದ್ದರೆ' 'ಅದರ ಪಕಾರವೂ ಇರುತ್ತದೆ.'[17] 'ಕಳಮಶ್ರೀ' ಎಂದರೆ ಭೂಮಿಯನ್ನು ಪೂಜಿಸುವುದು, ಆ ದಿನ ಭತ್ತದ ಗದ್ದೆಗೆ ಮೊದಲ ಪೂಜೆ ನಡೆಯುವುದು ಮತ್ತು ಒಂದಷ್ಟು ಭತ್ತದ ಗೊನೆಗಳನ್ನು ತಂದು ಮನೆಯ ಹೊಸ್ತಿಲಿಗೆ ಕಟ್ಟುವುದು ವಾಡಿಕೆಯಾಗಿತ್ತು. ಮತ್ತೊಂದು ವಿಶೇಷವೆಂದರೆ 'ಕಳಮಶ್ರೀಗೆ ಜೈನ ಮೇಲೋಗರಗಳನ್ನೇ

ನಿವೇದಿಸುತ್ತಾರೆ. ಹಬ್ಬದ ದಿನ ಉಷಃ ಕಾಲಕ್ಕೆ ಮೊದಲೇ ಗದ್ದೆಗಳಿಗೆ ಹೋಗಿ ಭತ್ತದ ಪೈರನ್ನು ಹೂವು, ಹಣ್ಣು, ಕರ್ಪೂರ, ಗಂಧ, ಜಾಗಟೆ, ಗಂಟೆ, ಆರತಿಗಳಿಂದ ವಿಧಿವತ್ತಾಗಿ ಅರ್ಚಿಸುತ್ತಾರೆ. ಕಳಮಶ್ರೀಯ ಆರಾಧನೆಯ ಜೊತೆಗೆ ಕಲೋಪಾಸನೆಯೂ ಆಗುತ್ತದೆ. ಜಡಜಗತ್ತು ಸಸ್ಯಾದಿಗಳೂ ತತ್ತ್ವತಃ ಚೈತನ್ಯವೇ ಆದುದರಿಂದ ವಂದನೀಯ ಎಂಬುದು ಆ ಪೂಜೆಯ ಅವ್ಯಕ್ತ ಬೋಧೆ"[18]

ತೀರ್ಥಹಳ್ಳಿಯಲ್ಲಿ ಪ್ರತಿ ವರ್ಷವೂ ನಡೆಯುತ್ತಿದ್ದ 'ಎಳ್ಳಾಮಾಸ್ಯೆ' ಜಾತ್ರೆಯ ಉಲ್ಲೇಖ ಕುವೆಂಪುರವರ ಕಾದಂಬರಿಯಲ್ಲಿ ಬರುತ್ತದೆ. ತುಂಗಾನದಿಯ ದಂಡೆಯ ಮೇಲಿರುವ ತೀರ್ಥಹಳ್ಳಿ ಶ್ರೀರಾಮಲಿಂಗೇಶ್ವರ ದೇವಾಲಯವು ಪ್ರಾಚೀನತೆ ಮತ್ತು ವಸ್ತು ರಚನೆಯ ದೃಷ್ಟಿಯಿಂದ ಐತಿಹಾಸಿಕವಾದುದು. ಜಾತ್ರೆಯ ವಿಶಿಷ್ಟತೆಯಿಂದ ಎಲ್ಲೆಡೆಗೂ ಪ್ರಖ್ಯಾತವಾದುದು. ಜಾತ್ರೆ ನಿಮಿತ್ತ ತೀರ್ಥಸ್ನಾನ, ತೆಪ್ಪೋತ್ಸವ, ರಥೋತ್ಸವ, ಅಭಿಷೇಕ, ಪೂಜೆ, ಅನ್ನಸಂತರ್ಪಣೆ, ಬಯಲಾಟ, ಯಕ್ಷಗಾನ ಕುಣಿತಗಳಿಂದ ಅಸಂಖ್ಯಾತ ಜನರನ್ನು ಆಕರ್ಷಿಸುತ್ತಿತ್ತು, ಸತತವಾಗಿ ಎಂಟು ಹತ್ತು ದಿನಗಳ ಕಾಲ ಜಾತ್ರೆ ಅವ್ಯಾಹತವಾಗಿ ಸಾಗುತ್ತಿತ್ತು"[19] ಗುತ್ತಿ ತನ್ನ ಹೆಂಡತಿ ತಿಮ್ಮಿಯೊಡನೆ ತುಂಗಾನದಿಯನ್ನು ದಾಟಲು ಕಾಯುತ್ತಿದ್ದಾಗ; "ಅವನ ಸಂಕುಚಿತ ಜೀವನದ ಹದಿನೆಂಟೊ ಇಪ್ಪತ್ತೊ ವರ್ಷಗಳಲ್ಲಿ, ಒಮ್ಮೆಯದರೂ ಅವನು 'ಎಳ್ಳಾಮಾಸೆ'ಯ ಜಾತ್ರೆಗಾದರೂ ತೀರ್ಥಹಳ್ಳಿಯಂತಹ 'ದೂರದೇಶಕ್ಕೆ' ಬಂದವನಲ್ಲ ಹೊಲೆಯನಾಗಿದ್ದ ಅವನಿಗೆ ಈ ಜನ್ಮದಲ್ಲಿ ಪರಶುರಾಮ ತೀರ್ಥದ ಸ್ನಾನವಂತೂ ಸರ್ವಥಾ ಅಲಭ್ಯವಾದುದರಿಂದ ಅಂತಹ ಅಗಮ್ಯಸ್ಥಾನಕ್ಕೆ ಏರಲು ಅವನೆಂದೂ ಆಶಿಸಿರಲಿಲ್ಲ."[20] ಈ ವಿವರಣೆಯಿಂದ ಮಲೆನಾಡಿನ ದೇಸಿಯ ಬದುಕಿನಲ್ಲಿ 'ಎಳ್ಳಾಮಾಸೆ' ಜಾತ್ರೆ, ಪವಿತ್ರಸ್ನಾನ ಮುಂತಾದ ಧಾರ್ಮಿಕ ಆಚರಣೆಗಳು ನಡೆಯುತ್ತಿದ್ದುದನ್ನು ತಿಳಿಯಬಹುದು.

ಹಿಂದಿನ ಕಾಲದಲ್ಲಿ ಧಾರ್ಮಿಕ ಸ್ಥಳಗಳಿಗೆ ಪ್ರವಾಸ ಹೋಗುವುದು ದೇಸಿಯ ಬದುಕಿನಲ್ಲಿ ಸಾಮಾನ್ಯವಾಗಿತ್ತು. ತಮ್ಮ ಕಷ್ಟನಷ್ಟಗಳ ಪರಿಹಾರಕ್ಕೆ ದೂರದ ಧರ್ಮಸ್ಥಳ, ತಿರುಪತಿ ಮುಂತಾದ ಧಾರ್ಮಿಕ ಸ್ಥಳಿಗಳಿಗೆ ತೀರ್ಥಯಾತ್ರೆ ಕೈಗೊಂಡು ಹರಕೆ ಪೂಜೆ ಸಲ್ಲಿಸಿ ಬರುತ್ತಿದ್ದರು. ಕುವೆಂಪುರವರ ಎರಡೂ ಕಾದಂಬರಿಗಳಲ್ಲಿ ತೀರ್ಥಯಾತ್ರೆಗಳ ಬಗ್ಗೆ ಉಲ್ಲೇಖವಿದೆ. ಮಲೆಗಳಲ್ಲಿ ಮದುಮಗಳು ಕಾದಂಬರಿಯ ಹಳೇಮನೆ ದೊಡ್ಡಣ್ಣಹೆಗ್ಗಡೆ ತಿರುಪತಿಗೆ ತೀರ್ಥಯಾತ್ರೆ ಕೈಗೊಂಡು ಬರದಿರುವ ಬಗ್ಗೆ ಪ್ರಸ್ತಾಪವಿದೆ. "ತಿರುಪತಿಗೆ ಹೋದೋರು ಹಿಂದಕ್ಕೆ ಬರಾದೂ ಉಂದೆ, ನೆರೇ ಹೊಳೀಗೆ ಬಿದ್ದೋರು ದಡ ಹತ್ತಾದು ಉಂಟೆದೆ ಅದೇನು ತೀರ್ಥಹಳ್ಳಿ ಎಳ್ಳಮಾಸೆಗೆ ಹೋಗಿ ಬಂದ ಹಾಂಗೇನು? ಎಷ್ಟು ದೂರ ಏನು ಕತೆ! ಕಳ್ಳಕಾಕರು ಕಾಡು ಕಾಯಿಲೆ ಎಲ್ಲ ದಾಟಿಕೊಂಡು

ಹೋದರೂ ಹಿಂದಕ್ಕೆ ಬರಾದುಂಟೇ? ತಿಮ್ಮಪ್ಪನ ಪಾದವೇ ಗತಿ......!"[21] ಹೂವಳ್ಳಿ ವೆಂಕಟಣ್ಣ ಹೇಳುವ ಈ ಮಾತಿನಲ್ಲಿ ಅಂದಿನ ಕಾಲದಲ್ಲಿ ತೀರ್ಥಯಾತ್ರೆಗೆ ನಡೆದೊ, ಎತ್ತಿನಗಾಡಿಗಳ ಮೂಲಕವೋ ಹೋಗಬೇಕಾಗಿದ್ದು ಅನೇಕ ದಿನ ಅಥವಾ ತಿಂಗಳುಗಳ ಯಾತ್ರೆಯಾಗಿತ್ತು ಎಂಬುದಕ್ಕೆ ಸಾಕ್ಷಿಯಾಗಿದೆ. ದೊಡ್ಡಣ್ಣಹೆಗ್ಗಡೆ ತನ್ನ ಹೆಂಡತಿಯ ದೀರ್ಘಕಾಲದ ಖಾಯಿಲೆ ಗುಣವಾಗಲೆಂದು ಮತ್ತು ಕಲ್ಲೂರು ಜೋಯಿಸರು ಆಕೆಗೆ ಒಂದು ಕೆಟ್ಟ ಕಂಟಕವಿದೆಯೆಂದು ಹೊನ್ನಿನ ಗೋದಾನ ಅಥವಾ ತೀರ್ಥಯಾತ್ರೆಯಂತಹ ದೊಡ್ಡ ಹರಕೆ ಹೊತ್ತರೆ ವಿಧಿಯ ಕ್ರೌರ್ಯ ಸೌಮ್ಯತರವಾಗಬಹುದೆಂದು ಸೂಚಿಸುತ್ತಾರೆ. ದೊಡ್ಡಣ್ಣಹೆಗ್ಗಡೆ ಜೋಯಿಸರು ಹೇಳಿದಂತೆ ತಿರುಪತಿಗೆ ಹರಕೆ ಹೊರುತ್ತಾರೆ. "ಆ ಶ್ರದ್ಧಾ ಭಕ್ತಿಗಳ ಮಹಿಮೆಯಿಂದಲೇ ಔಷಧೋಪಚಾರಗಳ ಪ್ರಭಾವದಿಂದಲೇ ರಂಗಮ್ಮನಿಗೆ ರೋತೆ ತಪ್ಪಿ ಕ್ಷೇಮದಿಂದಲೇ ಗಂಡುಮಗುವನ್ನು ಹೆತ್ತಳು ಧರ್ಮು ನಾಲ್ಕನೆ ವರ್ಷದವನಿದ್ದಾಗ ಆ ಪ್ರಾಂತದ ಒಂದು ತಂಡ ತಿರುಪತಿ ಯಾತ್ರೆಗೆ ಹೊರಡಲು ಸಿದ್ದತೆ ಮಾಡಿತು. ದೊಡ್ಡಣ್ಣಹೆಗ್ಗಡೆಯೂ ದೇವರಿಗೆ ಒಪ್ಪಿಸುವ ತಮ್ಮ ಮನೆಯ ಕಾಣಿಕೆಯೊಡನೆ ಯಾತ್ರಿಕರೊಡನೆ ಹೊರಟರು. ಹೋದವರು ಹಿಂದಕ್ಕೆ ಬರಲಿಲ್ಲ"[22] ತೀರ್ಥಯಾತ್ರೆಗೆ ಸಾಮೂಹಿಕವಾಗಿ ಹೋಗುತ್ತಿದ್ದುದು ಅಂದಿನ ದೇಸಿಯ ಬದುಕಿನಲ್ಲಿತ್ತು ಮತ್ತು ಹರಕೆ ಹೋರುವುದು, ಕಾಣಿಕೆ ಅರ್ಪಿಸುವುದು, ತೀರ್ಥಯಾತ್ರೆಯ ಉದ್ದೇಶವಾಗಿತ್ತು ಎನ್ನುವುದನ್ನು ಕಾಣಬಹುದು.

<u>ಕಾನೂರು ಹೆಗ್ಗಡಿತಿ</u> ಕಾದಂಬರಿಯಲ್ಲಿ ಮುತ್ತಳ್ಳಿ ಮತ್ತು ಕಾನೂರು ಮನೆತನಗಳಿಗೆ ಹಿಡಿದಿದ್ದ ಶನಿಯನ್ನು ಬಿಡಿಸುವುದಕ್ಕೆ ವೆಂಕಪ್ಪಯ್ಯ ಜೋಯಿಸರು ಧರ್ಮಸ್ಥಳಕ್ಕೆ ಯಾತ್ರೆ ಹೋಗುವ ಉಪಾಯವನ್ನು ಸೂಚಿಸಿದ್ದರು. ಶಾಮಯ್ಯಗೌಡರೂ ಚಂದ್ರಯ್ಯಗೌಡರೂ ಅದಕ್ಕೆ ಸಮ್ಮತಿ ಸೂಚಿಸಿದ್ದರು"[23] ಹೀಗೆ ಹರಕೆ ತೀರಿಸಲು, ಪೂಜೆ ಮಾಡಿಸಲು, ಸಂಪ್ರದಾಯ ಪೂರೈಸಲು ಯಾತ್ರೆ ಮಾಡುತ್ತಿದ್ದರು. "ಅಂದಿನ ದಿನಗಳಲ್ಲಿ ಉಡುಪಿ, ಶೃಂಗೇರಿ, ಧರ್ಮಸ್ಥಳ, ತಿರುಪತಿಗಳಿಗೆ ತೀರ್ಥಯಾತ್ರೆ ಕೈಗೊಳ್ಳುತ್ತಿದ್ದುದು ಸಾಮಾನ್ಯವೆನಿಸಿತ್ತು. ಈ ಯಾತ್ರೆಗಳು ಕೆಲವು ದಿನಗಳಿಂದ, ಒಂದೆರಡು ತಿಂಗಳವರೆಗೂ ಹಿಡಿಯುತ್ತಿದ್ದವು. ಆಗೀಗ ಎಂದರೆ ಐದಾರು ವರ್ಷಗಳಿಗೆ ಒಮ್ಮೆ ತೀರ್ಥಯಾತ್ರೆಗೆ ಹೋಗಿಬರುತ್ತಿದ್ದರು"[24] ಹೀಗೆ ತೀರ್ಥಯಾತ್ರೆ ದೇಸಿಯ ಬದುಕಿನ ಭಾಗವಾಗಿತ್ತು ಎಂಬುದನ್ನು ತಿಳಿಯಬಹುದು.

5.3 ರೂಢಿ, ಪದ್ಧತಿ ಮತ್ತು ನಂಬಿಕೆಗಳು:

ರೂಢಿ/ಪದ್ಧತಿ ಮತ್ತು ನಂಬಿಕೆಗಳು ಅನೌಪಚಾರಿಕ ಸಾಮಾಜಿಕ ನಿಯಂತ್ರಣದ ಸಾಧನಗಳಲ್ಲೊಂದು ರೂಢಿಗಳು ಸಾರ್ವತ್ರಿಕವಾಗಿಯೂ ಸರ್ವವ್ಯಾಪಕವಾಗಿಯೂ ಇವೆ. ಬಹುಕಾಲದಿಂದಲೂ ಪುನರಾವರ್ತನೆಗೊಳ್ಳುತ್ತಾ ಆಚರಣೆಯಲ್ಲಿ ಬಂದಿರುವ ವಿಧಾನಗಳೇ 'ರೂಢಿ' ಅಥವಾ 'ಪದ್ಧತಿ'ಗಳೆನಿಸಿಕೊಳ್ಳುತ್ತವೆ. ಜನರ ಸ್ಥಾಪಿತ ಅಭ್ಯಾಸಗಳು ಮತ್ತು ಆಚರಣೆಗಳನ್ನು ಪದ್ಧತಿಗಳು ಎಂದು ಕರೆಯಬಹುದು. ಸಮಾಜಕ್ಕೆ ಒಪ್ಪಿತವಾದ ರೀತಿಯಲ್ಲಿ ವರ್ತಿಸುವ ವಿಧಾನಗಳೇ ಪದ್ಧತಿಗಳು.

ಅನಾದಿ ಕಾಲದಿಂದಲೂ ಪ್ರತಿಯೊಂದು ಸಮಾಜದಲ್ಲಿ ಕೆಲವೊಂದು ರೂಢಿ-ಸಂಪ್ರದಾಯಗಳು ಜನರಲ್ಲಿ ಬೆಳೆದು ಬಂದಿರುವುದು ಸಾಮಾನ್ಯವಾಗಿದೆ. ರೂಢಿ, ಸಂಪ್ರದಾಯಗಳಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನತೆಯಿದ್ದರೂ ಅವುಗಳಲ್ಲಿರುವ ನಂಬಿಕೆ ಮತ್ತು ಅನುಕರಣೆ ಸಾಮಾನ್ಯವಾಗಿರುತ್ತದೆ. ಹಾಗೆಯೇ ನಂಬಿಕೆಗಳೆಂದರೆ "ತಾವು ಕಂಡುಕೊಂಡ ಇಲ್ಲವೆ ಪರಂಪರೆಯಿಂದ ಪಡೆದುಕೊಳ್ಳುವ ಕೆಲವು ವಿಚಾರಗಳಲ್ಲಿ ಜನರು ಹೊಂದಿರುವ ಆಳವಾದ ಶ್ರದ್ಧೆ-ವಿಶ್ವಾಸವನ್ನು 'ನಂಬಿಕೆ' ಎನ್ನಬಹುದು.[25] ಹೀಗೆ ರೂಢಿ ಸಂಪ್ರದಾಯ ನಂಬಿಕೆಗಳು ಪೀಳಿಗೆಯಿಂದ ಪೀಳಿಗೆಗೆ ಉಳಿದುಕೊಂಡು ಬಂದು ಮನುಷ್ಯನ ಬದುಕಿನ ಅವಿಭಾಜ್ಯ ಅಂಗಗಳಾಗಿವೆ. ಗ್ರಾಮೀಣ ಪ್ರದೇಶದಲ್ಲಿಯೂ ರೂಢಿ-ಸಂಪ್ರದಾಯ, ನಂಬಿಕೆಗಳು ಮಾನವನ ಅಸ್ತಿತ್ವಕ್ಕೆ ಮತ್ತು ಏಳಿಗೆಗೆ ಕಾರಣವಾಗಿ ಮುಂದೆ ಆ ನಂಬಿಕೆಗಳೇ ರೂಢಿಯಾಗಿ ಬೆಳೆದುಕೊಂಡು ಬಂದಿವೆ.

ಕುವೆಂಪುರವರ ಕಾದಂಬರಿಗಳಲ್ಲಿ ದೇಸಿಯ ಬದುಕಿಗೆ ಪ್ರೇರಕ ಶಕ್ತಿಯಾಗಿ, ಆಸರೆಯಾಗಿ ಹಲವಾರು ನಂಬಿಕೆಗಳು ಅಸ್ತಿತ್ವದಲ್ಲಿದ್ದವು ಎನ್ನುವುದನ್ನು ಕಾಣುತ್ತೇವೆ. ಆಯಾ ಸಾಮಾಜಿಕ, ಭೌಗೋಳಿಕ ಪರಿಸರಕ್ಕೆ ಅನುಗುಣವಾಗಿ ಜೀವಾನುಭವಗಳಿಂದ ಪ್ರೇರಿತವಾಗಿ ಬೆಳೆದು ಬಂದಿರುವುದು ವಿಶಿಷ್ಟವಾಗಿದೆ. ಒಂದು ಉತ್ತಮ ಸಾಮಾಜಿಕ ಬದುಕಿಗೆ ಮಾನವ ಸಂಬಂಧಗಳ ಬೆಳವಣಿಗೆಗೆ, ಮಾನಸಿಕ ನೆಮ್ಮದಿಗೆ ನಂಬಿಕೆಗಳು ಸಹಕಾರಿಯಾಗಿವೆ. ಯಾವುದೇ ನಂಬಿಕೆಗಳ ಹಿಂದೆ ಅಪಾರವಾದ ಜೀವನಾನುಭವವಿದ್ದು ಬದುಕಿಗೆ ಒಂದು ಅರ್ಥವನ್ನು ಕಲ್ಪಿಸಿಕೊಟ್ಟಿದೆ ಎಂಬುದು ಸತ್ಯವಾಗಿದೆ.

<u>ಕಾನೂರು ಹೆಗ್ಗಡಿತಿ</u> ಕಾದಂಬರಿಯಲ್ಲಿ ನಿತ್ಯಜೀವನದಲ್ಲಿ ಬಳಕೆಯಲ್ಲಿದ್ದ ಅನೇಕ ನಂಬಿಕೆಗಳನ್ನು ಕಾಣಬಹುದು. ಅಣ್ಣಯ್ಯಗೌಡರು ತನ್ನ ನಾಲ್ಕನೆಯ ಹೆಂಡತಿಯನ್ನು

ಉಳಿಸಿಕೊಳ್ಳಲು ಚಂದ್ರಯ್ಯಗೌಡರ ಬಳಿಗೆ ಸಾಲ ತರಲು ಹೋಗಿ ವಾಪಸ್ಸು ಬರುವಾಗ: "ಸಮೀಪದ ಒಂದು ಮರದಲ್ಲಿ ಕಾಗೆ ಮತ್ತೆ ಕಾ ಕಾ ಕಾ ಎಂದು ಕರೆಯತೊಡಗಿತು. ಮುದುಕನು ಬೆಚ್ಚಿ ಬಿದ್ದು ನೋಡಿದನು...... ಕಾಗೆ ಕರ್ರಗೆ ಕುಳಿತು ಕೂಗುತ್ತಿತ್ತು...... ಸುಡುಗಾಡಿನ ಕಡೆಗೇ ಮುಖ ಹಾಕಿಕೊಂಡಿದೆ!"[26] ಮುದುಕ ಬೆಚ್ಚಿ ಹೋದನು, ಏಕೆಂದರೆ ಕಾಗೆ ಕೂಗುವುದು ಅಪಶಕುನ, ಸಾವಿನ ಸಂಕೇತ ಎಂದು ನಂಬಿದ್ದನು. ತನ್ನ ಕಷ್ಟ ನಷ್ಟಗಳಿಗೆಲ್ಲ ತಾನು ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮವೇ ಕಾರಣವೆನ್ನಲು "ವೇದ ಸುಳ್ಳಾದರೂ ಗಾದೆ ಸುಳ್ಳಾಗದು! ಎಲ್ಲಾ ಕರ್ಮದ ಫಲ, ಹಿಂದಿನ ಜನ್ಮದಲ್ಲಿ ಬೆನ್ನಿಗೆ ಹತ್ತಿದ್ದುದು ಸುಮ್ಮನೆ ಹೋಗುತ್ತದೆಯೆ?". ಈ ಮಾತು ಸ್ಥಳೀಯ ಜನರಲ್ಲಿ ಹಿಂದಿನ ಜನ್ಮದ ಬಗ್ಗೆ ಇದ್ದ ನಂಬಿಕೆಯನ್ನು ಸೂಚಿಸುತ್ತದೆ.[27]

ಮಲೆನಾಡಿನ ಪ್ರದೇಶದಲ್ಲಿ 'ಬಗಿನಿಕಟ್ಟಿ' ಕಳ್ಳು ಇಳಿಸುವುದು ಹಳೇಪೈಕದವರ ಕಸುಬಾಗಿತ್ತು. ಅದು ಅವರ ಹಕ್ಕು ಮತ್ತು ಬೇರೆಯವರು ಆ ಕಸುಬನ್ನು ಮಾಡಬಾರದು ಎಂಬ ನಂಬಿಕೆ ಕೂಡ ಜನರಲ್ಲಿತ್ತು. ಒಂದು ವೇಳೆ ಬೇರೆ ಜಾತಿಯವರು ಕಳ್ಳು ಇಳಿಸಿದ್ದೇ ಆದರೆ ಜಾತಿ ಭ್ರಷ್ಟರಾಗುತ್ತಿದ್ದರು ಮತ್ತು ದೆವ್ವ ಭೂತಗಳಿಗೆ ಬಲಿಯಾಗುತ್ತಿದ್ದರು ಎಂಬ ನಂಬಿಕೆಯಿತ್ತು. ಹಳೇಪೈಕದವ ತಿಮ್ಮ ಅ ಕಸುಬನ್ನು ಮಾಡುತ್ತಿದ್ದನು. ಅದು ಅವನ ಜಾತಿಯ ಗುಟ್ಟಾಗಿತ್ತು. ಬೇಲರು ಕುಂಬಾರರು, ಮಾರಾಟಿಗರು, ಸೆಟ್ಟರು, ಒಕ್ಕಲಿಗರು ಇವರು ಯಾರಿಗೂ ಜಾತಿ ಪದ್ಧತಿಯಂತೆ ಬಗಿನಿ ಕಟ್ಟುವ ಹಕ್ಕಿಲ್ಲ. ಆ ಹಕ್ಕು ಹಳೇಪೈಕದವರದು. ಆದ್ದರಿಂದಲೇ ಕಾನೂರಿನಲ್ಲಿ ಹಳೇಪೈಕದ ತಿಮ್ಮನೊಬ್ಬನೇ ಬಗಿನಿ ಮರಗಳ ಆಡಳಿತಕ್ಕೆ ಸರ್ವಾಧಿಕಾರಿಯಾಗಿದ್ದನು. ಬೇರೆ ಯಾರಾದರೂ ಆ ಕೆಲಸಕ್ಕೆ ಕೈ ಹಾಕಿದ್ದರೆ ಕೂಡಲೆ ಜಾತಿಬಾಹಿರರಾಗಿ ಬಹಿಷ್ಕೃತರಾಗುತ್ತಿದ್ದರು. ಇದು ಮಲೆನಾಡಿನಲ್ಲಿ ಹಿಂದೆ ಇದ್ದ ನಂಬಿಕೆ.[28] ಬೇಸಾಯದ ಪ್ರಾರಂಭದ ದಿನದಲ್ಲಿ ನೇಗಿಲು ಮುರಿಯುವುದೆಂದರೆ ಮಹಾ ಅಪಶಕುನವೆಂದು ಮಲೆನಾಡಿನ ಸ್ಥಳೀಯರ ನಂಬುಗೆಯಾಗಿತ್ತು.'[29] ಕಾಗೆ ಅಡ್ಡ ಬಂದರೆ, ನಡೆಯುವಾಗ ಕಲ್ಲು ಎಡಗಿದರೆ ಅಪಶಕುನವೆಂಬ ನಂಬಿಕೆ ಕೂಡ ಅವರಲ್ಲಿತ್ತು.[30] ಜಾತಕ ನೋಡಿ ಲಗ್ನ ನಿಶ್ಚಯ ಮಾಡುವುದು ದೇಸಿಯ ಸಂಸ್ಕೃತಿಯಲ್ಲಿ ರೂಢಿಯಾಗಿತ್ತು.[31]

ತಲೆಯು ಬಾಗಿಲ ಚೌಕಟ್ಟಿಗೆ ಬಡಿದರೆ ಅಪಶಕುನವೆಂಬ ನಂಬಿಕೆ. <u>ಕಾನೂರು ಹೆಗ್ಗಡತಿ</u> ಕಾದಂಬರಿಯ "ಕೃಷ್ಣಪ್ಪ ಅಡುಗೆಮನೆ ದಾಟುತ್ತಿದ್ದಾಗ ಹೊಸ್ತಿಲು ಎಡವಿದ್ದನ್ನು ನೋಡಿ ತಾಯಿ ಅವನನ್ನು ಮತ್ತೆ ಹಿಂದಕ್ಕೆ ಕರೆದು, ಹುಷಾರ್ ಕಣೋ!..."[32] ಎನ್ನುವ ಎಚ್ಚರಿಕೆಯ ಮಾತು ಸೂಚಿಸುತ್ತದೆ. ದೃಷ್ಟಿ ಬೆಳಗಿಸುವ ನಂಬಿಕೆ ದೇಸಿಯ ಬದುಕಲ್ಲಿ ರೂಡಿಯಲ್ಲಿತ್ತು. <u>ಕಾನೂರು</u>

ಹೆಗ್ಗಡಿತಿಯಲ್ಲಿ ಸೀತೆ ಮತ್ತು ಆಕೆಯ ತಂಗಿ ಲಕ್ಷ್ಮಿ ಹೂವಯ್ಯನ ಮನೆಗೆ ಬಂದಾಗ ನಾಗಮ್ಮನವರು "ಚಿಕ್ಕಮಕ್ಕಳು ನೆಂಟರ ಮನೆಗೆ ಬಂದಾಗ ಮಾಡುವ ಪದ್ಧತಿಯಂತೆ ಕೆಂಗೂಳಿಗೆ ಚುಚ್ಚಿದ ಕಕ್ಕಡದುರಿಯನ್ನು ಲಕ್ಷ್ಮಿಗೆ ಆರತಿಯೆತ್ತಿ ಓಕುಳಿಗೆ ಕೆಂಗೆಂಡಗಳನ್ನು ಹಾಕಿ ಚ್ಜುಯ್ ಎಂದು ಸದ್ದು ಮಾಡಿ ಹಣೆಗೆ ಕಕ್ಕಡದ ಬತ್ತಿಯಿಂದ ತೆಗೆದ ಕರಿಮಸಿಯನ್ನು ಹಚ್ಚಿ, 'ದಿಸ್ಟಿ ಬೆಳಗಿದ' ತರುವಾಯ ಎಲ್ಲರೂ ಮನೆಯೊಳಗೆ ಹೋದರು"[33] ದೃಷ್ಟಿ ಬೆಳಗಿಸುವ ಪದ್ಧತಿ ಗ್ರಾಮೀಣ ಪ್ರದೇಶದಲ್ಲಿ ರೂಡಿಯಲ್ಲಿದ್ದು ಇದರಿಂದ ಚಿಕ್ಕಮಕ್ಕಳಿಗೆ ಯಾವುದೇ ದುಷ್ಟ ಶಕ್ತಿಗಳ ಕಾಟವಿರುವುದಿಲ್ಲ ಎಂಬ ನಂಬಿಕೆ ಕಾರಣವಾಗಿತ್ತು. ಹಣೆಬರಹ ಅಥವಾ ವಿಧಿ ಬರೆದಿದ್ದನ್ನು ತಿದ್ದಲು ಯಾರಿಗೂ ಸಾಧ್ಯವಿಲ್ಲ. ಅವರವರ ಹಣೆಯಲ್ಲಿ ಬರೆದಂತೆ ಆಗುತ್ತದೆ ಎಂಬ ನಂಬಿಕೆ ದೇಸಿಯ ಬದುಕಿನ ಭಾಗವಾಗಿತ್ತು ಎನ್ನಬಹುದು.[34]

ರೂಢಿ ನಂಬಿಕೆಗಳು ದೇಸಿಯ ಬದುಕಿನ ಭಾಗವಾಗಿದ್ದವು ಎಂಬುವುದನ್ನು ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿಯೂ ಸಹ ಕಾಣಬಹುದು. ಗುತ್ತಿ ಕಾಡಿನಲ್ಲಿ ನಡೆದು ಹೋಗುವಾಗ ಯಾವುದೋ ಒಂದು ಜಂತು ಸದ್ದು ಮಾಡಿದ ಹಾಗಾಯಿತು. ಗುತ್ತಿ ತಟಕ್ಕನೆ ಬೆಚ್ಚಿ, "ಇದರ ಮನೆ ಹಾಳಾಗ್ಲೊ! ಈ ನರಿಯಿಂದ ಸುಖಾ ಇಲ್ಲ!" ಎನ್ನುತ್ತಾ ಬಿರಬಿರನೆ ನಡೆದನು.... 'ಈ ನರಿಯಿಂದ ಸುಖಾ ಇಲ್ಲಾ'! ಎಂದು ಅವನು ಹೇಳದಿದ್ದರೂ ಅವನ ಮಾತು ಮನಸ್ಸಿನಂತಿರಲಿಲ್ಲ. "ಹುಲಿ" ಎನ್ನುವುದಕ್ಕೆ ಬದಲಾಗಿ "ನರಿ" ಎಂದಿದ್ದನು. ಹುಲಿಯನ್ನು ನರಿ ಎಂದು ಕೂಗಿದರೆ ಈ ಮನುಷ್ಯ ತನ್ನನ್ನು ನರಿಗೆ ಸಮಾನವಾಗಿ ಕಾಣುತ್ತಾನೆ ಎಂದು ತಿಳಿದು ಹುಲಿ ಹೆದರುತ್ತದಂತೆ, "ಹಾವು ಕಚ್ಚಿದೆ ಎಂದರೆ ಅಪಶಕುನವಾಗುತ್ತದೆಂದು "ಬಳ್ಳಿ ಮುಟ್ಟಿದೆ" ಎನ್ನುತ್ತಾರಲ್ಲ ಹಾಗೆ".[35] ಚಿನ್ನಮ್ಮಳ ಅಜ್ಜಿಯು ನಕ್ಕಾಗ ಎಲೆಯಡಿಕೆಯ ಕೆಂಪು ಉಗುಳು ಹಾರಿ ಚಿನ್ನಮ್ಮನ ಮುಖಕ್ಕೆ ಸಿಡಿಯಿತು, ಅಜ್ಜಿ ಒಡನೆಯ ಅಮಂಗಳ ಪರಿಹಾರಾರ್ಥವಾಗಿ ಒಳ್ತು! ಒಳ್ತು! ಎಂದು ತನ್ನ ಸೀರೆ ಸೆರಗಿನಿಂದ ಮೊಮ್ಮಗಳ ಮೋರೆಯನ್ನು ಒರೆಸಿ ಮುದ್ದಿಸಿದಳು"[36] ಅಮಂಗಳ, ಅಶುಭ, ಅಪಶಕುನ ಮುಂತಾದ ಕೇಡನ್ನುಂಟು ಮಾಡುವ ವಿಷಯಗಳಿಂದ ಪಾರಾಗಲು 'ಒಳಿತ್ತು' ಎಂದು ಹೇಳುವುದು ದೇಸಿಯ ಬದುಕಿನಲ್ಲಿತ್ತು ಎನ್ನುವುದನ್ನು ಕಾಣುತ್ತೇವೆ. ಮಕ್ಕಳಿಗೆ ಖಾಯಿಲೆ ಬಂದರೆ ಗುಣವಾಗಲೆಂದು ಜೋಯಿಸರ ಕೈಲಿ ಚೀಟಿ ಬೂದಿ ತರಿಸುವುದು ನಿಮಿತ್ತ ನೋಡಿಸುವುದು, ಸತ್ಯನಾರಾಯಣ ವ್ರತ ಮಾಡಿಸುವುದು ಮತ್ತು ಸಿದ್ಧರಮಠದಿಂದ ತಾಯಿತ ತರಿಸಿ ಕಟ್ಟುವುದು ವಾಡಿಕೆಯಾಗಿತ್ತು.[37] ಆಗದವರು ಕೇಡನ್ನುಂಟು ಮಾಡಲು ಮಾಟ ಮಂತ್ರ ಮಾಡಿಸಿದ್ದಾರೆ ಎಂದು ಸಂಶಯ ಪಡುವುದು ಸಹ ಸ್ಥಳೀಯರಲ್ಲಿ ನಂಬಿಕೆಯಾಗಿತ್ತು.[38]

ಮೇಲ್ಜಾತಿಯವರು ಅಸ್ಪೃಶ್ಯರ ಕೇರಿಯನ್ನು ಪ್ರವೇಶಿಸಬಾರದು ಎಂಬ ನಂಬಿಕೆ ಮತ್ತೊಂದಾಗಿತ್ತು ತಿಮ್ಮಪ್ಪ ಹೆಗ್ಗಡೆ ಕೆಲಸಕ್ಕೆ ಜೀತದಾಳುಗಳನ್ನು ಕರೆಯಲು 'ಹೆಗ್ಗಡೆರ ದಿಬ್ಬ' ಅಥವಾ ಒಡೇರ ದಿಬ್ಬದ ಮೇಲೆ ನಿಂತು ಕರೆಯುವುದು ವಾಡಿಕೆ. "ಅಸ್ಪೃಶ್ಯರಾಗಿದ್ದ ಹೊಲೆಯರ ಕೇರಿಯೊಳಗೆ ಒಡೆಯರ ಮನೆಯವರಾರು ಕಾಲಿಡುವುದಿಲ್ಲ ಒಂದು ವೇಳೆ ಅವರೇ ಕೇರಿ ಒಳಗೆ ನುಗ್ಗಿದ್ರೆ, ಇಡೀ ಕೇರಿಗೆ ಅಪಶಕುನ! ನಮ್ಮ ದೆಯ್ಯ ದ್ಯಾವರಿಗೆ ಮುಟ್ಟು ಚಿಟ್ಟಾದ್ರೆ ಕೇರಿಗೆ ಕೇರೀನೆ ತೆಗೆದುಬಿಡ್ತವೆ!"[39] ಎಂಬ ನಂಬಿಕೆ ಅಸ್ಪೃಶ್ಯರಲ್ಲಿ ಸಾಮಾನ್ಯವಾಗಿತ್ತು. ಮುಟ್ಟಾದ ಹೆಂಗಸರು ಮನೆಯ ಹೊರಗೆ ಇರಬೇಕು ಎನ್ನುವ ನಂಬಿಕೆ ಸ್ಥಳೀಯರಲ್ಲಿ ಆಚರಣೆಯಲ್ಲಿತ್ತು. <u>ಮಲೆಗಳಲ್ಲಿ ಮದುಮಗಳು</u> ಕಾದಂಬರಿಯ ಮಂಜಮ್ಮ ತನ್ನ ಅತ್ತಿಗೆ ಮುಟ್ಟಾಗಿದ್ದು ಹಿತ್ತಲ ಕಡೆಯ ಮೂಲೆಯಲ್ಲಿ ಕುಳಿತಿದ್ದಾರೆ ಎಂದು ಹೇಳಿದಾಗ ಸುಬ್ಬಣ್ಣ ಹೆಗ್ಗಡೆ "ಮೀಯಾಕೆ ಮೊದಲೆ ಒಳಗ್ಗಿಳಗೆ ಬಂದು ಬಿಟ್ಟಾಳು! ದೇವರ ಕಾಣಿಕೆ ಡಬ್ಬ ಇಟ್ಟೀವಿ ಮ್ಯಾಲೆ ತಿರುಪತಿ ತಿಮ್ಮಪ್ಪ ಈಗ ಕೊಟ್ಟ ಶಿಕ್ಷೇನೆ ಸಾಕಾಗಿದೆ. ಮತ್ತೆ ಇನ್ನೂ ಏನಾದ್ರೂ ಆದಾತು"[40] ಮುಟ್ಟು ಚಿಟ್ಟುಗಳಾಗಿದ್ದು ಮನೆ ಪ್ರವೇಶಿಸಿದರೆ ಅಶುಭವಾಗುತ್ತದೆ ಮತ್ತು ಮನೆಗೆ ಕೇಡಾಗುತ್ತದೆ ಎಂಬ ನಂಬಿಕೆ ದೇಸಿಯ ಬದುಕಿನಲ್ಲಿತ್ತು. ದೇವರ ಮುಂದಿನ ದೀಪ ಆಕಸ್ಮಿಕವಾಗಿ ಆರಿದರೆ ಕೇಡುಂಟಾಗುತ್ತದೆ ಎನ್ನುವ ಭೀತಿಯನ್ನು ಶಂಕರಪ್ಪ ಹೆಗ್ಗಡೆ ವ್ಯಕ್ತಪಡಿಸುತ್ತಾರೆ ಸುಬ್ಬಣ್ಣ ಹೆಗ್ಗಡೆಯವರ ಜೀತದಾಳುಗಳು ಹಂದಿಯನ್ನು ಹಿಡಿಯಲು ಹೋದಾಗ ಅದು ಹೆದರಿ ತುಳಸಿಕಟ್ಟೆಯ ಮೇಲೆ ಹಾರಿತು, ದೇವರ ಮುಂದೆ ಹೊತ್ತಿಸಿಟ್ಟಿದ್ದ ನೀಲಾಂಜನಗಳೂ, ದೇವರಿಗೆ ಮುಡಿಸಿದ್ದ ಹೂವುಗಳೂ ಉರುಳಿ ಚೆಲ್ಲಾಪಿಲ್ಲಿಯಾಯಿತು. ದೀಪಗಳು ಆರಿಹೋದವು, ಆಗ ಶಂಕರಪ್ಪ ಹೆಗ್ಗಡೆ ತಡೆಯಲಾರದ ದುಃಖ ಭಯ ಅಮಂಗಳ ಶಂಕೆಯಿಂದ ಕಂಗೆಟ್ಟಂತೆ "ಅಯ್ಯೋ ಸೀತೂ, ನಮ್ಮ ಮನೆಯೆ ಹಾಳಾಯಿತಲ್ಲೇ! ದೇವರಿಗೆ ಹಚ್ಚಿಟ್ಟಿದ್ದ ದೀಪಾನೆ ಆರಿಸಿದನಲ್ಲೇ ನಮ್ಮ ದಾಯಾದಿ![41] ಎಂಬ ಮಾತುಗಳು ಜನರು ದೇವರಲ್ಲಿಟ್ಟಿದ್ದ ನಂಬಿಕೆ ಮತ್ತು ಭಯದ ಬಗ್ಗೆ ತಿಳಿಸುತ್ತವೆ.

'ಭೂತದ ಬನದಲ್ಲಿ' ಕೀಳುಜಾತಿಯವರು ಅಥವಾ ಅಸ್ಪೃಶ್ಯರು ಪ್ರವೇಶಿಸುವಂತಿರಲಿಲ್ಲ ಏಕೆಂದರೆ ಭೂತದ ಬನದೊಳಕ್ಕೆ ಮುಟ್ಟಾಳುಗಳು ಕಾಲಿಟ್ಟರೆ ಅವರಿಗೆ ಏನಾದರೂ ಕೇಡು ತಪ್ಪದು ಎಂಬ ನಂಬಿಕೆ ಬಲವಾಗಿತ್ತು: "ಅದರಲ್ಲಿಯೂ ಕನ್ನಡ ಜಿಲ್ಲೆಯಿಂದ ಬಂದವರಿಗೆ ಗಟ್ಟದ ಮೇಲಣ ದೆಯ್ಯಗಳೆಂದರೆ ಮಹಾಭಯ' ಮತ್ತು "ಮುಟ್ಟಾದ ಹೆಂಗಸರು, ಮರೆತಾದರೂ ಸರಿ, ಆ ಮಡಿನೆಲಕ್ಕೆ ಪ್ರವೇಶಿಸಿದರೆ ಅವರು ರಕ್ತಕಾರಿ ಸಾಯುತ್ತಾರೆ ಎಂಬ ಶಾಸ್ತ್ರವಾರ್ತೆ ಅನೇಕ ನಿದರ್ಶನ ಸಹಿತವಾಗಿ ಪ್ರಚಲಿತವಾಗಿತ್ತು".[42] ಇಂತಹ ಭಯದ ಹಿಂದೆ, ಕಾದಂಬರಿಕಾರರೇ ಹೇಳುವಂತೆ: "ಆ ಭಯದ ಬೇಲಿಕಟ್ಟಿ ಮಲೆನಾಡಿನ ಜಮೀನುದಾರರು ತಮ್ಮ ತೋಟ, ಗದ್ದೆ, ಹಿತ್ತಲುಗಳ ಫಸಲು

ರಕ್ಷಣೆ ಮಾಡಿಕೊಳ್ಳುತ್ತಿದ್ದರು. ಎಂತಹ ಕಾವಲೂ ಪೋಲೀಸರೂ ಕಾನೂನು ಮಾಡಲಾರದಷ್ಟು ಸಮರ್ಪಕವಾಗಿ"[43] ಕಾದಂಬರಿಕಾರರ ಮಾತುಗಳಲ್ಲಿ ಎಷ್ಟೊಂದು ಸತ್ಯವಿದೆ ಎಂದೆನಿಸುತ್ತದೆ.

ಮಲೆನಾಡಿನ ಪ್ರದೇಶದಲ್ಲಿದ್ದು ಮತ್ತೊಂದು ನಂಬಿಕೆ ಎಂದರೆ ಮೈಮೇಲೆ ದೆಯ್ಯ ಬರುವುದು. ಕಲ್ಲೂರಿನ ದೇವಸ್ಥಾನಕ್ಕೆ ಬೆಟ್ಟಳ್ಳಿಯ ಕುಟುಂಬದವರು ಹೋಗಿದ್ದಾಗ ಗತಿಸಿದ ದೊಡ್ಡಣ್ಣಹೆಗ್ಗಡೆಯ ಹೆಂಡತಿ ಇದ್ದಕ್ಕಿದ್ದ ಹಾಗೆ ಅಳಲು ಪ್ರಾರಂಭಿಸಿದಾಗ "ತಿರುಪತಿಗೆ ಹೋಗಿ ಸತ್ತು ಹೋದ ಹೆಗ್ಗಡೆಯ ಹೆಂಡ್ತಿಯಂತೆ!" ಅವಳಿಗೆ ಆಗಾಗ್ಗೆ ಹೀಗೆ ಮೈಮೇಲೆ ಬರುವುದು ವಾಡಿಕೆಯಂತೆ"[44] ಎನ್ನುತ್ತಾರೆ. ಅಂದಿನ ಮಲೆನಾಡಿನ ಪ್ರದೇಶದಲ್ಲಿ ಸತ್ತವರು ದೆವ್ವ, ದೆಯ್ಯದ ರೂಪದಲ್ಲಿ ಬೇರೆಯವರ ಮೈಮೇಲೆ ಬರುತ್ತದೆ ಎಂಬ ನಂಬಿಕೆಯಿತ್ತು. 'ಶಕುನದ ಹಕ್ಕಿ ಶುಭ-ಅಶುಭ ನುಡಿಯುವುದು' ಎಂಬ ನಂಬಿಕೆ ಕೂಡ ಪ್ರಚಲಿತದಲ್ಲಿತ್ತು. ದೊಡ್ಡಣ್ಣ ಹೆಗ್ಗಡೆಯವರು ಸತ್ತು ಹೋದ ಸುದ್ದಿ ಬಂದಾಗ ಹೊಲಗೇರಿಯಿಂದ ಆಳುಗಳ ಬಂದು ಸುಡುಗಾಡು ಪಟ್ಟಿಯಲ್ಲಿ ಕಟ್ಟಿಗೆ ಒಟ್ಟಿ ಸೂಡು ಮಾಡಲು ಹೋದಾಗ ಸಿದ್ದ "ಕಾಡಿನ ನಡುವೆಯಿಂದ ಒಂದು ಶಕುನದ ಹಕ್ಕಿ ವಿಕಾರವಾಗಿ ದನಿಗೈಯುತ್ತಿರುವುದನ್ನು ಆಲಿಸಿ, ತನಗೆ ತಾನೆಂಬಂತೆ ಅಂದು ಕೊಂಡನು ಹಾಳು ಹಕ್ಕಿ! ಮತ್ತೇನು ಕೇಡು ನುಡೀತಾ ಅದೆಯೋ...."[45] ಹೀಗೆ ದೇಸಿಯ ಬದುಕಿನಲ್ಲಿ ಹಳ್ಳಿಗರು ಶಕುನದ ಬಗ್ಗೆ ಇದ್ದ ನಂಬಿಕೆಯನ್ನು ಈ ಮಾತುಗಳು ಸೂಚಿಸುತ್ತವೆ.

ಸ್ಮಶಾನದ ಬಗ್ಗೆ ಸ್ಥಳೀಯರ ವಿವಿಧ ನಂಬಿಕೆಗಳು ದೇಸಿಯತೆಯ ಭಾಗವಾಗಿದ್ದವು. ಸುಡುಗಾಡಿನಲ್ಲಿ ರಾತ್ರಿಯ ಹೊತ್ತು ಮತ್ತು ಅಮಾವಾಸ್ಯೆಯಲ್ಲಿ ಯಾರೂ ಆ ದಾರಿಯಲ್ಲಿ ಓಡಾಡಲು ಧೈರ್ಯ ಮಾಡುತ್ತಿರಲಿಲ್ಲ. "ಹೊಲೆಯರ ಸಿದ್ದನಿಗೆ ಎಷ್ಟು ಸಲ ಕಾಣಿಸಿಕೊಂಡಿಲ್ಲ 'ಮಸಣಿ'? ಹಳೇ ಪೈಕದ ಹೂವಿಗೆ ಯಾವುದೋ ವಿಕಾರ ರೂಪವು ಹಿಂದಿನಿಂದ ಬಂದು ಸೆರಗು ಹಿಡಿದು ಎಳೆದ ಹಾಗೆ ಆಗಿರುವುದು. ಮಟ ಮಟ ಬೇಸಗೆಯ ಮಧ್ಯಾಹ್ನವಂತೂ ಅಲ್ಲಿ ರಣ ತಿರುಗಾಡುವುದು ಎಲ್ಲರಿಗೂ ಗೊತ್ತಿದ್ದ ವಿಷಯವೇ ಆಗಿತ್ತು?"[46] ಗ್ರಾಮೀಣ ಭಾಗದ ಜನರು ದೆವ್ವ, ಮಸಣಿ, ಕೊಳ್ಳಿ ದೆವ್ವ ರಣ ಮುಂತಾದ ಶಕ್ತಿಗಳಲ್ಲಿ ಇಟ್ಟಿದ್ದ ಭಯದ ನಂಬಿಕೆಯನ್ನು ಕಾಣಬಹುದು. ಸುಡುಗಾಡಿನ ಬಗ್ಗೆ ಮತ್ತೊಂದು ನಂಬಿಕೆಯೆಂದರೆ, "ಗರ್ಭಿಣಿಯರು ಶ್ಮಶಾನ ಮತ್ತು ಶವಸಂಸ್ಕಾರದಂತಹ ಅಮಂಗಲಗಳಿಂದ ದೂರವಿರಬೇಕೆಂದೂ, ಇಲ್ಲದಿದ್ದರೆ ಹುಟ್ಟುವ ಶಿಶುವಿನ ಮೇಲೆ ಕೆಟ್ಟ ಪರಿಣಾಮವಾಗುತ್ತದೆ"[47] ಎನ್ನುವುದು ಗರ್ಭಿಣಿಯರ ಮನಸ್ಥಿತಿ ಆಕೆಯ ಮೇಲಷ್ಟೆ ಅಲ್ಲದೆ ಮುಂದೆ ಹುಟ್ಟುವ ಮಗುವಿನ ಮೇಲೆ ಪ್ರಭಾವ ಬೀರುತ್ತದೆ ಎನ್ನುವ ನಂಬಿಕೆ ಇದಕ್ಕೆ ಕಾರಣವಿರಬಹುದು.

"ಹುಚ್ಚು ಬಳ್ಳಿ ತಗುಲಿದರೆ ದಾರಿ ತಪ್ಪುತ್ತದೆ" ಎನ್ನುವ ನಂಬಿಕೆ. ಗುತ್ತಿ ಪೊಲೀಸರಿಂದ ತಪ್ಪಿಸಿಕೊಂಡು ಕಾಡಿನಲ್ಲಿ ಎಷ್ಟು ಹೊತ್ತು ಅಲೆದರೂ ತಾನು ಎಲ್ಲಿದ್ದೇನೆ, ಎತ್ತ ಹೋಗುತ್ತಿದ್ದೇನೆ ಎಂಬುದರ ಗೊತ್ತು ಸಿಕ್ಕಲಿಲ್ಲ, ಆಗ; "ಇದೇನಿದು? ದಿಕ್ಕು ತಪ್ಪಿಬಿಟ್ಟೆನೆ?... ಅಥವಾ ಹುಚ್ಚು ಬಳ್ಳಿ ಎಲ್ಲಿಯಾದರೂ ಕಾಲಿಗೆ ತಗುಲಿಬಿಟ್ಟಿತೇ?"[48] ಎಂದು ಸಂಶಯ ಪಡುತ್ತಾನೆ. ಕಾದಂಬರಿಕಾರರೇ ಹೇಳುವಂತೆ ಹೆಗ್ಗಾಡಿನಲ್ಲಿ ಒಂದು ಜಾತಿಯ ವಿಷಬಳ್ಳಿ ಇದೆ ಎಂದೂ, ಅವನ್ನು ಮುಟ್ಟಿದವನು ಮನೆ ಸೇರುವ ಸಂಭವವಿಲ್ಲವೆಂದು ಹಳ್ಳಿಗರಲ್ಲಿ ಒಂದು ನಂಬಿಕೆ ರೂಢಿಯಾಗಿತ್ತು. ಆ ಬಳ್ಳಿ ಮುಟ್ಟಿ ಅನೇಕ ಜನರು ಜಾನುವಾರುಗಳೂ ಕಾಡಿನಲ್ಲಿ ದಿಕ್ಕು ತಪ್ಪಿ ಅಲೆದೂ ಅಲೆದೂ ಸತ್ತು ಹೋಗಿದ್ದವೆಂಬ ಕಥೆಗಳು ಪ್ರಚಲಿತವಾಗಿದ್ದವು.[49] ಹಾಸಿಗೆಯಿಂದ ಏಳುವಾಗ 'ಬಲಮಗ್ಗುಲಲ್ಲಿ ಏಳಬೇಕೆಂಬ ನಂಬಿಕೆ' "ಎಡದ ಮಗ್ಗುಲಲ್ಲಿ ಏಳಬೇಡೋ ಎಂದು ಎಚ್ಚರಿಸಿದನು ಧರ್ಮು. ಹಾಸಿಗೆಯ ಮೇಲೆ ಎದ್ದು ಕುಳಿತಿದ್ದ ತಿಮ್ಮು ಮತ್ತೆ ಮಲಗಿ, ತನ್ನ ಬಲಗಡೆ ಯಾವುದೆಂದು ಖಾತ್ರಿ ಮಾಡಿಕೊಂಡು, ಬಲದ ಮಗ್ಗುಲಲ್ಲಿ ಎದ್ದು ಕುಳಿತನು"[50] ಸಾಮಾನ್ಯವಾಗಿ ಸ್ಥಳೀಯ ಜನರ ಪ್ರಕಾರ ಹಾಸಿಗೆಯಿಂದ ಎಡಮಗ್ಗುಲಲ್ಲಿ ಎದ್ದರೆ ಅಮಂಗಳ ಉಂಟಾಗುತ್ತದೆ ಎಂಬ ನಂಬಿಕೆ ಇತ್ತು. ಆದ್ದರಿಂದ ಬಲದ ಮಗ್ಗುಲಲ್ಲಿಯೇ ಏಳಬೇಕು ಎಂದು ಹೇಳುತ್ತಿದ್ದರು. 'ಆಗದವರಿಗೆ ಮದ್ದು ಹಾಕುವ ನಂಬಿಕೆ' ಮಲೆನಾಡಿನಲ್ಲಿಯೂ ಸಾಮಾನ್ಯವಾಗಿತ್ತು ಚಿನ್ನಮ್ಮನ ಮದುವೆಯ ದಿನದಂದು ಮೀನು ಸೋಸುತ್ತಿದ್ದ ಹೆಂಗಸರು ಹರಟುವಾಗ ನಾಗತ್ತೆ ಬಗ್ಗೆ "ಅಯ್ಯೋ ಅವಳದು ಏನಂತಿಯಾ? ಸೊಸೇನ ಕೂಡಿಕೆ ಮಾಡಿಸಿ, ಮನೆ ಯಜಮಾನಿ ಆಗಿ ಬಿಡ್ತೀನಿ ಅಂತ ಮಾಡಿದ್ಲು ಆದರೆ ಹೀಂಗಾಯ್ತು!" "ಅವಳಿಗೆ ಮೊದಲಿಂದ್ಲೂ ಆ ಕೆಟ್ಟ ಚಾಳೀ ಇದ್ದೇ ಇತ್ತು... ಆಗದಿದ್ದೋರಿಗೆ ಮದ್ದು ಬ್ಯಾರೆ ಹಾಕ್ತಾಳಂತೆ!...[51] ಗ್ರಾಮೀಣ ಪ್ರದೇಶದಲ್ಲಿ ತಮಗೆ ಆಗದಿದ್ದೋರಿಗೆ ಊಟದಲ್ಲಿ 'ಮದ್ದು' ಹಾಕುವ ಪದ್ಧತಿ ಇತ್ತು ಎನ್ನುವ ನಂಬಿಕೆಯನ್ನು ಇದು ತಿಳಿಸುತ್ತದೆ.

ಮಲೆನಾಡಿನಲ್ಲಿದ್ದ ಮದುವೆಗೆ ಸಂಬಂಧಪಟ್ಟ ನಂಬಿಕೆಯೆಂದರೆ ಶೂದ್ರರ ಮದುವೆಗಳು ನಡೆಯುತ್ತಿದ್ದುದು ರಾತ್ರಿಯ ವೇಳೆಯಲ್ಲಿ. "ಶೂದ್ರರ ಧಾರೆ ಯಾವಾಗಲೂ ನಿಶಾ ಲಗ್ನದಲ್ಲಿ ತಾನೆ? ಅದರಲ್ಲಿಯೂ ಇವತ್ತಿನ ಧಾರೆ ಸಿಂಭಾವಿ ಭರಮೈ ಹೆಗ್ಗಡೆಯವರಿಗೆ ಹೂವಳ್ಳಿ ಚಿನ್ನಮ್ಮನನ್ನು ದ್ವಿತೀಯ ಪತ್ನಿಯನ್ನಾಗಿ ವಹಿಸಿಕೊಡುವ ಧಾರೆಯ ಸಮಯ ರಾತ್ರಿ ಹನ್ನೆರಡು ಗಂಟೆಗೆ ತಾನೆ 'ಗಳಿಗೆ' ಬರುವುದು."[52] ಸಾಮಾನ್ಯವಾಗಿ ಬ್ರಾಹ್ಮಣೇತರರ ಮದುವೆಗಳು ರಾತ್ರಿಯ ವೇಳೆಯಲ್ಲಿ ಏರ್ಪಡಿಸುತ್ತಿದ್ದುದು ರೂಢಿಯಾಗಿತ್ತು. ಹೆಣ್ಣುಮಕ್ಕಳು ಕನ್ನಡಿ ನೋಡಿಕೊಳ್ಳುವುದು ಅನೀತಿ ವ್ಯಾಪಾರವಾಗಿತ್ತು. ಸಾಮಾನ್ಯವಾಗಿ ಹೆಣ್ಣುಮಕ್ಕಳು ಬೋಗುಣಿಯಲ್ಲಿಯೋ, ಹಂಡೆಯಲ್ಲಿಯೋ ಇರುತ್ತಿದ್ದ ನೀರಿನಲ್ಲಿ ನೋಡಿಕೊಂಡೇ ಹಣೆಗೆ ಕುಂಕುಮ ಇಟ್ಟುಕೊಳ್ಳುತ್ತಿದ್ದುದು

ರೂಢಿ. ಹೆಣ್ಣುಮಕ್ಕಳು ಕನ್ನಡಿ ನೋಡಿಕೊಂಡು ತಲೆಬಾಚಿಕೊಳ್ಳುವುದೆಂದರೆ ಅದೊಂದು ಅನೀತಿ ವ್ಯಾಪಾರವೆಂದೇ ಆಗಿನ ಭಾವನೆಯಾಗಿತ್ತು. 'ಕನ್ನಡಿ ನೋಡಿಕೊಳ್ಳುವುದು ಸೂಳೆಯರು ಮಾತ್ರ!'[53] ಈ ಮಾತುಗಳಲ್ಲಿ ಅಂದಿನ ದೇಸಿಯ ಬದುಕಿನಲ್ಲಿ ಆಧುನಿಕ ಶೃಂಗಾರ ಪರಿಕರಗಳ ಬಗ್ಗೆ ಜನರಿಗಿದ್ದ ನಂಬಿಕೆಯನ್ನು ಕಾಣಬಹುದು.

ಸಾಮಾನ್ಯವಾಗಿ ಗಂಡಸು ತನ್ನ ಹೆಂಡತಿಯ ಹೆಸರು ಹಿಡಿದು ಕರೆಯುತ್ತಿದ್ದಿಲ್ಲ. ಹೆಸರಿನ ಬದಲು 'ಅವಳು' ಎಂಬುದಾಗಿಯೂ ಮತ್ತೆ ಕೆಲವರು 'ಅದು' ಎಂಬುದಾಗಿಯೂ ಕರೆಯುತ್ತಿದುದೇ ಹೆಚ್ಚು ವಾಡಿಕೆ.[54] ಹಾಗೆಯೇ ಹಚ್ಚೆ ಕಚ್ಚಿಸಿಕೊಳ್ಳುವುದು ವಾಡಿಕೆಯಾಗಿತ್ತು. "ನಿನ್ನ ಮುಂಗೈಗೆ ಹಚ್ಚೆ ಕಚ್ಚಿಸಿಕೊಳ್ಳದಿದ್ದರೆ ಎಷ್ಟು ಚೆನ್ನಾಗಿ ಕಾಣ್ತಿತ್ತು?" ಎಂದು ದೇವಯ್ಯ ಕೇಳಿದಾಗ, ದೇವಮ್ಮ "ಅದು ಶಿವನ ಜಡೆ! ಮುತ್ತೈದೆಗೆ ಮಂಗಳವಂತೆ...."[55] ಹೀಗೆ ರೂಢಿ ಪದ್ಧತಿ-ನಂಬಿಕೆಗಳು ದೇಸಿಯ ಬದುಕಿನ ಅವಿಭಾಜ್ಯ ಅಂಗವಾಗಿದ್ದವು. ಅವುಗಳ ಹಿಂದೆ ಸಾಮಾಜಿಕ ಸ್ವಾಸ್ಥ್ಯತೆ, ನಿಯಂತ್ರಣ, ಲೋಕಾನುಭವದ ಜೊತೆಗೆ ಜೀವನಾನುಭವಗಳು ಸಮ್ಮಿಳಿತಗೊಂಡು ಅಂದಿನವರ ಬದುಕಿಗೆ ಸಾರ್ಥಕತೆಯನ್ನು ನೀಡಿದ್ದವು ಎಂದೇ ಹೇಳಬಹುದು.

5.4 ಮಾಟ, ಮಂತ್ರ, ಹರಕೆ ಮತ್ತು ಬಲಿ:

ಭಾರತದಂತಹ ಸಾಮಾಜಿಕ ವ್ಯವಸ್ಥೆಯಲ್ಲಿ ಅದರಲ್ಲೂ ಗ್ರಾಮೀಣ ಪ್ರದೇಶದಲ್ಲಿ ಮಾಟ, ಮಂತ್ರ, ಶಕುನ. ಹರಕೆ, ದೆಯ್ಯ, ದೆವ್ವ ಮತ್ತು ಬಲಿ ಕೊಡುವುದು ಸಾಮಾನ್ಯವಾಗಿದ್ದು ರೂಢಿ ಸಂಪ್ರದಾಯಗಳಂತೆ ಪೀಳಿಗೆಯಿಂದ ಪೀಳಿಗೆಗೆ ಬೆಳೆದು ಬಂದಿವೆ. ಆಧುನಿಕ ಶಿಕ್ಷಣದ ಪೂರ್ವದಲ್ಲಿ ಗ್ರಾಮೀಣ ಪರಿಸರದಲ್ಲಿ, ವಿದ್ಯೆಯ ಗಂಧಗಾಳಿ ಇರದಿದ್ದ ಜನರಲ್ಲಿ ಮಾಟ-ಮಂತ್ರಗಳ ಬಗ್ಗೆ ಒಂದು ರೀತಿಯ ಭಯ ಮಿಶ್ರಿತ ಭಾವನೆಗಳನ್ನು ಕಾಣಬಹುದು. ಅವುಗಳ ಆಚರಣೆ, ಅನುಕರಣೆ ಅವರಲ್ಲಿ ಅತಿಮಾನುಷ, ಅಗೋಚರ ಶಕ್ತಿಗಳ ಬಗ್ಗೆ ಇದ್ದ, ಭಯ ಭಕ್ತಿ ಗೌರವಗಳನ್ನು ವ್ಯಕ್ತಪಡಿಸುತ್ತವೆ. ಅಂದಿನ ಜನರು ದೇವರಲ್ಲಿ ಇಟ್ಟ ನಂಬಿಕೆಯನ್ನು ದೆಯ್ಯ, ದೆವ್ವ, ಮಾಟ-ಮಂತ್ರಗಳಲ್ಲೂ ಇಟ್ಟಿದ್ದರು. ಮಾಂತ್ರಿಕರು, ಪೂಜಾರಿಗಳು ಮತ್ತು ಪುರೋಹಿತರು ನೀಡುವ ತಾಯಿತ, ಪ್ರಸಾದ, ವಿಭೂತಿ, ಮಂತ್ರ, ಚೀಟಿ- ಮುಂತಾದ ವಸ್ತುಗಳಲ್ಲಿ ವಿಚಿತ್ರವೂ ವಿಶೇಷವೂ ಆದ ಶಕ್ತಿಯೊಂದಿರುತ್ತದೆ ಮತ್ತು ಅವುಗಳಿಂದ ತಮಗೆ ಒಳಿತೋ ಕೆಡಕೋ ಉಂಟಾಗುತ್ತದೆ ಎಂಬ

ಸಹಜ ಶ್ರದ್ಧಾ-ನಂಬಿಕೆಗಳು ಎಲ್ಲೆಡೆಯಂತೆ ಮಲೆನಾಡಿನಲ್ಲಿಯೂ ರೂಢಿಯಲ್ಲಿದ್ದವು. ಮಾಂತ್ರಿಕ ವಸ್ತುಗಳನ್ನು ಧರಿಸುವ, ನಂಬುವ ಹಲವಾರು ಪಾತ್ರಗಳು ಕಾದಂಬರಿಗಳಲ್ಲಿ ಬರುತ್ತವೆ.[56]

ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಗುತ್ತಿ ತಾನು ಮದುವೆಯಾಗ ಬೇಕೆಂದಿರುವ ತಿಮ್ಮಿಯನ್ನು ಬಳಸಿಕೊಳ್ಳಲು ಕಣ್ಣಾಪಂಡಿತರನ್ನು ಭೇಟಿ ಮಾಡಿ "ತಿಮ್ಮಿ ಮನ್ಸು ನನ್ನ ಕಡೆ ಆಗಿ, ನಾ ಹೇಳ್ದ ಹಂಗೆ ಕೇಳಾಕೆ ಒಂದು ಅಂತ್ರ ಕೊಟ್ರೆ ನನ್ನ ಪರಾಣ ಇರು ತನಕ ನಿಮ್ಮ ಗುಲಾಮನಾಗಿರ್ತೀನಿ"[57] ಎಂದು ಕೇಳಿಕೊಳ್ಳುತ್ತಾನೆ. ತಮಗೆ ಆಗದವರಿಗೆ ಕೇಡನ್ನು ಬಯಸಲು, ತಮ್ಮ ಇಷ್ಟಗಳನ್ನು ಪೂರೈಸಿಕೊಳ್ಳಲು ಮಾಟ-ಮಂತ್ರ, ಅಂತ್ರಗಳಿಗೆ, ಮೊರೆಹೋಗುವುದು ಮಲೆನಾಡಿನ ದೇಸಿಯ ಬದುಕಿನಲ್ಲಿ ಸಾಮಾನ್ಯವಾಗಿತ್ತು. ಶಂಕರಪ್ಪ ಹೆಗ್ಗಡೆ ತನ್ನ ರ್‍ವೋತೆ ಹಿಡಿದ ಮಗನಿಗೆ ಗುಣವಾಗಲೆಂದು ಜೋಯಿಸರಿಂದ ಚೀಟಿ ಬೂದಿ ತರಿಸಿದ್ದರು, ನಿಮಿತ್ತ ನೋಡಿಸಿದ್ದರು. ಸಿದ್ದರಮಠಕ್ಕೆ ಹೋಗಿ ತಾಯಿತೀನೂ ಕಟ್ಟಿಸಿದ್ದರು ಎಂದು ಹೇಳುವುದು ಸ್ಥಳೀಯ ಜನರು ಮಂತ್ರಿಸಿದ ಅಂತ್ರ ಯಂತ್ರ ಅಥವಾ ತಾಯಿತಿಯಲ್ಲಿ ಇಟ್ಟಿದ್ದ ನಂಬಿಕೆಯನ್ನು ಸೂಚಿಸುತ್ತದೆ.[58]

ಮಾಟ-ಮಂತ್ರಗಳನ್ನು ಕೇವಲ ಪೂಜಾರಿಗಳು, ಮಾಂತ್ರಿಕರಲ್ಲಷ್ಟೇ ಅಲ್ಲದೆ ಕೆಲವೊಂದು ವಿಶೇಷ ಸಂದರ್ಭಗಳಲ್ಲಿ ಪರಿಸ್ಥಿತಿಯ ಆಗು-ಹೋಗುಗಳನ್ನು ಅರಿತು ಸಂಬಂಧಪಟ್ಟ ವ್ಯಕ್ತಿಗಳೇ ಅವುಗಳನ್ನು ನಿರ್ವಹಿಸುತ್ತಿದ್ದರು. ಗುತ್ತಿಯ ಜೊತೆ ತಿಮ್ಮಿ ಹೊರಟು ಹೋದನಂತರ, ಕತ್ತಲೆಯ ಕಾಡಿನ ದಾರಿಯಲ್ಲಿ ಅವರಿಗೆ ಯಾವ ಕೇಡೂ ಉಂಟಾಗದಿರಲೆಂದು ಸೇಸಿ "ಒಳಗೆ ನಡೆದು, ಒಂದು ಬಿಲ್ಲೆಯನ್ನು ತೊಳೆದು, ಕಲ್ಲೂರ ಗಣಪನಿಗೆ ಹಣ್ಣುಕಾಯಿ ಮಾಡಿಸುವುದಾಗಿ ಹೇಳಿಕೊಂಡು, ಅದನ್ನು ಮೂಲೆಯ ಒನಕೆ ದೇವರಿಗೆ ಸುತ್ತು ಬರಿಸಿ, ಒಂದು ಬಟ್ಟೆಯಲ್ಲಿ ಸುತ್ತಿ, ಆಗಲೆ ಕಟ್ಟುಗೊಂಡು ನೇತಾಡುತ್ತಿದ್ದ ಇತರ ಕಾಣಿಕೆಗಳ ಸಾಲಿಗೆ ಇದನ್ನು ಜೋತು ಹಾಕಿದಳು."[59] ಬೆಟ್ಟಳ್ಳಿಯ ದೇವಮ್ಮ ತನ್ನ ಬಾಲೆಗೆ ಜಕಣಿ ಪಂಜ್ರೊಳ್ಳಿ ಕಾಟ ತಪ್ಪಿಸಲು ಕಲ್ಲೂರ ಜೋಯಿಸರು ಮಂತ್ರಿಸಿಕೊಟ್ಟಿದ್ದ ತೆಂಗಿನಕಾಯಿ, ಕಣ್ಣಾಪಂಡಿತರು ಕೊಟ್ಟಿದ್ದ ಅಂತ್ರಗಳನ್ನು ತೊಟ್ಟಿಲ ಹಗ್ಗಕ್ಕೆ ಕಟ್ಟಿದ್ದಳು. ಈ ರೀತಿಯ ಆಚರಣೆಗಳು, ಅನುಕರಣೆಗಳ ಮತ್ತು ನಂಬಿಕೆಗಳು ದೇಸಿಯ ಬದುಕಿನ ಭಾಗವಾಗಿದ್ದು. ಆ ಜನಸಮುದಾಯದ ಮನಸ್ಸುಗಳನ್ನು ನಿಯಂತ್ರಿಸುವಷ್ಟು ಶಕ್ತವಾಗಿದ್ದವು ಎನ್ನುವುದು ಸ್ಪಷ್ಟವಾಗುತ್ತದೆ.[60]

ಮಾಟ-ಮಂತ್ರವನ್ನು ತಾವು ಕಳೆದುಕೊಂಡ ವಸ್ತುಗಳನ್ನು ಹಿಂದೆ ಪಡೆಯಲು, ನ್ಯಾಯ-ಅನ್ಯಾಯಗಳ ತೀರ್ಮಾನವನ್ನು ನಿರ್ಧರಿಸಲು ಬಳಸುವುದನ್ನು ಕಾಣುತ್ತೇವೆ. ಅಂತಕ್ಕ ಸೆಟ್ತಿಯ ಮಗಳು ಕಾವೇರಿ ತಾನು ಕಳೆದುಕೊಂಡಿದ್ದ ಬಂಗಾರದ ಉಂಗುರವನ್ನು ಪತ್ತೆ ಹಚ್ಚಲು ಕೆಲಸದ

ಹುಡುಗ ಕೊರಗನ ಮೇಲೆ ಸಂಶಯಗೊಂಡು 'ಮಂತ್ರಿಸಿದ' ತೆಂಗಿನಕಾಯನ್ನು ಮುಟ್ಟಿಸಿ ಪ್ರಮಾಣ ಮಾಡಿಸುತ್ತಾಳೆ. ಕಾನೂರು ಹೆಗ್ಗಡಿತಿಯಲ್ಲಿ ಗಾಡಿಯಾಳು ನಿಂಗ ತಾನು ಹೂತಿಟ್ಟಿದ್ದ ಕೃಷಿ ಉಪಕರಣಗಳು ಕಳುವಾಗಿರುವುದನ್ನು ಹಿಂಪಡೆಯಲು ಭೂತರಾಯನಿಗೆ ಹರಸಿ ಕಳ್ಳನನ್ನು ಹಿಡಿಯಲು ಪ್ರಯತ್ನಿಸುತ್ತಾನೆ.[61] ತನ್ನ ತಾಯಿಯ ಮೇಲೆ ಏರಿಬಂದ ಎತ್ತನ್ನು ಹೂವಯ್ಯ ಬಂದೂಕಿನಿಂದ ಹೊಡೆದು ಕೊಂದಾಗ, ಚಂದ್ರಯ್ಯಗೌಡ 'ಕೇಸು ಮಾಡುತ್ತೇನೆ, ಹುಯಿಲು ಕೊಡುತ್ತೇನೆ' ಎಂದರೆ ಮಾಟ ಮಾಡಿದ ದೆವ್ವದ ಸಹಾಯದಿಂದ ವೈರಿಗಳನ್ನು ಕೊಲ್ಲಿಸುವುದು ಎಂದರ್ಥ, ಎಂದೆಲ್ಲಾ ಕೂಗಾಡುತ್ತಾನೆ. ಇದು ಮಲೆನಾಡಿನ ಸ್ಥಳೀಯ ಜನರು ದೆಯ್ಯ, ದೆವ್ವ, ಮಾಟ–ಮಂತ್ರ, ಅಂತ್ರ, ಮುಂತಾದ ದೈವೀ ಶಕ್ತಿಯಲ್ಲಿ ನಂಬಿಕೆಯಿಟ್ಟಿದ್ದರು ಎಂಬುದನ್ನು ಸೂಚಿಸುತ್ತದೆ.[62]

ಮಲೆನಾಡಿನಲ್ಲಿ ಪ್ರಚಲಿತದಲ್ಲಿದ್ದ ಮತ್ತೊಂದು ದೈವೀ ನಂಬಿಕೆಯೆಂದರೆ 'ನಿಮಿತ್ತ' ಕೇಳುವುದು, ಅಂದರೆ ಮೈಮೇಲೆ ದೇವರು ಬಂದು ಹೇಳಿಕೆ ನೀಡುವುದು ಎಂದರ್ಥ ಜನರು ತಮಗೆ ಕಷ್ಟ–ನಷ್ಟಗಳಾದಾಗ, ದುಃಖ–ನೋವು ಮುಂತಾದ ಸಮಸ್ಯೆಗಳಿಗೆ ಕಾರಣವನ್ನು ಮತ್ತು ಪರಿಹಾರವನ್ನು ತಿಳಿಯಲು 'ನಿಮಿತ್ತ' ಕೇಳುವುದು ವಾಡಿಕೆಯಾಗಿತ್ತು. ಕಾನೂರು ಹೆಗ್ಗಡಿತಿ ಕಾದಂಬರಿಯ ಸೀತೆ ಮಾನಸಿಕ ಕ್ಷೋಭೆಗೊಳಗಾಗಿ ಹಾಸಿಗೆ ಹಿಡಿದಾಗ ಶಾಮಯ್ಯಗೌಡರು ಅಗ್ರಹಾರದ ವೆಂಕಪ್ಪಯ್ಯ ಜೋಯಿಸರಿಂದ ನಿಮಿತ್ತ ನೋಡಿಸುತ್ತಾರೆ.[63] ಮತ್ತೊಂದು ಸಾರಿ ಸೀತೆ ಭಯದಿಂದ ಮೂರ್ಛೆ ಹೋದಾಗ ಆಕೆಯ ತಾಯಿ ಮತ್ತು ಶಾಮಯ್ಯ ಗೌಡರು "ಮರುದಿನವೆ ಅಗ್ರಹಾರದ ವೆಂಕಪ್ಪಯ್ಯ ಜೋಯಿಸರನ್ನು ಕರೆಯಿಸಿ, ನಿಮಿತ್ತ ನೋಡುವುದಾಗಿಯೂ, ದೇವಸ್ಥಾನಗಳಿಗೆ ಕಾಣಿಕೆ ಅರ್ಪಿಸುವುದಾಗಿ ಹರಸಿಕೊಳ್ಳುವುದರ ಮೂಲಕ ಆಕೆಯ ಮೇಲೆ ಬಂದಿದ್ದ ಪಿಶಾಚಿಗೆ ಭಯ ಹುಟ್ಟಿಸಬಹುದು ಎಂದುಕೊಳ್ಳುತ್ತಾರೆ."[64] "ಸೀತೆಮನೆ ಸಿಂಗಪ್ಪಗೌಡರ ಸತ್ತು ಹೋದ ಮಗ ಕೃಷ್ಣಪ್ಪನೇ ದೆಯ್ಯವಾಗಿ ಸೀತೆಯ ಮೇಲೆ ಬಂದಿದ್ದಾನೆ" ಎಂದು ಜೋಯಿಸರೇ ನಿಮಿತ್ತನೋಡಿ ಹೇಳಿದಾಗ ಮಂತ್ರಿಸಿದ ಕುಂಕುಮ ವಿಭೂತಿಗಳನ್ನು ಹಚ್ಚಿ, ಆಕೆ ಮಲಗುತ್ತಿದ್ದ ಸ್ಥಳದ ಮೇಲುಭಾಗದ ಬಿದಿರುಗಳುವಿಗೆ ಮಂತ್ರಿಸಿದ ತೆಂಗಿನಕಾಯಿ ಕಟ್ಟುತ್ತಾರೆ. ಈ ರೀತಿ ಮಾಡುವುದರಿಂದ ಆಕೆಯನ್ನು ಹಿಡಿದಿರುವ ದೆಯ್ಯ ದೂರವಾಗುತ್ತದೆ ಎನ್ನುವ ನಂಬಿಕೆ ಅವರದಾಗಿತ್ತು.[65]

ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಹಳೆಮನೆ ಶಂಕರಪ್ಪ ಹೆಗ್ಗಡೆ ತನ್ನ ರ್‍ವೋತೆ ಹಿಡಿದ ಮಗನಿಗೆ ಗುಣವಾಗಲೆಂದು ಕಲ್ಲೂರ ಜೋಯಿಸರ ಕೈಲಿ 'ನಿಮಿತ್ತ' ನೋಡಿಸಿದ್ದರು.

ಕೆಳಕಾನೂರು ಅಣ್ಣಯ್ಯಗೌಡ ಸಹ ತನ್ನ ಕಷ್ಟ ಕಾರ್ಪಣ್ಯಗಳಿಗೆ 'ನಿಮಿತ್ತ' ಕೇಳಿದ್ದನು. ಹೀಗೆ ನಿಮಿತ್ತ' ನೋಡುವುದು, ಕೇಳುವುದು ಮಲೆನಾಡಿನ ಭಾಗದಲ್ಲಿ ಸಾಮಾನ್ಯವಾಗಿತ್ತು.

ಮಲೆನಾಡಿನ ಜನರು ಹಲವು ಹತ್ತು ಭೂತಗಳನ್ನು ಆರಾಧಿಸುತ್ತಿದ್ದರು. ಅಣ್ಣಪ್ಪ, ಪಂಜುರ್ಲಿ, ಜಕಣಿ, ಚೌಡಿ, ಮಸಣಿ, ಕಲ್ಕುಡ್ಕ.... ಇತ್ಯಾದಿ ಭೂತಗಳನ್ನು ಪೂಜಿಸಿ ಆಗಾಗ ಹರಕೆ, ಬಲಿ ಸಲ್ಲಿಸುತ್ತಿದ್ದರು. ಈ ಭೂತಗಳಿಗೆ ಪ್ರತ್ಯೇಕವಾಗಿ ರಚಿಸಿದ ವಾಸ್ತುಗಳೇನೂ ಇರುತ್ತಿರಲಿಲ್ಲ. ಮೊದಮೊದಲು ಮನೆಯ ಆಸುಪಾಸಿನ ಪ್ರದೇಶದಲ್ಲಿ ಭೂತಗಳಿರುತ್ತವೆ ಎಂದೂ, ಅವುಗಳ ಆಶ್ರಯ ಸ್ಥಳ ದೊಡ್ಡ ದೊಡ್ಡ ಗಿಡಮರಗಳೆಂದೂ ನಂಬಲಾಗುತ್ತಿತ್ತು. ಬರಬರುತ್ತಾ ಮನೆಯ ಹಿಂದೆ ಮುಂದೆ ಇರುವ ತೆಂಗಿನ ಅಡಿಕೆಯ ತೋಟಗಳಲ್ಲಿ ಹಾಗೂ 'ಭೂತದ ಬನ'ವೆಂಬ ಕಾಡಿನ ಭಾಗದಲ್ಲಿ ಅವು ವಾಸಿಸುತ್ತವೆ ಎಂಬ ಭಾವನೆ ಬಲಿಯಿತು. ಅಡಿಕೆ ತೆಂಗಿನ ತೋಟಗಳಲ್ಲಂತೂ 'ಭೂತಗಳು' ಸದಾಕಾಲ ವಾಸಿಸುತ್ತವೆ ಮತ್ತು ರಾತ್ರಿ ಸಂಚರಿಸುತ್ತವೆ ಎಂದು ಗಾಢವಾಗಿ ನಂಬಲಾಗುತ್ತಿತ್ತು.[66] ಮಲೆನಾಡಿನ ಘಟ್ಟ ಪ್ರದೇಶಗಳಲ್ಲಿ ಹೆಚ್ಚಾಗಿ ಶಿಷ್ಟದೇವರ ಪ್ರಭಾವವಿದ್ದರೆ, ಘಟ್ಟದ ಕೆಳಗಿನಿಂದ ಬಂದವರಲ್ಲಿ ಕ್ಷುದ್ರ ದೇವತೆಗಳ ಪ್ರಭಾವವನ್ನು ಕಾಣುತ್ತೇವೆ. ಸಾಮಾನ್ಯವಾಗಿ ಮಲೆನಾಡಿಗೆ 'ಭೂತದ' ಪ್ರವೇಶ ಘಟ್ಟದ ಕೆಳಗಿನವರ ಪ್ರಭಾವವೆಂದೇ ಹೇಳಬಹುದು. ಏಕೆಂದರೆ ಅಲ್ಲಿ ಭೂತದ ಕೋಲ, ಪಂಜುರ್ಲಿ, ಜಕಣಿ ಮುಂತಾದ ಕ್ಷುದ್ರದೇವತೆಗಳಿಗೆ ಬಲಿ ನೀಡುವುದು, ಹರಕೆ ಅರ್ಪಿಸುವುದು ಹೆಚ್ಚಾಗಿ ಪ್ರಚಲಿತದಲ್ಲಿರುವುದು ತಿಳಿಯುತ್ತದೆ. ಘಟ್ಟದ ಮೇಲಿನ ದೆಯ್ಯ ಎಂದರೆ ಘಟ್ಟದ ಕೆಳಗಿನವರಿಗೆ ಬಹಳ ಭೀತಿ ಮತ್ತು ದೆಯ್ಯ ಪಿಶಾಚಿ, ಕೊಳ್ಳಿ ದೆವ್ವಗಳು ಕತ್ತಲ ಕಾಡಿನಲ್ಲಿ ಅದರಲ್ಲೂ ಅಮಾವಾಸ್ಯೆಯ ರಾತ್ರಿಯಲ್ಲಿ ತಿರುಗಾಡುತ್ತವೆ ಎಂದು ನಂಬಿಕೆಯಿತ್ತು.[67] ಹೀಗೆ ಮಲೆನಾಡಿಗೆ ವಲಸೆ ಬಂದ ಘಟ್ಟದ ಕೆಳಗಿನ ಜನರಿಂದ ಕ್ಷುದ್ರ ದೇವತೆಗಳ ಪರಿಚಯವಾಗಿ, ದಕ್ಷಿಣಕನ್ನಡ ಜಿಲ್ಲೆಯ ದೇಸಿ ಸಂಸ್ಕೃತಿ ಮಲೆನಾಡಿನಲ್ಲಿ ಬೇರೂರುತ್ತದೆ. ಇದರಿಂದ ಮಲೆನಾಡಿನ ಮತ್ತು ದಕ್ಷಿಣಕನ್ನಡ ಜಿಲ್ಲೆಯ ಎರಡೂ ದೇಸಿ ಸಂಸ್ಕೃತಿಗಳೂ ಮುಂದೆ ಜನಪ್ರಿಯಗೊಳ್ಳುತ್ತಾ ರೂಢಿಗೆ ಬರುತ್ತವೆ.

<u>ಕಾನೂರು ಹೆಗ್ಗಡಿತಿ</u>ಯಲ್ಲಿ ಭೂತಾರಾಧನೆಯ ಬಗ್ಗೆ ಸಾಕಷ್ಟು ವಿವರಣೆಯನ್ನು ಕಾಣಬಹುದು. ಆ ನಾಡಿನ ವಾಡಿಕೆಯಂತೆ ಪ್ರತಿಯೊಂದು ಮನೆಯವರೂ ಹತ್ತಾರು ಅಂತರಬೆಂತರ ಭೂತ ಪಿಶಾಚಿಗಳನ್ನು ಪೂಜಿಸುವುದುಂಟು. ಮನೆಯ ಸುತ್ತಣ ಸಮೀಪದ ಕಾಡಿನಲ್ಲಿ ಮರಗಳ ಬುಡದಲ್ಲಿರುವ ಕೆಲವು ಕಲ್ಲುಗಳನ್ನೇ 'ದೆಯ್ಯದ ಬನ' ಎಂದು ಕರೆಯುತ್ತಾರೆ. ಪ್ರತಿವರ್ಷವೂ ಆಯಾ ದೆಯ್ಯದ ಯೋಗ್ಯತೆಗೆ ತಕ್ಕಂತೆ ಕೋಳಿ ಕುರಿಗಳನ್ನು ಬಲಿ ಕೊಡುತ್ತಾರೆ. ಅವರಿಗೆ

ಕಾಡುಪ್ರಾಣಿಗಳ ಭಯಕ್ಕಿಂತಲೂ ಆ ದೆಯ್ಯಗಳ ಭಯವೇ ನೂರ್ಮಡಿಯಾಗಿರುತ್ತದೆ: "ಅವುಗಳ ಅನುಗ್ರಹ ಶಕ್ತಿಗಿಂತಲೂ ನಿಗ್ರಹ ಶಕ್ತಿಯಲ್ಲಿಯೇ ಎಲ್ಲರಿಗೂ ಹೆಚ್ಚು ನಂಬುಗೆ. ಆದ್ದರಿಂದ ಅವುಗಳಲ್ಲಿ ಭಕ್ತಿಗಿಂತಲೂ ಭಯವೇ ಹೆಚ್ಚು. ಭಯವನ್ನೇ ಭಕ್ತಿ ಎಂದು ಕರೆದುಬಿಡುತ್ತಾರೆ."[68] ಇದರಿಂದ ಮಲೆನಾಡಿನ ದೇಸಿಯ ಬದುಕಿನಲ್ಲಿ ಭೂತ, ದೆಯ್ಯ, ಪಿಶಾಚಿಗಳ ಭಯ ಜನರ ಮನಸ್ಸನ್ನು ಹೇಗೆ ನಿಯಂತ್ರಿಸುತ್ತಿದ್ದವು ಎನ್ನುವುದನ್ನು ಕಾಣಬಹುದು. ಹೂವಯ್ಯನಿಗೆ ಗಾಡಿಯಿಂದ ಬಿದ್ದು ಪೆಟ್ಟಾಗಿದ್ದಾಗ ಬೇಗ ಗುಣವಾಗಲೆಂದು ಅವನ ತಾಯಿ ನಾಗಮ್ಮ; "ತಮಗೆ ತಿಳಿದಿದ್ದ ದೇವ ದೆವ್ವರಿಗೆಲ್ಲ–ತಿರುಪತಿ ಧರ್ಮಸ್ಥಳಗಳಿಂದ ಹಿಡಿದು ಭೂತ ಪಂಜ್ರೊಳ್ಳಿಗಳವರೆಗೆ ಮುಡುಪುಕಟ್ಟಿ, ಹೇಳಿಕೊಂಡರು."[69] ಕಾನೂರಿನ ಚಂದ್ರಯ್ಯಗೌಡರು ಹಾಸಿಗೆಯ ಮೇಲೆ ಪ್ರಜ್ಞೆ ತಪ್ಪಿ ಮಲಗಿದ್ದಾಗ ಸುತ್ತ ನೆರೆದಿದ್ದವರೆಲ್ಲ ಭೂತಾದಿದೇವತೆಗಳಿಗೆ ಹರಕೆ ಹೇಳಿಕೊಳ್ಳುತ್ತ ಮುಡಿಪು ಕಟ್ಟುತ್ತಿದ್ದರು. "ಒಂದು ಗಂಟೆಯೊಳಗಾಗಿ ಗೌಡರು ಎದ್ದು ಕುಳಿತು ತಮಗಾದ ಅನುಭವದ ಕಥೆಯನ್ನು ವಿಸ್ತರಿಸಿದರು, ಭೂತರಾಯನಿಗೆ ಏನೋ "ಮುಟ್ಟುಚಿಟ್ಟು' ಆಗಿದೆ. ಹರಕೆ ಮಾಡಬೇಕು. ವೆಂಕಪ್ಪಯ್ಯನವರನ್ನು ಕರೆಸಿ ಶುದ್ಧಿ ಮಾಡಿಸಿ ಹಣ್ಣುಕಾಯಿ ಹಾಕಿಸಬೇಕು"[70] ಎಂದರು. ಭೂತಬನಕ್ಕೆ ಮುಟ್ಟಾದವರು, ಮುಟ್ಟದವರು ಹೋದರೆ ಅಪವಿತ್ರವಾಗುತ್ತದೆ ಇದರಿಂದ ಭೂತರಾಯನಿಗೆ ಸಿಟ್ಟುಬಂದು ಕೇಡಾಗುತ್ತದೆ ಎಂಬ ನಂಬಿಕೆ ಸ್ಥಳೀಯರದು. ಭೂತ್ರಾಯ್ಗೆ ಕಿರಸ್ತಾನ್ರು ಅಂದ್ರೆ ಆಗೋದಿಲ್ಲ ಎನ್ನುವ ಹಳೆಪೈಕದ ತಿಮ್ಮನ ಮಾತುಗಳಲ್ಲಿ ಭೂತ–ದೆಯ್ಯಗಳಿಗೆ ಅನ್ಯಮತದವರ ಮೇಲೆ ಇರುವ ಕೋಪ ಕೂಡ ವ್ಯಕ್ತವಾಗುವುದನ್ನು ಕಾಣುತ್ತೇವೆ.[71]

ಭೂತ, ಪಿಶಾಚಿ, ದೆವ್ವ, ದೇವರುಗಳಿಗೆ ಸಲ್ಲಿಸುವ ವಿವಿಧ ರೀತಿಯ ಹರಕೆ, ಬಲಿಗಳ ಬಗ್ಗೆ ಕಾದಂಬರಿಕಾರರು ಹೀಗೆ ಹೇಳುತ್ತಾರೆ; "ಸಾತ್ವಿಕರು ದೇವತೆಗಳನ್ನು ಪೂಜಿಸುತ್ತಾರೆ, ರಾಜಸರು ಯಕ್ಷ ರಾಕ್ಷಸರನ್ನು ಪೂಜಿಸುತ್ತಾರೆ. ತಾಮಸ ಜನರು(ಶೂದ್ರರು) ಪ್ರೇತಭೂತಗಣಗಳನ್ನು ಪೂಜಿಸುತ್ತಾರೆ"[72] ಮಲೆನಾಡಿನಲ್ಲಿ ಭೂತ ಪಿಶಾಚಿಗಳಿಗೆ ವರ್ಷಕ್ಕೆ ಒಂದುಸಲ ನಡೆಯುತ್ತಿದ್ದ 'ದೆಯ್ಯದ ಹರಕೆ' ಜನಪ್ರಿಯವಾಗಿತ್ತು."ಕಾನೂರಿನಲ್ಲಿ ದೆಯ್ಯದ ಹರಕೆ ಎಂದರೆ ಅದೊಂದು ಮಹಾಸಂಭ್ರಮದ ಘಟನೆ. ಚಂದ್ರಯ್ಯಗೌಡರ ಆಳು, ಒಕ್ಕಲು, ಸಮೀಪದ ಬಂಧುಗಳು ಎಲ್ಲರೂ ಅದರಲ್ಲಿ ಭಾಗಿಗಳಾಗುವುದು ವಾಡಿಕೆಯಾಗಿತ್ತು. ಕೆಲವು ಕುರಿಗಳು ಅನೇಕ ಕುಕ್ಕುಟಗಳೂ ಆ ದಿನ ಭೂತ, ರಣ, ಬೇಟೆ ರಣ, ಚೌಡಿ, ಪಂಜ್ರೊಳ್ಳಿ ಮೊದಲಾದ ದೆಯ್ಯ ದ್ಯಾವರುಗಳಿಗೆ ಬಲಿಯಾಗುತ್ತಿದ್ದುದರಿಂದ ಕೆಲವರ ಕಣ್ಣಿಗೂ ಎಲ್ಲರ ಹೊಟ್ಟೆಗೂ ಹಬ್ಬವಾಗುತ್ತಿತ್ತು."[73] ಭೂತಗಳಿಗೆ ರಕ್ತ ಬಲಿಯಾಗುವ ಮುನ್ನ ಬ್ರಾಹ್ಮಣರಿಂದ 'ಜೈನೆಡೆ' ಹಾಕಿಸುವುದು ವಾಡಿಕೆಯಾಗಿತ್ತು.

ಭೂತಗಳಿಗೆ ರಕ್ತ ಬಲಿಕೊಡುವ ವಿಧಾನವಂತೂ ಭೀಭತ್ಸಕಾರಿಯಾಗಿರುವುದನ್ನು ಕಾಣುತ್ತೇವೆ. ಹರಕೆ ಹೊತ್ತುಕೊಂಡವರು ತಮ್ಮ ಇಷ್ಟಾನುಸಾರ ಕುರಿ, ಕೋಳಿಗಳನ್ನು ಬಲಿಕೊಡುವುದು ವಾಡಿಕೆ. ಚೌಡಿಗೆ ಬಲಿಕೊಡುವ ಪ್ರಾಣಿಗಳನ್ನು ಕತ್ತಿಯಿಂದ ಕತ್ತರಿಸಿ ಕೊಲ್ಲುತ್ತಿರಲಿಲ್ಲ; "ಬದಲಾಗಿ ಪ್ರಾಣಿಯ ಕಾಲುಗಳನ್ನು ಭದ್ರವಾಗಿ ಕಟ್ಟಿ, ಅದನ್ನು ಹೊಟ್ಟೆಮೇಲಾಗಿ ಅದುಮಿ ಹಿಡಿದುಕೊಂಡಮೇಲೆ, ಒಬ್ಬನು ಒನಕೆಯಿಂದ ಪ್ರಾಣಿಯ ವಕ್ಷಸ್ಥಳಕ್ಕೆ ಬೀಸಿ ಬೀಸಿ ಹೊಡೆದು ಹೊಡೆದು ಕೊಲ್ಲುತ್ತಿದ್ದನು, ಹಾಗೆ ಕೊಂದರೇನೆ ಆ ಚೌಡಿಗೆ ಸಂತೃಪ್ತಿಯಂತೆ!"[74] ಹೀಗೆ ರಕ್ತ ಬಲಿಕೊಡುವ ದೃಶ್ಯವಂತೂ ಅತ್ಯಂತ ಕ್ರೂರವಾದ ಹರಕೆಯಾಗಿ ಮಲೆನಾಡಿನಲ್ಲಿ ಆಚರಣೆಯಾಗುತ್ತಿತ್ತು. ಹಾಗೆಯೇ ಭೂತ ಪ್ರಾಣಿಗಳ, ಮನುಷ್ಯರ ಮೇಲೆ ಬರುತ್ತದೆ ಎಂಬ ನಂಬಿಕೆ ಕೂಡ ಅಂದಿನ ದೇಸೀಯ ಬದುಕಿನಲ್ಲಿತ್ತು. ಭೂತರಾಯನಿಗೆ ಬಲಿಕೊಡಲು ತಂದಿತ್ತ ಹೋತ ತಪ್ಪಿಸಿಕೊಂಡ ಮೇಲೆ ಅದರಲ್ಲಿ ಭೂತ ಹೊಕ್ಕಿದೆ: "ಆ ಹೋತವನ್ನು ಭೂತಕ್ಕೆ ಮತ್ತೆ ಬಲಿಕೊಟ್ಟ ಹೊರತು ಊರಿಗೆ ಸುಖವಿಲ್ಲ..... ಭೂತ ಹೂವಯ್ಯಗೌಡರ ಕೈವಶವಾಗಿ ಹೋತದಲ್ಲಿ ವಾಸಿಸುತ್ತಿದೆ ಅವರು ಹೇಳಿದ ಹಾಗೆ ಭೂತ ಕೇಳುತ್ತಿದ್ದೆ ಎಂದು ಕಾನೂರಿನ ಸುತ್ತಮುತ್ತಲ ಜನ ಮಾತಾಡಿಕೊಳ್ಳುತ್ತಿದ್ದರು"[25] ಹಳೆಪೈಕದ ತಿಮ್ಮ ತಂದು ಕೊಟ್ಟ ನೊರೆಕಳ್ಳನ್ನು ಅತಿಯಾಗಿ ಸೇವಿಸಿದ ನಂತರ ಚಂದ್ರಯ್ಯಗೌಡರು ಅಬ್ಬರಿಸಿ ಕುಣಿದಾಗ: "ಗೌಡರ ಮೇಲೆ ಭೂತ ಬಂದಿದೆಯಂತೆ ಎಂದು ಆಳುಕಾಳುಗಳೆಲ್ಲ ನೆರೆದರು".[76] ಮುತ್ತಳ್ಳಿ ಸೀತೆಗೆ ಪ್ರಜ್ಞೆ ತಪ್ಪಿ ಹಾಸಿಗೆಯಲ್ಲಿ ಮಲಗಿದಾಗ ಜೋಯಿಸರು ಬಂದು ನೋಡಿ: "ಸೀತೆಮನೆ ಸಿಂಗಪ್ಪಗೌಡರ ಸತ್ತುಹೋದ ಮಗ ಕೃಷ್ಣನೇ ಎಂದು ನಿಮಿತ್ತ ಹೇಳುತ್ತಾರೆ."[77] ದೇವಸ್ಥಾನದಲ್ಲಿ ಸೀತೆ ನಕ್ಕಿದ್ದು ಕೂಡ ಅಪಾರ್ಥವಾಯಿತು, ಆಕೆಗೆ ಕೃಷ್ಣನ ದೈಯ್ಯವೇ ಕಾರಣವಾಗಿರಬೇಕೆಂದು ಎಲ್ಲರೂ ಊಹಿಸಿದರು.[78] ಭೂತ–ಪಿಶಾಚಿ, ದೆಯ್ಯ-ದ್ಯಾವರುಗಳಿಗೆ ಸರಿಯಾಗಿ ಹರಕೆ ತೀರಿಸದೇ ಹೋದಾಗ, ಬಲಿಕೊಡಲು ವಿಫಲವಾದಾಗ ಮೈಮೇಲೆ ಬರುತ್ತದೆ, ಕೇಡುಂಟಾಗುತ್ತದೆ ಎಂಬ ನಂಬಿಕೆ ಮಲೆನಾಡಿನ ದೇಸಿ ಬದುಕಿನಲ್ಲಿ ಸಾಮಾನ್ಯವಾಗಿತ್ತು. ಚಿಕ್ಕಮಕ್ಕಳಿಗೆ ಜಕಣಿ "ಪಂಜ್ರೊಳ್ಳಿ ಕಾಟ ಕೊಡುತ್ತವೆ ಮತ್ತು ಅವುಗಳಿಂದ ತಪ್ಪಿಸಿಕೊಳ್ಳಲು ಮಾಟ–ಮಂತ್ರ ಮಾಡಿಸಿ ತಾಯಿತ ಕಟ್ಟುವುದು ಸಹ ವಾಡಿಕೆಯಾಗಿತ್ತು."[79]

ದೆಯ್ಯಹಿಡಿದವರಿಗೆ ನೀಡುವ ಶಿಕ್ಷೆವಿಧಾನಗಳೂ ಸಹ ಕಠಿಣವಾಗಿದ್ದುದನ್ನು ಕಾಣಬಹುದು. ಕಾನೂರಿನ ಚಂದ್ರಯ್ಯಗೌಡರು ತಮ್ಮ ಸೊಸೆಯಾಗಲಿರುವ ಸೀತೆ ಮೇಲೆ ಬಂದಿರುವ ಕೃಷ್ಣಪ್ಪನ ದೆಯ್ಯವನ್ನು ಬಿಡಿಸಲು ಅನೇಕ ವಿಧವಿಧವಾದ ಶಿಕ್ಷಾವಿಧಾನಗಳನ್ನು ಸೂಚಿಸುತ್ತಾರೆ. "ಸೆಗಣಿ ತಿನ್ನಿಸುವುದು, ಬರೆ ಹಾಕುವುದು, ಉಪವಾಸ ಕೆಡವಿ ಜೀರಿಗೆ ಮೆಣಸಿನ ಕಾಯಿಯ ಕಾರದ ಮುದ್ದೆಯನ್ನು ತಿನ್ನಿಸುವುದು, ತಿನ್ನದಿದ್ದರೆ ಕಣ್ಣಿಗೆ ಕಾರ ಸಿಡಿಯುವುದು, ಪಟಿಕಾರ, ಕೂದಲು,

ಇಂಗು, ಒಣಮೆಣಸಿನಕಾಯಿ ಮೊದಲಾದ ಪದಾರ್ಥಗಳನ್ನು ಉರಿಹಾಕಿ ಮೂಗಿಗೆ ಹೊಗೆ ಹಿಡಿಯುವುದು, ವೆಂಕಪ್ಪಜೋಯಿಸರಿಂದ ಮಂತ್ರ ಹಾಕಿಸಿ, ದಿಗ್ಬಂಧನ ಮಾಡಿಸಿ ಅವರಿಗೆ ತಿಳಿದಿರುವ ಮಂತ್ರದ ಯಾತನೆಗಳನ್ನೆಲ್ಲ ಪ್ರಯೋಗಿಸುವುದು... ಇತ್ಯಾದಿ.[80] ಇನ್ನು ಹೊರಗಿನ ದೆವ್ವಗಳು ಮನೆಯ ಒಳಗೆ ಬರದಂತೆ ತಡೆಯುವ ವಿಧಾನಗಳನ್ನು ಮಲೆನಾಡಿನ ಜನರು ಅನುಸರಿಸುತ್ತಿದ್ದರು ಅವುಗಳೆಂದರೆ ಕಿಟಕಿ ಬಾಗಿಲುಗಳಿಗೂ ಮೆಟ್ಟು, ಪೊರಕೆ, ಮಂತ್ರಿಸಿದ ಕಾಯಿ ಮುಂತಾದ ವಸ್ತುಗಳನ್ನು ತೋರಣ ಕುಟ್ಟುತ್ತಿದ್ದರು.[81]

ದೆಯ್ಯ, ದ್ಯಾವರು, ಭೂತ, ಪಿಶಾಚಿಗಳಲ್ಲಿಯ ನಂಬಿಕೆ ಸಾಮಾನ್ಯವಾಗಿ ಗ್ರಾಮೀಣ ಭಾಗದಲ್ಲಿ ಹೆಚ್ಚು ಪ್ರಚಲಿತದಲ್ಲಿದ್ದರೂ, ಮಲೆನಾಡಿನ ಭಾಗದಲ್ಲಿ ಹೆಚ್ಚಾಗಿದ್ದುದನ್ನು ಕಾಣಬಹುದು. ಮಲೆನಾಡಿಗೆ ಕೆಲಸವನ್ನರಸಿ ಬರುತ್ತಿದ್ದ ಘಟ್ಟದ ಕೆಳಗಿನವರು ಇದಕ್ಕೆ ಕಾರಣವಾಗಿರಬಹುದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈವತ್ತಿಗೂ ರೂಢಿಯಲ್ಲಿರುವ ಭೂತಾರಾಧನೆ, ಪಂಜ್ರೊಳ್ಳಿ, ಜಕಣಿ, ಮಸಣೆ, ಕಲ್ಲುಡ್ಕ, ಚೌಡಿ ಮುಂತಾದವು ಮಲೆನಾಡಿಗೆ ವಲಸೆ ಬಂದವರ ಮೂಲಕ ಬಂದಿರುವುದು ಸ್ಪಷ್ಟವಾಗುತ್ತದೆ. ಕಾಲಾನಂತರದಲ್ಲಿ ಭೂತಾರಾಧನೆ, ಬಲಿನೀಡುವುದು, ಹರಕೆ ಹೊರುವುದು, ಮಲೆನಾಡಿನ ದೇಸೀಯ ಬದುಕಿನ ಭಾಗವಾಗಿರುವುದನ್ನು ಕಾಣಬಹುದು.

5.5 ದೇಸಿ ವೈದ್ಯ ಪದ್ಧತಿ:

ಆಧುನಿಕ ವೈದ್ಯ ಪದ್ಧತಿ, ಶಿಕ್ಷಣ, ಆರೋಗ್ಯ ಸಂಸ್ಥೆಗಳಿಂದ ದೂರ ಉಳಿದಿದ್ದ ಮಲೆನಾಡಿನ ದೇಸಿಯ ಬದುಕಿನಲ್ಲಿ ನಾಟೀ ವೈದ್ಯ ಪದ್ಧತಿ ಅಥವಾ ದೇಸೀ ವೈದ್ಯ ಪದ್ಧತಿಯೇ ಸಾಮಾನ್ಯವಾಗಿತ್ತು. ಹಳ್ಳಿಗಳಲ್ಲಿ ಯಾರಿಗಾದರೂ ಕಾಯಿಲೆ ಬಂದರೆ, ಮಗು ಚಂಡಿ ಹಿಡಿದರೆ, ರಾವು ಹಿಡಿದರೆ, ಪ್ರಾಣಿಗಳಿಗೆ ಜಾಡ್ಯ ಹಿಡಿದರೆ ಮೊದಲು ಭೇಟಿ ಮಾಡುತ್ತಿದ್ದುದು ಜೋಯಿಸರನ್ನು, ಮಂತ್ರವಾದಿಗಳನ್ನು ಮತ್ತು ಪೂಜಾರಿಗಳನ್ನು ನಂತರ ಗಿಡ ಮೂಲಿಕೆಗಳಿಂದ ಮದ್ದು ನೀಡುವ ದೇಸಿ ವೈದ್ಯರನ್ನು. ಮಲೆನಾಡಿನಲ್ಲಿ ಸಣ್ಣಪುಟ್ಟ ಕಾಯಿಲೆಗಳ ಉಪಚಾರವನ್ನು ವ್ಯಕ್ತಿಗಳು ತಾವೇ ಮಾಡಿಕೊಳ್ಳುತ್ತಿದ್ದರು. ಧಾರ್ಮಿಕ ಆಚರಣೆ ರೂಢಿ ಸಂಪ್ರದಾಯಗಳಂತೆಯೇ ದೇಸಿ ವೈದ್ಯ ಪದ್ಧತಿಯೂ ಪರಂಪರಾಗತವಾಗಿ ಬೆಳೆದು ಬಂದು ಸ್ಥಳೀಯರ ಬದುಕಿನ ಭಾಗವಾಗಿತ್ತು. ಆದ್ದರಿಂದಲೇ ನಾಟಿವೈದ್ಯ ಪದ್ಧತಿಯನ್ನು ಸಾಂಪ್ರದಾಯಿಕ ಅಥವಾ ದೇಸಿ ವೈದ್ಯಪದ್ಧತಿ ಎನ್ನಬಹುದು. ಗಿಡ-ಮೂಲಿಕೆಗಳಿಂದ ಔಷಧಗಳನ್ನು ತಯಾರಿಸಿ ಚಿಕಿತ್ಸೆ ನೀಡುತ್ತಿದ್ದ ವೈದ್ಯರನ್ನು

'ಪಂಡಿತರು' ಎಂದು ಕರೆಯುತ್ತಿದ್ದರು. ಅಂದಿನ ಮಲೆನಾಡಿನಲ್ಲಿ ಜನರನ್ನು ಕಾಡುತ್ತಿದ್ದ ಕಾಯಿಲೆಗಳಲ್ಲಿ ಕೆಮ್ಮು, ಸೀತ, ಗೂರ್ಲು, ಜ್ವರ, ಜಾಡ್ಯ, ಹಸಿಬಕ್ಕೆ, ಕುರು, ತುರುಗಜ್ಜಿ, ಆಮಶಂಕೆ, ತಲೆನೋವು, ಉಬ್ಬಸ, ಮುಂತಾದವು ಮುಖ್ಯವಾಗಿದ್ದವು.

<u>ಕಾನೂರು ಹೆಗ್ಗಡಿತಿ</u> ಕಾದಂಬರಿಯಲ್ಲಿ ಕೆಳಕಾನೂರಿನ ಅಣ್ಣಯ್ಯಗೌಡ ಹಳ್ಳಿಯ ನಾಟಿ ವೈದ್ಯನಾಗಿದ್ದು, ಗಿಡಮೂಲಿಕೆಗಳಿಂದ ಕಷಾಯ ಮಾಡಿ ಕಾಯಿಲೆಗಳನ್ನು ಗುಣಪಡಿಸುತ್ತಿದ್ದನು ಮತ್ತು ಆಸ್ಪತ್ರೆಯ ಡಾಕ್ಟರೆಂದರೆ ನಿಷ್ಪ್ರಯೋಜಕರು ಎಂದುಕೊಂಡಿದ್ದನು. ಆಸ್ಪತ್ರೆ ಡಾಕ್ಟರುಗಳಿಂದೇನಾಗುತ್ತದೆ? ಅಗ್ರಹಾರದ ಜೋಯಿಸ ವೆಂಕಪ್ಪಯ್ಯನವರು ಮಂತ್ರ ತಂತ್ರಗಳಿಂದಲೂ, ತಿರುಪತಿ ಧರ್ಮಸ್ಥಳಗಳ ದೇವರುಗಳಿಂದಲೂ ತನ್ನ ಹಳ್ಳಿಯ ವೈದ್ಯದಿಂದಲೂ (ತಾನು ಎಷ್ಟು ಜನರಿಗೆ ಮದ್ದು ಕೊಟ್ಟಿಲ್ಲ! ಎಷ್ಟು ಜನರು ಬದುಕಿಕೊಂಡಿಲ್ಲ!) ಎಷ್ಟೋ ಜನರಿಗೆ ತಾನೇ ಉಪದೇಶ ಮಾಡಿಲ್ಲವೇ ಆಸ್ಪತ್ರೆಗೆ ಹೋಗಬೇಡಿ ಎಂದು...[82] ಇಂಬಳ ಅಥವಾ ಜಿಗಣೆಗಳಿಂದ ಪಾರಾಗಲೂ ಉಪ್ಪು ಸುಣ್ಣಗಳನ್ನು, ಬಟ್ಟೆಯಲ್ಲಿ ಕಟ್ಟಿಕೊಂಡು ಒರೆಸಿಕೊಳ್ಳುತ್ತಿದ್ದರು ಮತ್ತು ಹೊಗೆಸೊಪ್ಪು ಅಥವಾ ನಶ್ಯ ಬಳಸುತ್ತಿದ್ದರು.[83] ನೀರುಹಾವು ಕಚ್ಚಿದರೆ ಕೊಳಕು ನೀರನ್ನು ಕುಡಿಸಿ ಮದ್ದು ಮಾಡುತ್ತಿದ್ದರು.[84] ಬಿದ್ದು ಪೆಟ್ಟಾದರೆ, ಗಾಯಗಳಾದರೆ ತೆಂಗಿನ ಎಣ್ಣೆಯನ್ನು ಹಚ್ಚುತ್ತಿದ್ದರು.[85] ಮೂರ್ಛೆ ಹೋದರೆ, ಪ್ರಜ್ಞೆ ತಪ್ಪಿದರೆ ತಲೆಗೆ ನೀರು ತಟ್ಟಿ, ಗಾಳಿ ಬೀಸುತ್ತಿದ್ದರು.[86] ಹೀಗೆ ದೇಸಿ ವೈದ್ಯಪದ್ಧತಿಯಲ್ಲಿ ಸಣ್ಣ ಪುಟ್ಟ ಕಾಯಿಲೆಗಳಿಗೆ ಗಿಡಮೂಲಿಕೆಗಳಿಂದ ತಯಾರಿಸಿದ ಕಷಾಯ, ಚೂರ್ಣ, ಭಸ್ಮ ಮುಂತಾದವುಗಳನ್ನು ಬಳಸಿ ಮಾಟ-ಮಂತ್ರ, ತಾಯಿತ, ಅಂತ್ರ, ಹರಕೆ ಮುಂತಾದ ನಂಬಿಕೆಗಳಿಂದ ಮಲೆನಾಡಿನ ಜನಕ್ಕೆ ದೇಸಿ ವೈದ್ಯರು ಚಿಕಿತ್ಸೆ ನೀಡುತ್ತಿದ್ದರು.

<u>ಮಲೆಗಳಲ್ಲಿ ಮದುಮಗಳು</u> ಕಾದಂಬರಿಯಲ್ಲಿ ದೇಸಿವೈದ್ಯ ಪದ್ಧತಿಯ ಬಗ್ಗೆ ಸಾಕಷ್ಟು ನಿದರ್ಶನಗಳನ್ನು ಕಾಣುತ್ತೇವೆ. ಮೇಗರವಳ್ಳಿಯ ಕಣ್ಣಾಪಂಡಿತರು ಮಲೆನಾಡಿನ ಪ್ರಾಂತ್ಯದಲ್ಲೇ ಪ್ರಸಿದ್ಧಿಯಾದ ದೇಸಿವೈದ್ಯರಾಗಿದ್ದು ಯಾವುದೇ ತರಹದ ಖಾಯಿಲೆಗೆ ನಾಟಿ ಔಷಧಿಯನ್ನು ಕೊಡುವುದರ ಜೊತೆ ಅಂತ್ರ, ತಾಯಿತಗಳನ್ನು ಕೊಡುತ್ತಿದ್ದರು. ಕಾದಂಬರಿಯ ಕಾಡಿ ವಿಧವೆಯಾಗಿದ್ದರೂ ಬಸಿರಾದಾಗ ಇದೇ ಪಂಡಿತರು ಮದ್ದುಕೊಟ್ಟು ಹೊಟ್ಟೆಯ ಹೊರೆಯಿಳಿಸಿದ್ದರು.[87] ಗುತ್ತಿ ಕಣ್ಣಾಪಂಡಿತರಿಂದ ಭರಮೈ ಹೆಗ್ಗಡೆಗೆ ಔಷಧಿಯನ್ನು ತೆಗೆದುಕೊಂಡು ಹೋಗುವಾಗ, ಜಟ್ಟಮ್ಮ ಹೆಗ್ಗಡತಿಯವರಿಗೆ, "ಕಣ್ಣಾಪಂಡಿತರು ಇನ್ನೊಂದೆರಡು ಮೂರು ದಿನಗಳಲ್ಲಿ ಔಷಧಿ ತಯಾರು ಮಾಡಿಕೊಂಡು ತಾವೇ ಖುದ್ದು ಬಂದು, ಹೆಗ್ಗಡೆ ಹೆಗ್ಗಡಿತಿ ಇಬ್ಬರಿಗೂ ಮಕ್ಕಳಗಾವುದಕ್ಕೂ, ಆರೋಗ್ಯವಾಗುವುದಕ್ಕೂ ಮದ್ದು ಕೊಡುವುದಾಗಿ ಹೇಳಿದರು."[88]

ಎಂಬುದನ್ನು ತಿಳಿಸುತ್ತಾನೆ. ಭರಮ್ಮೆ ಹೆಗ್ಗಡೆಯವರ ಮರ್ಮರೋಗಕ್ಕೆ ಕಣ್ಣಾಪಂಡಿತರು ಮದ್ದು ಕೊಟ್ಟು ದಿನವೂ ಬೆಳಿಗ್ಗೆ ಆಗತಾನೇ ಇಳಿಸಿದ ತೆಂಗಿನ ಕಳ್ಳನ್ನು ಕುಡಿಯಬೇಕೆಂದು ಪಥ್ಯ ವಿಧಿಸಿದ್ದರು.[89] ಮಲೆನಾಡಿನಲ್ಲಿ ಕುನ್ನೇರ್ಲು ಕುಡಿ ಕಷಾಯ, ಕೊತ್ತುಂಬ್ರಿ ಬೀಜದ ಕಷಾಯ, ಸೊಗದೆ ಬೇರಿನ ಕಷಾಯ ಮುಂತಾದವು ಸಣ್ಣಪುಟ್ಟ ಕಾಯಿಲೆಗಳಿಗೆ ಔಷಧಿಯಾಗಿ ಬಳಕೆಯಲ್ಲಿದ್ದುದನ್ನು ಕಾಣುತ್ತೇವೆ.

ಹೀಗೆ ಕುವೆಂಪುರವರ ಕಾದಂಬರಿಗಳಲ್ಲಿ ದೇಸಿ ವೈದ್ಯಪದ್ಧತಿಯಿಂದ, ಧಾರ್ಮಿಕ ನಂಬಿಕೆ ಮತ್ತು ಮಾಟ-ಮಂತ್ರಗಳು, ಹರಕೆ-ಬಲಿಗಳು ಮುಂತಾದ ಮಾರ್ಗಗಳಿಂದ ಖಾಯಿಲೆಗಳು ಗುಣವಾಗುತ್ತವೆ ಎಂಬ ನಂಬಿಕೆ ಸಾಮಾನ್ಯವಾಗಿದ್ದುದನ್ನು ಕಾಣುತ್ತೇವೆ. ಮಲೆನಾಡಿನ ಗ್ರಾಮೀಣ ಪರಿಸರದಲ್ಲಿ ಬಳಕೆಯಲ್ಲಿದ್ದ ಔಷಧಿಗಳೆಲ್ಲ ಪ್ರಕೃತಿಯ ಉತ್ಪನ್ನಗಳೇ ಆಗಿದ್ದದು ಮತ್ತು ತಲತಲಾಂತರಗಳಿಂದ ಪ್ರಯೋಗಗೊಂಡು ಬಂದು ಜನಮನದಲ್ಲಿ ಬೇರೂರಿದ್ದನ್ನು ಕಾಣುತ್ತೇವೆ.

5.6 ಥಾಮಸ್ ಹಾರ್ಡಿಯವರ ಕಾದಂಬರಿಗಳಲ್ಲಿ ಧಾರ್ಮಿಕ ಆಚರಣೆ, ನಂಬಿಕೆ ಮತ್ತು ರೂಢಿ ಸಂಪ್ರದಾಯ:

ಥಾಮಸ್ ಹಾರ್ಡಿಯವರ ಕಾದಂಬರಿಗಳಲ್ಲಿ ಧಾರ್ಮಿಕ ನಂಬಿಕೆ ಮತ್ತು ಆಚರಣೆಗಳ ಬಗ್ಗೆ ಇರುವ ಉಲ್ಲೇಖಗಳಿಂದ ಎಗ್ಡನ್ ಹೀತ್‌ನ ಜನರು ಸಹ ಹೆಚ್ಚಿನ ಮಹತ್ವ ನೀಡಿರುವುದನ್ನು ಕಾಣಬಹುದು. 19ನೇ ಶತಮಾನದ ಆರಂಭದಲ್ಲಿದ್ದರೂ, ಕೈಗಾರಿಕಾ ಕ್ರಾಂತಿ ಮತ್ತು ಆಧುನಿಕ ನಾಗರೀಕತೆಯ ಸ್ಪರ್ಶ ಇಂಗ್ಲೆಂಡಿನ ಒಳನಾಡಿನ ವೆಸೆಕ್ಸ್ ಪರಿಸರದ ಜನರ ಮೇಲೆ ಹೆಚ್ಚಿನ ಪ್ರಭಾವ ಬೀರಲಿಲ್ಲ ಎನ್ನಬಹುದು. ಏಕೆಂದರೆ ಎಗ್ಡನ್ ಹೀತ್‌ನ ಜನ ಇನ್ನೂ ರೋಮನ್‌ರ ಪ್ರಭಾವಕ್ಕೊಳಗಾಗಿ ಒಂದು ಕಡೆ ವಾಸ್ತವವಾದಿಗಳಾಗಿ, ವಿರಕ್ತ ರೀತಿಯಿಂದ ನಡೆದುಕೊಳ್ಳುತ್ತಿದ್ದರು ಮತ್ತೊಂದೆಡೆ ಕ್ರಿಶ್ಚಿಯನ್ ಧರ್ಮದ ಅನುಕರಣೆಯನ್ನು ಮಾಡುತ್ತಾ ಭಾನುವಾರದ ಪ್ರಾರ್ಥನೆಗೆ ಚರ್ಚುಗಳಿಗೂ ಹೋಗುತ್ತಿದ್ದರು. ಯಾವುದೇ ನಿರ್ದಿಷ್ಟ ಧರ್ಮಕ್ಕಿಂತ ಮುಖ್ಯವಾಗಿ ರೂಢಿ ಸಂಪ್ರದಾಯಗಳಿಗೆ ಹೆಚ್ಚಿನ ಒಲವನ್ನು ಎಗ್ಡನ್ನಿನ ನಿವಾಸಿಗಳು ನೀಡಿದ್ದು ಅವರಲ್ಲಿ 'ಅರೆ ಪೇಗನ್' ಸಂಸ್ಕೃತಿಯನ್ನು ಕಾಣಬಹುದು.[90] ಹಾರ್ಡಿಯವರು ಅಷ್ಟೇ 19ನೇ ಶತಮಾನದ ಆದಿಯಲ್ಲಿದ್ದ ಸಾಂಪ್ರದಾಯಿಕ ಗ್ರಾಮೀಣ ಸಂಸ್ಕೃತಿ ಮತ್ತು ಎಗ್ಡನ್ ಹೀತ್‌ನ ಐತಿಹ್ಯದ ಬಗ್ಗೆ ಸಾಕಷ್ಟು ವಿವರಣೆಯನ್ನು ನೀಡಿದ್ದಾರೆ. ಕಾದಂಬರಿಯಲ್ಲಿ ಬರುವ ವಾರ್ಷಿಕೋತ್ಸವಗಳು, ಜಾತ್ರೆಗಳು, ಸಂಪ್ರದಾಯಗಳು ಪೇಗನ್ ಸಂಸ್ಕೃತಿಯ ಪ್ರತೀಕವಾಗಿದ್ದವು ಎನ್ನುವುದನ್ನು ಕಾದಂಬರಿಗಳಲ್ಲಿ

ನಿರೂಪಿಸಿದ್ದಾರೆ. ಇವುಗಳ ಜೊತೆಗೆ ಯೇಸುಕ್ರಿಸ್ತನ ಜನ್ಮ ವೃತ್ತಾಂತವನ್ನು ಅನಾವರಣಗೊಳಿಸುವ ನಾಟಕಗಳು, ವಾರ್ಷಿಕ ಕೊಂಡ ಅಥವಾ ದೀಪೋತ್ಸವಗಳು, ಮೇಪೋಲ್ ಹಬ್ಬ, ನೃತ್ಯ ಮುಂತಾದ ಉತ್ಸವಗಳು ಧಾರ್ಮಿಕ ಆಚರಣೆಗಳನ್ನು ಪ್ರತಿಬಿಂಬಿಸುತ್ತವೆ.

ವೆಸೆಕ್ಸ್ ಪ್ರಾಂತ್ಯದ ಗ್ರಾಮೀಣ ಜನತೆ ಕ್ರೈಸ್ತ ಧರ್ಮದ ಶಾಸ್ತ್ರಗಳು ಮತ್ತು ಧಾರ್ಮಿಕ ತತ್ವಗಳಿಗಿಂತ ಸಾಂಪ್ರದಾಯಿಕವಾಗಿ, ಜೀವನಾನುಭವದಿಂದ ಬೆಳೆದು ಬಂದಿದ್ದ ಪದ್ಧತಿ, ನಂಬಿಕೆ, ಶಕುನ, ಮೂಢನಂಬಿಕೆಗಳಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದಿದ್ದರು ಎನ್ನುವುದನ್ನು ಹಾರ್ಡಿಯವರ ಕಾದಂಬರಿಗಳಲ್ಲಿ ಕಾಣಬಹುದು.[91] ಎಗ್ಡನ್ನಿನ ಜನರು ಎಷ್ಟೊಂದು ಮುಗ್ಧರೆಂದರೆ ಬದುಕಿನ ಜಂಜಾಟದಲ್ಲಿ ಬರುವ ಕಷ್ಟಕೋಟಲೆಗಳನ್ನು ಸುಖ–ದುಃಖಗಳನ್ನು ಸಮಾನವಾಗಿ ಸ್ವೀಕರಿಸುವುದರ ಮೂಲಕ ಸಂತೋಷ ನೆಮ್ಮದಿಯಿಂದ ಬಾಳುತ್ತಿದ್ದರು ಎನ್ನುವುದನ್ನು ಹಾರ್ಡಿಯವರ ಕಾದಂಬರಿ 'ದಿ ರಿಟರ್ನ್ ಆಫ್ ದಿ ನೇಟಿವ್' ಅನಾವರಣಗೊಳಿಸುತ್ತದೆ. ಕುವೆಂಪುರವರ ಕಾದಂಬರಿಗಳಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಮತ ಆಧಾರಿತ ಮಠಗಳಾಗಲಿ, ಅಗ್ರಹಾರಗಳ ನಿದರ್ಶನಗಳನ್ನಾಗಲಿ ಹಾರ್ಡಿಯವರ ವೆಸೆಕ್ಸ್‌ನ ಗ್ರಾಮೀಣ ಪ್ರದೇಶದಲ್ಲಿ ಕಾಣಲು ಸಾಧ್ಯವಿಲ್ಲ. ಆದರೆ 19ನೇ ಶತಮಾನದ ಅಂತ್ಯದಲ್ಲಿ ಕಣ್ಮರೆಯಾಗುತ್ತಿದ್ದ ಕೆಲವು ಅರೆ ಧಾರ್ಮಿಕ ಆಚರಣೆಗಳನ್ನು ಹಾರ್ಡಿಯವರ ಕಾದಂಬರಿಗಳಲ್ಲಿ ಕಾಣಬಹುದು. ಇಂತಹ ಆಚರಣೆಗಳಲ್ಲಿ ಕ್ರಿಸ್‌ಮಸ್ ಮಮ್ಮಿಂಗ್ ಮುಖ್ಯವಾಗಿತ್ತು. ವೆಸೆಕ್ಸ್‌ನ ಜನರು ಅತಿ ಉತ್ಸಾಹದಿಂದ ಹಿಂದಿನ ರೂಢಿ–ಸಂಪ್ರದಾಯಗಳನ್ನು ಪ್ರಶ್ನಿಸದೆ ಯೇಸುಕ್ರಿಸ್ತನ ಹುಟ್ಟು–ಸಾವು ಕುರಿತ ಜನ್ಮ ವೃತ್ತಾಂತವನ್ನು ನಾಟಕದ ಮೂಲಕ ಅಭಿನಯಿಸುತ್ತಿದ್ದರು, ಇಂತಹ ನಾಟಕಗಳಲ್ಲಿ ಮನರಂಜನೆಯ ಜೊತೆಗೆ ರೂಢಿ–ಸಂಪ್ರದಾಯದಲ್ಲಿ ಭಕ್ತಿ ಮತ್ತು ಧಾರ್ಮಿಕ ಶ್ರದ್ಧೆಯನ್ನು ಗುರುತಿಸಬಹುದು.[92]

5.7 ಕ್ರೈಸ್ತ ಧರ್ಮದ ಪೂರ್ವದಲ್ಲಿದ್ದ ಪೇಗನ್ ಸಂಸ್ಕೃತಿ

ಹಾರ್ಡಿಯವರ ಕಾದಂಬರಿಗಳಲ್ಲಿ ವೆಸೆಕ್ಸ್‌ನ ಪ್ರದೇಶದ ಮುಗ್ಧ ಹಳ್ಳಿಗರು ಹೆಚ್ಚಾಗಿ ಪೇಗನ್ ಸಂಸ್ಕೃತಿಯನ್ನೆ ಅವಲಂಬಿಸಿದ್ದರು. ಪ್ರಕೃತಿಯ ಆರಾಧಕರಾಗಿದ್ದರು, ಜೀವನಾನುಭವದಿಂದ ಪಡೆದ ರೂಢಿ–ಸಂಪ್ರದಾಯಗಳಲ್ಲಿ ನಂಬಿಕೆಯುಳ್ಳವರಾಗಿದ್ದರು. ಟೆಸ್ಸ್ ಕಾದಂಬರಿಯ ಏಂಜೆಲ್‌ಕ್ಲೇರ್ ತನ್ನ ತಂದೆ, ಸಹೋದರರಂತೆ ಧಾರ್ಮಿಕ ಶಾಸ್ತ್ರವನ್ನು ಅಧ್ಯಯನ ಮಾಡದೆ ಟಾಲ್‌ಬೋತೆಗೆ ಹೈನುಗಾರಿಕೆಯ ಬಗ್ಗೆ ತರಬೇತಿ ಪಡೆಯಲು ಬರುವುದು, ಅವನಲ್ಲಿದ್ದ

ಧಾರ್ಮಿಕ ಮನೋಭಾವವನ್ನು ತಿಳಿದುಕೊಳ್ಳಬಹುದು. ಏಂಜೆಲ್ ಕ್ಲೇರ್‌ನ ತಂದೆ ದೇವರಲ್ಲಿ ಅತಿಯಾದ ನಂಬಿಕೆಯುಳ್ಳವರು, ಆಧ್ಯಾತ್ಮಿಕ ಜೀವನವನ್ನು ತಂಬಿ ತನ್ನ ಹಳ್ಳಿಯವರಿಗೂ ದೇವರ ಬಗ್ಗೆ, ಬೈಬಲ್ಲಿನ ತತ್ವಗಳ ಬಗ್ಗೆ ಉಪದೇಶ ನೀಡುತ್ತಿದ್ದರು ದೇವರು, ಧರ್ಮವೇ ಅವರ ಉಸಿರಾಗಿತ್ತು. ಆದರೆ ಏಂಜೆಲ್‌ಕ್ಲೇರ್ ಧಾರ್ಮಿಕಶಾಸ್ತ್ರದಿಂದ ದೂರ ಉಳಿದಿದ್ದನು. ಅವನ ಪ್ರಕಾರ ಅಸಮರ್ಥನೀಯ ಧರ್ಮಶಾಸ್ತ್ರ ಅಧ್ಯಯನಕ್ಕಿಂತ ಗ್ರಾಮೀಣ ಪ್ರದೇಶದ ಸರಳ ಸುಂದರ ಜೀವನವೇ ಮುಖ್ಯವಾಗುತ್ತದೆ. ಏಂಜೆಲ್‌ಕ್ಲೇರ್ ಟಾಲ್‌ಬೋತಿಯ ಪೇಗನ್ ಸಂಸ್ಕೃತಿಯ ಸಹವಾಸದಲ್ಲಿ ಕ್ರೈಸ್ತಮತದಿಂದ ದೂರವಾಗಿ ನೆಮ್ಮದಿಯಾಗಿರುತ್ತಾನೆ.[93] ಟಾಲ್‌ಬೋತಿಯ ಗ್ರಾಮೀಣ ಬದುಕು ಪ್ರಕೃತಿಯ ಸುಂದರ ಮಡಿಲಿನಲ್ಲಿರುವಂತಹದ್ದು ಏಂಜೆಲ್ ಪ್ರಕಾರ ಪ್ರಕೃತಿದತ್ತವಾದ ಹಳ್ಳಿಯ ಬದುಕು ಎಷ್ಟೊಂದು ಉದಾತ್ತವಾಗಿದೆ ಎಂದರೆ "that it might have resulted far better for mankind if Greece had been the source of the religion of modern civilization, and not of Palestine"[೯೪] ಇಂಗ್ಲೆಂಡಿನ ಒಳನಾಡಿನ ಗ್ರಾಮೀಣ ಪ್ರದೇಶದಲ್ಲಿ ಇನ್ನೂ ಕೂಡ ಅಸ್ತಿತ್ವದಲ್ಲಿದ್ದ ಗ್ರೀಕ್ ಮತ್ತು ರೋಮನ್‌ರ ಪೇಗನ್ ಸಂಸ್ಕೃತಿ ಕ್ರೈಸ್ತ ಧರ್ಮಕ್ಕಿಂತಲೂ ಶ್ರೇಷ್ಠವಾದದ್ದು, ಸಹಜವಾದದ್ದು ಎಂಬ ನಂಬಿಕೆ ಏಂಜೆಲ್ ಕ್ಲೇರ್‌ನದ್ದಾಗಿತ್ತು.

ಹಾರ್ಡಿಯವರು ಟೆಸ್ಸ್‌ಳನ್ನು "a fresh and virginal daughter of Nature"[95] ಎಂದು ವರ್ಣಿಸುವಾಗ ಪ್ರಕೃತಿಯ ಬಗ್ಗೆ ಜನರಲ್ಲಿದ್ದ ಗೌರವ, ಭಾವನಾತ್ಮಕ ಸಂಬಂಧ ಪೇಗನ್ ಸಂಸ್ಕೃತಿಯಾಗಿದ್ದು ಕ್ರೈಸ್ತಮತದ ತತ್ವಗಳ ವಿರುದ್ಧವಾಗಿದೆ ಎನ್ನಬಹುದು. ಹಾರ್ಡಿಯವರ ಹೆಚ್ಚಿನ ಪಾತ್ರಧಾರಿಗಳು ಪೇಗನ್ಸ್ ಎಂದೇ ಹೇಳಬಹುದು, ಅದರಲ್ಲೂ ಟೆಸ್ಸ್‌ಳ ಪಾತ್ರ ಪೇಗನ್ ಸಂಸ್ಕೃತಿಯ ಪ್ರತೀಕವಾಗಿದೆ. ಪ್ರಕೃತಿ ಮತ್ತು ಟೆಸ್ಸ್‌ಳನ್ನು ಬೇರ್ಪಡಿಸಲಾರದಷ್ಟು ಬೆಸೆದುಕೊಂಡಿರುವುದು ಆಕೆ ಕ್ರಿಶ್ಚಿಯನ್‌ಳಲ್ಲ ಎನ್ನುವುದನ್ನು ಪುಷ್ಟೀಕರಿಸುತ್ತದೆ. ಆಕೆ ಮಣ್ಣಿನ ಮಗಳು, ಪ್ರಕೃತಿಯ ಒಂದಂಶವಾಗಿದ್ದಳು ಎಂದರೆ ಪೇಗನ್ ಸಂಸ್ಕೃತಿಯ ಪ್ರತೀಕವಾಗಿದ್ದಳು ಎಂದೇ ಹೇಳಬಹುದು. ಮಾನವನ ಭಾವನೆಗಳಿಗೆ ಸ್ಪಂದನ ನೀಡುವುದು ಪ್ರಕೃತಿ, ಅವನ ಕಷ್ಟನಷ್ಟಗಳಿಗೆ, ನೋವುನಲಿವುಗಳಿಗೆ ಪ್ರಕೃತಿಯು ಪ್ರತಿಸ್ಪಂದಿಸುತ್ತದೆ. ಕೆಲವು ವೇಳೆ ಮಾನವನ ಸಂತೋಷವನ್ನು ಹೆಚ್ಚಿಸಿದರೆ ಅದೇ ಪ್ರಕೃತಿ ಮಾನವನ ದುಃಖಗಳಿಗೂ ಕಾರಣವಾಗುತ್ತದೆ. ಟೆಸ್ಸ್‌ಳ "ಆಸೆ, ಭರವಸೆಗಳು ಸೂರ್ಯ ಕಿರಣಗಳಲ್ಲಿ ಸಮ್ಮಿಳಿತಗೊಂಡು, ದಕ್ಷಿಣದ ತಂಗಾಳಿಗೆ ಮೈಯಿಡ್ಡಿ ಆಕೆಗೆ ಒಂದು ರೀತಿಯ ಸುಖಾನುಭವವನ್ನು ಉಂಟುಮಾಡಿದರೆ ಏಂಜೆಲ್‌ಕ್ಲೇರ್ ಮದುವೆಯ ಪ್ರಸ್ತಾಪವನ್ನು ಮುಂದಿಟ್ಟಾಗ ಅದೇ ಪ್ರಕೃತಿಯ ಚಟುವಟಿಕೆಗಳು ಭೀಕರವಾಗಿ ಕಾಣುತ್ತವೆ.[96] ಹೀಗೆ

ಪ್ರಕೃತಿಯಲ್ಲಿ ಜರಗುವ ಅನೇಕ ಬದಲಾವಣೆಗಳು, ಘಟನೆಗಳು ಮಾನವನ ಮನಸ್ಥಿತಿಯ ಮೇಲೆ, ಅವನ ಬದುಕಿನ ಮೇಲೆ ಪ್ರಭಾವ ಬೀರುವುದನ್ನು ಕಾಣುತ್ತೇವೆ.

ಹಾರ್ಡಿಯವರ ಕಾದಂಬರಿಗಳಲ್ಲಿ ಎರಡು ಬಗೆಯ ಧಾರ್ಮಿಕ ನಂಬಿಕೆಗಳನ್ನು ಕಾಣಬಹುದು. ಮೊದಲನೆಯದು ಗ್ರೀಕ್ ಮತ್ತು ರೋಮನ್ ಸಂಸ್ಕೃತಿಯ ಆಂಗ್ಲೋ ಸ್ಯಾಕ್ಸನ್ ಅಂದರೆ ಇಂಗ್ಲೆಂಡಿನ ಮೂಲ ನಿವಾಸಿಗಳ ಮೇಲೆ ಪ್ರಭಾವ ಬೀರಿದ್ದು, ಅದು 19ನೇ ಶತಮಾನದ ಅಂತ್ಯದವರೆಗೆ ಕೆಲವೊಂದು ಗ್ರಾಮೀಣ ಪ್ರದೇಶದಲ್ಲಿ ರೂಢಿಯಲ್ಲಿದ್ದವು ಎನ್ನುವುದು. ಎರಡನೆಯದು ಕ್ರಿಶ್ಚಿಯನ್ ಧರ್ಮದ ಪ್ರಭಾವ, ಮುಂದೆ ಇದು ಮತಾಂತರ, ಆಧುನಿಕ ಶಿಕ್ಷಣ, ವೈಜ್ಞಾನಿಕ ಆವಿಷ್ಕಾರಗಳಿಂದ ಇಂಗ್ಲೆಂಡಿನ ಗ್ರಾಮೀಣ ಪರಿಸರದಲ್ಲಿ ಬೇರೂರಿದ್ದ ಪೇಗನ್ ಸಂಸ್ಕೃತಿಯು ಕಣ್ಮರೆಯಾಗುವುದಕ್ಕೆ ಕಾರಣವಾಗುತ್ತದೆ.

ದಿ ರಿಟರ್ನ್ ಆಫ್ ದಿ ನೇಟಿವ್ ಕಾದಂಬರಿಯಲ್ಲಿ ಬರುವ ದೀಪೋತ್ಸವ ಪ್ರತಿವರ್ಷದ ನವೆಂಬರ್ 5ರಂದು ಎಗ್ಡನ್ ಹೀತ್‌ನಲ್ಲಿ ನಡೆಯುತ್ತಿತ್ತು. ಇದೊಂದು ಪೇಗನ್ ಸಂಸ್ಕೃತಿಯ ಸಂಪ್ರದಾಯವಾಗಿದ್ದು ಅಂಧಕಾರವನ್ನು ತೊಲಗಿಸುವ ಮತ್ತು ಫಲವತ್ತತೆಯ ಸಂಕೇತವಾಗಿತ್ತು. ಗಾಡಿಗಟ್ಟಲೆ ಒಣ ಕಟ್ಟಿಗೆಗಳನ್ನು ಪಿರಮಿಡ್ ಆಕಾರದಲ್ಲಿ ಸುಮಾರು ಮೂವತ್ತು ಅಡಿಗಳವರೆಗೆ ಪೇರಿಸಿ ಕಿಚ್ಚು ಹತ್ತಿಸುತ್ತಿದ್ದರು. ಬೆಂಕಿಯ ಜ್ವಾಲೆ ಸುತ್ತಮುತ್ತಲ ಹಳ್ಳಿಗಳ ಜನರಿಗೆ ಕಾಣಿಸುವಷ್ಟು ಎತ್ತರವಾಗಿ ಉರಿಯುತ್ತಿತ್ತು. ಬೆಂಕಿಯ ಸುತ್ತ ಹಳ್ಳಿಯ ಜನರೆಲ್ಲ ಒಟ್ಟಾಗಿ ನೃತ್ಯಮಾಡಿ ಆನಂದಿಸುವುದು ಸಂಪ್ರದಾಯವಾಗಿತ್ತು. ಇಂಗ್ಲೆಂಡಿನ ಸೆಲ್ಟಿಕ್ ಮತ್ತು ಆಂಗ್ಲೋ ಸಾಕ್ಸನ್ ಮೂಲನಿವಾಸಿಗಳು ಪೇಗನ್ ಸಂಸ್ಕೃತಿಯಾಗಿ ಚಳಿಗಾಲ ಪ್ರಾರಂಭವಾಗುವ ಮುನ್ನ ಆಚರಿಸುತ್ತಿದ್ದರು ಇದರ ಸಂಕೇತವಾಗಿ ಎಗ್ಡನ್ನಿನ ಜನಸಮುದಾಯದವರೂ ಸಹ ನವೆಂಬರ್ 5ರಂದು ಆಚರಿಸುತ್ತಿದ್ದದನ್ನು ಕಾಣುತ್ತೇವೆ. "It was as if these men and boys (the bonfire makers) had suddenly dived into past age...... the ashes of the original British pyre which blazed from that summit lay fresh and undisturbed in the barrow beneath their tread".[97] ಹೀಗೆ ಬಾನ್‌ಫೈರ್ ಅಥವಾ ದೀಪೋತ್ಸವ ರೂಢಿಸಂಪ್ರದಾಯದ ಜಾನಪದ ಹಬ್ಬವಾಗಿ ಆಚರಿಸಲ್ಪಡುತ್ತಿತ್ತು.

ಎಗ್ಡನ್ ಹೀತ್‌ನಲ್ಲಿ ಆಚರಿಸಲ್ಪಡುತ್ತಿದ್ದ ಮತ್ತೊಂದು ಧಾರ್ಮಿಕ ಉತ್ಸವವೆಂದರೆ ಮೇಪೋಲ್ ಆಚರಣೆ, ಅಥವಾ ಮೇಹಬ್ಬ. ಅಂದು ವಿವಿಧ ಬಣ್ಣಗಳಿಂದ ಕೂಡಿದ, ಪರಿಮಳಯುಕ್ತ ಹೂ ಬಳ್ಳಿಗಳಿಂದ ಒಂದು ಕಂಬವನ್ನು ಶೃಂಗರಿಸಿ ಕಂಬದ ತುದಿಯಲ್ಲಿ ಹಾಲಿನ

ಬಣ್ಣದ ಹೂಗೊಂಚಲನ್ನು ಕಟ್ಟಿ, ಅದನ್ನು ಹಸಿರು ಹುಲ್ಲಿನ ಬಯಲಲ್ಲಿ ನೆಟ್ಟು ಹಳ್ಳಿಯ ಯುವಕ-ಯುವತಿಯರು ಸೂರ್ಯಾಸ್ತದ ವೇಳೆಯಲ್ಲಿ ವಾದ್ಯ ಸಂಗೀತದ ಜೊತೆಗೆ ನೃತ್ಯ ಮಾಡುತ್ತಿದ್ದರು. ಮೇಪೋಲ್ ಆಚರಣೆ ಅಂದಿನ ಗ್ರಾಮೀಣ ಭಾಗದಲ್ಲಿದ್ದ ಪೇಗನ್ ಸಂಸ್ಕೃತಿಯ ಪ್ರತೀಕವಾಗಿತ್ತು ಪ್ರಕೃತಿ ಪೂಜೆ, ಆತ್ಮಾರಾಧನೆ, ಸ್ಥೈರ್ಯ ವಿನೋದಗಳು ಮೇಪೋಲ್ ಹಬ್ಬದ ವಿಶೇಷ ಆಕರ್ಷಣೆಯಾಗಿತ್ತು.[98] ಯಾವುದೇ ಸಾಂಪ್ರದಾಯಿಕ ಉತ್ಸವಗಳಲ್ಲಿ ಸಂಗೀತ ಮತ್ತು ನೃತ್ಯ ಹರ್ಷೋಲ್ಲಾಸದ ಸಂಕೇತವಾಗಿದ್ದವು. "You be bound to dance at christmas because it is the time of year; you must dance at wedding because it is the time of life"[99] ಕ್ರಿಸ್‌ಮಸ್ ಹಬ್ಬ ಹೊಸವರ್ಷದ ಸಂಕೇತವಾದ್ದರಿಂದ ನೃತ್ಯ ಮಾಡುವುದರ ಮೂಲಕ ಸಂಭ್ರಮಾಚರಣೆಯಾದರೆ, ವಿವಾಹ ಸಂದರ್ಭ ಹೊಸಬದುಕಿನ ಪ್ರಾರಂಭವೆಂದು ಮಾಡುವುದು ಸಾಮಾನ್ಯವಾಗಿತ್ತು. ಹೀಗೆ ವೆಸೆಕ್ಸ್‌ನ ಪ್ರದೇಶದಲ್ಲಿ ಧಾರ್ಮಿಕ ಉತ್ಸವವಿರಲಿ, ವಿವಾಹ, ಹೊಸವರ್ಷಾಚರಣೆಯಂತಹ ವಿಶೇಷ ಸಂದರ್ಭಗಳಲ್ಲಿ ನೃತ್ಯ ಸಾಮಾನ್ಯವಾಗಿದ್ದು ಅಲ್ಲಿನ ಮುಗ್ಧ ಜನರ ಜಾನಪದ ಸಂಸ್ಕೃತಿಯನ್ನು ಅನಾವರಣಗೊಳಿಸುತ್ತದೆ.

ನೃತ್ಯವಿಲ್ಲದೆ ವೆಸೆಕ್ಸ್ ಜನರ ಬದುಕಿನಲ್ಲಿ ಯಾವುದೇ ಹಬ್ಬ, ವಿವಾಹ ಮುಂತಾದ ಆಚರಣೆಗಳು ನಡೆಯತ್ತಿರಲಿಲ್ಲ ಎನ್ನಬಹುದು. ನೃತ್ಯದ ಜೊತೆಗೆ ಅಂದಿನ ಗ್ರಾಮೀಣ ಭಾಗದಲ್ಲಿದ್ದ ಸಂಗೀತ ವಾದ್ಯಗಳೂ ಸೇರಿ ಜನರಿಗೆ ಮನರಂಜನೆಯನ್ನು ನೀಡುತ್ತಿದ್ದವು. ಧಾರ್ಮಿಕ ಆಚರಣೆಗಳಿಗಿಂತ ಮನರಂಜನೆಗೆ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಿದ್ದುದನ್ನು ಕಾಣಬಹುದು. ವನಭೋಜನ ಸಂತೋಷಕೂಟಗಳು ನೃತ್ಯಗಳ ಜೊತೆ ಜೊತೆಗೆ ನಡೆಯುತ್ತಿದ್ದವು. 'ದಿ ರಿಟರ್ನ್ ಆಫ್ ದಿ ನೇಟಿವ್' ಕಾದಂಬರಿಯ ಯುಸ್ಟೇಷ್ಯ ತನ್ನ ಗಂಡನ ಮನೆಯಿಂದ ಹೊರಬಿದ್ದು ಪೂರ್ವ ಎಗ್ಡನ್ನಿನ ಹಸಿರು ಹುಲ್ಲು ಹಾಸಿನ ಮೇಲೆ ನಡೆಯುವ ಸಾಮೂಹಿಕ ನೃತ್ಯ ನೋಡಲು ಹೋಗುವುದು, ಅದರಲ್ಲಿ ತನ್ನ ಹಳೆಯ ಪ್ರೇಮಿ ವೈಲ್ಡೀವ್ ಜೊತೆಗೂಡಿ ನರ್ತಿಸುವುದು, ಅಂದಿನ ಗ್ರಾಮೀಣ ಸಂಸ್ಕೃತಿಯ ಭಾಗವಾಗಿತ್ತು ಎನ್ನಬಹುದು. ಆ ಗ್ರಾಮೀಣ ನೃತ್ಯದಲ್ಲಿ ಇಪ್ಪತ್ತು ಯುವ ಜೋಡಿಗಳು ನೀಲಿ ಮಿಶ್ರಿತ ಶ್ವೇತ ವರ್ಣದ ನೃತ್ಯದ ಉಡುಪುಗಳಿಂದ ಸಿಂಗರಿಸಿಕೊಂಡು ಮುಖಾ-ಮುಖಿ ನರ್ತಿಸುವುದು ವಿಶೇಷವಾಗಿತ್ತು.[100] ಆ ದಿನದ ನೃತ್ಯ ನೋಡಲು ಪೂರ್ವ ಎಗ್ಡನ್ನಿನ ಹಳ್ಳಿಯ ಜನರೆಲ್ಲ ಸೇರಿ ಭಾವೋದ್ವೇಗದಿಂದ ಆನಂದಿಸುವುದು ಪೇಗನ್ ಸಂಸ್ಕೃತಿಯ ಪ್ರತೀಕವಾಗಿತ್ತು ಎಂಬುದನ್ನು ಸೂಚಿಸುತ್ತದೆ.

ಹಾರ್ಡಿಯವರ ‘ಟೆಸ್ ಆಫ್ ದಿ ಡಿ ಅರ್ಬರ್‌ವಿಲ್ಲೆ’ ಪ್ರಾರಂಭವಾಗುವುದೇ ಮೇ ಹಬ್ಬದಿಂದ ಮ್ಯಾರ್ಲಾಟ್ ಹಳ್ಳಿಯ ಯುವತಿಯರೆಲ್ಲ ಹಸಿರು ಹುಲ್ಲುಹಾಸಿನ ಬಯಲಲ್ಲಿ ನೃತ್ಯ ಮಾಡುವುದನ್ನು ಕಾಣುತ್ತೇವೆ. ಹೀಗೆ ಇಂಗ್ಲೆಂಡಿನ ಸಾಂಪ್ರದಾಯಿಕ ಉತ್ಸವಗಳು ಆಚರಣೆಗಳು ವರ್ಷದ ಪ್ರತಿ ಋತು ಪೂರ್ವದ ಸಂಕೇತಗಳಲ್ಲದೆ ಸತ್ಯಗಳೆನಿಸಿದ್ದವು. ವಾಸ್ತವವಾಗಿ ದೂರದ ಒಳನಾಡಿನ ಹಳ್ಳಿಗಳಲ್ಲಿ ನಾಗರಿಕತೆಯೆನ್ನುವುದುರ ಪೂರ್ವದಲ್ಲಿದ್ದ ಪ್ರವೃತ್ತಿಗಳೇ ಇನ್ನೂ ಆಚರಣೆಯಲ್ಲಿದ್ದವು. ವೆಸೆಕ್ಸ್‌ನ ಗ್ರಾಮೀಣ ಪರಿಸರದಲ್ಲಿಯೂ ಮೂಢಭಕ್ತಿಯ ರೂಢಿ ಪೂಜೆಗಳೂ ಇನ್ನೂ ಉಳಿದಿದ್ದವು ಎನ್ನುವುದನ್ನು ಹಾರ್ಡಿಯವರ ಕಾದಂಬರಿಗಳು ತಿಳಿಸುತ್ತವೆ.

ಕುವೆಂಪುರವರ ಕಾದಂಬರಿಗಳಲ್ಲಿ ಕಂಡುಬರುವ ಜೋಯಿಸರ ಬದಲಾಗಿ ಪಾದ್ರಿಗಳನ್ನು ಅಗ್ರಹಾರದ ಬದಲಾಗಿ ಪ್ಯಾರಿಶ್ ಅಥವಾ ಪಾದ್ರಿಯ ಅಧಿಕಾರ ಪ್ರದೇಶವನ್ನು ಗ್ರಾಮೀಣ ಪ್ರದೇಶದಲ್ಲಿ ಕಾಣುತ್ತೇವೆ. ಟೆಸ್ ಕಾದಂಬರಿಯ ಏಂಜೆಲ್ ಕ್ಲೇರ್‌ನ ತಂದೆ ಎಮ್ಮಿನಿಸ್ಟರ್ ಪ್ರದೇಶದ ಕ್ರೈಸ್ತ ಮತ ಬೋಧಕನಾಗಿ ಸೇವೆ ಸಲ್ಲಿಸುತ್ತಿರುತ್ತಾರೆ. ಏಂಜೆಲ್ ಕ್ಲೇರ್‌ನನ್ನು ಹೊರತುಪಡಿಸಿ ಅವನ ತಂದೆತಾಯಿ ಮತ್ತು ಸಹೋದರರೆಲ್ಲ ಧಾರ್ಮಿಕ ಶ್ರದ್ಧೆಯುಳ್ಳವರಾಗಿದ್ದರು. ಪ್ರತಿ ಭಾನುವಾರವೂ ಹಳ್ಳಿಯ ಮುಗ್ಧ ಜನರನ್ನು ಚರ್ಚಿನಲ್ಲಿ ಸೇರಿಸಿ ಬೈಬಲ್ಲಿನ ಸಾರವನ್ನು ಬೋಧನೆ ಮಾಡುವುದು ಮತಬೋಧಕರ ಕರ್ತವ್ಯವಾಗಿತ್ತು ಎನ್ನುವುದನ್ನು ಕಾಣುತ್ತೇವೆ.[101]

ಮತಾಂತರಗೊಳಿಸುವ ಪ್ರಕ್ರಿಯೆಯು ಭಾರತದಂತಹ ಸಾಮಾಜಿಕ ವ್ಯವಸ್ಥೆಯಲ್ಲಷ್ಟೇ ಅಲ್ಲದೆ ಇಂಗ್ಲೆಂಡಿನ ನಾಗರಿಕತೆಯ ಪೂರ್ವ ಗ್ರಾಮೀಣ ಪ್ರದೇಶದಲ್ಲಿಯೂ ನಡೆಯುತ್ತಿತ್ತು ಎನ್ನುವುದನ್ನು ಹಾರ್ಡಿಯವರ ‘ಟೆಸ್’ ಕಾದಂಬರಿಯಲ್ಲಿ ಕಾಣುತ್ತೇವೆ. ಕಾದಂಬರಿಯ ಪಾತ್ರಧಾರಿ ಅಲೆಕ್ ಡಿ ಅರ್ಬರ್‌ವಿಲ್ಲೆ ಎಮ್ಮಿನಿಸ್ಟರ್‌ನ ಹಳ್ಳಿಯ ಜನರಿಗೆ ಕ್ರೈಸ್ತ ಧರ್ಮದ ತತ್ವಗಳನ್ನು ಪರಿಚಯಿಸುವುದರ ಮೂಲಕ ಅವರಲ್ಲಿ ಆ ಮತದ ಬಗ್ಗೆ ಒಲವು ಮೂಡಿಸಿ ಕ್ರೈಸ್ತ ಮತಕ್ಕೆ ಮತಾಂತರಗೊಳಿಸುವ ಕೆಲಸದಲ್ಲಿ ತೊಡಗಿಸಿಕೊಂಡಿರುತ್ತಾನೆ.[102] ಕುವೆಂಪುರವರ ಕಾದಂಬರಿಗಳಲ್ಲಿ ಮತಾಂತರಗೊಳಿಸಲು ಆಧುನಿಕ ಸೌಲಭ್ಯಗಳನ್ನು ನೀಡಿ, ಆಮಿಷಗಳಿಂದ ಜನರನ್ನು ಸುಪ್ರೀತಗೊಳಿಸುವ ವಿಧಾನ ಹಾರ್ಡಿಯವರ ಕಾದಂಬರಿಗಳಲ್ಲಿ ಕಂಡುಬರುವುದಿಲ್ಲ. ಜಾತಿ–ಪಂಗಡ, ಅಂತಸ್ತಿನ ತಾರತಮ್ಯವಿಲ್ಲದೆ ಮತಬೋಧಕರು ಎಲ್ಲ ವರ್ಗದ ಜನರಿಗೂ ಸಮಾನವಾಗಿ ಧಾರ್ಮಿಕ ಬೋಧನೆ ಮಾಡುವುದು ಇಂಗ್ಲೆಂಡಿನ ಒಳನಾಡಿನ ಹಳ್ಳಿಗಳಲ್ಲಿತ್ತು ಎನ್ನುವುದನ್ನು ಕಾಣಬಹುದು. ಮಲೆನಾಡಿನ ಪ್ರದೇಶದಲ್ಲಿ ಜೋಯಿಸರು, ಪಂಡಿತರು ನೀಡುತ್ತಿದ್ದ ವಿಭೂತಿ, ತಾಯಿತ ಮುಂತಾದವುಗಳನ್ನು ಮತ್ತು ಕಷ್ಟ–ನಷ್ಟ ಅನುಭವಿಸುತ್ತಿದ್ದುದರಿಂದ ಮಾಡಿಸುತ್ತಿದ್ದ

ವ್ರತಗಳನ್ನು ವೆಸೆಕ್ಸ್‌ನ ಗ್ರಾಮೀಣ ಪ್ರದೇಶದಲ್ಲಿ ಕಾಣಲಾವುದಿಲ್ಲ. ಪವಿತ್ರ ಸ್ಥಳಗಳಿಗೆ ಯಾತ್ರೆ ಹೋಗುವ ಪದ್ಧತಿಯು ಕೂಡ ಹಾರ್ಡಿಯವರ ಕಾದಂಬರಿಗಳಲ್ಲಿ ಕಂಡುಬರುವುದಿಲ್ಲ. ಆದರೆ ಪ್ರತಿ ಭಾನುವಾರ ಹಳ್ಳಿಯ ಚರ್ಚಿಗೆ ಹೋಗುವ ಸಂಪ್ರದಾಯವನ್ನು ಕಾಣಬಹುದು. ಸಾಮಾನ್ಯವಾಗಿ ಹಳ್ಳಿಯಲ್ಲಿ ವಿವಾಹಗಳು ನಡೆಯತ್ತಿದ್ದ ಸ್ಥಳಗಳೆಂದರೆ ಚರ್ಚುಗಳೇ ಆಗಿದ್ದವು. ಅಲ್ಲಿಯ ಪಾದ್ರಿಗಳು ವಿವಾಹದ ಶಾಸ್ತ್ರಗಳನ್ನು ನಿರ್ವಹಿಸುತ್ತಿದ್ದರು ಎನ್ನುವುದನ್ನು ಎರಡೂ ಹಾರ್ಡಿಯವರ ಕಾದಂಬರಿಗಳಲ್ಲಿ ಕಾಣಬಹುದು.

5.8 ವೆಸೆಕ್ಸ್‌ನ ಪ್ರದೇಶದಲ್ಲಿ ಪ್ರಚಲಿತದಲ್ಲಿದ್ದ ದೆವ್ವ, ಪಿಶಾಚಿ, ಮತ್ತು ಮಾಟ-ಮಂತ್ರದ ಬಗೆಗಿನ ನಂಬಿಕೆಗಳು:

ಕುವೆಂಪು ಮತ್ತು ಹಾರ್ಡಿಯವರ ಕಾದಂಬರಿಗಳಲ್ಲಿ ಧಾರ್ಮಿಕ ವಿಚಾರ, ರೂಢಿ, ಸಂಪ್ರದಾಯಗಳಲ್ಲಿ ಭಿನ್ನತೆ ಕಂಡುಬಂದರೂ, ಮೂಢನಂಬಿಕೆಗಳು, ದೆವ್ವ, ಭೂತಗಳ ವಿಚಾರದಲ್ಲಿ ಸಾಕಷ್ಟು ಸಾಮ್ಯತೆಯನ್ನು ಕಾಣಬಹುದು. ನಾಗರಿಕತೆಯ ಪರಿಚಯ ಮತ್ತು ಶಿಕ್ಷಣದ ಪ್ರಭಾವ ಇಂಗ್ಲೆಂಡಿನ ಪಟ್ಟಣಗಳಲ್ಲಿ ಕಂಡುಬಂದರೂ ವೆಸೆಕ್ಸ್‌ನ ಗ್ರಾಮೀಣ ಪ್ರದೇಶದಲ್ಲಿ ಜನರು ಇನ್ನೂ ಸಹ ಮೂಢನಂಬಿಕೆಗಳಲ್ಲಿ ನಂಬಿಕೆಯುಳ್ಳವರಾಗಿದ್ದುದು ವಿಶೇಷವಾಗಿದೆ. ಮಲೆನಾಡಿನ ಜನರಲ್ಲಿ ಮಾಟ-ಮಂತ್ರ, ದೆವ್ವ, ಭೂತಗಳ ಬಗ್ಗೆ ಇದ್ದ ಭಯ-ಭಕ್ತಿಯನ್ನು ವೆಸೆಕ್ಸ್‌ನ ಜನರಲ್ಲೂ ಕಾಣಬಹುದು. ದಿ ರಿಟರ್ನ್ ಆಫ್ ದಿ ನೇಟಿವ್ ಕಾದಂಬರಿಯ ಕ್ರಿಶ್ಚಿಯನ್ ಕ್ಯಾಂಟಲ್ ಹುಟ್ಟಿದ್ದು ಅಮವಾಸ್ಯೆಯ ರಾತ್ರಿಯಲ್ಲಿ ಆದ್ದರಿಂದ ಅದು ಅಶುಭ ವೇಳೆಯೆಂದು ಹಳ್ಳಿಗರ ನಂಬಿಕೆ ಮತ್ತು 'ಚಂದ್ರನಿಲ್ಲದ ದಿನ, ಗಂಡಸಲ್ಲದ ಜನ' ಎಂಬ ಗಾದೆ ಅವರಲ್ಲಿತ್ತು.[103] ಎಗ್ಡನ್ನಿನ ಜನರಿಗೆ ಇದ್ದ 'ಅಮವಾಸ್ಯೆ ತುಂಬಾ ಕೆಟ್ಟದ್ದು' ಎಂಬ ನಂಬಿಕೆಯು ಮಲೆನಾಡಿನ ಜನರಲ್ಲೂ ಕಂಡುಬರುತ್ತಿತ್ತು ಎನ್ನುವುದನ್ನು ಕುವೆಂಪು ಕಾದಂಬರಿಗಳಲ್ಲಿ ಕಾಣುತ್ತೇವೆ. ರಾತ್ರಿಯ ಕತ್ತಲಲ್ಲಿ ಭೂತ-ಪಿಶಾಚಿಗಳು ಸಂಚರಿಸುತ್ತವೆ ಮತ್ತು ಹೆಚ್ಚಿನ ಪಿಶಾಚಿಗಳು 'ಶ್ವೇತ' ವರ್ಣದವು ಎಂಬ ನಂಬಿಕೆ ಅವರಲ್ಲಿತ್ತು. ಎಗ್ಡನ್ನಿನ ಜನ ಯುಸ್ಟೇಷ್ಯಳನ್ನು ಒಬ್ಬ ಮಾಟಗಾತಿ ಅಂತ ತಿಳಿದುಕೊಂಡಿದ್ದರು. ಆಕೆಯ ಕಾಡಿಗೆಯ ಕಣ್ಣುಗಳು ಅಶುಭ ಸೂಚಕವಾಗಿದ್ದು, ನಿಶಾಚರ ರೂಪಿಯಾಗಿ ಎಗ್ಡನ್ನಿನ ಬೆಟ್ಟ ಗುಡ್ಡಗಳಲ್ಲಿ ಸಂಚರಿಸುವುದರಿಂದ ಆಕೆ ಒಬ್ಬ ಮಾಟಗಾತಿ ಎಂತಲೂ ಜನ ನಂಬಿದ್ದರು.[104] ತನ್ನ ಮಕ್ಕಳಿಗೆ ಮಿಸ್ ಯುಸ್ಟೇಷ್ಯ ಮಾಟ-ಮಂತ್ರ ಮಾಡಿಬಿಟ್ಟಿದ್ದಾಳೆ ಎಂದು ಸೂಸನ್ ನನ್‌ಸಚ್ ಅವಳ ರಕ್ತವನ್ನು ದಬ್ಬಳದಿಂದ ಎಳೆದು ಬಿಟ್ಟಳು. ಇದರಿಂದ ಆಕೆಯ ಮಕ್ಕಳು ಯುಸ್ಟೇಷ್ಯಳ

ಮಾಂತ್ರಿಕ ದೃಷ್ಟಿಗೆ ಬೀಳದೆ ಸುರಕ್ಷಿತವಾಗಿರುತ್ತಾರೆ ಎನ್ನುವ ನಂಬಿಕೆ ಸೂಸನ್ ನನ್‌ಸಚ್‌ಳದು.[105] ಕಾವಿ ಮಾರುವ ಡಿಗರಿವೆನ್‌ನ್ನು ಹಳ್ಳಿಯ ಹೆಂಗಸರು ಒಬ್ಬ ಕೆಂಪು ಪಿಶಾಚಿಯೆಂದೇ ತಿಳಿದುಕೊಂಡಿದ್ದರು. ತಮ್ಮ ಮಕ್ಕಳನ್ನು ಮಲಗಿಸಲು ಅವನ ಹೆಸರು ಹೇಳುತ್ತಿದ್ದರು. ಮತ್ತು ಅವನು ಬಂದು ಮಕ್ಕಳನ್ನು ತನ್ನ ಚೀಲದಲ್ಲಿ ತುಂಬಿಕೊಂಡು ಹೋಗುತ್ತಾನೆ ಎಂಬ ಭಯವನ್ನು ಮಕ್ಕಳಲ್ಲಿ ಮೂಡಿಸಿಬಿಟ್ಟಿದ್ದರು.[106]

ಎಗ್ಡನ್ನಿನ ಪ್ರದೇಶದಲ್ಲಿ ರೂಢಿಯಲ್ಲಿದ್ದ ಒಂದು ಕ್ರೂರ ನಂಬಿಕೆ ಎಂದರೆ ಮಾಟ-ಮಂತ್ರದಿಂದ ತಮ್ಮ ಶತ್ರುಗಳನ್ನು ಬಲಹೀನಗೊಳಿಸಿ ನಾಶ ಮಾಡುವ ವಿಧಾನ. ಸೂಸನ್ ನನ್‌ಸಚ್ ತನ್ನ ಮಗನಿಗೆ ಯುಸ್ಟೇಷ್ಯ ಮಾಟ-ಮಂತ್ರ ಮಾಡಿದ್ದಾಳೆ ಎಂದು ಎಗ್ಡನ್ನಿನ ವನದಲ್ಲಿ ಸುಪರಿಚಿತವಾಗಿದ್ದ ಒಂದು ಭಯಂಕರ ಕೆಲಸಕ್ಕೆ ಕೈ ಹಾಕುತ್ತಾಳೆ. ಯುಸ್ಟೇಷ್ಯಳ ಆಕೃತಿಯನ್ನು ಮೇಣದಿಂದ ಮಾಡಿ ಸೂಜಿಗಳಿಂದ ಚುಚ್ಚಿ ದಹನ ಮಾಡುವುದೇ ಆ ಪದ್ಧತಿಯಾಗಿತ್ತು. ಆಕೆಯ ಆಕೃತಿಯನ್ನು ದಹನ ಮಾಡಿದಂತೆ, ಆಕೆ ಸಾಯುತ್ತಾಳೆ ಎಂಬ ನಂಬಿಕೆ ಆಕೆಯದು ಮತ್ತು ಬೈಬಲ್ಲಿನ ಪ್ರಾರ್ಥನೆಯನ್ನು ಹಿಂದು ಮುಂದಾಗಿ ಮೂರು ಸಲ ಹೇಳಿದರೆ ಆಕೆ ಸಾಯುತ್ತಾಳೆ ಎಂದು ಈ ಕೆಲಸವನ್ನು ಮಾಡುತ್ತಾಳೆ.[107] ಕಾಕತಾಳೀಯವೆಂಬತೆ ಯುಸ್ಟೇಷ್ಯಳ ಮೇಣದ ಪ್ರತಿಮೆ ದಹನಗೊಂಡು ಕರಗಿ ಹೋದಂತೆ ಕೊಳದಲ್ಲಿ ಮುಳುಗಿ ಯುಸ್ಟೇಷ್ಯ ದುರಂತ ಅಂತ್ಯವನ್ನು ಕಾಣುತ್ತಾಳೆ.

ಹಾರ್ಡಿಯವರ ಮತ್ತೊಂದು ಕಾದಂಬರಿ ಟೆಸ್ ಆಫ್ ದಿ ಡಿ ಅರ್ಬರ್ ವಿಲ್ಲೆ ಸಹ ಮೂಢನಂಬಿಕೆಗಳ ಬಗ್ಗೆ ಸಾಕಷ್ಟು ನಿದರ್ಶನಗಳನ್ನು ಒಳಗೊಂಡಿದೆ. ಟಾಲ್‌ಬೋತಿಯ ಡೈರಿ ಮಾಲಿಕ ಕ್ರಿಕ್ ಮತ್ತು ಶ್ರೀಮತಿ ಕ್ರಿಕ್ ಮೂಢನಂಬಿಕೆಗಳ ಆಚರಣೆಯಲ್ಲಿ ಬಹಳ ಆಸಕ್ತಿಯುಳ್ಳವರು ಒಮ್ಮೆ ಅವರ ಡೈರಿಯಲ್ಲಿ ಎಷ್ಟೇ ಹೊತ್ತು ಮೊಸರು ಕಡೆದರೂ ಸರಿಯಾಗಿ ಬೆಣ್ಣೆ ಉತ್ಪತ್ತಿಯಾಗಲಿಲ್ಲ ಎಂದು ಮಂತ್ರವಾದಿಯನ್ನು ಭೇಟಿ ಮಾಡಿ ಸಲಹೆ ಪಡೆಯಲು ಹೋಗಬೇಕು ಎಂದು ಕ್ರಿಕ್ ಹೇಳುತ್ತಾನೆ. ಹೀಗೆ ಮಂತ್ರವಾದಿಗಳ ಸಲಹೆ ಪಡೆಯುವುದು ಅವನ ತಂದೆ ತಾತನ ಕಾಲದಿಂದಲೂ ರೂಢಿಯಾಗಿತ್ತು ಎನ್ನುತ್ತಾನೆ. ಶ್ರೀಮತಿ ಕ್ರಿಕ್ ಪ್ರಕಾರ ಡೈರಿಯಲ್ಲಿರುವವರಲ್ಲಿ ಯಾರೋ ಪ್ರೇಮಿಸುತ್ತಿರಬೇಕು, ಆದ್ದರಿಂದ ಮೊಸರು ಕಡೆಯುವುದರಿಂದ ಸರಿಯಾಗಿ ಬೆಣ್ಣೆ ಬರುತ್ತಿಲ್ಲ ಎಂಬ ನಂಬಿಕೆ ಇಟ್ಟುಕೊಂಡಿದ್ದರು.[108] ಕುವೆಂಪುರವರ ಕಾದಂಬರಿಗಳಲ್ಲಿ ಕಷ್ಟ-ನಷ್ಟ ರೋಗ ರುಜಿನಗಳು ಬಂದರೆ ಮೊದಲು ಜೋಯಿಸರನ್ನು ಭೇಟಿ ಮಾಡಿ ವಿಭೂತಿ, ತಾಯಿತ, ವ್ರತ ಮಾಡಿಸುವ ಹಾಗೆ ವೆಸೆಕ್ಸ್‌ನ ಜನರು ಮಂತ್ರವಾದಿಗಳನ್ನು ಭೇಟಿಯಾಗುತ್ತಿದ್ದರು. ಹೊಸಬರು

ಡೈರಿಗೆ ಪ್ರವೇಶಿಸಿದರೆ ಹಸುಗಳು ಸರಿಯಾಗಿ ಹಾಲು ಕೊಡುವುದಿಲ್ಲ, ಏಕೆಂದರೆ ಆ ವೇಳೆಯಲ್ಲಿ ಹಾಲು ಹಸುಗಳ ಕೊಂಬಿನಲ್ಲಿ ಶೇಖರಿಸಲ್ಪಡುತ್ತದೆ ಎನ್ನುವ ಮೂಢನಂಬಿಕೆ ಶ್ರೀಮತಿ ಕ್ರಿಕ್ ಅವರದಾಗಿತ್ತು.

ಡರ್ಬಿಫೀಲ್ಡ್ ಮನೆಯಲ್ಲಿ ಭವಿಷ್ಯ ಹೇಳುವ ಒಂದು ದಪ್ಪನೆಯ ಪುಸ್ತಕವಿದ್ದು, ತುಂಬಾ ಹಳೆಯದಾಗಿರುತ್ತದೆ. ಅದನ್ನು ಮನೆಯಲ್ಲಿಡುವುದರಿಂದ ಕೇಡುಂಟಾಗುತ್ತದೆ ಎಂಬ ಭಯದಿಂದ ಶ್ರೀಮತಿ ಡರ್ಬಿಫೀಲ್ಡ್ ಪ್ರತಿ ದಿನ ಸಂಜೆ ಆ ಪುಸ್ತಕವನ್ನು ಕಟ್ಟಿಗೆಯ ಮನೆಯಲ್ಲಿಡುತ್ತಿದ್ದಳು. ದಾರಿಯಲ್ಲಿ ನಡೆಯುವಾಗ ಯಾವುದಾದರೂ ಮುಳ್ಳು ಚುಚ್ಚಿದರೆ ಕೇಡು ಸಂಭವಿಸುತ್ತದೆ ಎನ್ನುವ ನಂಬಿಕೆ ಟೆಸ್‌ಳದು. ಕುವೆಂಪುರವರ <u>ಕಾನೂರು ಹೆಗ್ಗಡಿತಿ</u> ಕಾದಂಬರಿಯಲ್ಲಿ ಹೊಸ್ತಿಲು ಎಡವಿದರೆ, ನಡೆಯುವಾಗ ಎಡವಿದರೆ ಅಪಶಕುನ ಎನ್ನುವ ನಂಬಿಕೆ ಮತ್ತು ಹಾರ್ಡಿಯವರ ಕಾದಂಬರಿಗಳಲ್ಲಿ ಬರುವ ನಂಬಿಕೆಗಳು ಒಂದೇ ರೀತಿಯಾಗಿವೆ ಎನ್ನಬಹುದು. ಹಾಡು ಹಗಲಿನಲ್ಲಿ ಕೋಳಿ ಕೂಗಿದರೆ ಅಪಶಕುನ ಎನ್ನುವ ನಂಬಿಕೆ ವೆಸೆಕ್ಸ್‌ನ ಜನರದು. ಟೆಸ್ ಮತ್ತು ಏಂಜೆಲ್ ಕ್ಲೇರ್ ವಿವಾಹವಾಗಿ ಟಾಲ್‌ಬೋತಿಯ ಡೈರಿಯಿಂದ ಹೊರಡುವಾಗ ಅಲ್ಲಿದ್ದ ಕೋಳಿಯೊಂದು ಮೂರು ಬಾರಿ ಕೂಗುತ್ತದೆ. ತಕ್ಷಣ ಅಲ್ಲಿದ್ದವರ ಮುಖವೆಲ್ಲ ಮಂಕಾಗುತ್ತದೆ.[109] ಇದರಿಂದ ಅವರ ವೈವಾಹಿಕ ಜೀವನದಲ್ಲಿ ಕೇಡು ಸಂಭವಿಸುತ್ತದೆ ಎನ್ನುವ ನಂಬಿಕೆ. ಈ ನಂಬಿಕೆ ಕೆಲವೇ ದಿನಗಳಲ್ಲಿ ನಿಜವಾಗುವುದು ಕಾಕತಾಳಿಯ ಎನ್ನಬಹುದು. ತನ್ನ ತಾಯಿಗೆ ಖಾಯಿಲೆ ಎಂದು ಟೆಸ್ ರಾತ್ರೋ ರಾತ್ರಿ ಮ್ಯಾರ್ಲಾಟ್‌ಗೆ ತೆರಳುವಾಗ ಬ್ಲ್ಯಾಕ್‌ಮೂರ್ ಕಣಿವೆ ಪ್ರದೇಶದ ಮೂಲಕ ಹಾದು ಹೋಗುವಾಗ ಹಿಂದೆ ಅದೊಂದು ದಟ್ಟ ಅರಣ್ಯವಾಗಿದ್ದು ಭೂತ–ಪಿಶಾಚಿಗಳು ಅಲ್ಲಿ ವಾಸಿಸುತ್ತಿದ್ದವು ಎನ್ನುವುದನ್ನು ನೆನಪಿಸಿಕೊಳ್ಳುತ್ತಾಳೆ. ಹೀಗೆ ಹಾರ್ಡಿ ಮತ್ತು ಕುವೆಂಪುರವರ ಕಾದಂಬರಿಗಳಲ್ಲಿನ ಗ್ರಾಮೀಣ ಪ್ರದೇಶದ ಜನರು ಮೂಢನಂಬಿಕೆಗಳಲ್ಲಿ, ದೆವ್ವ, ಭೂತ, ಪಿಶಾಚಿ, ಶಕುನಗಳಲ್ಲಿ ಸಮಾನವಾಗಿ ನಂಬಿಕೆಯುಳ್ಳವರಾಗಿದ್ದರು ಎನ್ನುವುದನ್ನು ಕಾಣಬಹುದು. ಆದರೆ ಮಲೆನಾಡಿನ ದೇಸಿಯ ಬದುಕಿನಲ್ಲಿ ಆಚರಣೆಯಲ್ಲಿದ್ದ ಅಮಾನವೀಯ ಕ್ರೂರ ನಂಬಿಕೆಗಳು, ಬಲಿಕೊಡುವುದು ಮುಂತಾದ ಅನಿಷ್ಟ ಪದ್ಧತಿಗಳನ್ನು ವೆಸೆಕ್ಸ್‌ನ ಗ್ರಾಮೀಣ ಬದುಕಿನಲ್ಲಿ ಕಾಣಲಾಗುವುದಿಲ್ಲ. ಆಧುನಿಕ ಶಿಕ್ಷಣದ ಪ್ರಭಾವ, ವೈಚಾರಿಕತೆಯ ಮನೋಭಾವ, ವೈಜ್ಞಾನಿಕ ಆವಿಷ್ಕಾರಗಳು, ಸಂಪರ್ಕ ಸಾಧನಗಳು ಇಂಗ್ಲೆಂಡಿನ ಒಳನಾಡಿನ ಹಳ್ಳಿಗಳಿಗೆ ವಿಸ್ತಾರಗೊಂಡ ಪರಿಣಾಮ ನಾಗರಿಕತೆಯ ಪೂರ್ವದಲ್ಲಿದ್ದ ರೂಢಿ–ಸಂಪ್ರದಾಯಗಳು, ಮೂಢನಂಬಿಕೆಗಳು ಕ್ರಮೇಣ ಕಣ್ಮರೆಯಾಗಲು ಕಾರಣವಾಗುವುದನ್ನು ಕಾಣಬಹುದು. ಆದರೆ ಇಂಗ್ಲೆಂಡಿನ ಗ್ರಾಮೀಣ ಪ್ರದೇಶಗಳಲ್ಲಿ ನಡೆಯುತ್ತಿದ್ದ ಆಧುನಿಕ ನಾಗರಿಕತೆಯ ಪ್ರಕ್ರಿಯೆಗಳು, ಶೈಕ್ಷಣಿಕ ಚಟುವಟಿಕೆಗಳು

ಮಲೆನಾಡಿನಂತ ಗ್ರಾಮೀಣ ಬದುಕಿಗೆ ಬಹುದೂರದಲ್ಲಿಯೇ ಕೇಂದ್ರಿಕೃತಗೊಂಡ ಪರಿಣಾಮ, ಮೂಢನಂಬಿಕೆಗಳು ಮತ್ತು ಅಂಧಾನುಕರಣೆಗಳು ವಿಫುಲವಾಗಿ ಜನರ ಮನಸ್ಸನ್ನಾಳುತ್ತಿದ್ದವು ಎನ್ನುವುದನ್ನು ಕುವೆಂಪುರ ಕಾದಂಬರಿಗಳಲ್ಲಿ ಕಾಣುತ್ತೇವೆ.

ಕೊನೆ ಟಿಪ್ಪಣಿ

1. ಗುರುಪಾದ ಮರಿಗುದ್ದಿ: ಕುವೆಂಪು ಕಾದಂಬರಿಗಳ ಸಾಂಸ್ಕೃತಿಕ ಅಧ್ಯಯನ, ಪುಟ–97
2. ಖಂಡೋಬಾ ಪಿ.ಕೆ.: ಕನ್ನಡ ಪ್ರಾದೇಶಿಕ ಕಾದಂಬರಿಗಳ ಜಾನಪದೀಯತೆ, ಪುಟ–35
3. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ–89
4. ಕುವೆಂಪು ಮಲೆಗಳಲ್ಲಿ ಮದುಮಗಳು, ಪುಟ–431
5. ಗುರುಪಾದ ಮರಿಗುದ್ದಿ: ಕುವೆಂಪು ಕಾದಂಬರಿಗಳ ಸಾಂಸ್ಕೃತಿಕ ಅಧ್ಯಯನ, ಪುಟ–100
6. ಅದೇ, ಪುಟ–100
7. ಕುವೆಂಪು ಮಲೆಗಳಲ್ಲಿ ಮದುಮಗಳು, ಪುಟ–85
8. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ–418
9. ಕುವೆಂಪು ಮಲೆಗಳಲ್ಲಿ ಮದುಮಗಳು, ಪುಟ–85
10. ಕುವೆಂಪು: ಕಾನೂರು ಹೆಗ್ಗಡತಿ, ಪುಟ–247
11. ಅದೇ, ಪುಟ–230
12. ಗುರುಪಾದ ಮರಿಗುದ್ದಿ: ಕುವೆಂಪು ಕಾದಂಬರಿಗಳ ಸಾಂಸ್ಕೃತಿಕ ಅಧ್ಯಯನ, ಪುಟ–108
13. ಕುವೆಂಪು ಮಲೆಗಳಲ್ಲಿ ಮದುಮಗಳು, ಪುಟ–196
14. ಅದೇ, ಪುಟ–198
15. ಅದೇ, ಪುಟ–205
16. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ–352
17. ಅದೇ, ಪುಟ–352
18. ಅದೇ, ಪುಟ–353
19. ಗುರುಪಾದ ಮರಿಗುದ್ದಿ: ಕುವೆಂಪು ಕಾದಂಬರಿಗಳ ಸಾಂಸ್ಕೃತಿಕ ಅಧ್ಯಯನ, ಪುಟ–102
20. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ–597

21. ಅದೇ, ಪುಟ–87

22. ಅದೇ, ಪುಟ–267

23. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ–467

24. ಗುರುಪಾದ ಮರಿಗುದ್ದಿ: ಕುವೆಂಪು ಕಾದಂಬರಿಗಳ ಸಾಂಸ್ಕೃತಿಕ ಅಧ್ಯಯನ, ಪುಟ–103

25. ಅದೇ, ಪುಟ– 121

26. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ–79

27. ಅದೇ, ಪುಟ–79

28. ಅದೇ, ಪುಟ–97

29. ಅದೇ, ಪುಟ–185

30. ಅದೇ, ಪುಟ–185

31. ಅದೇ, ಪುಟ–234

32. ಅದೇ, ಪುಟ–267

33. ಅದೇ, ಪುಟ–242

34. ಅದೇ, ಪುಟ–406

35. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ–3

36. ಅದೇ, ಪುಟ–75

37. ಅದೇ, ಪುಟ–85

38. ಅದೇ, ಪುಟ–85

39. ಅದೇ, ಪುಟ–95

40. ಅದೇ, ಪುಟ–99

41. ಅದೇ, ಪುಟ–104

42. ಅದೇ, ಪುಟ–135

43. ಅದೇ, ಪುಟ–135

44. ಅದೇ, ಪುಟ–433

45. ಅದೇ, ಪುಟ–465

46. ಅದೇ, ಪುಟ–466

47. ಅದೇ, ಪುಟ–469

48. ಅದೇ, ಪುಟ–486

49. ಅದೇ, ಪುಟ–486

50. ಅದೇ, ಪುಟ–530

51. ಅದೇ, ಪುಟ–537

52. ಅದೇ, ಪುಟ–540

53. ಅದೇ, ಪುಟ–544

54. ಅದೇ, ಪುಟ–85

55. ಅದೇ, ಪುಟ–208

56. ಗುರುಪಾದ ಮರಿಗುದ್ದಿ: ಗುರುಪಾದ ಮರಿಗುದ್ದಿ: ಕುವೆಂಪು ಕಾದಂಬರಿಗಳ ಸಾಂಸ್ಕೃತಿಕ ಅಧ್ಯಯನ, ಪುಟ–131

57. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ–26

58. ಅದೇ, ಪುಟ–85

59. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ–167

60. ಅದೇ, ಪುಟ–204

61. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ–326

62. ಅದೇ, ಪುಟ–337

63. ಅದೇ, ಪುಟ–247

64. ಅದೇ, ಪುಟ–418

65. ಅದೇ, ಪುಟ–419

66. ಗುರುಪಾದ ಮರಿಗುದ್ದಿ: ಗುರುಪಾದ ಮರಿಗುದ್ದಿ: ಕುವೆಂಪು ಕಾದಂಬರಿಗಳ ಸಾಂಸ್ಕೃತಿಕ ಅಧ್ಯಯನ, ಪುಟ–138

67. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ–101

68. ಅದೇ, ಪುಟ–122

69. ಅದೇ, ಪುಟ–163

70. ಅದೇ, ಪುಟ–198

71. ಅದೇ, ಪುಟ–218

72. ಅದೇ, ಪುಟ–230

73. ಅದೇ, ಪುಟ–236

74. ಅದೇ, ಪುಟ–374

75. ಅದೇ, ಪುಟ–388

76. ಅದೇ, ಪುಟ–419

77. ಅದೇ, ಪುಟ–465

78. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ–204

79. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ–420

80. ಅದೇ, ಪುಟ–421

81. ಅದೇ, ಪುಟ–79

82. ಅದೇ, ಪುಟ–127

83. ಅದೇ, ಪುಟ–210

84. ಅದೇ, ಪುಟ–310

85. ಅದೇ, ಪುಟ–312

86. ಅದೇ, ಪುಟ–318

87. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ–11

88. ಅದೇ, ಪುಟ–346

89. ಅದೇ, ಪುಟ–319

90. Thomas Hardy: The Return Of The Native, General Introduction, Page- 20

91. Ibid, Page-XXI

92. Ibid, Page-113

93. Thomas Hardy: Tess of the D' Urbervilles, Page – 173

94. Ibid, Page-174
95. Ibid, Page-158
96. Charlotte Bonica: Nature and Paganism in Tess of the D' Urbervilles, Page – 115
97. Thomas Hardy: The Return Of The Native, Page-14
98. Ibid, Page-319
99. Ibid, Page-19
100. Ibid, Page-215
101. Thomas Hardy: Tess of the D' Urbervilles, Page – 173
102. Ibid, Page-327
103. Thomas Hardy: The Return Of The Native, Page-22
104. Ibid, Page-42
105. Ibid, Page-149
106. Ibid, Page-163
107. Ibid, Page-295
108. Thomas Hardy: Tess of the D' Urbervilles, Page – 205
109. Ibid, Page-233

ಅಧ್ಯಾಯ – 6

ಉಪಸಂಹಾರ

ಅನುಬಂಧ

1. ವಿಶಿಷ್ಟ ಪದಕೋಶ
2. ಕುವೆಂಪು ಮತ್ತು ಥಾಮಸ್ ಹಾರ್ಡಿಯವರ ಭಾವಚಿತ್ರಗಳು
3. ಅಧ್ಯಯನಕ್ಕೊಳಪಡಿಸಿದ ಕೃತಿಗಳು
4. ಪರಾಮರ್ಶನ ಗ್ರಂಥಗಳು

ಅಧ್ಯಾಯ – 6

ಉಪಸಂಹಾರ

ಆಧುನಿಕ ಸಾಹಿತ್ಯ ಕ್ಷೇತ್ರದಲ್ಲಿ ಕಾದಂಬರಿ ಒಂದು ಪ್ರಬಲ ಸಾಹಿತ್ಯ ಪ್ರಕಾರವಾಗಿ ಜನಮನ್ನಣೆಗಳಿಸಿದೆ. ಸಮಾಜ, ಮಾನವ, ಮನಸ್ಸು ಮತ್ತು ಇನ್ನಿತರೆ ಅಂತರ್ ಶಿಸ್ತೀಯ ವಿಷಯಗಳಿಗೆ ಆಕಾರವಾಗಿ ಗಂಭೀರ ಸಾಹಿತ್ಯ ಪ್ರಕಾರವೆನಿಸಿಕೊಂಡಿದೆ. ವಿಮರ್ಶೆಯ ಕ್ಷೇತ್ರ ಬೆಳೆದಷ್ಟು ಕಾದಂಬರಿಯ ಕ್ಷೇತ್ರವು ವಿಸ್ತಾರಗೊಳ್ಳುತ್ತಿದೆ. ಬದುಕಿನ ಪ್ರತಿಯೊಂದು ವಿಷಯ ವಿವರಗಳನ್ನು, ಸಂಕೀರ್ಣತೆಯನ್ನು, ಸೂಕ್ಷ್ಮಾತಿಸೂಕ್ಷ್ಮವಾಗಿ ಅಭಿವ್ಯಕ್ತಪಡಿಸುವ ಜನಪ್ರಿಯ ಸಾಹಿತ್ಯವೆಂದರೆ ಕಾದಂಬರಿಯಾಗಿದೆ. ಇಂಗ್ಲೆಂಡಿನಲ್ಲಿ ಜನ್ಮ ಪಡೆದು, ಅನೇಕ ಸ್ಥಿತ್ಯಂತರಗಳಿಗೆ ಸಾಕ್ಷಿಯಾಗಿ ಇತರೆ ದೇಶಗಳಿಗೂ ವಿಸ್ತರಿಸಿ ಇಂದು ಸಾಹಿತ್ಯ ಕ್ಷೇತ್ರದಲ್ಲಿ ಪ್ರಮುಖ ಸ್ಥಾನವನ್ನು ಪಡೆದುಕೊಂಡಿದೆ. ಕಾಲಕಾಲಕ್ಕೆ ಕಾದಂಬರಿಯಲ್ಲಿನ ಕಥಾನಿರೂಪಣೆ, ಶೈಲಿ, ಭಾಷೆ, ರೂಪ, ವಸ್ತು, ಪಾತ್ರ, ಸಂವಾದ, ಮುಂತಾದ ಅಂಶಗಳಲ್ಲಿ ನವೀನತೆಯನ್ನು, ಪ್ರಯೋಗಶೀಲವನ್ನು ಹೊಂದಿ, ಸಹೃದಯರ ಮನಸ್ಸನ್ನಾಳುವ ಪ್ರಕಾರವಾಗಿ ಅಸ್ತಿತ್ವ ಪಡೆದುಕೊಂಡಿದೆ. ಕುವೆಂಪು ಮತ್ತು ಹಾರ್ಡಿಯವರ ಕಾದಂಬರಿಗಳು ಅಂದಿನ ಕಾಲದ ಜೀವಂತ ಸಮಾಜದ ಬದುಕನ್ನು, ಜೀವನ ವಿಧಾನವನ್ನು, ಸಾಮಾಜಿಕ, ಸಾಂಸ್ಕೃತಿಕ ಪಾರಂಪರಿಕ ಮತ್ತು ಐತಿಹಾಸಿಕ ಬದುಕನ್ನು ಸೆರೆಹಿಡಿದು ಪ್ರತಿಬಿಂಬಿಸುವಲ್ಲಿ ಯಶಸ್ವಿಯಾಗಿವೆ. ಬದಲಾಗುತ್ತಿರುವ ಇಂದಿನ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ, ಬದುಕಿಗೆ ಅವರ ಕಾದಂಬರಿಗಳು ಆದರ್ಶವಾಗಿವೆ. ಕುವೆಂಪು ಮತ್ತು ಹಾರ್ಡಿಯವರ ಕಾದಂಬರಿಗಳು ಅನೇಕ ರೀತಿಯಲ್ಲಿ ಮಲೆನಾಡಿನ ಹಾಗೂ ವೆಸೆಕ್ಸ್‌ನ ಸಾಮಾಜಿಕ, ಸಾಂಸ್ಕೃತಿಕ ಮತ್ತು ಐತಿಹಾಸಿಕ ದಾಖಲೆಗಳಾಗಿವೆ ಎನ್ನುವುದನ್ನು ಈ ಅಧ್ಯಯನದಿಂದ ತಿಳಿಯಬಹುದಾಗಿದೆ.

ಕುವೆಂಪು ಮತ್ತು ಹಾರ್ಡಿಯವರ ಕಾದಂಬರಿಗಳನ್ನು ತೌಲನಿಕ ಅಧ್ಯಯನಕ್ಕೆ ಒಳಪಡಿಸಿ ನೋಡಿದಾಗ ಒಂದು ಸಮಗ್ರವಾದ, ವಾಸ್ತವತೆಯಿಂದ ಕೂಡಿದ ಜೀವಂತ ಸಮಾಜದ ಚಿತ್ರಣ ಪ್ರತಿಸೃಷ್ಟಿಯಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಕುವೆಂಪುರವರು ನಿರೂಪಿಸಿರುವ ಮಲೆನಾಡಿನ ದೇಸಿಯ ಬದುಕು ಮಲೆನಾಡಿನ ಸೀಮೆಗೆ ಮಾತ್ರವೇ ಸೀಮಿಗೊಂಡಿರುವುದಿಲ್ಲ, ಮೇಲಾಗಿ ಇಂತಹ ದೇಸಿಯ ಬದುಕು ಪ್ರಪಂಚದ ಯಾವುದೇ ಭಾಗದಲ್ಲಿ ಕಾಣಸಿಗುವಂತಹದ್ದು. ಅದು ಇಂಗ್ಲೆಡಿನ ವೆಸೆಕ್ಸ್ ಪ್ರದೇಶವಾಗಿರಬಹುದು, ಅಮೇರಿಕಾದ ಮಿಸಿಸಿಪ್ಪಿ ನದಿಯ ದಂಡೆಯ

ಮೇಲೆ ಜೀವತಳೆದ ಬದುಕಾಗಿರಬಹುದು. ಯಾವುದೇ ವ್ಯಕ್ತಿ ತಾನು ಹುಟ್ಟಿ ಬೆಳೆದು ತನ್ನ ಜೀವನ ರೂಪಿಸಿಕೊಂಡ ಪರಿಸರದ ಜೊತೆ ತಾನು ಹೊಂದಿರುವ ಅವಿನಾಭಾವ ಸಂಬಂಧ ದೇಸಿಯ ಬದುಕಿನ ತಿರುಳಾಗಿದೆ. ಆ ಪರಿಸರದಲ್ಲಿ ಜೀವತಳೆದ ಸಾಮಾಜಿಕ, ಸಾಂಸ್ಕೃತಿಕ ಬದುಕು, ಆಚಾರ, ವಿಚಾರಗಳು ನೀತಿ-ನಿಯಮಗಳು ವ್ಯಕ್ತಿಯ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಮಹತ್ತರ ಪಾತ್ರವಹಿಸುತ್ತವೆ ಎಂಬುದನ್ನು ಇಬ್ಬರೂ ಕಾದಂಬರಿಗಳಲ್ಲಿ ಕಾಣುತ್ತೇವೆ. ಸಾಮನ್ಯವಾಗಿ 'ದೇಸಿಯತೆ' ಎನ್ನುವುದು: "ಒಂದು ನಿರ್ದಿಷ್ಟ ಪ್ರದೇಶದ ಸಮಗ್ರ ಜೀವನದ ಪ್ರತಿಬಿಂಬವಾಗಿದೆ. ಈಗಾಗಲೇ ಹೇಳಿರುವಂತೆ ಯಾವುದೇ ಪ್ರದೇಶದ, ರಾಷ್ಟ್ರದ ಸಾಹಿತ್ಯವಾಗಿರಲಿ, ಅದರಲ್ಲಿ ದೇಸಿಯತೆಯ ಲಕ್ಷಣಗಳು ಇದ್ದೇ ಇರುತ್ತದೆ. ಅದನ್ನು ಅಭಿವ್ಯಕ್ತಪಡಿಸುವಲ್ಲಿ ಯಾವುದೇ ವಿಶೇಷತೆ ಇರುವುದಿಲ್ಲ. ಆದರೆ ಹೊರಗಿನಿಂದ ಬಂದ ಅಥವಾ ಪರಕೀಯ ಭಾಷೆ, ಸಂಸ್ಕೃತಿಗಳು ಸ್ಥಳೀಯ ಭಾಷೆ ಮತ್ತು ಸಂಸ್ಕೃತಿಯ ಮೇಲೆ ಆಕ್ರಮಣ ಮಾಡಿದಾಗ ದೇಸಿಯತೆ ತನ್ನ-ತನವನ್ನು ರಕ್ಷಿಸಿಕೊಳ್ಳಲು ದೇಸಿಯತೆಯ ರೂಪವನ್ನು ಪಡೆಯುತ್ತದೆ".[1] ಎನ್ನುವುದಕ್ಕೆ ಕುವೆಂಪು ಮತ್ತು ಹಾರ್ಡಿಯವರ ಕೃತಿಗಳೇ ಸಾಕ್ಷಿಯಾಗಿವೆ. ಹಾಗೆಯೇ ದೇಸಿಯತೆ ಸ್ವಯಂ ವ್ಯಕ್ತಗೊಳ್ಳುವ ಒಂದು ಸ್ವಾಭಾವಿಕ ಸಹಜ ಪ್ರಕ್ರಿಯೆ ಅದನ್ನು ಒತ್ತಾಯದಿಂದ ಸಾಹಿತ್ಯಕೃತಿಯಲ್ಲಿ ಬಳಸುವಂತಹುದಲ್ಲ. ಗಿಡ-ಮರ-ಬಳ್ಳಿಗಳು ಹೇಗೆ ಒಂದು ಭೌಗೋಳಿಕ ಪರಿಸರದ ಮಣ್ಣಿನಲ್ಲಿ ಬೇರು ಬಿಟ್ಟುಬೆಳೆಯುತ್ತವೆಯೋ ಹಾಗೆ ದೇಸಿಯತೆ ಸಾಹಿತ್ಯ ಕೃತಿಗಳಲ್ಲಿ ಸಹಜವಾಗಿ ಅಭಿವ್ಯಕ್ತಗೊಳ್ಳುವ ಸ್ವರೂಪವನ್ನು ಹೊಂದಿವೆ ಎನ್ನುವುದನ್ನು ಕಾಣುತ್ತೇವೆ. ಹೀಗೆ ದೇಸಿಯತೆ ಎಂದರೆ ಪರಕೀಯ ಸಂಸ್ಕೃತಿ ಭಾಷೆ ಮತ್ತು ಬಾಹ್ಯ ಪ್ರಚೋದನೆಗಳಿಂದ ಬಿಡುಗಡೆಗೊಂಡು ಮೂಲ ಸಂಸ್ಕೃತಿಗೆ, ನೆಲದ ಭಾಷೆಗೆ ಮರಳುವುದು ಎಂಬರ್ಥವನ್ನು ನೀಡುತ್ತದೆ.

ದೇಸಿ ಸಂಸ್ಕೃತಿ ಎನ್ನವುದು ಒಂದು ನಿರ್ದಿಷ್ಟ ಭೌಗೋಳಿಕ ಪರಿಸರದಲ್ಲಿ ರೂಪುಗೊಂಡು, ಆ ಪರಿಸರದ ಮಣ್ಣಿನ ಕಂಪಿನಿಂದ ಜೀವತಳೆದ ಸಾಮಾಜಿಕ ಮನೋಧರ್ಮವೆನ್ನಬಹುದು. ಅನ್ಯ ಸಂಸ್ಕೃತಿಗಳ ಸಂಪರ್ಕವಿಲ್ಲದೆ ಸ್ವತಂತ್ರವಾಗಿ ರೂಪುಗೊಂಡು ಒಂದು ಸಮುದಾಯದ ಜೀವನ ವಿಧಾನವನ್ನು ಅಚಾರ-ವಿಚಾರ, ರೀತಿ-ನೀತಿಗಳನ್ನು, ಉಡುಗೆ-ತೊಡುಗೆಗಳನ್ನು, ಆಹಾರ ಪದ್ದತಿ ಮುಂತಾದ ಸಾಂಸ್ಕೃತಿಕ ಬದುಕನ್ನು ನಿರ್ದೇಶಿಸುವಂತಹುದನ್ನು ದೇಸಿ ಸಂಸ್ಕೃತಿ ಎನ್ನಬಹುದು. ಇಂತಹ ದೇಸಿ ಸಂಸ್ಕೃತಿಯು ಕಾಲಾನುಕ್ರಮದಲ್ಲಿ ಸಾಮಾಜಿಕ, ರಾಜಕೀಯ, ಸ್ಥಿತ್ಯಂತರಗಳಿಗೆ ತೆರೆದುಕೊಂಡು ಬದಲಾಗುವುದನ್ನು ಕಾಣುತ್ತೇವೆ. ಕುವೆಂಪುರವರ ಕಾದಂಬರಿಗಳಲ್ಲಿ ಕಾಣುತ್ತೇವೆ. ಇಂತಹ ದೇಸಿಯ ಸಂಸ್ಕೃತಿಯ ಕಾಲಾನುಕ್ರಮದಲ್ಲಿ ಸಾಮಾಜಿಕ, ರಾಜಕೀಯ ಆರ್ಥಿಕ ಸ್ಥಿತ್ಯಂತರಗಳಿಗೆ ತೆರೆದುಕೊಂಡು ಬದಲಾಗುವುದನ್ನು ಕಾಣುತ್ತೇವೆ. ಕುವೆಂಪುರವರ

ಕಾದಂಬರಿಗಳು ಇಂತಹ ಸಂಕ್ರಮಣದ ಸನ್ನಿವೇಶದಲ್ಲಿ ಮಲೆನಾಡಿನ ದೇಸಿಯ ಬದುಕು ಹೇಗೆ ಪಲ್ಲಟಗೊಳ್ಳುತ್ತದೆ ಎಂಬುದನ್ನು ನಿರೂಪಿಸುತ್ತವೆ.

ಭೌಗೋಳಿಕ ಪರಿಸರ ಜನರ ಅಭಿರುಚಿ, ಅಲ್ಲಿನ ಜನತೆ ಪಾರಂಪರಿಕವಾಗಿ ಕಾಪಾಡಿಕೊಂಡು ಬಂದ ಸಂಸ್ಕೃತಿ ದೇಸಿಯ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಕುವೆಂಪುರವರ ಕಾದಂಬರಿಗಳಲ್ಲಿ ಬರುವ ಮಲೆನಾಡಿನ ಮುಗ್ದ ಜನರು ಅನಕ್ಷರಸ್ಥರು ಮೂಢನಂಬಿಕೆಗಳನ್ನು ಆಚರಿಸುತ್ತಾ ಸಾಂಪ್ರದಾಯಿಕ ಕೃಷಿಪದ್ದತಿಯನ್ನು ಅನುಸರಿಸುತ್ತ ಜೀವನ ಸಾಗಿಸುತ್ತಿದ್ದವರು. ಭೂಮಿಯನ್ನೆ ತಾಯಿಯೆಂದು ನಂಬಿ ಪ್ರಕೃತಿಯ ಒಡನಾಟದಲ್ಲಿ ಜೀವನ ನಡೆಸಿದವರು. ಭೌಗೋಳಿಕ ಪರಿಸರಕ್ಕೆ ಅನುಗುಣವಾಗಿ ಬೆಳೆಯುತ್ತಿದ್ದ ಬೆಳೆಗಳು ಅವರ ಜೀವನಾಧಾರವಾಗಿದ್ದವು. ಮುಂಗಾರಿನ ಮಳೆಯೊಂದಿಗೆ ಪ್ರಾರಂಭವಾಗುವ ಕೃಷಿ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವ ಕೃಷಿಕರು, ಹಾಡು, ಹರಟೆ, ಕಥೆ ಹೇಳುವ ಮೂಲಕ ಅವರಲ್ಲಿ ಜೀವನೋತ್ಸಾಹ ಗರಿಗೆದರುತ್ತಿತ್ತು, ಎಂಬುದನ್ನು ಕಾಣಬಹುದು. ಇದೇ ರೀತಿಯ ಕೃಷಿಯಾಧರಿತ ಬದುಕನ್ನು ಹಾರ್ಡಿಯವರ ಕಾದಂಬರಿಗಳಲ್ಲಿಯೂ ಸಹ ಕಾಣಬಹುದಾಗಿದೆ.

ಹಾರ್ಡಿಯವರ '<u>ಟೆಸ್ ಅಫ್ ದಿ ಡಿ ಅರ್ಬರ್ ವಿಲ್ಲೆ</u>' ಹತ್ತೊಂಬತ್ತನೆಯ ಶತಮಾನದ ಕೃಷಿ ಸಮಾಜವನ್ನು ಪ್ರತಿಬಿಂಬಿಸುತ್ತದೆ. ಊಳಿಗಮಾನ್ಯ ಶ್ರೀಮಂತ ಜಮೀನುದಾರರ ಶೋಷಣೆಯ ನಡುವೆಯೂ ಸಾಂಪ್ರದಾಯಿಕ ಕೃಷಿ ಪದ್ದತಿ, ಕೃಷಿ ಕಾರ್ಮಿಕರಿಗೆ ನೆಮ್ಮದಿಯನ್ನು ನೀಡುತ್ತಿತ್ತು. ಕೃಷಿ ಚಟುವಟಿಕೆಗಳ ನಡುವೆಯೂ ಹಳ್ಳಿಗರು ಹಾಡು, ಲಾವಣಿ, ಸುಗ್ಗಿಯ ಪದಗಳಿಂದ ತಮ್ಮ ಬಡತನ ಮತ್ತು ಬೇಸರವನ್ನು ಮರೆಯುತ್ತಿದ್ದರು. ಜಾಗತೀಕರಣದ ಭಾಗವಾದ ಆಧುನಿಕ ತಾಂತ್ರಿಕ ಪರಿಕರಗಳ ಆಗಮನದಿಂದ ಸಾಂಪ್ರದಾಯಿಕ ದೇಸಿ ಕೃಷಿ ಕ್ಷೇತ್ರ ಯಾಂತ್ರೀಕೃತಗೊಳ್ಳುವುದನ್ನು ಕಾಣಬಹುದು. ಆಧುನಿಕ ಕೃಷಿ ಪರಿಕರಗಳಾದ 'harvester, reaping machine, thresher' ಮುಂತಾದವು ದೇಸಿ ಕೃಷಿ ಪದ್ಧತಿಯ ಅವನತಿಗೆ ಕಾರಣವಾಗುತ್ತವೆ. ಜೀವ ವೈವಿಧ್ಯತೆಯೆ ಪ್ರಮುಖ ಲಕ್ಷಣವಾಗಿದ್ದ ದೇಸಿ ಕೃಷಿ ವೈವಿಧ್ಯಮಯ ಬೆಳೆಗಳನ್ನು ನೀಡಿತ್ತು. ಜಾಗತೀಕರಣದ ಪ್ರಭಾವದಿಂದ ಕೃಷಿ ಕ್ಷೇತ್ರದಲ್ಲಿ ವೈವಿಧ್ಯತೆಗಿಂತ ಏಕರೂಪತೆ ಕಾಣಿಸಿಕೊಳ್ಳತೊಡಗಿತು. ಮನುಷ್ಯ ಹಿಂದೆ ಸಾವಿರಾರು ಪ್ರಭೇದದ ಸಸ್ಯಗಳನ್ನು ಕೃಷಿ ಮಾಡಿ ಧಾನ್ಯ ಕಾಳುಗಳನ್ನು ಪಡೆಯುತ್ತಿದ್ದ. ಆದರೆ ಈಗ ಸುಮಾರು ನೂರು-ನೂರೈವತ್ತು ಸಸ್ಯ ಪ್ರಭೇದಗಳು ಮನುಕುಲಕ್ಕೆ ಆಹಾರ ಒದಗಿಸುತ್ತಿವೆ. ಅದರಲ್ಲೂ ಗೋಧಿ, ಮೆಕ್ಕೆ ಜೋಳ ಭತ್ತ ಮತ್ತು ಬಾರ್ಲಿಗಳು ಇಡೀ ಮನುಕುಲದ ಮುಖ್ಯ ಆಹಾರವಾಗಿವೆ. ಈ ನಾಲ್ಕು ವಿಧದ ಆಹಾರ ಬೆಳೆಗಳನ್ನು ಅವಲಂಭಿಸಿರುವುದು

ಆತಂಕವಲ್ಲವೆ?[2] ಎನ್ನುವ ಪ್ರಶ್ನೆ ಇಂದು ಕಾಡುತ್ತಿದೆ. 'ಟೆಸ್ ಆಫ್ ದಿ ಡಿ ಅರ್ಬರ್ ವಿಲ್ಲೆ' ಕಾದಂಬರಿಯ ನಾಯಕಿ ಟೆಸ್‌ಳ ದುರಂತವು ಕೃಷಿ ಸಮುದಾಯದ ದುರಂತದ ಸಂಕೇತವೂ ಹೌದು'. 19ನೇ ಶತಮಾನದಲ್ಲಿ ರೈತವರ್ಗ ಕರಗಿ, ಶ್ರೀಮಂತ ರೈತರು ಕಾಣಸಿಕೊಂಡು ಪ್ರಬಲರಾದರು. ಈ ಕಾದಂಬರಿಯಲ್ಲಿ ಕುಯಿಲು ಮಾಡಲು ತಂದ ಯಂತ್ರ, ಆ ಯಂತ್ರವನ್ನು ನಿರ್ವಹಿಸುವ ಒಬ್ಬ ವ್ಯಕ್ತಿ ಆರಾಮವಾಗಿ ಕುಳಿತು ಅಗತ್ಯವಾದಷ್ಟು ಕೆಲಸ ಮಾಡಿ ಯಂತ್ರದೊಡನೆ ಹೊರಟು ಹೋಗುತ್ತಾನೆ. ಕುಯ್ಲು ಮಾಡುವ ರೈತರಿಗಿರುವಂತೆ ಅವನಿಗೆ ನೆಲದ ಯಾವ ಸಂಬಂಧವೂ ಇರುವುದಿಲ್ಲ. ಇಂತಹ ಯಂತ್ರಗಳು ಮುಂದೆ ತಲಾತಲಾಂತರದಿಂದ ಸಾಂಪ್ರದಾಯಿಕ ಕೃಷಿಯಲ್ಲಿ ತೊಡಗಿಸಿಕೊಂಡು ನೆಮ್ಮದಿಯಿಂದ ಬಾಳುತ್ತಿದ್ದ ಜನರನ್ನು ಚದುರಿಸುತ್ತದೆ ಮುಂದೆ ಅವರು ಕೆಲಸವನ್ನರಸಿ ಪಟ್ಟಣಗಳಿಗೆ ವಲಸೆ ಹೋಗಲು ಕಾರಣವಾಗುತ್ತದೆ.[3]

ಜಾಗತೀಕರಣದ ಫಲವಾಗಿ ಯಂತ್ರಗಳ ಆಗಮನದಿಂದ ಗ್ರಾಮೀಣ ಪ್ರದೇಶದ ಕೃಷಿ ಕಾರ್ಮಿಕರು ತಮ್ಮ ಅಸ್ತಿತ್ವವನ್ನೆ ಕಳೆದುಕೊಂಡು ಅಲೆಮಾರಿಗಳಾಗುವುದನ್ನು ಕಾಣುತ್ತೇವೆ. ಕೃಷಿಯಂತ್ರಗಳು ರೈತರು ಮತ್ತು ಮಣ್ಣಿನ ಸಂಬಂಧ ಕಣ್ಮರೆಯಾಗಲು ಕಾರಣವಾಗುತ್ತವೆ. ಕೃಷಿ ಪ್ರಧಾನವಾದ ಭಾರತದ ಗ್ರಾಮೀಣ ಬದುಕು ಸ್ವಾವಲಂಬಿತನ, ಸಾಮುದಾಯಿಕ, ಬದುಕಿಗೆ ಮತ್ತು ಸಹಬಾಳ್ವೆಗೆ ಹೆಸರಾಗಿತ್ತು ಎನ್ನುವುದನ್ನು ಕುವೆಂಪುರವರ 'ಕಾನೂರು ಹೆಗ್ಗಡಿತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಕಾದಂಬರಿಗಳು ನಿರೂಪಿಸುತ್ತವೆ. ಆದರೆ ಜಾಗತೀಕರಣದ ರೂವಾರಿಗಳಾದ ಬಹುರಾಷ್ಟ್ರೀಯ ಕಂಪನಿಗಳು ಬಿತ್ತನೆ ಬೀಜಗಳ ಮಾರುಕಟ್ಟೆಯನ್ನು ನಿಯಂತ್ರಿಸುವುದರ ಮೂಲಕ ಮತ್ತು ಮುಕ್ತ ಮಾರುಕಟ್ಟೆಯ ಹೆಸರಿನಲ್ಲಿ ರೈತರನ್ನು ಗುಲಾಮರನ್ನಾಗಿ ಮಾಡಿಕೊಂಡಿವೆ. ಕೃಷಿ ಕಾರ್ಮಿಕರು ಇಂದು ಅತಂತ್ರರಾಗುತ್ತಿದ್ದು ಗ್ರಾಮೀಣ ಸಾಮುದಾಯಿಕ ಸ್ವಾವಲಂಬಿ ಬದುಕು ವಿಘಟನೆಗೊಂಡು ಚದುರುತ್ತಿರುವುದನ್ನು ಇಂದು ಕಾಣುತ್ತಿದ್ದೇವೆ.

ರೈತರ ಬದುಕಿನ ಭಾಗವಾಗಿದ್ದ ಸಾಕುಪ್ರಾಣಿಗಳು ಮತ್ತು ಅವುಗಳೊಂದಿಗಿನ ಸಂಬಂಧಗಳು ಇಂದು ಕಣ್ಮರೆಯಾಗುತ್ತಿವೆ. ಆಧುನಿಕ ಸಂಪರ್ಕ ಸಾಧನಗಳಿಂದ ಗ್ರಾಮೀಣ ಪ್ರದೇಶದಲ್ಲಿದ್ದ ಎತ್ತಿನ ಬಂಡಿಗಳು ದೇಸಿಯ ಸಂಸ್ಕೃತಿಯ ಪ್ರತೀಕವಾಗಿದ್ದವು ಆಧುನಿಕ ಸಂಪರ್ಕ ಸಾಧನಗಳಾದ ಮೋಟಾರು ವಾಹನಗಳು ಬಂದ ನಂತರ ಅವುಗಳು ಪಾತ್ರ ಅಪ್ರಸ್ತುತಗೊಳ್ಳುತ್ತಿದೆ. ಸ್ವಂತ ಬಳಕೆಗಾಗಿ. ಮನೆಯ ಅಗತ್ಯಗಳಿಗಾಗಿ ಸಾಕುತ್ತಿದ್ದ ಪ್ರಾಣಿಗಳು ಇಂದು ಬೃಹತ್ ಪ್ರಮಾಣದಲ್ಲಿ ಸಾಕುತ್ತಿದ್ದು ವ್ಯಾಪಾರದ ಉದ್ದೇಶ ಸ್ಪಷ್ಟವಾಗಿದೆ. ದೇಸಿ ಸಂಸ್ಕೃತಿ ಒಂದು ಮಾರುಕಟ್ಟೆ ಸಂಸ್ಕೃತಿಯಾಗಿ ವಿರಾಜಿಸುತ್ತಿರುವುದು ಜಾಗತೀಕರಣದ ಪ್ರಭಾವವನ್ನು ಸೂಚಿಸುತ್ತದೆ.

ಕೃಷಿಯನ್ನೇ ಮೂಲ ಕಸುಬನ್ನಾಗಿ ಆಶ್ರಯಿಸಿದ್ದ ಕೃಷಿಕಾರ್ಮಿಕರು ಜಾಗತೀಕರಣದ ಪರಿಣಾಮವಾಗಿ ಗ್ರಾಮೀಣ ಪ್ರದೇಶದಿಂದ ಪಟ್ಟಣಗಳಿಗೆ ವಲಸೆ ಹೋಗುವುದರ ಮೂಲಕ ದೇಸಿ ಸಂಸ್ಕೃತಿಯ ಕಣ್ಮರೆಗೆ ಕಾರಣರಾಗುತ್ತಿದ್ದಾರೆ. ಜಗದೀಶ ಕೊಪ್ಪ ಅವರ ಮಾತುಗಳು ಈ ಸಂದರ್ಭದಲ್ಲಿ ಸತ್ಯವೆನಿಸುತ್ತವೆ: "ಗ್ರಾಮ ಸಂಸ್ಕೃತಿಯ ಪೋಷಣಾ ಕೇಂದ್ರಗಳಾಗಿದ್ದ ಗ್ರಾಮಗಳು ಅವನತಿಯ ಹಾದಿ ಹಿಡಿದಿದ್ದು, ರೈತರು. ಕೃಷಿಕಾರ್ಮಿಕರು ಕವಲು ಹಾದಿಯಲ್ಲಿದ್ದಾರೆ. ಕೃಷಿಯನ್ನು ನಂಬಿ ಬದುಕಿದ್ದ ಕೋಟ್ಯಾಂತರ ಜನ ರೈತರು–ಕೃಷಿಕಾರ್ಮಿಕರು ಅತಂತ್ರರಾಗಿ ಅವರ ಭವಿಷ್ಯ ಮಸುಕಾಗತೊಡಗಿದೆ"[4] ದೇಸಿ ಬದುಕಿನಲ್ಲಿ ಕೃಷಿಯ ಜೊತೆಗೆ ಅನೇಕ ಉಪಕಸುಬುಗಳು ಸ್ಥಳೀಯರಿಗೆ ಉದ್ಯೋಗ ನೀಡಿ ಪೋಷಿಸುತ್ತಿದ್ದವು. ಜಾಗತೀಕರಣದಿಂದ ಅಂತಹ ಕಸುಬುಗಳನ್ನು ಮಾಡುತ್ತಿದ್ದ ಹಳ್ಳಿಯ ಕಮ್ಮಾರ, ಚಮ್ಮರ, ಕುಂಬಾರ, ಗಾಣಿಗ, ನೇಕಾರ, ಬಡಗಿ, ಮುಂತಾದವರು ಯಂತ್ರ ನಾಗರೀಕತೆಯ ಎದುರು ಸೋತುಹೋಗಿ ಪಟ್ಟಣ ನಗರಗಳಿಗೆ ವಲಸೆ ಹೋಗಲಾರಂಭಿಸಿದರು. ಹಾರ್ಡಿಯವರ ವೆಸೆಕ್ಸ್‌ನ ಪ್ರದೇಶದಲ್ಲಿನ ಸಾಂಪ್ರದಾಯಿಕ ಕಸುಬಾದ ಕಾವಿ ಮಾರುವುದು, ರೈಲು ಬಂದ ನಂತರ ಕಣ್ಮರೆಯಾಗುವುದು ಜಾಗತೀಕರಣದ ಪ್ರಭಾವವವನ್ನು ಸೂಚಿಸುತ್ತದೆ. ವೆಸೆಕ್ಸ್‌ನ ಕೃಷಿಯಾಧಾರಿತ ಸಾಂಪ್ರದಾಯಿಕ ಬದುಕು ಜಾಗತೀಕರಣದಿಂದ ಅತಂತ್ರಗೊಂಡು ನಂತರ ಕಣ್ಮರೆಯಾಗುವುದನ್ನು ಟೆಸ್ ಕಾದಂಬರಿಯಲ್ಲಿ ನಿರೂಪಿಸಿದ್ದಾರೆ. ಕುವೆಂಪುರವರ ಕಾದಂಬರಿಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಿಂದ ಕೃಷಿ ಕಾರ್ಮಿಕರು ಮಲೆನಾಡಿಗೆ ವಲಸೆ ಬರುವುದು, ಕೇರಳದ ಮುಸ್ಲಿಮರು ಮಂಗಳೂರಿನ ಮೂಲಕ ವ್ಯಾಪಾರಕ್ಕಾಗಿ ಬಂದು ಮಲೆನಾಡಿನಲ್ಲಿಯೇ ನೆಲೆ ನಿಲ್ಲುವುದು ಒಂದು ನಿರ್ದಿಷ್ಟ ಪ್ರದೇಶಕ್ಕೆ ಸೀಮಿತವಾದರೆ ಹಾರ್ಡಿಯವರ ಕಾದಂಬರಿಗಳಲ್ಲಿ ವಲಸೆ ಹೋಗುವುದು ಜಾಗತಿಕ ಮಟ್ಟದಲ್ಲಿ ನಡೆಯುತ್ತಿತ್ತು ಎನ್ನುವುದನ್ನು ಕಾಣುತ್ತೇವೆ. ಟೆಸ್ ಕಾದಂಬರಿಯ ಏಂಜೆಲ್ ಕ್ಲೇರ್ ದೇಸಿ ಕೃಷಿ ಪದ್ಧತಿಯಲ್ಲಿ ಮತ್ತು ಹೈನು ಉದ್ಯಮದಲ್ಲಿ ಟಾಲ್‌ಬೋತಿಯಲ್ಲಿ ತರಬೇತಿ ಪಡೆದು ಬ್ರೆಜಿಲ್‌ಗೆ ಹೋಗುವುದು ಸಾಂಪ್ರದಾಯಿಕ ಕೃಷಿ ಪದ್ಧತಿ ಜಾಗತಿಕ ಮಟ್ಟದಲ್ಲಿ ಒಂದು ವಾಣಿಜ್ಯ ಉದ್ಯಮವಾಗಿ ಬೆಳೆಯಲಾರಂಭಿಸಿದ್ದು ಜಾಗತೀಕರಣದ ಸ್ಪಷ್ಟ ಲಕ್ಷಣವಾಗಿದೆ.[5]

ಬೇಟೆ ದೇಸಿ ಬದುಕಿನ ಭಾಗವಾಗಿದ್ದು ಸ್ಥಳೀಯರ ಆಹಾರ, ಸಾಹಸ, ಮೋಜು ಮುಂತಾದ ಬೇಡಿಕೆಗಳನ್ನು ಪೂರೈಸುತ್ತಿದ್ದು ಕಾಲಾನಂತರ ಆಧುನಿಕ ಶಿಕ್ಷಣದ ಪ್ರಭಾವ ಮತ್ತು ಪ್ರಕೃತಿ ಮತ್ತು ವನ್ಯ ಜೀವಿಗಳ ಬಗ್ಗೆ ಉಂಟಾದ ಅರಿವಿನಿಂದ ಭಾಗಶಃ ನಿಂತು ಹೋದದ್ದು ಒಳ್ಳೆಯ ಬೆಳವಣಿಗೆ ಎನ್ನಬಹುದು. ಆದರೂ ಅಂದಿನವರ ವೈವಿಧ್ಯಮಯ ಸಾಹಸಮಯ ಬೇಟೆಯ ಪ್ರವೃತ್ತಿ ದೇಸಿಯ ಬದುಕಿನ ಭಾಗವಾಗದದ್ದು ವಿಶೇಷ ಎನಿಸುತ್ತದೆ. ಹಳ್ಳಿಗಳಲ್ಲಿದ್ದ ಬೃಹದಾಕಾರದ

ಹೆಂಚಿನ ಮನೆಗಳು, ಆ ಮನೆಗಳಲ್ಲಿದ್ದ ದೇಸಿಯ ದಿನಬಳಕೆಯ ಪರಿಕರಗಳಾದ ನೇಗಿಲು, ಒರಳುಕಲ್ಲು, ಕಡೆಗುಂಡು, ಒನಕೆಗಳು, ಬೀಸುವಕಲ್ಲು, ಮೆಟ್ಟುಗತ್ತಿ, ಅಡಿಗೆ ಮನೆಯಲ್ಲಿದ್ದ ಬಾಗಿ ಮರಿಗೆ, ಉಪ್ಪಿನ ಮರಿಗೆ, ಹಿತ್ತಾಳೆಯ ತಂಬಾಳೆ, ಮೊಸರು ಗಡಿಗೆ, ಮಜ್ಜಿಗೆ ಚರಿಗೆ, ಕಡೆಗೋಲು ಕಂಬ, ಮುಂತಾದ ವಸ್ತುಗಳು ಇಂದಿನವರಿಗೆ ಅಪರೂಪದ ವಿಚಿತ್ರ ವಸ್ತುಗಳೆನಿಸುವುದರಲ್ಲಿ ಯಾವುದೇ ಸಂಶಯವಿಲ್ಲ.

ಹಳ್ಳಿಗಳಲ್ಲಿ ಮಾತ್ರವೇ ಕಾಣಸಿಗುತ್ತಿದ್ದ ಅವಿಭಕ್ತ ಕುಟುಂಬಗಳು ಇಂದು ಕಣ್ಮರೆಯಾಗುತ್ತಿವೆ. ಜಾಗತೀಕರಣದ ಪ್ರಭಾವದಿಂದ ಉದ್ಯೋಗವನ್ನರಸಿ ಸ್ಥಳೀಯರು ವಲಸೆ ಹೋಗಲಾರಂಭಿಸಿದುದರ ಪರಿಣಾಮ ಅವಿಭಕ್ತ ಕುಟುಂಬಗಳು ಮತ್ತು ಕುಟುಂಬದ ಸದಸ್ಯರ ನಡುವೆ ಇದ್ದ ಆತ್ಮೀಯ, ಭಾವನಾತ್ಮಕ ಸಂಬಂಧಗಳು ಇಂದು ಕಣ್ಮರೆಯಾಗುತ್ತಿರುವುದನ್ನು ಕಾಣುತ್ತೇವೆ. ಎರಡು–ಮೂರು ತಲೆಮಾರುಗಳ ಸದಸ್ಯರು ಒಂದೇ ಮನೆಯಲ್ಲಿ ಅನ್ಯೋನ್ಯವಾಗಿ ಪರಸ್ಪರ ನಂಬಿಕೆ–ಸಹಕಾರದಿಂದ ಬಾಳುತ್ತಿದ್ದ ಕುಟುಂಬಗಳು ಅಸ್ತಿತ್ವವನ್ನೆ ಕಳೆದುಕೊಂಡಿರುವುದು ಸಾಮಾನ್ಯವಾಗಿದೆ. ವ್ಯವಸಾಯ ಪ್ರಧಾನವಾದ ಗ್ರಾಮೀಣ ಪ್ರದೇಶದಲ್ಲಿ ಒಟ್ಟು ಕುಟುಂಬ ಅಥವಾ ಅವಿಭಕ್ತ ಕುಟುಂಬಗಳು ಉತ್ಪಾದನೆಗೆ ಹೆಚ್ಚು ಅನುಕೂಲಕರವಾಗಿದ್ದವು. ಆದರೆ ಜಾಗತೀಕರಣದಿಂದ ಕುಟುಂಬಗಳು ಒಡೆದು ಹೋಗಲಾರಂಭಿಸಿದವು. ಜಾಗತೀಕರಣದಿಂದ ಸೌಹಾರ್ದ ಸಂಬಂಧವನ್ನು ಕಾಪಾಡುವ ಮೌಲ್ಯಗಳು ಸಂಪೂರ್ಣವಾಗಿ ಬದಲಾಗಿವೆ. ಜಾಗತೀಕರಣ ಆಯ್ದ ಕೆಲವರಿಗೆ ಅಸಾಧಾರಣ ಆರ್ಥಿಕ ಸಾಮರ್ಥ್ಯವನ್ನು ತಂದುಕೊಡುತ್ತದೆ. ಆದರೆ ಅದು ರೂಪಿಸುವ ಜೀವನ ದೃಷ್ಟಿಯಾದರೂ ಎಂತಹದು? ಹೆಚ್ಚು ಅತಿ ಹೆಚ್ಚು; ದೊಡ್ಡ ಮತ್ತಷ್ಟು ದೊಡ್ಡದು ಎಂಬ ಪ್ರವೃತ್ತಿಯನ್ನು ಪೋಷಿಸುತ್ತದೆ. ಆಗ ಜೀವನ ಮೌಲ್ಯ, ಜೀವನ ಧರ್ಮ, ಮಾನವೀಯತೆ ಎಂಬ ಅಂಶಗಳು ಜನರ ಜೀವನದಲ್ಲಿ ಯಾವ ನಿರ್ಣಾಯಕ ಪಾತ್ರವನ್ನೂ ವಹಿಸುವುದಿಲ್ಲ.[6] ಕುವೆಂಪುರವರ ಕಾನೂರು ಹೆಗ್ಗಡಿತಿ ಕಾದಂಬರಿಯಲ್ಲಿ ಕಾನೂರಿನ ಚಂದ್ರಯ್ಯಗೌಡರ ಮನೆಯ ಹಿಸ್ಸೆ ಮತ್ತು ಹಾರ್ಡಿಯವರ 'ದಿ ರಿರ್ಟನ್ ಆಫ್ ದಿ ನೇಟಿವ್' ಕಾದಂಬರಿಯಲ್ಲಿ ಕ್ಲಿಮ್ ತನ್ನ ತಾಯಿಯಿಂದ ಬೇರೆಯಾಗುವುದು, ಹದಗೆಡುತ್ತಿರುವ ಸಂಬಂಧಗಳಿಗೆ ಸಾಕ್ಷಿಯಾಗಿವೆ.

ಅವಿಭಕ್ತ ಕುಟುಂಬಗಳಲ್ಲಿದ್ದ ಪರಸ್ಪರ ನಂಬಿಕೆ ವಿಶ್ವಾಸ, ಪ್ರೀತಿ, ವಾತ್ಸಲ್ಯ ಸಹಬಾಳ್ವೆ ಮುಂತಾದ ಅಂಶಗಳು ದೇಸಿ ಬದುಕಿಗೆ ಮೆರಗು ನೀಡಿದ್ದವು. ಹಳ್ಳಿಗಳಲ್ಲಿ ನಡೆಯುತ್ತಿದ್ದ ಹಬ್ಬ, ಹರಕೆ, ಉತ್ಸವ, ಜಾತ್ರೆಗಳಿಗೆ ನೆಂಟರಿಷ್ಟರು ಬಂದು ಒಂದೆರಡು ವಾರಗಳು ನೆಂಟರ

ಮನೆಯಲ್ಲಿಯೇ ನಿಲ್ಲುತ್ತಿದ್ದದು ವಾಡಿಕೆಯಾಗಿತ್ತು. ಕುಟುಂಬದ ಸದಸ್ಯರು ಮತ್ತು ನೆಂಟರಿಷ್ಟರ ನಡುವೆ ಇದ್ದ ಅನ್ಯೋನ್ಯ ಸಂಬಂಧಗಳು ಕಾಲಕ್ರಮೇಣ ಕಣ್ಮರೆಯಾಗುವುದಕ್ಕೆ ಕಾರಣಗಳನ್ನು ಕುವೆಂಪುರವರ ಕಾದಂಬರಿಗಳಲ್ಲಿ ಕಾಣುತ್ತೇವೆ. "ಯಂತ್ರ ನಾಗರೀಕತೆ, ಇಂಗ್ಲೀಷು, ಚಾಂಚಲ್ಯ, ಉದ್ವೇಗ, ವೇಗ... ಅಕ್ರಮಣಶೀಲವಾದ ಆ ಚಂಚಲಮಾನ ನಾಗರಿಕ ಲೋಕವು ಮಲೆನಾಡಿಗೆ ದಾಳಿಯಿಡುವ ಮೊದಲು ಮುನ್ನಟ್ಟಿದ ರಣಚಾರನಲ್ಲವೆ ಅ ಬೈಸಿಕಲ್ ಸವಾರ!"[7] ಇಲ್ಲಿ ಬೈಸಿಕಲ್ ಜಾಗತೀಕರಣದ ಪ್ರತಿನಿಧಿಯಾಗಿ ಬರುವುದು ನಂತರ ಉಳಿದ ಲಕ್ಷಣಗಳು ದೇಸಿ ಸಂಬಂಧಗಳ ಅಳಿವಿಗೆ ಕಾರಣವಾಗುವುದನ್ನು ಸ್ಪಷ್ಟವಾಗಿ ಗುರುತಿಸಬಹುದು. ದೇಸಿ ಬದುಕಿನಲ್ಲಿ ಹಾಸು ಹೊಕ್ಕಾಗಿದ್ದ ಜಾನಪದ ಗೀತೆಗಳಾದ, ಜೋಗುಳದ ಹಾಡು, ಸುಗ್ಗಿಯ ಹಾಡುಗಳು, ಬಿತ್ತನೆಯ ಸಮಯದಲ್ಲಿ ಹೇಳುತ್ತಿದ್ದ ಕಥೆಗಳು, ಹಾಡುಗಳು, ಧಾರ್ಮಿಕ ಕಾರ್ಯಕ್ರಮಗಳಲ್ಲಿ, ದೇವಸ್ಥಾನಗಳಲ್ಲಿ ನಡೆಯುತ್ತಿದ್ದ ಪುರಾಣಪ್ರವಚನ, ಹರಿಕಥೆ, ಜೈಮಿನಿಭಾರತ, ಮಹಾಭಾರತ, ರಾಮಾಯಣ ವಾಚನ ಪಠಣಗಳು ಹಳ್ಳಿಯ ಜನರಲ್ಲಿ ನೈತಿಕ, ಸಾಮಾಜಿಕ, ಮಾನವೀಯ ಮೌಲ್ಯಗಳ ಬಗ್ಗೆ ಅರಿವನ್ನುಂಟು ಮಾಡುತ್ತಿದ್ದವು. ಇದೇ ಮಾತನ್ನು ಜಗದೀಶ್ ಕೊಪ್ಪ ಅವರು ಹೇಳುತ್ತಾರೆ. "ದೇಶೀಯ ಸಂಸ್ಕೃತಿಯನ್ನು ಪ್ರಬಲವಾಗಿ ಬಿಂಬಿಸುತ್ತಿದ್ದ ನಮ್ಮ ಪಾರಂಪರಿಕ ಕಲೆ, ನಾಟಕ, ಜಾನಪದ ಹಾಡು, ಕ್ರೀಡೆ, ಮೌಖಿಕ ಕಾವ್ಯ, ನೃತ್ಯ, ಸಂಗೀತ, ಪುರಾಣ ಕಾವ್ಯ ವಾಚನ ಎಲ್ಲವೂ ಜಾಗತೀಕರಣದ ಪ್ರಖರ ಬೆಳಕಿನಲ್ಲಿ ಸೂರ್ಯನೆದುರಿನ ಮಂಜಿನ ಹಾಗೆ ಕರಗತೊಡಗಿವೆ"[8]

ದೇಸಿ ಕ್ರೀಡೆಗಳು ಮತ್ತು ಮನರಂಜನಾ ಸಾಂಸ್ಕೃತಿಕ ಪ್ರಕಾರಗಳು ದೇಸಿ ಬದುಕಿನ ಹಿರಿಮೆಯನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರವಾಗಿದ್ದವು. ಆಯಾ ಪ್ರದೇಶಕ್ಕೆ ಸರಿ ಹೊಂದುವ ವಿವಿಧ ವಯೋಮಾನದವರಿಗೆ ವಿವಿಧ ಬಗೆಯ ಕ್ರೀಡೆಗಳು ಮಕ್ಕಳ, ಪುರುಷ, ಸ್ತ್ರೀಯರ ಮತ್ತು ವೃದ್ಧರ ಮಾನಸಿಕ ದೈಹಿಕ ಸ್ವಾಸ್ಥವನ್ನು ಕಾಪಾಡುತ್ತಿದ್ದವು. ದೇಸಿ ಕ್ರೀಡೆಗಳಾದ ಬುಗುರಿಯಾಟ ಚಿನ್ನಿದಾಂಡು, ಲಗ್ಗೆಮಣೆ, ಚೆನ್ನೆಮಣೆ, ಕುಂಟಾಟ, ಪಗಡೆ, ಕಲ್ಲಾಟ, ಹಗ್ಗಜಗ್ಗಾಟ ಮುಂತಾದವು ಮಕ್ಕಳಿಂದ ವೃದ್ದರವರೆಗೆ ಮನರಂಜನೆಯನ್ನು ನೀಡುತ್ತಿದ್ದವು. ಒಟ್ಟು ಕುಟುಂಬಗಳಲ್ಲಿದ್ದ ಹೆಚ್ಚಿನ ಸಂಖ್ಯೆಯ ಮಕ್ಕಳು ಐಗಳ ಮಠದಲ್ಲಿ ಕಲಿಯುತ್ತಿದ್ದ ಇತರರ ಮಕ್ಕಳೊಡನೆ, ಸೇರಿ ಆಡುತ್ತಿದ್ದ ಅನೇಕ ಆಟಗಳು ಇಂದು ನೆನಪು ಮಾತ್ರ ಎಂದೆನಿಸುತ್ತದೆ. ವಿಭಕ್ತ ಕುಟುಂಬಗಳು ನಗರ ಪ್ರದೇಶಗಳಿಗೆ ಶಿಕ್ಷಣಕ್ಕಾಗಿ, ಉದ್ಯೋಗಕ್ಕಾಗಿ ವಲಸೆ ಹೋಗುವುದು ಹೆಚ್ಚಾದ ಕಾರಣಗಳಿಂದ ಮತ್ತು ಜಾಗತೀಕರಣದ ಪರಿಣಾಮ ಕ್ರೀಡೆ ಎನ್ನುವುದು ಇಂದು ಮನರಂಜನೆಯ ಕ್ಷೇತ್ರವಾಗಿ ಉಳಿದಿಲ್ಲ, ಬದಲಾಗಿ ಒಂದು ಉದ್ಯಮವಾಗಿ ವಾಣೀಜ್ಯಿಕರಣಗೊಂಡಿದೆ, ಕ್ರೀಡಾ ಮನೋಭಾವನೆ ಮಾಯವಾಗಿ ಪಂದ್ಯದಲ್ಲಿ ಗೆಲ್ಲಲೇಬೇಕೆಂಬ ಮನೋಭಾವನೆ ಮತ್ತು ಅದರಿಂದ ಹಣ ಮಾಡುವ

ಪ್ರವೃತ್ತಿಯಾಗಿರುವುದು ಆತಂಕವನ್ನುಂಟು ಮಾಡುತ್ತದೆ. ದೇಸಿ ಕ್ರೀಡೆಗಳು ಕ್ರೀಡಾ ಮನೋಭಾವದ ಜೊತೆಗೆ ಮಧುರವಾದ ಬಾಂಧವ್ಯವನ್ನು ಬೆಸೆಯುವ ಮಣ್ಣಿನ ಸಂಸ್ಕೃತಿಯನ್ನು ಪ್ರತಿಬಿಂಬಿಸುವ, ಪ್ರತಿಯೊಬ್ಬರಲ್ಲೂ ಕಲ್ಪನಾ ಶಕ್ತಿಯನ್ನು, ಜೀವನೋತ್ಸಾಹವನ್ನು ತುಂಬುವುದರ ಮೂಲಕ ಜೀವನದ ದುಃಖ-ದುಮ್ಮಾನಗಳನ್ನು ಮರೆಸುವ ಶಕ್ತಿಗಳಾಗಿದ್ದವು. ದೇಸಿ ಕ್ರೀಡೆಗಳ ಜೊತೆಗೆ ಗೊಂಬೆಯಾಟ, ಭಾಗವತರಾಟ, ಮೌಖಿಕ ಕಾವ್ಯ ಪುರಾಣಗಳ ವಾಚನ ಮುಂತಾದ ಸಾಂಸ್ಕೃತಿಕ ಚಟುವಟಿಕೆಗಳು ದೇಸಿಯ ಬದುಕನ್ನು ಶ್ರೀಮಂತಗೊಳಿಸಿ ಪ್ರತಿಯೊಬ್ಬರಿಗೂ ಮನರಂಜನೆಯ ಜೊತೆಗೆ ಬದುಕಿನ ಸಾರವನ್ನು ಸೃಜಿಸುತ್ತಿದ್ದವು. ಜಾಗತೀಕರಣ ಇವೆಲ್ಲವನ್ನೂ ಆಹುತಿ ತೆಗೆದುಕೊಳ್ಳುವುದರ ಮೂಲಕ ದೇಸಿಯ ಸಾಂಸ್ಕೃತಿಕ ಬದುಕು ಇಂದು ಶೂನ್ಯವಾಗುತ್ತಿರುವುದನ್ನು ಕಾಣುತ್ತೇವೆ. ವೆಸೆಕ್ಸ್‌ನ ಪರಿಸರದಲ್ಲಿದ್ದ ಧಾರ್ಮಿಕ ನಾಟಕಗಳು, ಸಾಮೂಹಿಕ ಹಳ್ಳಿಯ ನೃತ್ಯಗಳು, ದಾಳದಾಟಗಳು ಕೈಗಾರೀಕರಣ, ಆಧುನಿಕ ಜೀವನ ಶೈಲಿಯಲ್ಲಿ ಲೀನವಾಗುವುದನ್ನು ಕಾದಂಬರಿಕಾರರು ಹೇಳುತ್ತಾರೆ. ಮಲೆನಾಡಿನ ಪ್ರದೇಶದಲ್ಲಿ ಹಳ್ಳಿಯ ಹೊರಗಿದ್ದ ಕಳ್ಳಂಗಡಿ ಮತ್ತು ಎಗ್ಡಿನ್ ಹೀತ್‌ನ ರಸ್ತೆ ಬದಿಯಲ್ಲಿದ್ದ ಇನ್‌ಗಳು, ಹಳ್ಳಿಯ ಜನರ ಮನರಂಜನಾ ಸ್ಥಳಗಳಾಗಿದ್ದವು ಆದರೆ ಇಂದು ಅವುಗಳೆಲ್ಲ ವಾಣಿಜ್ಯ ಕೇಂದ್ರಗಳಾಗಿ ರೆಸಾರ್ಟ್ ಸಂಸ್ಕೃತಿ ರಾರಾಜಿಸುತ್ತ ದೇಸಿಯ ಸಾಂಸ್ಕೃತಿಕ ಬದುಕನ್ನು ಅಸ್ಥಿರಗೊಳಿಸುತ್ತಿರುವುದನ್ನು ಕಾಣಬಹುದಾಗಿದೆ.

ದೇಸಿ ಶಿಕ್ಷಣ ಕೇಂದ್ರಗಳಾಗಿದ್ದ ಐಗಳ ಮಠ ಅಥವಾ ಕೂಲಿ ಮಠಗಳು, ದೇವಾಲಯಗಳು ಮತ್ತು ಅಗ್ರಹಾರಗಳು ಸೀಮಿತ ವರ್ಗದವರಿಗಷ್ಟೇ ಸಾಂಪ್ರದಾಯಿಕ ರೀತಿಯಲ್ಲಿ ಶಿಕ್ಷಣ ನೀಡುತ್ತಿದ್ದವು. ಸಮಾಜದ ಕೆಳಸ್ತರದವರು ಮತ್ತು ಹೆಣ್ಣು ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದುದನ್ನು ಕುವೆಂಪುರವರ ಕಾದಂಬರಿಗಳಲ್ಲಿ ಕಾಣುತ್ತೇವೆ. ಪರಾಂಪರಾಗತವಾಗಿ ಬೆಳೆದು ಬಂದಿದ್ದ ಪೂರ್ವಗ್ರಹ ಪೀಡಿತ ಮನೋಭಾವನೆಗಳೆ ಇದಕ್ಕೆ ಕಾರಣವಿರಬಹುದು. ಈ ಕಾರಣಗಳಿಂದ ದೇಸಿ ಬದುಕಿನಲ್ಲಿ ಅನಕ್ಷರತೆ, ಮೌಢ್ಯ, ಕಂದಾಚಾರಗಳೇ ಜನರ ಮನಸ್ಸನ್ನಾವರಿಸಿದ್ದವು. ಆದರೆ ಅಂದಿನ ಸಾಂಪ್ರದಾಯಿಕ ಶಿಕ್ಷಣ ಮೌಲ್ಯಯುತವಾಗಿದ್ದು ಸಮಾಜದಲ್ಲಿ ನೈತಿಕತೆ ಹಾಗೂ ಧಾರ್ಮಿಕ ಭಾವನೆಗಳು ನೆಲೆಗೊಳ್ಳಲು ಕಾರಣವಾಗಿತ್ತು ಎನ್ನುವುದರಲ್ಲಿ ಸಂಶಯವಿಲ್ಲ. ಮಲೆನಾಡಿನ ದೇಸಿ ಪರಿಸರದಲ್ಲಿದ್ದ ಶಿಕ್ಷಣದಲ್ಲಿ ಲಿಂಗ-ತಾರತಮ್ಯ ಇಂಗ್ಲೆಂಡಿನ ವೆಸೆಕ್ಸ್ ಗ್ರಾಮೀಣ ಪ್ರದೇಶದಲ್ಲಿರಲಿಲ್ಲ ಎನ್ನುವುದಕ್ಕೆ ಅಲ್ಲಿನ ವೈಚಾರಿಕ ಮನೋಭಾವವೇ ಕಾರಣವೆನ್ನಬಹುದು. 'ದಿ ರಿಟರ್ನ್ ಆಫ್ ದಿ ನೇಟಿವ್' ಕಾದಂಬರಿಯ ಕ್ಯಾಪ್ಟನ್ ವೈ ಹೇಳುವಂತೆ "ವಿದ್ಯೆ ಇಲ್ಲದಾಗ ದೇಶ ಸುಭಿಕ್ಷವಾಗೆ ಇತ್ತು"[9] ಎನ್ನುವ ಮಾತು

ಭಾಗಶಃ ಸತ್ಯವೆನಿಸುತ್ತದೆ. ಏಕೆಂದರೆ ದೇಸಿ ಸಂಸ್ಕೃತಿ ಇಂದು ಎಲ್ಲಿಯಾದರೂ ಅಲ್ಪಸ್ವಲ್ಪ ಉಳಿದಿದ್ದರೆ ಅದು ಅನಕ್ಷರಸ್ಥ ಗ್ರಾಮೀಣ ಜನರಿಂದ ಮಾತ್ರ ಎಂದೇ ಹೇಳಬಹುದು.

ಇಂಗ್ಲಿಷರ ವಸಾಹತು ಆಡಳಿತ ಮತ್ತು ಕ್ರೈಸ್ತ ಮಿಶನರಿಗಳ ಆಗಮನದಿಂದ ಸಾಂಪ್ರದಾಯಿಕ ಶಿಕ್ಷಣ ಕೊನೆಗೊಂಡು ಆಧುನಿಕ ಶಿಕ್ಷಣ ಎಲ್ಲರಿಗೂ ಲಿಂಗ ತಾರತಮ್ಯವಿಲ್ಲದೆ ದೊರೆಯುವಂತಾಗುತ್ತದೆ. ಕ್ರೈಸ್ತ ಮಿಶನರಿಗಳೇನೋ ಸರ್ವರಿಗೂ ಶಿಕ್ಷಣವನ್ನು ನೀಡಲು ಪ್ರಾರಂಭಿಸಿದರು. ಆದರೆ ಅಂತರಂಗದಲ್ಲಿ ಅವರ ಸ್ವಾರ್ಥ ಎದ್ದು ಕಾಣುತ್ತದೆ. ಅದುವೇ ಮತಾಂತರಗೊಳಿಸುವ ಪ್ರಯತ್ನ. ಕ್ರೈಸ್ತ ಮಿಶನರಿಗಳ ಶೈಕ್ಷಣಿಕ ಸಾಧನೆಯನ್ನು ಅಲ್ಲಗಳೆಯುವಂತಿಲ್ಲ. ಶಿಕ್ಷಣ ಎನ್ನುವುದು ಯಾವುದೇ ಪ್ರದೇಶದ ಜ್ಞಾನಪರಂಪರೆಯನ್ನು, ಭಾಷೆ, ಸಂಸ್ಕೃತಿ, ಇತಿಹಾಸ, ಸಾಮಾಜಿಕ ಧಾರ್ಮಿಕ ನೈತಿಕ ಮಾನವೀಯ ಮೌಲ್ಯಗಳನ್ನು ಪ್ರತಿಬಿಂಬಿಸುವುದರ ಮೂಲಕ ಬೌದ್ಧಿಕ ಸಮಾಜದ ಬೆಳವಣಿಗೆಗೆ ಪೂರಕವಾಗಿರಬೇಕು. ಆದರೆ ಬ್ರಿಟಿಷರ ವಸಾಹತೀಕರಣ, ಪಾಶ್ಚಾತ್ಯ ಮಾದರಿಯ, ಆಂಗ್ಲ ಶಿಕ್ಷಣ ಮಾಧ್ಯಮ ದೇಸಿಯ ಜ್ಞಾನಪರಂಪರೆಯನ್ನು, ಭಾಷಾನೆಲೆಗಳನ್ನು, ಜಾನಪದೀಯ ಸಂಸ್ಕೃತಿಯನ್ನು ನಾಶಮಾಡುವುದನ್ನು ಕುವೆಂಪು ಮತ್ತು ಹಾರ್ಡಿಯವರ ಕಾದಂಬರಿಗಳಲ್ಲಿ ಕಾಣುತ್ತೇವೆ. <u>ಟೆಸ್</u> ಕಾದಂಬರಿಯಲ್ಲಿ ಗ್ರಾಮೀಣ ಬದುಕಿನಲ್ಲಿ ಹಾಸುಹೊಕ್ಕಾಗಿದ್ದ ಜಾನಪದ ಸಂಸ್ಕೃತಿ ಕೈಗಾರೀಕರಣದಿಂದ ನಶಿಸಿ ಹೋಗುವುದನ್ನು ಉಲ್ಲೇಖಿಸಬಹುದಾಗಿದೆ.

ಬ್ರಿಟಿಷರ ವಸಾಹತು ಆಳ್ವಿಕೆಯ ಕಾರಣ ಭಾರತಕ್ಕೆ ಬಂದ ಕ್ರೈಸ್ತ ಮಿಶನರಿಗಳು ದೇಸಿಯ ಸಂಸ್ಕೃತಿಯ ನಾಶಕ್ಕೆ ಪರೋಕ್ಷವಾಗಿ ಕಾರಣರಾಗುತ್ತಾರೆ. ಭಾರತದಲ್ಲಿದ್ದ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯನ್ನು ಜಾತಿ–ವರ್ಗಗಳನ್ನು ಮತ್ತು ಹಿಂದೂ ಧರ್ಮದ ಕಟ್ಟುಪಾಡುಗಳನ್ನು ಟೀಕಿಸುವುದರ ಮೂಲಕ ಸಮಾಜದ ಕೆಳಸ್ತರದಲ್ಲಿದ್ದವರನ್ನು ಕ್ರೈಸ್ತ ಮತಕ್ಕೆ ಮತಾಂತರಗೊಳಿಸಲು ಪ್ರಾರಂಭಿಸುತ್ತಾರೆ.[10] ನಿಜವಾಗಿಯೂ ಮತಾಂತರವೆನ್ನುವುದು ಜಾಗತೀಕರಣದ ಭಾಗವಾಗಿದೆ. ಮತಾಂತರಗೊಳಿಸಲು ಮಿಶನರಿಗಳು ಬಳಸುತ್ತಿದ್ದ ಆಧುನಿಕ ವಿಲಾಯಿತಿ ವಸ್ತುಗಳು, ಹಣ, ಆಮಿಷ, ಸ್ಥಳೀಯ ಮುಗ್ಧರು ಮತಾಂತರಗೊಳ್ಳಲು ಪ್ರೇರೇಪಣೆಗೆ ಕಾರಣವಾಗಿದ್ದವು. ಮತಾಂತರಿಸಲು ಪ್ರಯತ್ನಿಸುವ ಪಾದ್ರಿ ಜೀವರತ್ನಯ ಎಂತಹ ಅನೈತಿಕ ಮಾರ್ಗವನ್ನಾದರೂ ಅನುಸರಿಸಲು ಹಿಂಜರಿಯುವುದಿಲ್ಲ ಎನ್ನುವುದು ಮತಾಂತರದ ಉದ್ದೇಶವನ್ನು ತಿಳಿಸುತ್ತದೆ. ಇಂತಹ ಮತಾಂತರ ಸಾಮಾಜಿಕ ಸಾಮರಸ್ಯವನ್ನು ಹಾಳು ಮಾಡುವುದನ್ನು ಸಹ ತಿಳಿಸುತ್ತದೆ. ಅಷ್ಟೇ ಅಲ್ಲದೆ ಕೌಟುಂಬಿಕ ಕಲಹಕ್ಕೆ ಕಾರಣವಾಗುವುದಕ್ಕೆ <u>ಮಲೆಗಳಲ್ಲಿ ಮದುಮಗಳು</u>

ಕಾದಂಬರಿಯ ದೇವಯ್ಯಗೌಡನ ಮನೆಯೇ ಸಾಕ್ಷಿಯಾಗುತ್ತದೆ. ಜೀವರತ್ನಯ್ಯ ಮದುವೆಯಾಗಿ ಅನ್ಯೋನ್ಯವಾಗಿದ್ದ ದೇವಯ್ಯಗೌಡನಿಗೆ ಮೊದಲ ಹೆಂಡತಿಯಾದ ದೇವಮ್ಮನಿಗೆ ಡೈವೋರ್ಸ್ ಕೊಡಿಸಿ ತನ್ನ ಮಗಳನ್ನು ಮದುವೆಯಾಗಿ ಕ್ರೈಸ್ತಮತಕ್ಕೆ ಬರಲು ಪ್ರೋತ್ಸಾಹಿಸುವ ರೀತಿ, ಮತಾಂತರದ ಪಿಡುಗು ಎಷ್ಟೊಂದು ಸಾಮಾಜಿಕ, ಕೌಟುಂಬಿಕ ಹಾನಿಯನ್ನುಂಟು ಮಾಡುತ್ತದೆ ಎನ್ನುವುದನ್ನು ಸಾಬೀತು ಪಡಿಸುತ್ತದೆ. ಮತಾಂತರಗೊಳಿಸಲು ಬಂದ ಮಿಶನರಿಗಳೂ ಹಣ ಮತ್ತು ಇನ್ನಿತರ ಆಮಿಷಗಳನ್ನು ಮತಾಂತರಗೊಂಡವರಿಗೆ ನೀಡುವುದು ನೈತಿಕತೆಯ ಅಧಃಪತನವೆಂದೇ ಹೇಳಬಹುದು. ಮತಾಂತರ ಮಲೆನಾಡಿನ ದೇಸಿ ಬದುಕಿನಲ್ಲಷ್ಟೇ ಅಲ್ಲದೆ ಇಂಗ್ಲೆಂಡಿನ ದಕ್ಷಿಣ ಒಳನಾಡಿನ ಗ್ರಾಮೀಣ ಪರಿಸರದಲ್ಲಿ ಚಾಲ್ತಿಯಲ್ಲಿತ್ತು. ವೆಸೆಕ್ಸ್‌ನ ದೇಸಿಯ ಬದುಕು ಅರೆಪೇಗನ್ ಸಂಸ್ಕೃತಿಯ ಭಾಗವಾಗಿತ್ತು. ಅಂಥಹ ಸಂಸ್ಕೃತಿಯನ್ನು ಆಚರಿಸುತ್ತಿದ್ದ ಸ್ಥಳೀಯರನ್ನು ಮತಾಂತರಗೊಳಿಸುವುದನ್ನು ಟೆಸ್ ಕಾದಂಬರಿಯಲ್ಲಿ ಕಾಣುತ್ತೇವೆ.

ಕುವೆಂಪು ಮತ್ತು ಹಾರ್ಡಿಯವರ ಕಾದಂಬರಿಗಳು ಸಾಮಾಜಿಕ ಪ್ರಜ್ಞೆ ಮತ್ತು ಪ್ರಖರವಾದ ಸಾಮಾಜಿಕ ಕಳಕಳಿಯನ್ನು ಬಿಂಬಿಸುವ ಕೃತಿಗಳು ಎನ್ನುವುದು ಅವುಗಳ ಅಧ್ಯಯನದಿಂದ ತಿಳಿಯುತ್ತದೆ. ಭಾರತದ ಸಾಮಾಜಿಕ ಶ್ರೇಣೀಕೃತ ವ್ಯವಸ್ಥೆಯಲ್ಲಿದ್ದ ವರ್ಣ ವ್ಯವಸ್ಥೆಯನ್ನು ಮತ್ತು ಜಾತಿ ವ್ಯವಸ್ಥೆಯನ್ನು ಕಟುವಾದ ಮತ್ತು ನಿಷ್ಠುರವಾದ ಮಾತುಗಳಲ್ಲಿ ಕುವೆಂಪುರವರು ವಿರೋಧಿಸುತ್ತಾರೆ. ಅವರ ಎರಡೂ ಕಾದಂಬರಿಗಳೂ ಜಾತಿ–ಉಪಜಾತಿಗಳ ಷೋಕ ಮತ್ತು ಶೋಷಿತ ವರ್ಗದವರ ಸಮಗ್ರ ಚಿತ್ರಣವನ್ನು ನೀಡುತ್ತವೆ. ಸಾಮಾಜಿಕ ಜಾತಿ ವ್ಯವಸ್ಥೆಯಲ್ಲಿ ಉನ್ನತ ಸ್ಥಾನದಲ್ಲಿದ್ದ ಬ್ರಾಹ್ಮಣರು ಇತರ ಜಾತಿಗಳವರನ್ನು ಬೌದ್ಧಿಕವಾಗಿ ಶೋಷಿಸಿದರೆ, ಆರ್ಥಿಕವಾಗಿ ಬಲಿಷ್ಠರಾದ ಒಕ್ಕಲಿಗ ಜಮೀನುದಾರರು ಆರ್ಥಿಕವಾಗಿ ಹಿಂದುಳಿದವರನ್ನು ಮತ್ತು ಜಾತಿ ವ್ಯವಸ್ಥೆಯಲ್ಲಿ ಕೆಳಸ್ತರದಲ್ಲಿರುವ ದಲಿತರನ್ನು ಶೋಷಣೆ ಮಾಡುತ್ತಿದ್ದರು. ಆಯಾ ಜಾತಿಯವರಿಗೆ ಆಯಾ ಜಾತಿಯೇ ಶ್ರೇಷ್ಠವಾಗಿದ್ದು ಇತರ ಜಾತಿಯವರಿಗಿಂತ ತಮ್ಮ ಜಾತಿಯೆ ಉತ್ತಮ ಎಂಬ ಭಾವನೆಯಿತ್ತು. ಮಡಿ, ಮೈಲಿಗೆ ಅಥವಾ ಪರಿಶುದ್ಧತೆಯ ಆಚರಣೆ ಪ್ರತಿ ಜಾತಿಯಲ್ಲಿಯೂ ಇತ್ತು ಎನ್ನುವುದನ್ನು ಕಾಣುತ್ತೇವೆ. ಬ್ರಾಹ್ಮಣರು ಉಳಿದ ಜಾತಿಯವರನ್ನು ಮುಟ್ಟುವುದಿರಲಿ ಅವರನ್ನು ಮಾತಾಡಿಸುವಾಗಲೂ ದೂರ ನಿಂತು ಮಾತನಾಡಬೇಕಾಗಿತ್ತು. ಇದೇ ರೀತಿಯ ಅಸ್ಪೃಶ್ಯತೆಯು ಒಕ್ಕಲಿಗ ಜಾತಿಯಲ್ಲಿಯೂ ಚಾಲ್ತಿಯಲ್ಲಿತ್ತು. ಒಕ್ಕಲಿಗ ಒಡೆಯರನ್ನು ಕಂಡಾಗ ಕೆಳಜಾತಿಯ ಗಂಡಸರು ನೆಲಮಟ್ಟಿ ದೂರದಿಂದಲೇ ಗೌರವ ಸೂಚಿಸಬೇಕಾಗಿತ್ತು ಮತ್ತು ಹೆಂಗಸರು ಮರೆಯಲ್ಲಿ ನಿಲ್ಲಬೇಕಾಗಿತ್ತು. ಈ ಮಡಿ ಮೈಲಿಗೆಯ ಪ್ರಶ್ನೆ ಕೇವಲ ಬ್ರಾಹ್ಮಣ–ಒಕ್ಕಲಿಗ ಜಾತಿಯವರಿಗೆ ಮೀಸಲಾಗಿರದೆ

ಕೆಳಜಾತಿಯವರಲ್ಲಿಯೂ ರೂಢಿಯಲ್ಲಿತ್ತು. ಹೊಲೆಯರ ಕೇರಿಗೆ ಮೇಲ್ಜಾತಿಯವರಷ್ಟೇ ಅಲ್ಲದೆ ಇತರ ಧರ್ಮೀಯರೂ ಪ್ರವೇಶಿಸುವಂತಿರಲಿಲ್ಲ ಒಂದು ವೇಳೆ ಅವರು ಪ್ರವೇಶಿಸಿದರೆ ಕೇರಿ ಸುಟ್ಟು ನಾಶವಾಗುತ್ತದೆ ಎನ್ನುವ ನಂಬಿಕೆ ಕೆಳಜಾತಿಯವರಲ್ಲಿತ್ತು. ಆದರೆ ಕುವೆಂಪುರವರು ತಮ್ಮ ಕಾದಂಬರಿಗಳಲ್ಲಿ ಜಾತಿ- ವ್ಯವಸ್ಥೆಯಲ್ಲಿದ್ದ ಮೇಲಿನ ಎರಡು ಜಾತಿಗಳಾದ ಬ್ರಾಹ್ಮಣರು ಮತ್ತು ಒಕ್ಕಲಿಗ ಜಾತಿಯವರು ಇತರ ಜಾತಿಯನ್ನು ಶೋಷಿಸುವುದನ್ನು ಕಟುವಾಗಿ ಟೀಕಿಸುತ್ತಾರೆ.

ಹಾರ್ಡಿಯವರು ಸಹ ವೆಸೆಕ್ಸ್‌ನ ಸಾಮಾಜಿಕ ವ್ಯವಸ್ಥೆಯಲ್ಲಿದ್ದ ಮೂರು ವರ್ಗಗಳಾದ ಮೇಲ್ವರ್ಗ, ಮಧ್ಯಮ ವರ್ಗ ಮತ್ತು ಕೆಳವರ್ಗದವರ ಬಗ್ಗೆ ಅನೇಕ ನಿದರ್ಶನಗಳನ್ನು ನೀಡಿದ್ದಾರೆ. ಶ್ರೀಮಂತ ಜಮೀನುದಾರರು ಮತ್ತು ಸುಶಿಕ್ಷಿತ ವರ್ಗದವರು ಸಮಾಜದ ಕೆಳಸ್ತರದಲ್ಲಿದ್ದ ಕೃಷಿಕಾರ್ಮಿಕರನ್ನು, ಕೂಲಿಕಾರ್ಮಿಕರನ್ನು ಮತ್ತು ಉಪಕಸುಬುಗಳಲ್ಲಿ ತೊಡಗಿಸಿಕೊಂಡಿದ್ದವರನ್ನು ಶೋಷಿಸುವುದನ್ನು ತಮ್ಮ ಕಾದಂಬರಿಗಳಲ್ಲಿ ನಿರ್ದಾಕ್ಷಿಣ್ಯವಾಗಿ ಖಂಡಿಸುತ್ತಾರೆ. ಸಾಮಾಜಿಕ ಪ್ರತಿಷ್ಠೆ, ಸ್ಥಾನಮಾನ ಮತ್ತು ವೃತ್ತಿಗಳು ವರ್ಗವ್ಯವಸ್ಥೆಯಲ್ಲಿ ಪ್ರಧಾನ ಪಾತ್ರವಹಿಸುತ್ತವೆ. ಮಲೆನಾಡಿನ ಸಾಮಾಜಿಕ ಜಾತಿ ವ್ಯವಸ್ಥೆಯಲ್ಲಿದ್ದ ಮಡಿ-ಮೈಲಿಗೆ ಅಥವಾ ಪರಿಶುದ್ಧತೆಯ ಜಾಗದಲ್ಲಿ ಸಾಮಾಜಿಕ ಪ್ರತಿಷ್ಠೆ ವೆಸೆಕ್ಸ್‌ನ ಸಾಮಾಜಿಕ ಬದುಕಿನಲ್ಲಿತ್ತು. ಬ್ರಾಹ್ಮಣರು ಇತರ ಜಾತಿಯವರೊಂದಿಗೆ ಹತ್ತಿರದಲ್ಲಿ ನಿಂತು ಮಾತನಾಡಿದರೆ ಮೈಲಿಗೆಯಾಗುತ್ತದೆ ಎನ್ನುವ ಭಾವನೆಯಿದ್ದರೆ, ವೆಸೆಕ್ಸ್‌ನ ಭಾಗದಲ್ಲಿ ಉನ್ನತ ಸ್ಥಾನಮಾನ ಹೊಂದಿರುವ ಪ್ರತಿಷ್ಠಿತರು ಸಾಮಾನ್ಯ ವೃತ್ತಿಗಳೊಂದಿಗೆ ಅಥವಾ ಸಮಾಜದಲ್ಲಿ ಕೆಳಸ್ತರದಲ್ಲಿರುವವರೊಂದಿಗೆ ಮಾತನಾಡಿದರೆ ತಮ್ಮ ಸಾಮಾಜಿಕ ಪ್ರತಿಷ್ಠೆಗೆ ಕಳಂಕ ಬರುತ್ತದೆ ಎಂಬ ಅಭಿಪ್ರಾಯವಿತ್ತು. ಇಂತಹ ಸಾಮಾಜಿಕ ಪ್ರತಿಷ್ಠೆ ವೈವಾಹಿಕ ಸಂಬಂಧಗಳಿಗೂ ವಿಸ್ತರಿಸಿತ್ತು ಎನ್ನುವುದನ್ನು ಹಾರ್ಡಿಯವರ ಕಾದಂಬರಿಗಳಲ್ಲಿ ಕಾಣುತ್ತೇವೆ. ಭಾರತದಂತ ಸಾಮಾಜಿಕ ವ್ಯವಸ್ಥೆಯಲ್ಲಿದ್ದ ಜಾತಿ ಪದ್ಧತಿ ಇಂಗ್ಲೆಂಡಿನ ಸಮಾಜದಲ್ಲಿ ಅಸ್ತಿತ್ವದಲ್ಲಿ ಇಲ್ಲದಿದ್ದರೂ ಶೋಷಣೆ ನಡೆಯುತ್ತಿದ್ದು ಇದಕ್ಕೆ ಊಳಿಗಮಾನ್ಯ ವ್ಯವಸ್ಥೆ ಮತ್ತು ಬಂಡವಾಳಶಾಹಿ ಧೋರಣೆಯ ಮನೋಭಾವ ಕಾರಣವಾಗಿರುವುದು ಸ್ಪಷ್ಟವಾಗುತ್ತದೆ. ಹಾರ್ಡಿಯವರ <u>ದಿ ರಿಟರ್ನ್ ಆಫ್ ದಿ ನೇಟಿವ್</u> ಕಾದಂಬರಿಯಲ್ಲಿ ಶ್ರೀಮತಿ ಯೋಬ್ರೈಟ್ ಕಾವಿ ಮಾರುವ ಡಿಗರಿ ವೆನ್ ಬಗ್ಗೆ, ಕ್ಯಾಪ್ಟನ್ ವೈ- ಶ್ರೀಮತಿ ಯೋಬ್ರೈಟ್ ಬಗ್ಗೆ ಮತ್ತು ಯುಸ್ಟೇಷ್ಯ ವೈ ವೈಲ್ಡೀವ್ ಮತ್ತು ಡಿಗರಿ ವೆನ್ ಬಗ್ಗೆ ಕೀಳು ಭಾವನೆಯನ್ನು ಹೊಂದಿರುವುದು ಸಾಮಾಜಿಕ ಪ್ರತಿಷ್ಠೆಯ ಆಧಾರದ ಮೇಲೆ ಎಂಬುದು ಸಹ ಸ್ಪಷ್ಟವಾಗುತ್ತದೆ.

ಕುವೆಂಪುರವರ ಕಾದಂಬರಿಗಳಲ್ಲಿ ಜಾತಿ ವ್ಯವಸ್ಥೆ ಮತ್ತು ಶೋಷಣೆಗೆ ಸಂಬಂಧ ಪಟ್ಟ ಮತ್ತೊಂದು ಪ್ರಮುಖ ಅಂಶವೆಂದರೆ ಬ್ರಾಹ್ಮಣ ಬ್ರಾಹ್ಮಣನನ್ನು ಶೋಷಿಸುವುದು ಮತ್ತು ಶೂದ್ರ ಶೂದ್ರನನ್ನು ಶೋಷಿಸುವುದು. ಇಂತಹ ಶೋಷಣೆಗೆ ಜಾತಿಗಿಂತಲೂ ಆರ್ಥಿಕ ಪರಿಸ್ಥಿತಿಯೇ ಕಾರಣ ಎನ್ನುವುದು ತಿಳಿಯುತ್ತದೆ. ಕಾನೂರು ಚಂದ್ರಯ್ಯಗೌಡ ತನ್ನ ಜಾತಿಯವನೇ ಆದ ಕೆಳಕಾನೂರು ಅಣ್ಣಯ್ಯಗೌಡ ಸಾಲ ತೀರಿಸಲಾಗದೆ ಅರ್ಧರಾತ್ರಿಯಲ್ಲಿ ತನ್ನ ಮನೆಯಲ್ಲಿದ್ದ ಸಾಮಾನುಗಳನ್ನು ಗಾಡಿಯಲ್ಲಿ ಹೇರಿಕೊಂಡು ಹೋಗಲು ಯತ್ನಿಸಿದಾಗ ತಡೆದು ನಿಲ್ಲಿಸುತ್ತಾನೆ. ಅಣ್ಣಯ್ಯಗೌಡ ಸ್ವಜಾತಿಯವನೇ ಆದರೂ ಅವನನ್ನು ಶೋಷಿಸುವುದು ಪಾಳೆಗಾರಿಕೆಯಿಂದ ಕೂಡಿರುವ ಬಂಡವಾಳಶಾಹಿ ಧೋರಣೆಯೇ ಹೊರತು ಬೇರೇನೂ ಅಲ್ಲ. ಇದಕ್ಕೆ ಮತ್ತೊಂದು ಉದಾಹರಣೆ ಹಳೇಪೈಕದವರು ಸ್ವಂತ ಜಮೀನು ಹೊಂದಬಾರದು ಮತ್ತು ಮದುವೆಯ ಸಂದರ್ಭದಲ್ಲಿ ಮದುಮಕ್ಕಳು ದಂಡಿಗೆಯ ಮೇಲೆ ಕೂರಬಾರದು ಎನ್ನುವುದು. ಇದು ದೇಸಿ ಬದುಕಿನಲ್ಲಿ ಬೇರೂರಿದ್ದ ಜಾತಿ ವ್ಯವಸ್ಥೆಯ ಜೊತೆಗೆ ಬಂಡವಾಳಶಾಹಿ ಮತ್ತು ಊಳಿಗಮಾನ್ಯ ವ್ಯವಸ್ಥೆಯ ಮನೋಭಾವ ಎನ್ನುವುದು ಸ್ಪಷ್ಟವಾಗುತ್ತದೆ. ಕೃಷಿ ಕಾರ್ಮಿಕರನ್ನು ಶೋಷಿಸುವ, ಅವರನ್ನು ನಿರ್ದಾಕ್ಷಿಣ್ಯವಾಗಿ ನಡೆಸಿಕೊಳ್ಳುವ ರೀತಿ ಇಬ್ಬರೂ ಕಾದಂಬರಿಕಾರರ ಕೃತಿಗಳಲ್ಲಿ ವ್ಯಕ್ತಗೊಂಡಿರುವುದನ್ನು ನೋಡಿದರೆ ಸಾಮಾಜಿಕ ತಾರತಮ್ಯ. ಶೋಷಣೆ, ಅಸಮಾನತೆ ದೇಸಿ ಬದುಕಿನ ಭಾಗವಾಗಿದ್ದವು ಎನ್ನುವುದನ್ನು ಕಾಣಬಹುದು. ಸಾಮಾಜಿಕ ಮತ್ತು ಆರ್ಥಿಕ ಶೋಷಣೆ, ಬಂಡವಾಳಶಾಹಿ ಮತ್ತು ಊಳಿಗಮಾನ್ಯ ಮನೋಭಾವಗಳು ಜಾಗತೀಕರಣದ ಲಕ್ಷಣಗಳಾಗಿದ್ದವು ಎನ್ನುವುದೂ ಕೂಡ ಸ್ಪಷ್ಟವಾಗಿದೆ.

ದೇಸಿಯ ಸಮಾಜದಲ್ಲಿ ಆಳವಾಗಿ ಬೇರೂರಿದ್ದ ಜಾತಿ, ವರ್ಗ, ವರ್ಣ ವ್ಯವಸ್ಥೆ ಮತ್ತು ಶೋಷಣೆಗೆ ಸಂಬಂಧಪಟ್ಟ ವಿವರಣೆಗಳನ್ನು ನಿರೂಪಿಸುವಲ್ಲಿ ಕುವೆಂಪುರವರು ಹಾರ್ಡಿಯವರಿಗಿಂತ ಭಿನ್ನವಾಗಿರುವುದನ್ನು ಕಾಣುತ್ತೇವೆ. ಹಾರ್ಡಿಯವರು ತಮ್ಮ ಕಾದಂಬರಿಗಳಲ್ಲಿ ವೆಸೆಕ್ಸ್‌ನ ಸಮಾಜದಲ್ಲಿದ್ದ ವರ್ಗ ವ್ಯವಸ್ಥೆಯಲ್ಲಿನ ತಾರತಮ್ಯವನ್ನು ತಮ್ಮ ಪಾತ್ರಗಳ ಮೂಲಕವೇ ವ್ಯಕ್ತಪಡಿಸುತ್ತಾರೆ. ಇದೇ ರೀತಿಯ ನಿರೂಪಣೆಯನ್ನು ಕುವೆಂಪುರವರ <u>ಕಾನೂರು ಹೆಗ್ಗಡಿತಿ</u> ಕಾದಂಬರಿಯಲ್ಲಿ ಕಾಣಬಹುದು. ಕಾದಂಬರಿಯ ಪ್ರಾರಂಭದಿಂದಲೂ ಹೂವಯ್ಯ ಮಲೆನಾಡಿನ ಪ್ರದೇಶದಲ್ಲಿ ಬೇರುಬಿಟ್ಟಿದ್ದ ಜಾತಿ ವ್ಯವಸ್ಥೆಯನ್ನು ಮತ್ತು ವೆಂಕಪ್ಪಯ್ಯ ಜೋಯಿಸರಂತವರಿಂದ ಇತರ ಜಾತಿಯವರನ್ನು ಶೋಷಿಸುತ್ತಿದ್ದ ರೀತಿಯನ್ನು, ಉಪದೇಶಿಸುತ್ತಿದ್ದ ಮೌಢ್ಯವನ್ನು ಟೀಕಿಸುತ್ತಾನೆ. ಹೂವಯ್ಯ: "ನೀವು ತಿಳಿದವರೆಂದುಕೊಂಡು ಹಳ್ಳಿಯವರಿಗೆ ಮೌಢ್ಯವನ್ನೇ ಉಪದೇಶ ಮಾಡಿ, ನಿಮಿತ್ತ, ಹೇಳುವುದು, ವಿಭೂತಿ ಕೊಡುವುದು,

ಸತ್ಯನಾರಾಯಣ ವ್ರತ ಮಾಡಿಸುವುದು, ದೆವ್ವ ಪಿಶಾಚಿಗಳಿಗೆ ಬಲಿಕೊಡಿಸುವುದು, ಇದರಿಂದ ಹೊಟ್ಟೆ ಹೊರೆದುಕೊಳ್ಳುತ್ತಿದ್ದೀರಿ"[11] ಎಂದು ಜೋಯಿಸರನ್ನು ಛೇಡಿಸುತ್ತಾನೆ. ಇದು ಕಾದಂಬರಿಯಲ್ಲಿ ಸಹಜವಾದ ನಿರೂಪಣೆಯಾಗಿದೆ.

ಕಾನೂರು ಹೆಗ್ಗಡತಿ ಕಾದಂಬರಿಯಲ್ಲಿ ಬ್ರಾಹ್ಮಣಶಾಹಿಯನ್ನು ತನ್ನ ಪಾತ್ರಗಳ ಮೂಲಕ ನಿಂದಿಸುವ ಮತ್ತು ಪ್ರತಿಭಟಿಸುವ ಕಾದಂಬರಿಕಾರರು ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ದಲಿತರ ಶೋಷಣೆಯನ್ನು ಯಾವ ಪ್ರತಿಭಟನೆಯೂ ಇಲ್ಲದೆ ಮೃದುವಾಗಿ ನಿರೂಪಿಸುವುದು ಕಾಣುತ್ತೇವೆ. ಹೊಲೆಯನಾಗಿದ್ದ ನಾಯಿಗುತ್ತಿಯನ್ನು ಅಂತಕ್ಕಸೆಟ್ಟಿಯ ಮಗಳು ಕಾವೇರಿ: "ಹರೆಯದ ಕೊಂಬಿನ ಚೆಲುವಿನ ಹೋರಿ ಮಿಗವನ್ನು ಮೆಚ್ಚಿ ನೋಡುವಂತೆ ನೋಡಿದಳು. ತನಗೂ ಅವನಿಗೂ ಮಾನವೀಯವಾದ ಗಂಡು ಹೆಣ್ಣಿನ ಸಂಬಂಧ ಭಾವನೆಯ ಸುಳಿವೂ ಸರ್ವಥಾ ಅಸಂಭವ, ನಿಸರ್ಗ ವಿರುದ್ಧ, ಅಸ್ವಾಭಾವಿಕ, ಅಸಾಧ್ಯ".[12] ಇಲ್ಲಿ ಗುತ್ತಿ ಮತ್ತು ಕಾವೇರಿ ಸಂಬಂಧ ಅಸಂಭವ ಅಸಾಧ್ಯವೆಂದು ಹೇಳುವ ಕಾದಂಬರಿಕಾರರು, ಇದೇ ಕಾದಂಬರಿಯಲ್ಲಿ ಬರುವ ಇನ್ನೊಂದು ಪ್ರಸಂಗ: "ಕಲ್ಲೂರು ದೇವಸ್ಥಾನಕ್ಕೆ ಹೋಗಿದ್ದ ದೇವಯ್ಯಗೌಡರನ್ನು ಬ್ರಾಹ್ಮಣ ಐತಾಳರ ಹೆಂಡತಿ ದೃಷ್ಟಿಯನ್ನು ಅಲುಗಾಡಿಸದೆ, ಏನಾದರೊಂದು ನೆಪ ಮಾಡಿಕೊಂಡು ಮತ್ತೆ ಮತ್ತೆ ಅವನನ್ನೇ ನೋಡುತ್ತಿದ್ದಳು".[13] ಇದಕ್ಕೆ ಪ್ರತಿಕ್ರಿಯಿಸುತ್ತಾ ಬಿ.ವಿ. ಕೃಷ್ಣಪ್ಪ ಅವರು ಹೇಳುವಂತೆ "ಮೇಲ್ಜಾತಿಯ ಹೆಣ್ಣೊಬ್ಬಳು ದಲಿತ ಹುಡುಗನೊಬ್ಬನನ್ನು ನೋಡುವಾಗ ನಿಸರ್ಗ ವಿರೋಧ, ಅಸ್ವಾಭಾವಿಕ ಆಗುವುದಾದರೆ, ಅದೇ ಬ್ರಾಹ್ಮಣ ಹೆಣ್ಣೊಬ್ಬಳು ಗೌಡರ ಹುಡುಗನ್ನು ನೋಡುವಾಗ ಅದೂ ಅಸಾಧ್ಯ, ಅಸ್ವಾಭಾವಿಕ ಆಗುವುದಿಲ್ಲ ಏಕೆ?" ಎಂದು ಪ್ರಶ್ನಿಸುತ್ತಾರೆ. ಇಲ್ಲಿ ಕಾದಂಬರಿಕಾರರ ನಿರೂಪಣಾ ಶೈಲಿಯಲ್ಲಿ ಜಾತಿ ಬೇಧಗಳ ವರ್ಣನೆ, ಉಪಮೆಗಳಲ್ಲಿ ವೈರುಧ್ಯಗಳನ್ನು ಕಾಣುತ್ತೇವೆ. ಈ ರೀತಿಯ ವೈರುಧ್ಯಗಳನ್ನು ಹಾರ್ಡಿಯವರ ಕಾದಂಬರಿಗಳಲ್ಲಿ ಕಾಣಲಾಗುವುದಿಲ್ಲ.

ಕಾನೂರು ಹೆಗ್ಗಡಿತಿ ಕಾದಂಬರಿಯಲ್ಲಿ ಸಮಾಜದ ಒಳಿತು-ಕೆಡುಕುಗಳನ್ನು ರೂಢಿ-ಸಂಪ್ರದಾಯ, ಮೂಢನಂಬಿಕೆಗಳನ್ನು ವಿಶ್ಲೇಷಿಸಿ, ಪ್ರತಿಭಟಿಸಲು ಕಾದಂಬರಿಕಾರರು ಪಾತ್ರಗಳನ್ನು ದುಡಿಸಿಕೊಂಡಿದ್ದಾರೆ. ಆದರೆ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಕಾದಂಬರಿಕಾರರೇ ನೇರವಾಗಿ ಜಾತಿ ವ್ಯವಸ್ಥೆಯನ್ನು, ಮೌಢ್ಯ, ಕಂದಾಚಾರಗಳನ್ನು ಟೀಕಿಸುವ ಮತ್ತು ಪ್ರತಿಭಟಿಸುವ ಕೆಲಸವನ್ನು ತಾವೇ ನಿರ್ವಹಿಸುತ್ತಾರೆ ಎನ್ನುವುದನ್ನು ಕಾಣಬಹುದು. ಆದರೆ ಈ ರೀತಿಯ ಪ್ರತಿಭಟನೆ, ಟೀಕೆಯನ್ನು ಹಾರ್ಡಿಯವರ ಕಾದಂಬರಿಗಳಲ್ಲಿ ಮಾಡದಿರುವುದನ್ನು ಗಮನಿಸಬಹುದು.

ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿ ನಿಂತು ಹದಿನೆಂಟನೆಯ ಶತಮಾದಲ್ಲಿ ಉಂಟಾದ ಕೈಗಾರಿಕಾಕ್ರಾಂತಿ ಮತ್ತು ಇದರಿಂದ ಗ್ರಾಮೀಣ ಸಮುದಾಯದ ದೇಸಿ ಬದುಕಿನ ಮೇಲೆ ಉಂಟಾದ ಪರಿಣಾಮಗಳನ್ನು ಪ್ರತಿಬಿಂಬಿಸುವ ಪ್ರಯತ್ನವನ್ನು ಹಾರ್ಡಿಯವರು ಮಾಡಿದ್ದಾರೆ.

ದೇಸಿಯತೆಯನ್ನು ನಿರ್ದೇಶಿಸುವಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಷಯಗಳಾದ ವಿವಾಹ, ಸಂಸ್ಕಾರ, ಉಡಿಗೆ-ತೊಡಿಗೆ, ಆಹಾರ ಪದ್ಧತಿ ಮುಂತಾದವು ಬಹು ಮುಖ್ಯವಾದ ಪಾತ್ರವಹಿಸುತ್ತವೆ ಎನ್ನುವುದನ್ನು ಗಮನಿಸಲಾಗಿದೆ. ವಿವಿಧ ರೀತಿಯ ವಿವಾಹಗಳು ಪ್ರತಿಯೊಂದು ಸಮಾಜದಲ್ಲೂ ಇದ್ದು ಅವುಗಳು ಆಯಾ ಸಮಾಜದ ರೂಢಿ ಸಂಪ್ರದಾಯ, ಧರ್ಮ, ಜಾತಿ, ವಯಸ್ಸು ಮುಂತಾದ ಅಂಶಗಳನ್ನು ಒಳಗೊಂಡಿರುತ್ತವೆ. ದೇಸಿ ಸಂಸ್ಕೃತಿಯಲ್ಲಿ ವಿವಾಹಗಳು ಸಾಂಪ್ರದಾಯಿಕವಾಗಿ ಮತ್ತು ಶಾಸ್ತ್ರೋಕ್ತವಾಗಿ ನಡೆಯುತ್ತಿದ್ದವು. ವಿವಾಹಗಳು ಗಂಡು-ಹೆಣ್ಣಿನ ಆಯ್ಕೆಯಿಂದ ಪ್ರಾರಂಭವಾಗಿ, ಜಾತಕ ವೇಳೆ, ದಿನಾಂಕ, ಹೆಣ್ಣಿಗೆ ಹೂವು ಮುಡಿಸುವ ಶಾಸ್ತ್ರ, ವೀಳ್ಯ ಶಾಸ್ತ್ರ, ಚಪ್ಪರ ಹಾಕುವುದರಿಂದ ಹಿಡಿದು ವಧುವನ್ನು ವರನಿಗೆ ಧಾರೆಯೆರೆದು ಕೊಡುವವರೆಗೂ ಶಾಸ್ತ್ರೋಕ್ತವಾಗಿ ಮತ್ತು ಸಾಂಗವಾಗಿ ನಡೆಯುತ್ತಿದ್ದವು. ನೆಂಟರಿಷ್ಟರನ್ನು ಮತ್ತು ಸ್ನೇಹಿತರನ್ನು ವ್ಯಕ್ತಿಗತವಾಗಿ ಕರೆಯುವುದು ಮತ್ತು ಹೆಣ್ಣಿನ ಮನೆಯಲ್ಲಿಯೇ ಮದುವೆಗಳು ನಡೆಯುತ್ತಿದ್ದುದು ಸಂಪ್ರದಾಯವಾಗಿತ್ತು. ಶೂದ್ರರ ಮದುವೆಗಳು ರಾತ್ರಿಯ ವೇಳೆಯಲ್ಲಿ ನಡೆಯುತ್ತಿದ್ದುದು ಮಲೆನಾಡಿನಲ್ಲಿ ಸಾಮಾನ್ಯವಾಗಿತ್ತು. ಮದುವೆಗಳು ಹಲವಾರು ದಿನಗಳು ನಡೆಯುತ್ತಿದ್ದು ನೂರಾರು ಜನರು ಸೇರುತ್ತಿದ್ದರು. ಸಾಮೂಹಿಕ ಭೋಜನ, ಪಾನೀಯಗಳ ಸೇವೆಯಾಗುತ್ತಿತ್ತು. ವಿವಾಹಗಳು ಸಡಗರ ಸಂಭ್ರಮದ ದ್ಯೋತಕಗಳಾಗಿದ್ದವು ಮತ್ತು ಮಲೆನಾಡಿನ ದೇಸಿ ಸಂಸ್ಕೃತಿಯಲ್ಲಿ ಬಹುಪತ್ನಿತ್ವ ಸಾಮಾನ್ಯವಾಗಿತ್ತು. ಇದೇ ರೀತಿಯಲ್ಲಿ ವೆಸೆಕ್ಸ್‌ನ ದೇಸಿ ಪರಿಸರದಲ್ಲಿ ವಿವಾಹಗಳು ಸಂಪ್ರದಾಯದಂತೆ ಧಾರ್ಮಿಕ ಶಾಸ್ತ್ರಗಳಿಗೆ ಅನುಗುಣವಾಗಿ ಚರ್ಚುಗಳಲ್ಲಿ ನಡೆಯುತ್ತಿದ್ದವು. ಆದರೆ ಬಹುಪತ್ನಿತ್ವ ಅಥವಾ ಹೆಂಡತಿ ಬದುಕಿರುವಾಗಲೇ ಮತ್ತೊಬ್ಬರನ್ನು ಮದುವೆಯಾಗುವುದು ಅಲ್ಲಿ ನಿಷಿದ್ಧವಾಗಿತ್ತು ಎನ್ನುವುದು ಸ್ಪಷ್ಟವಾಗುತ್ತದೆ. ಮಲೆನಾಡಿನ ದೇಸಿ ಸಂಸ್ಕೃತಿಯಲ್ಲಿ ವಿವಾಹಗಳು ಜಾತಿಯ ಆಧಾರದ ಮೇಲೆ ನಡೆದರೆ ವೆಸೆಕ್ಸ್‌ನಲ್ಲಿ ಸಾಮಾಜಿಕ ಪ್ರತಿಷ್ಠೆ ಮತ್ತು ಸ್ಥಾನಮಾನಕ್ಕನುಗುಣವಾಗಿ ನಡೆಯುತ್ತಿದ್ದವು. ಗಂಡಿನ ಕಡೆಯವರು ಹೆಣ್ಣಿನ ಕಡೆಯವರಿಗೆ ದಕ್ಷಿಣೆ ಕೊಡುವ ಅಥವಾ ತೆರ ಕೊಡುವ ಪದ್ಧತಿ ಅಂದಿನ ದಿನಗಳಲ್ಲಿ ಮಲೆನಾಡಿನ ಸಾಮಾಜಿಕ ಜೀವನದಲ್ಲಿತ್ತು. ಕನ್ಯಾತ್ವಕ್ಕೆ ಮತ್ತು ಪಾತಿವ್ರತ್ಯ ಧರ್ಮಕ್ಕೆ ಪ್ರಾಶಸ್ತ್ಯ ನೀಡುತ್ತಿದ್ದುದನ್ನು ಎರಡೂ ಸಂಸ್ಕೃತಿಗಳಲ್ಲಿ ಕಾಣುತ್ತೇವೆ.

ವಿವಾಹಗಳು ದೇಸಿಯ ಸಂಸ್ಕೃತಿಯ ಭಾಗವಾಗಿದ್ದವು ಎನ್ನವುದನ್ನು ಇಬ್ಬರೂ ಕಾದಂಬರಿಕಾರರು ತಮ್ಮ ಕೃತಿಗಳಲ್ಲಿ ನಿರೂಪಿಸಿದ್ದಾರೆ. ಆದರೆ ಜಾಗತೀಕರಣದ ಪ್ರಭಾವದಿಂದ ಸಾಂಪ್ರದಾಯಿಕ ವಿವಾಹ ಪದ್ಧತಿ ಕಣ್ಮರೆಯಾಗುತ್ತಿರುವುದನ್ನು ಕಾಣುತ್ತೇವೆ. ಸಾಂಪ್ರದಾಯಿಕ ವಿವಾಹಗಳು ಗಂಡು- ಹೆಣ್ಣಿನ ಬಾಂಧವ್ಯ ಬೆಸುಗೆಯಾಗಿ, ನೈತಿಕ, ಧಾರ್ಮಿಕ ಮತ್ತು ಸಾಮಜಿಕ ಮೌಲ್ಯಗಳ ಪ್ರತೀಕವಾಗಿ ದೇಸಿ ಸಂಸ್ಕೃತಿಯನ್ನು ಉಜ್ವಲಗೊಳಿಸುತ್ತಿದ್ದವು. ಜಾಗತೀಕರಣದ ಪ್ರಭಾವದಿಂದಾಗಿ ಇಂದು ಸಾಂಪ್ರದಾಯಿಕ ವಿವಾಹಗಳು[14] ಕಣ್ಮರೆಯಾಗಿ ಯಾಂತ್ರೀಕೃತವಾಗುತ್ತಿವೆ ಮತ್ತು ವ್ಯಾವಹಾರಿಕ ಆಚರಣೆಗಳಾಗುತ್ತಿವೆ. "ವಧು-ವರರ ಅನ್ವೇಷಣೆಗಾಗಿಯೇ ಇರುವ ವ್ಯಾಪಾರ ಕೇಂದ್ರಗಳು, ಮದುವೆ ಮಾಡಿಸಲು 'ಇವೆಂಟ್ ಮ್ಯಾನೇಜ್‌ಮೆಂಟ್' ಎಂಬ ಆಧುನಿಕ ವಾಣಿಜ್ಯ ಕೇಂದ್ರಗಳು ಆಹ್ವಾನ ಪತ್ರಿಕೆ ಹಂಚುವುದರಿಂದ ಹಿಡಿದು ಊಟೋಪಚಾರದವರೆಗೆ ಗುತ್ತಿಗೆ ಆಧಾರದ ಮೇಲೆ ನಿರ್ವಹಿಸುತ್ತಿವೆ."[14] ಗುರು-ಹಿರಿಯರು, ಬಂಧು ಬಳಗ, ಸ್ನೇಹಿತರೆಲ್ಲ ಒಟ್ಟಾಗಿ ಸೇರಿ ಅನೇಕ ದಿನಗಳವರೆಗೆ ಸಡಗರ-ಸಂಭ್ರಮದಿಂದ ನಡೆಯುತ್ತಿದ್ದ ವಿವಾಹಗಳು ಇಂದು 'ಇನ್‌ಸ್ಟಂಟ್' ಮ್ಯಾರೇಜ್‌ಗಳಾಗಿ ಬದಲಾಗಿ ದೇಸೀ ಚಿತ್ರಣವನ್ನು ಬದಲಾಯಿಸಿರುವುದು ಸಾಮಾನ್ಯವಾಗಿ ಕಂಡುಬರುತ್ತಿವೆ.

ದೇಸಿ ಆಹಾರ ಪದ್ಧತಿ ಬಗ್ಗೆ ಕುವೆಂಪು ಮತ್ತು ಹಾರ್ಡಿಯವರ ಕಾದಂಬರಿಗಳಲ್ಲಿ ಸಾಕಷ್ಟು ವಿವರಣೆಗಳನ್ನು ಕಾಣುತ್ತೇವೆ. ಭೌಗೋಳಿಕ, ಸಾಮಾಜಿಕ ಮತ್ತು ಪ್ರಾದೇಶಿಕ ವೈಶಿಷ್ಟ್ಯಗಳಿಗೆ ಅನುಗುಣವಾಗಿ ವೈವಿಧ್ಯಮಯವಾದ ಆಹಾರ ಪದ್ಧತಿ ದೇಸಿ ಸಂಸ್ಕೃತಿಯ ಭಾಗವಾಗಿತ್ತು. ಮಲೆನಾಡಿನ ಪರಿಸರದಲ್ಲಿ ಜಾತಿ-ಧರ್ಮಕ್ಕನುಗುಣವಾಗಿ ಶಾಕಾಹಾರ ಮತ್ತು ಮಾಂಸಾಹಾರದ ಬಳಕೆಯಿದ್ದರೆ ಇಂಗ್ಲೆಂಡಿನ ವೆಸೆಕ್ಸ್‌ನ ಪ್ರದೇಶದಲ್ಲಿ ಸಾಮಾಜಿಕ ಸ್ಥಾನಮಾನಗಳಿಗೆ ಅನುಸಾರವಾಗಿ ಬಳಸುತ್ತಿದ್ದ ಆಹಾರ ಪದ್ಧತಿಯಲ್ಲಿ ವೈವಿಧ್ಯತೆಯಿತ್ತು. ಮಲೆನಾಡು ಹಾಗೂ ವೆಸೆಕ್ಸ್‌ನ ಎರಡೂ ಸಾಮಾಜಿಕ ಪರಿಸರದಲ್ಲಿ ಸಾಂಪ್ರದಾಯಿಕ ಆಹಾರ ಪದ್ದತಿ ರೂಢಿಯಲ್ಲಿತ್ತು ಎಂಬುದನ್ನು ಕಾಣುತ್ತೇವೆ. ಶಾಕಾಹಾರಿಗಳು ವಿವಿಧ ರೀತಿಯ ದವಸ ಧಾನ್ಯಗಳನ್ನು, ಹೈನು ಪದಾರ್ಥಗಳನ್ನು ಬಳಸಿದರೆ, ಮಾಂಸಾಹಾರಿಗಳು ಕುರಿ, ಕೋಳಿ, ಮೇಕೆ, ಹಂದಿಗಳನ್ನು ಬಳಸುತ್ತಿದ್ದರು. ಬೇಟೆ ಮಾಂಸಹಾರಿಗಳಿಗೆ ಪ್ರಿಯವಾದ ದೇಸಿಯ ಪ್ರವೃತ್ತಿಯಾಗಿತ್ತು. ಹಬ್ಬ, ಜಾತ್ರೆ, ಉತ್ಸವ, ಹರಕೆ, ವಿವಾಹ ಮುಂತಾದ ವಿಶೇಷ ಸಂದರ್ಭಗಳಲ್ಲಿ ಸಾಮೂಹಿಕ ಭೋಜನ ಜನಪ್ರಿಯವಾಗಿತ್ತು. ಇಂತಹ ಔತಣ ಕೂಟಗಳಲ್ಲಿ ನೆಂಟರಿಷ್ಟರು, ಸ್ನೇಹಿತರೆಲ್ಲ ಒಟ್ಟಾಗಿ ಸೇರಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು ಸಂಭ್ರಮಿಸುತ್ತಿದ್ದರು. ಆದರೆ ಜಾಗತೀಕರಣದ ಮೂಲಕ ಬಂದ ಬಹುರಾಷ್ಟ್ರೀಯ ಕಂಪನಿಗಳು ಸಂಸ್ಕರಿಸಿದ 'ಇನ್‌ಸ್ಟಂಟ್ ಫುಡ್' 'ಜಂಕ್ ಫುಡ್' ಎಂಬ

ಆಹಾರ ಪದಾರ್ಥಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿ ದೇಸಿ ಆಹಾರ ಸಂಸ್ಕೃತಿಯನ್ನೇ ಬುಡಮೇಲು ಮಾಡಲಾರಂಭಿಸಿದವು. ಮ್ಯಾಕ್ ಡೊನಾಲ್ಡ್, ಕೆಂಟುಕಿ ಚಿಕನ್, ಪಿಜ್ಜಾ, ಬರ್ಗರ್ ಮುಂತಾದ ಸಿದ್ಧ ಆಹಾರ ಪದಾರ್ಥಗಳು ಇಂದು ದೇಶದ ಯಾವುದೇ ಮೂಲೆಯಲ್ಲಿ ಬೇಕಾದರೂ ಸಿಗುವಂತಾಗಿದೆ. ಬಹುರಾಷ್ಟ್ರೀಯ ಕೃಷಿ ವಾಣಿಜ್ಯ ಮಾರುಕಟ್ಟೆಗಳು ಸಾಂಪ್ರದಾಯಿಕ ವೈವಿಧ್ಯಮಯ ಆಹಾರ ಪದಾರ್ಥಗಳನ್ನು ಮತ್ತು ವೈವಿಧ್ಯಮಯ ಧಾನ್ಯಗಳನ್ನು ತಳಿ ತಂತ್ರಜ್ಞಾನದ ಹೆಸರಿನಲ್ಲಿ ನಾಶಮಾಡುತ್ತಿರುವುದನ್ನು ಇಂದು ಕಾಣುತ್ತಿದ್ದೇವೆ.[15] ಇದರಿಂದ ಮಾನವನ ವೈವಿಧ್ಯಮಯವಾದ ಸಾಂಪ್ರದಾಯಿಕವಾದ ದೇಸಿ ಬದುಕನ್ನು ಕಾಣುವುದು ಬಹಳ ಕಷ್ಟವಾಗುತ್ತಿದೆ.

ದೇಸಿ ಬದುಕಿನಲ್ಲಿ ಮನೆಗೆ ಬರುತ್ತಿದ್ದ ನೆಂಟರಿಷ್ಟರು, ಸ್ನೇಹಿತರು ಮತ್ತು ಅತಿಥಿಗಳನ್ನು ಸತ್ಕರಿಸುವ ಮೊದಲು ನೀಡುತ್ತಿದ್ದ ಮಜ್ಜಿಗೆ, ಪಾನಕ, ಕಷಾಯ ಮುಂತಾದ ಪಾನೀಯಗಳ ಸ್ಥಾನವನ್ನು ಬಹುರಾಷ್ಟ್ರೀಯ ಕಂಪನಿಗಳಿಂದ ಉತ್ಪತ್ತಿಗೊಂಡು ಬಂದ ಕೃತಕವಾದ ಕೋಕಾಕೋಲ, ಪೆಪ್ಸಿ ಮುಂತಾದ ಕೃತಕ ಪಾನೀಯಗಳು ಆಕ್ರಮಿಸಿ ದೇಸಿಯ ಆಹಾರ ಪಾನೀಯ ಸಂಸ್ಕೃತಿಯನ್ನು ಅಪಾಯಕ್ಕೊಡ್ಡಿವೆ. ಹೀಗೆ ಬಹುರಾಷ್ಟ್ರೀಯ ಕಂಪೆನಿಗಳು ಜನರನ್ನು ಜಾಹೀರಾತುಗಳ ಮೂಲಕ ವಶೀಕರಣಗೊಳಿಸಿ ತಮ್ಮ ಉತ್ಪನ್ನಗಳನ್ನು ಕೊಳ್ಳಲು ಪ್ರೇರೇಪಿಸುವುದರ ಮೂಲಕ ಇಂದು ಸಾಂಪ್ರದಾಯಿಕ ಆಹಾರ ಪದಾರ್ಥಗಳನ್ನು ಹುಡುಕುವುದೇ ಕಷ್ಟವಾಗುತ್ತಿದೆ. ಕುವೆಂಪು ಕಾದಂಬರಿಗಳಲ್ಲಿ ಕಾಣಸಿಗುವ ಕಳ್ಳಂಗಡಿಗಳು ಮತ್ತು ಹಾರ್ಡಿಯವರ ಕಾದಂಬರಿಗಳಲ್ಲಿ ಬರುವ ಪ್ರಶಾಂತಿ ಹೋಟೆಲ್ ಅಥವಾ ಇನ್‌ಗಳ ಸ್ಥಾನದಲ್ಲಿ ಪಿಜ್ಜಾಹಟ್‌ಗಳು, ಮ್ಯಾಕ್‌ಡೊನಾಲ್ಡ್ ರೆಸ್ಟೂರಗಳು ತಲೆ ಎತ್ತಿವೆ. ಹೀಗೆ ಜಾಗತೀಕರಣದ ಕರಿನೆರಳು ದೇಸಿ ಆಹಾರ ಸಂಸ್ಕೃತಿಯನ್ನು ತನ್ನ ಕಬಂಧ ಬಾಹುಗಳಲ್ಲಿ ನಿಯಂತ್ರಿಸುತ್ತಿರುವುದನ್ನು ಕಾಣಬಹುದು.

ಆಹಾರ ಪದ್ಧತಿಯಂತೆಯೇ ವೇಷ, ಭೂಷಣಗಳು ವ್ಯಕ್ತಿಯ ಸಾಮಾಜಿಕ ಸ್ಥಾನಮಾನ, ಸಂಪತ್ತು ಮತ್ತು ಸಂಸ್ಕೃತಿಯನ್ನು ನಿರ್ಧರಿಸುತ್ತವೆ. ಕುವೆಂಪು ಮತ್ತು ಹಾರ್ಡಿಯವರ ಕಾದಂಬರಿಗಳಲ್ಲಿ ಇಂಥಹ ವೈವಿಧ್ಯಮಯವಾದ ಉಡುಗೆ-ತೊಡುಗೆಗಳು ದೇಸಿಯ ಸಾಂಪ್ರದಾಯಿಕ ಸಂಸ್ಕೃತಿಯ ದ್ಯೋತಕವಾಗಿದ್ದವು ಮಲೆನಾಡಿನ ದೇಸಿ ಬದುಕಿನಲ್ಲಿ ವೇಷ-ಭೂಷಣಗಳು ವ್ಯಕ್ತಿಯ ಸಾಮಾಜಿಕ ಸ್ಥಾನಮಾನ, ವರ್ಗ, ವರ್ಣ-ಜಾತಿಯನ್ನು ನಿರ್ಧರಿಸಿದರೆ ಹಾರ್ಡಿಯವರ ಕಾದಂಬರಿಗಳಲ್ಲಿ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನವನ್ನು ಪ್ರತಿಬಿಂಬಿಸುತ್ತಿದ್ದವು. ಮದುವೆ, ಹಬ್ಬ, ಜಾತ್ರೆ, ಮುಂತಾದ ವಿಶೇಷ ಸಂದರ್ಭಗಳಲ್ಲಿ ಉಡುಗೆ ತೊಡುಗೆಗಳಲ್ಲಿ ಮತ್ತು ಆಭರಣಗಳಲ್ಲಿ ವೈವಿಧ್ಯತೆಯನ್ನು ಕಾಣುತ್ತೇವೆ. ಕೃಷಿ ಚಟುವಟಿಕೆಗಳಲ್ಲಿ

ತೊಡಗುವ ಕೂಲಿಕಾರ್ಮಿಕರ ವೇಷ-ಭೂಷಣಗಳು, ರೈತರ ಉಡುಗೆ ತೊಡುಗೆಗಳು ದೇಸಿಯತೆಯ ಸಂಕೇತವಾಗಿದ್ದವು. ಆದರೆ ಜಾಗತೀಕರಣದ ವಾರಸುದಾರರಾದ ಬಹುರಾಷ್ಟ್ರೀಯ ಕಂಪೆನಿಗಳು ಜನರ ಅಭಿರುಚಿ-ಜೀವನಶೈಲಿಯನ್ನು ಗಮನಿಸಿ ವೇಷ-ಭೂಷಣಗಳಲ್ಲಿ ಸಾಕಷ್ಟು ಕ್ರಾಂತಿಯನ್ನು ಉಂಟುಮಾಡಿವೆ. ಮಕ್ಕಳಿಂದ ಹಿಡಿದು ವೃದ್ಧರವರೆಗೂ ಲಿಂಗ ತಾರತಮ್ಯವಿಲ್ಲದೆ ಉಡುಗೆ-ತೊಡುಗೆಗಳು ಸಾಂಪ್ರದಾಯಕ ವೈವಿಧ್ಯತೆಯನ್ನು ಕಳೆದುಕೊಳ್ಳುತ್ತಿವೆ. ಸಾಂಪ್ರದಾಯಿಕ ಉಡುಗೆ-ತೊಡುಗೆಗಳು ಜಾಗತಿಕ ಮಾರುಕಟ್ಟೆಯಲ್ಲಿ ನೇಪಥ್ಯಕ್ಕೆ ಸರಿಯುತ್ತಿರುವುದು ಕಣ್ಮರೆಯಾಗುತ್ತಿರುವ ದೇಸಿ ಸಂಸ್ಕೃತಿಯ ಕುರುಹು ಎಂದೇ ಹೇಳಬಹುದು.

ದೇಸಿಯತೆಯನ್ನು ನಿರ್ದೇಶಿಸುವಲ್ಲಿ ಭೌಗೋಳಿಕ ಪರಿಸರ ಪ್ರಮುಖ ಪಾತ್ರಹಿಸುವುದನ್ನು ಕುವೆಂಪು ಮತ್ತು ಹಾರ್ಡಿಯವರ ಕಾದಂಬರಿಗಳಲ್ಲಿ ಕಾಣುತ್ತೇವೆ. ಭೌಗೋಳಿಕ ಅಂಶಗಳು ದೇಸಿ ಸಂಸ್ಕೃತಿಯ ಮೇಲೆ ಮತ್ತು ಯಾವುದೇ ಜನಸಮುದಾಯದ ಬದುಕಿನ ಮೇಲೆ ಪ್ರಭಾವ ಬೀರುತ್ತವೆ. ಕುವೆಂಪುರವರ ಮಲೆನಾಡು ಸುಂದರವಾದ ಜೀವ ವೈವಿಧ್ಯತೆಯಿಂದ ಕೂಡಿರುವ ಭೌಗೋಳಿಕ ಅಂಶಗಳನ್ನು ಹೊಂದಿದ್ದು ಆ ಪ್ರದೇಶದಲ್ಲಿ ಜೀವತಳೆದ ಜನಸಮುದಾಯವನ್ನು ಪೋಷಿಸಿ ಬೆಳೆಸುವುದನ್ನು ಕಾಣುತ್ತೇವೆ. ಇದೇ ರೀತಿಯ ವೈವಿಧ್ಯಮಯವಾದ ಭೌಗೋಳಿಕ ಪರಿಸರವನ್ನು ಹಾರ್ಡಿಯವರ ವೆಸೆಕ್ಸ್ ಪ್ರದೇಶದಲ್ಲೂ ಕಾಣಬಹುದಾಗಿದೆ. ಮಲೆನಾಡಿನ ಭೌಗೋಳಿಕ ಪರಿಸರ ಅತ್ಯಂತ ಸುಂದರವಾದ ಗಿರಿ-ಕಾನನಗಳಿಂದ, ನದಿ-ತೊರೆ ಕಣಿವೆಗಳಿಂದ ಕೂಡಿದ್ದು ಸಮೃದ್ಧವಾದ ದೇಸಿಯ ಬದುಕು ಸಾಕಾರಗೊಳ್ಳಲು ಕಾರಣವಾಗಿದೆ. ಕುವೆಂಪುರವರು ತಮ್ಮೆರಡೂ ಕಾದಂಬರಿಗಳಲ್ಲಿ ವೈವಿಧ್ಯಮಯವಾದ ಭೌಗೋಳಿಕ ಅಂಶಗಳನ್ನು ಆ ಪ್ರದೇಶದ ಜನಸಮುದಾಯದ ಅಸ್ತಿತ್ವದ ಮೇಲೆ ಅವುಗಳ ಪಾತ್ರವನ್ನು ಕುರಿತು ವರ್ಣಿಸಿದ್ದಾರೆ. ಹಾರ್ಡಿಯವರ ವೆಸೆಕ್ಸ್ ಪ್ರದೇಶದ ಎಗ್ಡನ್ ಹೀತ್‌ನ ಭೌಗೋಳಿಕ ಪರಿಸರ ಅಲ್ಲಿನ ಜನರ ಬದುಕನ್ನು ಹೇಗೆ ನಿರ್ದೇಶಿಸುತ್ತಿತ್ತು ಎನ್ನುವುದನ್ನು ತಮ್ಮ ಕೃತಿಗಳಲ್ಲಿ ನಿರೂಪಿಸಿದ್ದಾರೆ.

ಹಾರ್ಡಿಯವರ 'ದಿ ರಿಟರ್ನ್ ಆಫ್ ದಿ ನೇಟಿವ್' ಕಾದಂಬರಿಯ ನಾಯಕ ಕ್ಲಿಮ್ ಯೋಬ್ರೈಟ್ ಪ್ಯಾರಿಸ್ ನಗರದ ಕೃತಕ, ಉಸಿರುಗಟ್ಟಿಸುವ ಬದುಕಿಗೆ ವಿದಾಯ ಹೇಳಿ ತನ್ನೂರಾದ ಎಗ್ಡನ್ ಹೀತ್‌ಗೆ ವಾಪಸ್ಸಾಗುವುದು, ಆ ಪ್ರದೇಶದ ಬಗ್ಗೆ ಅವನಿಗಿದ್ದ ಗೌರವಾದರ ಮತ್ತು ಅಭಿಮಾನವನ್ನು ತಿಳಿಸುತ್ತದೆ. ನಿಷ್ಕಲ್ಮಶವಾದ ನಿರ್ಮಲವಾದ ಮತ್ತು ಪ್ರಕೃತಿದತ್ತವಾದ ಎಗ್ಡನ್ನಿನ ಭೌಗೋಳಿಕ ಪರಿಸರ ಆ ಪ್ರದೇಶದ ದೇಸಿಯ ಪರಂಪರೆಗೆ ಉತ್ತೇಜನಕಾರಿಯಾಗಿತ್ತು ಎನ್ನುವುದನ್ನು ಕಾಣುತ್ತೇವೆ. ಕ್ಲಿಮ್ ಪ್ಯಾರಿಸ್ಸಿನ ಆಡಂಬರದ ಬದುಕಿಗೆ ವಿದಾಯ ಹೇಳಿ ತನ್ನೂರಿನಲ್ಲಿ ನಿಷ್ಕಪಟ,

ಮುಗ್ಧ ಮಣ್ಣಿನ ಮಕ್ಕಳ ಶಿಕ್ಷಣಕ್ಕಾಗಿ ತನ್ನನ್ನೇ ಆ ಮಣ್ಣಿಗೆ ಸಮರ್ಪಿಸಿಕೊಳ್ಳುತ್ತಾನೆ. ಕ್ಲಿಮ್‌ನ ಹಾಗೆಯೇ ಕುವೆಂಪುರವರ ಕಾನೂರು ಹೆಗ್ಗಡಿತಿ ಕಾದಂಬರಿಯ ಹೂವಯ್ಯ ಮೈಸೂರಿನಿಂದ ರಜೆಗೆಂದು ತನ್ನೂರಾದ ಕಾನೂರಿಗೆ ಬರುತ್ತಾನೆ. ಕಾನೂರಿನ ಪ್ರಕೃತಿ ಸೌಂದರ್ಯಕ್ಕೆ, ಮಾರು ಹೋಗಿ ಮೈಮರೆಯುತ್ತಾನೆ. ಮಲೆನಾಡಿನ ಅರಣ್ಯ-ರಮಣೀಯ ವಿಲಾಸ ಕ್ಷೇತ್ರ ಹೂವಯ್ಯನಿಗೆ ಆಧ್ಯಾತ್ಮಿಕ ಅನುಭವವನ್ನು ನೀಡುತ್ತದೆ. ಕಾರಾಣಾಂತರಗಳಿಂದ ಹೂವಯ್ಯ ಮೈಸೂರಿಗೆ ಹಿಂದಿರುಗದೆ ಕಾನೂರಿನಲ್ಲಿಯೇ ನೆಲೆ ನಿಲ್ಲುತ್ತಾನೆ. ತನ್ನೂರಿನ ಮುಗ್ಧ ಜನರ ಮಕ್ಕಳಿಗೆ ವಿದ್ಯೆ ಕಲಿಸುವ ಸಲುವಾಗಿ ತನ್ನೆಲ್ಲ ಬದುಕನ್ನು ಮೀಸಲಿರಿಸುತ್ತಾನೆ. ಹೀಗೆ ಹೂವಯ್ಯ ಮತ್ತು ಕ್ಲಿಮ್ ಯೋಬ್ರೈಟ್‌ರ ಉದ್ದೇಶದಲ್ಲಿ ಆಸಕ್ತಿ ಮತ್ತು ಅಭಿರುಚಿಯಲ್ಲಿ ಸಾಮ್ಯತೆಯಿರುವುದನ್ನು ಕಾಣುತ್ತೇವೆ. ಕ್ಲಿಮ್ ಪ್ಯಾರಿಸ್ಸಿಗೆ ವಿದಾಯ ಹೇಳಿ ತನ್ನೂರಿಗೆ ಮರಳುವುದು, ಅಲ್ಲಿಯೇ ತನ್ನ ಬದುಕನ್ನು ಕಟ್ಟಿಕೊಂಡು ಎಗ್ಡನ್ನಿನ ಭಾಗವಾಗಿ ಹೋಗುತ್ತಾನೆ. ಇದೇ ರೀತಿ ಹೂವಯ್ಯ ಕೂಡ ಮಲೆನಾಡಿನ ಭೌಗೋಳಿಕ ಪರಿಸರದ ಒಂದಶವಾಗಿ ಉಳಿಯುತ್ತಾನೆ.

ಮಲೆನಾಡಿನ ಭೌಗೋಳಿಕ ಪರಿಸರ ಜೀವ ವೈವಿಧ್ಯತೆಯ ಆಗರವಾಗಿತ್ತು. ಆಧುನಿಕ ಬದುಕಿನ, ಯಂತ್ರನಾಗರಿಕತೆಯ ಸ್ಪರ್ಶದಿಂದ ದೂರದಲ್ಲಿದ್ದು, ವಾಯು, ನೀರು, ಭೂಮಿ, ಗಗನ ಮುಂತಾದ ಭೌಗೋಳಿಕ ಅಂಶಗಳು ಕಲುಷಿತಗೊಳ್ಳದೆ ಪವಿತ್ರವಾಗಿದ್ದು ಜೀವವೈವಿಧ್ಯತೆಯ ವಿಕಾಸಕ್ಕೆ ಮತ್ತು ದೇಸಿ ಸಂಸ್ಕೃತಿಯ ಅಭ್ಯುದಯಕ್ಕೆ ಕಾರಣವಾದ್ದವು. ಕೈಗಾರೀಕರಣದ ಮತ್ತು ಯಂತ್ರ ನಾಗರೀಕತೆಯ ಪೂರ್ವದಲ್ಲಿ ವೆಸೆಕ್ಸ್‌ನ ಎಗ್ಡನ್ ಹೀತ್‌ನ ದೇಸಿ ಬದುಕು ಎಷ್ಟೊಂದು ಸ್ವಾಭಾವಿಕವಾಗಿತ್ತು ಮತ್ತು ಜನಪದ ಸಂಸ್ಕೃತಿ ಇನ್ನೂ ಹಸಿರಾಗಿತ್ತು ಎನ್ನುವುದು ಹಾರ್ಡಿಯವರ ಕಾದಂಬರಿಗಳಲ್ಲಿ ಕಂಡುಬಂದಿದೆ.[16] ಇಂತಹ ಜೀವವೈವಿಧ್ಯತೆಯಿಂದ ಹಾಗೂ ಪ್ರಾಕೃತಿಕ ಸಂಪತ್ತಿನಿಂದ ಕೂಡಿದ ಭೌಗೋಳಿಕ ಪರಿಸರದ ಮೇಲೆ ಜಾಗತೀಕರಣದ ಕರಾಳ ರೂಪವನ್ನು ಕಾಣುತ್ತೇವೆ. ಆಧುನೀಕರಣ, ನಗರೀಕರಣ, ಯಂತ್ರಗಳ ಆಗಮನ ಮತ್ತು ಕೈಗಾರೀಕರಣದಿಂದ ಜೀವಸಂಕುಲವೆ ನಾಶಗೊಳ್ಳುವುದಷ್ಟೇ ಅಲ್ಲದೆ ದೇಸಿಯ ಸಂಸ್ಕೃತಿಯೂ ನಾಶವಾಗುತ್ತದೆ. ಜಾಗತೀಕರಣ ಮತ್ತು ಉದಾರೀಕರಣದ ಹೆಸರಿನಲ್ಲಿ ಭೌಗೋಳಿಕ ಪರಿಸರವನ್ನೂ ಲೂಟಿ ಮಾಡುತ್ತಿರುವ ಬಹುರಾಷ್ಟ್ರೀಯ ಕಂಪನಿಗಳು ಎಲ್ಲೆಡೆ ವಿಜೃಂಭಿಸುತ್ತಿರುವುದನ್ನು ಕಾಣಬಹುದಾಗಿದೆ.

ಪ್ರಕೃತಿ ಮತ್ತು ಪಾತ್ರಗಳು ದೇಸಿ ಬದುಕಿನ ವಕ್ತಾರರೆಂದರೆ ತಪ್ಪಾಗಲಾರದು. ಇವೆರಡರ ನಡುವೆ ಅವಿನಾಭಾವ ಸಂಬಂಧವಿರುವುದನ್ನು ಮತ್ತು ಇವೆರಡೂ ದೇಸಿಯ ಬದುಕನ್ನು ಪ್ರತಿಬಿಂಬಿಸುತ್ತದೆ ಎಂಬುದನ್ನು ಕುವೆಂಪು ಹಾಗೂ ಹಾರ್ಡಿಯವರ ಕಾದಂಬರಿಗಳಲ್ಲಿ

ನಿರೂಪಿಸಲಾಗಿದೆ. ಇಬ್ಬರೂ ಕಾದಂಬರಿಕಾರರು ಮನುಷ್ಯ ಪಾತ್ರಗಳಂತೆಯೇ ಪ್ರಕೃತಿಗೂ ಸಮಾನ ಅವಕಾಶ ನೀಡಿರುವುದನ್ನು ಮತ್ತು ಪ್ರಕೃತಿಯೂ ಮುಖ್ಯ ಪಾತ್ರವಾಗಿ ಚಿತ್ರಿತವಾಗಿರುವುದನ್ನು ಕಾಣುತ್ತೇವೆ. ದೇಸಿಯ ಬದುಕು ಪ್ರಕೃತಿದತ್ತವಾದದ್ದು ಮತ್ತು ಸ್ವಾಭಾವಿಕವಾದದ್ದು. ದೇಸಿಯ ಸಂಸ್ಕೃತಿಯ ಪೋಷಣಾ ಕೇಂದ್ರಗಳೆಂದರೆ ಹಳ್ಳಿಗಳು. ಇಂತಹ ಹಳ್ಳಿಗಳಲ್ಲಿನ ಜನಸಮುದಾಯದ ಬದುಕು ಪ್ರಕೃತಿಯೊಂದಿಗೆ ಬೆಸೆದುಕೊಂಡಿರುತ್ತದೆ. ಕುವೆಂಪು ತಮ್ಮ ಕಾದಂಬರಿಗಳಲ್ಲಿ ಪ್ರತಿಸೃಷ್ಟಿಸಿರುವ ಮಲೆನಾಡಿನ ಪ್ರಕೃತಿಯ ಸೊಬಗು ಅನನ್ಯವಾದದ್ದು. ಅವರ ಕಾದಂಬರಿಗಳ ಪ್ರತಿಯೊಂದು ಪಾತ್ರವೂ ಜಾತಿ–ಧರ್ಮ, ಮೇಲು–ಕೀಳು, ಲಿಂಗ, ವಯಸ್ಸು ಮುಂತಾದವುಗಳ ತಾರತಮ್ಯವಿಲ್ಲದೆ ಪ್ರಕೃತಿಯೊಡನೆ ನಿಕಟವಾದ ಸಂಬಂಧವನ್ನಿರಿಸಿಕೊಂಡಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಕಾನೂರು ಹೆಗ್ಗಡಿತಿಯ ಹೂವಯ್ಯ, ಬೈರ, ಸಿದ್ದ, ಮತ್ತು ಮಲೆಗಳಲ್ಲಿ ಮದುಮಗಳು ಕಾದಂಬರಿಯ ನಾಯಿಗುತ್ತಿ, ಮುಕುಂದಯ್ಯ ಮುಂತಾದ ಪಾತ್ರಗಳು ಪ್ರಕೃತಿಯ ಭಾಗವಾಗಿದ್ದಾರೆ. ಇದೇ ರೀತಿಯ ಪ್ರಕೃತಿ ಮತ್ತು ಪಾತ್ರಗಳ ಸಂಬಂಧವನ್ನು ಹಾರ್ಡಿಯವರ ಕಾದಂಬರಿಗಳಲ್ಲಿಯೂ ಕಾಣುತ್ತೇವೆ. ಹಾರ್ಡಿಯವರ ಪಾತ್ರಗಳಾದ ಕ್ಲಿಮ್, ತೋಮಸಿನ್ ಮತ್ತು ಟೆಸ್ಸ್ ವೆಸೆಕ್ಸ್‌ನ ಮಣ್ಣಿನ ಮಕ್ಕಳು. ತೋಮಸಿನ್ ಎಗ್ಡನ್ನಿನ ಪ್ರಕೃತಿಯ ಒಂದಂಶವಾಗಿದ್ದಳು, ತನಗೆ ಆ ಪರಿಸರದಲ್ಲಿ ಸಿಗುವ ಸಂತೋಷ ಬೇರೆ ಎಲ್ಲಿಯೂ ಸಿಗುವುದಿಲ್ಲ ಎನ್ನುವಾಗ ಆಕೆ ಮತ್ತು ಅಲ್ಲಿನ ಪ್ರಕೃತಿಯ ಸಂಬಂಧವನ್ನು ತಿಳಿಯಬಹುದು. ತೋಮಸಿನ್‌ಳಂತೆಯೇ ಟೆಸ್ಸ್ ಕೂಡ ಮ್ಯಾರ್ಲಾಟ್‌ನ ಪ್ರಕೃತಿಯ ಅಂತರಂಗವಾಗಿದ್ದಳು. ಎಗ್ಡನ್ನಿನ ಪ್ರಕೃತಿಯ ಚೆಲುವನ್ನು, ಮುಗ್ಧತೆಯನ್ನು ಹಾರ್ಡಿಯವರ ಪಾತ್ರಗಳಲ್ಲಿ ಕಾಣಬಹುದಾಗಿದೆ.

ಹೀಗೆ ಪ್ರಕೃತಿ ದೇಸಿಯ ಬದುಕಿನಲ್ಲಿ ಪಾತ್ರಗಳ ಉಸಿರಾಗಿದೆ, ಜನಸಮುದಾಯದವರ ದೈನಂದಿನ ಬದುಕಿಗೆ ಬೇಕಾದ ಅಗತ್ಯತೆಗಳನ್ನು ಪೂರೈಸುವುದರ ಜೊತೆಗೆ ಅವರ ದುಃಖ, ಸಂತೋಷ, ನೋವು, ನಲಿವುಗಳಲ್ಲಿ ತನ್ನದೇ ಆದ ಕೊಡುಗೆಯನ್ನು ನೀಡುವುದರ ಮೂಲಕ ಬಹುಮುಖ್ಯ ಭಾಗವಾಗಿ ಅಭಿವ್ಯಕ್ತಗೊಂಡಿದೆ. ದೇಸಿಯ ಬದುಕಿನ ಜೀವಸೆಲೆಯಾಗಿದ್ದ ಪೋಷಕ ಪಾತ್ರವಹಿಸುತ್ತಿದ್ದ ಪ್ರಕೃತಿ ಜಾಗತೀಕರಣದ ಪ್ರಭಾವಕ್ಕೆ ಸಿಲುಕಿ ಅಪವಿತ್ರಗೊಳ್ಳುವುದುನ್ನು ಕಾಣುತ್ತೇವೆ. ಜಾಗತೀಕರಣದ ಭಾಗವಾಗಿ ಆವಿಷ್ಕಾರಗೊಂಡ ಆಧುನಿಕ ಸಂಪರ್ಕ ಸಾಧನಗಳಾದ ರೈಲು, ಮೋಟಾರು, ಯಂತ್ರಗಳು ಪ್ರಕೃತಿಯ ಮೇಲೆ ಸವಾರಿ ಮಾಡ ಹೊರಟ ಪರಿಣಾಮ ಪ್ರಕೃತಿ ತನ್ನ ಸ್ವಾಭಾವಿಕತನವನ್ನು ಕಳೆದು ಕೊಳ್ಳಲಾರಂಭಿಸಿತು. ಕೈಗಾರೀಕರಣ, ನಗರೀಕರಣ ಮತ್ತು ಆಧುನಿಕ ಜೀವನಶೈಲಿ ಪ್ರಕೃತಿಯ ಮೇಲೆ ಅಧಿಪತ್ಯ ಸಾಧಿಸಲು ಹೊರಟಿರುವುದರಿಂದ ದೇಸಿಯ ಬದುಕಿನ ಜೀವಸೆಲೆಯಾಗಿದ್ದ ಪ್ರಕೃತಿ ನಾಶಗೊಳ್ಳುವುದನ್ನು ಕಾಣಬಹುದು. ಆಹಾರ, ನೀರು, ಗಾಳಿ

ಮತ್ತು ಅಮೂಲ್ಯ ಗಿಡಮೂಲಿಕೆಗಳಿಂದ ಜನಸಮುದಾಯದ ಸ್ವಾಸ್ಥ್ಯವನ್ನು ಕಾಪಾಡುತ್ತಿದ್ದ ಪ್ರಕೃತಿ ಜಾಗತೀಕರಣದ ಬಿರುಗಾಳಿಗೆ ತುತ್ತಾಗಿ ಕಣ್ಮರೆಯಾಗುತ್ತಿರುವುದನ್ನು ಇಂದು ನಾವು ಕಾಣುತ್ತಿದ್ದೇವೆ. ಜೀವ ವೈವಿಧ್ಯತೆಗಳ ಭಂಡಾರವಾಗಿದ್ದ ಪ್ರಕೃತಿಯಲ್ಲಿ ಸಾಂಪ್ರದಾಯಿಕ ವೈದ್ಯ ಪದ್ಧತಿಗೆ ಅಗತ್ಯವಿದ್ದ ಅಮೂಲ್ಯ ಮೂಲಿಕೆಗಳು ಇಂದು ಜಾಗತೀಕರಣದ ಹೆಸರಿನಲ್ಲಿ ಕಣ್ಮರೆಯಾಗುತ್ತಿವೆ. ಬಹುರಾಷ್ಟ್ರೀಯ ಕಂಪೆನಿಗಳು ದೇಸಿಯ ಸಾಂಪ್ರದಾಯಿಕ ಜೈವಿಕ ಸಂಪತ್ತನ್ನು ಕೊಳ್ಳೆಹೊಡೆಯುತ್ತಿವೆ. ಭಾರತೀಯ ಆರ್ಯುವೇದ ಪದ್ಧತಿಯಲ್ಲಿ ಅನಾದಿಕಾಲದಿಂದಲೂ ಬಳಕೆಯಲ್ಲಿದ್ದ ಅರಿಶಿನ, ಬೇವು ಮುಂತಾದ ಮೂಲಿಕೆಗಳ ಉತ್ಪನ್ನಗಳನ್ನು ಔಷಧಿಯ ವಸ್ತುಗಳಾಗಿ ತಯಾರಿಸಿ ಮಿಲಿಯಗಟ್ಟಲೆ ಲಾಭ ಮಾಡಿಕೊಳ್ಳುತ್ತಿರುವ ಬಹುರಾಷ್ಟ್ರೀಯ ಕಂಪೆನಿಗಳು ಅವುಗಳ ಮೇಲೆ ಪೇಟೆಂಟ್ ಹಕ್ಕು ಹೊಂದಿರುವುದು ಜಾಗತೀಕರಣದ ದರೋಡೆಕೋರತನವನ್ನು ಅರಿಯಬಹುದು.[17]

ಭಾರತದಂತಹ ಜನಸಮುದಾಯದಲ್ಲಿ ಇಂದಿಗೂ ಬಳಕೆಯಲ್ಲಿರುವ ಸಾಂಪ್ರದಾಯಿಕ ಗಿಡಮೂಲಿಕೆಗಳಲ್ಲಿ ಜೀವರಕ್ಷಕ ಗುಣಗಳ ಸಂಗ್ರಹವಿದೆ. ಕೃಷಿಪದ್ಧತಿಯಲ್ಲಿ ಅಪೂರ್ವ ತಳಿಗಳ ಮಿಶ್ರಣವಿದೆ. ಜೀವ ವೈವಿಧ್ಯತೆಯ ದರೋಡೆಗೆ ಬಹುರಾಷ್ಟ್ರೀಯ ಕಂಪೆನಿಗಳಿಗೆ ಇದಷ್ಟೆ ಸಾಕಾಯಿತು. ಇಲ್ಲಿನ ಜೈವಿಕ ಸಂಪತ್ತುಗಳ ಮೂಲ ಮಾಹಿತಿ ವಿವರವನ್ನು ಸಂಗ್ರಹಿಸಿ, ಇವುಗಳನ್ನೇ ಬಳಸಿಕೊಂಡು ಉತ್ಪನ್ನಗಳಾಗಿ ಪರಿವರ್ತಿಸಿ ಅವುಗಳ ಮೇಲೆ ಪೇಟೆಂಟ್ ಸ್ವಾಮ್ಯದ ಹಕ್ಕನ್ನು ಪಡೆದವು. ಇವುಗಳ ಬಗ್ಗೆ ಮೂಲ ಮಾಹಿತಿಯನ್ನು ಒದಗಿಸಿದವರನ್ನು ಕತ್ತಲಲ್ಲಿ ಇಟ್ಟು, ಲಾಭವನ್ನು ತಮ್ಮ ಕಂಪೆನಿಗಳಿಗೆ ವರ್ಗಾಯಿಸಿಕೊಂಡವು.[18] ದೇಸಿಯ ಜ್ಞಾನ ಪರಂಪರೆಯನ್ನು ತಲಾತಲಾಂತರದಿಂದ ಕಾಪಾಡಿಕೊಂಡು ಬಂದಿದ್ದ ಜನಪದರು ಮುಂದಿನ ಪೀಳಿಗೆಯವರಿಗೆ ಬಿಟ್ಟು ಹೋದ ಸಂಪತ್ತಾಗಿದೆ. ಇಂತಹ ಜನಸಮುದಾಯದ ಜೈವಿಕ ಸಂಪತ್ತಿನ ಮೇಲೆ ಬೌದ್ಧಿಕ ಆಸ್ತಿ ಹಕ್ಕು ಅಥವಾ ಪೇಟೆಂಟ್ ಹೆಸರಿನಲ್ಲಿ ಅಧಿಪತ್ಯ ಸ್ಥಾಪಿಸುತ್ತಿರುವುದು ಬಹುರಾಷ್ಟ್ರೀಯ ಕಂಪೆನಿಗಳ ಕುಕೃತ್ಯವಾಗಿದೆ. ತಳಿಹಂತಕ ಬೀಜ ತಂತ್ರಜ್ಞಾನ ಇಂದು ಆಹಾರ ಸರಪಳಿಯ ಕೊಂಡಿ ಕತ್ತರಿಸಿ ಜನಪದರ ಆಹಾರ ಭದ್ರತೆಗೆ ಮತ್ತು ಪ್ರಕೃತಿಯ ವಿನಾಶಕ್ಕೆ ಕಾರಣವಾಗುತ್ತಿರುವುದು ಆಘಾತವನ್ನುಂಟುಮಾಡುತ್ತಿದೆ. ಜೈವಿಕ ವೈವಿಧ್ಯತೆಗಳ ಆಗರವಾಗಿದ್ದ ಗ್ರಾಮೀಣ ಭಾರತದ ಪ್ರಕೃತಿ ಸಂಪತ್ತು ಬಹುರಾಷ್ಟ್ರೀಯ ಕಂಪನಿಗಳಿಂದ ಜೈವಿಕ ಅಪಹರಣಕ್ಕೆ ಬಲಿಯಾಗುತ್ತಿದೆ. ಹೀಗೆ ಪೇಟೆಂಟ್ ಸ್ವಾಮ್ಯದ ಮೂಲಕ ಜೈವಿಕ ಸಂಪತ್ತು, ಕೃಷಿ ಹಾಗೂ ಆರೋಗ್ಯ ಕ್ಷೇತ್ರಗಳ ಮೇಲೆ ಜಾಗತೀಕರಣದ ಪ್ರತಿನಿಧಿಗಳಾದ ಬಹುರಾಷ್ಟ್ರೀಯ ಕಂಪನಿಗಳು ಏಕಸ್ವಾಮ್ಯ ಸಾಧಿಸಿ ಈ ಕ್ಷೇತ್ರಗಳನ್ನು ಅತಂತ್ರಗೊಳಿಸುತ್ತಿವೆ.

ದೇಸಿಯತೆಯನ್ನು ನಿರೂಪಿಸುವ ಹಲವು ಅಂಶಗಳಲ್ಲಿ ಭಾಷೆಗೆ ಪ್ರಧಾನವಾದ ಸ್ಥಾನವಿದೆ ಎಂಬುದನ್ನು ಕುವೆಂಪು ಮತ್ತು ಹಾರ್ಡಿಯವರ ಕಾದಂಬರಿಗಳು ಸಾಬೀತುಪಡಿಸಿವೆ. ದೇಸಿಯ ಬದುಕಿನ ಚಿತ್ರಣ ಸಿಗುವುದು ಆ ಪ್ರದೇಶದ ನೆಲೆದ ಭಾಷೆಯಿಂದ ಅದರಿಂದಾಗಿ ಅದುವೆ ದೇಸಿ ಭಾಷೆ ಎನಿಸಿಕೊಳ್ಳುತ್ತದೆ. ಸಾಹಿತ್ಯ ಜೀವನದ ಪ್ರತಿಸೃಷ್ಟಿಯಾದರೆ ಭಾಷೆ ಆ ಸಾಹಿತ್ಯಕ್ಕೆ ಮಾಧ್ಯಮವಾಗುತ್ತದೆ. ದೇಸಿ ಭಾಷೆಯ ಮೂಲ ನೆಲೆಯನ್ನು ಗ್ರಾಮೀಣ ಪರಿಸರದಲ್ಲಿ ಅಥವಾ ಸ್ಥಳೀಯ ಜನಸಮುದಾಯದಲ್ಲಿ ಪ್ರಚಲಿತದಲ್ಲಿರುವ ಆಡುನುಡಿಗಳು, ಗಾದೆ, ನುಡಿಗಟ್ಟುಗಳು, ಶೈಲಿ, ಸ್ವರೂಪ ಮುಂತಾದ ನೆಲೆಗಳಲ್ಲಿ ಕಾಣಬಹುದು. ಹಾಗೆಯೇ ದೇಸಿ ಭಾಷೆಯ ಉಗಮ, ವಿಕಾಸ ಮತ್ತು ಬೆಳವಣಿಗೆಯಲ್ಲಿ ಭೌಗೋಳಿಕ, ಸಾಂಸ್ಕೃತಿಕ, ಸಾಮಾಜಿಕ ಮುಂತಾದ ಪ್ರಭಾವಗಳು ಕಾರಣವಾಗಿವೆ. ಜನಸಮುದಾಯಗಳ ನಡುವಿನ ಅಂತರ, ಸಾರಿಗೆ-ಸಂಪರ್ಕ ಸಾಧನಗಳ ಕೊರತೆಯಿಂದ ಒಂದೇ ಭಾಷೆಯಲ್ಲಿ ವೈವಿಧ್ಯತೆಯನ್ನು ಕಾಣುತ್ತೇವೆ. ದೇಸಿ ಭಾಷೆ ಅನೇಕ ಉಪಭಾಷೆಗಳ ಅಥವಾ ಪ್ರಾದೇಶಿಕ ಭಾಷೆಗಳ ಸಮ್ಮಿಶ್ರಣವಾಗಿದ್ದು ಭಾಷಾ ವೈವಿಧ್ಯತೆಗೆ ಕಾರಣವಾಗಿದೆ. ಕುವೆಂಪುರವರ ಮಲೆನಾಡಿನ ಪರಿಸರದ ಭಾಷೆ, ಆ ಪರಿಸರದ ದೇಸಿ ಭಾಷೆಯಾಗಿದ್ದು ಆ ಜನಸಮುದಾಯದ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಮಾಧ್ಯಮವಾಗಿದೆ. ಜನಪದರ ಆಡಂಬರವಿಲ್ಲದ, ಸ್ವಾಭಾವಿಕವಾದ, ಮಣ್ಣಿನ ಸೊಗಡನ್ನು ಮತ್ತು ಆ ಮಣ್ಣಿನಲ್ಲಿ ಜೀವ ತಳೆದ ಬದುಕನ್ನು ಅಭಿವ್ಯಕ್ತಗೊಳಿಸುವ ಭಾಷೆಯನ್ನು ಕುವೆಂಪುರವರು ತಮ್ಮ ಕಾದಂಬರಿಗಳಲ್ಲಿ ಅತ್ಯಂತ ನೈಜವಾಗಿ ಚಿತ್ರಿಸಿದ್ದಾರೆ. ನಿರೂಪಣೆಯ ಭಾಷೆ ಮತ್ತು ಪಾತ್ರಗಳ ಸಂಭಾಷಣೆಯ ಭಾಷೆಗೂ ಅಂತರವಿರುವುದನ್ನು ಕುವೆಂಪುರವರ ಎರಡೂ ಕಾದಂಬರಿಗಳಲ್ಲಿ ಸ್ಪಷ್ಟವಾಗಿ ಕಾಣಬಹುದು. ನಿರೂಪಕನ ಭಾಷೆ ಸುಸಂಸ್ಕೃತವಾಗಿದ್ದು ಪಾತ್ರಗಳ ಸಂಭಾಷಣೆ ಅವರವರ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸ್ಥಾನಮಾನಗಳನ್ನು ಅವಲಂಬಿಸಿದೆ. ಈ ಅಂಶಗಳ ಆಧಾರದ ಮೇಲೆ ಒಂದೇ ಭಾಷೆಯು, ಅನೇಕ ರೀತಿಯಲ್ಲಿ ಬಳಸಲ್ಪಟ್ಟಿದೆ. ಈ ರೀತಿಯ ಭಿನ್ನತೆಯನ್ನು ಹಾರ್ಡಿಯವರ ಕಾದಂಬರಿಗಳಲ್ಲಿಯೂ ಸಹ ಗುರುತಿಸಲಾಗಿದೆ. ಮಲೆನಾಡಿನ ದೇಸಿ ಭಾಷೆಯಂತೆಯೇ ಹಾರ್ಡಿಯವರ ವೆಸೆಕ್ಸ್‌ನ ಪರಿಸರದಲ್ಲಿಯೂ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಭಿನ್ನತೆಗಳಿಗೆ ಅನುಸಾರವಾಗಿ ಒಂದೇ ಭಾಷೆಯಲ್ಲಿ ವೈವಿಧ್ಯತೆಯನ್ನು ಕಾಣಬಹುದಾಗಿದೆ.

ಕುವೆಂಪುರವರ ಕಾದಂಬರಿಗಳಲ್ಲಿ ಜಾತಿ, ವರ್ಗ, ವೃತ್ತಿ, ಲಿಂಗ ಮತ್ತು ಭೌಗೋಳಿಕ ಪ್ರದೇಶಕ್ಕನುಗುಣವಾಗಿ ಬಳಸಲ್ಪಟ್ಟಿರುವ ಭಾಷೆಯಲ್ಲಿ ಭಾಷೆಯ ಏರಿಳಿತಗಳನ್ನು, ಪದ ವ್ಯತ್ಯಾಸ, ಧ್ವನಿ ಮತ್ತು ಸ್ವರ ವ್ಯತ್ಯಾಸ, ಉಚ್ಚಾರಣೆ ಮುಂತಾದ ಲಕ್ಷಣಗಳನ್ನು ಅತ್ಯಂತ ನೈಜವಾಗಿ ವರ್ಣಿಸಿರುವುದನ್ನು ಕಾಣುತ್ತೇವೆ. ಕಾದಂಬರಿಯಲ್ಲಿ ಪಾತ್ರಗಳ ಸಂಭಾಷಣೆಯ ಭಾಷೆಯಿಂದಲೇ

ಅವರವರ ಸಾಮಾಜಿಕ, ಆರ್ಥಿಕ, ಮತ್ತು ಭೌಗೋಳಿಕ ಹಿನ್ನಲೆಯನ್ನು ಗುರುತಿಸುವಷ್ಟರ ಮಟ್ಟಿಗೆ ದೇಸಿ ಭಾಷೆಯು ಬಳಕೆಯಾಗಿದೆ. ಕುವೆಂಪುರವರ ಕಾದಂಬರಿಗಳಲ್ಲಿ ನಿರೂಪಕನ ಭಾಷೆಯಷ್ಟೇ ಅಲ್ಲದೆ ಸಾಮಾಜಿಕ ಶ್ರೇಣೀಕೃತ ವ್ಯವಸ್ಥೆಯಲ್ಲಿದ್ದ ಮೇಲ್ವರ್ಗದ ಬ್ರಾಹ್ಮಣರ ಭಾಷೆಯೂ ಸಹ ಸುಸಂಸ್ಕೃತವಾಗಿದೆ. ಆದರೆ ಆರ್ಥಿಕವಾಗಿ ಸದೃಢರಾಗಿದ್ದ ಶ್ರೀಮಂತ ಜಮೀನುದಾರರ ಭಾಷೆ ಮತ್ತು ಸಾಮಾಜಿಕವಾಗಿ ಕೆಳಸ್ತರದಲ್ಲಿರುವರ ಭಾಷೆ ಒಂದೇ ರೀತಿಯದ್ದಾಗಿರುವುದನ್ನು ಗುರುತಿಸಬಹುದಾಗಿದೆ. ಶೈಕ್ಷಣಿಕವಾಗಿ ಹಿಂದುಳಿದ, ನಾಗರಿಕತೆಯ ಸೋಂಕಿಲ್ಲದ, ಸಾರಿಗೆ-ಸಂಪರ್ಕಗಳ ಕೊರತೆ ಮುಂತಾದ ಅಂಶಗಳು ಪಾತ್ರಗಳ ಭಾಷೆಯ ಮೇಲೆ ಪ್ರಭಾವ ಬೀರಿರುವುರಿಂದ ಅವರಾಡುವ ಭಾಷೆಯಲ್ಲಿ ಶಿಷ್ಟ ಭಾಷೆಯ ಸ್ಪರ್ಶವಿಲ್ಲದಿರಬಹುದು, ಆದರೆ ಕಾದಂಬರಿಗಳ ಪಾತ್ರಗಳ ಭಾಷೆ, ಸ್ಥಳೀಯರ ಬದುಕಿನ ನೈಜ ಪಾತ್ರಗಳ ಭಾಷೆಯಾಗಿದೆ. ಆ ಭಾಷೆಯಲ್ಲಿ ಮುಗ್ಧತೆ, ಸರಳತೆ ಮತ್ತು ಸ್ವಾಭಾವಿಕತೆ ಮೈತಾಳಿದೆ. ಸರಳವಾದ, ಸ್ವಾಭಾವಿಕವಾದ ಗ್ರಾಮ್ಯ ಭಾಷೆಯಲ್ಲಿ ಜನಪದರ ಬದುಕಿನ ಸ್ಪರ್ಶವಿದೆ, ಮಣ್ಣಿನ ಸೊಗಡಿದೆ ಮತ್ತು ಸೌಂದರ್ಯವಿದೆ ಎನ್ನುವುದನ್ನು ಇಬ್ಬರೂ ಕಾದಂಬರಿಕಾರರು ತಮ್ಮ ಕೃತಿಗಳಲ್ಲಿ ವರ್ಣಿಸಿದ್ದಾರೆ.

ಆಧುನಿಕ ಶಿಕ್ಷಣದ ಪೂರ್ವದಲ್ಲಿದ್ದ ಜನಪದರ ಭಾಷೆಯನ್ನು ಪುನಃಸೃಷ್ಟಿ ಮಾಡುವುದರ ಮೂಲಕ ಹಾರ್ಡಿಯವರು ದೇಸಿಯ ಬದುಕನ್ನು ಶ್ರೀಮಂತಗೊಳಿಸಿದ್ದಾರೆ. ಕಳೆದು ಹೋಗುತ್ತಿರುವ ಗ್ರಾಮ್ಯ ಭಾಷೆಯನ್ನು ಭಾಷಾ ಸಂಸ್ಕೃತಿಯನ್ನು ತಮ್ಮ ಕಾದಂಬರಿಗಳಲ್ಲಿ ಪಾತ್ರಗಳ ಸಂಭಾಷಣೆಯ ಮೂಲಕ ಜೀವಂತಗೊಳಿಸುವ ಪ್ರಯತ್ನ ಮಾಡಿದ್ದಾರೆ. ಎಗ್ಡನ್ ಹೀತ್‌ನ ಮೂಲ ನಿವಾಸಿಗಳ ಭಾಷೆ ಆ ಮಣ್ಣಿನ ಭಾಷೆಯಾದರೆ, ಹೊರಗಿನಿಂದ ಬಂದವರ ಭಾಷೆಯಲ್ಲಿ ಉಚ್ಚಾರಣೆ, ಶೈಲಿ ಪದ ಪ್ರಯೋಗಗಳಲ್ಲಿ ಭಿನ್ನತೆಯನ್ನು ಕಾಣುತ್ತೇವೆ. ಹಾರ್ಡಿಯವರ ಕಾದಂಬರಿಯಲ್ಲಿ ಎಗ್ಡನ್ನಿನ ಜನ ದೇಸಿ ಭಾಷೆಯ ಪೋಷಕರು ಮತ್ತು ದೇಸಿ ಸಂಸ್ಕೃತಿಯ ವಕ್ತಾರರಿದ್ದಂತೆ. ಅದೇ ರೀತಿ ಮಲೆನಾಡಿನ ಪ್ರದೇಶದಲ್ಲಿದ್ದ ಜಮೀನುದಾರರು ಕೃಷಿ-ಕಾರ್ಮಿಕರು ಆ ಪ್ರದೇಶದಲ್ಲಿದ್ದ ದೇಸಿ ಭಾಷೆಯನ್ನು ಶ್ರೀಮಂತಗೊಳಿಸಿದ್ದಾರೆ. ಒಂದು ವೇಳೆ ದೇಸಿ ಭಾಷೆ ಸಮೃದ್ಧವಾಗಿ ಬೆಳೆದು ಜೀವಂತವಾಗಿದ್ದರೆ, ಅದಕ್ಕೆ ಕಾರಣ ನಿರಕ್ಷರಕುಕ್ಷಿಗಳಾದ ಜನಪದರು ಎಂದೇ ಹೇಳಬೇಕಾಗುತ್ತದೆ. ವಿದ್ಯೆಯ ಗಂಧಗಾಳಿಯಿಲ್ಲದಿದ್ದರೂ ಅವರಾಡುವ ಭಾಷೆಯಲ್ಲಿ ತಿಳಿಹಾಸ್ಯವಿದೆ, ಕೋಪವಿದೆ, ಪ್ರಣಯದ ಸವಿಯಿದೆ, ನೋವಿದೆ, ನಲಿವಿದೆ ಎನ್ನುವಾಗ ಅವರ ಭಾಷೆ ಎಷ್ಟೊಂದು ನೈಜವಾಗಿದೆ ಎಂದೆನಿಸುತ್ತದೆ. ಪ್ರತಿಯೊಂದು ಪಾತ್ರದ ಭಾಷೆಯೂ ಆ ಪಾತ್ರದ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದಂತಿದೆ. ಆದ್ದರಿಂದಲೇ ನಿರೂಪಣೆಯ ಭಾಷೆಗೂ ಪಾತ್ರಗಳ ಸಂಭಾಷಣೆಯ ಭಾಷೆಗೂ ಅಂತವಿರುತ್ತದೆ ಎಂದು ಡಾ. ಕೆ.ವಿ. ನಾರಾಯಣರವರು ಹೇಳುತ್ತಾರೆ.[19] ಮಲೆನಾಡಿನಲ್ಲಿಯೇ ಹುಟ್ಟಿ ಬೆಳೆದು

ಬದುಕು ಕಟ್ಟಿಕೊಂಡವರ ಭಾಷೆಯ ಮೇಲೆ ಅನ್ಯಭಾಷಿಕರ ಪ್ರಭಾವವನ್ನು ಸಹ ಕುವೆಂಪುರವರು ತಮ್ಮ ಕಾದಂಬರಿಗಳಲ್ಲಿ ಚಿತ್ರಿಸಿದ್ದಾರೆ. ದಕ್ಷಿಣಕನ್ನಡ ಜಿಲ್ಲೆಯಿಂದ ಬಂದ ಕೂಲಿಕಾರ್ಮಿಕರು, ಸೇರೆಗಾರರು ತುಳು ಮಿಶ್ರಿತವಾದ ಕನ್ನಡವನ್ನು ಮಾತನಾಡಿದರೆ, ದಕ್ಷಿಣಕನ್ನಡ ಜಿಲ್ಲೆಯ ಮೂಲಕ ಮಲೆನಾಡಿಗೆ ವಲಸೆ ಬಂದ ಮಲಯಾಳಿಗಳ ಭಾಷೆಯೂ ಕನ್ನಡದೊಂದಿಗೆ ಬೆರೆಕೆಯಾಗುವುದನ್ನು ಕಾಣಬಹುದು. ಮಲೆನಾಡಿಗೆ ವ್ಯಾಪಾರಕ್ಕೆಂದು ಕೇರಳದಿಂದ ಬಂದ ಬ್ಯಾರಿಗಳ ಭಾಷೆಯು ಕನ್ನಡದೊಂದಿಗೆ ಮಿಶ್ರಣಗೊಂಡು ನಾನಾರ್ಥಗಳನ್ನು ನೀಡಿ ಕೇಳುವವರಿಗೆ ಮನರಂಜನೆಯನ್ನು ಒದಗಿಸುವುದನ್ನು ಕಾಣುತ್ತೇವೆ. ಒಟ್ಟಿನಲ್ಲಿ ಮಲೆನಾಡಿನ ಪರಿಸರಕ್ಕೆ ವಿವಿಧ ಸಾಮಾಜಿಕ, ಭೌಗೋಳಿಕ, ಸಾಂಸ್ಕೃತಿಕ ಸ್ತರಗಳಿಂದ ಬಂದು ಅಲ್ಲಿ ನೆಲೆಸಿದವರ ಬಹು ಭಾಷಾ ವೈಶಿಷ್ಟ್ಯವನ್ನು ಅತ್ಯಂತ ನೈಜವಾಗಿ ಕುವೆಂಪುರವರು ತಮ್ಮ ಕಾದಂಬರಿಗಳಲ್ಲಿ ದುಡಿಸಿಕೊಂಡಿದ್ದಾರೆ.

ಮಲೆನಾಡಿನ ದೇಸಿಯ ಬದುಕಿನಲ್ಲಿ ಪ್ರಚಲಿತದಲ್ಲಿದ್ದ ಆಡುನುಡಿಗಳು, ನುಡಿಗಟ್ಟುಗಳು, ಪಡೆನುಡಿಗಳು ಮತ್ತು ಗಾದೆಗಳು ದೇಸಿ ಭಾಷೆಯ ಸೌಂದರ್ಯವನ್ನು ಹೆಚ್ಚಿಸಿವೆ. ಸಂಸ್ಕೃತದಿಂದ ಬಂದ ಅನೇಕ ಪದಗಳು ಕನ್ನಡದಲ್ಲಿ ಗ್ರಾಮ್ಯರೂಪಗಳಾಗಿ ರೂಪಾಂತರಗೊಂಡಿರುವುದು, ಮುಸಲ್ಮಾನರ ಆಳ್ವಿಕೆಯ ಸಂಕೇತವಾಗಿ ಬಂದ ಉರ್ದು ಪದಗಳು ಮತ್ತು ಬ್ರಿಟಿಷರ ವಸಾಹತು ಆಳ್ವಿಕೆಯ ಕುರುಹಾಗಿ ಬಂದ ಆಂಗ್ಲ ಪದಗಳು ಮಲೆನಾಡಿನ ಜನಪದರ ಸಂಭಾಷಣೆಯಲ್ಲಿ ಗ್ರಾಮ್ಯರೂಪಗಳಾಗಿವೆ. ನಾಮ ವಿಶೇಷಗಳು, ಅಡ್ಡಹೆಸರುಗಳು ಮತ್ತು ಸ್ಥಳನಾಮಗಳು ದೇಸಿಯ ಭಾಷೆಗೆ ವಿಶೇಷತೆಯನ್ನು ತಂದುಕೊಟ್ಟಿವೆ ಜನಪದರ ಅನೇಕ ಹೆಸರುಗಳು ಅವರ ಸ್ಥಳ, ಜಾತಿ, ಧರ್ಮ, ಮತ್ತು ವೃತ್ತಿಗಳ ಜೊತೆ ಬೆರೆತು ನಾಮ ವಿಶೇಷಗಳಾಗಿ ಬಂದಿವೆ. ಮಲೆನಾಡಿನ ಪರಿಸರದಲ್ಲಿ ವಾಸಿಸುವ ಜನಸಮುದಾಯದವರ ಭಾಷೆಯನ್ನಷ್ಟೆ ಅಲ್ಲದೆ ಅವರೊಡನೆ ಸಹ ಬಾಳ್ವೆ ನಡೆಸುತ್ತಿದ್ದ ಸಾಕು ಪ್ರಾಣಿ-ಪಕ್ಷಿಗಳ, ಕ್ರಿಮಿ-ಕೀಟಗಳ ಧ್ವನಿಯನ್ನು ಹಾಗೂ ಸ್ವರಗಳನ್ನು ಕುವೆಂಪುರವರು ತಮ್ಮ ಕಾದಂಬರಿಗಳಲ್ಲಿ ಭಾಷಾರೂಪದಲ್ಲಿ ಮತ್ತು ಪದಗಳ ರೂಪದಲ್ಲಿ ಅತ್ಯಂತ ಸ್ವಾಭಾವಿಕವಾಗಿ ಸೆರೆಹಿಡಿದಿದ್ದಾರೆ. ಒಟ್ಟಿನಲ್ಲಿ ಕುವೆಂಪುರವರ ಕಾದಂಬರಿಗಳಲ್ಲಿ ಬಳಸಿರುವ ನಿರೂಪಕನ ಭಾಷೆ, ಸಂಭಾಷಣೆಯ ಭಾಷೆ, ವಿವಿಧ ಸ್ಥಳಗಳಿಂದ ಮಲೆನಾಡಿಗೆ ವಲಸೆ ಬಂದವರ ಭಾಷೆಗಳು ಪಡಿನುಡಿಗಳು, ಮಣ್ಣಿನ ಸೊಗಡನ್ನು ಅಭಿವ್ಯಕ್ತಪಡಿಸಿವೆ.

ಹಾರ್ಡಿಯವರು ತಮ್ಮ ಕಾದಂಬರಿಗಳಲ್ಲಿ ಕುವೆಂಪುರವರ ಹಾಗೆಯೇ ಅನೇಕ ಭಾಷಾ ಪ್ರಭೇದಗಳನ್ನು ಬಳಸಿರುವುದು ಸ್ಪಷ್ಟವಾಗಿದೆ. ನಿರೂಪಕನ ಭಾಷೆ ಸುಸಂಸ್ಕೃತವಾಗಿದ್ದು, ಕಾದಂಬರಿಯಲ್ಲಿ ಬರುವ ಪಾತ್ರಗಳ ಭಾಷೆ ಅವರ ವ್ಯಕ್ತಿತ್ವಕ್ಕೆ ಮತ್ತು ಅವರ ಬದುಕಿಗೆ ಕನ್ನಡಿ

ಹಿಡಿದಂತಿದೆ. ವೆಸೆಕ್ಸ್‌ನ ಗ್ರಾಮೀಣ ಪರಿಸರದ ಜನರ ಆಡುನುಡಿಗಳಲ್ಲಿ ಅವರ ಸರಳ ಬದುಕು ಮತ್ತು ಮುಗ್ಧತೆಯನ್ನು ಸುಲಭವಾಗಿ ಗುರುತಿಸಬಹುದು. ಅವರಾಡುವ ಭಾಷೆ ಸ್ವಾಭಾವಿಕವಾಗಿದ್ದು, ನಿರಾಡಂಬರದಿಂದ ಕೂಡಿದ ಭಾಷೆಯಾಗಿತ್ತು.[20] ಹಾರ್ಡಿಯವರು ತಮ್ಮ ಕಾದಂಬರಿಗಳಲ್ಲಿ ಬಳಸಿರುವ ಗ್ರಾಮ್ಯಭಾಷೆ ಅಥವಾ ದೇಸಿ ಭಾಷೆಯಿಂದಲೆ ಇಂಗ್ಲಿಷ್ ಸಾಹಿತ್ಯ ಲೋಕದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿದ್ದಾರೆ, ಅವರು ಬಳಸಿರುವ ಗ್ರಾಮ್ಯ ಭಾಷೆ (Rustic language) ವೆಸೆಕ್ಸ್‌ನ ಅಶಿಕ್ಷಿತ ವರ್ಗದವರ ದೈನಂದಿನ ಸ್ವಾಭಾವಿಕ ಭಾಷೆಯಾಗಿದ್ದು, ಆ ಭಾಷೆಯಲ್ಲಿ ವೆಸೆಕ್ಸ್‌ನ ಮಣ್ಣಿನ ವಾಸನೆಯನ್ನು ಸುಲಭವಾಗಿ ಗುರುತಿಸಬಹುದು. ಎಗ್ಡನ್‌ಹೀತ್‌ನ ಜನರೇ ಆ ಪ್ರದೇಶದ ದೇಸಿ ಸಂಸ್ಕೃತಿಯ ಮತ್ತು ಭಾಷೆಯ ಹಿಮ್ಮೇಳದವರಾಗಿದ್ದು, ಅವರು ಬಳಸುತ್ತಿದ್ದ ಪದಗಳಲ್ಲಿ, ಉಚ್ಚಾರಣೆಯಲ್ಲಿ ಶೈಲಿಯಲ್ಲಿ ಅರೆಪೇಗನ್ ಸಂಸ್ಕೃತಿಯ ಸ್ಪರ್ಶವನ್ನು ಕಾಣಬಹುದು.[21] ಆದರೆ ಕುವೆಂಪುರವರ ಕಾದಂಬರಿಗಳಲ್ಲಿನ ಭಾಷಾ ವೈವಿಧ್ಯತೆ ಅಷ್ಟಾಗಿ ಹಾರ್ಡಿಯವರ ಕಾದಂಬರಿಗಳಲ್ಲಿ ಕಾಣದಿದ್ದರೂ, 19ನೇ ಶತಮಾನದ ಮತ್ತು ಅದಕ್ಕೂ ಪೂರ್ವದಲ್ಲಿ ಇಂಗ್ಲೆಂಡಿನ ಗ್ರಾಮೀಣ ಭಾಗದಲ್ಲಿದ್ದ ಭಾಷೆ ಸಮೃದ್ಧವಾಗಿ ಬೆಳೆದು ದೇಸಿಯ ಸಂಸ್ಕೃತಿಯನ್ನು ಅನಾವರಣಗೊಳಿಸಿದೆ ಎನ್ನುವುದನ್ನು ಸ್ಪಷ್ಟವಾಗಿ ಗುರುತಿಸಲಾಗಿದೆ.

ಕುವೆಂಪುರವರ ಕಾದಂಬರಿಗಳಂತೆಯೇ ಹಾರ್ಡಿಯವರ ಕಾದಂಬರಿಗಳಲ್ಲಿಯೂ ಸಹ ದೇಸಿ ಭಾಷೆಯಲ್ಲಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಭೌಗೋಳಿಕ ಅಂಶಗಳು ಪ್ರಧಾನ ಪಾತ್ರವಹಿಸಿವೆ. ಸಮಾಜದ ಮೇಲ್ವರ್ಗದವರ ಮತ್ತು ಸುಶಿಕ್ಷಿತರ ಶಿಷ್ಟಭಾಷೆಯ ಜೊತೆಗೆ ಕೂಲಿಕಾರ್ಮಿಕರ, ಅನಕ್ಷರಸ್ಥರ ಭಾಷೆಯ ಸಂಭಾಷಣೆಗಳು ಸೇರಿ ದೇಸಿ ಭಾಷೆಯ ಸಹಜತೆಯನ್ನು ಪ್ರತಿಬಿಂಬಿಸುತ್ತವೆ. ನಗರ ಮತ್ತು ಪಟ್ಟಣಗಳಲ್ಲಿ ಕೈಗಾರೀಕರಣದ ಮತ್ತು ಆಧುನಿಕ ಸಂಪರ್ಕ-ಸಾಧನಗಳಿಂದ, ಆಧುನಿಕ ರಾಷ್ಟ್ರೀಯ ಶಿಕ್ಷಣದ ಪ್ರಭಾವವಿದ್ದಾಗಲೂ ಇಂಗ್ಲೆಂಡಿನ ಒಳನಾಡಿನ ಗ್ರಾಮೀಣ ಪರಿಸರದಲ್ಲಿ ಇನ್ನೂ ದೇಸಿ ಭಾಷೆ ಜೀವಂತವಾಗಿತ್ತು ಎನ್ನುವುದನ್ನು ಹಾರ್ಡಿಯವರು ನಿರೂಪಿಸಿದ್ದಾರೆ. ವೆಸೆಕ್ಸ್‌ನ ಕೃಷಿಕಾರ್ಮಿಕರು ಮತ್ತು ಕೂಲಿಕಾರ್ಮಿಕರು ಸಂಜೆ ವೇಳೆ ತಾವು ಸೇರುತ್ತಿದ್ದ ಹೋಟೆಲ್ ಅಥವಾ ಇನ್‌ಗಳಲ್ಲಿ ಸಂಭಾಷಿಸುತ್ತಿದ್ದ ಮತ್ತು ತಮ್ಮ ಒಡೆಯರ ಬಗ್ಗೆ ಚರ್ಚೆ ಮಾಡುತ್ತಿದ್ದ ಮಾತುಗಳಲ್ಲಿ ಅವರ ಮುಗ್ದತೆ, ಸರಳತೆ, ಮಾತಿನಲ್ಲಿ ನಾನಾರ್ಥಗಳು, ವ್ಯಂಗ್ಯ, ಕೋಪ, ಹಾಸ್ಯ ಮುಂತಾದವುಗಳಿಂದ ಸುಶಿಕ್ಷಿತರ ಭಾಷೆಗಿಂತ ಅವರ ಭಾಷೆಯಲ್ಲಿ ನೈಜತೆಯನ್ನು ಮತ್ತು ಭಾಷಾ ವೈವಿಧ್ಯತೆಯನ್ನು ಗುರುತಿಸಬಹುದಾಗಿದೆ. ಒಂದೇ ಭಾಷೆಯಲ್ಲಿ ಅನೇಕ ಪ್ರಭೇದಗಳನ್ನು ಕಾಣುವುದು ದೇಸಿ ಭಾಷೆಯ ಲಕ್ಷಣವಾಗಿದೆ. ಮಲೆನಾಡಿನಲ್ಲಿ

ಕನ್ನಡ ಭಾಷೆ ಪ್ರಧಾನವಾದರೂ ಭಾಷೆಯ ಉಚ್ಛಾರಣೆ, ಪದವ್ಯತ್ಯಾಸ, ಸ್ವರ ವ್ಯತ್ಯಾಸ ವಿಭಿನ್ನ ಶೈಲಿ ಮುಂತಾದವುಗಳಿಂದ ಭಾಷೆಯ ಬಹುತ್ವ ಗುಣವನ್ನು ಗುರುತಿಸಬಹುದಾಗಿದೆ. ಹಾರ್ಡಿಯವರ ಕಾದಂಬರಿಗಳಲ್ಲಿಯೂ ಪದಗಳು, ಸ್ವರ, ಧ್ವನಿ, ಶೈಲಿ, ಉಚ್ಚಾರಣೆ, ಸರ್ವನಾಮಗಳು, ಕ್ರಿಯಾಪದಗಳು, ಕ್ರಿಯಾವಿಶೇಷಣಗಳು ಮುಂತಾದ ಭಾಷಾ ಪ್ರಕಾರಗಳಲ್ಲಿ ಸಾಕಷ್ಟು ವ್ಯತ್ಯಾಸವನ್ನು ಕಾಣುತ್ತೇವೆ. ಸಾಮಾನ್ಯ ಓದುಗರಿಗೆ ಅಂದರೆ ಅಂದಿನ ಮತ್ತು ಇಂದಿನ ಭಾಷಾ ಪ್ರಯೋಗದಲ್ಲಿ ವ್ಯತ್ಯಾಸ ಕಂಡರೂ, ಗ್ರಾಮೀಣ ಪರಿಸರದ ಜನಸಮುದಾಯಕ್ಕೆ ಅವರಾಡುವ ಭಾಷೆಯಲ್ಲಿ ಯಾವುದೇ ವ್ಯತ್ಯಾಸದ ಅರಿವು ಅವರಿಗೆ ಆಗುತ್ತಿರಲಿಲ್ಲ. ಏಕೆಂದರೆ ಅವರವರ ಪರಿಸರದ ಭಾಷೆ ಮಾತನಾಡುವವರಿಗೆ ಸಹಜವೂ ಸ್ವಾಭಾವಿಕವೂ ಅಗಿರುತ್ತದೆ. ಇಬ್ಬರೂ ಕಾದಂಬರಿಕಾರರಲ್ಲಿ ಕಾಣುವ ಒಂದು ಸಾಮ್ಯತೆಯೆಂದರೆ ಕಾದಂಬರಿಗಳ ಕಥಾನಿರೂಪಣೆ ಮತ್ತು ವರ್ಣನಾ ಭಾಗವು ಸಂಸ್ಕೃತದ ಅಥವಾ ಸುಶಿಕ್ಷಿತರ ಭಾಷಾ ಶೈಲಿ ಪಾತ್ರಗಳ ಸಂಭಾಷಣೆ ಭಾಗಗಳು ದೇಸಿಯ ಶೈಲಿಯಲ್ಲಿ ಇರುವುದು ಸ್ಪಷ್ಟವಾಗಿದೆ.[22]

ಕಥಾ ನಿರೂಪಣೆಗೆ ಬಳಸಿರುವ ಭಾಷೆಯಲ್ಲಿ ಕುವೆಂಪುರವರು ಹಾರ್ಡಿಯವರಿಗಿಂತ ಸ್ವಲ್ಪ ಮಟ್ಟಿಗೆ ಭಿನ್ನವಾಗಿರುವುದನ್ನು ಕಾಣಬಹುದಾಗಿದೆ. ದೇಸಿ ಬದುಕಿನ ಚಿತ್ರಣವನ್ನು ಅಭಿವ್ಯಕ್ತಪಡಿಸುವಲ್ಲಿ ಮಣ್ಣಿನ ಭಾಷೆಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಹಾರ್ಡಿಯವರು ತಮ್ಮ ಎರಡೂ ಕಾದಂಬರಿಗಳಲ್ಲಿ ನೀಡಿದ್ದಾರೆ. ಗ್ರಾಮೀಣ ಸಮುದಾಯದ ಜನರಾಡುವ ಭಾಷೆ, ಸಂಭಾಷಣೆಯ ಶೈಲಿ, ಕೃತಿಕಾರರ ವಿವರಣೆ ಬಹುಮಟ್ಟಿಗೆ ದೇಸಿಯವಾಗಿದೆ. ಆದರೆ ಕುವೆಂಪುರವರ ಕಾದಂಬರಿಗಳಲ್ಲಿ ಪಾತ್ರಗಳ ಸಂಭಾಷಣಾ ಭಾಗಗಳು ದೇಸಿಯವಾಗಿದ್ದರೆ ಉಳಿದ ವಿವರಣೆ ಬಹುಪಾಲು ಸಂಸ್ಕೃತಮಯವಾಗಿದೆ. ಇದಕ್ಕೆ ಕಾರಣವನ್ನು ಹುಡುಕಿದರೆ ಬಿ.ವಿ. ಕೃಷ್ಣಪ್ಪನವರ ಮಾತುಗಳು ಇಲ್ಲಿ ನಿಜವೆನಿಸುತ್ತವೆ. "ಶೂದ್ರ ಕವಿಯೊಬ್ಬ ಹೀಗಾಗಲು ಕಾರಣ ಆ ಕಾಲದ ಬ್ರಾಹ್ಮಣಶಾಹಿ ಭಾಷೆ, ಶೈಲಿಗೆ ಛಾಲೆಂಜ್ ಮಾಡುವುದಾಗಿತ್ತು. ಎನ್ನುವುದು"[23] ಇಷ್ಟಾದರೂ ಇಬ್ಬರೂ ಕಾದಂಬರಿಕಾರರು ತಮ್ಮ ಕಾದಂಬರಿಗಳಲ್ಲಿ ಬಳಸಿರುವ ಭಾಷೆ ವೈವಿಧ್ಯಮಯವಾಗಿದ್ದು ಅಂದಿನ ಕಥಾನಕದ ಕಾಲಕ್ಕೆ, ಆಯಾ ಪ್ರದೇಶಕ್ಕೆ, ಅನುಗುಣವಾಗಿದ್ದು ದೇಸಿಯ ಸಂವೇದನೆಗಳಿಗೆ ಕನ್ನಡಿ ಹಿಡಿಯುವುದರಲ್ಲಿ ಸಂದೇಹವಿಲ್ಲ ಎನ್ನಬಹುದು.

ಹೀಗೆ ದೇಸಿ ಭಾಷೆ ಯಾವುದೇ ಜನಸಮುದಾಯದ, ಪ್ರದೇಶದ, ಸಾಮಾಜಿಕ, ಭೌಗೋಳಿಕ, ಸಾಂಸ್ಕೃತಿಕ ಬದುಕನ್ನು ಅಭಿವ್ಯಕ್ತಗೊಳಿಸುವ ಮಾಧ್ಯಮವಾಗಿತ್ತು. ಮಾನವೀಯತೆಯ ಮುಖವನ್ನು, ಸಂಸ್ಕೃತಿಯ ಸೊಬಗನ್ನು, ನೈಜವಾದ ರೀತಿಯಲ್ಲಿ ಪ್ರತಿಬಿಂಬಿಸುವ ಬಹುತ್ವ ದೇಸಿ

ಭಾಷೆಗೆ ಇತ್ತು. ಆದರೆ ಜಾಗತೀಕರಣದ ಫಲವಾಗಿ ಸಮೃದ್ಧವಾದ ಜನಸಾಮಾನ್ಯರ ಭಾಷೆ ಇಂದು ಕಾಣೆಯಾಗುತ್ತಿದೆ. ಭಾಷೆಯಲ್ಲಿನ ಮಾನವೀಯತೆಯ, ಭಾವನಾತ್ಮಕವಾದ ಅಂಶಗಳನ್ನು ಮಾರುಕಟ್ಟೆಯ ವ್ಯಾವಹಾರಿಕ ಅಂಶಗಳು ಪಲ್ಲಟಗೊಳಿಸುತ್ತಿವೆ. ಜಾಗತೀಕರಣದ ಹಿನ್ನಲೆಯಲ್ಲಿ ಪ್ರಭುತ್ವದ ಭಾಷೆಯಾಗಿ ಅಥವಾ ಜಾಗತಿಕ ಭಾಷೆಯಾಗಿ ಇಂಗ್ಲೀಷ್ ಪ್ರಾದೇಶಿಕ ಭಾಷೆಗಳನ್ನು ನಾಶಮಾಡುತ್ತಿದೆ. ಹಿಂದೆ ವಸಾಹತು ಆಳ್ವಿಕೆಯಲ್ಲಿ ಅಸ್ತಿತ್ವಕ್ಕೆ ಬಂದ ಇಂಗ್ಲೀಷ್ ಭಾಷೆ ಉದಾರೀಕರಣದ ಭಾಗವಾಗಿ, ಅನಿವಾರ್ಯತೆಯ ಭಾವನೆಯನ್ನು ಸೃಷ್ಟಿಸಿ ದೇಸಿ ಭಾಷೆಗಳ ಅವನತಿಗೆ ಕಾರಣವಾಗುತ್ತಿದೆ. ದೇಸಿ ಭಾಷೆಯ ವೈಶಿಷ್ಟ್ಯತೆ ಮತ್ತು ಬಹುತ್ವ ಕಣ್ಮರೆಯಾಗಿ ಏಕಮೇವ ಭಾಷೆಯಾಗಿ ಇಂದು ಇಂಗ್ಲೀಷ್ ಭಾಷೆ ರಾರಾಜಿಸುತ್ತಿದೆ. ದೇಸಿಯ ಜ್ಞಾನ ಪರಂಪರೆಯನ್ನು, ಉದಾತ್ತವಾದ ದೇಸಿ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತಿದ್ದ ದೇಸಿ ಭಾಷೆಯನ್ನು, ಪರಕೀಯ ಭಾಷೆಯಾದ ಇಂಗ್ಲೀಷ್ ಭಾಷೆ ನಾಶಮಾಡುತ್ತಿದೆ. ಜಾಗತಿಕ ಭಾಷೆಯಿಲ್ಲದೆ ಬದುಕುವುದೇ ಕಷ್ಟವೆಂಬಂತೆ ಎಲ್ಲೆಡೆ ಪ್ರಚಾರ ಮಾಡಲಾಗುತ್ತಿದೆ, ಇಂಗ್ಲೀಷ್‌ನ ಜ್ಞಾನಕ್ಕೂ ಉದ್ಯೋಗಕ್ಕೂ ಸಂಬಂಧ ಸೃಷ್ಟಿಸಿ ದೇಸಿ ಭಾಷೆಗಳಿಗೆ ಬಲವಾದ ಹೊಡೆತ ಕೊಡಲಾಗುತ್ತಿದೆ. ಜಾಗತೀಕರಣದ ಭಾಗವಾದ ಉದಾರೀಕರಣದ ಪರಿಣಾಮ ಭಾಷೆಯ ಬಳಕೆಯನ್ನು ಲಾಭದ ದೃಷ್ಟಿಯಿಂದ ನೋಡಲಾಗುತ್ತಿದೆ. ವಾಣೀಜ್ಯಿಕರಣಗೊಳ್ಳುತ್ತಿರುವ ಮತ್ತು ಗ್ರಾಹಕ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಜಾಗತೀಕರಣದ ಪ್ರತಿನಿಧಿ ಸಂಸ್ಥೆಗಳಿಗೆ ಇಂಗ್ಲಿಷ್ ಭಾಷೆ ಮುಖ್ಯವಾಗಿದೆ. ಇದರಿಂದ ಜಾಗತಿಕ ವಲಯಕ್ಕೆ ಲಾಭ ತಂದು ಕೊಡುವ ಭಾಷೆ ಎಂದು ಇಂಗ್ಲಿಷ್ ಭಾಷೆ ಮುಖ್ಯವಾದುದರ ಪರಿಣಾಮ ಅನೇಕ ಪ್ರಾದೇಶಿಕ ಭಾಷೆಗಳು ನಶಿಸಿ ಹೋಗುತ್ತಿವೆ. ದೇಸಿ ಭಾಷೆಯ ಮಾಧುರ್ಯ, ಧ್ವನಿಯ ಏರಿಳಿತ, ಜನಪದರ ಆಡುಮಾತುಗಳು, ಗಾದೆಗಳು ನುಡಿಗಟ್ಟುಗಳು ಮುಂತಾದ ಭಾಷೆಯ ಬಹುತ್ವದ ಅಂಶಗಳು ಮುಖ್ಯವಾಗದೆ ವ್ಯಾವಹಾರಿಕವಾಗಿ ಲಾಭತಂದುಕೊಡುವ ಭಾಷೆ ಎಂದು ಇಂಗ್ಲೀಷ್ ಭಾಷೆಯನ್ನು ವೈಭವೀಕರಿಸುವುದರ ಫಲವಾಗಿ ದೇಸಿ ಭಾಷೆ ಮತ್ತು ದೇಸಿ ಸಂಸ್ಕೃತಿಯ ಅವನತಿಗೆ ಜಾಗತೀಕರಣ ಕಾರಣವಾಗುತ್ತಿದೆ.

ಬ್ರಿಟಿಷರ ವಸಾಹತು ಆಳ್ವಿಕೆಯಲ್ಲಿ ಪ್ರಾರಂಭಗೊಂಡ ಮೆಕಾಲೆ ಮಾದರಿಯ ಶಿಕ್ಷಣ ಜಾಗತೀಕರಣಕ್ಕೆ ಮುನ್ನುಡಿಯಾಯಿತು ಎಂದರೆ ತಪ್ಪಾಗಲಾರದು. ಇದರಿಂದ ಪಾಶ್ಚಾತ್ಯ ಮಾದರಿಯ ಶಿಕ್ಷಣದ ಮಾಧ್ಯಮವಾಗಿ ಆಂಗ್ಲಭಾಷೆ ಮುಖ್ಯವಾಗುತ್ತದೆ. ಅಲ್ಲಿಂದ ಪ್ರಾರಂಭವಾದ ಇಂಗ್ಲಿಷ್ ಭಾಷೆಯ ಪ್ರಭಾವ ಅನೇಕ ಪ್ರಾದೇಶಿಕ ಭಾಷೆಗಳನ್ನು ತುಳಿದು ಅಧಿಪತ್ಯ ಸ್ಥಾಪಿಸಲಾರಂಭಿಸಿತು. ಏಕಮೇವ ಜಾಗತಿಕ ಭಾಷೆಯಾಗಿ ದೇಸಿಯ ಭಾಷಾ ಪ್ರಬೇದಗಳನ್ನು ನಾಶಮಾಡಲಾರಂಭಿಸಿತು. ಇಂದು ಅಂತಾರಾಷ್ಟ್ರೀಯತೆ, ಆಧುನೀಕರಣ, ಉದಾರೀಕರಣ

ಮುಂತಾದ ಘೋಷಣೆಗಳಿಂದ ಜನಸಾಮಾನ್ಯರಿಗೆ ಆಮಿಷವೊಡ್ಡಿ, ಸಾವಿರಾರು ವರ್ಷಗಳಿಂದ ಬೆಳೆದು ಬಂದಿದ್ದ ದೇಸಿ ಭಾಷೆಯನ್ನು ನಿರ್ನಾಮ ಮಾಡುತ್ತಿರುವುದನ್ನು ಕಾಣುತ್ತಿದ್ದೇವೆ.[24] ಜಾಗತಿಕ ಮಾರುಕಟ್ಟೆ ಮತ್ತು ಅದರಿಂದ ಪ್ರೇರಿತವಾದ ಸಮೂಹ ಮಾಧ್ಯಮಗಳಿಗೆ ವಾಸ್ತವವಾಗಿ ಭಾಷೆಯ ಬಹುತ್ವವು ಬೇಕಾಗಿಲ್ಲ. ಜನಸಾಮಾನ್ಯರ ಆಡುನುಡಿಯ ವ್ಯವಹಾರವು ಅದಕ್ಕೆ ಮುಖ್ಯವಲ್ಲ ಬೇರೊಂದು ಮಾತಿನಲ್ಲಿ ಹೇಳಬೇಕೆಂದರೆ ಅದು ಜನಸಾಮಾನ್ಯರ ಭಾಷೆಯನ್ನು ತೆಗೆದುಕೊಳ್ಳುವುದಿಲ್ಲ. ಜಾಗತೀಕರಣದ ಪ್ರಕ್ರಿಯೆಯಲ್ಲಿ ಅದು ಭಾಷೆಯನ್ನು ಹೇರುತ್ತದೆ. ಭಾಷೆಯನ್ನು ಅದು ಏಕರೂಪಾತ್ಮಕವಾಗಿಸುತ್ತದೆ. ಸಂವಹನ ಮಾಧ್ಯಮಗಳ ಭಾಷೆಯು ಜನಸಾಮಾನ್ಯರ ಮೇಲೆ ಬೀರುವ ಪ್ರಭಾವದ ದೆಸೆಯಿಂದ ಸಹಜವಾಗಿಯೇ ಪ್ರಾದೇಶಿಕ ಭಾಷೆಗಳು ಗೈರುಹಾಜರಿಯಾಗಬಹುದು.[25] ಇದರಿಂದ ಮಲೆನಾಡಿನ ಪರಿಸರದಲ್ಲಿದ್ದ ಭಾಷಾ ಪ್ರಬೇದಗಳು ಹೇಗೆ ಅವನತಿ ಹೊಂದುತ್ತಿವೆ ಎನ್ನುವುದನ್ನು ತಿಳಿಸುತ್ತದೆ. ಇದೇ ರೀತಿಯ ಸನ್ನಿವೇಶವನ್ನು ಹಾರ್ಡಿಯವರ 'ವೆಸೆಕ್ಸ್'ನ ಪರಿಸರದಲ್ಲೂ ಕಾಣುತ್ತೇವೆ. ಆಧುನಿಕ ತಂತ್ರಜ್ಞಾನ, ಶಿಕ್ಷಣ, ಕೈಗಾರೀಕರಣ, ವಲಸೆ ನಗರೀಕರಣ, ಸಾರಿಗೆ–ಸಂಪರ್ಕದ ಅಭಿವೃದ್ಧಿ ಮುಂತಾದವುಗಳಿಂದ ಸಾಮಾನ್ಯ ಜನರ ದೈನಂದಿನ ಬದುಕಿನ ಸ್ವಾಭಾವಿಕ ಭಾಷೆ ಕಣ್ಮರೆಯಾಗಲಾರಂಭಿಸಿತು. ಆಧುನಿಕ ಓದುಗರಿಗೆ ಹಾರ್ಡಿಯವರ ಕಾದಂಬರಿಯ ಗ್ರಾಮವಾಸಿಗಳ ಭಾಷೆ ವಿಚತ್ರವೆನಿಸಿದರೂ ಅಂದಿನವರಿಗೆ ಅದು ಬದುಕಿನ ಭಾಷೆಯಾಗಿತ್ತು, ಅಂತಹ ಭಾಷೆಯನ್ನು ತಮ್ಮ ಕಾದಂಬರಿಗಳಲ್ಲಿ, ಸಂಭಾಷಣೆಯಲ್ಲಿ ಜೀವಂತಗೊಳಿಸುವ ಮಹತ್ತರವಾದ ಕೆಲಸವನ್ನು ಹಾರ್ಡಿಯವರು ಮಾಡಿದ್ದಾರೆ. ಕ್ರೈಸ್ತ ಧರ್ಮ ಇನ್ನೂ ಗ್ರಾಮೀಣ ಬದುಕಿನ ಅರೆಪೇಗನ್ ಸಂಸ್ಕೃತಿಯ ಜನಸಮುದಾಯಕ್ಕೆ ತಲುಪುವ ಪೂರ್ವದಲ್ಲಿ ದೇಸಿ ಭಾಷೆಯ ಮೇಲೆ ಕ್ರೈಸ್ತ ಧರ್ಮ, ರಾಷ್ಟ್ರೀಯ ಶಿಕ್ಷಣ, ಆಧುನೀಕರಣ ಮುಂತಾದ ಅಂಶಗಳು ಜಾಗತೀಕರಣದ ಭಾಗವಾಗಿ ಪ್ರಭಾವ ಭೀರಲಾರಂಬಿಸಿ ಉದಾತ್ತವಾದ, ಸಾಂಪ್ರದಾಯಿಕವಾದ ನೆಲಪರ ಸಂಸ್ಕೃತಿ ಮತ್ತು ಜನಪದರ ಆಡುನುಡಿಗಳು ಕ್ರಮೇಣ ಕಣ್ಮರೆಯಾಗಲಾರಂಭಿಸಿದವು. ಹೀಗೆ ಕಳೆದುಹೋಗುತ್ತಿರುವ ದೇಸಿ ಸಂಸ್ಕೃತಿ ಮತ್ತು ದೇಸಿ ಭಾಷೆಯ ಬಗ್ಗೆ ಹಾರ್ಡಿಯವರು ತಮ್ಮ ಕಾದಂಬರಿಳಗಲ್ಲಿ ಭೀತಿ ವ್ಯಕ್ತಪಡಿಸಿರುವುದು ಸಮಯೋಚಿತವಾಗಿದೆ.[26] ಆದ್ದರಿಂದಲೇ ಹಾರ್ಡಿಯವರು ತಮ್ಮ ಕಾದಂಬರಿಗಳಲ್ಲಿ ಅನಕ್ಷರಸ್ಥ, ಮುಗ್ಧ ಗ್ರಾಮ ಸಮುದಾಯದವರನ್ನು ತಮ್ಮ ಕಾದಂಬರಿಗಳಲ್ಲಿ ಹಿಮ್ಮೇಳದವರನ್ನಾಗಿ ಪ್ರಧಾನ ಪಾತ್ರಗಳಲ್ಲಿ ದುಡಿಸಿಕೊಂಡಿದ್ದಾರೆ ಮತ್ತು ಅವರ ದೇಸಿ ಭಾಷೆಯನ್ನು ಜೀವಂತಗೊಳಿಸಲು ಪ್ರಯತ್ನಿಸಿದ್ದಾರೆ ಎನ್ನುವುದು ಸ್ಪಷ್ಟವಾಗುತ್ತದೆ.

ದೇಸಿಯತೆಯನ್ನು ನಿರ್ದೇಶಿಸುವಲ್ಲಿ ಧಾರ್ಮಿಕ ನಂಬಿಕೆಗಳು, ರೂಢಿ ಸಂಪ್ರದಾಯಗಳು, ಹಬ್ಬ-ಆಚರಣೆಗಳು, ಉತ್ಸವಗಳು ಮಹತ್ತರವಾದ ಪಾತ್ರ ವಹಿಸುವುದನ್ನು ಕುವೆಂಪು ಮತ್ತು ಹಾರ್ಡಿಯವರ ಕಾದಂಬರಿಗಳಿಂದ ತಿಳಿದುಬರುತ್ತದೆ. ಮಾನವ ತನ್ನ ವೈಯಕ್ತಿಕ, ಸಾಮಾಜಿಕ, ಕೌಟುಂಬಿಕ, ಸಂಬಂಧಗಳನ್ನು ಉತ್ತಮ ಪಡಿಸಿಕೊಳ್ಳಲು ಅಮೂರ್ತ ಶಕ್ತಿಗಳಲ್ಲಿ ನಂಬಿಕೆಯನ್ನಿಟ್ಟು ಅವುಗಳನ್ನು ಆರಾಧಿಸುತ್ತ ಬಂದಿದ್ದಾನೆ. ಧಾರ್ಮಿಕ ಆಚರಣೆ ಮಾನವನ ವಿಕಾಸದಿಂದಲೂ ಬೆಳೆದು ಬಂದು ಸಂಪ್ರದಾಯವಾಗಿರುವುದು ಸ್ಪಷ್ಟವಾಗಿದೆ. ಮಾನವನ ದೈನಂದಿನ ಚಟುವಟಿಕೆಗಳನ್ನು ನಿರ್ಧರಿಸುವುದರಲ್ಲಿ ಧಾರ್ಮಿಕ ನಂಬಿಕೆಗಳು ಪ್ರಮುಖ ಪಾತ್ರವಹಿಸುತ್ತವೆ. ಅಲೌಕಿಕ ಶಕ್ತಿಗಳಲ್ಲಿ ನಂಬಿಕೆಯಿಟ್ಟು ತನ್ನ ಬದುಕನ್ನು ನೈತಿಕತೆಯ ಆಧಾರದ ಮೇಲೆ ರೂಪಿಸಿಕೊಂಡಿರುವ ಮಾನವ ಪ್ರತಿಯೊಂದು ಕ್ರಿಯೆಯ ಅಥವಾ ಚಟುವಟಿಕೆಯ ಹಿಂದೆ ಆ ಅಮೂರ್ತ ಶಕ್ತಿಯ ಪ್ರಭಾವವನ್ನು ಕಲ್ಪಿಸಿಕೊಳ್ಳುತ್ತಾ ಬಂದಿದ್ದಾನೆ. ಇದರ ಪರಿಣಾಮವಾಗಿ ಅಂತಹ ಅಲೌಕಿಕ ಶಕ್ತಿಗೆ ಪೂಜೆ ಪುನಸ್ಕಾರ ಸಲ್ಲಿಸುತ್ತಾ, ಹಬ್ಬ ಹರಿದಿನಗಳನ್ನು ಉತ್ಸವಗಳನ್ನು ಹಮ್ಮಿಕೊಂಡು ವಿಶೇಷವಾಗಿ ಆರಾಧಿಸುತ್ತ ಧಾರ್ಮಿಕ ಸಂಪ್ರದಾಯ ರೂಪುಗೊಂಡಿರುವುದನ್ನು ಕಾಣುತ್ತೇವೆ. ಸಾಮಾಜಿಕ, ಕೌಟುಂಬಿಕ, ಮಾನಸಿಕ ಸ್ವಸ್ಥತೆಗೆ ಧಾರ್ಮಿಕ ನಂಬಿಕೆಗಳು ಅನಿವಾರ್ಯವೆಂದು ಮಾನವ ನಂಬಿಕೊಂಡು ಅವುಗಳ ಜೊತೆಯಲ್ಲಿ ಒಂದು ಅರ್ಥಪೂರ್ಣವಾದ ಬದುಕನ್ನು ಕಟ್ಟಿಕೊಂಡಿದ್ದಾನೆ. ಇದರ ದ್ಯೋತಕವಾಗಿ ಮಾನವ ಗುಡಿ-ಗೋಪುರಗಳನ್ನು, ದೇವಾಲಯ, ಚರ್ಚು, ಮಸೀದಿ ಮುಂತಾದ ಸ್ಥಾವರಗಳನ್ನು ನಿರ್ಮಿಸಿ ತನ್ನ ಧಾರ್ಮಿಕ ನಂಬಿಕೆಯನ್ನು ಮೂರ್ತಗೊಳಿಸಿರುವುದು ಕುವೆಂಪು ಮತ್ತು ಹಾರ್ಡಿಯವರ ಕಾದಂಬರಿಗಳ ಅಧ್ಯಯನದಿಂದ ತಿಳಿದುಬರುತ್ತದೆ. ಇಂತಹ ಧಾರ್ಮಿಕ ನಂಬಿಕೆ ಆಚರಣೆ, ಅರಾಧನೆಗಳು ದೇಸಿಯ ಬದುಕಿನ ಭಾಗವಾಗಿ ಜನಸಮುದಾಯವನ್ನು ನೈತಿಕ ನೆಲೆಗಟ್ಟಿನ ಮೇಲೆ ನಿಯಂತ್ರಿಸುತ್ತಿದ್ದುದನ್ನು ಕಾಣಬಹುದು. ಆಯಾ ಜಾತಿ, ವರ್ಗ, ವರ್ಣ, ಧರ್ಮಕ್ಕನುಗುಣವಾಗಿ ನಂಬಿಕೆಗಳು ಬೆಳೆದು ಬಂದಿವೆ. ಧಾರ್ಮಿಕ ನಂಬಿಕೆಗಳು ಜೀವನ ಮೌಲ್ಯವನ್ನು ಮತ್ತು ಬದುಕಿಗೆ ಪರಿಪೂರ್ಣತೆಯನ್ನು ನೀಡಿ ಮಾನವನ ಬದುಕನ್ನು ಸಾರ್ಥಕಗೊಳಿಸುತ್ತವೆ.

ಕುವೆಂಪುರವರ ಕಾದಂಬರಿಗಳಲ್ಲಿ ಬರುವ ಅಗ್ರಹಾರ, ಸಿದ್ಧರಮಠ ಮತ್ತು ಬನಗಳು ಧಾರ್ಮಿಕ ಸ್ಥಳಗಳಾಗಿದ್ದವು. ಅಗ್ರಹಾರಗಳು ಬ್ರಾಹ್ಮಣರು ವಾಸಿಸುವ ಮತ್ತು ದೇವಾಲಯಕ್ಕೆ ಹೊಂದಿಕೊಂಡ ಧಾರ್ಮಿಕ ಕೇಂದ್ರಗಳಾಗಿದ್ದವು. ಅಗ್ರಹಾರಗಳಿಗೆ ಬೇರೆ ಜಾತಿಯವರಿಗೆ ಪ್ರವೇಶವಿಲ್ಲದಿದ್ದರೂ, ದೇವಾಲಯಗಳಿಗೆ ಇತರೆ ಜಾತಿಯವರು ಪೂಜೆ ಸಲ್ಲಿಸಲು ಬರುತ್ತಿದ್ದರು, ಜನರಿಗೆ ಕಷ್ಟ-ಕೋಟಲೆಗಳು ಎದುರಾದಾಗ ಈ ದೇವಸ್ಥಾನಗಳಿಗೆ ಹರಕೆ ಹೊತ್ತು

ಸತ್ಯನಾರಾಯಣ ವ್ರತ ಮಾಡಿಸುವುದು ಧಾರ್ಮಿಕ ನಂಬಿಕೆಯ ಭಾಗವಾಗಿತ್ತು. ಮಲೆನಾಡಿನ ದೇಸಿಯ ಬದುಕಿನಲ್ಲಿ ಬೇರೆ ಬೇರೆ ಧರ್ಮಗಳ ಪ್ರಭಾವವನ್ನೂ ಸಹ ಕಾಣುತ್ತೇವೆ. ಸಿದ್ಧರಮಠ ಅಂತಹ ಧಾರ್ಮಿಕ ಕೇಂದ್ರವಾಗಿತ್ತು. ಪ್ರಾರಂಭದಲ್ಲಿ ಇದು ವೀರಶೈವರ ಧಾರ್ಮಿಕ ಕೇಂದ್ರವಾದರೆ, ನಂತರದ ವರ್ಷಗಳಲ್ಲಿ ಅಲ್ಲಿ ಇತರೆ ಜಾತಿ–ಜನಾಂಗದವರೂ ಪೂಜೆ, ಹರಕೆಗಳಿಗೆ ಹೋಗಿ ಬರುತ್ತಿದ್ದರು. ಈ ಮಠದಲ್ಲಿ ಮಲೆನಾಡಿನ ಜನರು ರೋಗ ರುಜಿನಗಳು, ಕಷ್ಟ ನಷ್ಟಗಳು ಸಂಭವಿಸಿದಾಗ ಹರಕೆ ಹೊರುವುದು, ತಾಯಿತ, ವಿಭೂತಿ ತರುವುದು ವಾಡಿಕೆಯಾಗಿತ್ತು. ಮಲೆನಾಡಿಗೆ ಅನ್ಯ ಧರ್ಮಗಳ ಪ್ರವೇಶವನ್ನು ಸಹ ಕುವೆಂಪುರವರ ಕಾದಂಬರಿಗಳು ವಿವರಿಸುತ್ತವೆ. ಈ ಪ್ರದೇಶದಲ್ಲಿ ಜೈನಮತದ ಪ್ರಭಾವಿದ್ದುದನ್ನು ಮತ್ತು ಅಲ್ಲಿನ ಧಾರ್ಮಿಕ ಕಾಯಕಗಳಲ್ಲಿ ಆಚರಣೆ ಇದ್ದುದನ್ನು ಸಹ ಕಾಣುತ್ತೇವೆ. ಭೂತ ಬನಗಳಿಗೆ ರಕ್ತ ಬಲಿ ಕೊಡುವ ಮುನ್ನ ಜೈನೆಡೆ ಹಾಕಿಸುತ್ತಿದ್ದುದು, ಮಲೆನಾಡಿನಲ್ಲಿ ಜೈನ ಮತದ ಪ್ರಭಾವವನ್ನು ಕಾಣಬಹುದು. ಹೀಗೆ ಮಲೆನಾಡಿನ ದೇಸಿಯ ಬದುಕಿನಲ್ಲಿ ಜೈನ, ವೀರಶೈವ ಧರ್ಮಗಳ ಪ್ರಭಾವವನ್ನು ಗುರುತಿಸಬಹುದಾಗಿದೆ. ಈ ಧರ್ಮಗಳಂತೆಯೇ ಕ್ರಿಶ್ಚಿಯನ್ ಮತದ ಪ್ರಭಾವವನ್ನು ಸಹ ಕಾಣಬಹುದು.

ಮಲೆನಾಡಿನ ಪ್ರದೇಶದಲ್ಲಿ ಒಕ್ಕಲಿಗ, ದಲಿತ ಮತ್ತು ಇತರೆ ಜಾತಿಗಳ ಮೇಲೆ ಕ್ರಿಶ್ಚಿಯನ್ ಮತದ ಪ್ರಭಾವವನ್ನು, ಕ್ರೈಸ್ತ ಮಿಷನರಿಗಳು ವಿವಿಧ ರೀತಿಯ ಆಮಿಷಗಳನ್ನು ನೀಡಿ ಸ್ಥಳೀಯರನ್ನು ಮತಾಂತರಗೊಳಿಸುತ್ತಿದ್ದುದನ್ನು ಕುವೆಂಪುರವರ ಕಾದಂಬರಿಗಳು ಉಲ್ಲೇಖಿಸುತ್ತವೆ. ಸಮಾಜದಲ್ಲಿದ್ದ ಶ್ರೇಣೀಕೃತ ಜಾತಿ ವ್ಯವಸ್ಥೆ, ಅಸ್ಪೃಶ್ಯತಾ ಆಚರಣೆ, ವಿವಿಧ ರೀತಿಯ ಶೋಷಣೆಗಳು ಸಮಾಜದಲ್ಲಿದ್ದ ಕೆಳಸ್ತರದವರು ಮತಾಂತರಗೊಳ್ಳಲು ಕಾರಣವಾಗುತ್ತವೆ. ಜಾಗತೀಕರಣದ ಭಾಗವಾದ ಮತಾಂತರ ಸ್ಥಳೀಯ ಜನರ ಮುಗ್ಧ ಮನಸ್ಸನ್ನು ಆಮಿಷಗಳಿಂದ ಶೋಷಣೆಗೊಳಪಡಿಸಿ ಕ್ರೈಸ್ತೀಕರಿಸುವುದನ್ನು ಮಲೆನಾಡಿನ ದೇಸಿಯ ಬದುಕಿನಲ್ಲಿ ಕಾಣುತ್ತೇವೆ.[27] ಜಾಗತೀಕರಣದ ಪ್ರಮುಖ ಧರ್ಮವೇ ಕ್ರೈಸ್ತಮತ. ಇದರ ಮೂಲಕ ಪಾಶ್ಚಾತ್ಯ ಸಂಸ್ಕೃತಿ, ಅಲೋಚನೆಗಳು ದೇಸಿಯ ಸಾಂಪ್ರದಾಯಿಕ ನಂಬಿಕೆಗಳನ್ನು ನಾಶಮಾಡುವುದನ್ನು ಕುವೆಂಪುರವರ ಕಾದಂಬರಿಗಳಲ್ಲಿ ಕಾಣುತ್ತೇವೆ. ಭಾರತದಲ್ಲಿ ಬ್ರಿಟಿಷರ ವಸಾಹತು ಆಳ್ವಿಕೆ ಪೂರ್ವದಿಂದಲೂ ಅಸ್ತಿತ್ವದಲ್ಲಿದ್ದ ಮತಾಂತರಗೊಳಿಸುವ ವ್ಯವಸ್ಥೆ ಹತ್ತೊಂಬತ್ತನೆಯ ಶತಮಾನದಲ್ಲಿ ಹಳ್ಳಿ ಹಳ್ಳಿಗಳಿಗೂ ವಿಸ್ತರಿಸುವುದನ್ನು ಕಾಣುತ್ತೇವೆ. ಮತಾಂತರಕ್ಕೆ ಸುಲಭವಾಗಿ ಸಿಗುತ್ತಿದ್ದವರು ಹಳ್ಳಿಯ ಮುಗ್ಧ ಅವಿದ್ಯಾವಂತ ಜನರಾಗಿದ್ದರಿಂದ ಮತಾಂತರಗೊಳಿಸುವ ಪ್ರಕ್ರಿಯೆಯನ್ನು ಹಳ್ಳಿಗಳಿಂದಲೇ ಪ್ರಾರಂಭಿಸುತ್ತಿದ್ದುದು ಕ್ರೈಸ್ತ ಮಿಷನರಿಗಳ ಕಪಟತೆಯನ್ನು ಪ್ರತಿಬಿಂಬಿಸುತ್ತದೆ.

ಧಾರ್ಮಿಕ ನಂಬಿಕೆಗಳು, ಆಚರಣೆ, ಹಬ್ಬ ಉತ್ಸವಗಳು ಇಂಗ್ಲೆಂಡಿನ ಗ್ರಾಮೀಣ ಪ್ರದೇಶದಲ್ಲಿ ರೂಢಿಯಲ್ಲಿದ್ದು ದೇಸಿಯ ಬದುಕನ್ನು ನಿರ್ದೇಶಿಸುತ್ತಿದ್ದವು ಎನ್ನುವುದನ್ನು ಹಾರ್ಡಿಯವರ ಕಾದಂಬರಿಗಳಲ್ಲಿ ಕಾಣುತ್ತೇವೆ. ಇಂತಹ ಧಾರ್ಮಿಕ ಆಚರಣೆ ನಂಬಿಕೆಗಳು ಕಾಲಾತೀತವಾಗಿದ್ದು, ಪ್ರತಿಯೊಂದು ಸಮಾಜದಲ್ಲೂ ಅಸ್ತಿತ್ವದಲ್ಲಿದ್ದವು ಎನ್ನುವುದನ್ನು ಹಾರ್ಡಿ ಮತ್ತು ಕುವೆಂಪುರವರ ಕಾದಂಬರಿಗಳಲ್ಲಿ ನೋಡಬಹುದು. ನಾಗರೀಕತೆಯ ಪೂರ್ವದಲ್ಲಿದ್ದ ಅರೆಪೇಗನ್ ಸಂಸ್ಕೃತಿಯ ಆಚರಣೆಗಳು, ನಂಬಿಕೆಗಳು, ಹತ್ತೊಂಬತ್ತನೆಯ ಶತಮಾನದಲ್ಲೂ ಗ್ರಾಮೀಣ ಪರಿಸರದಲ್ಲಿ ರೂಢಿಯಲ್ಲಿದ್ದವು ಎನ್ನುವುದು ಹಾರ್ಡಿಯವರ ಕಾದಂಬರಿಗಳಿಂದ ತಿಳಿಯುತ್ತದೆ. ಜಾಗತೀಕರಣದ ಆಧುನಿಕ ಶಿಕ್ಷಣದ ನೀತಿ, ಸಂಪರ್ಕ ಸಾಧನಗಳು ಇಂಗ್ಲೆಂಡಿನ ಒಳನಾಡಿನ ಗ್ರಾಮೀಣ ಪ್ರದೇಶಗಳ ಮೇಲೆ ಪ್ರಭಾವ ಬೀರಲಾರಂಬಿಸಿದವು, ಇದರಿಂದ ವೆಸೆಕ್ಸ್‌ನಂತಹ ಗ್ರಾಮೀಣ ಪ್ರದೇಶಗಳಲ್ಲಿ ಆಚರಣೆಯಲ್ಲಿದ್ದ ಅರೆಪೇಗನ್ ಸಂಸ್ಕೃತಿ, ನಾಶವಾಗಿ, ಜನರು ಕ್ರೈಸ್ತಮತಕ್ಕೆ ಮತಾಂತರಗೊಳ್ಳಲಾರಂಭಿಸಿದರು. ಮತಾಂತರಗೊಂಡವರು ಪ್ರತಿ ಭಾನುವಾರದಂದು ಹಳ್ಳಿಗಳಲ್ಲಿ ಆಗತಾನೆ ಸ್ಥಾಪನೆಗೊಂಡಿದ್ದ ಚರ್ಚುಗಳಿಗೆ ಹೋಗುವುದು ಶುರುವಾಗುತ್ತದೆ. ಹೀಗೆ ಹಳ್ಳಿಯಲ್ಲಿದ್ದ ಚರ್ಚುಗಳು ಧಾರ್ಮಿಕ ಭಾವನೆಗಳಿಗೆ, ಮದುವೆ ಮುಂತಾದ ಶುಭ ಕಾರ್ಯಗಳಿಗೆ ಕೇಂದ್ರಸ್ಥಳಗಳಾಗುತ್ತವೆ. ಹೀಗೆ ಮತಾಂತರಗೊಳಿಸುವ ಪ್ರಕ್ರಿಯೆ ಕೇವಲ ಭಾರತದಂತ ಸಾಮಾಜಿಕ ವ್ಯವಸ್ಥೆಯಲ್ಲಷ್ಟೆ ಅಲ್ಲದೆ ಇಂಗ್ಲೆಂಡಿನ ಗ್ರಾಮ ಸಮುದಾಯದಲ್ಲೂ ಅಸ್ತಿತ್ವದಲ್ಲಿದ್ದವು ಎಂಬುದನ್ನು ಹಾರ್ಡಿಯವರ ಕೃತಿಗಳಿಂದ ತಿಳಿಯುತ್ತದೆ. ಮತಾಂತರ ಇಂಗ್ಲೆಂಡಿನ ಗ್ರಾಮೀಣ ಪರಿಸರದ ಮೇಲೆ ಯಾವುದೇ ದುಷ್ಪರಿಣಾಮ ಬೀರಿರುವುದಕ್ಕೆ ಯಾವ ನಿದರ್ಶನವೂ ಹಾರ್ಡಿಯವರ ಕಾದಂಬರಿಗಳಲ್ಲಿ ಕಂಡುಬರುವುದಿಲ್ಲ. ಆದರೆ ಮಲೆನಾಡಿನ ದೇಸಿ ಸಮಾಜದಲ್ಲಿ ಇದರ ಪರಿಣಾಮಗಳನ್ನು ಕಾಣುತ್ತೇವೆ. ಇದರಿಂದ ಸಾಮಾಜಿಕ, ಕೌಟುಂಬಿಕ ಸಾಮರಸ್ಯ ಹಾಳಾಗುವುದನ್ನು ಕುವೆಂಪುರವರ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಕಾಣುತ್ತೇವೆ. ಸಾವಿರಾರು ವರ್ಷಗಳಿಂದ ಜನಪದರಲ್ಲಿ ಉಳಿದುಕೊಂಡು ಬಂದಿದ್ದ ಧಾರ್ಮಿಕ, ನೈತಿಕ, ಸಾಮಾಜಿಕ ಮತ್ತು ಕೌಟುಂಬಿಕ ಮೌಲ್ಯಗಳು ಮತಾಂತರದ ಪಿಡುಗಿನಿಂದ ನಾಶವಾಗುವುದರ ಜೊತೆಗೆ ಸಾಮಾಜಿಕ ಧಾರ್ಮಿಕ ಸಾಮರಸ್ಯವನ್ನು ಹಾಳುಗೆಡುವುದನ್ನು ಕಾಣುತ್ತೇವೆ.

ದೇಸಿಯತೆಯನ್ನು ಶ್ರೀಮಂತಗೊಳಿಸಿದ ಅಂಶಗಳಲ್ಲಿ ಹಬ್ಬ, ಜಾತ್ರೆ, ಉತ್ಸವಗಳು ಪ್ರಮುಖವಾದವು. ವರ್ಷವಿಡೀ ದುಡಿಯುವ ಮನಗಳಿಗೆ ಮತ್ತು ಜೀವನದ ಜಂಜಾಟದಿಂದ ತುಸುವಾದರೂ ವಿಶ್ರಾಂತಿ ಮನರಂಜನೆ ಸಿಗುವುದು ಬಂಧು-ಬಳಗ, ಸ್ನೇಹಿತರೆಲ್ಲ ಒಂದೆಡೆ

ಒಟ್ಟಾಗಿ ಸೇರಿ ಹಬ್ಬಗಳನ್ನು ಆಚರಿಸುವಾಗ, ಜಾತ್ರೆ–ಉತ್ಸವಗಳಲ್ಲಿ ಭಾಗವಹಿಸಿ ತೊಡಗಿಸಿಕೊಂಡಾಗ ಎನ್ನಬಹುದು. ಇಂತಹ ಆಚರಣೆಗಳು ಜನಸಮುದಾಯದಲ್ಲಿ ಭಕ್ತಿ ಭಾವನೆಯ ಜೊತೆಗೆ ನೈತಿಕ ಶಕ್ತಿಯನ್ನು ತುಂಬುತ್ತವೆ. ಆಯಾ ಸಾಮಾಜಿಕ ಭೌಗೋಳಿಕ ಮತ್ತು ಕಾಲಮಾನಗಳಿಗೆ ಅನುಗುಣವಾಗಿ ಹಬ್ಬ, ಜಾತ್ರೆಗಳು ನಡೆಯುತ್ತಿದ್ದವು. ಕೆಲವೊಂದು ಹಬ್ಬಗಳು ಸಾರ್ವತ್ರಿಕವಾದರೆ ಮತ್ತೆ ಕೆಲವು ಪ್ರಾದೇಶಿಕ ವೈಶಿಷ್ಟ್ಯಗಳಿಗನುಗುಣವಾಗಿ ಆಚರಿಸಲ್ಪಡುತ್ತಿದ್ದವು. ಮಲೆನಾಡಿನ ಪ್ರದೇಶದಲ್ಲಿ ಭೂಮಿ ಹುಣ್ಣಿಮೆ, ಎಳ್ಳಅಮಾವಾಸೆ, ಕಾರಹುಣ್ಣಿಮೆ ಮುಂತಾದವು ಆ ಪ್ರದೇಶದ ಸಾಂಸ್ಕೃತಿಕ ಧಾರ್ಮಿಕ ವೈಶಿಷ್ಟ್ಯವನ್ನು ಅನಾವರಣಗೊಳಿಸಿದರೆ, ಹಾರ್ಡಿಯವರ ವೆಸೆಕ್ಸ್‌ನ ಎಗ್ಡನ್ ಹೀತ್‌ನ ಪ್ರದೇಶದಲ್ಲಿ ಚಳಿಗಾಲದ ಪ್ರಾರಂಭದಲ್ಲಿ ಪ್ರತಿವರ್ಷದ ನವೆಂಬರ್ 5 ರಂದು ನಡೆಯುವ ಬಾನ್‌ಫೈರ್ (ದೀಪೋತ್ಸವ) ಪ್ರಕೃತಿಯ ಆಚರಣೆಯಾಗಿದೆ ಮತ್ತೊಂದು 'ಮೇ ಹಬ್ಬ' ಅಥವಾ 'ಮೇ ಪೋಲ್' ಆಚರಣೆ ಇದೂ ಸಹ ಧಾರ್ಮಿಕ ಆಚರಣೆಗಿಂತ ಮುಖ್ಯವಾಗಿ ಪ್ರಕೃತಿಯ ಆಚರಣೆಯಾಗಿತ್ತು. ಇವೆರಡೂ ಆಚರಣೆಗಳು ಪೇಗನ್ ಸಂಸ್ಕೃತಿಯ ಭಾಗವಾಗಿದ್ದವು. ಮಲೆನಾಡಿನ ದೇಸಿಯ ಬದುಕಿನಲ್ಲಿ ಧಾರ್ಮಿಕ ಶ್ರದ್ಧೆ, ಭಕ್ತಿ, ಭಾವನೆಗಳು ಮುಖ್ಯವಾವಾದರೆ ವೆಸೆಕ್ಸ್‌ನ ಪ್ರದೇಶದಲ್ಲಿ ಸಾಮೂಹಿಕ ಮನರಂಜನೆ, ಪ್ರಕೃತಿ ಪೂಜೆ, ಆತ್ಮಾರಾಧನೆ, ಸ್ಥೈರ್ಯ ವಿನೋದಗಳು ಮುಖ್ಯವಾಗಿದ್ದವು. ಮಲೆನಾಡಿನಲ್ಲಿ ಜನರು ಭಕ್ತಿ ಭಾವನೆಗಳಿಂದ ದೇವ–ದೇವತೆಗಳನ್ನು, ಅಗೋಚರ ಶಕ್ತಿಗಳನ್ನು ಆರಾಧಿಸಿದರೆ, ವೆಸೆಕ್ಸ್‌ನಲ್ಲಿ ಜನ ಸಾಮೂಹಿಕ ನೃತ್ಯದಲ್ಲಿ ಮೈಮರೆಯುತ್ತಿದ್ದರು. ವನಭೋಜನ, ಸಂತೋಷಕೂಟಗಳು ಪ್ರತಿ ಋತು ಪೂರ್ವದ ಸತ್ಯಗಳೆನಿಸಿದ್ದವು. ಕೆಲವೊಂದು ಧಾರ್ಮಿಕ ಆಚರಣೆ ನಂಬಿಕೆಗಳಲ್ಲಿ ಕುವೆಂಪು ಮತ್ತು ಹಾರ್ಡಿಯವರ ಕಾದಂಬರಿಗಳಲ್ಲಿ ಭಿನ್ನತೆಯನ್ನು ಕಾಣುತ್ತೇವೆ. ಆದರೆ ನಂಬಿಕೆ ವಿಷಯ ಬಂದಾಗ ವೆಸೆಕ್ಸ್‌ನ ಜನರು ಮತಾಂತರಗೊಂಡ ನಂತರ ಕ್ರೈಸ್ತಮತಾವಲಂಬಿಗಳಾಗಿ, ಆ ಧರ್ಮದ ಆಚರಣೆಯನ್ನು ಅನುಸರಿಸುವುದು ಮಲೆನಾಡಿನ ಮುಗ್ಧ ಜನರ ದೈವಿಕ ನಂಬಿಕೆಯನ್ನು ಹೋಲುತ್ತದೆ.

ಮಲೆನಾಡಿನಲ್ಲಿ ಆಚರಿಸುತ್ತಿದ್ದ ಭೂಮಿ ಹುಣ್ಣಿಮೆ ಮತ್ತು ವೆಸೆಕ್ಸ್‌ನಲ್ಲಿ ಆಚರಿಸುತ್ತಿದ್ದ ಬಾನ್‌ಫೈರ್ (ದೀಪೋತ್ಸವ)ಗಳೆರಡೂ ಒಂದೇ ರೀತಿಯಾಗಿ ಕಾಣುತ್ತವೆ. ಎರಡೂ ಆಚರಣೆಗಳು ಹೆಚ್ಚು ಕಡಿಮೆ ಒಂದೇ ಅವಧಿಯಲ್ಲಿ ಬರುತ್ತಿದ್ದು, ಎರಡೂ ಹಬ್ಬಗಳು ದೇಸಿಯ ಬದುಕಿನ ಸಮೃದ್ಧಿಯ ಮತ್ತು ನವಚೈತನ್ಯದ ಸಂಕೇತಗಳಾಗಿದ್ದವು. ಮಲೆನಾಡಿನ ಮತ್ತೊಂದು ಆಚರಣೆ 'ಕಳಮಶ್ರೀ' ಎಂದರೆ ಭೂಮಿಯನ್ನು ಪೂಜಿಸುವುದು. ಭೂಮಿಯಲ್ಲಿ ಬಂದ ಹೊಸ ಫಸಲನ್ನು ಪಡೆಯುವ ಮೊದಲು ಭೂಮಿತಾಯಿಗೆ ಪೂಜೆ ಸಲ್ಲಿಸುವುದು ವಾಡಿಕೆಯಾಗಿತ್ತು. ಇಂತಹ ಆಚರಣೆಗಳನ್ನು ನೋಡಿದಾಗ ದೇಸಿಯ ಬದುಕು ಪ್ರಕೃತಿಯೊಡನೆ ಹೊಂದಿದ್ದ ಅವಿನಾಭಾವ

ಸಂಬಂಧವನ್ನು ಗಮನಿಸಬಹುದು. ಹೊರಜಗತ್ತಿನ ಸಂಬಂಧ, ಸಂಪರ್ಕವಿಲ್ಲದ ಆಡಂಬರವಿಲ್ಲದ ಮುಗ್ಧ ಗ್ರಾಮ ವಾಸಿಗಳಿಗೆ ಇಂತಹ ವಾರ್ಷಿಕ ಆಚರಣೆಗಳು, ಮಾನಸಿಕ, ಸಾಮಾಜಿಕ ಕೌಟುಂಬಿಕ ಬದುಕಿಗೆ ಸಾರ್ಥಕತೆಯನ್ನು ತಂದು ಕೊಡುತ್ತಿದ್ದವು. ಆದರೆ ಜಾಗತೀಕರಣದಿಂದ ಉಂಟಾದ ನಗರೀಕರಣ, ವಲಸೆ ಮತ್ತು ಆಧುನೀಕರಣದ ಪ್ರಭಾವ ಗ್ರಾಮೀಣ ಪ್ರದೇಶದಲ್ಲಿ ಜನರೆಲ್ಲ ಒಟ್ಟಾಗಿ ಸೇರಿ ಆಚರಿಸಿ ಸಂಭ್ರಮಿಸುತ್ತಿದ್ದ ಹಬ್ಬಗಳು, ಜಾತ್ರೆಗಳು ಇಂದು ಯಾಂತ್ರೀಕೃತಗೊಂಡು ಅಡಂಬರದ ಫ್ಯಾಶನ್ ಸಂಸ್ಕೃತಿಯಾಗಿ ರೂಪತಳೆಯುತ್ತಿವೆ. ಸಾಮಾನ್ಯವಾಗಿ ಹಬ್ಬಗಳನ್ನು ಮನೆಮಂದಿಯೆಲ್ಲ ಒಟ್ಟಾಗಿ ಸೇರಿ ಆಚರಿಸುವುದು ರೂಢಿ, ಆ ನೆಪದಲ್ಲಾದರೂ ಕುಟುಂಬದ ಸದಸ್ಯರೆಲ್ಲರೂ ಒಟ್ಟಿಗೆ ಸೇರಬಹುದೆಂಬ ಭಾವನೆಯಿಂದ ಮತ್ತು ಮನಸ್ಸುಗಳು ಜೀವನದ ಜಂಜಾಟದಿಂದ ಹೊರಬಂದು ಹಗುರವಾಗುತ್ತವೆ ಹಾಗೂ ಅನುಭವ ಮತ್ತು ಸಂಬಂಧಗಳು ಗಟ್ಟಿಗೊಳ್ಳುತ್ತವೆ ಎನ್ನುವ ಭಾವನೆ ಹಿಂದಿನವರಿಗೆ ಇದ್ದುದರಿಂದಲೇ ಹಬ್ಬಗಳ ಆಚರಣೆಗೆ ಅರ್ಥವಿತ್ತು. ಇಂದು ಹಬ್ಬಗಳು ಗ್ರಾಹಕ ಸಂಸ್ಕೃತಿಯ, ಲೆಕ್ಕಾಚಾರದ, ಆಡಂಬರದ ಉತ್ಸವಗಳಾಗಿವೆ. ಹಬ್ಬದ ಪ್ರತಿಯೊಂದು ಕಾರ್ಯವನ್ನು ಗುತ್ತಿಗೆಗೆ ಕೊಡುವುದು, ಮನೆಯಲ್ಲಿ ಸಿದ್ದಪಡಿಸುವ ಅಡಿಗೆ ಬದಲು ಕ್ಯಾಟರಿಂಗ್‌ಗೆ ಆರ್ಡರ್ ಮಾಡುವುದು ಮುಂತಾದ ಆಧುನಿಕ ಶೈಲಿಯ ಹಬ್ಬದ ಆಚರಣೆಗಳು ಇಂದು ಸಾಮಾನ್ಯವೆನಿಸಿವೆ. ಜಾಗತೀಕರಣದಿಂದ ಬಳುವಳಿಯಾಗಿ ಬಂದ ಒತ್ತಡದ ಧಾವಂತ ಎಲ್ಲರನ್ನೂ ಕಾಡುತ್ತಿದೆ. ಯಾವುದರಲ್ಲೂ ತನ್ಮಯರಾಗಲು, ಲೀನವಾಗಲು ಸಾಧ್ಯವಾಗದ ಸ್ಥಿತಿಯನ್ನು ಎಲ್ಲೆಡೆ ಕಾಣುತ್ತಿದ್ದೇವೆ. ಇದು ಜಾಗತೀಕರಣದ ಫಲವಾಗಿದೆ. ಹೀಗೆ ಜೀವವಿರೋಧಿ ಜಾಗತೀಕರಣ ನಮ್ಮ ಪರಂಪರಾಗತ ಸಾಂಸ್ಕೃತಿಕ ಲೋಕವನ್ನು ಕಬಳಿಸುತ್ತಿರುವುದು ಆತಂಕದ ವಿಷಯವಾಗಿದೆ. ಪಾಶ್ಚಿಮಾತ್ಯ ಸಂಸ್ಕೃತಿಯ ಅನುಕರಣೆಯ ಗುಂಗಿನಲ್ಲಿ ದೇಸಿ ಸಂಸ್ಕೃತಿಯ ನೆಲೆಗಳಾದ ಹಾಡು, ಹಸೆ, ಹಬ್ಬ, ಉಡುಗೆ, ಜಾನಪದದ ಮಟ್ಟು ಈ ಎಲ್ಲಾ ಕಲಾ ಕೌಶಲ್ಯಗಳನ್ನು ಜಾಗತೀಕರಣದ ಸುನಾಮಿ ಅಲೆ ಕೊಚ್ಚಿ ಹಾಕಿದೆ' ಎನ್ನುವ ಮಾತುಗಳಿಂದ ದೇಸಿಯ ಹಬ್ಬ, ಜಾತ್ರೆ ಉತ್ಸವಗಳ ಮೇಲೆ ಜಾಗತೀಕರಣದ ಪ್ರಭಾವವನ್ನು ಮನಗಾಣಬಹುದಾಗಿದೆ.[28]

ಧಾರ್ಮಿಕ ಸ್ಥಳಗಳಿಗೆ ತಮ್ಮ ಕಷ್ಟ, ನಷ್ಟಗಳು ರೋಗರುಜಿನಗಳು ದೂರವಾಗಲೆಂದು ಭೇಟಿಕೊಡುವುದು ಅಥವಾ ಪ್ರವಾಸ ಹೋಗುವುದು ಮಲೆನಾಡಿನ ದೇಸಿಯ ಬದುಕಿನಲ್ಲಿ ಸಾಮಾನ್ಯವಾಗಿತ್ತು. ಧರ್ಮಸ್ಥಳ, ತಿರುಪತಿ ಮುಂತಾದ ಸ್ಥಳಗಳಿಗೆ ತೀರ್ಥಯಾತ್ರೆ ಕೈಗೊಂಡರೆ ಹರಕೆ ಹೊತ್ತು ಕಾಣಿಕೆ ಸಲ್ಲಿಸಿದರೆ ತಮ್ಮ ಕಷ್ಟನಷ್ಟಗಳು, ರೋಗರುಜಿನಗಳು ದೂರವಾಗುತ್ತವೆ ಎಂಬ ನಂಬಿಕೆ ದೇಸಿಯ ಬದುಕಿನಲ್ಲಿತ್ತು ಎನ್ನುವುದು ಕುವೆಂಪುರವರ ಕಾದಂಬರಿಗಳಲ್ಲಿ ಉಲ್ಲೇಖಿತವಾಗಿದೆ. ಆದರೆ ಹಾರ್ಡಿಯವರ ಕಾದಂಬರಿಗಳಲ್ಲಿ ತೀರ್ಥಯಾತ್ರೆಯ ಬಗ್ಗೆ

ಯಾವುದೇ ವಿವರಣೆಯನ್ನು ಕಾಣಲಾಗುವುದಿಲ್ಲ, ಆದ್ದರಿಂದ ಇದು ಮಲೆನಾಡಿನ ದೇಸಿಯ ಬದುಕಿಗೆ ಮಾತ್ರ ಸೀಮಿತವಾಗಿತ್ತು ಎನ್ನಬಹುದು.

ಹಬ್ಬ ಜಾತ್ರೆ–ಉತ್ಸವ, ಧಾರ್ಮಿಕ ನಂಬಿಕೆಗಳಲ್ಲದೇ ಮಲೆನಾಡಿನ ಮತ್ತು ವೆಸೆಕ್ಸ್‌ನ ದೇಸಿಯ ಬದುಕಿನಲ್ಲಿ ಜನರು ಇತರೆ ಅಲೌಕಿಕ, ಅಗೋಚರ ಶಕ್ತಿಗಳಲ್ಲಿಯೂ ನಂಬಿಕೆ ಇಟ್ಟುಕೊಂಡಿದ್ದರು ಸಾಮಾನ್ಯವಾಗಿ ಪ್ರತಿಯೊಂದು ಸಮಾಜದಲ್ಲೂ ಜನರು ಅನಾದಿ ಕಾಲದಿಂದಲೂ ಪುನರಾವರ್ತನೆಗೊಳ್ಳುತ್ತಾ ಬಂದಿರುವ ರೂಢಿಗಳಲ್ಲಿ ನಂಬಿಕೆಯನ್ನಿಟ್ಟು ಅವುಗಳನ್ನು ಆಚರಿಸುತ್ತಾ, ಅನುಕರಿಸುತ್ತಾ ಬಂದಿರುವುದನ್ನು ದೇಸಿಯ ಸಂಸ್ಕೃತಿಯಲ್ಲಿ ಕಾಣುತ್ತೇವೆ. ಇಂತಹ ರೂಢಿ–ಪದ್ಧತಿಗಳ ಹಿಂದೆ ಅಪಾರವಾದ ಜೀವನಾನುಭವ, ನೈತಿಕ–ಧಾರ್ಮಿಕ ನೆಲೆಗಟ್ಟು, ಸಾಮಾಜಿಕ, ಭೌಗೋಳಿಕ ಪರಿಸರ ಮುಂತಾದ ಅಂಶಗಳು ಪ್ರೇರಕಶಕ್ತಿಗಳಾಗಿವೆ. ಇಂತಹ ರೂಢಿ ಪದ್ಧತಿಗಳು ಮೂಢನಂಬಿಕೆಗಳಾಗಿರಬಹುದು. ಆದರೆ ಅಂತಹ ನಂಬಿಕೆಗಳು ಜೀವನದ ಸಾರ್ಥಕತೆಗೆ ಸಹಕಾರಿಯಾಗಿರುವುದು ಸ್ಪಷ್ಟವಾಗಿದೆ. ಶಕುನಗಳಲ್ಲಿ ನಂಬಿಕೆ ಸಾಮಾನ್ಯವಾಗಿತ್ತು. ಕಾಗೆ ಕೂಗಿದರೆ, ಅಡ್ಡಬಂದರೆ, ಬಾಗಿಲ ಚೌಕಟ್ಟಿಗೆ ತಲೆ ಬಡಿದರೆ ಅಪಶಕುನ ಎನ್ನುವ ನಂಬಿಕೆ, ಬೇಸಾಯದ ಪ್ರಾರಂಭದಲ್ಲಿ ನೇಗಿಲು ಮುರಿದರೆ, ನಡೆಯುವಾಗ ಕಲ್ಲು ಎಡವಿದರೆ ಅಶುಭವಾಗುತ್ತದೆ ಎನ್ನುವ ನಂಬಿಕೆ ಮಲೆನಾಡಿನ ದೇಸಿಯ ಬದುಕಿನಲ್ಲಿತ್ತು. ಹುಲಿ ಎನ್ನುವುದಕ್ಕೆ ಬದಲಾಗಿ 'ನರಿ' ಎನ್ನವುದು, ಹಾವು ಕಚ್ಚಿದರೆ 'ಬಳ್ಳಿ ಮುಟ್ಟಿದೆ' ಎಂದು ಹೇಳುವಾಗ, ಭಯವನ್ನು ಮರೆಸಲು ಇದ್ದ ನಂಬಿಕೆ ಒಂದೆಡೆಯಾದರೆ ಕೇಡಿನಿಂದ ತಪ್ಪಿಸಿಕೊಳ್ಳಲು 'ಒಳ್ತು', ಒಳಿತು' ಎನ್ನುವುದು ಮಲೆನಾಡಿನ ಪ್ರದೇಶದಲ್ಲಿ ರೂಢಿಯಲ್ಲಿದ್ದವು ಮಾಟ, ಮಂತ್ರ, ತಾಯಿತ, ಚೀಟಿ–ಬೂದಿ ಮುಂತಾದ ಮೂಢನಂಬಿಕೆಗಳೂ ಸಹ ಜನರ ಮನಸ್ಸನ್ನಾಳುತ್ತಿದ್ದವು ಎಂಬುದು ಕುವೆಂಪು ಕಾದಂಬರಿಗಳಿಂದ ತಿಳಿಯುತ್ತದೆ.

ಮಡಿ–ಮೈಲಿಗೆ ಮುಟ್ಟು–ಚಿಟ್ಟು ಮತ್ತು ಅಸ್ಪೃಶ್ಯತೆಯ ವಿಷಯಗಳು ಸಹ ದೇಸಿಯ ಬದುಕಿನಲ್ಲಿ ಆಚರಣೆಯಲ್ಲಿದ್ದವು. ಮುಟ್ಟಾದ ಹೆಂಗಸರು ಮನೆಯೊಳಗೆ ಪ್ರವೇಶಿಸುವಂತಿರಲಿಲ್ಲ, ದೇವರ ಮುಂದಿನ ದೀಪ ಆಕಸ್ಮಿಕವಾಗಿ ಆರಿದರೆ ಅಮಂಗಳವಾಗುತ್ತದೆ ಎನ್ನುವಾಗ ಸ್ಥಳೀಯರು ದೇವರ ಬಗ್ಗೆ ಇದ್ದ ಭಯ ಮತ್ತು ಗೌರವ ನಂಬಿಕೆಯನ್ನು ಸೂಚಿಸುತ್ತದೆ. ಭೂತದ ಬನಕ್ಕೆ ಅಸ್ಪೃಶ್ಯರು ಅಥವಾ ಮುಟ್ಟಾಳುಗಳು ಪ್ರವೇಶಿಸಿದರೆ ಅವರಿಗೆ ಕೇಡಾಗುತ್ತದೆ ಎನ್ನುವ ನಂಬಿಕೆ ಮತ್ತು ಮುಟ್ಟಾದ ಹೆಂಗಸರು ಪ್ರವೇಶಿಸಿದರೆ ರಕ್ತಕಾರಿ ಸಾಯುತ್ತಾರೆ ಎನ್ನುವ ನಂಬಿಕೆ ಮಲೆನಾಡಿನಲ್ಲಿ ಬಲವಾಗಿತ್ತು. ಆದರೆ ಇಂತಹ ನಂಬಿಕೆಯ ಹಿಂದೆ ತೋಟ, ಗದ್ದೆ, ಹಿತ್ತಲುಗಳ

ರಕ್ಷಣೆಯ ಹಿತಾಸಕ್ತಿ ಮುಖ್ಯ ಕಾರಣವಾಗಿತ್ತು. ಮೈಮೇಲೆ ದೆಯ್ಯ ಬರುವುದು, ಶಕುನದ ಹಕ್ಕಿ ಶುಭ-ಅಶುಭ ನುಡಿಯುತ್ತದೆ ಎನ್ನುವ ನಂಬಿಕೆ. ಸ್ಮಶಾನದಲ್ಲಿ ರಾತ್ರಿಯ ವೇಳೆ ಮತ್ತು ಅಮಾವಾಸ್ಯೆಯಲ್ಲಿ ಮಸಣಿ ಕಾಣಿಸಿಕೊಳ್ಳುತ್ತದೆ, ಮಟಮಟ ಮಧ್ಯಾಹ್ನ ರಣ ತಿರುಗುತ್ತದೆ ಎಂಬ ಭೀತಿ ಸ್ಥಳೀಯರಲ್ಲಿ ಮನೆಮಾಡಿತ್ತು. ಮಲೆನಾಡಿನ ಪರಿಸರದಲ್ಲಿದ್ದ ನಂಬಿಕೆಗಳು, ರೂಢಿ-ಸಂಪ್ರದಾಯಗಳು, ದೆವ್ವ ಭೂತಗಳಲ್ಲಿ ನಂಬಿಕೆ ಮುಂತಾದವುಗಳು ಹಾರ್ಡಿಯವರ ವೆಸೆಕ್ಸ್‌ನ ಗ್ರಾಮೀಣ ಪ್ರದೇಶದಲ್ಲೂ ಜನರ ಮನಸ್ಸನ್ನಾಳುತ್ತಿದ್ದವು ಎನ್ನುವುದು ಸ್ಪಷ್ಟವಾಗಿದೆ. ಇಂತಹ ನಂಬಿಕೆ, ರೂಢಿ, ಸಂಪ್ರದಾಯಗಳಿಂದ ಯಾವ ಸಮಾಜವೂ ಮುಕ್ತವಾಗಿರಲಿಲ್ಲ ಎನ್ನುವುದನ್ನು ತಿಳಿಸುತ್ತದೆ. ಎಗ್ಡನ್ ಹೀತ್‌ನ ಹಳ್ಳಿಯ ಜನರೂ ಸಹ ಅಮಾವಾಸ್ಯೆಯ ಬಗ್ಗೆ ದೆವ್ವ ಭೂತದ ಬಗ್ಗೆ ಭಯ ವ್ಯಕ್ತಪಡಿಸುವುದನ್ನು ಕಾಣುತ್ತೇವೆ. ಅಮಾವಾಸ್ಯೆಯ ರಾತ್ರಿಯಲ್ಲಿ ಪಿಶಾಚಿಗಳು ಸಂಚರಿಸುತ್ತವೆ, ಅವು ಶ್ವೇತ ವರ್ಣದವು ಎನ್ನುವ ನಂಬಿಕೆ ಅವರದು. ಮಾಟ ಮಂತ್ರಗಳೂ ಸಹ ವೆಸೆಕ್ಸ್‌ನ ಜನರ ಮೇಲೆ ಪರಿಣಾಮ ಬೀರಿದ್ದವು ಎನ್ನುವುದನ್ನು ಹಾರ್ಡಿಯವರ ಎರಡೂ ಕಾದಂಬರಿಗಳಲ್ಲಿ ವಿವರಿಸಲಾಗಿದೆ. ಮಾಟ ಮಂತ್ರಗಳಿಂದ ತಮ್ಮ ಶತ್ರುಗಳನ್ನು ನಾಶಮಾಡಬಹುದು ಎನ್ನುವ ಕ್ರೂರವಾದ ನಂಬಿಕೆಯೂ ಸಹ ಮಲೆನಾಡಿನ ಮುಗ್ಧ ಜನರ ನಂಬಿಕೆಯನ್ನು ಹೋಲುತ್ತದೆ. ತಾಯಿತ, ಚೀಟಿ-ಬೂದಿ, ಸತ್ಯನಾರಾಯಣ ವ್ರತ ಮುಂತಾದ ಪರಿಹಾರಿಕ ಅಂಶಗಳು ಅಲ್ಲಿ ಇಲ್ಲದಿದ್ದರೂ, ಕಷ್ಟನಷ್ಟಗಳು ಸಂಭವಿಸಿದಾಗ ಮಾಂತ್ರಿಕರನ್ನು ಭೇಟಿಮಾಡುವುದು, ಕಾರಣ ತಿಳಿಯುವುದು ವೆಸೆಕ್ಸ್‌ನ ಜನರಲ್ಲಿತ್ತು. ನಡೆಯುವಾಗ ಮುಳ್ಳು ಚುಚ್ಚಿದರೆ, ಜ್ಯೋತಿಷ್ಯ ಹೇಳುವ ಪುಸ್ತಕವನ್ನು ರಾತ್ರಿ ಮನೆಯಲ್ಲಿಟ್ಟರೆ ಕೇಡು ಸಂಭವಿಸುತ್ತದೆ, ಹಗಲು ವೇಳೆ ಕೋಳಿ ಕೂಗಿದರೆ ಕೇಡಾಗುತ್ತದೆ ಎನ್ನುವ ಎಗ್ಡನ್ನಿಗರ ನಂಬಿಕೆ ಮತ್ತು ಮಲೆನಾಡಿನ ಜನರ ಅನೇಕ ಮೂಢ ನಂಬಿಕೆಗಳು ಒಂದೇ ರೀತಿಯಾಗಿದ್ದವು ಎಂದ ಮೇಲೆ, ದೇಸಿಯ ಬದುಕನ್ನು ನಿರ್ದೇಶಿಸುವುದರಲ್ಲಿ ಅವುಗಳ ಪ್ರಾಮುಖ್ಯತೆಯನ್ನು ಮನಗಾಣಬಹುದು.

ಮಾಟ, ಮಂತ್ರ ಹರಕೆ ಮತ್ತು ಬಲಿ ದೇಸಿಯ ಸಂಸ್ಕೃತಿಯಲ್ಲಿ ಸಾಮಾನ್ಯವಾಗಿದ್ದವು. ಇವುಗಳನ್ನು ಆಚರಿಸುವುದು, ಅನುಕರಿಸುವುದರ ಮೂಲಕ ಅವುಗಳು ಪೀಳಿಗೆಯಿಂದ ಪೀಳಿಗೆಗೆ ರೂಢಿಯಾಗಿ ಬಂದಿವೆ. ಅತಿಮಾನುಷ, ಅಗೋಚರ ಶಕ್ತಿಗಳಲ್ಲಿ ನಂಬಿಕೆ, ಭಯ ಮಿಶ್ರಿತ ಗೌರವ ವ್ಯಕ್ತಪಡಿಸುವುದು ಸ್ಥಳೀಯರಲ್ಲಿ ಕಾಣುತ್ತೇವೆ. ಮಂತ್ರಿಸಿ ನೀಡುವ ವಸ್ತುಗಳಲ್ಲಿ ಯಾವುದೋ ಶಕ್ತಿಯಿದೆ ಅದರಿಂದ ಒಳಿತು- ಕೆಡುಕುಗಳಾಗುತ್ತವೆ ಎನ್ನುವ ಬಲವಾದ ನಂಬಿಕೆ ವೆಸೆಕ್ಸ್ ಮತ್ತು ಮಲೆನಾಡಿನ ಜನರಲ್ಲಿತ್ತು. ತಮ್ಮ ವಿರೋಧಿಗಳನ್ನು ಮಣಿಸಲು, ಕಳೆದು ಹೋದ ವಸ್ತುಗಳನ್ನು ಪತ್ತೆ ಹಚ್ಚಲು ಭೂತರಾಯನಿಗೆ ಹರಕೆ ಕಟ್ಟುವುದು, ನಿಮಿತ್ತ ಕೇಳುವುದು, ಮೈಮೇಲೆ ಬಂದು

ಹೇಳಿಕೆ ನೀಡುವುದು ಮುಂತಾದ ಮಾಂತ್ರಿಕ ಶಕ್ತಿಯನ್ನು ಜನರು ನಂಬಿಕೆಯಿಟ್ಟಿದ್ದರು ಎಂಬುದನ್ನು ಕುವೆಂಪುರವರ ಕಾದಂಬರಿಗಳಲ್ಲಿ ಕಾಣುತ್ತೇವೆ. ಭೂತಾರಾಧನೆ ಮಲೆನಾಡಿನಲ್ಲಿ ಸಾಮಾನ್ಯವಾಗಿತ್ತು. ಈ ಪ್ರದೇಶದ ಜನರು ಶಿಷ್ಟ ದೇವರನ್ನು ಆರಾಧಿಸಿದರೆ ಘಟ್ಟದ ಕೆಳಗಿನಿಂದ ವಲಸೆ ಬಂದವರು ಕ್ಷುದ್ರ ದೇವತೆಗಳಾದ ಭೂತದ ಕೋಲ ಪಂಜುರ್ಲಿ, ಜಕಣಿ ಮುಂತಾದವುಗಳನ್ನು ಆರಾಧಿಸುತ್ತಿದ್ದರು. ಪ್ರತಿಯೊಂದು ಮನೆಯವರೂ ಹತ್ತಾರು ಅಂತರಬೆಂತರ ಭೂತ ಪಿಶಾಚಿಗಳನ್ನು ಪೂಜಿಸುತ್ತಿದ್ದರು ಎನ್ನುವುದನ್ನು ಗಮನಿಸಿದರೆ ಮಲೆನಾಡಿನಲ್ಲಿ ಭೂತರಾಧನೆಯ ಮಹತ್ವ ತಿಳಿಯುತ್ತದೆ. ಅವುಗಳ ಮೇಲಿನ ಭಯದಿಂದ, ಅವುಗಳಿಗೆ ಹರಕೆ ಕಟ್ಟುವುದು ಬಲಿಕೊಡುವುದು ವಾಡಿಕೆಯಾಗಿತ್ತು. ಹರಕೆ ಮತ್ತು ಬಲಿಗಳಲ್ಲಿಯೂ ಅನೇಕ ರೀತಿಗಳಿದ್ದವು. ಭೂತ ಪಿಶಾಚಿಗಳ ಶಕ್ತಿಗನುಸಾರವಾಗಿ ಬಲಿ ಕೊಡುತ್ತಿದ್ದರು. ದೆಯ್ಯದ ಹರಕೆ ಎಂದರೆ ಮಲೆನಾಡಿನ ಜನರಿಗೆ ಮಹಾಸಂಭ್ರಮವನ್ನುಂಟು ಮಾಡುತ್ತಿತ್ತು. ದೆಯ್ಯ ದ್ಯಾವರುಗಳಿಗೆ ಬಲಿಯಾಗುತ್ತಿದ್ದ ಪ್ರಾಣಿಗಳಿಂದ ಅವರ ಹೊಟ್ಟೆಗೂ ಹಬ್ಬವಾಗುತ್ತಿತ್ತು ಬಲಿಕೊಡುವ ವಿಧಾನವಂತೂ ಭೀಭತ್ಸಕಾರಿಯಾಗಿತ್ತು ಎನ್ನುವುದನ್ನು ಕುವೆಂಪುರವರ ಕಾದಂಬರಿಗಳಲ್ಲಿ ಕಾಣುತ್ತೇವೆ. ಹಾಗೆಯೇ ಮೈಮೇಲೆ ಬಂದವರಿಗೆ ಅಥವಾ ದೆಯ್ಯ ಹಿಡಿದರವರಿಗೆ ನೀಡುವ ಶಿಕ್ಷೆಯೂ ಅಷ್ಟೇ ಕಠಿಣವಾಗಿತ್ತು ಮತ್ತು ಅಮಾನವೀಯತೆಯಿಂದ ಕೂಡಿತ್ತು.

ದೇಸಿ ಅಥವಾ ನಾಟಿ ವೈದ್ಯ ಪದ್ದತಿ ಮಲೆನಾಡಿನ ಬದುಕಿನ ಭಾಗವಾಗಿತ್ತು. ಆಧುನಿಕ ವೈದ್ಯಪದ್ಧತಿ ಸಾರಿಗೆ-ಸಂಪರ್ಕ, ಶಿಕ್ಷಣ ಸವಲತ್ತುಗಳಿಂದ ದೂರವಿದ್ದ ಮಲೆನಾಡಿನಘಟ್ಟ ಪ್ರದೇಶದ ಜನರು ರೋಗರುಜಿನೆಗಳು ಬಂದಾಗ ಮೊದಲು ಜೋಯಿಸರನ್ನು, ಮಂತ್ರವಾದಿಗಳನ್ನು ನಂತರ ದೇಸಿ ವೈದ್ಯರನ್ನು ಭೇಟಿಮಾಡುತ್ತಿದ್ದರು. ಸಣ್ಣ ಪುಟ್ಟ ಖಾಯಿಲೆಗಳಿಗೆ ಮನೆಯಲ್ಲಿಯೇ ಮನೆಮದ್ದು ತಯಾರಿಸಿಕೊಳ್ಳುತ್ತಿದ್ದರು. ದೇಸಿ ವೈದ್ಯ ಪದ್ಧತಿ ಪರಂಪರಾಗತವಾಗಿ ಬೆಳೆದು ಬಂದಿದ್ದು, ಮಲೆನಾಡಿನ ದೇಸಿಯ ಪರಿಸರದಲ್ಲಿ ಸಾಮಾನ್ಯವಾಗಿ ಕಾಡುತ್ತಿದ್ದ ಖಾಯಿಲೆಗಳನ್ನು ಗುಣಪಡಿಸಲು ಬಳಸುತ್ತಿದ್ದರು. ಗಿಡ-ಮೂಲಿಕೆಗಳ ಬಗ್ಗೆ ಜ್ಞಾನವುಳ್ಳ 'ಪಂಡಿತರು' ಇಂತ ದೇಸಿ ವೈದ್ಯ ಪದ್ಧತಿಯ ವಕ್ತಾರರಾಗಿದ್ದರು. ಆಳವಾದ ಜೀವನಾನುಭವ, ಪ್ರಕೃತಿಯೊಂದಿಗಿನ ಒಡನಾಟ, ಗಿಡ ಮೂಲಿಕೆಗಳ ಪರಿಚಯ ಮತ್ತು ಅವುಗಳಲ್ಲಿನ ಖಾಯಿಲೆಗಳನ್ನು ವಾಸಿಮಾಡುವ ಗುಣ ಮುಂತಾದ ವಿಷಯಗಳು ದೇಸಿ ವೈದ್ಯಪದ್ಧತಿಯ ಪ್ರಾಮುಖ್ಯತೆಯನ್ನು ಹೆಚ್ಚಿಸಿ ಜನಪ್ರಿಯವಾಗಿದ್ದವು. ಇಂತಹ ದೇಸಿಯ ಜ್ಞಾನ ಪರಂಪರೆ, ಮಲೆನಾಡಿನ ಪ್ರದೇಶವಲ್ಲದೆ ವೆಸೆಕ್ಸ್ ಪ್ರದೇಶದಲ್ಲೂ ರೂಢಿಯಲ್ಲಿತ್ತು ಎನ್ನುವುದು ಹಾರ್ಡಿಯವರ ಕಾದಂಬರಿಗಳಿಂದ ತಿಳಿಯುತ್ತದೆ. ಗಿಡಮೂಲಿಕೆಗಳಿಂದ ತಯಾರಿಸಿದ ಚೂರ್ಣ, ಭಸ್ಮ, ಕಷಾಯ ಮುಂತಾದವು ದೈನಂದಿನ ಬದುಕಿನಲ್ಲಿ

ಆರೋಗ್ಯವರ್ಧಕಗಳಾಗಿ ಬಳಕೆಯಲ್ಲಿದ್ದವು. ಮಲೆನಾಡಿನ ಪರಿಸರದಲ್ಲಿದ್ದ ಅಸಂಖ್ಯಾತ ಸಸ್ಯ ಪ್ರಭೇದಗಳು ಅಲ್ಲಿನ ನಿವಾಸಿಗಳನ್ನು ಬಹಳವಾಗಿ ಕಾಡುತ್ತಿದ್ದ ಅನೇಕ ಖಾಯಿಲೆಗಳಿಗೆ ಔಷಧಿಗಳಾಗಿ ಬಳಕೆಯಾಗುತ್ತಿದ್ದವು. ಆದರೆ ಜಾಗತೀಕರಣದ ಮತ್ತು ಉದಾರೀಕರಣದ ಪರಿಣಾಮ ದೇಸಿ ವೈದ್ಯ ಪದ್ಧತಿಯನ್ನು ಕಡೆಗಣಿಸಲಾಯಿತು. ಶ್ರೀಮಂತ ರಾಷ್ಟ್ರಗಳು ಪೇಟೆಂಟ್ ಹೆಸರಿನಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಮೂಲಕ ದೇಸಿಯ ಜ್ಞಾನ ಪರಂಪರೆಯನ್ನು ದರೋಡೆ ಮಾಡತೊಡಗಿದರು. ಬಡರಾಷ್ಟ್ರಗಳಲ್ಲಿ ಯಥೇಚ್ಛವಾಗಿ ಸಿಗುತ್ತಿದ್ದ ಗಿಡಮೂಲಿಕೆಗಳನ್ನು ದರೋಡೆ ಮಾಡಿ ಪ್ರಯೋಗಾಲಯಗಳಲ್ಲಿ ಸಂಸ್ಕರಿಸಿ, ಬಣ್ಣ ಕಟ್ಟಿ ಆಕರ್ಷಣೀಯವಾದ ಹೆಸರುಗಳನ್ನಿಟ್ಟು ಮಾರುಕಟ್ಟೆಗೆ ಬಿಡುಗಡೆ ಮಾಡಿ, ಜಾಹಿರಾತಿನ ಮೂಲಕ ಜನರ ಮನಸ್ಸನ್ನು ಪ್ರೇರೇಪಿಸಿ ಮಾರಾಟ ಮಾಡುವುದರ ಮೂಲಕ ಹಣ ಮಾಡಿಕೊಳ್ಳುತ್ತಿರುವುದನ್ನು ಇಂದು ಕಾಣುತ್ತಿದ್ದೇವೆ.

ದೇಸಿಯ ಸಾಂಪ್ರದಾಯಿಕ ವೈದ್ಯ ಸಂಪತ್ತನ್ನು ಬೌದ್ಧಿಕ ಆಸ್ತಿ ಹಕ್ಕುಗಳ ಹೆಸರಿನಲ್ಲಿ ಬಹುರಾಷ್ಟ್ರೀಯ ಕಂಪೆನಿಗಳು ದೋಚುತ್ತಿರುವುದು ಇಂದು ಸಾಮಾನ್ಯವಾಗಿದೆ. ನಮ್ಮ ಜನಪದರ ದೇಸಿಯ ಜ್ಞಾನ ಪರಂಪರೆ ಉದಾರೀಕರಣದ ಹೆಸರಿನಲ್ಲಿ ಕೆಲವು ಬಹುರಾಷ್ಟ್ರೀಯ ಕಂಪನಿಗಳ ವಶವಾಗುತ್ತಿರುವುದು ವಿಷಾದ ಉಂಟುಮಾಡುತ್ತದೆ. ಹೀಗೆ ಸುಮಾರು ವರ್ಷಗಳಿಂದ ರೂಢಿಯಲ್ಲಿದ್ದ ಸಾಂಪ್ರದಾಯಿಕ ದೇಸಿ ವೈದ್ಯಪದ್ಧತಿ ಜಾಗತೀಕರಣದ ಕರಿನೆರಳಲ್ಲಿ, ಬಹುರಾಷ್ಟ್ರೀಯ ಕಂಪನಿಗಳ ಕಪಿಮುಷ್ಟಿಯಲ್ಲಿ ಸಿಲುಕಿ ನಾಶವಾಗುತ್ತಿರುವುದನ್ನು ಕಾಣುತ್ತೇವೆ.

ಹೀಗೆ ದೇಸಿಯ ಬದುಕು ಆಚಾರ, ವಿಚಾರ, ರೂಢಿ, ಸಂಪ್ರದಾಯ ಆಚರಣೆ, ಹಬ್ಬ, ಹರಿದಿನಗಳು, ಜಾತ್ರೆ, ಉತ್ಸವ ಮೊದಲಾದವು ಸಾಮಾಜಿಕ ಮತ್ತು ಭೌಗೋಳಿಕ ಅಂಶಗಳಿಂದ ರೂಪಿತಗೊಂಡು ಪ್ರಕೃತಿಯ ಮಡಿಲಿನಲ್ಲಿ ಜೀವತಳೆದು ಬೆಳೆದುಕೊಂಡು ಬಂದಿತ್ತು. ಜಾಗತೀಕರಣದ ಕರಿನೆರಳಿನಲ್ಲಿ ಬಂದ ವಸಾಹತೀಕರಣ, ಕೈಗಾರೀಕರಣ, ನಗರೀಕರಣ, ಆಧುನಿಕ ಸಂಸ್ಕೃತಿ, ತಾಂತ್ರಿಕ ವೈಜ್ಞಾನಿಕ ಆವಿಷ್ಕಾರಗಳು ದೇಸಿಯ ಸಂಸ್ಕೃತಿಯ ಮೇಲೆ ಪ್ರಭಾವ ಬೀರಲು ಪ್ರಾರಂಭಿಸಿದವು. ಗಾಢ ಮಣ್ಣಿನ ಸ್ಪರ್ಶದಿಂದ ಜೀವತಳೆದ ದೇಸಿಯ ಸಂಸ್ಕೃತಿಯ ಮೂಲ ಸೆಲೆಗಳಾದ ಹಳ್ಳಿಗಳು ಇಂದು ನಿರ್ಜನಗೊಂಡು ಭಣಗುಡುತ್ತಿವೆ. ಹಳ್ಳಿಗಳ ಒಳಗೆ ಕಾಲಿಟ್ಟರೆ ಸೂತಕದ ಮನೆ ಹೊಕ್ಕಂತಾಗುತ್ತದೆ. ಸದಾ ಚಲನಶೀಲತೆಯಿಂದ ಕಂಗೊಳಿಸುತ್ತಿದ್ದ ಹಳ್ಳಿಗಳು ಇಂದು ಬಿಕೋ ಎನ್ನುತ್ತಿವೆ. ಹಳ್ಳಿಯ ಯುವಕರು, ಮಧ್ಯವಯಸ್ಸಿನವರು ಕೆಲಸವನ್ನರಸಿ ನಗರದ ಜೀವನಕ್ಕೆ ಮನಸೋತು ತಾವು ಹುಟ್ಟಿ ಬೆಳೆದ ಊರುಗಳನ್ನು ಬಿಟ್ಟು ವಲಸೆ ಹೋಗಿದ್ದಾರೆ. ಒಟ್ಟು ಕುಟುಂಬಗಳಲ್ಲಿದ್ದ ಸದಸ್ಯರು ಇಂದು ಒಡೆದು ಹಂಚಿಹೋಗಿದ್ದಾರೆ.

ಹಳ್ಳಿಗಳಲ್ಲಿ ಯಾವ ಉತ್ಸಾಹವಾಗಲಿ, ಉಲ್ಲಸಿತ ಚಟುವಟಿಕೆಗಳಾಗಲಿ ಕಂಡು ಬರುತ್ತಿಲ್ಲ. ಹಬ್ಬ, ಹರಿದಿನ, ಉತ್ಸವ ಆಚರಣೆಗಳೂ ಮೊದಲಿನಂತಿಲ್ಲ. ಇವುಗಳಿಗೆಲ್ಲ ಕಾರಣ ಹಳ್ಳಿಗಳ ಮೂಲ ಸೆಲೆಯಾಗಿರುವ ಕೃಷಿಗೆ ಕುಠಾರಾಘಾತ ಬಿದ್ದಿರುವುದು. ಕೃಷಿ ಹಳ್ಳಿಯವರಿಗೆ ಜೀವನೋಪಾಯ ಮಾತ್ರ ಆಗಿರಲಿಲ್ಲ, ಅದೊಂದು ಜನಜೀವನವಾಗಿತ್ತು, ಅದೊಂದು ಜೀವನ ವಿಧಾನವಾಗಿತ್ತು. ಜೀವನ ಮಾರ್ಗದರ್ಶನವೂ, ಜೀವನ ದರ್ಶನವೂ ಆಗಿತ್ತು, ಅದೇ ಅವರ ಪಾಲಿನ ಸಂಸ್ಕೃತಿ.[29] ಆದರೆ ಇಂತಹ ದೇಸಿಯ ಕೃಷಿ ಜಾಗತೀಕರಣದ ಬಿರುಗಾಳಿಗೆ ಸಿಲುಕಿ, ಬಹುರಾಷ್ಟ್ರೀಯ ಕಂಪೆನಿಗಳ ಕಪಿಮುಷ್ಟಿಯಲ್ಲಿ ಕಮರಿ ಹೋಗುತ್ತಿದೆ. ಕೃಷಿ ಕ್ಷೇತ್ರದಲ್ಲಿದ್ದವರು ಬೇರೆ ಉದ್ಯೋಗಗಳನ್ನರಸಿಕೊಂಡು ನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ದೇಸಿಯ ಸಂಸ್ಕೃತಿಯ ಬೇರುಗಳು ಒಂದೊಂದಾಗಿ ಮಣ್ಣಿನ ಸಂಪರ್ಕ ಕಳೆದುಕೊಂಡು ಹಾರಾಡುತ್ತಿವೆ.

ಮಲೆನಾಡಿಗೆ ನವಜೀವನ ಕಾಲಿಟ್ಟಿತು ಎನ್ನುವ ಕುವೆಂಪುರವರ ಕಾದಂಬರಿ 'ಕಾನೂರು ಹೆಗ್ಗಡಿತಿ' ದೇಸಿಯ ಬದುಕಿಗೆ ನವನಾಗರೀಕತೆಯ, ಆಧುನಿಕ ಪರಿಕರಗಳೂ ಮತ್ತು ಸಾರಿಗೆ-ಸಂಪರ್ಕಗಳ ಆಗಮನವನ್ನು ಸೂಚ್ಯವಾಗಿ ತಿಳಿಸುತ್ತದೆ. ದೇಸಿಯ ಬದುಕು ಆಧುನಿಕ ಸಂಸ್ಕೃತಿಗೆ ನಿಧಾನವಾಗಿ ಆದರೆ ಸ್ಪಷ್ಟವಾಗಿ ಒಪ್ಪಿಕೊಳ್ಳುವುದನ್ನು ಹಾರ್ಡಿಯವರ 'ದಿ ರಿಟರ್ನ್ ಆಫ್ ದಿ ನೇಟಿವ್' ಕಾದಂಬರಿಯೂ ಸೂಚಿಸುತ್ತದೆ. ರಸ್ತೆ, ರೈಲು, ಆಸ್ಪತ್ರೆ, ಪೋಸ್ಟಾಫೀಸು ಮುಂತಾದ ಆಧುನಿಕ ಸೌಲಭ್ಯಗಳು ದೇಸಿಯ ಬದುಕಿನಲ್ಲಿ ಬದಲಾವಣೆಯ ಸೂಚಕಗಳಾಗಿ ಕಾಣಿಸಿಕೊಳ್ಳುತ್ತವೆ. ದಿನಪತ್ರಿಕೆಗಳು ವಿಶಾಲ ಪ್ರಪಂಚದ ವಿಚಾರಗಳನ್ನು ಹಳ್ಳಿಗಳಿಗೆ ತಲುಪಿಸುವುದರ ಮೂಲಕ ಜಾಗತೀಕರಣದ ವ್ಯಾಪ್ತಿಗೆ ಒಳಗಾಗುವುದನ್ನು ಕುವೆಂಪು ಮತ್ತು ಹಾರ್ಡಿಯವರು ತಮ್ಮ ಕಾದಂಬರಿಗಳಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ. ದೇಸಿಯ ಬದುಕು ಬಹುಮುಖೀ ಸತ್ವದ ಹಿನ್ನಲೆಯಲ್ಲಿ ರೂಪುಗೊಂಡಿತ್ತು. ಆದರೆ ಜಾಗತೀಕರಣದಿಂದ ಸಮಾಜದ ಬಹುಮುಖ ಸತ್ವದ ನಾಶ, ಸಾಂಸ್ಕೃತಿಕ ಆಕ್ರಮಣ, ಸ್ಥಳೀಯ ಭಾಷೆ, ಸಂಸ್ಕೃತಿ, ದೇಸಿ ಜ್ಞಾನ ಪ್ರಕಾರಗಳ ನಾಶ ಮುಂತಾದ ವಿನಾಶಕಾರಿ ಅನರ್ಥಗಳು ಜಾಗತೀಕರಣದ ಕೊಡುಗೆಗಳಾಗಿವೆ. ಆದ್ದರಿಂದಲೇ ಗಾಂಧೀಜಿಯವರ ಗ್ರಾಮಾಭಿವೃದ್ಧಿಯ ಕನಸಾದ ಈ ನೆಲದ ಸಂಪನ್ಮೂಲಗಳು ಹಿತಮಿತವಾಗಿ ಬಳಕೆಯಾಗಬೇಕು, ನೆಲವೂ ಉಳಿಯಬೇಕು ಮತ್ತು ಅಲ್ಲಿ ಬದುಕುವ ಜನರೂ ಉಳಿಯಬೇಕು ಎನ್ನುವ ಕಲ್ಪನೆ ಅದ್ಭುತವಾದದ್ದು. ಹಳ್ಳಿಯಲ್ಲಿನ ಒಂದು ಅರಳಿಕಟ್ಟೆಯೂ ದೇಸಿಯ ಸಂಸ್ಕೃತಿಯನ್ನು, ಭಾಷೆಯನ್ನು ಪೀಳಿಗೆಯಿಂದ ಪೀಳಿಗೆಗೆ ವರ್ಗಾಯಿಸುತ್ತಿತ್ತು. ಆದರೆ ಅಭಿವೃದ್ಧಿಯ ಹೆಸರಿನಲ್ಲಿ, ಆಧುನೀಕರಣದ ಮತ್ತು ನಗರೀಕರಣದ ಹೆಸರಿನಲ್ಲಿ ಮರಗಳ ಮಾರಣ ಹೋಮ ಆಗತ್ತಿರುವ ಅದೆಷ್ಟೋ ದೇಸಿ ವಿಚಾರಗಳು ಕಣ್ಮರೆಯಾಗುತ್ತಿವೆ ಎನ್ನುವುದನ್ನು

ತಿಳಿಯಬೇಕಾಗಿದೆ. ಇಂತಹ ಅನೇಕ ಸಮಸ್ಯೆಗಳಿಗೆ ಉತ್ತರವನ್ನು ಹುಡುಕುವ ಪ್ರಯತ್ನಗಳು ನಡೆಯಬೇಕಿದೆ. ಸ್ಥಳೀಯ ಜ್ಞಾನ ಸ್ಥಳೀಯ ಸಮಸ್ಯೆಗಳಿಗೆ ಉತ್ತರವಾಗುತ್ತದೆ ಎನ್ನುವುದನ್ನು ಮತ್ತು ಬಹುತ್ವ ಸತ್ವವನ್ನು ಹೊಂದಿರುವ ದೇಸಿಯತೆಯಿರುವುದೇ ಹಳ್ಳಿ ಸಂಸ್ಕೃತಿಯಲ್ಲಿ ಎನ್ನುವುದನ್ನು ಮನಗಾಣಬೇಕಿದೆ. ಮನುಷ್ಯ ಸಂಬಂಧವನ್ನು ಬೆಸೆಯುವ ಸಾರ ಗ್ರಾಮಗಳಲ್ಲಿ ಅಡಗಿದೆ. ಹಾಡು, ಹಸೆ, ಆರಾಧನೆ, ಉತ್ಸವ ಮುಂತಾದ ಸಾಂಸ್ಕೃತಿಕ ಆಯಾಮಗಳು ದೇಸಿಯತೆಯ ಸದೃಢತೆಗೆ ಕಾರಣವಾಗಬಲ್ಲವು ಎನ್ನವುದನ್ನು ಆಧುನಿಕ ಜಗತ್ತಿನ ಮಾನವ ಇಂದು ಅರಿಯಬೇಕಿದೆ. ದೇಸಿಯ ಸತ್ವವನ್ನು ಕಾಪಾಡುವುದರ ಮೂಲಕ ಕಣ್ಮರೆಯಾಗುತ್ತಿರುವ ಮಾನವೀಯ ಮೌಲ್ಯಗಳನ್ನು ಮತ್ತು ಮಾನವ ಸಂಬಂಧಗಳನ್ನು ಪುನರ್‌ರೂಪಿಸುವುದರ ಮೂಲಕ ಮಾನವನ ಬದುಕನ್ನು ಸಹನೀಯಗೊಳಿಸಬಹುದಾಗಿದೆ.

ಕುವೆಂಪು ಮತ್ತು ಹಾರ್ಡಿಯವರ ಕಾದಂಬರಿಗಳ ತೌಲನಿಕ ಅಧ್ಯಯನ ದೇಸಿಯತೆ ಮತ್ತು ಜಾಗತೀಕತೆಗೆ ಸಂಬಂಧಿಸದಂತೆ ಹಲವಾರು ವಿಷಯಗಳ ಮೇಲೆ ಬೆಳಕು ಚೆಲ್ಲುತ್ತದೆ. ಇಬ್ಬರು ಕಾದಂಬರಿಕಾರರ ಕಾದಂಬರಿಗಳು ಒಂದು ನಿರ್ದಿಷ್ಟ ಕಾಲದ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಶೈಕ್ಷಣಿಕ ಹಾಗೂ ಐತಿಹಾಸಿಕ ಮಹತ್ವನ್ನು ಬಹಳ ಕಲಾತ್ಮಕವಾಗಿ ನಿರೂಪಿಸುತ್ತವೆ. ಮಲೆನಾಡು ಮತ್ತು ವೆಸೆಕ್ಸ್‌ನ ಭೌಗೋಳಿಕ ಪರಿಸರ, ಜನರ ವೃತ್ತಿ, ಕಸುಬು, ಆಚಾರ–ವಿಚಾರ, ಆಹಾರ–ವಿಹಾರ, ವೇಷ–ಭೂಷಣ, ನಡೆ–ನುಡಿ, ಹಬ್ಬ–ಆಚರಣೆ, ರೂಢಿ–ಸಂಪ್ರದಾಯ, ಮೌಢ್ಯ ಮುಂತಾದ ಹಲವಾರು ವಿಷಯಗಳ ಸಮಗ್ರವಾದ ಮತ್ತು ಸೂಕ್ಷ್ಮವಾದ ಚಿತ್ರಣ ಎರಡೂ ಸಮಾಜಗಳ ದೇಸಿ ಬದುಕಿಗೆ ಕನ್ನಡಿ ಹಿಡಿದಂತಿವೆ. ಮಲೆನಾಡಿನ ಮತ್ತು ವೆಸೆಕ್ಸ್‌ನ ಭೂಗೋಳಿಕ, ಸಾಮಾಜಿಕ ಸಾಂಸ್ಕೃತಿಕ ಪರಿಸರ ಭಿನ್ನವಾಗಿದ್ದರೂ ಆಯಾ ಪ್ರದೇಶಕ್ಕನುಗುಣವಾದ ದೇಸಿಯತೆ ಒಂದೇ ರೀತಿಯಾಗಿರುತ್ತದೆ ಎನ್ನುವುದನ್ನು ಕಾಣಬಹುದು. ಎರಡೂ ಸಮಾಜಗಳಲ್ಲಿ ಅಸ್ತಿತ್ವದಲ್ಲಿದ್ದ ಶ್ರೀಮಂತ ಜನಪದ, ನೆಲಪರ ದೇಸಿ ಸಂಸ್ಕೃತಿ ಜಾಗತೀಕರಣದ ಪ್ರಭಾವಕ್ಕೆ ಸಿಲುಕಿ ನೆಲೆಕಳೆದುಕೊಳುತ್ತಿರುವುದನ್ನು ಇಂದು ಕಾಣುತ್ತಿದ್ದೇವೆ. ದೇಸಿ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತಿದ್ದ ಸಾಮಾನ್ಯ ಜನರ ಆಡು ಭಾಷೆ, ಕಣ್ಮರೆಯಾಗುತ್ತಿದೆ. ದೇಸಿ ಭಾಷೆಯ ಅವನತಿ ದೇಸಿ ಸಂಸ್ಕೃತಿಯ ನಾಶವೆಂದೇ ಹೇಳಬಹುದು. ಜಾಗತೀಕರಣದ ಏಕರೂಪಾತ್ಮಕವಾದ ಭಾಷೆ ದೇಸಿಯ ಬಹುರೂಪತ್ಮಕವಾದ ಸಂಸ್ಕೃತಿಯನ್ನೇ ನಾಶಮಾಡುತ್ತಿದೆ.

ದೇಸಿಯ ಬದುಕಿಗೆ ಆಸರೆಯಾಗಿದ್ದ ಕೃಷಿ ಸಂಸ್ಕೃತಿಯ ಕಣ್ಮರೆ ಜಾಗತೀಕರಣದ ಫಲಶೃತಿಯಾಗಿದೆ. ಜಾಗತೀಕರಣದ ಅಂಗ ಸಂಸ್ಥೆಗಳಾದ ಬಹುರಾಷ್ಟ್ರೀಯ ಕಂಪನಿಗಳು ನೀಡುವ

ಹೈಬ್ರಿಡ್ ಬೀಗಳು, ಕುಲಾಂತರಿ ತಳಿಗಳು, ಆಧುನಿಕ ಯಂತ್ರೋಪಕರಣಗಳು ಮತ್ತು ಅತಿಯಾದ ರಾಸಾಯನಿಕ ಹಾಗೂ ಕ್ರಿಮಿನಾಶಕಗಳ ಬಳಕೆ ಸಾಂಪ್ರದಾಯಿಕ ಕೃಷಿ ವ್ಯವಸ್ಥೆಯನ್ನೆ ಬುಡಮೇಲಾಗಿಸಿದೆ. ದೇಸಿಯ ತಳಿಗಳನ್ನು, ರೈತಾಪಿ ವರ್ಗವನ್ನು ಮತ್ತು ಕೃಷಿ ಮಾರುಕಟ್ಟೆಯನ್ನು ಬಹುರಾಷ್ಟ್ರೀಯ ಕಂಪನಿಗಳು ನಿಯಂತ್ರಣಕ್ಕೆ ಪಡೆದುಕೊಂಡಿವೆ ಮತ್ತು ರೈತರನ್ನು ಸಾಲಗಾರರನ್ನಾಗಿ ಮತ್ತು ಗುಲಾಮರನ್ನಾಗಿ ನಿಯಂತ್ರಿಸುತ್ತಿವೆ. ದೇಸಿ ಕೃಷಿಯ ಜೊತೆಗೆ ಸಂಬಂಧ ಹೊಂದಿದ್ದ ಸುಗ್ಗಿಯ ಹಾಡುಗಳು, ಜನಪದ ನೃತ್ಯ, ಲಾವಣಿ, ಕಥೆ ಹೇಳುವುದು ಮುಂತಾದವು ಅಸ್ತಿತ್ವವನ್ನೇ ಕಳೆದುಕೊಂಡಿವೆ. ಕೃಷಿ ಚಟುವಟಿಕೆಗಳು ಯಾಂತ್ರೀಕೃತಗೊಂಡಿವೆ. ಅತಿಯಾದ ರಾಸಾಯನಿಕಗಳ ಬಳಕೆಯಿಂದ ಪ್ರಕೃತಿದತ್ತವಾದ ಕೃಷಿಭೂಮಿ ಬಂಜರು ಪ್ರದೇಶವಾಗಿದೆ.

ಕುವೆಂಪು ಮತ್ತು ಹಾಡಿಯವರ ಕಾದಂಬರಿಗಳಲ್ಲಿ ವರ್ಣಿಸಲ್ಪಟ್ಟಿರುವ ಭೌಗೋಳಿಕ ಪರಿಸರ, ಪ್ರಕೃತಿ ಸೌಂದರ್ಯ, ಪ್ರಕೃತಿ ಮತ್ತು ಮಾನವ ಸಂಬಂಧಗಳು ಜಾಗತೀಕರಣದ ಪ್ರಭಾವಕ್ಕೆ ಸಿಲುಕಿ ಕಣ್ಮರೆಯಾಗುತ್ತಿರುವುದನ್ನು ಕಾಣಬಹುದು. ಕುವೆಂಪು ಕಾದಂಬರಿಗಳಲ್ಲಿ ಚಿತ್ರಿತವಾಗಿರುವ ಮಲೆನಾಡಿನ ಗಿರಿ–ವನಗಳು, ಕಣಿವೆ, ಹಳ್ಳ–ಕೊಳ್ಳಗಳು, ಪ್ರಾಣಿ, ಪಕ್ಷಿ, ವೈವಿಧ್ಯಮಯ ಸಸ್ಯಸಂಕುಲ ಇಂದು ಉಳಿದಿಲ್ಲ. ರಸ್ತೆ, ರೈಲು, ಆಧುನಿಕ ಸಂಪರ್ಕ ಸಾಧನಗಳು, ಆಣೆಕಟ್ಟುಗಳು, ಬೃಹತ್ ಕೈಗಾರಿಕೆಗಳು, ಮತ್ತು ಬೃಹತ್ ಯೋಜನೆಗಳು ಪ್ರಕೃತಿಯ ಮೂಲ ಸ್ವರೂಪವನ್ನೇ ನಾಶಮಾಡಿ, ಹಸಿರು ವನಸಿರಿಯನ್ನು ಹಾಳುಮಾಡಿ ಕಾಂಕ್ರಿಟ್ ಕಾಡುಗಳನ್ನಾಗಿ ಮಾರ್ಪಡಿಸಿವೆ. ಕುವೆಂಪು ಕಾದಂಬರಿಗಳಲ್ಲಿ ವರ್ಣಿತವಾಗಿರುವ ಅಸಂಖ್ಯಾತ ಪ್ರಾಣಿ–ಪಕ್ಷಿ ಸಂಕುಲ ಇಂದು ನೆನಪಷ್ಟೆ. ಏಕೆಂದರೆ ಅವುಗಳೆಲ್ಲ ಮಾನವನ ದುರಾಸೆಗೆ, ಆಕ್ರಮಣಕ್ಕೆ ಬಲಿಯಾಗಿ ಅವನತಿ ಹೊಂದಿವೆ. ಮಾನವ, ಪ್ರಕೃತಿ ಸಂಬಂಧ ನಾಶವಾಗಿ ಯಂತ್ರ ನಾಗರೀಕತೆ ಎಲ್ಲೆಡೆ ರಾರಾಜಿಸುತ್ತಿದೆ. ಮಾನವನ ಮಾನಸಿಕ, ಭಾವನಾತ್ಮಕ ಮತ್ತು ಆರೋಗ್ಯಕರ ವ್ಯಕ್ತಿತ್ವ ಬೆಳವಣಿಗೆಗೆ ಪೂರಕವಾಗಿದ್ದ, ಪ್ರೇರಕವಾಗಿದ್ದ ಮತ್ತು ಪೋಷಕ ಪಾತ್ರವಾಗಿಸಿದ್ದ ಪ್ರಕೃತಿ ಇಂದು ಜಾಗತೀಕರಣದ ಮಾರುಕಟ್ಟೆ ಸಂಸ್ಕೃತಿಯ ಬಿರುಗಾಳಿಗೆ ಸಿಲುಕಿ ನಾಶವಾಗುತ್ತಿದೆ.

ದೇಸಿ ಕ್ರೀಡೆಗಳು ಮತ್ತು ಮನರಂಜನಾ ಚಟುವಟಿಕೆಗಳು, ಆಧುನಿಕ ಶೈಲಿಯ ಪಾಪ್ ಸಂಗೀತ, ಪಾಶ್ಚಾತ್ಯ ನೃತ್ಯ, ಟೆಲಿವಿಷನ್ ಕಾರ್ಯಕ್ರಮಗಳು, ರಿಯಾಲಿಟಿ ಪ್ರದರ್ಶನಗಳು ಮುಂತಾದ ದೃಶ್ಯ ಮಾಧ್ಯಮಗಳ ಹಾವಳಿಗೆ ಬಲಿಯಾಗುತ್ತಿವೆ. ಅಂದಿನ ಕಾಲದ ಮೌಲ್ಯಾದರ್ಶಗಳು ಇಂದು ಜಾಗತೀಕರಣದ ಹೊಡೆತಕ್ಕೆ ಸಿಲುಕಿ ಕಾಣೆಯಾಗುತ್ತಿವೆ. ದೇಸಿ ಬದುಕಿನ, ಆದರ್ಶ ಸಂಸ್ಕೃತಿಯ ಬೇರುಗಳು ಇಂದು ನೆಲೆಕಳೆದುಕೊಳ್ಳತ್ತಿವೆ. ಈ ನಿಟ್ಟಿನಲ್ಲಿ ಕುವೆಂಪು ಮತ್ತು

ಹಾರ್ಡಿಯವರ ಕಾದಂಬರಿಗಳ ತೌಲನಿಕ ಅಧ್ಯಯನ ಪ್ರಸ್ತುತ ಸನ್ನಿವೇಶಕ್ಕೆ ಅನಿವಾರ್ಯವೆನಿಸುತ್ತದೆ. ಅಂದಿನ ಕಾಲದ ದೇಸಿಯ ಬದುಕಿನ ಮೌಲ್ಯಗಳ ಅಸ್ತಿತ್ವ ಇಂದಿನ ದಾವಂತದ ಬದುಕಿಗೆ ಆಸೆರೆಯಾಗಬಲ್ಲದು ಎಂಬುದನ್ನು ಮನಗಾಣಬೇಕಾಗಿದೆ. ಈ ದಿಕ್ಕಿನಲ್ಲಿ ಇನ್ನೂ ಆಳವಾದ, ವಿಸ್ತಾರವಾದ ಅಧ್ಯಯನಗಳು ನಡೆಯಬೇಕಾಗಿವೆ ಮತ್ತು ಇಂತಹ ಅಧ್ಯಯನಗಳಿಂದ ಮಾನವನ ಬದುಕು ಸಹನೀಯವಾಗಬಹುದು ಎನ್ನುವ ಆಶಯ ಈ ಒಂದು ಅಧ್ಯಯನದಿಂದ ವ್ಯಕ್ತವಾಗಿದೆ.

ಕೊನೆ ಟಿಪ್ಪಣಿ

1. Balachandra Nemade: Nativism in Literature, Page - 236
2. ಜಯದೇವ ಜಿ.ಎಸ್.: ಕೃಷಿಯ ಜೀವ ವೈವಿಧ್ಯತೆ ಮತ್ತು ಆಹಾರ ಭದ್ರತೆ, ಆಭಿಮತ, ಪ್ರಜಾವಾಣಿ, 21 ಸೆಪ್ಟೆಂಬರ್ 2010
3. ಶೇಷಗಿರಿ ರಾವ್ ಎಲ್.ಎಸ್.: ಇಂಗ್ಲಿಷ್ ಸಾಹಿತ್ಯ ಚರಿತ್ರೆ, ಪುಟ– 471
4. ಜಗದೀಶ್ ಕೊಪ್ಪ: ಜಾಗತೀಕರಣ ಮತ್ತು ಗ್ರಾಮಭಾರತ, ಪುಟ– 125
5. Thomas Hardy: Tess of the D' Urbervlles,Page- 283
6. ಜಯದೇವ ಜಿ.ಎಸ್.: ಜಾಗತೀಕರಣದ ಝಳದಲ್ಲಿ ಸೊರಗುತ್ತಿರುವ ಕುಟುಂಬ, ಅಭಿಮತ, ಪ್ರಜಾವಾಣಿ, 14–10–2009
7. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ–283
8. ಜಗದೀಶ್ ಕೊಪ್ಪ: ಜಾಗತೀಕರಣ ಮತ್ತು ಗ್ರಾಮಭಾರತ, ಪುಟ– 22
9. Thomas Hardy: The Return of the Native, Page- 90
10. Sundaram V.: Impact of Globisation on Indian Culture, http/www.comp/ (Dec. 3.2006)
11. ಕುವೆಂಪು : ಕಾನೂರು ಹೆಗ್ಗಡಿತಿ, ಪುಟ–104
12. ಕುವೆಂಪು : ಮಲೆಗಳಲ್ಲಿ ಮದುಮಗಳು, ಪುಟ– 53
13. ಅದೇ, ಪುಟ – 430

14. ನರಹಳ್ಳಿ ಬಾಲಸುಬ್ರಮಣ್ಯ: ಹುತ್ತಗಟ್ಟದೆ ಚಿತ್ತ, ಸಾಪ್ತಾಹಿಕ ಪುರವಣಿ, ಪ್ರಜಾವಾಣಿ, 26 ಜೂನ್ 2011.
15. Vandana Shiva: Stolen Harvest, http://www. Green prophet.com Page-12, 2008
16. Reader's Guide to Thomas Hardy: Page -118
17. ಮಹೇಶನ್ ಎಂ.: ಜಾಗತೀಕರಣ, ಪುಟ–151
18. ಜಗದೀಶ್ ಕೊಪ್ಪ: ಜಾಗತೀಕರಣ ಮತ್ತು ಗ್ರಾಮಭಾರತ, ಪುಟ– 232
19. ನಾರಾಯಣ ಕೆ.ವಿ.: ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು, ಪುಟ– 156
20. Norman Page: Thomas Hardy, The Novels, Page - 99
21. Ruth C. Plummer. A.B.: The Rustic chorus in the Novels of Thomas Hardy, Page- 150.
22. ಚಂದ್ರಶೇಖರಯ್ಯ ಎಂ.ಜಿ. : ದೇಶೀ ಸಂಸ್ಕೃತಿಯ ಚಿಂತಕರಾಗಿ ಕುವೆಂಪು, ಪುಟ– 429
23. ಕೃಷ್ಣಪ್ಪ ಬಿ.ವಿ. : ಕುವೆಂಪು ಕಾದಂಬರಿಗಳಲ್ಲಿ ಜೀವನ ಚಿತ್ರ, ಪುಟ –199
24. Sundaram V.: Impact of Globisation on Indian Culture, http/www.comp/ Dec. 3.2006
25. ಕೇಶವಶರ್ಮಾ ಕೆ.; ಲೇಖನ ಜಾಗತೀಕರಣ; ಪರ್ಯಾಯ ಸಾಧ್ಯತೆಗಳು, ಪುಟ – 513
26. Sharma V.P.: The Role of the Heath in The Return of the Native, Page–91
27. Sundaram V.: Impact of Globisation on Indian Culture, http/www.comp/ Dec. 3.2006
28. ಮಹೇಶನ್ ಎಂ.: ಜಾಗತೀಕರಣ, ಪುಟ– 3
29. ವಿಶ್ವೇಶ್ವರಭಟ್: ನೂರೆಂಟು ಮಾತು, ವಿಜಯ ಕರ್ನಾಟಕ ಜುಲೈ 2, 2009.


28. ಹೊರಸಲು = ಚಲ್ಲಿ ಬಿದ್ದ ಧಾನ್ಯ
29. ಹೊದರು = ಪೊದೆ, ಪೊಟರೆ
30. ಹೊಂಡತೋಣಕು = ಮೀನು ಹಿಡಿಯುವುದಕ್ಕೆ ನೀರನ್ನು ಹೊರ ಹಾಕುವುದು
31. ಗಸಿ = ಗಸಟು
32. ಗರ್ನಾಲು = ಉತ್ಸವಾದಿಗಳಲ್ಲಿ ಹಾರಿಸುವ ಸಿಡಿಮದ್ದು ತುಂಬಿದ ಗೋಲಿ ಮುಂತದವು
33. ಗೊಬ್ಬೆಸೆರಗು = ಸೀರೆ ಉಡುವ ಒಂದು ವಿಧಾನ
34. ಗಿರಾಸ್ತ = ಗೃಹಸ್ತ
35. ಜಕಣಿ = ಯಕ್ಷಣಿ, ಹೆಣ್ಣು ಭೂತ
36. ಜೈನೆಡೆ = ಸಸ್ಯಹಾರಿ ದೆವ್ವಕ್ಕೆ ಇಡುವ ಊಟದ ಎಡೆ
37. ಕಲ್ಕುಡ್ಕ = ಗ್ರಾಮ ದೇವತೆ
38. ಕಡುಹಾಕು = ಮೀನುಗಳನ್ನು ಹಿಡಿಯಲು ಹಳ್ಳ/ ಹೊಳೆಗೆ ಮತ್ತು ಬರಿಸುವ ಸೊಪ್ಪಿನ ರಸ ಕದಡುವುದು
39. ಕಡೆಗುಂಡು = ರುಬ್ಬುವ ಗುಂಡು
40. ಕೂಣಿ = ಮೀನನ್ನು ಬೇಟೆಯಾಡುವ (ಶಿಕಾರಿ) ಒಂದು ಪರಿಕರ
41. ಕಟ್ವಾಣಿ= ಎಳೆಗಳುಳ್ಳ ಬಂಗಾರದ ಆಭರಣ
42. ಕುತ್ತರೆ ಹಾಕು = ಹುಲ್ಲು / ಕೇವಿಯ ಬಣವೆ ಹಾಕುವುದು
43. ಕಲಬಿ = ಮುಚ್ಚುಳ ಹೊಂದಿದ ದೋಣಿಯಾಕಾರದ ಮರದ ಸಾಧನ
44. ಕಲ್ಲುಗಡಿಗೆ = ಕಲ್ಲಿನ ಒಂದು ರೀತಿಯ ಪಾತ್ರೆ
45. ಕಾವಣ = ದಟ್ಟವಾದ ಮಂಜು
46. ಕಾರೇಡಿ = ಹಳ್ಳದಲ್ಲಿ ಸಿಗುವ ದೊಡ್ಡ ಕಪ್ಪು ಏಡಿಗಳು
47. ಕಲ್ಲುಸಾರ = ಹಳ್ಳವನ್ನು ದಾಟಲು ಹಾಕುವ ಸಂಕ / ಸಾರ
48. ಕಂಡಿ ಕಾಯಿ = ಶಿಕಾರಿಯ ಸಂದರ್ಭದಲ್ಲಿ ಶಿಕಾರಿ ಪ್ರಾಣಿ ಬರು ಜಾವನ್ನು ಕಾಯುವುದು
49. ಕೇದಗ = ಮುಂಡಗದ ಹೂ
50. ಕದಿನಿ = ಉತ್ಸಾಹದ ಕಾಲದಲ್ಲಿ ಹಾರಿಸಿವ ಅಥವಾ ಸಿಡಿಸುವ ಪಿರಂಗಿ ಅಥವಾ ಗುಂಡು
51. ಕಕ್ಕಡ = ದೀವಟಿಗೆ, ಒಂದು ಬಗೆಯ ಆಯುಧ
52. ಕೊಚ್ಚಲಿ = ಹಳ್ಳದಲ್ಲಿ ಸಿಗುವ ಒಂದು ಜಾತಿಯ ಸಣ್ಣ ಮೀನು
53. ಕುರ್ನೇಲು ಕುಡಿ = ಒಂದು ಜಾತಿಯ ಗಿಡದ ಚಿಗುರು
54. ಕಸೆ ಅಂಗಿ = ದಾರವಿರುವ ಒಂದು ಅಂಗಿ ಜುಬ್ಬ
55. ಕಲ್ಲಾಟ = ಹೆಣ್ಣು ಮಕ್ಕಳು ಕಲ್ಲಿನಲ್ಲಿ ಆಡುವ ಆಟ
56. ಕಳ್ಳಂಗಡಿ = ಮದ್ಯಪಾನ ಅಂಗಡಿ
57. ಕಳಮಶ್ರೀ = ಲಕ್ಷ್ಮಿಯೆಂದು ಪರಿಗಣಿಸುವ ಧಾನ್ಯದ ತೆನೆ
58. ಕಳ್ಳು = ಹೆಂಡ, ಸುರೆ
59. ಕೋಳಿಯಂಕ = ಕೋಳಿಗಳ ಕಾದಾಟದ ಜೂಜು
60. ಕೂಡಿಕೆ = ಕೂಡಾವಳಿ

61. ಲಗ್ಗೆಮಣೆ = ಸುಗ್ಗಿಯಲ್ಲಿ ಬಳಸುವ ಭತ್ತ ರಾಶಿ ಮಾಡುವ ಸಾಧನ
62. ಮದ್ದು ಹಾಕುವುದು = ಔಷಧಿ ಹಾಕುವುದು, ಆಹಾರದಲ್ಲಿ ಕೇಡುಂಟು ಮಾಡುವ ಔಷಧಿ ಹಾಕುವುದು
63. ಮುಂಡಗ = ಕರೆಯ ದಡದಲ್ಲಿ ಬೆಳೆಯುವ ಒಂದು ಜಾತಿಯ ಮುಳ್ಳಿನ ಗಿಡ
64. ಮುಡುಪುಕಟ್ಟು = ದೇವರ ಹೆಸರಲ್ಲಿ ಹರಕೆ ತೆಗೆದಿರಿಸುವುದು
65. ಮರಸು = ಬೇಟೆಯ ಒಂದು ವಿಧಾನ, ಮುಚ್ಚಿ ಕುಳಿತು ಬೇಟೆಯಾಡುವುದು
66. ಮಸಣಿ = ಒಂದು ಕ್ಷುದ್ರದೇವತೆ
67. ಮುರುಗುಂಡು = ಹಳ್ಳದಲ್ಲಿ ಸಿಗುವ ಒಂದು ಜಾತಿಯ ಸಣ್ಣ ಮೀನು / ಮೀಸೆ ಮೀನು
68. ಮುಟ್ಟಾಳು = ಕೆಲಸದಲ್ಲಿ ಸಂಬಳದ ಬದಲಿಗೆ ಆಳಿಗೆ ಆಳೆ ಬರುವುದು
69. ವೀಸ ಬೇಳೆ = ಹಳೆಯ ಪದ್ಧತಿಯ ಹಣದ ಲೆಕ್ಕಚಾರ
70. ನೂಲೆಗೆಣಸು = ಒಂದು ಜಾತಿಯ ಗೆಣಸು
71. ನಿಮಿತ್ತ ನೋಡುವುದು = ನೆಪ, ಕಾರಣ, ಗುರಿ, ಶಕುನ
72. ಒಡ್ಡಿ = ಚಿಕ್ಕಪುಟ್ಟ ಪ್ರಾಣಿಗಳ ವಾಸದ ಮನೆ
73. ಒರಲೆ ಹಿಡಿ = ಗೆದ್ದಲು ಹಿಡಿ
74. ಪಂಜ್ರೊಳ್ಳಿ = ಗ್ರಾಮ ದೇವತೆ
75. ಪೇಗನ್ = ವಿಗ್ರಹ ಆಧಾರಕ
76. ಸಮಗೋಲು = ಸುಗ್ಗಿ ಸಂದರ್ಭದಲ್ಲಿ ಬಳಸುವ ಒಂದು ಸಾಧನ
77. ಸೊಗದೆ ಬೇರು = ಒಂದು ಜಾತಿಯ ಸಸ್ಯದ ಬೇರು
78. ಸೆಬೆ = ಉರುಳು ಸಿದ್ಧಪಡಿಸಿ ಬೇಟೆಯಾಡುವ ವಿಧಾನ
79. ಸಿಡಿಗೋಲು = ಸಿಡಿ ಹರಕೆಯ ಒಂದು ಕಂಬ, ಪಕ್ಷಿಗಳ ಹಿಡಿಯಲು ಬಳಸುವು ಉರುಳು
80. ಸೀರುಡಿಕೆ = ವಿಧವೆಯಿಂದಿಗಿನ ದಾಂಪತ್ಯ
81. ಸೂಡು = ಕಂತೆ, ಉಷ್ಣ, ಕಾವು, ಚಿತೆ, ತಲೆಯಲ್ಲಿ ಧರಿಸು ತೊಡು,
82. ತೆರ = ರೀತಿ; ಬಗೆ, ಸುಂಕ, ಕನ್ಯಾ ಶುಲ್ಕ, ದಂಡ, ತಪ್ಪು ಕಾಣಿಕೆ
83. ತೊಳ್ಳೆ ಮೀನು = ಹಳ್ಳದಲ್ಲಿ ಸಿಗುವ ಒಂದು ಜಾತಿಯ ಮೀನು

ಅನುಬಂಧ – 2









ಅನುಬಂಧ – 3

ಅಧ್ಯಯನಕ್ಕೊಳಪಡಿಸಿದ ಕೃತಿಗಳು

1. ಕುವೆಂಪು– ಕಾನೂರು ಹೆಗ್ಗಡಿತಿ, ಉದಯರವಿ ಪ್ರಕಾಶನ, ಮೈಸೂರು, 2007.
   –ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, 2007.

2. Thomas Hardy - The Return of the Native, published by Wordsworth Editions Limited, London 1995.
   – Tess of the D' Urbervilles, UBS publishers Pvt. Ltd., New Delhi 2007.

ಅನುಬಂಧ – 4

ಪರಾಮರ್ಶನ ಕೃತಿಗಳು ಮತ್ತು ಲೇಖನಗಳು

1. ಅಂಬಳಿಕೆ ಹಿರಿಯಣ್ಣ – ಮಲೆನಾಡಿನ ಜನಪದ ಸಂಪ್ರದಾಯಗಳು, ಪುಸ್ತಕ ಚಿಲುಮೆ, ಮೈಸೂರು, 1978.
2. ಅನಂತಮೂರ್ತಿ ಯು. ಆರ್. – ಭಾರತೀಪುರ, ಅಕ್ಷರ ಪ್ರಕಾಶನ, ಸಾಗರ, 1973.
   – ಸಂಸ್ಕಾರ, ಸುರುಚಿ ಪ್ರಕಾಶನ, ಮೈಸೂರು, 1972.
3. ಅಮೂರ ಜಿ.ಎಸ್ – ಕನ್ನಡ ಕಾದಂಬರಿಯ ಬೆಳವಣಿಗೆ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು, 1983.
   – ಕನ್ನಡ ಕಥನ ಸಾಹಿತ್ಯ ಕಾದಂಬರಿ, ಶ್ರೀಹರಿ ಪ್ರಕಾಶನ, ಧಾರವಾಡ, 1994.
4. ಚಂದ್ರಪೂಜಾರಿ ಎಂ. – ದೇಶೀಯತೆಯ ನೆರಳಲ್ಲಿ ವಿಕೇಂದ್ರಿಕರಣ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 2001.
5. ದೇವನೂರು ಮಹಾದೇವ – ಒಡಲಾಳ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, 1985.
6. ಗುರುಪಾದ ಮರಿಗುದ್ದಿ – ಕುವೆಂಪು ಕಾದಂಬರಿಗಳ ಸಾಂಸ್ಕೃತಿಕ ಅಧ್ಯಯನ, ಸಹ್ಯಾದ್ರಿ ಪ್ರಕಾಶನ, ಮೈಸೂರು, 1989.
   – ಕುವೆಂಪು ಕಾದಂಬರಿಗಳು, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, 2004.
7. ಗಿರಡ್ಡಿ ಗೋವಿಂದರಾಜ – ಸಾಹಿತ್ಯ ವಿಮರ್ಶಾ ಲೇಖನಗಳು, ಸ್ನೇಹ ಪ್ರಕಾಶನ ಬೆಂಗಳೂರು, 1992.
   – ಸಾಹಿತ್ಯದಲ್ಲಿ ದೇಸಿಯತೆ, ಅನ್ವೇಷಣೆ, 1988.
8. ಗಂಗ್ರೋತ್ರಿ – ಕುವೆಂಪು ಅಭಿನಂದನ ಸಮಿತಿ, ಗೀತ ಬುಕ್ ಹೌಸ್, ಮೈಸೂರು, 1968.
9. ರಾವ್ ಬಹಾದ್ದೂರ – ಗ್ರಾಮಾಯಣ, ಉಷಾ ಸಾಹಿತ್ಯ ಮಾಲೆ, ಮೈಸೂರು, 1981.
10. ಹಾ.ಮಾ. ನಾಯಕ್ – ಕನ್ನಡ ಕಾದಂಬರಿಯಲ್ಲಿ ಪ್ರಾದೇಶಿಕತೆ, ಚಿನ್ನದಗರಿ ಪ್ರಕಾಶನ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, 1974.
11. ಇನಾಂದಾರ್ ವಿ. ಎಂ. – ಕುವೆಂಪು ಕಾದಂಬರಿಗಳು, ಉಷಾ ಸಾಹಿತ್ಯ ಮಾಲೆ, ಮೈಸೂರು, 1978.
12. ಜಗದೀಶ್ ಕೊಪ್ಪ – ಜಾಗತೀಕರಣ ಮತ್ತು ಗ್ರಾಮಭಾರತ, ಸಿಂಚನ ಗ್ರಂಥಮಾಲೆ, ಹಾವೇರಿ 2008.
13. ಜವರೇಗೌಡ ದೇ. – ರಾಷ್ಟ್ರಕವಿ ಕುವೆಂಪು, ಸುರುಚಿ ಪ್ರಕಾಶನ, ಮೈಸೂರು, 1970.

14. ಜಯದೇವ ಜಿ.ಎಸ್. – ಕೃಷಿ ವೈವಿಧ್ಯತೆ ಮತ್ತು ಆಹಾರ ಭದ್ರತೆ (ಹಳ್ಳಿ ಹಾದಿ ಅಭಿಮತ, ಪ್ರಜಾವಾಣಿ), 2ನೇ ಸೆಪ್ಟೆಂಬರ್ 2010.

15. ಕುವೆಂಪು – ನೆನಪಿನ ದೋಣಿಯಲ್ಲಿ, ಉದಯರವಿ ಪ್ರಕಾಶನ, ಮೈಸೂರು, 2010.
– ಮಲೆನಾಡಿನ ಚಿತ್ರಗಳು, ಉದಯ ರವಿ ಪ್ರಕಾಶನ, ಮೈಸೂರು. 2010.

16. ಖಂಡೋಬಾ ಪಿ.ಕೆ. – ಕನ್ನಡ ಪ್ರಾದೇಶಿಕ ಕಾದಂರಿಗಳ ಜಾನಪದೀಯತೆ, ಕನ್ನಡ ಸಾಹಿತ್ಯ ಪರಿಷತ್ತು, 1999.

17. ಲಕ್ಷಣ್ ತೆಲಗಾವಿ – ಸ್ಥಳೀಯ ಚರಿತ್ರೆ ಅಧ್ಯಯನದ ತಾತ್ವಿಕತೆ ಮತ್ತು ಸ್ವರೂಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 2003.

18. ಮೃತ್ಯುಂಜಯ ಹೊರಕೇರಿ – ಜಾಗತೀಕರಣ ಹಾಗೂ ಇತರ ಲೇಖನಗಳು, ಕನ್ನಡ ಸಾಹಿತ್ಯ ಪರಿಷತ್ತು, 2002.

19. ಮುಗಳಿ ರಂ.ಶ್ರೀ. – ಕನ್ನಡ ಸಾಹಿತ್ಯ ಚರಿತ್ರೆ, ಉಷಾ ಸಾಹಿತ್ಯ ಮಾಲೆ, ಮೈಸೂರು, 1953.

20. ನಾಗರಾಜ್ ಡಿ.ಆರ್. – ಶಕ್ತಿ ಶಾರದೆಯ ಮೇಳ, ಅಕ್ಷರ ಪ್ರಕಾಶನ, ಸಾಗರ, 1987.

21. ನಾಗಭೂಷಣ ಡಿ. ಎಸ್ – ಕುವೆಂಪು ಸಾಹಿತ್ಯ ದರ್ಶನ, ಪ್ರಗತಿ ಪ್ರಕಾಶನ, 2007.

22. ನಾಗರಾಜ ರಾವ್ ವಿ. – ಊರಿಗೆ ಮರಳಿದಾಗ, (ಅನು. ದಿ ರಿಟರ್ನ್ ಆಫ್ ದಿ ನೇಟಿವ್, ಥಾಮಸ್ ಹಾರ್ಡಿ) ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1983.

23. ನಾಗೇಗೌಡ ಹೆಚ್.ಎಲ್ – ದೊಡ್ಡಮನೆ, ಶಾರದಾ ಪ್ರಕಾಶನ ಮಂದಿರ, ಮೈಸೂರು, 1974.

24. ನಾರಾಯಣ ಕೆ.ವಿ. – ಕನ್ನಡ ಮೊದಲ ಕಾದಂಬರಿಗಳಲ್ಲಿ ಭಾಷೆ ಮತ್ತು ಶೈಲಿ, ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು, 1987.
– 'ಪಂಪನ ದೇಸಿ', 'ಪಂಪ' ಒಂದು ಅಧ್ಯಯನ, (ಸಂ. ಜಿ.ಎಸ್. ಶಿವರುದ್ರಪ್ಪ) ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು, 1974.

25. ನಟರಾಜ್ ಹುಳಿಯಾರ್ – ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 2004.

26. ರಹಮತ್ ತರೀಕೆರೆ – ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು 2008

27. ರಾಮಚಂದ್ರಪ್ಪ ಬರಗೂರು – ಕನ್ನಡ ಸಾಹಿತ್ಯದಲ್ಲಿ ಪ್ರಧಾನ ಮತ್ತು ಅಧೀನ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು 199.

28. ರಾಜೇಂದ್ರ ಚೆನ್ನಿ – ದೇಶಿವಾದ, ಕರ್ನಾಟಕ ಸಾಹಿತ್ಯ ಅಕಾಡೆಮಿ, 1999.

29. ರಾಷ್ಟ್ರಕವಿ ಕುವೆಂಪು – ಸುರುಚಿ ಪ್ರಕಾಶನ, ಮೈಸೂರು, 1990.

30. ಸಹ್ಯಾದ್ರಿ – ಅಭಿನಂದನ ಸಮಿತಿ, ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಮೈಸೂರು, 1975.

31. ಸೀತರಾಮಯ್ಯ ಎಂ.ವಿ – ಶ್ರೀವಿಜಯಕೃತ ಕವಿರಾಜಮಾರ್ಗಂ, ಬಿ.ಎಂ.ಶ್ರೀ. ಪ್ರತಿಷ್ಠಾನ, ಬೆಂಗಳೂರು, 1994.

32. ಸೂರ್ಯನಾಥ ಕಾಮತ್ – ಒಕ್ಕಲುತನ ಮತ್ತು ಒಕ್ಕಲಿಗರು, ಇತಿಹಾಸ ಅನ್ವೇಷಣೆ, ಅರ್ಚನ ಪ್ರಕಾಶನ, ಬೆಂಗಳೂರು, 2006.

33. ಸುಬ್ಬಣ್ಣ ಕೆ.ವಿ. – ಕುವೆಂಪುಗೆ ಪುಟ್ಟ ಕನ್ನಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2006.

34. ಶೇಷಗಿರಿರಾವ್ ಎಲ್. ಎಸ್ – ಕಾದಂಬರಿ ಮತ್ತು ಸಾಮಾನ್ಯ ಮನುಷ್ಯ, ವಸಂತ ಪ್ರಕಾಶನ, ಬೆಂಗಳೂರು, 1970.
– ಹೊಸಗನ್ನಡ ಸಾಹಿತ್ಯ ಚರಿತ್ರೆ, ಅಂಕಿತ ಪುಸ್ತಕ, ಬೆಂಗಳೂರು, 2002.
– ಇಂಗ್ಲೀಷ್ ಸಾಹಿತ್ಯ ಚರಿತ್ರೆ, ಸ್ವಪ್ನ ಬುಕ್ ಹೌಸ್, ಬೆಂಗಳೂರು, 2010.
– ಕಾದಂಬರಿ ಮತ್ತು ಸಾಮಾನ್ಯ ಮನುಷ್ಯ, ವಸಂತ ಪ್ರಕಾಶನ, ಬೆಂಗಳೂರು, 2008.

35. ಶಿವರಾಮ ಕಾರಂತ – ಚೋಮನ ದುಡಿ, ರಾಜಲಕ್ಷ್ಮೀ ಪ್ರಕಾಶನ, ಬೆಂಗಳೂರು, 1977.
– ಮರಳಿ ಮಣ್ಣಿಗೆ, ರಾಜಲಕ್ಷ್ಮೀ ಪ್ರಕಾಶನ, ಬೆಂಗಳೂರು, 1978.

36. ಶಿವರುದ್ರಪ್ಪ ಜಿ.ಎಸ್. – ಶ್ರೀ ಕುವೆಂಪು, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು 1991.

37. ಶಿವಶಂಕರ್ ಚಕ್ಕರೆ – ಸಹ್ಯಾದ್ರಿಯ ಸೂರ್ಯ, ಶ್ರೀ ಕುವೆಂಪು ಕೃತಿ ಅವಲೋಕನ: ಕನ್ನಡಸಾಹಿತ್ಯ ಪ್ರಕಾಶನ ಬೆಂಗಳೂರು 2004.

38. ಶ್ರೀಕಂಠ ಕೂಡಿಗೆ – ಭೂಮಿ ಹುಣ್ಣಿಮೆ, ದಖನ್ ಪಬ್ಲಿಷರ್ಸ್, ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು, 1982.

39. ತಾರಕೇಶ್ವರ ವಿ.ಬಿ. – ವಸಾಹಾತು ಶಾಹಿ ಮತ್ತು ಭಾಷಾಂತರ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 2006.

40. ಉದ್ದಂಡಯ್ಯ – ಕುವೆಂಪು ಕಥನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2004.

41. ವಿವೇಕ್ ರೈ ಬಿ. ಎ. – ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು, ಕನ್ನಡ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ; ಮಂಗಳೂರು, 1987.

42. Dube S C - Indian Society, National Book Trust India, New Delhi, 1990.

43. Eliot T.S. - Definition of Culture, Faber and Faber Limited London, 1962.

44. F.E. Holliday - Thomas Hardy, His Life and Work House of stratus, 2001.

45. Joseph Gibaldi and, Walter S Achtert - MLA Hand book for writers of Research Paper East-west Press Pvt., Ltd., New Delhi, 1988.

46. Julie Sherrick - Thomas Hardy's Major Novels ,Rowmon and Littlefield, 1998.

47. Louis Dumont - The Caste System and Its Implication, The University of Chicago Press, Chicago, 1980.

48. Makarand Paranjape - Nativism Essays in Criticism, Sahitya Akadami, New Delhi 1997.

49. Merryn William - Thomas Hardy and Rural England, Columbia University Press 1972.

50. Merryn Williams - A Preface to Hardy, Pearson Education Ltd., Delhi, 2003.

51. Pinion F B - Hardy the writer. Survey and Assessment, St. Martin's, New York, 1990.

52. Raj Rao - Kanthapura, Oxford University Press, 1971.

53. Ramji Lal - Thomas Hardy, Roman Brothers India Pvt Ltd., New Delhi 2006.

54. Raymond Chapman- The Language of Thomas Hardy, A collection of Critical Essays, Prestige Books New Delhi, 1990.

55. Ruth C Plummer A B- The Rustic Chorus in the Novels of Thomas Hardy, The Ohio State University, 1926.

56. Subhash Chandra - Thomas Hardy, Critical Essays, Prestige Books, New Delhi, 1999.

57. Shivarama Krishnan - Urbanisation in India, Institute of Social Sciences, New Delhi, 1993.

58. Srinivas M N - Social Change in Modern India, Orient Longman Limited, New Delhi, 1998.

59. Satish Kumar - A History of English Literature, Published by Lakshmi Narayan Agarawal, Agra, 2001.

60. See Internet - Hobson, Kevin, The Indian Caste System and the British, http://www/btinternet.com/britishempire/article/castesystem, html(22-11-2012,)

61. See Internet - V. Sundaram: Impact of Globalization on Indian Culture: http//www/bologi.com/perspective Dec. 3, 2006.

62. See Internet - Vandana Shiva: Stolen Harvest, http://www.greenprophet. com/ 2008/12/10/4826.

63. Subhash Chandra - Thomas Hardy, A Collection of Critical Essays, Prestige Books New Delhi, 1999.

64. Things Fall Apart - Chinua Achebe, Heinemann, London, 1958.

65. Mukul Raj Anand - Untouchable, Hind Pocket Books, Delhi, 1970.

66. William Barnes - Hardy the Country Man, Person Education, Delhi, 2003

ಸಂಶೋಧನಾ ಪ್ರಬಂಧಗಳು:

1. Giridhara C V - The Sclerosis And The Suffering: A Study Of Select Kannada Novels In English Translation, Submitted To Karnataka State Open University, Myore, 2011.

2. ರಮೇಶ್ ಡಿ. ಜಿ. – ಮಲೆನಾಡ ಬೇಲ ಜನಾಂಗ– ಒಂದು ಸಂಸ್ಕೃತಿ ಅಧ್ಯಯನ–ಪಿ.ಹಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ, ಬೆಂಗಳೂರು ವಿಶ್ವವಿದ್ಯಾನಿಲಯ, 2001.

3. ಸುರೇಶ್ ವೈ.ವಿ. – ಆಧುನಿಕ ಕನ್ನಡ ನಾಟಕ ಸಾಹಿತ್ಯದಲ್ಲಿ ಪೌರಾಣಿಕ ವ್ಯಕ್ತಿಗಳ ಪ್ರತಿನಿಧೀಕರಣ, ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಪಿ.ಹಚ್.ಡಿ ಪದವಿಗಾಗಿ ಸಲ್ಲಿಸಿದ ಸಂಶೋಧನಾ ಮಹಾಪ್ರಬಂಧ 2010.

4. ವೆಂಕಟಪ್ಪ ಕೂಡ್ಲೂರು – ಕೂಡ್ಲೂರು ಒಂದು ಜಾನಪದೀಯ ಅಧ್ಯಯನ, –ಪಿ.ಹಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ, ಬೆಂಗಳೂರು ವಿಶ್ವವಿದ್ಯಾನಿಲಯ, 2005.

5. ವೀರಪ್ಪಗೌಡ ಹೆಚ್. ಸಿ. – ಚಾರಿತ್ರಿಕ ಹಿನ್ನಲೆಯಲ್ಲಿ ಶೃಂಗೇರಿ ಮಹಾಸಂಸ್ಥಾನದ ಆರ್ಥಿಕ ಅಧ್ಯಯನ (ಕ್ರಿ.ಶ1336–1959) ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಪಿ.ಹಚ್.ಡಿ ಪದವಿಗಾಗಿ ಸಲ್ಲಿಸಿದ ಸಂಶೋಧನಾ ಮಹಾಪ್ರಬಂಧ 2010.

6. ವಿಷ್ಣುವರ್ಧನ್ ಹೆಚ್ – ಕೆಳದಿ ವೀರಶೈವ ನಾಯಕರು ಮತ್ತು ಶೃಂಗೇರಿ ಮಠ–ಒಂದು ಸಮಗ್ರ ಅಧ್ಯಯನ, ಕುವೆಂಪು ವಿಶ್ವವಿದ್ಯಾನಿಲಯಕ್ಕೆ ಪಿ.ಹಚ್.ಡಿ ಪದವಿಗಾಗಿ ಸಲ್ಲಿಸಿದ ಸಂಶೋಧನಾ ಮಹಾಪ್ರಬಂಧ 2008.

* * * *